ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣ

(ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ)

(ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು

ಶ್ರೀಮತಿ ಹರಿಣಾಕ್ಷಿ

ಅಭಿವೃದ್ಧಿ ಅಧ್ಯಯನ ವಿಭಾಗ

ಮಾರ್ಗದರ್ಶಕರು

ಡಾ. ಗಾಂವ್ಕರ್ ಗೋಪಾಲಕೃಷ್ಣ ಎಂ.

ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಅರ್ಥಶಾಸ್ತ್ರ ವಿಭಾಗ, ಸ. ಪ್ರ. ದ. ಕಾಲೇಜು
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಉಡುಪಿ

ಸಹ ಮಾರ್ಗದರ್ಶಕರು

ಡಾ. ಎ. ಶ್ರೀಧರ

ರಾಜ್ಯಶಾಸ್ತ್ರ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ

ಮಾನ್ಯತಾ ಕೇಂದ್ರ
ಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಮಂಗಳೂರು
ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೯

ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣ

(ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ)

(ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು

ಶ್ರೀಮತಿ ಹರಿಣಾಕ್ಷಿ
ಅಭಿವೃದ್ಧಿ ಅಧ್ಯಯನ ವಿಭಾಗ

ಮಾರ್ಗದರ್ಶಕರು

ಡಾ. ಗಾಂವ್ಕರ್ ಗೋಪಾಲಕೃಷ್ಣ ಎಂ.
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಅರ್ಥಶಾಸ್ತ್ರ ವಿಭಾಗ, ಸ. ಪ್ರ. ದ. ಕಾಲೇಜು
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ತೆಂಕನಿಡಿಯೂರು,ಉಡುಪಿ

ಸಹ ಮಾರ್ಗದರ್ಶಕರು

ಡಾ. ಎ. ಶ್ರೀಧರ
ರಾಜ್ಯಶಾಸ್ತ್ರ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ

ಮಾನ್ಯತಾ ಕೇಂದ್ರ
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಮಂಗಳೂರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

೨೦೧೯

ಸಂಶೋಧಕರ ಪ್ರಮಾಣ ಪತ್ರ

ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣ: ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ ಎಂಬ ವಿಷಯ ಕುರಿತು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ **ಡಾ. ಗಾಂವ್ಕರ್ ಗೋಪಾಲಕೃಷ್ಣ** ಎಂ. ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಕೈಗೊಂಡು ಪಿಎಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೊಮಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ನನ್ನ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Harinakshi

ಶ್ರೀಮತಿ ಹರಿಣಾಕ್ಷಿ
ಸಂಶೋಧಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ ೨೨-೦೪-೨೦೧೯.

ದೃಢೀಕರಣ ಪತ್ರ

ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣ: ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ ಎಂಬ ವಿಷಯ ಕುರಿತು ಶ್ರೀಮತಿ ಹರಿಣಾಕ್ಷಿ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಕೈಗೊಂಡು ಪಿಎಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೊಮಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ಅವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಡಾ. ಗಾಂವ್ಕರ್ ಗೋಪಾಲಕೃಷ್ಣ ಎಂ.
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಅರ್ಥಶಾಸ್ತ್ರ ವಿಭಾಗ, ಸ. ಪ್ರ. ದ. ಕಾಲೇಜು
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ
ತೆಂಕನಿಡಿಯೂರು, ಉಡುಪಿ

ದಿನಾಂಕ:[illegible]-೦೪-೨೦೧೯.
ಸ್ಥಳ: ವಿದ್ಯಾರಣ್ಯ

DR. Gaonkar Gopalkrishna M.
M.A., Ph.D
Associate Professor & Head
Dept. of Economics
Govt. First Grade College & Centre
for P.G. Studies
Thenkanidiyoor, Udupi - 576 106

ದೃಢೀಕರಣ ಪತ್ರ

ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣ: ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ ಎಂಬ ವಿಷಯ ಕುರಿತು **ಶ್ರೀಮತಿ ಹರಿಣಾಕ್ಷಿ** ಅವರು ನನ್ನ ಸಹ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಕೈಗೊಂಡು ಪಿಎಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೊಮಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ಅವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಡಾ. ಎ. ಶ್ರೀಧರ
ರಾಜ್ಯಶಾಸ್ತ್ರ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ:೨೨-೦೪-೨೦೧೯.
ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು
ಪ್ರಸ್ತಾವನೆ

೧.೧. ಮಹಿಳೆಯರು ಮತ್ತು ಅಭಿವೃದ್ಧಿ

೧.೨. ರಾಜಕೀಯ ಮತ್ತು ಮಹಿಳಾ ಅಭಿವೃದ್ಧಿ

೧.೩. ಮೊಗವೀರ ಸಮುದಾಯ

೧.೪. ಸಮಸ್ಯೀಕರಣ

೧.೫. ಅಧ್ಯಯನದ ಉದ್ದೇಶಗಳು

೧.೬. ಅಧ್ಯಯನದ ಊಹೆಗಳು

೧.೭. ಅಧ್ಯಯನದ ವ್ಯಾಪ್ತಿ

೧.೮. ಅಧ್ಯಯನದ ಮಾದರಿಯ ಗಾತ್ರ

೧.೯. ಅಧ್ಯಯನದ ಮಾದರಿ ವಿಧಾನ

೧.೧೦. ಅಧ್ಯಯನದ ಮಹತ್ವ

೧.೧೧. ಅಧ್ಯಯನದ ಮಿತಿ

೧.೧೨. ಅಧ್ಯಯನಗಳ ವರ್ಗೀಕರಣ

ಅಧ್ಯಾಯ ೧

ಪ್ರಸ್ತಾವನೆ

'ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣ: ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ'ಎಂಬ ಅಧ್ಯಯನವು ಲಿಂಗ ಸಮಾನತೆ, ಮಹಿಳಾ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಮತ್ತು ರಾಜಕೀಯ ಸಹಭಾಗಿತ್ವ ಎಂಬ ಮೂರು ಸಂಗತಿಗಳಿಂದ ಸಂರಚನೆಗೊಂಡಿದೆ. ಈ ಪ್ರಬಂಧದ ಪ್ರಮುಖ ಉದ್ದೇಶ ಎಂದರೆ, ಅಭಿವೃದ್ಧಿಯಲ್ಲಿ ಲಿಂಗ ಆಯಾಮವನ್ನು ತಿಳಿಯುವುದಾಗಿದೆ. ಲಿಂಗ ಆಯಾಮ ಅಭಿವೃದ್ಧಿಯ ಒಂದು ಸಿದ್ಧಾಂತದ ಚಿಂತನೆ; ಬೆಳವಣಿಗೆ ಅಥವಾ ಅಭಿವೃದ್ಧಿಯು ಲಿಂಗ ನಿಷ್ಪಕ್ಷಪಾತಿಯಾಗಿದೆ ಎಂದು ವಾದಿಸಿದೆ. ಇನ್ನೊಂದು ಸಿದ್ಧಾಂತದ ಚಿಂತನೆ, ಬೆಳವಣಿಗೆಯು ಲಿಂಗಾಧಾರಿತ ಎಂದು ವಾದಿಸಿದೆ; ಈ ವಾದವು ಪುರುಷ ಲಿಂಗದ ಪರವಾಗಿರುವುದು ಕಂಡು ಬರುತ್ತದೆ. ಇಂತಹ ಲಿಂಗ ಆಯಾಮ ಬೆಳವಣಿಗೆಯ ವಿಶ್ಲೇಷಣೆಗಳು ಸಮಾಜದಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆಯನ್ನು ನೀಡಲಾಗಿಲ್ಲ ಎಂಬ ಅಂಶವನ್ನು ಎತ್ತಿ ಹಿಡಿಯುತ್ತವೆ. ಮಹಿಳಾಭಿವೃದ್ಧಿಯ ಚಿಂತನೆಯನ್ನು ಸಮರ್ಥಿಸುವಲ್ಲಿ ಈ ಲಿಂಗ ಆಯಾಮಗಳ ಬೆಳವಣಿಗೆಯ ಮಾದರಿಗಳು ಪೂರಕ ಸಮರ್ಪಣೆಯನ್ನು ನೀಡುತ್ತವೆ. ಮಹಿಳಾಭಿವೃದ್ಧಿಯನ್ನು ಸಾಧಿಸುವಲ್ಲಿ ಪೂರಕ ಸಾಮಾಜಿಕ ವಾತಾವರಣದ ಲಭ್ಯತೆಯನ್ನು ಅರಿಯುವಲ್ಲಿ ಕರಾವಳಿ ಜಿಲ್ಲೆ ಉಡುಪಿಯ ಮೊಗವೀರ ಮಹಿಳೆಯರ ಪ್ರಕರಣ ಅಧ್ಯಯನವನ್ನು(ಕೇಸ್ ಸ್ಟಡಿ) ಕೈಗೆತ್ತಿಕೊಳ್ಳಲಾಗಿದೆ.

ಈ ಕೆಳಗಿನ ವಿಚಾರಗಳಿಗಾಗಿ, ಈ ಅಧ್ಯಯನದ ಅವಶ್ಯಕತೆಯನ್ನು ಪ್ರತಿಪಾದಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿರುವ ಮೊಗವೀರ ಮಹಿಳೆಯರು ತಮ್ಮ ಕುಲಕಸುಬಾದ ಮೀನುಗಾರಿಕೆಯನ್ನೇ ತಮ್ಮ ವೃತ್ತಿಯನ್ನಾಗಿಸಿದ್ದು, ಅವರು ತಮ್ಮ ಹೆಚ್ಚಿನ ಸಮಯವನ್ನು ಮೀನುಗಾರಿಕಾ ವಿಕ್ರಯಗಾರಿಕೆಯಂತಹ ಚಟುವಟಿಕೆಗೆ ಮೀಸಲಿಡುವುದರಿಂದಾಗಿ ಸಮಾಜದ ಮುಖ್ಯ ವಾಹಿನಿಯಿಂದ ದೂರ ಉಳಿದಿದ್ದಾರೆ. ಮೊಗವೀರ ಮಹಿಳೆಯರು ತಮ್ಮ ಕುಲಕಸುಬಾದ ಮೀನುಗಾರಿಕೆ ಮೂಲಕ ಸಮಾಜದ ಬಹುಪಾಲು ಆಹಾರ ರಕ್ಷಣೆಯ ಕಾರ್ಯವನ್ನು ಮಾಡುವ ಮೊಗವೀರ ಮಹಿಳೆಯರನ್ನು ಕುಟುಂಬದಲ್ಲಿ ಕೇವಲ ಪೂರಕ ಆರ್ಥಿಕ ಮೂಲವಾಗಿ ಪರಿಗಣಿಸಲಾಗುತ್ತಿದೆ. ಎಷ್ಟೇ ದುಡಿದರೂ ಆರ್ಥಿಕವಾಗಿ ಸಬಲರಾಗುವ ಪ್ರಯತ್ನ ಮಾಡಿರುವ ಮೊಗವೀರ ಮಹಿಳೆಯರು ಹೆಚ್ಚಿನ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಹಿಂದೇಟು ಹಾಕುತ್ತಿದ್ದು, ಪ್ರಧಾನ ನಿರ್ಧಾರಗಳು ಮೊಗವೀರ ಕುಟುಂಬಗಳಲ್ಲಿ ಪುರುಷ ಪ್ರಧಾನವಾಗಿಯೇ ಇದೆ. (ರೇಣುಕಾ ಕೆ, ೨೦೧೧) ಪ್ರಸ್ತುತ ಅಧ್ಯಯನವು ಬದಲಾವಣೆಯ ಕಾಲಘಟ್ಟದಲ್ಲಿರುವ ಮೊಗವೀರ ಸಮುದಾಯದಲ್ಲಿ ಮಹಿಳೆಯರಿಗೆ ನೀಡಲಾದ ಗೌರವ ಹಾಗೂ ಸ್ಥಾನಮಾನಗಳ ಪರಿಸ್ಥಿತಿಯನ್ನು ಅವಲೋಕಿಸುವ ಪ್ರಯತ್ನ ಮಾಡಿದೆ. ಸಂಪ್ರದಾಯಬದ್ಧ ಸಮಾಜದಲ್ಲಿರುವ ಹಲವು ಕಟ್ಟುಪಾಡುಗಳು ಮೊಗವೀರ ಮಹಿಳೆಯರ ಸಾಮಾಜಿಕ ಸ್ಥಾನಮಾನವನ್ನು ಉನ್ನತೀಕರಿಸುವ ಸೂಕ್ತ ಪ್ರಯತ್ನವನ್ನೇ ನಡೆಸಿಲ್ಲ. ಪ್ರಸ್ತುತ ಅಧ್ಯಯನ, ಈ ಲೋಪವನ್ನು ತಿದ್ದುವ ಪ್ರಯತ್ನ ಮಾಡಿದೆ. ಮೊಗವೀರ ಸಮುದಾಯದ ಬಗ್ಗೆ ಆಳವಾದ ಅಧ್ಯಯನಗಳು ಅದರಲ್ಲೂ

ಮುಖ್ಯವಾಗಿ ಆ ಸಮುದಾಯದ ಮಹಿಳಾ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಿಸಿದ ವಿಶ್ಲೇಷಣಾತ್ಮಕ ಅಧ್ಯಯನಗಳಾಗಿರುವುದು ಈ ಪ್ರದೇಶದಲ್ಲಿ ಇದುವರೆಗೆ ಬಹು ಕಡಿಮೆಯೇ. ಮೊಗವೀರ ಮಹಿಳೆಯರ ಕೊಡುಗೆ ಮೊಗವೀರ ಸಮುದಾಯದ ಅಭಿವೃದ್ಧಿಯಲ್ಲಿ ನಿರ್ಣಯಾತ್ಮಕವಾಗಿದ್ದರೂ ಈ ಬಗ್ಗೆ ಸಮಗ್ರ ಅಧ್ಯಯನಗಳು ನಡೆದಿಲ್ಲ. ಮೀನುಗಾರಿಕೆಯಲ್ಲಿ ಮೊಗವೀರ ಮಹಿಳೆಯರ ಪಾತ್ರ ಬಹಳಷ್ಟು ಕ್ರಿಯಾಶೀಲವಾದದ್ದು, ಆದರೆ ರಾಜಕೀಯ ಕ್ಷೇತ್ರದಲ್ಲಿ ಅವರ ಸಾಧನೆ ನಗಣ್ಯ. ಅದು ಇನ್ನೂ ಶೈಶಾವಸ್ಥೆಯಲ್ಲಿದೆ ಎನ್ನುವುದು ಕಟು ವಾಸ್ತವ. ಸ್ವ ಉದ್ಯೋಗ, ಇನ್ನಿತರ ಉದ್ಯಮಗಳಲ್ಲಿ ತೊಡಗಿರುವ, ಮೊಗವೀರ ಮಹಿಳೆಯರು ಕುಟುಂಬದ ಹಾಗೂ ಸಮಾಜದ ಆರ್ಥಿಕ ಏಳಿಗೆಗೆ ಕಾರಣರಾಗಿದ್ದಾರೆ. ಜೊತೆಗೆ ಬೆರಳೆಣಿಕೆಯಷ್ಟು ಮೊಗವೀರ ಮಹಿಳೆಯರು ರಾಜಕೀಯದಲ್ಲಿ ಅಂಬೆಗಾಲಿಡುವ ಮೂಲಕ ಉನ್ನತ ನಾಯಕತ್ವ ನೀಡಬಲ್ಲಂತಹ ಸಾಧ್ಯತೆಯನ್ನು ಬಿಂಬಿಸಿದ್ದಾರೆ.

ಭಾರತದಲ್ಲಿ ಮಹಿಳೆಯರ ಬಗ್ಗೆ ಇರುವ ನಿಲುವು ಅವರು ಅಸಹಾಯಕರು ಮತ್ತು ಅವರಿಗೆ ಬಾಹ್ಯ ಸುರಕ್ಷೆಯನ್ನು ಪಾಲಿಸುವ ಕಡೆಗೆ ಒತ್ತು ನೀಡುತ್ತಿದೆಯೇ ಹೊರತು, ಅವರ ಸ್ವತಂತ್ರ ಚಿಂತನೆಗೆ ಮಹತ್ವ ನೀಡಲಾಗಿಲ್ಲ. ದೇಶದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಮಹಿಳೆಯರ ಕೊಡುಗೆಯ ಬಗ್ಗೆ ತಾತ್ಸಾರದ ಭಾವನೆಯು ೧೯ನೇ ಶತಮಾನದ ಆರಂಭದವರೆಗೂ ಕಂಡು ಬರುತ್ತಿತ್ತು. ಮಹಿಳೆಯರನ್ನು ಮಹಿಳೆಯರಾಗಿ ಸ್ವೀಕರಿಸಿ, ಸ್ವತಂತ್ರ ವ್ಯಕ್ತಿಯಾಗಿ ಪರಿಭಾವಿಸುವ ಚಳುವಳಿಗಳು ಮಹಿಳಾವಾದದ ಮೂಲಕ ಬಲಿಷ್ಠಗೊಂಡು ಅವರಲ್ಲಿ ಜಾಗೃತಿಯನ್ನು ಮೂಡಿಸಿತು. (ಶಕುಂತಳ ಗುಪ್ತ, ೨೦೦೫) ಮಹಿಳೆಯರನ್ನು ಒಳಗೊಂಡ ಅಭಿವೃದ್ಧಿಯ ಚಿಂತನೆಗಳು ಭಾರತದಲ್ಲಿ ತೀರಾ ಇತ್ತೀಚಿನದ್ದಾಗಿದ್ದು, ಇನ್ನೂ ಸರಿಯಾದ ಅರ್ಥದಲ್ಲಿ ಚಾಲ್ತಿಯಲ್ಲಿಲ್ಲ ಎಂಬುದು ಗಮನಾರ್ಹ. ಈ ನೆಲೆಗಟ್ಟಿನಲ್ಲಿ ಹಿಂದುಳಿದ ವರ್ಗಗಳಲ್ಲಿ ಒಂದಾಗಿರುವ ಮೊಗವೀರ ಮಹಿಳೆಯರ ಸಾಮಾಜಿಕ ಸ್ಥಾನಮಾನ, ಆರ್ಥಿಕ ಪರಿಸ್ಥಿತಿ, ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಆ ಮೂಲಕ ಅಭಿವೃದ್ಧಿಯ ವಿಶ್ಲೇಷಣೆಯನ್ನು ನಡೆಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಭಾರತವು ಹಲವಾರು ಸಮುದಾಯಗಳು ಹಾಗೂ ಧರ್ಮಗಳನ್ನು ಒಳಗೊಂಡು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರವಾಗಿವೆ. ಕ್ರೂರ ಮೃಗಗಳ ಹಾಗೂ ಪ್ರಾಕೃತಿಕ ವಿಕೋಪಗಳ ಭಯದಿಂದಾಗಿ ಗುಂಪುಗಳಾಗಿ ನೆಲೆ ಕಂಡುಕೊಂಡ ಮಾನವ ಕ್ರಮೇಣ ಸಮುದಾಯವನ್ನು ಕಟ್ಟಿಕೊಂಡು ಜೀವನ ನಡೆಸಿಕೊಂಡು ಬಂದಿರುವುದು ಪ್ರಾಚೀನ ಕಾಲದ ಸತ್ಯ. ಭಾರತದಲ್ಲಿರುವ ಸಮುದಾಯಗಳು ಸಾಮಾನ್ಯವಾಗಿ ವೃತ್ತಿಗಳ ಆಧಾರದ ಮೇಲೆ ಉಗಮವಾಗಿವೆ. ಜಾತಿ, ಧರ್ಮ, ಬುಡಕಟ್ಟು ಸಮುದಾಯಗಳು ತಮ್ಮ ಕುಲ ಕಸುಬುಗಳನ್ನು ಆಧರಿಸಿ ತೊಡಗಿರುವ ವೃತ್ತಿಗಳು ದೇಶದ ಅಭಿವೃದ್ಧಿಯಲ್ಲಿ ತಮ್ಮದೇ ಆದ ಪ್ರಭಾವನ್ನು ಬೀರಿವೆ. (ಶಂಕರರಾವ್ ಚ.ನ. ೧೯೯೭) ಮೊಗವೀರ ಸಮುದಾಯವು ಕರ್ನಾಟಕ ರಾಜ್ಯದಲ್ಲಿರುವ ಹಿಂದುಳಿದ ಜಾತಿ ಸಮುದಾಯವಾಗಿದೆ. ಮೊಗವೀರ ಸಮುದಾಯದ ಮುಖ್ಯ ಕುಲಕಸುಬು ಮೀನುಗಾರಿಕೆಯಾಗಿದ್ದು, ಈ ಮೀನುಗಾರಿಕಾ ಉದ್ಯಮವು ದೇಶದ ಅಭಿವೃದ್ಧಿಗೆ ಗಣನೀಯ ಕೊಡುಗೆಯನ್ನು ನೀಡುತ್ತಿರುವ ಉದ್ಯಮಗಳಲ್ಲಿ ಒಂದಾಗಿದೆ.

(ಶೀಮಾ ಜಿ.ಕೆ. ೨೦೧೭) ಮೀನುಗಾರಿಕಾ ವೃತ್ತಿಯನ್ನು ಮೂಲ ವೃತ್ತಿಯಾಗಿ ಅಳವಡಿಸಿಕೊಂಡಿರುವ ಮೊಗವೀರ ಸಮುದಾಯದ ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಆ ಮೂಲಕ ಆಗಿರುವ ಪ್ರಗತಿಯನ್ನು ಅವಲೋಕಿಸುವ ಪ್ರಯತ್ನ ಈ ಅಧ್ಯಯನದಲ್ಲಿದೆ.

ಮಹಿಳಾ ದೌರ್ಜನ್ಯ ಹಾಗೂ ಲಿಂಗ ಅಸಮಾನತೆ ಜಾಗತಿಕ ಸಮಸ್ಯೆಯಾಗಿದ್ದು, ಸಮಾಜದ ವಿವಿಧ ಸ್ತರಗಳಲ್ಲಿ ಸವಾಲಾಗಿ ಪರಿಣಮಿಸಿದೆ. ಯುಎನ್‌ಡಿಪಿ ವರದಿಯಂತೆ ಬಾಲ್ಯ ವಿವಾಹ ಹಾಗೂ ಅಪ್ರಬುದ್ಧ ವಯೋಮಾನದಲ್ಲಾಗುವ ಶಿಶು ಜನನದ ಪ್ರಮಾಣವು ಯುವ ಮಹಿಳೆಯರ ಹಾಗೂ ಹೆಣ್ಣು ಮಕ್ಕಳ ಅವಕಾಶವನ್ನು ಕಸಿದುಕೊಳ್ಳುತ್ತಿದೆ. ೨೦೧೮ ರ ವರದಿಯಂತೆ ದಕ್ಷಿಣ ಏಷ್ಯಾದಲ್ಲಿ ೨೯ ಶೇಕಡಾದಷ್ಟು ೨೦ ರಿಂದ ೨೪ ವಯೋಮಾನದ ವಿವಾಹಿತ ಮಹಿಳೆಯರು ತಮ್ಮ ೧೮ ನೇ ವರ್ಷದ ವಯೋಮಾನದೊಳಗೆ ವಿವಾಹವಾಗಿದ್ದಾರೆ. ಭಾರತದಲ್ಲಿ ಕೇವಲ ೩೯ ಶೇಕಡಾ ವಯಸ್ಕ ಮಹಿಳೆಯರು ಮಾಧ್ಯಮಿಕ ಹಂತದ ಶಿಕ್ಷಣ ಮುಗಿಸಿದ್ದಾರೆ. ಆದರೆ ಅದೇ ಹಂತದ ಶಿಕ್ಷಣ ಪಡೆದ ಪುರುಷರ ಸಂಖ್ಯೆ ೬೪ ಶೇಕಡಾದಷ್ಟಿದೆ. (ಯುಎನ್‌ಡಿಪಿ, ೨೦೧೮)

ಭಾರತ ಸಂವಿಧಾನವು ಲಿಂಗ ಸಮಾನತೆಯನ್ನು ಖಾತ್ರಿಗೊಳಿಸಿದೆ. ಆದ್ದರಿಂದ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಮಹಿಳೆಯರನ್ನು ಪುರುಷರಷ್ಟೇ ಸಮಾನರೆಂದು ಪರಿಗಣಿಸಲೇಬೇಕು. ಸಮಾಜದ ಧೋರಣೆಗಳು, ಪದ್ಧತಿಗಳು, ಆಚರಣೆಗಳು ಹಾಗೂ ವ್ಯಕ್ತಿಗತ ಚಿಂತನೆಗಳೆಲ್ಲವೂ ಮಹಿಳೆಯರಿಗೆ ಸಿಗಬೇಕಾದ ಸಮಾನತೆಯ ಅವಕಾಶವನ್ನು ಒದಗಿಸಿಕೊಡಬೇಕು. ಈ ಅಧ್ಯಯನದಲ್ಲಿ ಲಿಂಗ ಸಮಾನತೆಯ ಅಂಶವನ್ನು ಸೇರಿಸಿಕೊಂಡು ಸಂವಿಧಾನದ ಆಶಯವಾದ ಲಿಂಗ ಸಮಾನತೆಯು ಮೊಗವೀರ ಸಮುದಾಯದಲ್ಲಿ ಸೂಕ್ತವಾಗಿ ನಿರ್ವಹಿಸಲ್ಪಟ್ಟಿದ್ದೆಯೇ ಎಂದು ತಿಳಿಯಲು ಪ್ರಯತ್ನಿಸಲಾಗಿದೆ. ಈ ಅಧ್ಯಯನವು ಮೊಗವೀರ ಸಮುದಾಯದಲ್ಲಿ ಪುರುಷ ಹಾಗೂ ಮಹಿಳಾ ಸಮಾನತೆ, ಕೌಟುಂಬಿಕ ಹಾಗೂ ಸಾಮಾಜಿಕ ಸ್ತರಗಳಲ್ಲಿ ಮಹಿಳೆಯರ ಗೌರವದ ಖಾತರಿ ಹಾಗೂ ರಾಜಕೀಯ ಕ್ಷೇತ್ರಕ್ಕೆ ಮೊಗವೀರ ಮಹಿಳೆಯರ ಪ್ರವೇಶದಿಂದಾಗಿ ಅವರ ಜೀವನ ಕ್ರಮದಲ್ಲಾಗಿರುವ ಸುಧಾರಣೆ ಮತ್ತು ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ಉಡುಪಿ ಜಿಲ್ಲೆಯಲ್ಲಿರುವ ಪೂರಕ ಪರಿಸ್ಥಿತಿಗಳನ್ನು ಪರೀಕ್ಷಿಸುವ ಉದ್ದೇಶ ಹೊಂದಿದೆ.

೧.೨ ಮಹಿಳೆಯರು ಮತ್ತು ಅಭಿವೃದ್ಧಿ

ಅಭಿವೃದ್ಧಿಯ ಚಿಂತನೆಗಳು ಕಾಲಕಾಲಕ್ಕೆ ವಿವಿಧ ಆಯಾಮಗಳನ್ನು ಪಡೆದಿವೆ. ಮೂಲಧಾರೆ ಅಭಿವೃದ್ಧಿ ಸಿದ್ಧಾಂತವು ೧೭ ನೇ ಶತಮಾನದಲ್ಲಿ ಆರಂಭಗೊಂಡು ೧೯ ಮತ್ತು ೨೦ ನೇ ಶತಮಾನದಲ್ಲಿ ಬೆಳೆದು ಆರ್ಥಿಕ ಅಂಶಗಳಾದ ಬಂಡವಾಳಶಾಹಿ, ಮಾರುಕಟ್ಟೆ, ವರಮಾನ ಇವುಗಳನ್ನಾಧರಿಸಿದ ಸಿದ್ಧಾಂತವಾಗಿದೆ. ಈ ಸಿದ್ಧಾಂತವು ಇಡೀ ಜನ ವರ್ಗವನ್ನು ಒಂದು ಅಖಂಡ ಘಟಕವಾಗಿ ಪರಿಗಣಿಸುತ್ತದೆ. ಈ ಸಿದ್ಧಾಂತದಲ್ಲಿ ವರಮಾನವನ್ನು ಗರಿಷ್ಠಗೊಳಿಸುವ ಮತ್ತು ಸುಭದ್ರ ಆರ್ಥಿಕತೆಯೇ ಮುಖ್ಯವೆಂಬುದಾಗಿ ಪ್ರತಿಪಾದಿಸುತ್ತದೆ. ಇಲ್ಲಿ ಮಹಿಳೆ ಮತ್ತು ಪುರುಷರ ದುಡಿಮೆಯನ್ನು ಪ್ರತ್ಯೇಕಿಸಲಾಗಿದೆ. ವರಮಾನವನ್ನು ಲಿಂಗ ನಿರ್ದಿಷ್ಟಗೊಳಿಸಲಾಗಿದೆ. ಮಹಿಳೆಯರು

ಜೈವಿಕವಾಗಿ ಸಂತಾನೋತ್ಪತ್ತಿ ಮಾಡುವವರಾದ್ದರಿಂದ ಆದರಲ್ಲಿ ಅವರು ಪರಿಗಣಿತರಾಗಬೇಕು. ಆದರೆ ಪುರುಷರು ಆರ್ಥಿಕೋತ್ಪಾದನೆಯಲ್ಲಿ ನಿರತರಾಗಿರುವುದರಿಂದ ಅವರಲ್ಲಿ ಈ ಕ್ಷೇತ್ರದ ಪರಿಣತಿಯಿದ್ದರೆ ಗರಿಷ್ಠ ಉತ್ಪಾದನೆ ಸಾಧ್ಯವಾಗುತ್ತದೆ. ಮೂಲಧಾರೆ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಪುರುಷರನ್ನು ಆರ್ಥಿಕ ಉತ್ಪಾದಕಾಂಶ ಹೊಂದಿರುವ ಪರಿಜ್ಞಾನವಾದಿ ಗುಣ ಹೊಂದಿರುವವರೆಂದು ಪ್ರತಿಪಾದಿಸಲಾಗಿದೆ. ಮಹಿಳೆಯರು ಭಾವನಾತ್ಮಕ ಗುಣವುಳ್ಳವರಾಗಿದ್ದು ಅವರನ್ನು ಸೈದ್ಧಾಂತಿಕವಾಗಿ ಈ ಪರಿಜ್ಞಾನವಾದಿ ಗುಣದವರಿಗಿಂತ ಕೀಳಾದವರೆಂದು ಭಾವಿಸಲಾಗಿದೆ. ಪುರುಷಶಾಹಿ ಹಾಗೂ ಬಂಡವಾಳಶಾಹಿ ಅಭಿವೃದ್ಧಿ ಚಿಂತನೆಯು ಉಚಿತವಾಗಿ ದೊರೆಯುವ ಮಹಿಳಾ ಶ್ರಮದ ಮೂಲಕ ಪುರುಷರು ಸಾಧನೆಯನ್ನು ಮಾಡುವ ಅವಕಾಶವನ್ನು ಹುಟ್ಟುಹಾಕಿವೆ. ನಿಜವಾದ ಅರ್ಥದಲ್ಲಿ ಬಂಡವಾಳವು ಶ್ರಮವನ್ನು ಶೋಷಣೆಗೆ ಗುರಿಪಡಿಸಿದರೆ ಪುರುಷರು ಮಹಿಳೆಯರನ್ನು ಶೋಷಣೆಗೆ ಗುರಿಪಡಿಸಿದ್ದಾರೆ. ಬಂಡವಾಳಶಾಹಿ ಅಭಿವೃದ್ಧಿಯೂ ಮಹಿಳೆಯರನ್ನು ದುರ್ಬಲಗೊಳಿಸುತ್ತಾ ಸಾಗುತ್ತದೆ. (ಈಸ್ಟರ್ ಬೋಸರಪ್, ೧೯೩೦)

ಇನ್ನು ಮಾರ್ಕ್ಸ್‌ವಾದಿ ವಿಚಾರದಲ್ಲಿ ಅಭಿವೃದ್ಧಿಯನ್ನು ವಿಶ್ಲೇಷಿಸುವವರು ಮಾನವ ಶ್ರಮವೆನ್ನುವುದು ಮೂಲಭೂತವಾಗಿ ಸಾಮಾಜಿಕವಾದುದು. ಅದು ಸಾಮಾಜಿಕ ಸಂಬಂಧಗಳ ಮೂಲಕ ಸಂದರ್ಭಕ್ಕೆ ತಕ್ಕಂತೆ ರೂಪ ಪಡೆದುಕೊಳ್ಳುತ್ತದೆ. ಮಾನವ ಶ್ರಮವು ಸಾಮಾಜಿಕ ಸಂಬಂಧಗಳ ಮೂಲಕ ಉತ್ಪಾದನಾ ವ್ಯವಸ್ಥೆಯೊಂದನ್ನು ರೂಪಿಸುತ್ತದೆ. ಮಾರ್ಕ್ಸ್‌ವಾದದ ಪ್ರಕಾರ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ವರ್ಗ ಸಂಬಂಧಗಳು ಅಂತರ್ಗತಗೊಂಡಿರುತ್ತವೆ. ಈ ಮಾರ್ಕ್ಸ್ ಸಿದ್ಧಾಂತದಲ್ಲಿ ಅಭಿವೃದ್ಧಿಯು ಸಂಘರ್ಷವಾದಿಯಾಗಿರುತ್ತದೆಯೇ ವಿನಃ ಸೌಹಾರ್ದಯುತವಾದಿಯಾಗಿ ಇರುವುದಿಲ್ಲ. ಮಾನವ ಶ್ರಮವೇ ಅಭಿವೃದ್ಧಿಯ ಚಾಲಕ ಶಕ್ತಿಯಾಗಿರುವುದರಿಂದ ಶ್ರಮ ವಿಭಜನೆಯು ಅಭಿವೃದ್ಧಿ ಸಿದ್ಧಾಂತದ ಭಾಗವಾಗಿದೆ. ಈ ಶ್ರಮ ವಿಭಜನೆಯೇ ಮುಂದೆ ಉತ್ಪಾದನಾ ಸಂಬಂಧದೊಂದಿಗೆ ಹೊಂದಿಸಿಕೊಂಡು ಪರಿಭಾವಿಸಿಕೊಂಡಾಗ ಅದು ಶ್ರೇಣೀಕೃತ ಹಾಗೂ ಶೋಷಣಾತ್ಮಕ ರೂಪವನ್ನು ಪಡೆಯಿತು. ಮಾರ್ಕ್ಸ್‌ವಾದಿ ಸಿದ್ಧಾಂತದಲ್ಲಿ ಲಿಂಗ ಸಂಬಂಧಗಳು ಅಮುಖ್ಯವಾಗಿ ಉತ್ಪಾದಕ ಹಾಗೂ ಅನುತ್ಪಾದಕವೆಂಬ ವರ್ಗ ಸಂಬಂಧಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಲಿಂಗ ಅಸಮಾನತೆಯನ್ನು ಆರ್ಥಿಕ ಅಸಮಾನತೆಯೊಂದಿಗೆ ಸೇರಿಸಲಾಯಿತು.

ಮಹಿಳೆಯರ ಸಹಭಾಗಿತ್ವವನ್ನು ಹತ್ತಿಕ್ಕುವುದರಿಂದಾಗಿ ಇಡೀ ಜನ ಸಮುದಾಯಕ್ಕೆ ನಷ್ಟ ಉಂಟಾಗುತ್ತದೆ. ಮಹಿಳೆಯರನ್ನು ಅಭಿವೃದ್ಧಿಯ ಪರಿಧಿಯಿಂದ ಹೊರಗಿಡುವುದರಿಂದಾಗಿ ಆರ್ಥಿಕತೆಗೆ ಹೊಡೆತ ಬೀಳುವ ಜೊತೆಗೆ ಸಾಮಾಜಿಕ ಸಮಸ್ಯೆಗಳಾದ ಬಡತನ, ಅನಕ್ಷರತೆ, ನಿರುದ್ಯೋಗ, ಅನಾರೋಗ್ಯ, ಅಪೌಷ್ಟಿಕತೆ ಮುಂದುವರೆಯುವುದು ಕಂಡುಬಂದಿತು. ಆಗ ಅಭಿವೃದ್ಧಿಯ ದೃಷ್ಟಿಕೋನ ಬದಲಾಯಿತು. ಪರಿಣಾಮವಾಗಿ ಜನಪರ ಅಭಿವೃದ್ಧಿಯ ಚಿಂತನೆ ಹುಟ್ಟಿಕೊಂಡಿತು. ಮಾನವ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ, ನಿರುದ್ಯೋಗ ನಿರ್ಮೂಲನೆ, ಆರೋಗ್ಯ ಮಟ್ಟ ಸುಧಾರಣೆ, ಅಭಿವೃದ್ಧಿಯಲ್ಲಿ ಪುರುಷ ಮಹಿಳೆಯರೆಲ್ಲರನ್ನು ಒಳಗೂಡಿಸಲು ಪ್ರಯತ್ನಿಸಲಾಯಿತು. ಅಭಿವೃದ್ಧಿ ಹೆಚ್ಚು

ಜನಪರವಾಗಿ ಬೆಳೆದಂತೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸೇರಿಸಿಕೊಳ್ಳುವ ಪರಿಪಾಠ ಬೆಳೆಯಿತು. ಸಮಾಜದಲ್ಲಿ ಕೆಳಗಿನಿಂದ ಮೇಲಕ್ಕೆ ಹೋಗುವ ಮಾದರಿಯನ್ನು ಅಳವಡಿಸಿಕೊಂಡು ಅಭಿವೃದ್ಧಿಯಲ್ಲಿ ಲಿಂಗ ಕಾಳಜಿಯನ್ನು ಸೇರಿಸಿಕೊಂಡವು. ಹೀಗೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆ ಮತ್ತು ಮಹಿಳಾ ವಿಷಯಗಳನ್ನು ಸೇರಿಸಿಕೊಂಡಿರುವುದನ್ನು ಇವಾ ರಾತ್ಗಬರ್ ಎಂಬುವವರು ಮೂರು ಮುಖ್ಯ ಸಿದ್ಧಾಂತಗಳಲ್ಲಿ ಗುರುತಿಸಿದ್ದಾರೆ. ಅವುಗಳೆಂದರೆ; ಅಭಿವೃದ್ಧಿಯಲ್ಲಿ ಮಹಿಳೆ, ಮಹಿಳೆ ಮತ್ತು ಅಭಿವೃದ್ಧಿ ಹಾಗೂ ಲಿಂಗ ವ್ಯವಸ್ಥೆ ಮತ್ತು ಅಭಿವೃದ್ಧಿ. (ಸುಷ್ಮಾ ಸಾಹೇ, ೧೯೯೮)

ಚಂದ್ರಶೇಖರ್ ಟಿ.ಆರ್. ಅವರು 'ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ' ಎಂಬ ಪುಸ್ತಕದಲ್ಲಿ ಬರೆದಿರುವಂತೆ ಅಭಿವೃದ್ಧಿಯ ದೃಷ್ಟಿಕೋನವು ಕಾಲಕಾಲಕ್ಕೆ ಬದಲಾಗುತ್ತಾ ಬಂದಿದೆ. ಅಮರ್ತ್ಯಸೇನ್ ಮತ್ತು ಜೀನ್‌ಡ್ರೀಜ್ ಅವರುಗಳು ಸಾಮಾಜಿಕ ಪ್ರಗತಿಯಲ್ಲಿ ಮಹಿಳೆಯರ ಪಾತ್ರ ನಿರ್ಣಾಯಕವಾದುದು ಎಂದು ಹೇಳಿದ್ದಾರೆ. ಎಲ್ಲಿ ಲಿಂಗ ತಾರತಮ್ಯವು ತೀವ್ರವಾಗಿರುತ್ತದೆಯೋ ಅಲ್ಲಿ ಅಭಿವೃದ್ಧಿ ಕುಂಠಿತವಾಗಿರುತ್ತದೆ. ಯಾವ ಪ್ರದೇಶದಲ್ಲಿ ಅಭಿವೃದ್ಧಿ ಉನ್ನತ ಮಟ್ಟದಲ್ಲಿದ್ದು, ಮರಣ ಪ್ರಮಾಣ ಹಾಗೂ ಜನನ ಪ್ರಮಾಣ ಕೆಳಮಟ್ಟದಲ್ಲಿರುತ್ತದೋ ಅಲ್ಲಿ ಮಹಿಳೆಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ನಿರ್ಣಾಯಕ ಪಾತ್ರ ವಹಿಸುತ್ತಿರುತ್ತಾರೆ. ಸಾಮಾಜಿಕ ಪರಿವರ್ತನೆಯಲ್ಲಿ ಮಹಿಳೆಯರ ಸಹಭಾಗಿತ್ವ ಮತ್ತು ಅಭಿವೃದ್ಧಿಯನ್ನು ತತ್ವ ಮತ್ತು ಆಚರಣೆ ಎರಡೂ ಸ್ತರಗಳಲ್ಲೂ ಲಿಂಗ ಸಂವೇದಿಯನ್ನಾಗಿ ಮಾಡುವ ಅಗತ್ಯತೆಯನ್ನು ಅಮರ್ತ್ಯಸೇನ್ ಮತ್ತು ಜೀನ್‌ಡ್ರೀಜ್ ಪ್ರತಿಪಾದಿಸಿದ್ದಾರೆ. ಸಾಮಾಜಿಕ ಪರಿವರ್ತನೆಯ ಚಾಲಕ ಶಕ್ತಿಯಾದ ಮಹಿಳೆಯ ನಿಯೋಗವಾದಿ ಪಾತ್ರವನ್ನು ಅಲಕ್ಷ್ಯ ಮಾಡಿರುವುದು ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳ ಮೂಲ ದೋಷವಾಗಿದೆ. ಮಹಿಳೆಯರನ್ನು ಅಭಿವೃದ್ಧಿಯ ನಿಯೋಗಿಗಳೆಂದು ಗುರುತಿಸಬೇಕು. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಕುರಿತ ಸಿದ್ಧಾಂತಗಳು ಮಹಿಳೆಯರನ್ನು, ಲಿಂಗ ಸಂಬಂಧಗಳನ್ನು ಹೇಗೆ ಪರಿಭಾವಿಸಿಕೊಂಡಿವೆ, ಹೇಗೆ ಅಂತರ್ಗತ ಮಾಡಿಕೊಂಡಿವೆ ಎಂಬುದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಹೆಚ್ಚಿನ ಅಭಿವೃದ್ಧಿ ಸಿದ್ಧಾಂತಗಳು ಲಿಂಗ ನಿರ್ದಿಷ್ಟವೂ, ಲಿಂಗ ಸಂವೇದಿಯೂ ಆಗಿರುವುದರಿಂದಾಗಿ ಪುರುಷಶಾಹಿ ಸ್ವರೂಪದಿಂದ ಕೂಡಿರುವ ಸಮಾಜವನ್ನು ಸುಧಾರಿಸಬೇಕು ಎಂಬ ನೆಲೆಯಿಂದ ಅದನ್ನು ಪರಿವರ್ತಿಸಬೇಕು ಎಂಬ ನೆಲೆಗೆ ಅಭಿವೃದ್ಧಿ ಸಿದ್ಧಾಂತಗಳು ಸಾಗಿ ಬಂದಿವೆ. ಆ ನೆಲೆಗಟ್ಟಿನಲ್ಲಿ ಮಹಿಳಾ ವಿಮೋಚನೆಯಂತಹ ಪ್ರಯತ್ನಗಳಿಂದ ಆರಂಭಗೊಂಡು ಮಹಿಳಾ ಪ್ರತಿನಿಧಿತ್ವದ ಮೂಲಕ ಮಹಿಳಾ ಸಬಲೀಕರಣವನ್ನು ಸಾಧಿಸುವ ಬಗೆಗಿನ ಚರ್ಚೆಗಳು ಈಗ ಪ್ರಚಲಿತವಾಗಿವೆ. ಅಭಿವೃದ್ಧಿಯ ಪರಿಕಲ್ಪನೆಯು ಬದಲಾವಣೆ ಹೊಂದಿದ್ದು, ಮಹಿಳೆಯರಿಗೆ ಅಭಿವೃದ್ಧಿ ಬೇಕು ಎಂಬ ಕಾಲ ಹೋಗಿ ಇಂದು ಅಭಿವೃದ್ಧಿಗೆ ಮಹಿಳೆಯರು ಬೇಕು ಎಂಬಂತಾಗಿದೆ.

ಈ ಎಲ್ಲಾ ಅಂಶಗಳ ಆಧಾರದಲ್ಲಿ ಮಹಿಳಾ ಅಭಿವೃದ್ಧಿಯ ಪ್ರಯತ್ನ ಉಡುಪಿ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ನಡೆದಿದೆ? ಮೊಗವೀರ ಸಮುದಾಯದ ಮಹಿಳೆಯರ ಅಭಿವೃದ್ಧಿಗೆ ನಡೆದಿರುವ ವಿಶೇಷ

ಪ್ರಯತ್ನಗಳೇನು? ಮೊಗವೀರ ಮಹಿಳೆಯರಲ್ಲಿ ಸಾಮಾಜಿಕ ಸಂಘಟನೆ ಹಾಗೂ ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಅಭಿವೃದ್ಧಿ ಸಾಧಿಸಲಾಗಿದೆಯೇ? ಎಂಬುದನ್ನು ಈ ಅಧ್ಯಯನದ ಮೂಲಕ ಅಭ್ಯಸಿಸಿ ವಿಶ್ಲೇಷಿಸಲಾಗಿದೆ.

ಅಭಿವೃದ್ಧಿ ಸಂಬಂಧಿ ಸಿದ್ಧಾಂತಗಳು ಮೂಲತಃ ಪುರುಷ ಸದಸ್ಯರ ಪರವಾದ ವಾದವನ್ನು ಹೊಂದಿವೆ. ಶಾಸ್ತ್ರೀಯ ಮತ್ತು ಆಧುನಿಕ ಶಾಸ್ತ್ರೀಯ ಆರ್ಥಿಕ ದೃಷ್ಟಿಕೋನಗಳು, ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಮಹಿಳೆಯರು ತಮ್ಮ ವೈಯಕ್ತಿಕ ತೃಪ್ತಿಗಿಂತ ಕುಟುಂಬ ನಿರ್ವಹಣೆಗೆ ಪ್ರಾಧಾನ್ಯತೆಯನ್ನು ನೀಡಿದ್ದಾಗ್ಯೂ ಅವರನ್ನು ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಭಾಗವಾಗಿ ಪರಿಗಣಿಸಿರುವುದು ಕಂಡುಬರುವುದಿಲ್ಲ. ಹಲವಾರು ರಾಷ್ಟ್ರೀಯ ಯೋಜನೆಗಳು, ಬಡತನ ನಿರ್ಮೂಲನೆಯಂತಹ ಕಾರ್ಯಕ್ರಮಗಳು ಮಹಿಳಾ ಕೇಂದ್ರಿತವಾಗಿವೆ. ಮಹಿಳೆಯನ್ನು ಹೊರತುಪಡಿಸಿದ ಆರ್ಥಿಕ, ಸಾಮಾಜಿಕ ಪರಿವರ್ತನೆಗಳು ವಿಫಲವಾದ ಉದಾಹರಣೆಗಳು ಸಾಕಷ್ಟಿವೆ. ಆ ನಿಟ್ಟಿನಲ್ಲಿ ಮಹಿಳೆ ಮತ್ತು ಅಭಿವೃದ್ಧಿ ಸಂಬಂಧಿ ಸಂಶೋಧನೆಗಳು ಹೊರಹೊಮ್ಮಲಾರಂಭಿಸಿದವು. ೧೯೯೭ ರಲ್ಲಿ ರಾವ್ ಎನ್ ಅವರು ತಮ್ಮ ಅಧ್ಯಯನದಲ್ಲಿ ಮಹಿಳೆಯರು ಗ್ರಹಿಸುವ ಹಾಗೂ ನಿರ್ಧಾರ ತೆಗೆದುಕೊಳ್ಳುವ ಅರ್ಹತೆಯನ್ನು ಪಡೆಯುವ ಸಶಕ್ತತೆಯನ್ನು ಹೊಂದಬೇಕು ಎಂದು ಹೇಳುವ ಮೂಲಕ ಮಹಿಳಾಭಿವೃದ್ಧಿ ಯಾವ ರೀತಿ ಆರಂಭವಾಗಬೇಕೆಂದು ತಿಳಿಸಿದರು. ಹಲವಾರು ಅಂತರರಾಷ್ಟ್ರೀಯ ಹಾಗೂ ದೇಶೀಯ ಸಂಶೋಧನೆಗಳು ಮಹಿಳಾಭಿವೃದ್ಧಿಯನ್ನು ದೇಶದ ಅಭಿವೃದ್ಧಿಯ ಮೂಲಾಂಶವಾಗಿ ಪರಿಗಣಿಸಿವೆ.

೧೮೭೧ರಲ್ಲಿ ಮೊದಲ ಬಾರಿಗೆ ಫ್ರೆಂಚ್ ವೈದ್ಯಕೀಯ ಗ್ರಂಥದಲ್ಲಿ ಬಳಸಲಾದ 'ಫೆಮಿನಿಸಂ' ಎಂಬ ಪದವು ಸ್ತ್ರೀಯರ ಪರಾಧೀನತೆ ಹಾಗೂ ತುಳಿತಕ್ಕೆ ಸೈದ್ಧಾಂತಿಕ ಹಿನ್ನೆಲೆಯನ್ನು ಹುಡುಕಲು ಪ್ರಯತ್ನಿಸಿತು. ಈ ಚಿಂತನೆಯು ಮಹಿಳೆಯರು ಹಾಗೂ ಪುರುಷರಿಗೆ ಸಮಾನ ಅವಕಾಶ ನೀಡುವುದನ್ನು ಒತ್ತಾಯಿಸಿತು. ಮುಂದೆ ಸಮಾಜ ಮಹಿಳಾವಾದ ಉಗಮಗೊಂಡು ಸಮಾಜವು ಗಂಡು–ಹೆಣ್ಣುಗಳನ್ನೊಳಗೊಂಡ ಸಮಾನ ಸಂಸ್ಥೆ. ಇಲ್ಲಿ ಯಾರೂ ಮೇಲಲ್ಲ ಯಾರೂ ಕೀಳಲ್ಲ ಎಂಬ ಚಿಂತನೆಯನ್ನು ಹುಟ್ಟು ಹಾಕಿತು. ರಷ್ಯಾದಲ್ಲಿ ಮಹಾ ಕ್ರಾಂತಿಯ ನಂತರ ಮಹಿಳೆಯರ ಬಗೆಗಿನ ಧೋರಣೆಗಳಲ್ಲಿ ಬದಲಾವಣೆಗಳಾದವು. ಕಾಮ್ರೇಡ್ ಲೆನಿನ್ ಅವರ ಮಹಿಳಾ ವಿಮೋಚನೆ ಹಾಗೂ ಸಮಾನತೆಯ ಸ್ವಾತಂತ್ರ್ಯದ ಪರಿಕಲ್ಪನೆಯು ಜಾಗತಿಕವಾಗಿ ಸಂಚಲವನ್ನು ಸೃಷ್ಟಿಸಿತು. ಭಾರತದಲ್ಲೂ ಲಿಂಗತಾರತಮ್ಯ ವಿರೋಧಿ ನೀತಿ ಈ ಹಂತದಲ್ಲಿ ಆರಂಭಗೊಂಡಿತು. (ಹೇಮಲತಾ ಹೆಚ್.ಎಂ, ೨೦೦೨)

೧೯೫೦ರ ನಂತರದಲ್ಲಿ ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹಿಳಾವಾದದ ಸಿದ್ಧಾಂತ ಹಾಗೂ ವಿಧಾನಗಳಲ್ಲಿ ಮುಖ್ಯವಾಗಿ ಮಹಿಳಾ ಕಲ್ಯಾಣ ವಿಧಾನ, ಮಹಿಳೆ ಮತ್ತು ಅಭಿವೃದ್ಧಿ (ಡಬ್ಲ್ಯೂಎಡಿ), ಅಭಿವೃದ್ಧಿಯಲ್ಲಿ ಮಹಿಳೆ (ಡಬ್ಲ್ಯೂಐಡಿ) ಹಾಗೂ ಲಿಂಗ ಮತ್ತು ಮಹಿಳೆ (ಜಿಎಡಿ) ಇವು ಕಂಡುಬರುತ್ತವೆ. ಮಹಿಳೆ ಮತ್ತು ಅಭಿವೃದ್ಧಿಗೆ, ಸಂಬಂಧಿಸಿದ ಸಿದ್ಧಾಂತಗಳು ಭಾರತದ

ಸ್ವಾತಂತ್ರ್ಯ ಹೋರಾಟದಲ್ಲಿ ಅದರ ಮೂಲವನ್ನು ಹೊಂದಿದ್ದು ಹಲವಾರು ಅಭಿವೃದ್ಧಿ ಸಿದ್ಧಾಂತಗಳು ಹಾಗೂ ವಾದಗಳಿಂದ ಪ್ರಭಾವಿತಗೊಂಡಿವೆ. ಈ ಎಲ್ಲ ಸಿದ್ಧಾಂತಗಳನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದಾಗಿದ್ದು, ಮೊದಲನೆಯದಾಗಿ, ಅಭಿವೃದ್ಧಿಯಲ್ಲಿ ಮಹಿಳೆಗೆ ಸಂಬಂಧಿಸಿದ ಸಿದ್ಧಾಂತಗಳು, ಎರಡನೆಯದಾಗಿ, ಲಿಂಗ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸಿದ್ಧಾಂತಗಳು. ಮೊದಲನೆಯ ವರ್ಗದ ಅಭಿವೃದ್ಧಿಯಲ್ಲಿ ಮಹಿಳೆ (ಡಬ್ಲ್ಯೂಎಡಿ) ಹಾಗೂ ಅದರಲ್ಲಿ ಆಧುನೀಕರಣದ ಆಧಾರದ ಮೇಲೆ ಸಂಪ್ರದಾಯ ಮತ್ತು ಮುಕ್ತ ಮಹಿಳಾವಾದದ ಸಿದ್ಧಾಂತಗಳು ಒಳಗೊಂಡಿರುತ್ತವೆ. ಅಭಿವೃದ್ಧಿಯಲ್ಲಿ ಮಹಿಳೆ (ಡಬ್ಲ್ಯೂಐಡಿ) ಹಾಗೂ ಲಿಂಗ ಮತ್ತು ಅಭಿವೃದ್ಧಿ (ಜಿಎಡಿ) ಮಧ್ಯದಲ್ಲಿ ತುಲನಾತ್ಮಕವಾಗಿ ಸ್ಪಷ್ಟವಾಗಿ ಬದಲಾವಣೆ ಕಂಡು ಬರುವುದಾದರೂ ಈ ಎರಡು ಸಿದ್ಧಾಂತಗಳಲ್ಲಿ ಲಿಂಗ ಮತ್ತು ಅಭಿವೃದ್ಧಿಯ ಸಂಶೋಧನಾ ಅಧ್ಯಯನಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ.

೧೯೭೪ರಲ್ಲಿ ಫುಲ್‌ರೇನು ಗುಹಾರ ಮಾರ್ಗದರ್ಶನದಲ್ಲಿ, ಭಾರತದಲ್ಲಿ ಮಹಿಳೆಯರ ಸ್ಥಾನಮಾನದ ಕುರಿತಾದ ವರದಿ 'ಟವರ್ಡ್ಸ್ ಈಕ್ವಾಲಿಟಿ' ಯನ್ನು ಭಾರತ ಸರಕಾರಕ್ಕೆ ಸಲ್ಲಿಸಲಾಯಿತು. ಆ ವರದಿ, ಅಂಕಿ ಅಂಶಗಳೊಂದಿಗೆ, ಭಾರತದಲ್ಲಿ ಮಹಿಳೆಯರ ಹೀನಾಯ ಪರಿಸ್ಥಿತಿಯನ್ನು ಬಹಿರಂಗಪಡಿಸಿತು. ಕಾಕತಾಳೀಯವಾಗಿ ಮಹಿಳೆಯರ ಪ್ರಥಮ ವಿಶ್ವ ಸಮ್ಮೇಳನ, ಮೆಕ್ಸಿಕೋ ನಗರದಲ್ಲಿ ೧೯೭೫ ರಲ್ಲಿ ಏರ್ಪಡಿಸಲ್ಪಟ್ಟಿದ್ದು, ಅದು ಮೂರು ಅಂತರ್‌ಸಂಬಂಧಿ ವಿಚಾರಗಳ ಮೇಲೆ ಕೇಂದ್ರೀಕರಿಸಿತ್ತು – ಸಮಾನತೆ, ಅಭಿವೃದ್ಧಿ ಮತ್ತು ಶಾಂತಿ. ಇದು, ಮತ್ತಿತರ ಪ್ರಯತ್ನಗಳು, ಜಗತ್ತಿನ ಸರಕಾರಗಳು ಮಹಿಳಾ ಪ್ರಕರಣಗಳನ್ನು ಗಂಭೀರವಾಗಿ ತೆಗೆದುಕೊಳ್ಳುವಂತೆ ಮಾಡಿದವು. ಎಲ್ಲಾ ರಾಷ್ಟ್ರಗಳು ಮುಂದಿನ ೧೦ ವರ್ಷಗಳನ್ನು ಮಹಿಳೆಯರ ದಶಕವೆಂದು ಘೋಷಿಸಿದವು. ಈ ಘೋಷಣೆಯ ಹೊರತಾಗಿಯೂ, ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಮಹಿಳೆಯರ ಪರಿಸ್ಥಿತಿ ಕೀಳು ಮಟ್ಟದ್ದಾಗಿದ್ದು, ಮತ್ತು ಅವರ ಜೀವನಮಟ್ಟ ಹೆಚ್ಚು ಸುಧಾರಣೆಗೊಂಡಿಲ್ಲ ಎಂಬುದಾಗಿ ೧೯೯೫ರಲ್ಲಿ ಬೀಜಿಂಗ್‌ನಲ್ಲಿ ನಡೆದ ಸಮ್ಮೇಳನ ಈ ವಿಚಾರಗಳ ಮೇಲೆ ಕೇಂದ್ರೀಕರಿಸಿತ್ತು ಮತ್ತು ಮಹಿಳೆಯರ ಬಲವರ್ಧನೆಯನ್ನು ಅಭಿವೃದ್ಧಿಯ ಕೇಂದ್ರ ಸಾರವೆಂದು ಪರಿಗಣಿಸುವ ಪ್ರಬಲ ಮನವಿಯನ್ನು ಮಾಡಿತು.

ಈ ಎಲ್ಲಾ ಪ್ರಯತ್ನಗಳು, ಅಭಿವೃದ್ಧಿಗೆ ಅನುಸಂಧಾನವನ್ನು, ತೀವ್ರತರವಾಗಿ ಬದಲಿಸಿತು. ಮೊದಲಿಗೆ ಅಭ್ಯುದಯ ಅನುಸಂಧಾನ, ಆರ್ಥಿಕ ಅಭಿವೃದ್ಧಿಯ ಲಾಭವು, ಅವರ ಪುರುಷ ಸದಸ್ಯರ ಆರ್ಥಿಕ ಪರಿಸ್ಥಿತಿ, ಉತ್ತಮಗೊಂಡಾಗ ಬಡ ಮಹಿಳೆಯರಿಗೆ ಸ್ರವಿಸತೊಡಗಿತೆಂದು ಭಾವಿಸಲಾಗಿತ್ತು. ಅಭಿವೃದ್ಧಿಯಲ್ಲಿ ಮಹಿಳೆಯರು ಆದರ್ಶ ಮಹಿಳೆಯರು ಅಭಿವೃದ್ಧಿಯ ಲಾಭ ಪಡೆದವರು, ಎಂದು ಪರಿಗಣಿಸಿತು ಮತ್ತು ಮಹಿಳೆಯರಿಗೆ ಆದಾಯ ಹುಟ್ಟಿಸುವ, ಯೋಜನೆಗಳ ಮೇಲೆ ಗಮನ ಕೇಂದ್ರೀಕರಿಸಿತು. ಮಹಿಳೆಯರು ಮತ್ತು ಅಭಿವೃದ್ಧಿ ಅನುಸಂಧಾನ, ಮಹಿಳೆಯರು ಬದಲಾವಣೆಯ ಮಧ್ಯವರ್ತಿಗಳು ಮತ್ತು ಅಭಿವೃದ್ಧಿಯ ಕ್ರಿಯಾಶೀಲ ಪಾಲುದಾರರೆಂದು ಪರಿಗಣಿಸಿತು. ವಿಶೇಷವಾಗಿ ನಿರ್ಧಾರ ನಿರೂಪಿಸುವ ಹಂತದಲ್ಲಿ, 'ಲಿಂಗ ಮತ್ತು ಅಭಿವೃದ್ಧಿ' ಅನುಸಂಧಾನ, ಲಿಂಗ ಸಂಬಂಧದ

ತಾರ್ಕಿಕ ದೃಷ್ಟಿಕೋನದ ಮೇಲೆ ಮತ್ತು ಸಮಾಜದ ಬಲಹೀನ ಭಾಗಗಳ ಬಲವರ್ಧನೆಯ ಮೇಲೆ ಗಮನ ಕೇಂದ್ರೀಕರಿಸಿತು.(ಜನೆಟ್ ಹೆನ್‌ಫಲ್ ಮೊಮ್‌ಸೇನ್, ೨೦೦೪)

ನಮ್ಮ ಸಂವಿಧಾನವು ಪುರುಷರು ಹಾಗೂ ಮಹಿಳೆಯರಿಗೆ ಸಮಾನ ಅವಕಾಶವನ್ನು ಹಾಗೂ ನಿಷ್ಪಕ್ಷಪಾತ ನಿಲುವನ್ನು ಖಾತ್ರಿಗೊಳಿಸಿದ್ದರೂ ಸಾರ್ವಜನಿಕ ಜೀವನದಲ್ಲಿ ಮಹಿಳೆಯರನ್ನು ಸಮಾನತೆಯಿಂದ ನಡೆಸಿಕೊಳ್ಳದಿರುವುದು ಕಂಡು ಬರುತ್ತಿದೆ. ಮಹಿಳಾ ಅಮುಖ್ಯೀಕರಣ ಹಾಗೂ ಅವರನ್ನು ಸಾಮಾಜಿಕವಾಗಿ ಹೊರಗಿಡುವ ಕ್ರಮಗಳು ಮತ್ತು ಮಹಿಳೆಯರ ಆರ್ಥಿಕ ಅಸಮಾನತೆಗಳು ಗಂಭೀರ ಸಮಸ್ಯೆಗಳಾಗಿವೆ. ಮಹಿಳೆಯರನ್ನು ಆರ್ಥಿಕ ಹಾಗೂ ಸಾಮಾಜಿಕ ಮುಖ್ಯ ವಾಹಿನಿಯಿಂದ ಹೊರಗಿಡುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಎಲ್ಲಾ ಬೆಳವಣಿಗೆಗಳು ಮಹಿಳಾಭಿವೃದ್ಧಿ ಮಾತ್ರವಲ್ಲ ದೇಶದ ಅಭಿವೃದ್ಧಿಗೆ ಮಾರಕವಾಗಬಲ್ಲ ಅಂಶಗಳಾಗಿವೆ. ಮಹಿಳೆಯರನ್ನು ಸರಿಯಾಗಿ ನಡಸಿಕೊಳ್ಳಬೇಕಾದ ಹಾಗೂ ಅವರ ಸ್ಥಾನಮಾನದ ರಕ್ಷಣೆಯ ವಿಚಾರವು ಪ್ರಮುಖವಾಗಿ ಸಮಾಜದ ಅನಿವಾರ್ಯ ಸಂಗತಿಯಾಗಿದೆ.

ಇನ್ನು ಜಾಗತೀಕರಣದಿಂದಾಗಿ ಸೃಷ್ಟಿಯಾದ ಔಪಚಾರಿಕ ಮತ್ತು ಅನೌಪಾಚಾರಿಕ ಉದ್ಯೋಗಗಳ ನಡುವಿನ ಅಂತರ ಮಹಿಳಾ ಅಭಿವೃದ್ಧಿಗೆ ಸವಾಲೊಡ್ಡಿದೆ. ಅನೌಪಚಾರಿಕ ರಂಗದಲ್ಲಿ ಹೆಚ್ಚಿನ ಭೌತಿಕ ಕೆಲಸ, ಕಡಿಮೆ ಉತ್ಪತ್ತಿ, ಊರ್ಧ್ವಮುಖ ಚಲನೆಗೆ ಕಡಿಮೆ ಅವಕಾಶಗಳಿದ್ದು ಈ ರಂಗವು ಅಪರೂಪವಾಗಿ ಕಾರ್ಮಿಕ ಕಾಯಿದೆಗಳಿಗೆ ಒಳಪಟ್ಟಿದೆ. ಮಹಿಳೆಯರು ಅದರಲ್ಲೂ ಮುಖ್ಯವಾಗಿ ಅಧ್ಯಯನದಲ್ಲಿ ಒಳಗೊಂಡ ಮೊಗವೀರ ಮಹಿಳೆಯರಲ್ಲಿ ಅತ್ಯಧಿಕ ಮಂದಿ ಈ ಅನೌಪಚಾರಿಕ ರಂಗದಲ್ಲಿ ಉದ್ಯೋಗಿಗಳಾಗಿದ್ದಾರೆ(ಹಲಫ್ ಆಫ್‌ಫರ್, ೨೦೦೧). ಈ ಕಾರಣದಿಂದಾಗಿ ಮೀನುಗಾರಿಕೆ ಸಂಬಂಧಿತ ಚಟುವಟಿಕೆಯಲ್ಲಿ ತೊಡಗಿರುವ ಮಹಿಳೆಯರು ಧೀರ್ಘಾವದಿ ಕೆಲಸ, ಕಡಿಮೆ ಗಳಿಕೆ, ಅನಾರೋಗ್ಯಕರ ಕೆಲಸದ ಸ್ಥಳ ಹಾಗೂ ಸಾಲಗಾರರು ಮತ್ತು ಗುತ್ತಿಗೆದಾರರಿಗೆ ಬಲಿಪಶುಗಳಾಗು ವಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ವರದಿಗಳ ಪ್ರಕಾರ ಅಪೌಷ್ಟಿಕತೆ, ಅನಕ್ಷರತೆ ಹಾಗೂ ಬಡತನದ ವಿಷಯದಲ್ಲಿ ಮಹಿಳೆಯರು ಪುರುಷರನ್ನು ಮೀರುತ್ತಾರೆ. ೨೦೧೮ ರ ಯುಎನ್‌ಡಿಪಿ ವರದಿಯ ಪ್ರಕಾರ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಜಾಗತಿಕವಾಗಿ ಭಾರತದ ಸ್ಥಾನ ೧೩೦ ರಲ್ಲಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು ೧೯೯೦-೨೦೧೭ ರ ಅವಧಿಯಲ್ಲಿ ೦.೪೨೭ ರಿಂದ ೦.೬೪೦ಕ್ಕೆ ಏರಿದೆ. ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಶೇಕಡಾ ೨೬.೮ ರಷ್ಟನ್ನು ಅಸಮಾನತೆಯ ಕಾರಣದಿಂದಾಗಿ ಕಳೆದುಕೊಂಡಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು ಒಟ್ಟು ೦.೫೮೫ ಆಗಿದ್ದು, ಮಹಿಳಾ ಸೂಚ್ಯಂಕವು ೦.೫೫೩ ರಷ್ಟಿದೆ. ಈ ವರದಿಯ ಮುಖ್ಯಾಂಶವೆಂದರೆ ಭಾರತದಲ್ಲಿ ಜೀವನಾರಂಭದ ಲಿಂಗ ವ್ಯತ್ಯಾಸಗಳು ಅಳಿಸಿ ಹೋಗುತ್ತಿದೆ. ಆದರೆ ಯೌವನಾವಸ್ಥೆಯ ನಂತರದ ಅಸಮಾನತೆಗಳು ಹಾಗೆಯೇ ಮುಂದುವರೆದಿವೆ. ಭಾರತ ಸರಕಾರ ಶಿಶು ಕಲ್ಯಾಣ ಯೋಜನೆಗಳು, ಹೆಣ್ಣು ಮಗುವಿನ ರಕ್ಷಣೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ 'ಬೇಟಿ ಪಡಾವೋ, ಬೇಟಿ ಬಚಾವೋ'ದಂತಹ ಯೋಜನೆಗಳು ಇದಕ್ಕೆ ಕಾರಣವಾಗಿವೆ. ಜಾಗತಿಕವಾಗಿ ಮಹಿಳಾ ಅಭಿವೃದ್ಧಿ

ಸೂಚ್ಯಂಕ ತಿಳಿಸುವಂತೆ ಸರಾಸರಿ ಮಹಿಳೆಯರ ಅಭಿವೃದ್ಧಿ ಸೂಚ್ಯಂಕವು ಪುರುಷರಿಗಿಂತ ಶೇಕಡಾ ೬ ರಷ್ಟು ಕಡಿಮೆ ಇದೆ. ಮಹಿಳೆಯರ ಕನಿಷ್ಠ ಆದಾಯ ಮತ್ತು ಶೈಕ್ಷಣಿಕ ಅಂಶಗಳು ಈ ವ್ಯತ್ಯಾಸಕ್ಕೆ ಕಾರಣವಾಗಿದೆ. (ಯುಎನ್‌ಡಿಪಿ, ೨೦೧೮)

೧.೩. ರಾಜಕೀಯ ಮತ್ತು ಮಹಿಳಾ ಅಭಿವೃದ್ಧಿ

ಲಿಂಗ ಸಮಾನತೆಯು ನಾಲ್ಕು ಆಯಾಮಗಳನ್ನು ಹೊಂದಿದೆ. ಮೊದಲನೆಯದಾಗಿ, ಜೀವನ ಮಟ್ಟದಲ್ಲಿ ಲಿಂಗ ಸಮಾನತೆ. ಇದನ್ನು ಯುನೈಟೆಡ್ ಸ್ಟೇಟ್ಸ್ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ) ಅಭಿವೃದ್ಧಿಪಡಿಸಿದ ಲಿಂಗ ಅಭಿವೃದ್ಧಿ ಸೂಚ್ಯಂಕದ ಮೂಲಕ ಅಳೆಯಲಾಗುತ್ತದೆ. ಇದರಲ್ಲಿ ಸಾಕ್ಷರತಾ ಪ್ರಮಾಣ, ಶೈಕ್ಷಣಿಕ ಮಟ್ಟ, ಜೀವನಮಟ್ಟ ಹಾಗೂ ಜೀವಿತಾವಧಿ ಮುಂತಾದ ಅಂಶಗಳನ್ನು ಗುರುತಿಸಿ ಸಮಾನತೆಯನ್ನು ನಿರ್ಧರಿಸಲಾಗುತ್ತದೆ. ಎರಡನೆಯದಾಗಿ, ನಾಗರಿಕ ಕ್ರಮಗಳಲ್ಲಿ ಲಿಂಗ ಸಮಾನತೆ. ಇದನ್ನು ಮಹಿಳೆ ಹಾಗೂ ಪುರುಷ ನಾಗರಿಕ ಕ್ರಿಯೆಗಳಲ್ಲಿ ಪಾಲ್ಗೊಳ್ಳುವಿಕೆ, ನಾಗರಿಕ ಪ್ರದರ್ಶನಗಳು ಹಾಗೂ ಬಹಿಷ್ಕಾರಗಳನ್ನು ಗಮನಿಸಿ ನಿರ್ಧರಿಸಲಾಗುತ್ತದೆ. ಮೂರನೆಯದಾಗಿ, ಸ್ಥಾನೀಕ ಸಬಲೀಕರಣದ ಮೂಲಕ ಲಿಂಗ ಸಮಾನತೆಯ ಮಾಪನ. ಇದರಲ್ಲಿ ಲಿಂಗ ಸಬಲೀಕರಣ ಸೂಚ್ಯಂಕವನ್ನು ಬಳಸಿಕೊಂಡು ಆಡಳಿತಾತ್ಮಕ ಹಾಗೂ ನಿರ್ವಹಣಾತ್ಮಕ ಶಕ್ತಿ ಸ್ಥಾನಗಳಲ್ಲಿ ಮಹಿಳೆಯರ ಉಪಸ್ಥಿತಿಯನ್ನು ಗಮನಿಸಲಾಗುತ್ತದೆ. ನಾಲ್ಕನೆಯದಾಗಿ, ರಾಜಕೀಯ ಪ್ರಾತಿನಿಧ್ಯದ ಮೂಲಕ ಲಿಂಗ ಸಮಾನತೆ. ಇದರಲ್ಲಿ ರಾಷ್ಟ್ರೀಯ ಸಂಸತ್ತುಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನಾಧಾರಿಸಿ ಲಿಂಗ ಸಮಾನತೆಯನ್ನು ಲೆಕ್ಕ ಹಾಕಲಾಗುತ್ತದೆ(ಸ್ಯಾಂಡ್ರ ಜಿ, ೨೦೧೫).

ರಾಜಕೀಯವಾಗಿ ಮಹಿಳೆಯರ ಪಾಲ್ಗೊಳ್ಳುವಿಕೆಯಲ್ಲಿ ಎರಡು ಆಯಾಮಗಳಿವೆ. ಮೊದಲನೆಯದಾಗಿ, ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶಕ್ಕಾಗಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವುದು ಹಾಗೂ ಎರಡನೆಯದಾಗಿ, ಮಹಿಳಾ ಸಹಭಾಗಿತ್ವದ ಮೂಲಕ ಸಂಘಟನಾತ್ಮಕ ಹಾಗೂ ನೀತಿ ಜಾರಿಯ ಮೂಲಕ ಸೂಕ್ತ ಪರಿಹಾರವನ್ನು ಒದಗಿಸಿಕೊಟ್ಟು ಅವರ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ. ಮಹಿಳೆಯರು ಸಂಪೂರ್ಣವಾಗಿ ಮತ್ತು ಸ್ವಾಯತ್ತ ಚಿಂತನೆಗಳೊಂದಿಗೆ ಭಾಗವಹಿಸುವುದು ಅನಿವಾರ್ಯವಾಗುತ್ತದೆ. ಹಲವಾರು ಅಧ್ಯಯನಗಳು ತಿಳಿಸಿರುವಂತೆ ಮಹಿಳಾ ಪಾಲ್ಗೊಳ್ಳುವಿಕೆ ಪುರುಷರ ನಿರ್ದೇಶನದನ್ವಯ ನಡೆದಾಗ ನಿಜವಾದ ಅರ್ಥದಲ್ಲಿ ಮಹಿಳಾಭಿವೃದ್ಧಿ ಸಾಧ್ಯವಾಗಲಾರದು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದು ತಮ್ಮ ಸಮಸ್ಯೆಗಳನ್ನು ಗುರುತಿಸಿ ಅದನ್ನು ರಾಜಕೀಯವಾಗಿ ಪರಿಹರಿಸಿಕೊಳ್ಳುವ ಚಾಕಚಾಕ್ಯತೆಯನ್ನು ಹೊಂದಿದ್ದಾಗ ಅಭಿವೃದ್ಧಿ ಹೊಂದಲು ಸಾಧ್ಯ.

ರಾಜಕೀಯವಾಗಿ ಮಹಿಳಾ ಪ್ರಾತಿನಿಧ್ಯ ಜಾಗತಿಕವಾಗಿಯೇ ಅತ್ಯಲ್ಪವಾಗಿದ್ದು ಭಾರತದಲ್ಲಿ ಅದರ ಪ್ರಮಾಣ ಇನ್ನೂ ಕಡಿಮೆಯಿದೆ. ಯುಎನ್‌ಡಿಪಿ ೨೦೧೮ ರ ವರದಿಯ ಪ್ರಕಾರ ದಕ್ಷಿಣ ಏಷ್ಯಾ ಮತ್ತು ಅರಬ್ ರಾಷ್ಟ್ರಗಳ ಸಂಸತ್‌ಗಳಲ್ಲಿ ಮಹಿಳಾ ಪ್ರಾತಿನಿಧ್ಯ ಕ್ರಮವಾಗಿ ಶೇಕಡಾ ೧೭.೫ ಹಾಗೂ ೧೮ ರಷ್ಟಿದೆ. ಹಲವಾರು ನೀತಿ ನಿಯಮಗಳನ್ನು ಸರಕಾರಗಳು ರೂಪಿಸಿ ಅಳವಡಿಸಿದ್ದರೂ ಭಾರತದಲ್ಲಿ

ಕೇವಲ ಶೇಕಡಾ ೧೧.೬ ರಷ್ಟು ಮಹಿಳೆಯರು ಸಂಸದರಾಗಿದ್ದಾರೆ. ಭಾರತದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹಾಗೂ ಸಂಸತ್‌ನಲ್ಲಿ ಪ್ರವೇಶಕ್ಕೆ ಸಂಬಂಧಿಸಿದ ಸ್ಥಾನವು ಜಾಗತಿಕ ಮಟ್ಟದಲ್ಲಿ ತಳದಿಂದ ೨೦ ನೇ ಸ್ಥಾನದಲ್ಲಿದೆ. ಆದರೆ ಸ್ಥಳೀಯಾಡಳಿತದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾಗಿದೆ ಎಂಬುದು ಸಮಾಧಾನಕಾರ ಅಂಶವಾಗಿದೆ. ಮಹಿಳೆಯರ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳು ಅವರ ರಾಜಕೀಯ ಅಭಿವೃದ್ಧಿಯ ಪ್ರಮುಖ ಸವಾಲುಗಳಾಗಿವೆ. ಜಾಗತಿಕವಾಗಿ ಸಂಸತ್‌ನಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ ಯಲ್ಲಿ ರುವಾಂಡ (೩೮.೫%) ಹಾಗೂ ಬೊಲಿವಿಯಾ (೩೭.೩%) ದೇಶಗಳು ಮುಂಚೂಣಿಯಲ್ಲಿವೆ. ಸಂಸತ್‌ನಲ್ಲಿ ಭಾರತವು ಸೇರಿದಂತೆ, ಈಜಿಪ್ಟ್, ಮಲೇಷ್ಯಾ, ಜಪಾನ್, ಶ್ರೀಲಂಕಾ ಹಾಗೂ ಥೈಲ್ಯಾಂಡ್ ರಾಷ್ಟ್ರಗಳಲ್ಲಿ ಶೇಕಡಾ ೧೫ ಕ್ಕಿಂತ ಕಡಿಮೆ ಮಹಿಳಾ ಪ್ರಾತಿನಿಧ್ಯವಿದೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸಂವಿಧಾನದ ೭೩ ಹಾಗೂ ೭೪ ನೇ ತಿದ್ದುಪಡಿಯ ಪರಿಣಾಮವಾಗಿ ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯತ್‌ನಲ್ಲಿ ೫೧.೧೪ ಶೇಕಡಾ, ತಾಲೂಕು ಪಂಚಾಯತ್‌ನಲ್ಲಿ ೫೫.೧೫ ಶೇಕಡಾ ಹಾಗೂ ಜಿಲ್ಲಾ ಪಂಚಾಯತ್‌ನಲ್ಲಿ ೫೩.೨೧ ಶೇಕಡಾ ಮಹಿಳಾ ಪ್ರಾತಿನಿಧ್ಯವಿದೆ.

೨೦೧೩ರ ಸಾರ್ವತ್ರಿಕ ಚುನಾವಣೆಯಲ್ಲಿ ದೇಶದ ಲೋಕಸಭೆಯ ೫೪೩ ಕ್ಷೇತ್ರಗಳ ಪೈಕಿ ಕೇವಲ ೧೧೩ರಲ್ಲಿ ಸ್ಪರ್ಧಿಸಿದ್ದ ೧೭೫ ಮಹಿಳೆಯರಲ್ಲಿ ಆರು ಮಹಿಳೆಯರು ಜಯಗಳಿಸಿದ್ದಾರೆ. ೨೦೧೪ರಲ್ಲಿ ಕರ್ನಾಟಕದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ೨೧ ಮಹಿಳೆಯರು ಸ್ಪರ್ಧಿಸಿದ್ದು, ಕೇವಲ ಒಬ್ಬ ಮಹಿಳೆ ಜಯ ಸಾಧಿಸಿದ್ದಾರೆ. ರಾಜಕೀಯದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆಯು ರಾಷ್ಟ್ರದಲ್ಲಿ ಮಹಿಳಾ ಸ್ನೇಹಿ ರಾಜಕೀಯ ನೀತಿಗಳನ್ನು ರೂಪಿಸಲು ಸಹಾಯಕವಾಗುತ್ತದೆ. ಸಮಾಜದ ಕಲ್ಯಾಣ ಹಾಗೂ ಅಭಿವೃದ್ಧಿ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯಿಂದ ಸಾಕಾರಗೊಳ್ಳಲು ಸಾಧ್ಯವಿದೆ. ಜಾಗತಿಕ ಮಟ್ಟದಲ್ಲಿ ಬ್ರಿಟನ್‌ನಲ್ಲಿರುವ ಮಹಿಳಾ ಸಂಸತ್ ಸದಸ್ಯರು ಸಾಮಾಜಿಕ ವಿಚಾರಗಳಾದ ಕಾರ್ಮಿಕ ಕಾಯ್ದೆಗಳು, ಉದ್ಯೋಗ ವಿನಿಮಯ, ಸಮಾನ ವೇತನ ಹಾಗೂ ಮಹಿಳೆಯರ ಮೇಲಾಗುವ ದೌರ್ಜನ್ಯ ತಡೆಯ ಬಗ್ಗೆ ತೋರಿರುವ ನಿಲುವು ಮತ್ತು ರೂಪಿಸಿರುವ ನೀತಿಗಳು ಮಹಿಳಾ ಸದಸ್ಯರ ಪಾತ್ರವನ್ನು ಪ್ರಮುಖವೆಂದು ತಿಳಿಸುತ್ತದೆ. ರಾಜಕೀಯ ಅಸ್ಥಿರತೆಯನ್ನು ತೊಲಗಿಸಿ ಧನಾತ್ಮಕ ರಾಜಕೀಯ ಸಂಸ್ಕೃತಿಯನ್ನು ಬೆಳೆಸಲು ನಾಯಕತ್ವವನ್ನು ರೂಪಾಂತರಗೊಳಿಸುವಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ ಮಹತ್ವದ್ದಾಗಿದೆ.

ಮಹಿಳಾ ಕೇಂದ್ರೀಕೃತ ದೃಷ್ಟಿಕೋನವುಳ್ಳ ಹಾಗೂ ಜನ ಕೇಂದ್ರೀಕೃತ ಬೆಳವಣಿಗೆಗೆ ಮಹಿಳೆಯರ ಮಧ್ಯವರ್ತಿ ಪಾತ್ರದ ಅವಶ್ಯಕತೆ ಇದೆ. ಲಿಂಗ ಭೇದದ ಅಳತೆಗಾಗಿ, ಲಿಂಗ ಅಭಿವೃದ್ಧಿ ಸೂಚ್ಯಂಕವನ್ನು (ಜಿಡಿಐ) ಮಾನವಾಭಿವೃದ್ಧಿ ಸೂಚ್ಯಂಕದಂತೆ (ಎಚ್‌ಡಿಐ) ೧೯೯೫ರಲ್ಲಿ ಪರಿಚಯಿಸಲಾಯಿತು. ಲಿಂಗ ಬೆಳವಣಿಗೆ ಸೂಚ್ಯಾಂಕ, ಮಾನವಾಭಿವೃದ್ಧಿ ಸೂಚ್ಯಂಕದಂತೆ ಬದಲಾಯಿಸುವ ಪ್ರವೃತ್ತಿಯುಳ್ಳದ್ದಾಗಿದೆ; ಆದರೆ ಪುರುಷ, ಸ್ತ್ರೀಯರ ನಡುವಿನ ಅಸಮಾನತೆಯು ಎಲ್ಲಾ ಜನರ ಸರಾಸರಿ ಸಾಧನೆಯ ಮೇಲೆ ಕೇಂದ್ರೀಕರಿಸಿದೆ. ಲಿಂಗ ಬಲವರ್ಧನೆ ಕ್ರಮಗಳನ್ನು (ಜಿಇಎಂ) ಅದೇ ವರ್ಷ ಪರಿಚಯಿಸಲಾಯಿತು.

ಈ ಕ್ರಮಗಳು ಮೂರು ಮಾಪಾರ್ಟಗಳ ಮೇಲೆ ಕೇಂದ್ರೀಕರಿಸಿದೆ. ರಾಜಕೀಯ ನಿರ್ಧಾರ ಮಾಡುವಿಕೆ, ರಾಜಕೀಯ ಅವಕಾಶಗಳಿಗೆ ಮಾರ್ಗ ಮತ್ತು ಅವರ ಗಳಿಕಾ ಶಕ್ತಿ. ಇವುಗಳು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಕೇಂದ್ರೀಕೃತಗೊಂಡಿದೆ(ರೇಣುಕಾ ಕೆ, ೨೦೧೧).

ಭಾರತದಲ್ಲಿ ಮಹಿಳೆಯರು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಪ್ರಮಾಣ ಕನಿಷ್ಠ ಮಟ್ಟದಲ್ಲಿದೆ. ಮಹಿಳಾ ಮತದಾರರು ಮತದಾನದ ಕಡೆಗೆ ತೋರುವ ಒಲವು ಕ್ರಮೇಣ ಜಾಸ್ತಿಯಾಗುತ್ತಿರುವುದು ಕಂಡುಬರುತ್ತಿದೆ. ಭಾರತ ಚುನಾವಣಾ ಆಯೋಗದ ಅಂಕಿ ಅಂಶಗಳ ಪ್ರಕಾರ ೨೦೦೯ರ ಸಾರ್ವತ್ರಿಕ ಚುನಾವಣೆಯಲ್ಲಿ ೫೫.೮೨ ಶೇಕಡಾ ಮಹಿಳಾ ಮತದಾರರು ಹಕ್ಕು ಚಲಾಯಿಸಿದ್ದಾರೆ. ೨೦೧೪ರಲ್ಲಿ ಮಹಿಳಾ ಮತದಾರರ ಪ್ರಮಾಣ ಶೇಕಡಾ ೬೫.೬೩ಕ್ಕೆ ಏರಿಕೆಯಾಗಿದೆ. 'ಎಲೆಕ್ಷನ್ ಅಟ್ಲಾಸ್ ಆಫ್ ಇಂಡಿಯಾ' ವರದಿಯಂತೆ ಚುನಾವಣೆಯಲ್ಲಿ ಭಾಗವಹಿಸಿದ ಮಹಿಳಾ ಮತದಾರರ ಸಂಖ್ಯೆ ೨೦೦೪, ೨೦೦೯, ೨೦೧೪ರಲ್ಲಿ ಕ್ರಮವಾಗಿ ಶೇಕಡಾ ೩೨.೨೦, ೩೪.೨೨ ಮತ್ತು ೩೯.೭೦ರಷ್ಟಿದೆ.

ರಾಜಕೀಯ ಹಕ್ಕುಗಳು ಹಾಗೂ ಭಾಗವಹಿಸುವಿಕೆ ಎನ್ನುವುದು ೧೯೨೦ ಹಾಗೂ ೧೯೩೦ರ ದಶಕಗಳಲ್ಲಿ ಭಾರತೀಯ ಮಹಿಳೆಯರು ನಡೆಸಿದ ಹಕ್ಕೊತ್ತಾಯಗಳ ಫಲವಾಗಿದೆ. ರಾಷ್ಟ್ರೀಯ ಚಳುವಳಿಯಲ್ಲಿ ಮುಖ್ಯವಾಗಿ ರಾಜಕೀಯ ರಂಗದಲ್ಲಿ ಗಾಂಧೀಜಿಯವರ ಪ್ರವೇಶದ ಬಳಿಕ ಮಹಿಳೆಯರು ಭಾಗವಹಿಸಿದ್ದು, ಇದು ಮಹಿಳೆಯರಿಗೆ ರಾಜಕೀಯ ಅನುಭವವನ್ನು ಒದಗಿಸಿತು. ಅಸಹಕಾರ ಚಳುವಳಿ, ವಿದೇಶಿ ಸರಕುಗಳಿಗೆ ಬಹಿಷ್ಕಾರ, ಸರಾಯಿ ಅಂಗಡಿಗಳ ಮುಂದೆ ಪ್ರತಿಭಟನೆ, ಭಾರತ ಬಿಟ್ಟು ತೊಲಗಿ ಚಳುವಳಿ ಇತ್ಯಾದಿ. ಹೀಗೆ ಭಾರತೀಯ ರಾಷ್ಟ್ರೀಯ ಚಳುವಳಿಯ ನಾನಾ ಘಟ್ಟದಲ್ಲಿ ಮಹಿಳೆಯರು ಭಾಗವಹಿಸಿದ್ದರು. ಮಹಿಳೆಯರು ಮತದಾನದ ಹಕ್ಕು ಮತ್ತು ಸಾರ್ವಜನಿಕ ಹುದ್ದೆಗಳನ್ನು ಅಲಂಕರಿಸುವ ಹಕ್ಕುಗಳ ಬಗೆಗಿನ ಬೇಡಿಕೆಗಳು ಅವರು ರಾಷ್ಟ್ರೀಯ ರಾಜಕೀಯದಲ್ಲಿ ಭಾಗವಹಿಸಿದ್ದರ ಫಲವಾಗಿ ಸಹಜವಾಗಿಯೇ ಹೊರಹೊಮ್ಮಿತು. ೧೯೪೮ರಲ್ಲಿ ರಾಜ್ಯ ವ್ಯವಸ್ಥಾ ಸಭೆ ರಚನೆಯಾಗುವುದರೊಂದಿಗೆ ನಿರ್ಧಾರ ತೆಗೆದುಕೊಳ್ಳುವ ಸಂರಚನೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಮಹತ್ವಪಡೆದು, ಕ್ರಮೇಣ ರಾಷ್ಟ್ರೀಯ ರಾಜಕೀಯ ಸಂವಿಧಾನದಲ್ಲಿ ಲಿಂಗತ್ವ ಸಮನ್ಯಾಯವನ್ನು ಘೋಷಿಸುವುದರೊಂದಿಗೆ ಮಹಿಳೆಯರ ರಾಜಕೀಯ ಪಾಲುದಾರಿಕೆ ಹೊಸ ಮಹತ್ವ ಪಡೆದುಕೊಂಡಿತು(ಸಬಿಹ ಭೂಮಿಗೌಡ, ೨೦೦೭).

ಪಂಚಾಯತ್ ರಾಜ್ ಚಳುವಳಿಯು ೧೯೫೭ರಲ್ಲಿ ಬಲವಂತ ರಾಯ್ ಮೆಹ್ತಾ ಸಮಿತಿಯು ನೀಡಿದ ಐತಿಹಾಸಿಕ ವರದಿಯಲ್ಲಿ ಗುರುತಿಸಿದ ಉದ್ದೇಶಗಳನ್ನು ಈಡೇರಿಸುವ ಛಲದೊಂದಿಗೆ ಆರಂಭವಾಯಿತು. ಈ ವರದಿಯು ಪಂಚಾಯತ್ ವ್ಯವಸ್ಥೆಯು ಗ್ರಾಮೀಣ ಜನರ ಮನೆಬಾಗಿಲಿಗೆ ಪ್ರಜಾಪ್ರಭುತ್ವವನ್ನು ತರಬಲ್ಲದೆಂಬ ಆಶಯವು ವ್ಯಾಪಕವಾಗಿ ಪಸರಿಸುವಂತೆ ಮಾಡಿತು. ಗ್ರಾಮೀಣ ಜನರ ಅಗತ್ಯತೆಗಳಿಗೆ ಪೂರಕವಾಗಿ ಅಭಿವೃದ್ಧಿ ಕಾರ್ಯವನ್ನು ರೂಪಿಸುವ ಪಾಲ್ಗೊಳ್ಳುವಿಕೆಯ

ಅವಕಾಶವನ್ನು ಈ ಸಾಧನವು ನೀಡಬಲ್ಲದು ಎಂಬುದಾಗಿ ತಿಳಿದುಕೊಂಡು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಲು ಬೇಡಿಕೆ ಹೆಚ್ಚಾಯಿತು. ಈ ವರದಿಯು ಹೇಳಿದಂತೆ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ, ಅಭಿವೃದ್ಧಿಯಾಧರಿತ ಯೋಜನೆಗಳು ಮತ್ತು ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಗ್ರಾಮ ಮಟ್ಟದಲ್ಲಿ ನಾಯಕತ್ವವನ್ನು ಬೆಳೆಸಲು ಈ ವ್ಯವಸ್ಥೆ ಸಹಕಾರಿಯಾಗಿದೆ. ಪ್ರಜಾಪ್ರಭುತ್ವದಲ್ಲಿ ಜನರ ಸಹಭಾಗಿತ್ವನ್ನು ಅರ್ಥಪೂರ್ಣ ಮತ್ತು ಪರಿಣಾಮಕಾರಿಯಾಗಿಸಲು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೂರು ಶ್ರೇಣಿಯ ಸಾಂಸ್ಥಿಕ ವ್ಯವಸ್ಥೆಯನ್ನು ಮೆಹ್ತಾ ವರದಿಯು ಶಿಫಾರಸು ಮಾಡಿತು. ಸ್ಥಳೀಯವಾಗಿ ಅಭಿವೃದ್ಧಿ, ಆಡಳಿತಾತ್ಮಕ ಹಾಗೂ ರಾಜಕೀಯಾತ್ಮಕ ಸರಕಾರವನ್ನು ನಡೆಸಲು ಅವಕಾಶವಾಗುವಂತೆ ಪ್ರತಿ ರಾಜ್ಯದಲ್ಲಿ ಸೂಕ್ತ ಶಾಸನಗಳನ್ನು ಜಾರಿಗೊಳಿಸಲು ವರದಿಯು ಸಲಹೆ ನೀಡಿತು. ೨ ಅಕ್ಟೋಬರ್ ೧೯೫೯ರಲ್ಲಿ ಪಂಡಿತ್ ಜವಾಹರ್‌ಲಾಲ್ ನೆಹರೂರವರು ರಾಜಸ್ಥಾನದಲ್ಲಿ ಮೊಟ್ಟ ಮೊದಲ ಬಾರಿಗೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದರು. ನಂತರ ಆಂಧ್ರಪ್ರದೇಶ, ಉತ್ತರಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಒರಿಸ್ಸಾ ಮತ್ತು ಗುಜರಾತ್ ರಾಜ್ಯಗಳು ಈ ಬಗ್ಗೆ ಮುತುವರ್ಜಿ ವಹಿಸಿ ಸೂಕ್ತ ಶಾಸನಗಳ ಮೂಲಕ ಪ್ರಜಾಪ್ರಭುತ್ವ ವಿಕೇಂದ್ರೀಕರಣದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿದವು. ಆರಂಭಿಕ ವಿರೋಧಗಳು ಬಂದಿದ್ದರೂ ಭಾರತದಾದ್ಯಂತ ರಾಷ್ಟ್ರೀಯ ಒಮ್ಮತದ ಮೂಲಕ ಪಂಚಾಯತ್ ರಾಜ್ ಜಾರಿಗೊಂಡಿತು.

ಪಂಚಾಯತ್‌ರಾಜ್ ವ್ಯವಸ್ಥೆಯಿಂದಾಗಿ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆ ಹೆಚ್ಚಾಯಿತೆಂಬುದು ಸತ್ಯ. ಆದರೆ ಈ ಹೆಚ್ಚಳವು ಕೇವಲ ಸ್ಥಳೀಯ ಸರ್ಕಾರಗಳು ಅಂದರೆ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಮಟ್ಟದವರೆಗೆ ಮಾತ್ರವಿದೆ. ದೇಶದ ಹೆಚ್ಚಿನ ರಾಜ್ಯಗಳಲ್ಲಿ ಪಂಚಾಯತ್ ರಾಜ್ ಅನುಷ್ಠಾನಗೊಂಡ ನಂತರ ಮಹಿಳಾ ಪಾಲ್ಗೊಳ್ಳುವಿಕೆಯು ಖಾತ್ರಿ ಪಟ್ಟಿದ್ದರೂ ನಿರ್ಧಾರ ತೆಗೆದುಕೊಳ್ಳುವ ಪಾಲುದಾರಿಕೆಯಿಂದ ಮಹಿಳೆಯರನ್ನು ವಂಚಿಸಿರುವುದು ಅಧ್ಯಯನಗಳಲ್ಲಿ ಕಂಡುಬರುತ್ತದೆ. ರಶ್ಮಿ ಶ್ರೀವಾಸ್ತವ, (೨೦೦೦) ರವರು ಗೋವಾದಲ್ಲಿ ನಡೆಸಿದ ಅಧ್ಯಯನದಲ್ಲಿ ಪಂಚಾಯತ್ ರಾಜ್‌ನ ಈ ನ್ಯೂನತೆಯನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ.

ಸಾಮಾಜಿಕ ವಿಜ್ಞಾನ ಸಂಸ್ಥೆ ಹಾಗೂ ದಕ್ಷಿಣ ಏಷ್ಯಾ ಪಾಲುದಾರಿಕೆ, ಕೆನಡಾ ಇವರು ೨೦೦೩ರಲ್ಲಿ ನಡೆಸಿದ ಕಾರ್ಯಾಗಾರದಲ್ಲಿ ನಡೆದ ಪ್ರಬಂಧ ಮಂಡನೆಯಲ್ಲಿ ಹಲವಾರು ಅಧ್ಯಯನಗಳು, ಕೇಸ್ ಸ್ಟಡಿಗಳ ಸಾರವನ್ನು ಪ್ರಕಟಿಸಿದರು. 'ಪ್ರಾಕ್ಸಿ ಮಹಿಳೆ' ಎಂಬ ಪದವನ್ನು ಇಲ್ಲಿ ಬಳಸಲಾಗಿದ್ದು, ಪಂಚಾಯತ್ ರಾಜ್‌ನಲ್ಲಿ ಮಹಿಳೆಯರು ಪುರುಷರು ಹಾಗೂ ಅವರ ಸಂಬಂಧಿಕರಿಂದ ನಿಯಂತ್ರಿಸಲ್ಪಡುವ 'ಪ್ರಾಕ್ಸಿ ಮಹಿಳೆ'ಯಾಗಿ ಕಂಡು ಬರುತ್ತಾರೆ. ಈ ಕಾರ್ಯಾಗಾರದಲ್ಲಿ ಪಂಚಾಯತ್ ರಾಜ್‌ಗೆ ಮಾರಕವಾಗಿರುವ ಇಂತಹ 'ಪ್ರಾಕ್ಸಿ ಮಹಿಳೆ'ಯರನ್ನು ತಡೆಗಟ್ಟುವ ನಿಟ್ಟಿನಲ್ಲಿ ಸದಸ್ಯರಾಗಿ ಆಯ್ಕೆಗೊಂಡ ಮಹಿಳೆಯರಿಗೆ ತರಬೇತಿ ನೀಡಿ, ಅವರ ಸಾಮರ್ಥ್ಯ ವೃದ್ಧಿ ಮಾಡುವಂತಹ

ತಂತ್ರಗಾರಿಕೆಯನ್ನು ಸೂಚಿಸಲಾಯಿತು. ಕಾರ್ಯಾಗಾರದ ದಿಕ್ಸೂಚಿ ಭಾಷಣದಲ್ಲಿ ಮ್ಯಾಥ್ಯೂರವರು ಸಮಾನತೆ ಮತ್ತು ಸಬಲೀಕರಣಗಳನ್ನು ವಿಲೀನಗೊಳಿಸಿ ಲಿಂಗ ಮತ್ತು ಅಭಿವೃದ್ಧಿಯ ಪರಿಕಲ್ಪನೆಯನ್ನು ರಚಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ಈ ಎಲ್ಲ ಅಧ್ಯಯನಗಳು ಪಂಚಾಯತ್ ರಾಜ್‌ನಲ್ಲಿ ಅವಕಾಶ ಪಡೆದ ರಾಜಕೀಯ ಪ್ರವೇಶ ಪಡೆದಿರುವ ಮಹಿಳೆಯರು ಕೂಡಾ ಅವರಲ್ಲಿರುವ ಬೌದ್ಧಿಕ ಹಾಗೂ ನಾಯಕತ್ವ ಸಾಮರ್ಥ್ಯಗಳನ್ನು ಸಮರ್ಥವಾಗಿ ಬಳಸಿಕೊಂಡಿಲ್ಲವೆಂದು ತೋರಿಸುತ್ತದೆ(ಸತ್ಯವತಿ ಎನ್.ಎಚ್, ೨೦೧೭).

ಮಹಿಳಾ ನಾಯಕತ್ವ ಹಾಗೂ ರಾಜಕೀಯ ಪ್ರವೇಶದ ಮೂಲ ಬೀಜವನ್ನು ಬಿತ್ತಿದವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು. ಅವರ ಮಹಿಳಾಪರ ಚಿಂತನೆಗಳು, ಮಹಿಳಾ ಸಹಭಾಗಿತ್ವದ ಪ್ರಯತ್ನ ಹಾಗೂ ಮಹಿಳಾ ವಿಮೋಚನೆಗಾಗಿ ಅವರು ಮಾಡಿರುವ ಕಾರ್ಯಕ್ರಮಗಳು ಇಂದು ಮಹಿಳಾ ರಾಜಕೀಯದ ಬೆಳವಣಿಗೆಗೆ ಕಾರಣವಾಗಿವೆ. ಮಹಿಳೆಯರನ್ನು 'ಸುಧಾರಣೆಯ ಪೂರಕ ಅಂಶ'ಗಳಾಗಿ ಪರಿಭಾವಿಸುವಂತೆ ಗಾಂಧೀಜಿ ನೀಡಿದ ಸಲಹೆ, ಮಹಿಳಾ ಶಿಕ್ಷಣದ ಪ್ರತಿಪಾದನೆ, ಮಹಿಳೆಯನ್ನು ಸಂಘಟನೆಯಲ್ಲಿ ತೊಡಗಿಸಿಕೊಂಡು ನಾಯಕತ್ವದ ಪೋಷಣೆ ಮುಂತಾದ ಅಂಶಗಳಿಂದ ಹಲವಾರು ಮಹಿಳಾ ಸಂಘಟನೆಗಳು ಹುಟ್ಟಿಕೊಳ್ಳಲು ಕಾರಣವಾಯಿತು(ಜಾಲಿ ಸುರ್ಜಿತ್ ಕೌರ್, ೨೦೦೬).

ಗಾಂಧೀಜಿಯಂತೆಯೇ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರು ಸಾಮಾಜಿಕ ಸುಧಾರಣೆಯನ್ನು ಪ್ರತಿಪಾದಿಸಿ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡಿದರು. ಮಹಿಳೆಯರಿಗೆ ಆಸ್ತಿಯನ್ನು ಹೊಂದುವ ಹಕ್ಕು, ಮಹಿಳಾ ಶಿಕ್ಷಣದ ಹಕ್ಕು, ಮಹಿಳಾ ನಾಯಕತ್ವ ಹಾಗೂ ಸಂಘಟನೆಗಳಿಗೆ ಪ್ರೇರಣೆಯ ಮೂಲಕ ಅವರಲ್ಲಿದ್ದ ಕೀಳರಿಮೆಯನ್ನು ದೂರ ಮಾಡಲು ಶ್ರಮಿಸಿದರು. ಸಾಮಾಜಿಕ ಪ್ರಜಾಪ್ರಭುತ್ವವಿಲ್ಲದಲ್ಲಿ ರಾಜಕೀಯ ಪ್ರಜಾಪ್ರಭುತ್ವಕ್ಕೆ ಯಾವುದೇ ಅರ್ಥವಿಲ್ಲ ಎಂದ ಅಂಬೇಡ್ಕರ್ ಸಂವಿಧಾನದ ವಿವಿಧ ವಿಧಿಗಳಲ್ಲಿ ಸಮಾನತೆಯ ಹಕ್ಕು (೧೪, ೧೫, ೧೬ ನೇ ವಿಧಿ) ಶೋಷಣೆಯ ವಿರುದ್ಧದ ಹಕ್ಕು (ವಿಧಿ ೨೪) ಹಾಗೂ ಮಹಿಳೆಯರಿಗೆ ಚುನಾವಣೆಯ ಹಕ್ಕುಗಳನ್ನು (೩೨೫ನೇ ವಿಧಿ) ಸಂವಿಧಾನದ ಮೂಲಕ ಚಾಲ್ತಿಗೊಳಿಸುವಲ್ಲಿ ಯಶಸ್ವಿಯಾದರು.(ಯರ್ರಿಸ್ವಾಮಿ ಈ, ೨೦೧೦).

ಈ ಅಧ್ಯಯನದಲ್ಲಿ ಮಹಿಳಾ ಅಭಿವೃದ್ಧಿಯನ್ನು ಸಾಧಿಸಲು ಬೇಕಾದ ಅವಶ್ಯ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಮಹಿಳೆ ಮತ್ತು ಪುರುಷರ ನಡುವೆ ಸಮಾಜದಲ್ಲಿರುವ ಅಂತರವೇನು ಎಂಬುದನ್ನು ತಿಳಿಯುವ ಉದ್ದೇಶದೊಂದಿಗೆ ಈ ಅಂತರವನ್ನು ಕುಗ್ಗಿಸುವ ಸಾಧ್ಯತೆಗಳನ್ನು ವಿಮರ್ಶಿಸಲು ಪ್ರಯತ್ನಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿರುವ ಮೊಗವೀರ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ಅವರಿಗೆ ರಾಜಕೀಯದಲ್ಲಿರುವ ಭವಿಷ್ಯವೇನು? ಎಂಬುದನ್ನು ತಿಳಿಯಲು ಪ್ರಯತ್ನ ಮಾಡಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯಿಂದಾಗಿ ೨೦೦೮ರಲ್ಲಿ ಸ್ಥಳೀಯಾಡಳಿತದಲ್ಲಿ ೩೭.೮ರಷ್ಟು ಮಹಿಳೆಯರು ರಾಜಕೀಯ ಪ್ರವೇಶಿಸಿದ್ದಾರೆ. ಈ

ಎಲ್ಲಾ ಬೆಳವಣಿಗೆಗಳ ಜೊತೆಯಲ್ಲಿ ಪಂಚಾಯತ್ ರಾಜ್‌ನಲ್ಲಿ ಸದಸ್ಯರಾದ ಮಹಿಳೆಯರ ಸ್ಥಾನಮಾನಗಳು ತೃಪ್ತಿಕರವಾಗಿಲ್ಲ ಎಂಬ ಅಂಶವು ಯೋಗರಾಜ್ ಎಸ್ ಡಿ. (೨೦೧೩) ಅವರ ಅಧ್ಯಯನದಲ್ಲಿ ಕಂಡು ಬರುತ್ತದೆ. ಮೀಸಲಾತಿಯ ಕಾರಣದಿಂದಾಗಿ ರಾಜಕೀಯ ಸಂಪರ್ಕ ಪಡೆದಿರುವ ಮಹಿಳೆಯರನ್ನು ಸಮಾಜ ನೋಡುವ ದೃಷ್ಟಿಕೋನದಲ್ಲೂ ಬದಲಾವಣೆಯಾಗುತ್ತಿದೆ. ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ಕೂಡಾ ರಾಜಕೀಯ ಪ್ರವೇಶದ ಮೂಲಕ ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳನ್ನು ಎತ್ತರಕ್ಕೇರಿಸಿಕೊಂಡಿರುವುದು ಈ ಅಧ್ಯಯನದಲ್ಲಿ ಕಂಡು ಬಂದಿದೆ. ಈ ಅಧ್ಯಯನದ ಮೂಲಕ ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮೊಗವೀರ ಮಹಿಳಾ ಸಮುದಾಯ ದಲ್ಲಿರುವಂತಹ ಧನಾತ್ಮಕ ಬದಲಾವಣೆಗಳ ಪ್ರಮಾಣವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

೧.೪. ಮೊಗವೀರ ಸಮುದಾಯ

ಮೋಗವೀರ ಸಮುದಾಯವು ಸಿಂಧೂ ನದಿ ಬಯಲಿನ ಹರಪ್ಪ ಮತ್ತು ಮೊಹಂಜದಾರೋ ನಾಗರೀಕತೆಯ ಅವಿಭಾಜ್ಯ ಅಂಗವಾಗಿದ್ದು, ಮೀನುಗಾರಿಕೆಯನ್ನೇ ತಮ್ಮ ಜೀವನಕ್ಕಾಗಿ ಅವಲಂಬಿಸಿತ್ತು. ಸಿಂಧೂ ನದಿ ಬಯಲಿನಲ್ಲಿದ್ದ 'ಸರಸ್ವತಿ' ಎನ್ನುವ ಬೃಹತ್ ನದಿ ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ಗುಜರಾತ್ ಮಾರ್ಗವಾಗಿ ೭೦೦ ಮೈಲು ಹರಿದು ಸೋಮನಾಥದ ಬಳಿ (ಪ್ರಭಾಸ್ ಪಟಾನ್) ಸಮುದ್ರವನ್ನು ಸೇರುತ್ತಿತ್ತು. ಕ್ರಿಸ್ತ ಪೂರ್ವ ಸುಮಾರು ೧೯೦೦ ರಲ್ಲಿ ಸರಸ್ವತಿ ನದಿ ಬತ್ತಿ ಹೋದುದರಿಂದ ಮೀನುಗಾರಿಕೆಯನ್ನರಸಿ ಗಂಗಾನದಿಯ ಕೊಳ್ಳದ ಕಡೆಗೆ ಮೊಗವೀರರು ವಲಸೆ ಬಂದವರು. ಭಾರತವು ನದಿಗಳಿಂದ, ಸರೋವರಗಳಿಂದ, ಕೆರೆಗಳಿಂದ ತುಂಬಿ ಕೊಂಡಿರುವ ಪ್ರದೇಶ, ಅವುಗಳನ್ನು ದಾಟಲು ಬೇಕಾಗುವ ನಾವೆಗಳನ್ನು ಕಟ್ಟಲು ಕಲಿತ ಮೀನುಗಾರರು ಗಂಗಾನದಿಯ ಕೊಳ್ಳದಿಂದ ದಕ್ಷಿಣದ ಪ್ರಸ್ಥಭೂಮಿಗೆ ಬಂದು ನೆಲೆಸಿದರು. ಅದರಂತೆ ಇವರು ಹೆಚ್ಚಾಗಿ ಉತ್ತರದ ಕಾರಾವಾರದಿಂದ ದಕ್ಷಿಣದ ಉಳ್ಳಾಲದವರೆಗಿನ ಕರಾವಳಿಯ ಭೂ ಭಾಗದಲ್ಲಿ ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಾರೆ. ಕರ್ನಾಟಕದಲ್ಲಿ ಮೀನುಗಾರಿಕೆಯು ಇವರ ಅತ್ಯಂತ ಪ್ರಮುಖ ಉದ್ಯೋಗವಾಗಿದೆ.

ಉಡುಪಿ ಜಿಲ್ಲೆಯ ಮೊಗವೀರರು ತುಳು ಭಾಷಿಕರಾಗಿದ್ದು, ಅಳಿಯ ಸಂತಾನ ಪದ್ಧತಿಯನ್ನು ಅವಲಂಬಿಸಿರುವವರು. ಮೊಗವೀರರಲ್ಲಿ 'ಬಳಿ'ಯ ಹೆಸರಿನಲ್ಲಿ ಅನೇಕ ಉಪ ಪಂಗಡಗಳಿವೆ. ವೃತ್ತಿಗಳ ಆಧಾರದ ಮೇಲೆ ಗುರುತಿಸಿಕೊಳ್ಳುವ ಮೊಗವೀರ ಸಮುದಾಯದ ಮೂಲದ ಬಗ್ಗೆ ತಿಳಿಸುವುದಾದರೆ ಇವರು ನೀರನ್ನು ನಂಬಿ ಜೀವಿಸುತ್ತಿರುವ ಒಂದು ಸಮುದಾಯವಾಗಿದೆ. ಕರ್ನಾಟಕದಲ್ಲಿ ಬೆಸ್ತ, ಮೊಗವೀರ, ಮರಕಾಲ, ಮೊಗೇರ ಪಟ್ಟಣದವ, ಬೋವಿ, ನಾಯಕ, ಗಂಗಾಮತಸ್ಥ, ಅಂಬಿಗ, ಖಾರ್ವಿ, ಮುಂತಾದ ಸುಮಾರು ೪೭ ಪರ್ಯಾಯ ಹೆಸರುಗಳಿಂದ ಕರೆಯಲ್ಪಡುವ ಮೀನುಗಾರ ಸಮುದಾಯಗಳಿವೆ. 'ಮರಕಾಲ' ಎಂಬ ಪದ 'ಮರ' ಎಂಬ ಪದದಿಂದ ಉತ್ಪತ್ತಿಯಾಗಿದ್ದು. ಹಿಂದೆ ದೋಣಿಯ ಒಳಭಾಗವನ್ನು ಸುಡುವುದರ ಮೂಲಕ ದೋಣಿಗಳನ್ನು ತಯಾರಿಸಲಾಗುತ್ತಿತ್ತು. ಹೀಗೆ

ಸುಡುವುದರಿಂದ ದೋಣಿಯ ಒಳಭಾಗ ಕಪ್ಪಾಗುತ್ತದೆ. ಆದುದರಿಂದ, ಕಪ್ಪಾದ ಒಳ ಭಾಗವಿರುವ ದೋಣಿಯಲ್ಲಿ ಮೀನು ಹಿಡಿಯುವವರು 'ಮರಕಾಲ' ರೆಂದು ಗುರುತಿಸಬಹುದು. 'ಮರಕಾಲ' ಎಂಬ ಪದವನ್ನು ಮೀನು ಹಿಡಿಯುವಾಗ ಮರದ ದೋಣಿಯನ್ನು 'ಕಾಲಿನಂತೆ ಬಳಸುವವರು' ಎಂಬರ್ಥದಲ್ಲಿಯೂ ವ್ಯಾಖ್ಯಾನಿಸಲಾಗಿದೆ. ಮೊಗೇರ ಎಂಬುದು ಮೊಗವೀರ ಸಮಾಜದ ಅತೀ ಪ್ರಾಚೀನವಾದ ಹೆಸರು. ಮೊಗವೀರ ಎಂಬುದು ಮೊಗೇರ ಪದದ ಪರಿಷ್ಕೃತ ನಾಮ. ಕನ್ನಡದಲ್ಲಿ 'ಮೊಗ' ಎಂದರೆ ಯುದ್ಧದಲ್ಲಿ ಮುಂಚೂಣಿ ಮತ್ತು ವೀರ ಎಂದರೆ 'ಧೀರ ವ್ಯಕ್ತಿ' ಎಂಬ ಅನುವಾದ. ಇವನ್ನು 'ಮೊಗವೀರ ಸಹೋದರ ಸಮುದಾಯಗಳು' ಎಂದು ಕರೆಯುತ್ತಾರೆ. ಎಲ್ಲಾ ಮೀನುಗಾರ ಸಮುದಾಯಗಳ ಮೂಲ ವೃತ್ತಿ ಮತ್ತು ಲಕ್ಷಣಗಳು ಒಂದೇ ಆಗಿವೆ. ಅವರೆಲ್ಲರೂ ಜಲ ಮೂಲಗಳ ಎಂದರೆ ಕೊಳ, ನದಿ, ಸಮುದ್ರ ಪಕ್ಕದಲ್ಲಿಯೇ ವಾಸಿಸುತ್ತಾರೆ(ಸದಾನಂದ ಕೆ, ಉಚ್ಚಿಲ, ೨೦೧೪).

ಮೊಗೆಯರು ಯಾ ಮೊಗೇರರು ತುಳುವದ ಮೂಲಿಗರು. ಅವರು ಮಳೆಯಾಳ ದೇಶದ 'ಮುಕ್ಕವ'ರಿಗೆ ಸರಿ ಹೋಲುವವರು. ತುಳುವ ಮೊಗೇರರು ಬೆಸ್ತರು, ದೋಣಿ ನಡೆಸುವವರೂ, ಪಲ್ಲಕ್ಕಿ ಹೊರುವವರೂ ಆಗಿದ್ದಾರೆ, ಮೊಗೇರರ ವಾಸಸ್ಥಳವು 'ಪಟ್ಟಣ'ವೆಂದು ಕರೆಯಲ್ಪಡುತ್ತದೆ. ಆದುದರಿಂದ ಮೊಗೇರರನ್ನು 'ಪಟ್ಟಣದವ'ನೆಂದು (ಪಟ್ಟಣದಾಯ) ಕೆಲವೊಮ್ಮೆ ಕರೆಯಲಾಗುತ್ತದೆ. ಮದ್ರಾಸು ಶಹರಿನಲ್ಲಿಯ ತಮಿಳು ಬೆಸ್ತನು 'ಪಟ್ಟಣವನ್' ಎನಿಸಿಕೊಳ್ಳುತ್ತಾನೆ. ಕಾರಣ, ಈ ಬೆಸ್ತರು ಕರಾವಳಿಯಲ್ಲಿ ತಮ್ಮದೇ ಆದ ಗ್ರಾಮ ಮತ್ತು ಪಟ್ಟಣದಲ್ಲಿರುವವರು. ಮೊಗೇರರ ಜಾತಿಯ ಸಾಮಾನ್ಯ ಹೆಸರು 'ಮರಕಲರು' ಎಂಬುದಾಗಿದೆ. ಅವರಲ್ಲಿ ಮುಖ್ಯಸ್ಥರ ಕುಟುಂಬಕ್ಕೆ ಸೇರಿದ ಹಿರಿಯ ವ್ಯಕ್ತಿಗೆ 'ಗುರಿಕಾರ' ಎನ್ನುವರು. ಕುಂದಾಪುರ ತಾಲೂಕಿನಲ್ಲಿ ಇವರನ್ನು 'ನಾಯಕ್' ಎಂದು ಕರೆಯುತ್ತಾರೆ. 'ಮರಕಲ' ಎಂಬ ಹೆಸರು ತೆಲುಗು ಪ್ರಭಾವದಿಂದ ಬಂದುದಾಗಿದೆ. 'ಮರಕಲ್ಲು ಯಾ ಮರಕಡು' ಎಂಬುದು ತೆಲುಗು ದೇಶದ ಮೀನುಗಾರಿಕೆ ವೃತ್ತಿಯಲ್ಲಿರುವ 'ಪಲ್ಲಿ' ಎಂಬವರ ಪ್ರಭೇದ. ಈ ತೆಲುಗು ಮರಕಲರು ನಮ್ಮ ತುಳುನಾಡಿಗೆ ವಲಸೆ ಬಂದಂತೆ ದಾಖಲೆ ಇದೆ. ಉದ್ಯೋಗ ಒಂದೇ ಆದುದರಿಂದ ನಮ್ಮ ನಾಡಿನ ಮೊಗೇರರು ಆ ಕುಲನಾಮವನ್ನು ಇಟ್ಟುಕೊಂಡಂತೆ ತಿಳಿಯುತ್ತದೆ. ಹಾಗಾದರೆ ತುಳುವ ಮೊಗೇರರೂ, ಮಳೆಯಾಳದ 'ಮುಕ್ಕವ'ರೂ ತೆಲುಗು ದೇಶದ ಮರಕಲ್ಲರೂ ಒಂದೇ ವರ್ಗಕ್ಕೆ ಸೇರಿದವರೆಂದು ಹೇಳಬಹುದು. 'ದ ಗಜೇಟಿಯರ್ ಆಫ್ ದ ಬಾಂಬೆ ಪ್ರೆಸಿಡೆನ್ಸಿ ಕೆನರಾ' ಪುಸ್ತಕದಲ್ಲಿ ಮೊಗೇರರು ಉತ್ತರ ಕನ್ನಡಕ್ಕೆ ಹೊರಗಿನಿಂದ ಬಂದವರಿರಬೇಕೆಂದೂ, ಆ ಜಿಲ್ಲೆಯ ಇತರ ಮೀನುಗಾರರಿಗಿಂತ ಈ ಮೊಗೇರರು ಎತ್ತರವಾಗಿಯೂ, ಸುಂದರಕಾಯರಾಗಿಯೂ ಹಾಗೂ ಹೆಚ್ಚು ಧೈರ್ಯಶಾಲಿಗಳಾಗಿರುವುದಾಗಿಯೂ ಹಾಗೂ ಪ್ರಾಚೀನ ಕಾಲದ ತುಳುವದ ಮೊದಲಿಗರೆನಿಸುವ ಮೊಗೇರರು ಮಧ್ಯಭಾರತದಿಂದ ವಲಸೆ ಬಂದಿರಲೂಬಹುದು ಎಂಬುದಾಗಿ ತಿಳಿಸಿದ್ದಾರೆ(ಪಾದೂರು ಗುರುರಾಜ ಭಟ್, ೨೦೦೯).

ಕರಾವಳಿಯ ಸಮುದ್ರ ಮೀನುಗಾರಿಕಾ ಸಮುದಾಯಗಳು ಮತ್ತು ಒಳನಾಡು ಮೀನುಗಾರಿಕಾ ಸಮುದಾಯಗಳು ಎಂಬ ಎರಡು ಸಮುದಾಯಗಳಿವೆ. ಮಂಗಳೂರು ತಾಲೂಕು (ದ.ಕ.ಜಿಲ್ಲೆ)

ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ (ಉಡುಪಿ ಜಿಲ್ಲೆ) ವಾಸಿಸುವ ಮೊಗವೀರರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಭಟ್ಕಳ, ಹೊನ್ನಾವರ, ಕುಮುಟಾ, ಅಂಕೋಲ ಮತ್ತು ಕಾರವಾರ ತಾಲೂಕುಗಳ 'ಖಾರ್ವೆ', 'ಕೊಂಕಣ ಖಾರ್ವಿ', 'ಹರಿಕಾಂತ್ರ', ಹರಕಾಂತ್ರ', 'ಗಜಿತ್' 'ಅಂಬಿಗ', ಮತ್ತು 'ಮೊಗೇರ'ರನ್ನು 'ಕರಾವಳಿಯ ಮೊಗವೀರ ಸಮುದಾಯ' ಎಂದು, ಕರ್ನಾಟಕ ರಾಜ್ಯದ ಒಳನಾಡಿನ ಜಿಲ್ಲೆಗಳಲ್ಲಿ ವಾಸಿಸುವ 'ಅಂಬಿಗ, 'ಬೆಸ್ತ', 'ಕೋಲಿ', 'ಕಬ್ಬಲಿಗ', 'ಗಂಗಾಮತ' ಸಹೋದರ ಸಮುದಾಯಗಳನ್ನು 'ಒಳನಾಡು ಮೊಗವೀರ ಸಹೋದರ ಸಮುದಾಯ'ಗಳೆಂದು ಕರೆಯುತ್ತಾರೆ.

ಮೊಗವೀರರು ಪ್ರಕೃತಿ ಆರಾಧಕರು. ಹಾಗೆಯೇ ಮೊಗವೀರರು ಸಮುದ್ರವನ್ನು ತಮ್ಮ ದೇವರು (ಗಂಗಾಮಾತೆ) ಎಂದು ಪರಿಗಣಿಸುತ್ತಾರೆ. ಮಳೆಗಾಲ ಮುಗಿಯುವಾಗ ಪ್ರಾರ್ಥನೆಯೊಂದಿಗೆ ಹಾಲು ಮತ್ತು ತೆಂಗಿನ ಕಾಯಿಯನ್ನು ಸಮುದ್ರಕ್ಕೆ ಅರ್ಪಿಸಿ, ಮೀನುಗಾರಿಕೆಗೆ ಸಮುದ್ರಕ್ಕಿಳಿಯುವ ಸಾಹಸಕ್ಕೆ ಸಮುದ್ರ ರಾಜನ ಅಪ್ಪಣೆ ಪಡೆಯುವ ವಾಡಿಕೆ ಇವರದ್ದಾಗಿದೆ. 'ಬಬ್ಬರ್ಯ' ಮೊಗವೀರರ ಸಮುದಾಯದ ಪ್ರಮುಖ ದೈವವಾಗಿದ್ದು ಮೀನುಗಾರಿಕೆಗೆ ಸಂರಕ್ಷಕ ಎಂದು, ಅಂತೆಯೇ 'ಜಾರಂದಾಯ' ದೈವವನ್ನು ನೆಲದ ಮೇಲಿನ ತಮ್ಮ 'ಸಂರಕ್ಷಕ ದೈವ' ಎಂಬ ನಂಬಿಕೆಯೊಂದಿಗೆ ಮೊಗವೀರರು ಗ್ರಾಮ ರಕ್ಷಕ ದೈವವಾಗಿ ಪೂಜಿಸುತ್ತಾರೆ. ಭೂತಗಳನ್ನು ನೇಮ–ಕೋಲ, ಅಗೆಲು–ತಂಬಿಲ ಮತ್ತು ದರ್ಶನ ಸೇವೆಗಳ ಮೂಲಕ ಆರಾಧಿಸಿಕೊಂಡು ಬರುತ್ತಿದ್ದಾರೆ. ಬೆಣ್ಣೆಕುದ್ರುವಿನಲ್ಲಿರುವ ಕುಲ ಮಹಾಸ್ತ್ರೀ ಅಮ್ಮ ಪ್ರಧಾನ ದೈವವಾದರೆ, ವೀರಭದ್ರ ಚಕ್ರೇಶ್ವರಿ, ಗೂರಮ್ಮ ಚೀನೀಕಾರರ ದೈವ, ಚಿಕ್ಕಮ್ಮ, ಮಲೆಸಾವಿರ ದೈವ, ಮೂಲಮೈಸಂದಾಯ, ಪಂಜುರ್ಲಿ, ಹಾಯ್ಗುಳಿ, ಬೈಕಾಡ್ತಿ, ಕಂದ ಮುಂತಾದ ಅನೇಕ ಉಪದೈವಗಳನ್ನು ಆರಾಧಿಸಿಕೊಂಡು ಬರುತ್ತಿದ್ದಾರೆ. ಕುಲಗುರು ಪರಂಪರೆಯೂ ಮೊಗವೀರರಲ್ಲಿವೆ. ೧೮ನೇ ಶತಮಾನದಿಂದ ಕುಲಗುರುಗಳನ್ನು ನೇಮಿಸುವ ಪದ್ಧತಿಯು ಆಚರಣೆಯಲ್ಲಿದ್ದು ಈವರೆಗೆ ಒಂಭತ್ತು ಕುಲಗುರುಗಳ ನೇಮಕವಾಗಿದೆ. ಶ್ರೀ ಮಾಧವ ಮಂಗಲ ಪೂಜಾರ್ಯರು ಮೊಗವೀರ ಸಮುದಾಯದ ಕೊನೆಯ ಕುಲಗುರುಗಳು. ಇವರ ನಿಧನದ ನಂತರ ಕುಲಗುರು ಪರಂಪರೆ ನಿಂತು ಹೋಯಿತು.

ಉಡುಪಿ ಜಿಲ್ಲೆಯಲ್ಲಿ ಪ್ರತಿ ಮೊಗವೀರ ಹಳ್ಳಿಗಳಲ್ಲಿ ಒಂದು ಮೊಗವೀರ ಗ್ರಾಮಸಭೆ ಅಸ್ತಿತ್ವದಲ್ಲಿರುತ್ತದೆ. ೧೮ ವರ್ಷ ವಯಸ್ಸು ಮೇಲ್ಪಟ್ಟ ಪ್ರತಿಯೋರ್ವರು ಈ ಗ್ರಾಮ ಸಭೆಯ ಸದಸ್ಯರಾಗಿರುತ್ತಾರೆ. ಗ್ರಾಮ ಸಭೆಯ ಮುಖ್ಯಸ್ಥರಾಗಿ ಅನುವಂಶೀಯ ಗುರಿಕಾರರು ಕಾರ್ಯ ನಿರ್ವಹಿಸುತ್ತಿದ್ದು, ಗುರಿಕಾರತನವು ಮಾವನಿಂದ ಸೋದರಳಿಯನಿಗೆ ವಂಶಪಾರಂಪರ್ಯವಾಗಿ ಬರುವಂತಹದ್ದು. ಗುರಿಕಾರರ ಮೇಲ್ವಿಚಾರಣೆಯಲ್ಲಿಯೇ ಮೊಗವೀರ ಸಮುದಾಯದ ಮದುವೆ ಹಾಗೂ ಮರಣದ ನಂತರದ ಅಂತ್ಯಕ್ರಿಯೆಯ ಕಾರ್ಯಗಳು ಜರುಗುತ್ತದೆ. ಮೊಗವೀರರ ದೈವಸ್ಥಾನದ ತಂಬಿಲ, ದೈವದರ್ಶನ ಮತ್ತು ಕೋಲ ಸೇವೆಯಲ್ಲಿ ಗುರಿಕಾರರಿಗೆ ಪ್ರಾಧಾನ್ಯತೆ ಇದೆ.

ಉಡುಪಿ ಜಿಲ್ಲೆಯ ಬಾರಕೂರಿನ ಹಂದಾಡಿ ಗ್ರಾಮದ ಸೀತಾ ನದಿಯ ದಡದ ಮೇಲೆ ನಿರ್ಮಿಸಲಾದ ಬೆಣ್ಣೆಕುದ್ರು ಶ್ರೀ ಕುಲಮಹಾಸ್ತ್ರೀ ಅಮ್ಮನವರ ದೇವಸ್ಥಾನ, ಕೋಡಿ ಕನ್ಯಾನದಲ್ಲಿರುವ

ಶ್ರೀ ಮಹಾಸತೀಶ್ವರಿ ಮಹಾಸ್ತ್ರೀ ಅಮ್ಮನವರ ದೇವಸ್ಥಾನ, ಕುಂದಾಪುರ ತಾಲೂಕಿನ ಸೂಜಾಡಿ ಗ್ರಾಮದಲ್ಲಿ ಬಗ್ವಾಡಿ ಮಹಿಷಾಸುರ ಮರ್ದಿನಿ, ೧೯೫೭ರಲ್ಲಿ ಸ್ಥಾಪನೆಗೊಂಡಿರುವ ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಾಸ್ಥಾನಗಳು ಕೆಲವು ಉದಾಹರಣೆಗಳು. ಮೊಗವೀರರು ದೈವ ಭಕ್ತರು. ಪ್ರತಿ ಗ್ರಾಮಗಳಲ್ಲಿ ಭಜನಾ ಮಂದಿರಗಳನ್ನು ನಿರ್ಮಿಸಿಕೊಂಡು ಸಾಮೂಹಿಕವಾಗಿ ಭಜನೆಯನ್ನು ಹಾಡುತ್ತಾರೆ. ಮಹಿಳೆಯರಿಗೂ ಭಜನಾ ಮಂದಿರಗಳಲ್ಲಿ ಭಜನೆ ಹಾಡಲು ಮುಕ್ತ ಅವಕಾಶವಿದೆ. ಉಡುಪಿ ಜಿಲ್ಲೆಯಲ್ಲಿ ಸುಮಾರು ೩೦ರಷ್ಟು ಮೊಗವೀರ ಸಮುದಾಯದ ಭಜನಾ ಮಂದಿರಗಳಿವೆ. ಈ ಭಜನಾ ಮಂದಿರಗಳಲ್ಲಿ ಮಹಿಳಾ ಮಂಡಲಗಳು ಕಾರ್ಯನಿರ್ವಹಿಸುತ್ತಿದ್ದು, ಆಯಾಯ ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಕ್ರೀಡೆ, ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿವೆ. ಅಷ್ಟೇ ಅಲ್ಲದೆ ಮಹಿಳಾ ಮಂಡಲಗಳ ಪದಾಧಿಕಾರಿಗಳ ನೇಮಕಕ್ಕೆ ನಡೆಯುವ ಆಯ್ಕೆ ಪ್ರಕಿಯೆ, ಸಭೆ ಸೇರುವ, ಚರ್ಚೆಗಳನ್ನು ನಡೆಸುವ ಚಟುವಟಿಕೆಗಳಿಂದ ಪರೋಕ್ಷವಾಗಿ ರಾಜಕೀಯ ಕ್ಷೇತ್ರದತ್ತ ಆಸಕ್ತರಾಗಿದ್ದಾರೆ(ಸದಾನಂದ ಕೆ ಉಚ್ಚಿಲ, ೨೦೧೪).

ಮೊಗವೀರ ಸಮುದಾಯದ ಮಹಿಳೆಯರನ್ನು ಕುರಿತು ಸಾಮಾಜಿಕ ಚಿತ್ರಣಗಳು, ಅವರ ಸಾಂಸ್ಕೃತಿಕ ವ್ಯವಸ್ಥೆಯ ನಿರ್ಮಾಣವಾಗಿದೆ. ಸಮಾಜವು ಮಹಿಳೆಯರ ಸ್ಥಾನಮಾನವನ್ನು ಮೃದು ಸ್ವಭಾವ, ಅಧೈರ್ಯ, ಸ್ಥಿರತೆ, ಹೊಟ್ಟೆಕಿಚ್ಚು ಇಂತಹ ದೃಷ್ಟಿಕೋನಗಳಿಂದ ಪ್ರಭಾವಿಸಿಕೊಳ್ಳುತ್ತದೆ. ಮೊಗವೀರರ ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳಲ್ಲಿ ಮಹಿಳೆಗೆ ಮುಖ್ಯ ಸ್ಥಾನವನ್ನು ನೀಡಲಾಗಿದೆ. ಹೆಣ್ಣನ್ನು ಭೂಮಿಗೆ ಹೋಲಿಸುವ ಮತ್ತು ಗೌರವಿಸುವ ಪರಂಪರೆ ಇವರಲ್ಲಿದೆ. ಮೊದಲ ಮಗು ಹೆಣ್ಣಾದರೆ ಅದು ಸಮೃದ್ಧಿಯ ಸಂಕೇತ ಎಂಬ ನಂಬಿಕೆ ಮೊಗವೀರರದು. ಹೆಣ್ಣಿನ ಸೌಂದರ್ಯ, ಸ್ವಭಾವ, ಲಕ್ಷಣ, ಧೈರ್ಯ, ಆತ್ಮವಿಶ್ವಾಸ ಕುರಿತಾದ ಅನೇಕ ಹಾಡು, ಜನಪದ ಕಥೆಗಳು ಇವರ ಸಾಹಿತ್ಯದಲ್ಲಿವೆ. ಇಷ್ಟೆಲ್ಲಾ ಸ್ಥಾನಮಾನಗಳನ್ನು ಇವರಿಗೆ ನೀಡಿದ್ದರೂ ಬಡತನದ ಕಾರಣದಿಂದ ದುಸ್ಥರವಾಗಿರುವ ಜೀವನದಲ್ಲಿ ಶೈಕ್ಷಣಿಕವಾಗಿ ಮೊಗವೀರ ಮಹಿಳೆ ಅತ್ಯಂತ ಹಿಂದುಳಿದಿದ್ದಾಳೆ(ವಸುಂಧರ ಬಿ.ಸಿ, ಗುರುಲಿಂಗಯ್ಯ ಎಂ, ೨೦೧೭).

ಮೊಗವೀರ ಮಹಿಳೆಯರ ರಾಜಕೀಯ ಸಶಕ್ತೀಕರಣಗೊಳ್ಳಲು ಪೂರಕವಾದ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ ಅಂಶಗಳ ಬಗ್ಗೆ ಹಾಗೂ ಅದರಿಂದಾದ ಪರಿಣಾಮಗಳನ್ನು ವಿವಿಧ ಕೋನಗಳಲ್ಲಿ ಪರೀಕ್ಷಿಸಲಾಗಿದೆ. ಸೀಮಾ ಜಿ.ಕೆ. ರವರ 'ಸ್ಟೇಟಸ್ ಆಫ್ ಫಿಶರ್ ವುಮೆನ್ ಎ ಕೇಸ್ ಸ್ಟಡಿ ಆಫ್ ವುಮೆನ್ ಇನ್ ಮೊಗವೀರ ಫಿಶಿಂಗ್ ಹೌಸ್ ಹೋಲ್ಡ್ಸ್' ಎಂಬ ಅಧ್ಯಯನದ ಪ್ರಕಾರ: ಮೊಗವೀರ ಸಮುದಾಯವು ಮಾತೃಪ್ರಧಾನತೆಯನ್ನು ಹೊಂದಿದ ಸಮುದಾಯವಾಗಿದೆ. ಮೊಗವೀರ ಸಮುದಾಯದಲ್ಲಿ ಹೆಣ್ಣು ಮಗುವಿನ ಜನನವನ್ನು ಸಂಭ್ರಮಿಸುವ ಪದ್ಧತಿಯಿದ್ದರೂ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಕಡಿಮೆ ಆಸಕ್ತಿಯನ್ನು ವ್ಯಕ್ತಪಡಿಸುವುದಾಗಿ ತಿಳಿಯುತ್ತದೆ. ಶೈಕ್ಷಣಿಕವಾಗಿ ಹೆಣ್ಣು ಮಕ್ಕಳ ಏಳಿಗೆಯನ್ನು ಬಯಸದ ಮೋಗವೀರ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಪುರುಷರಿಗಿಂತ ಕೆಳಮಟ್ಟದಲ್ಲಿದೆ ಎಂಬುದಾಗಿ ಸುಮಂಗಲಾ ನಾಯಕರ, ಉತ್ತರ ಕನ್ನಡ ಜಿಲ್ಲೆಯ

ಮೀನುಗಾರ ಸಮುದಾಯದ ಸಮಾಜೋ-ಆರ್ಥಿಕ ಅಧ್ಯಯನವು ಉಲ್ಲೇಖಿಸಿದೆ. ಕಡಿಮೆ ಶಿಕ್ಷಣ ಅಥವಾ ಅನಕ್ಷರತೆಯನ್ನು ಹೊಂದಿದ್ದರೂ ತಮ್ಮ ಕುಲಕಸುಬಾದ ಮೀನುಗಾರಿಕಾ ವೃತ್ತಿ ಖಡಿಂತವಾಗಿಯೂ ದೊರೆಯುತ್ತದೆ ಎಂಬ ಮನೋಭಾವ ಇರುವುದಾಗಿ ಸ್ವಾತಿ ಆಕ್ಷೇಪ್ ಎಸ್.ಅವರು ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಮೀನುಗಾರಿಕೆಯಲ್ಲಿ ಮಹಿಳೆಯರು ನಡೆಸುವ ದುಡಿಮೆಯು ಎರಡನೇ ದರ್ಜೆಯ ದುಡಿಮೆಯಾಗಿರುವ ಕಾರಣ ಸ್ತ್ರೀ ಪುರುಷರಲ್ಲಿ ಅಸಮಾನತೆಯನ್ನು ಜೊತೆಗೆ ವರಮಾನದಲ್ಲೂ ಸಹಜವಾಗಿಯೇ ಸ್ತ್ರೀಯರು ಕಡಮೆ ಕೂಲಿಗೆ ದುಡಿಯುವಂತಾಗುವುದಾಗಿ ಜೋಸ್ ಪೌಲ್ ಪಿ.ಸಿ, ರವರ *'ಎಂಪವರ್‌ಮೆಂಟ್ ಆಫ್ ಫಿಶರ್ ವುಮೆನ್ ಇನ್ ಫಿಶ್ ಪ್ರೊಸೆಸಿಂಗ್ ಆ್ಯಂಡ್ ವೆಂಡಿಂಗ್ ಸೆಕ್ಟರ್ಸ್- ಆನ್ ಅನಾಲಿಸಿಸ್'* ಎಂಬ ಅಧ್ಯಯನವು ತಿಳಿಸುತ್ತದೆ. ಉದ್ಯೋಗ ರಂಗದಲ್ಲಿ ಮೀನುಗಾರ ಮಹಿಳೆಯರನ್ನು ಭೌತಿಕ ಮಿತಿ ಮತ್ತು ಸಾಮಾಜಿಕ ನಿಷೇಧದ ನೆಪದಲ್ಲಿ ಕೆಲವು ವಿಧದ ಉದ್ಯೋಗದ ಪ್ರವೇಶವನ್ನು ನಿರ್ಬಂಧಿಸಿದೆ. ಅಭದ್ರತೆಯ ನಿರ್ದಿಷ್ಟ ಕ್ಷೇತ್ರದಲ್ಲಿ ಅವರ ಅಸ್ತಿತ್ವ ಪ್ರಮುಖವಾಗಿ ಕೆಳಸ್ಥಾನ ಕಡಿಮೆ ಪ್ರತಿಫಲದೊಂದಿಗೆ ಸ್ಥಿರೀಕರಣಗೊಂಡಿದೆ. ಈ ವಿಧದಲ್ಲಿ ಸಂಭಾವನೆ ಕನಿಷ್ಠ ಸೌಲಭ್ಯಗಳು, ಕೆಟ್ಟ ಕೆಲಸದ ಪರಿಸರ, ಉದ್ಯೋಗ ಅಭದ್ರತೆ, ಆರ್ಥಿಕ ಮತ್ತು ವೃತ್ತೀಯ ತಾರತಮ್ಯ ಅವರನ್ನು ಸಾಮಾಜಿಕವಾಗಿ ಅಪ್ರಧಾನವನ್ನಾಗಿಸಿದೆ. ಈ ಕಾರಣಗಳಿಂದಾಗಿಯೇ ಮೀನುಗಾರಿಕಾ ಕ್ಷೇತ್ರ ಅಭಿವೃದ್ಧಿಗೆ ಕರ್ನಾಟಕ ರಾಜ್ಯ ಆರಂಭಿಸಿದ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಯೋಜನೆಗಳ ಲಾಭವನ್ನು ಅವರು ಪಡೆಯದಾದರು. ಜೊತೆಗೆ ಮೀನುಗಾರಿಕೆಯ ಯಾಂತ್ರೀಕರಣವು ಸ್ಥಳೀಯ ಮೀನುಗಾರರ ಮಹಿಳೆಯರಿಗೆ ಅನೇಕ ರೀತಿಯ ಸಮಸ್ಯೆಗಳನ್ನು ತಂದೊಡ್ಡಿರುವುದಾಗಿಯೂ, ಸರಕಾರವು ಡಿಸೇಲ್ ಮೇಲೆ ವಿಧಿಸುವ ಸಬ್ಸಿಡಿಯು ಉತ್ಪಾದನೆ ಹೆಚ್ಚಿಸಿ ಮೀನಿನ ಬೆಲೆಯನ್ನು ಕುಂಠಿತಗೊಳಿಸಿತು. ಪಂಚತಾರಾ ಹೊಟೇಲ್‌ಗಳು ಹಾಗೂ ಸ್ಥಳೀಯ ವ್ಯಕ್ತಿಗಳು ನೇರವಾಗಿಯೇ ಮಧ್ಯವರ್ತಿಗಳಿಂದ ಮೀನನ್ನು ಖರೀದಿಸುವಂತಾಯಿತು. ಇದರಿಂದಾಗಿ ಬಡ ಮೀನುಗಾರ ಮಹಿಳೆಯರಿಗೆ ಮೀನುಗಾರಿಕೆಯು ಲಾಭದಾಯಕ ವ್ಯಾಪಾರವಾಗಿ ಉಳಿಯಲಿಲ್ಲ. ಅವರು ಮಧ್ಯವರ್ತಿಗಳಿಂದಲೇ ಸಾಲವನ್ನು ಪಡೆದು ವ್ಯಾಪಾರಕ್ಕೆ ವಿನಿಯೋಗಿಸುವಂತಾಯಿತು. ಇದರಿಂದ ಮಹಿಳೆಯರು ವ್ಯಾಪಾರದಲ್ಲಿ ಗಳಿಸಿದ ಲಾಭದಲ್ಲಿ ಉಳಿತಾಯವನ್ನೇ ಮಾಡದೇ ಯಾವುದೇ ಅಭಿವೃದ್ಧಿಯನ್ನು ಕಾಣದಾದರು ಎಂಬುದಾಗಿ ರೇಣುಕಾ ಕೆ, 'ಡೆವಲಪ್‌ಮೆಂಟ್ ಆ್ಯಂಡ್ ಮಾರ್ಜಿಲೈಸೇಷನ್ ಎ ಸ್ಟಡಿ ಆಫ್ ಫಿಶರ್‌ವುಮೆನ್ ಆಫ್ ಕೋಸ್ಟಲ್ ಕರ್ನಾಟಕ', ಎಂಬ ಅಧ್ಯಯನವು ಉಲ್ಲೇಖಿಸುತ್ತದೆ.

೧.೫. ಸಮಸ್ಯೀಕರಣ

ಉಡುಪಿ ಜಿಲ್ಲೆಯಲ್ಲಿರುವ ಮೊಗವೀರ ಸಮುದಾಯವು ಮಾತೃ ಪ್ರಧಾನತೆಯನ್ನು ಹೊಂದಿದ ಸಮುದಾಯವಾಗಿರುವ ಕಾರಣ ಸಹಜವಾಗಿಯೇ ಸಾಮಾಜಿಕ, ಸಾಂಸ್ಕೃತಿಕ ಪರಂಪರೆ ಹಾಗೂ ಪದ್ಧತಿಗಳಲ್ಲಿ ಮಹಿಳೆಯರ ಸ್ಥಾನಮಾನ ಪುರುಷರಿಗಿಂತ ಮೇಲ್ಮಟ್ಟದ್ದಾಗಿರಬೇಕು. ಹಾಗೆಯೇ

ಮಹಿಳೆಯರು ಪುರುಷರ ಜೊತೆಗೆ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ, ಕೌಟುಂಬಿಕವಾಗಿ ಸಹಕರಿಸುವರು. ಈ ನಿಟ್ಟಿನಲ್ಲಿ ಈ ಸಮುದಾಯದ ಮಹಿಳೆಯರು ಸಾಮಾಜಿಕ ಹಾಗೂ ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದವರಾಗಿರುವುದರಿಂದ ರಾಜಕೀಯವಾಗಿಯೂ ಪ್ರಾಮುಖ್ಯತೆಯನ್ನು ಹೊಂದಬಹುದಾಗಿದೆ. ಮೊಗವೀರ ಮಹಿಳೆಯರು ರಾಜಕೀಯ ಸಹಭಾಗಿತ್ವವನ್ನು ಹೊಂದುವಲ್ಲಿ ಹಿಂದೇಟು ಹಾಕುತ್ತಿರುವುದೇಕೆ? ಎಂಬುದು ಗಮನಾರ್ಹ ಪ್ರಶ್ನೆಯಾಗಿದೆ. ಸಮಾಜವು ಗಂಡು–ಹೆಣ್ಣುಗಳ ಸಮಾನ ಸಂಸ್ಥೆಯಾಗಿದೆ. ಈ ಸಂಸ್ಥೆಯಲ್ಲಿ ಯಾರೂ ಮೇಲಲ್ಲ, ಯಾರು ಕೀಳೂ ಅಲ್ಲ. ಆಧುನಿಕ ಸಮಾಜ ಕೂಡಾ ಮಹಿಳೆಯರ ಪರವಾದ ಉದಾತ್ತ ಚಿಂತನೆಗಳನ್ನು ಬೆಳೆಸಿಕೊಳ್ಳುವಲ್ಲಿ ಹಿಂದೇಟು ಹಾಕುತ್ತಿದೆ. ಮನೆಗೆಲಸ, ಮಕ್ಕಳನ್ನು ಹೆರುವುದು ಮತ್ತು ಹೊರುವುದು, ಮನೆಯ ಇನ್ನಿತರ ಜವಾಬ್ದಾರಿಗಳಿಂದ (ಮದುವೆ, ಕುಟುಂಬ, ತಾಯ್ತತನ) ಮಹಿಳೆಯನ್ನು ಬಂಧಿಸಲಾಗಿದೆ. ಮಹಿಳೆಯು ಶಿಕ್ಷಣದಿಂದ ವಂಚಿತಳಾಗುತ್ತಿರುವುದು ಮುಕ್ತವಾಗಿ ಮುಂದುವರೆಯುತ್ತಲೇ ಇದೆ. ಸಾಮಾಜಿಕವಾಗಿ ರಾಜಕೀಯವಾಗಿ ಚೇತರಿಕೆಗಳನ್ನು ನೀಡದೆ ಆರ್ಥಿಕವಾಗಿ ದುರ್ಬಲಗೊಳಿಸುವ ಹಾಗೂ ಯಾಂತ್ರಿಕತೆಯ ಜೀವನ ಸಾಗಿಸುವ ವಸ್ತುವನ್ನಾಗಿಸಿದೆ. ಈ ನಿಟ್ಟಿನಲ್ಲಿ ಮಹಿಳೆಯನ್ನು ಬಲಪಡಿಸಿ ಸಮಾನ ಬದುಕಿಗೆ ಪ್ರೇರೇಪಿಸುವ ಮೊದಲ ಹಂತವಾಗಿ ಮಹಿಳಾವಾದ ಕೆಲಸ ಮಾಡಿದೆ. ಅದರ ಮುಂದುವರಿದ ಭಾಗವಾಗಿ ನವ ಸಮಾಜದಲ್ಲಿ ಮಹಿಳಾ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಇರುವ ವಿವಿಧ ಅವಕಾಶಗಳ ಪರಾಮರ್ಶನ ನಡೆಸಬೇಕಾಗಿದೆ. ಆ ನಿಟ್ಟಿನಲ್ಲಿ ಈ ಅಧ್ಯಯನದಲ್ಲಿ ಮೊಗವೀರ ಸಮುದಾಯದ ಸಾಮಾಜಿಕ ಸ್ಥಾನಮಾನ, ಸಾಮಾಜಿಕ ಚೌಕಟ್ಟು, ಅವರಲ್ಲಿ ಮೊಗವೀರ ಮಹಿಳೆಯರ ಸ್ಥಾನಮಾನವೇನು? ಅವರ ಔದ್ಯೋಗಿಕ ಸಂಗತಿಗಳೇನು? ಅವರ ಕೌಟುಂಬಿಕ ನಂಬಿಕೆ, ಗಂಡು ಹೆಣ್ಣಿನ ಸಂಬಂಧದಲ್ಲಿ ಸಮಾನತೆಯಿಂದ ಕೂಡಿದೆಯೇ ಅಥವಾ ಅಸಮಾನತೆಯಿಂದ ಕೂಡಿದೆಯೇ? ಕೌಟುಂಬಿಕ ಚಟುವಟಿಕೆಯನ್ನು ಹೆಣ್ಣು ಮಾತ್ರ ನಿರ್ವಹಿಸುತ್ತಾಳೋ ಇಲ್ಲ ಗಂಡು ಕೂಡಾ ನಿರ್ವಾಹಿಸುತ್ತಾನೋ? ಹೆಣ್ಣೇ ನಿರ್ವಹಿಸುವುದಾದಲ್ಲಿ ಕೌಟುಂಬಿಕ ದುಡಿಮೆ, ಹೊರಗಿನ ದುಡಿಮೆ ಈ ಎರಡನ್ನು ನಿಭಾಯಿಸುವಲ್ಲಿನ ಒತ್ತಡವು ಮಹಿಳೆಯರ ಸಬಲೀಕರಣಗೊಳ್ಳುವಲ್ಲಿ ತೊಡಕಾಗಿದೆಯೇ? ಮೊಗವೀರ ಸಮುದಾಯದ ಮಹಿಳೆಯರ ಜೀವನ ಕ್ರಮವನ್ನು ಅಭ್ಯಸಿಸಿ ಅವರ ರಾಜಕೀಯ ಜೀವನದ ಸಾಧ್ಯತೆಯನ್ನು, ಮಹಿಳಾ ಮೀಸಲಾತಿ ಹಾಗೂ ಸರಕಾರಿ ಸವಲತ್ತುಗಳ ಬಗೆಗಿನ ಅರಿವನ್ನು, ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಪುರುಷ ಹಾಗೂ ಮಹಿಳೆಯರ ಪಾತ್ರ ಸಮಾನತೆಯಿಂದ ಕೂಡಿದೆಯೇ ಇಲ್ಲ ಅಸಮಾನತೆಯಿಂದ ಕೂಡಿದೆಯೋ? ಇಂತಹ ಹಲವು ಪ್ರಶ್ನೆಗಳಿಗೆ ತಾರ್ಕಿಕ ಉತ್ತರವನ್ನು ಕಂಡುಕೊಳ್ಳುವುದು ಈ ಅಧ್ಯಯನದ ಮೂಲ ಉದ್ದೇಶವಾಗಿದೆ.

೧.೬. ಅಧ್ಯಯನದ ಉದ್ದೇಶಗಳು

ಈ ಅಧ್ಯಯನದ ಮುಖ್ಯ ಉದ್ದೇಶ ಮೊಗವೀರ ಮಹಿಳೆಯರು ರಾಜಕೀಯ ಸಬಲೀಕರಣವನ್ನು ಹೊಂದುವಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳು ಹೇಗೆ ಸಹಕಾರಿಯಾಗಿದೆ ಎಂಬುದನ್ನು ಪರೀಕ್ಷಿಸುವುದಾಗಿದೆ. ಅಧ್ಯಯನದ ನಿರ್ದಿಷ್ಟ ಸಂಶೋಧನಾ ಉದ್ದೇಶಗಳು ಈ ಕೆಳಗಿನಂತಿವೆ.

ಅ) ಮೊಗವೀರ ಮಹಿಳೆಯರ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಅಧ್ಯಯನ.

ಆ) ಸರ್ಕಾರದ ಮಹಿಳಾ ಪರ ಯೋಜನೆಗಳು ಹಾಗೂ ಕಾರ್ಯಕ್ರಮಗಳು ಮೊಗವೀರ ಮಹಿಳೆಯರ ಅಭಿವೃದ್ಧಿಗೆ ಎಷ್ಟರಮಟ್ಟಿಗೆ ಪೂರಕವಾಗಿವೆ ಎಂಬುದರ ವಿಶ್ಲೇಷಣೆ.

ಇ) ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಕ್ರಮಗಳ ವಿಶ್ಲೇಷಣೆ, ರಾಜಕೀಯ ಪಾಲ್ಗೊಳ್ಳುವಿಕೆಗಿರುವ ಸವಾಲುಗಳನ್ನು ಗುರುತಿಸುವುದು ಮತ್ತು ರಾಜಕೀಯ ಪಾಲ್ಗೊಳ್ಳುವಿಕೆಗೆ ಲಭ್ಯವಿರುವ ಪ್ರೋತ್ಸಾಹಕ ಅಂಶಗಳನ್ನು ಗುರುತಿಸುವುದು.

ಈ) ಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಗೊಂಡಿರುವ ಮೊಗವೀರ ಮಹಿಳಾ ಸದಸ್ಯರ ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಹಾಗೂ ರಾಜಕೀಯ ಸಬಲೀಕರಣವನ್ನು ಅಧ್ಯಯನ ಮಾಡುವ ಮೂಲಕ ಮಹಿಳಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪಾತ್ರವನ್ನು ವಿಶ್ಲೇಷಿಸುವುದು.

ಉ) ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮೊಗವೀರ ಮಹಿಳೆಯರ ಜೀವನದಲ್ಲಾಗಿರುವ ಅಭಿವೃದ್ಧಿ ಮತ್ತು ಬದಲಾವಣೆಯನ್ನು ಅಧ್ಯಯನ ಮಾಡುವುದು.

೧.೭. ಅಧ್ಯಯನದ ಊಹೆಗಳು

ಅ) ಮೊಗವೀರ ಮಹಿಳೆಯರಲ್ಲಿ ಶಿಕ್ಷಣದಿಂದಾಗಿ ಸಾಮಾಜಿಕ ಜೀವನ ಹಾಗೂ ಆರ್ಥಿಕ ಸ್ಥಾನಮಾನಗಳಲ್ಲಿ ಬದಲಾವಣೆಗಳಾಗಿವೆ.

ಆ) ಮೊಗವೀರ ಮಹಿಳೆಯರು ಹಾಗೂ ಇತರ ಹಿಂದುಳಿದ ಸಮುದಾಯದ ಮಹಿಳೆಯರ ಆರ್ಥಿಕ ಸ್ಥಿತಿಗತಿಯು ಸಮಾನವಾಗಿದೆ.

ಇ) ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮೊಗವೀರ ಮಹಿಳೆಯರ ಸಾಮಾಜಿಕ ಜೀವನ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ

ಈ) ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಭವಿಷ್ಯದಲ್ಲಿ ಹೆಚ್ಚಾಗುತ್ತದೆ.

೧.೮. ಅಧ್ಯಯನದ ವ್ಯಾಪ್ತಿ

ಮಹಿಳಾ ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಆಳ ವಿಶ್ಲೇಷಣೆ ಹಾಗೂ ತೀವ್ರ ಪರಿಣಾಮದ ಅಧ್ಯಯನ ನಡೆಸುವ ಪ್ರಯತ್ನವಾಗಿ ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯನ್ನು ಕ್ಷೇತ್ರ ಕಾರ್ಯಕ್ಕೆ ಆಯ್ದುಕೊಳ್ಳಲಾಗಿದೆ. ಉಡುಪಿ ಜಿಲ್ಲೆಯ ವಿವರವಾದ ಮಾಹಿತಿಯನ್ನು ಅಧ್ಯಾಯ

ಮೂರರಲ್ಲಿ ನೀಡಲಾಗಿದೆ. ಈ ಅಧ್ಯಯನದಲ್ಲಿ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಪ್ರಗತಿಯ ಪರಾಮರ್ಶೆ ನಡೆಸಲಾಗಿದೆ. ಉಡುಪಿ ಜಿಲ್ಲೆಯ ಮೂರು ತಾಲೂಕುಗಳ ೮೦೦ ಮೊಗವೀರ ಮಹಿಳೆಯರನ್ನು ಸಂದರ್ಶಿಸಿ ವಿವರಗಳನ್ನು ಪಡೆಯಲಾಗಿದೆ. ಮೊಗವೀರ ಮಹಿಳೆಯರ ಶಿಕ್ಷಣ, ಆರ್ಥಿಕ ಸ್ಥಿತಿ, ಕೌಟುಂಬಿಕ ವ್ಯವಸ್ಥೆ ಇವೆಲ್ಲವುಗಳನ್ನು ಅಧ್ಯಯನ ಮಾಡಿ ಅದರ ಪರಿಣಾಮವು ರಾಜಕೀಯ ಪಾಲ್ಗೊಳ್ಳುವಿಕೆಯ ಮೇಲೆ ಯಾವ ರೀತಿಯಲ್ಲಿ ಬೀರಬಲ್ಲದು ಎಂಬುದನ್ನು ಕೇಂದ್ರೀಕರಿಸಿ ಅಧ್ಯಯನ ನಡೆಸಲಾಗಿದೆ. ಹಾಗೆಯೇ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್‌ನಲ್ಲಿ ಸದಸ್ಯರಾಗಿ ಆಯ್ಕೆಗೊಂಡಿರುವ ಮೊಗವೀರ ಮಹಿಳೆಯರನ್ನು ರಾಜಕೀಯ ಪ್ರಾತಿನಿಧ್ಯತೆಯ ಕುರಿತಾದ ಮಾಹಿತಿಗಾಗಿ ಸಂದರ್ಶನಕ್ಕೆ ಒಳಪಡಿಸಿ ಮಾಹಿತಿ ಪಡೆಯಲಾಗಿದೆ.

೧.೯. ಅಧ್ಯಯನದ ಮಾದರಿಯ ಗಾತ್ರ

ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಮೂರು ತಾಲೂಕುಗಳನ್ನು (ಹೆಬ್ರಿ, ಬ್ರಹ್ಮಾವರ ಹಾಗೂ ಕಾಪು) ಸರಕಾರ ಘೋಷಣೆ ಮಾಡಿದ್ದರೂ ಆ ತಾಲೂಕುಗಳು ಇನ್ನು ಆಡಳಿತಾತ್ಮಕವಾಗಿ ಅಸ್ತಿತ್ವಕ್ಕೆ ಬಂದಿರುವುದಿಲ್ಲ. ಈ ನೂತನ ತಾಲೂಕುಗಳ ಭೌಗೋಳಿಕ ವರ್ಗೀಕರಣವೂ ಲಭ್ಯವಾಗಿಲ್ಲದ ಕಾರಣದಿಂದಾಗಿ ಅಧ್ಯಯನದಲ್ಲಿ ಉಡುಪಿ ಜಿಲ್ಲೆಯಲ್ಲಿ ಕೇವಲ ಮೂರು ತಾಲೂಕುಗಳೆಂದು (ಉಡುಪಿ, ಕುಂದಾಪುರ ಹಾಗೂ ಕಾರ್ಕಳ) ವರ್ಗೀಕರಿಸಿಕೊಂಡು ಕ್ಷೇತ್ರ ಕಾರ್ಯ ಹಾಗೂ ಸಮೀಕ್ಷೆ ನಡೆಸಲಾಗಿದೆ. ಉಡುಪಿ ಜಿಲ್ಲೆಯ ಮೂರು ತಾಲೂಕುಗಳಾದ ಕುಂದಾಪುರ, ಕಾರ್ಕಳ, ಉಡುಪಿ ತಾಲೂಕಿನಲ್ಲಿ ಒಟ್ಟು ೬೪ ಮೀನುಗಾರಿಕಾ ಗ್ರಾಮಗಳಿದ್ದು, ಅದರಲ್ಲಿ ೧೯೨೪೧ ಮೊಗವೀರ ಸಮುದಾಯದವರು ವಾಸಿಸುತ್ತಿದ್ದಾರೆ. ಕ್ರಮವಾಗಿ ಇದರಲ್ಲಿ ಉಡುಪಿ ತಾಲೂಕಿನಿಂದ ೫೦೫ ಮಂದಿ ಮೊಗವೀರ ಮಹಿಳೆಯರನ್ನು, ಕುಂದಾಪುರ ತಾಲೂಕಿನಿಂದ ೨೭೫ ಮಂದಿ ಮೊಗವೀರ ಮಹಿಳೆಯರನ್ನು ಹಾಗೂ ಕಾರ್ಕಳ ತಾಲೂಕಿನಿಂದ ೨೦ ಮಂದಿ ಮೊಗವೀರ ಮಹಿಳೆಯರನ್ನು ಹೀಗೆ ಒಟ್ಟು ಮೂರು ತಾಲೂಕುಗಳಿಂದ ೮೦೦ ಮೊಗವೀರ ಮಹಿಳಾ ಮಾಹಿತಿದಾರರನ್ನು ಸಂಪರ್ಕಿಸಲಾಗಿದೆ. (ಕೋಷ್ಟಕ ೧.೨ರಲ್ಲಿ ವಿವರ ನೀಡಲಾಗಿದೆ). ಪ್ರತಿನಿಧಿ ಮಾದರಿಯನ್ನು ಅಳವಡಿಸಲಾಗಿದ್ದು ಮೂರು ತಾಲೂಕುಗಳಲ್ಲಿ (ಉಡುಪಿ, ಕುಂದಾಪುರ, ಕಾರ್ಕಳ) ಹಂಚಿಹೋಗಿರುವ ೫೨ ಗ್ರಾಮ ಪಂಚಾಯತ್‌ಗಳನ್ನು (ಕೋಷ್ಟಕ ೧.೪ರಲ್ಲಿ ವಿವರ ನೀಡಲಾಗಿದೆ) ಆಯ್ದುಕೊಳ್ಳಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳಲ್ಲಿ ಒಟ್ಟು ೧೫೮ ಗ್ರಾಮ ಪಂಚಾಯತ್‌ಗಳಿವೆ. ಉಡುಪಿ ತಾಲೂಕಿನಲ್ಲಿ ೪೯ ಗ್ರಾಮ ಪಂಚಾಯತ್‌ಗಳಿದ್ದು, ಅದರಲ್ಲಿ ೨೦ ಗ್ರಾಮ ಪಂಚಾಯತ್‌ಗಳನ್ನು ಕುಂದಾಪುರ ತಾಲೂಕಿನಲ್ಲಿ ೬೫ ಗ್ರಾಮ ಪಂಚಾಯತ್‌ಗಳಿದ್ದು, ಅದರಲ್ಲಿ ೨೩ ಗ್ರಾಮ ಪಂಚಾಯತ್‌ಗಳನ್ನು ಹಾಗೂ ಕಾರ್ಕಳ ತಾಲೂಕಿನಲ್ಲಿ ೩೪ ಗ್ರಾಮ ಪಂಚಾಯತ್‌ಗಳಿದ್ದು, ಅದರಲ್ಲಿ ೯ ಗ್ರಾಮ ಪಂಚಾಯತ್‌ಗಳನ್ನು ಅಂದರೆ ಆಯ್ಕೆಗೊಂಡಿರುವ ಮೊಗವೀರ ಮಹಿಳೆಯರಿರುವ ೫೨ ಗ್ರಾಮ ಪಂಚಾಯತ್‌ಗಳನ್ನು ಅಧ್ಯಯನದಲ್ಲಿ ಸೇರಿಸಿಕೊಳ್ಳಲಾಗಿದೆ. ಇದರಲ್ಲಿ ಉಡುಪಿ ತಾಲೂಕಿನ ಗ್ರಾಮ ಪಂಚಾಯತ್‌ನಲ್ಲಿ ೩೦ ಮೊಗವೀರ

ಮಹಿಳೆಯರು, ಕುಂದಾಪುರ ತಾಲೂಕಿನ ಗ್ರಾಮ ಪಂಚಾಯತ್‌ನಲ್ಲಿ ೩೩ ಮೊಗವೀರ ಮಹಿಳೆಯರು ಹಾಗೂ ಕಾರ್ಕಳ ತಾಲೂಕಿನ ಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಯಾದ ೧೩ ಮೊಗವೀರ ಮಹಿಳಾ ಸದಸ್ಯರಿದ್ದಾರೆ. ಉಡುಪಿ ಜಿಲ್ಲೆಯ ೫೨ ಗ್ರಾಮ ಪಂಚಾಯತ್‌ಗಳಲ್ಲಿ ೭೬ ಮೊಗವೀರ ಮಹಿಳೆಯರು ಆಯ್ಕೆಗೊಂಡಿರುತ್ತಾರೆ. ಇವರೆಲ್ಲರನ್ನು ರಾಜಕೀಯ ಪ್ರಾತಿನಿಧ್ಯತೆಯ ಮಾಹಿತಿಯನ್ನು ಪಡೆಯುವ ಸಲುವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡುವಾಗ ಎಲ್ಲಾ ಹಂತದ ಶಿಕ್ಷಣ ಪಡೆದಿರುವ ಶಿಕ್ಷಿತ, ಅಶಿಕ್ಷಿತ, ಗೃಹಕೃತ್ಯ ನಡೆಸುವ ಎಲ್ಲಾ ವರ್ಗದವರಿಗೂ ಸೂಕ್ತ ಪ್ರಾತಿನಿಧ್ಯ ದೊರೆಯುವಂತೆ ಎಚ್ಚರ ವಹಿಸಲಾಗಿದೆ. ಮಹಿಳಾ ಭಾಗವಹಿಸುವಿಕೆಯನ್ನು ಅರಿಯುವ ಹಾಗೂ ಮಹಿಳಾ ನಾಯಕತ್ವದ ಸವಾಲುಗಳನ್ನು ಗುರುತಿಸಿ ಮಹಿಳಾ ಸಬಲೀಕರಣಕ್ಕೆ ಜೋಡಿಸುವ ಬಗ್ಗೆಯೂ ಗಮನಹರಿಸಲಾಗಿದೆ.

ಕೋಷ್ಟಕ ೧.೧. ಉಡುಪಿ ಜಿಲ್ಲೆಯಲ್ಲಿರುವ ಮೊಗವೀರ ಸಮುದಾಯದ ಜನಸಂಖ್ಯೆಯ ವಿವರ (ದಿನಾಂಕ ೦೧.೦೧.೨೦೧೬ ರಲ್ಲಿದಂತೆ)

ತಾಲೂಕು	ಮೊಗವೀರ ಸಮುದಾಯದ ಒಟ್ಟು ಜನಸಂಖ್ಯೆ	ಮೊಗವೀರ ಪುರುಷರ ಸಂಖ್ಯೆ	ಮೊಗವೀರ ಮಹಿಳೆಯರ ಸಂಖ್ಯೆ	ಮೊಗವೀರ ಮಕ್ಕಳ ಸಂಖ್ಯೆ	ಶೇಕಡಾ ಮೊಗವೀರ ಮಹಿಳೆಯರು
ಉಡುಪಿ	೭೬೩೧೯	೨೩೧೦೮	೨೩೭೦೯	೨೯೫೦೨	೩೧.೫
ಕುಂದಾಪುರ	೪೧೩೩೫	೧೧೮೯೦	೧೨೯೧೪	೧೬೫೩೧	೩೧.೨೦
ಕಾರ್ಕಳ	೧೫೮೭	೩೩೪	೩೭೫	೮೭೮	೨೩.೭೦
ಒಟ್ಟು	**೧೧೯೨೪೧**	**೩೫೩೩೨**	**೩೬೯೯೮**	**೪೬೯೧೧**	**೩೧**

ಮೂಲ: ಉಡುಪಿ ಜಿಲ್ಲಾ ಪಂಚಾಯತ್ ಮೀನುಗಾರಿಕೆ ಇಲಾಖೆಯ ಅಂಕಿ ಅಂಶಗಳ ಕೈಪಿಡಿ ೨೦೧೫-೧೬.

ಕೋಷ್ಟಕ ೧.೨ ಮೊಗವೀರ ಮಹಿಳೆಯರ ಸಾಮಾಜಿಕ – ಆರ್ಥಿಕ ಹಾಗೂ ರಾಜಕೀಯ ಸಬಲೀಕರಣದ ಅಧ್ಯಯನಕ್ಕೆ ಬಳಸಲಾದ ಮಾದರಿಯ ಗಾತ್ರ

ತಾಲೂಕು	ಮೊಗವೀರ ಮಹಿಳೆಯರ ಸಂಖ್ಯೆ	ಅಧ್ಯಯನಕ್ಕೆ ಆಯ್ದುಕೊಂಡ ಮೊಗವೀರ ಮಹಿಳೆಯರ ಸಂಖ್ಯೆ	ಶೇಕಡಾ
ಉಡುಪಿ	೨೩೭೦೯	೫೦೫	ಉಡುಪಿ ಜಿಲ್ಲೆಯಲ್ಲಿರುವ ಒಟ್ಟು ಮೊಗವೀರ ಮಹಿಳೆಯರು ೩೬೯೯೮. ಅದರಲ್ಲಿ ೮೦೦ ಮಂದಿಯನ್ನು ಅಂದರೆ ಶೇಕಡಾ ೨.೧೬ ರಂತೆ ಆಯ್ದುಕೊಂಡು ಅಧ್ಯಯನಕ್ಕೊಳಪಡಿಸಲಾಗಿದೆ.
ಕುಂದಾಪುರ	೧೨೯೧೪	೨೭೫	
ಕಾರ್ಕಳ	೩೭೫	೨೦	
ಒಟ್ಟು	**೩೬೯೯೮**	೮೦೦	

ಮೂಲ: ಉಡುಪಿ ಜಿಲ್ಲಾ ಪಂಚಾಯತ್ ಮೀನುಗಾರಿಕೆ ಇಲಾಖೆಯ ಅಂಕಿ ಅಂಶಗಳ ಕೈಪಿಡಿ ೨೦೧೫-೧೬.

ಕೋಷ್ಟಕ ೧.೩ ಉಡುಪಿ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯತ್ ಸದಸ್ಯರ ವಿವರಗಳು
(೨೦೧೫-೧೬ ರಲ್ಲಿದ್ದಂತೆ)

ತಾಲೂಕು	ಒಟ್ಟು ಗ್ರಾಮ ಪಂಚಾಯತ್	ಒಟ್ಟು ಸದಸ್ಯರ ಸ್ಥಾನಗಳು	ಸದಸ್ಯರಾಗಿ ಆಯ್ಕೆಗೊಂಡ ಪುರುಷ ಸದಸ್ಯರು	ಸದಸ್ಯರಾಗಿ ಆಯ್ಕೆಗೊಂಡ ಮಹಿಳಾ ಸದಸ್ಯರು	ಸದಸ್ಯರಾಗಿ ಆಯ್ಕೆಗೊಂಡ ಮೊಗವೀರ ಮಹಿಳೆಯರು
ಉಡುಪಿ	೫೯	೧೦೩೧	೪೯೬	೫೩೫	೩೦
ಕುಂದಾಪುರ	೬೫	೮೭೨	೪೨೨	೪೫೦	೩೩
ಕಾರ್ಕಳ	೩೪	೪೯೨	೨೨೨	೨೭೦	೧೩
ಒಟ್ಟು	**೧೫೮**	**೨೩೯೫**	**೧೧೪೦**	**೧೨೫೫**	**೭೬**

ಮೂಲ: ಉಡುಪಿ ಜಿಲ್ಲೆಯ ಚುನಾವಣಾ ಶಾಖೆಯ ೨೦೧೫-೧೬ ರ ಸಾಲಿನ ವರದಿ.

ಕೋಷ್ಟಕ ೧.೪ ಅಧ್ಯಯನಕ್ಕೆ ಆಯ್ಕೆ ಮಾಡಿದ ಗ್ರಾಮ ಪಂಚಾಯತ್‌ಗಳ ಹೆಸರು

ಕ್ರ.ಸಂ.	ಉಡುಪಿ	ಕುಂದಾಪುರ	ಕಾರ್ಕಳ
೧	ಕೋಟತಟ್ಟು	ಶಿರೂರು	ಮುಡಾರು
೨	ಕೋಟ	ಪಡುವರಿ	ಕಕ್ಕುಂದೂರು
೩	ಪಾಂಡೇಶ್ವರ	ಉಪ್ಪುಂದ	ನಲ್ಲೂರು
೪	ಕೋಡಿ	ಕೊಲ್ಲೂರು	ಈದು
೫	ಶಿರಿಯಾರ	ಕಿರಿಮಂಜೇಶ್ವರ	ರೆಂಜಾಳ
೬	ಪಡುತೋನ್ಸೆ	ಹೇರೂರು	ಬೆಳ್ಮಣ್
೭	ತೆಂಕನಿಡಿಯೂರು	ನಾವುಂದ	ನಂದಳಿಕೆ
೮	ಬಡಾನಿಡಿಯೂರು	ಮರವಂತೆ	ಇನ್ನಾ
೯	ಕಡೆಕಾರ್	ನಾಡ	ಮುಂಡ್ಕೂರು
೧೦	ಉದ್ಯಾವರ	ತ್ರಾಸಿ	-
೧೧	ಶಿರ್ವ	ಹಟ್ಟಿಯಂಗಡಿ	-
೧೨	ಕಟಪಾಡಿ	ಕರ್ಕುಂಜೆ	-
೧೩	ಕೋಟೆ	ಅಂಪಾರು	-
೧೪	ಮಜೂರು	ಕಾವ್ರಾಡಿ	-
೧೫	ಬಡಾ	ಹಂಗಳೂರು	-
೧೬	ಎಲ್ಲೂರು	ಕೋಟೇಶ್ವರ	-
೧೭	ಪಲಿಮಾರು	ತೆಕ್ಕಟ್ಟೆ	-
೧೮	ತೆಂಕ	ಹೊಂಬಾಡಿ ಮಂಡಾಡಿ	-
೧೯	ಪಡುಬಿದ್ರಿ	ಮೊಳಹಳ್ಳಿ	-
೨೦	ಹೆಜಮಾಡಿ	ಹಾರ್ದಳ್ಳಿ ಮಂಡಳ್ಳಿ	-
೨೧	-	ಹೊಸಾಡು	-
೨೨	-	ಕಟ್‌ಬೆಲ್ತೂರು	-
೨೩	-	ಗೋಪಾಡಿ	-

ಮೂಲ: ಉಡುಪಿ ಜಿಲ್ಲೆಯ ಚುನಾವಣಾ ಶಾಖೆಯ ೨೦೧೫-೧೬ ರ ಸಾಲಿನ ವರದಿ.

ಕೋಷ್ಟಕ ೧.೫ ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣದ ಅಧ್ಯಯನಕ್ಕೆ ಬಳಸಲಾದ ಮಾದರಿಯ ಗಾತ್ರ

ತಾಲೂಕು	ಒಟ್ಟು ಗ್ರಾಮ ಪಂಚಾಯತ್	ಮೊಗವೀರ ಮಹಿಳೆಯರು ಆಯ್ಕೆಗೊಂಡ ಗ್ರಾಮ ಪಂಚಾಯತ್‌ಗಳು	ಆಯ್ಕೆಗೊಂಡ ಮೊಗವೀರ ಮಹಿಳೆಯರ ಸಂಖ್ಯೆ	ಅಧ್ಯಯನಕ್ಕೆ ಆಯ್ದುಕೊಳ್ಳಲಾದ ಮೊಗವೀರ ಮಹಿಳಾ ಸದಸ್ಯರು	ಶೇಕಡಾ
ಉಡುಪಿ	೫೯	೨೦	೩೦	೩೦	೧೦೦
ಕುಂದಾಪುರ	೬೫	೨೩	೩೩	೩೩	೧೦೦
ಕಾರ್ಕಳ	೩೪	೯	೧೩	೧೩	೧೦೦
ಒಟ್ಟು	**೧೫೮**	**೫೨**	**೭೬**	**೭೬**	**೧೦೦**

ಮೂಲ: ೧. ಉಡುಪಿ ಜಿಲ್ಲಾ ಅಂಕಿ ಸಂಖ್ಯೆಗಳ ಪಕ್ಷಿನೋಟ ೨೦೧೫-೧೬.

೨. ಉಡುಪಿ ಜಿಲ್ಲೆಯ ಚುನಾವಣಾ ಶಾಖೆಯ ೨೦೧೫-೧೬ ರ ಸಾಲಿನ ವರದಿ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ಪಂಚಾಯತ್ ರಾಜ್ ನ ಮೂರು ಹಂತಗಳ ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಇಲ್ಲಿ ಪಂಚಾಯತ್ ಹಾಗೂ ತಾಲೂಕು ಪಂಚಾಯತ್‌ಗಳಲ್ಲಿ ಅವರ ಪ್ರತಿನಿಧಿತ್ವ ತುಂಬಾ ಕಡಿಮೆ ಇದೆ. ಜಿಲ್ಲಾ ಪಂಚಾಯತ್‌ನಲ್ಲಿ ಇಲ್ಲಿಯವರೆಗೆ ಯಾರೂ ಆಯ್ಕೆಯಾದ ಮೊಗವೀರ ಮಹಿಳೆಯರು ಇರುವುದಿಲ್ಲ. ಈ ಕಾರಣಕ್ಕಾಗಿ ಮೊಗವೀರ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ (೭೬) ಆಯ್ಕೆಗೊಂಡಿರುವ ಗ್ರಾಮ ಪಂಚಾಯತ್‌ನ್ನು ಮಾತ್ರ ಅಧ್ಯಯನದಲ್ಲಿ ಸೇರಿಸಿ ಕೊಳ್ಳಲಾಗಿದೆ.

೧.೧೦. ಅಧ್ಯಯನದ ಮಾದರಿ ವಿಧಾನ

ಈ ಅಧ್ಯಯನದ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲು ಪ್ರಶ್ನಾವಳಿಯನ್ನು ರಚಿಸಲಾಗಿದ್ದು, ಮಾಹಿತಿದಾರರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಅನುಕೂಲಕರ ಮಾದರಿ (ಕನ್‌ವಿನಿಯನ್ಸ್ ಸ್ಯಾಂಪ್ಲಿಂಗ್) ಕ್ರಮವನ್ನು ಆಯ್ದುಕೊಳ್ಳಲಾಗಿದೆ. ವಿಶ್ಲೇಷಣೆಗಾಗಿ ಸರಾಸರಿ ಕ್ರಮ ಬಳಸಲಾಗಿದೆ.

೧. ರಚನಾತ್ಮಕ ಪ್ರಶ್ನಾವಳಿ-ಎರಡು ಪ್ರಶ್ನಾವಳಿಗಳನ್ನು ಬಳಸಿದ್ದು, ಒಂದು ಪ್ರಶ್ನಾವಳಿಯನ್ನು ಎಲ್ಲಾ ಮಾಹಿತಿದಾರರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಕ್ಕಾಗಿ ಹಾಗೂ ಎರಡನೇ ವಿಶೇಷ ಪ್ರಶ್ನಾವಳಿಯನ್ನು ಗ್ರಾಮ ಪಂಚಾಯತ್‌ಗಳಲ್ಲಿ ಆಯ್ಕೆಗೊಂಡ ಸದಸ್ಯರಿಂದ ರಾಜಕೀಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಲು ಬಳಸಲಾಗಿದೆ.

೨. ಸಭೆಗಳಲ್ಲಿ ಭಾಗವಹಿಸುವಿಕೆ ಮತ್ತು ಅಧಿಕಾರಿಗಳಿಂದ ಮಾಹಿತಿ ಸಂಗ್ರಹಣೆ.

ಅನುಷಂಗಿಕ ದತ್ತಾಂಶವನ್ನು ಪಂಚಾಯತ್ ದಾಖಲೆಗಳು, ಕಡತಗಳು ಹಾಗೂ ಸಾಹಿತ್ಯ ಗಳಿಂದ ಸಂಗ್ರಹಿಸಿದ ದತ್ತಾಂಶಗಳನ್ನು ಸರಳ ಸಂಖ್ಯಾಶಾಸ್ತ್ರೀಯ ಉಪಕರಣಗಳಾದ 'ಸರಾಸರಿ' ಮತ್ತು 'ಶೇಕಡಾವಾರು' ಕ್ರಮಗಳನ್ನು ಬಳಸಲಾಗಿದೆ. ಈ ಅಧ್ಯಯನದಲ್ಲಿ ಮಾನವ ಅಭಿವೃದ್ಧಿ ವರದಿಗಳು, ಸಂಖ್ಯಾಶಾಸ್ತ್ರೀಯ ಮೀನುಗಾರಿಕಾ ವರದಿಗಳು, ಆರ್ಥಿಕ ಸಮೀಕ್ಷಣಾ ವರದಿಗಳು, ಪ್ರಮುಖ ಸರಕಾರಿ

ಹಾಗೂ ಅರೆ ಸರಕಾರಿ ಕಛೇರಿಗಳ ವರದಿಗಳು, ನಿಯತ ಕಾಲಿಕಗಳಲ್ಲಿ ಅಚ್ಚಾಗುವ ಸಂಶೋಧನಾ ಲೇಖನಗಳು, ಪ್ರಾಕ್ಷಿಕಗಳು, ಗ್ರಂಥಗಳು, ಅಚ್ಚಾದ, ಅಚ್ಚಾಗದ ಪ್ರಬಂಧಗಳು, ಇತ್ಯಾದಿಗಳನ್ನು ಅನುಷಂಗಿಕ ಮಾಹಿತಿಯ ಮೂಲಗಳಾಗಿ ಬಳಸಲಾಗಿದೆ.

ಮೊಗವೀರ ಸಮುದಾಯದ ಮಾಹಿತಿಯನ್ನು ಪಡೆಯಲು ಓರ್ವ ಪ್ರಮುಖ ಮಾಹಿತಿಗಾರನ ಸಂದರ್ಶನವನ್ನು, ಮೀನುಗಾರಿಕಾ ಕ್ಷೇತ್ರಗಳಲ್ಲಿನ ಮಹಿಳೆಯರು ನಡೆಸುವ ಕಾರ್ಯವೈಖರಿಗಳನ್ನು ತಿಳಿದುಕೊಳ್ಳಲು ಮೀನುಗಾರಿಕೆಯಲ್ಲಿ ನಿರತ ಹಿರಿಯ ಮಹಿಳೆಯನ್ನು ಬಳಸಿಕೊಳ್ಳಲಾಗಿದೆ. ಸಮುದಾಯದ ಮುಖಂಡರುಗಳು, ಮೀನು ಸಂಸ್ಕರಣಾ ಉದ್ಯಮದ ನಿರ್ವಾಹಕರು ಮತ್ತು ಮೇಲ್ವಿಚಾರಕರು, ಮೀನು ಮಾರಾಟ ಒಕ್ಕೂಟದ ಸದಸ್ಯರುಗಳನ್ನು, ಸ್ತ್ರೀ ಶಕ್ತಿ, ನವೋದಯ, ಸ್ವ-ಸಹಾಯ ಸಂಘ ಹಾಗೂ ಮೀನುಗಾರಿಕಾ ಮಹಿಳಾ ಮಂಡಳಿಗಳ ಸದಸ್ಯರನ್ನು, ಒಣ ಮೀನು ಮಾರಾಟ ಸಂಘದ ಮಹಿಳಾ ಅಧ್ಯಕ್ಷರನ್ನು ಮಾಹಿತಿ ಸಂಗ್ರಹಕ್ಕಾಗಿ ಸಂಪರ್ಕಿಸಲಾಗಿದೆ. ಮೀನುಗಾರಿಕಾ ಗ್ರಾಮಗಳಿಗೆ ತೆರಳಿ ಅಲ್ಲಿನ ಮಹಿಳಾ ಮಂಡಲ, ಮತ್ತು ಯುವತಿ ಮಂಡಲಗಳಿಂದ ಆಯಾಯ ಗ್ರಾಮಗಳಲ್ಲಿನ ಸಂಶೋಧನೆಗೆ ಪೂರಕವಾದ ಮಾಹಿತಿಗಳನ್ನು ಸಂದರ್ಶನದ ಮೂಲಕ ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಗಳನ್ನು ಸರಾಸರಿ ವಿಧಾನದಿಂದ ಅಂಕಿ ಅಂಶಗಳನ್ನು ಕೋಷ್ಟಕಗಳಿಗೆ ಪರಿವರ್ತಿಸಿ ವಿಶ್ಲೇಷಿಸಲಾಗಿದೆ.

೧.೧೧. ಅಧ್ಯಯನದ ಮಹತ್ವ

ಉಡುಪಿ ಜಿಲ್ಲೆಯಲ್ಲಿ ಒಟ್ಟು ಮೊಗವೀರ ಜನಸಂಖ್ಯೆ ೧,೧೯,೨೪೧ ರಷ್ಟಿದೆ. ಅವರಲ್ಲಿ ಶೇಕಡಾ ೫೧ರಷ್ಟು ಅಂದರೆ ೬೪,೯೯೮ ಮಹಿಳೆಯರಿದ್ದಾರೆ. ಪ್ರಸ್ತುತ ಅಧ್ಯಯನವು ಮೊಗವೀರ ಮಹಿಳಾ ಕೇಂದ್ರಿತವಾಗಿದೆ. ಈ ಮೊಗವೀರ ಮಹಿಳಾ ಸಮುದಾಯದ ಅಭಿವೃದ್ಧಿಯ ಬಗ್ಗೆ ನಡೆಸುವ ಅಧ್ಯಯನ ಹಾಗೂ ಅದರಿಂದಾಗಿ ಹೊರಬರುವ ಫಲಿತಗಳು ಇಡೀ ಸಮುದಾಯದ ಏಳಿಗೆಗೆ ಕಾರಣವಾಗಬಲ್ಲದು. ವಿದೇಶಿ ಆದಾಯವನ್ನು ತಂದುಕೊಡುವ ಉದ್ಯಮದಲ್ಲಿರುವ ಮೊಗವೀರ ಮಹಿಳೆಯರ ಅಭಿವೃದ್ಧಿ ಮೀನುಗಾರಿಕಾ ಉದ್ಯಮವನ್ನು ಇನ್ನಷ್ಟು ಬೆಳೆಸಲು ಸಹಕಾರಿಯಾಗಬಲ್ಲದು. ಈ ಸಮುದಾಯವು ಹಿಂದುಳಿದ ವರ್ಗವಾಗಿರುವುದರಿಂದ ಯಾವುದೇ ಅಭಿವೃದ್ಧಿ ಪ್ರಯತ್ನವನ್ನು ಸೂಕ್ತ ರೀತಿಯಲ್ಲಿ ಅಳವಡಿಸಿಕೊಂಡಾಗ ಸಮಾಜದ ಪ್ರಗತಿಗೂ ಪೂರಕವಾಗುತ್ತದೆ. ಆ ನಿಟ್ಟಿನಲ್ಲಿ ಈ ಅಧ್ಯಯನದ ಕೊಡುಗೆ ಕೇವಲ ಮೊಗವೀರ ಮಹಿಳಾ ಅಭಿವೃದ್ಧಿಗೆ ಸೀಮಿತವಾಗಿಲ್ಲ. ಈ ಅಧ್ಯಯನವು ಸಮಾಜದ ಇತರ ಹಿಂದುಳಿದ ಮಹಿಳಾ ವರ್ಗಗಳ ಅಭಿವೃದ್ಧಿಯ ಚಿಂತನೆಗೂ ಪ್ರೇರಣೆ ನೀಡುತ್ತದೆ. ಆ ಮೂಲಕ ಉಡುಪಿ ಜಿಲ್ಲೆಯ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಸಂಚಲನವನ್ನು ಹುಟ್ಟಿಸಬಲ್ಲ ಅಧ್ಯಯನ ಇದಾಗಿದೆ.

ಮೊಗವೀರ ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಯಾವ ರೀತಿ ಇದೆ ಎಂಬುದನ್ನು ಕಂಡು ಕೊಳ್ಳುವ ನಿಟ್ಟಿನಲ್ಲಿ ಈ ಅಧ್ಯಯನದ ಅಗತ್ಯತೆ ಇದೆ. ಮೊಗವೀರ ಮಹಿಳೆಯರ ಬಗ್ಗೆ ಹಲವಾರು ಅಧ್ಯಯನಗಳು ಈಗಾಗಲೇ ನಡೆದಿವೆ. ಆದರೆ ಬಹುತೇಕ ಅಧ್ಯಯನಗಳು ಮಹಿಳೆಯರ ಸಾಮಾಜಿಕ-

ಆರ್ಥಿಕ ಸ್ಥಾನಮಾನ, ಸಾಮಾಜಿಕ ಬದಲಾವಣೆ ಹಾಗೂ ಅವರ ಸಾಮಾಜಿಕ ಸಮಸ್ಯೆಗಳ ಬಗ್ಗೆ ಕೇಂದ್ರೀಕೃತವಾಗಿದೆ. ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣದ ಮೇಲೆ ಕೇಂದ್ರೀಕೃತವಾದ ವಿಸ್ತೃತ ಅಧ್ಯಯನವು ಈ ಭಾಗದಲ್ಲಿ ನಡೆದಿರುವುದಿಲ್ಲ. ಪ್ರಸ್ತುತ ಅಧ್ಯಯನವು ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣದ ವಿವಿಧ ಆಯಾಮಗಳ ಸ್ಥೂಲ ಪರಿಚಯವನ್ನು ನೀಡಬಲ್ಲದು. ಮೊಗವೀರ ಮಹಿಳೆಯರ ರಾಜಕೀಯ ಹಿನ್ನಡೆಗೆ ಕಾರಣಗಳೇನೆಂಬುದನ್ನು ಗುರುತಿಸಲು ಈ ಅಧ್ಯಯನದಿಂದ ಸಾಧ್ಯವಾಗುತ್ತದೆ. ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣದ ಕುರಿತ ಅಂಕಿ ಅಂಶಗಳು ಪ್ರಸ್ತುತ ಅಧ್ಯಯನದಲ್ಲಿ ಅಡಕವಾಗುವುದರಿಂದ ಮುಂದಿನ ಅಭಿವೃದ್ಧಿ ಯೋಜನೆಗಳಿಗೆ ಈ ಮಾಹಿತಿಗಳು ಸಹಕಾರಿಯಾಗುತ್ತವೆ. ಈ ಅಧ್ಯಯನವು ಮೊಗವೀರ ಸಮುದಾಯದ ಕುರಿತ ಮುಂದಿನ ಅಧ್ಯಯನಗಳಿಗೆ ಪೂರಕ ಅವಕಾಶಗಳನ್ನು ಹುಟ್ಟು ಹಾಕುವುದರ ಮೂಲಕ ಮೊಗವೀರ ಮಹಿಳೆಯರ ಶ್ರೇಯೋಭಿವೃದ್ಧಿಗೆ ಸರಕಾರ ರೂಪಿಸಬಹುದಾದ ಯೋಜನೆಗಳಿಗೆ ಪೂರಕ ಮಾಹಿತಿಗಳನ್ನು ಒದಗಿಸಿ ಕೊಡಬಲ್ಲದು.

ಮಹಿಳೆಯರು ಪ್ರಮುಖವಾಗಿ ಮೂರು ರೀತಿಯ ದುಡಿಮೆಯನ್ನು ನಿಭಾಯಿಸುತ್ತಿದ್ದಾರೆ. ಮೊದಲನೆಯದು ಉತ್ಪಾದನಾ ದುಡಿಮೆ, ಎರಡನೆಯದು ಕೌಟುಂಬಿಕ ದುಡಿಕೆ, ಮೂರನೆಯದಾಗಿ ಸಂತಾನೋತ್ಪತ್ತಿ ಅಥವಾ ಸಂಗೋಪನಾ ದುಡಿಮೆ. ಈ ಮೂರು ಬಗೆಯ ದುಡಿಮೆಯನ್ನು ಮಹಿಳೆಯರು ನಿರ್ವಹಿಸುತ್ತಿರುವುದರಿಂದ ಕುಟುಂಬದಲ್ಲಿ ದುಡಿಮೆಯ ಭಾರ ಅವರ ಮೇಲೆ ಸಾಪೇಕ್ಷವಾಗಿ ಅಧಿಕವಾಗಿದೆ. ಸರ್ವೇಸಾಮಾನ್ಯವಾಗಿ ಪ್ರತಿ ದಿನ ಮಹಿಳೆಯರು ೧೨ ಗಂಟೆಯಿಂದ ೧೫ ಗಂಟೆಯವರೆಗೆ ದುಡಿಮೆ ಮಾಡುತ್ತಾರೆ. ಅಂದರೆ ಅವರು ಪ್ರತಿದಿನ ಎರಡು ದುಡಿಮೆಯ ದಿನಗಳನ್ನು ಬದುಕುತ್ತಿದ್ದಾರೆ. ಮನೆಯ ಹೊರಗೆ ನೌಕರಿ ಹಿಡಿದ ಮಹಿಳೆಯರು ಅದರ ಜೊತೆಯಲ್ಲಿ ಮನೆಯೊಳಗಿನ ಜವಾಬ್ದಾರಿಯನ್ನು ನಿಭಾಯಿಸುತ್ತಿರುವುದಾಗಿ ದಾಖಲಿಸಿದ್ದಾರೆ. ಹೀಗೆ ವಿವಿಧ ರೀತಿಯ ಜವಾಬ್ದಾರಿಯನ್ನು ವಹಿಸುವ ಮಹಿಳೆಯರನ್ನು ಸಮಾಜ ಕಾಣುವ ಕ್ರಮವು ಋಣಾತ್ಮಕವಾದ ರೀತಿಯಾಗಿವೆ. ಮಹಿಳೆಯರನ್ನು ಕುಟುಂಬಕ್ಕೆ ಸಂವಾದಿಯಾಗಿ ಗಂಡ-ಮಕ್ಕಳ ಹಿತಗಳನ್ನು ಕಾಪಾಡುವ ಸಾಧನ-ಸಂಪನ್ಮೂಲವಾಗಿ ಪರಿಭಾವಿಸಿಕೊಳ್ಳುವ ಕ್ರಮದ ಮೂಲದಲ್ಲಿ ಮಹಿಳೆಯನ್ನೇ ಕೇವಲ ಜೈವಿಕ ಸಂಗತಿಯಾಗಿ ನೋಡುವ ಪರಿಯಿದೆ. ಆಕೆಯನ್ನು ಪ್ರಕೃತಿಗೆ ಸಂವಾದಿಯಾಗಿ, ಭೂಮಿತಾಯಿಗೆ ಸಂವಾದಿಯಾಗಿ ನೋಡಲಾಗುತ್ತದೆ. ಮಹಿಳೆಯನ್ನು ಸಮಾಜವೂ ಸಾಮಾಜಿಕ ಘಟಕವಾಗಿ ಒಪ್ಪಲು ಸಿದ್ಧವಿಲ್ಲ. ಜೈವಿಕ ಸಂಗತಿಯ ಲಿಂಗ ಸಂಬಂಧಗಳ ನೆಲೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಅವಳು ಗಂಡನಿಗೆ, ಮಕ್ಕಳಿಗೆ ಸಂವಾದಿಯಾಗಿ ಬಿಟ್ಟಿದ್ದಾಳೆ. ಮಹಿಳೆಗೆ ತನ್ನದೇ ಆದ ವ್ಯಕ್ತಿತ್ವ-ಅಸ್ತಿತ್ವ ಹಾಗೂ ಹಿತಾಸಕ್ತಿಗಳಿವೆ ಎಂಬುದನ್ನೇ ಸಮಾಜವು ಒಪ್ಪುವುದಿಲ್ಲ. ಕೇವಲ ಇತರ ಬೇಕು-ಬೇಡಗಳನ್ನು ಒದಗಿಸಲಷ್ಟೇ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ(ಚಂದ್ರಶೇಖರ್ ಟಿ.ಆರ್, ೨೦೦೮).

ಇದೆಲ್ಲದರ ಪರಿಣಾಮವಾಗಿ ಮಹಿಳಾ ಸಮಾನತೆಯ ಅಂಶವನ್ನು ಸಾಂವಿಧಾನಿಕ ಹಕ್ಕನ್ನು ಮಹಿಳೆಯರಿಗೆ ಒದಗಿಸಿ ಕೊಡಬೇಕಾದುದು ಇಂದಿನ ಅಗತ್ಯತೆಯಾಗಿದೆ. ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿ ನಿರಂತರವಾಗಿ ಕೌಟುಂಬಿಕ ಹಾಗೂ ಸಾಮಾಜಿಕ ಶೋಷಣೆಗಳಿಗೆ ಒಳಗಾಗುತ್ತಿರುವುದು ಕಂಡುಬರುತ್ತಿದೆ. ಅಪೌಷ್ಠಿಕತೆ, ಆರ್ಥಿಕ ದುಃಸ್ಥಿತಿಯಂತಹ ಕಾರಣಗಳಿಂದಾಗಿ ಗ್ರಾಮೀಣ ಪ್ರದೇಶದ ಮಹಿಳೆಯರ ಅಭಿವೃದ್ಧಿ ಕುಂಠಿತಗೊಂಡಿದೆ. ಆ ವಿಷಯದ ಬಗ್ಗೆ ಬೆಳಕು ಚೆಲ್ಲುವ, ಮಹಿಳೆಯರ ಅಭಿವೃದ್ಧಿಗೆ ಪೂರಕವಾಗುವ ಅಧ್ಯಯನಗಳ ಅಗತ್ಯತೆಯಿಂದಾಗಿ ಈ ಅಧ್ಯಯನ ಮಹತ್ವದ್ದಾಗಿದೆ.

ಶಿಕ್ಷಣವು ಮೊಗವೀರ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಅವಕಾಶ ಮಾಡಿಕೊಟ್ಟಿವೆ. ಶಿಕ್ಷಣದಿಂದಾಗಿ ಮೊಗವೀರ ಮಹಿಳೆಯರು ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸಿದ್ದಾರೆ. ಶಿಕ್ಷಣದಿಂದಾಗಿ ಆರ್ಥಿಕ ಮೂಲಗಳ ಅರಿವು ಮತ್ತು ಆಯ್ಕೆಯ ಅವಕಾಶಗಳ ಮೂಲಕ ಮಹಿಳೆಯ ದುಡಿಮೆ ಕುಟುಂಬದ ಸಬಲೀಕರಣಕ್ಕೆ ಕಾರಣವಾಗಿದೆ. ಆದರೆ ಮೊಗವೀರ ಮಹಿಳೆಯರಲ್ಲಿ ಶಿಕ್ಷಣದಿಂದಾಗಬಹುದಾದ ಅನುಕೂಲತೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯ ಸಂಘಟಿತವಾಗಿ ಆಗಬೇಕಾಗಿದೆ. ಶಿಕ್ಷಣದ ಪ್ರಯೋಜನವನ್ನು ಎಲ್ಲಾ ಹಂತದಲ್ಲಿರುವ ಮೊಗವೀರ ಮಹಿಳೆಯರು ಅರಿತಾಗ ಮಾತ್ರ ಸಮಾನತೆಯ ಕನಸು ನನಸಾಗಲು ಸಾಧ್ಯವಿದೆ. ಮಹಿಳೆಯರು ಕೇವಲ ಕೌಟುಂಬಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಬೆಳೆದರೆ ಸಾಲದು, ರಾಜಕೀಯ ಕ್ಷೇತ್ರದಲ್ಲಿ ಸಹಭಾಗಿತ್ವವನ್ನು ಪಡೆದು ನಾಯಕತ್ವವನ್ನು ಮೆರೆದಾಗ ಸಬಲೀಕರಣದ ಎಲ್ಲಾ ಅವಕಾಶಗಳು ಅವರಿಗೆ ಒದಗಿ ಬರುತ್ತದೆ. ಆ ನಿಟ್ಟಿನಲ್ಲಿ ಮಹಿಳೆಯರ ರಾಜಕೀಯಕ್ಕೆ ಪ್ರೇರೇಪಿಸುವ ಕಾರ್ಯಗಳು ಈ ಅಧ್ಯಯನದಲ್ಲಿರುವುದರಿಂದಾಗಿ ಈ ಅಧ್ಯಯನವು ಮಹತ್ವದ್ದಾಗಿದೆ.

ಮೀನಾಕ್ಷಿ ಜೆ ರವರ *'ವುಮೆನ್ ಇನ್ ಪಂಚಾಯತ್ ರಾಜ್'* ಎಂಬ ಅಧ್ಯಯನದಲ್ಲಿ ಸ್ಥಳೀಯ ಮಟ್ಟದಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದ ಮಹಿಳೆಯರನ್ನು ಸಮಾಜ ನೋಡುವ ದೃಷ್ಟಿಕೋನದಲ್ಲಿ ಬದಲಾವಣೆಯಾಗಲು ಪ್ರಾರಂಭಿಸಿದೆ. ಸ್ಥಳೀಯ ಮಟ್ಟದಲ್ಲಿ ಮೀಸಲಾತಿಯನ್ನು ನೀಡುವುದರ ಮೂಲಕ ಸ್ಥಳೀಯ ಮಟ್ಟದಲ್ಲಿರುವ ನಾಯಕಿಯರನ್ನು ಗುರುತಿಸುವಂತಾಗಿದೆ. ಮಹಿಳಾ ಸಬಲೀಕರಣಕ್ಕಾಗಿ ಕೆಲಸ ಮಾಡುವ ಸಂಸ್ಥೆಗಳು/ಸಂಘಟನೆಗಳು ಮಹಿಳೆಯರ ಸಾಮಾಜಿಕ, ರಾಜಕೀಯ ಸವಾಲುಗಳನ್ನು ಎದುರಿಸುವಲ್ಲಿ ಸಂಪೂರ್ಣವಾದ ಸಹಕಾರವನ್ನು ನೀಡುತ್ತಿರುವುದಾಗಿ ಈ ಅಧ್ಯಯನದಲ್ಲಿ ತಿಳಿಸಿದ್ದಾರೆ. ರಾಜಕೀಯ ಪ್ರವೇಶದ ನಂತರ ಮಹಿಳೆಯರ ಸ್ಥಿತಿಗತಿಗಳು ಉತ್ತಮಗೊಂಡಿರುವುದು ಸಾಹಿತ್ಯದ ವಿಶ್ಲೇಷಣೆಗಳಲ್ಲಿ ಕಂಡುಬರುತ್ತದೆ. ಆದರೆ ಮೊಗವೀರ ಮಹಿಳೆಯರನ್ನು ರಾಜಕೀಯವಾಗಿ ಸಬಲೀಕರಿಸುವ, ಅವರನ್ನು ರಾಜಕೀಯ ಪಾಲ್ಗೊಳ್ಳುವಿಕೆಯ ಪ್ರಕ್ರಿಯೆಗೆ ಒಳಪಡಿಸುವ ಕಾರ್ಯ ಉಡುಪಿ ಜಿಲ್ಲೆಯಲ್ಲಿ ನಿಧಾನಗತಿಯಲ್ಲಿದೆ.

ಮಸ್ತಾನ್ ವಾಲಿ ಎಮ್.ಡಿ ರವರ *'ವುಮನ್ ಆ್ಯಂಡ್ ಪೊಲಿಟಿಕ್ಸ್'* ಕೃತಿಯು ಪ್ರಜಾಪ್ರಭುತ್ವದಲ್ಲಿನ ಜನರ ಪಾಲ್ಗೊಳ್ಳುವಿಕೆಯು ಜನರ ಆಸೆ-ಆಕಾಂಕ್ಷೆಗಳನ್ನು ಪ್ರತಿಫಲಿಸುತ್ತದೆ. ಆದರೆ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಕೆಲವು ಐತಿಹಾಸಿಕ ಕಾರಣಗಳಿಂದ ನಿರ್ಲಕ್ಷಿಸಲಾಗಿದೆ. ಇದು

ಪ್ರಪಂಚದ ಹಲವು ದೇಶಗಳಲ್ಲಿ ಕಂಡುಬರುತ್ತದೆ. ಶಿಕ್ಷಣ ಮತ್ತು ಆಧುನೀಕರಣದಿಂದಾಗಿ ಮಹಿಳೆಯರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವಿಕೆಯು ಆರಂಭವಾಯಿತು. ಹಲವಾರು ಸ್ತ್ರೀವಾದಿ ಸಂಘಟನೆಗಳು ಹಾಗೂ ಮಹಿಳೆಯರು ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ತಮ್ಮ ಸ್ಥಾನವನ್ನು ಪಡೆಯಲು ಹಾಗೂ ರಾಜಕೀಯ ಹಕ್ಕುಗಳನ್ನು ಪ್ರತಿಪಾದಿಸಲು ಪ್ರಾರಂಭಿಸಿದರು. ಇದರಿಂದಾಗಿ ಮಾನವ ಸಮುದಾಯದಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನು ಸರ್ಕಾರದ ಎಲ್ಲ ವಲಯಗಳಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆಯ ಮಹತ್ವವನ್ನು ಅರಿತುಕೊಂಡವು. ಪರಿಣಾಮವಾಗಿ ಕಾನೂನು, ರಾಜಕೀಯ ಆಡಳಿತದಲ್ಲಿ ಮಹಿಳೆಯರನ್ನು ಒಳಗೊಳ್ಳುವ ಪ್ರಕ್ರಿಯೆಗಳು ಪ್ರಾರಂಭವಾದವು. ರಾಜಕೀಯವು ಒಂದು ಅಥವಾ ಎರಡು ಬಾರಿ ಮಹಿಳೆಯರಿಗೆ ಅವಕಾಶಗಳನ್ನು ನೀಡುವ ರೋಟೇಶನ್‌ನಿಂದಾಗಿ ಮಹಿಳೆಯರು ರಾಜಕೀಯದ ಆಗುಹೋಗುಗಳಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳದೇ ಹೋಗುವ ಅವಕಾಶಗಳೇ ಹೆಚ್ಚಾಗುತ್ತದೆ. ಸಾರ್ವಜನಿಕವಾಗಿ ಮಹಿಳೆಯರು ಯಾವುದೇ ಕೆಲಸ ಕಾರ್ಯಗಳಲ್ಲಿ ಭಾಗವಹಿಸದೇ ಇರುವುದರಿಂದ ಗ್ರಾಮ ಪಂಚಾಯತ್‌ಗೆ ಆಯ್ಕೆಯಾದ ಮಹಿಳೆಯರಿಗೆ ತರಬೇತಿಯ ಅವಶ್ಯಕತೆ ಎದ್ದು ಕಾಣುತ್ತದೆ. ಮಹಿಳೆಯರಿಗೆ ತರಬೇತಿಯನ್ನು ಒಂದು ಅಥವಾ ಎರಡು ದಿನ ನೀಡಿದರೆ ಸಾಲದು ನಿರಂತರ ತರಬೇತಿಯಿಂದ ಮಾತ್ರ ಮಹಿಳೆಯರು ಕ್ರಿಯಾತ್ಮಕವಾಗಿ ಕೆಲಸ ಮಾಡಲು ಸಾಧ್ಯವಾಗುವುದಾಗಿ ಉಲ್ಲೇಖಿಸುತ್ತದೆ.

ಮೇಲಿನ ಅಭಿಪ್ರಾಯಗಳ ಆಧಾರದಲ್ಲಿ ಈ ಅಧ್ಯಯನದ ಮಹತ್ವವನ್ನು ಎರಡು ಅಂಶಗಳಾಗಿ ಅರ್ಥೈಸಬಹುದು ಮೊದಲನೆಯದಾಗಿ, ಮಹಿಳೆಯರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪ್ರಗತಿಯಾಗದೆ ಲಿಂಗ ಸಮಾನತೆಯ ಆಶಯವನ್ನು ಸಮಾಜದಲ್ಲಿ ಬಲಪಡಿಸುವುದು ಅಸಾಧ್ಯ. ಎರಡನೆಯದಾಗಿ, ಕೇವಲ ಸಾಮಾಜಿಕ, ಕೌಟುಂಬಿಕ ಅಭಿವೃದ್ಧಿಯಿಂದ ಸಾಧಿಸಲಾಗದ್ದನ್ನು ರಾಜಕೀಯ ಪಾಲ್ಗೊಳ್ಳುವಿಕೆಯ ಮೂಲಕ ಸಾಧಿಸಲು ಸಾಧ್ಯ. ಈ ನೆಲೆಗಟ್ಟಿನಲ್ಲಿ ನೋಡುವಾಗ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರನ್ನು ಕೌಟುಂಬಿಕವಾಗಿ ಸಮಾನರಾಗಿ, ಶೈಕ್ಷಣಿಕವಾಗಿ ಪ್ರಬುದ್ಧರಾಗಿ, ಸಾಮಾಜಿಕವಾಗಿ ಸದೃಢರಾಗಿ, ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಮಾಡುವ ಅಗತ್ಯವಿದೆ. ಅವರೊಂದಿಗೆ ರಾಜಕೀಯವಾಗಿ ಬೆಳೆಸಿ ಅವರು ಸಮಾನತೆಯ ನೀತಿ ನಿಯಮಗಳನ್ನು ತರಿಸುವ ಮೂಲಕ ಸಾಮಾಜಿಕ ಪರಿವರ್ತನೆಗೆ ಕಾರಣವಾಗಬೇಕಾದ ಅನಿವಾರ್ಯತೆಯಿದೆ. ಈ ಅಧ್ಯಯನವು ಕೇವಲ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ ಸಬಲೀಕರಣಕ್ಕೆ ಮಾತ್ರ ಕಾರಣವಾಗದೆ ಇತರ ಹಿಂದುಳಿದ ಸಮುದಾಯಗಳ ಮಹಿಳಾ ಅಭಿವೃದ್ಧಿಗೂ ಪರೋಕ್ಷವಾಗಿ ಸಹಕರಿಸಬಲ್ಲದು. ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ಈ ಅಧ್ಯಯನದಲ್ಲಿ ಮೊಗವೀರ ಮಹಿಳಾ ಸಾಮಾಜಿಕ, ಆರ್ಥಿಕ, ರಾಜಕೀಯ ಸಬಲೀಕರಣವನ್ನು ಸಾಧಿಸುವಲ್ಲಿರುವ ಅಂಶಗಳನ್ನು ಅಧ್ಯಯನ ನಡೆಸುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಹೆಚ್ಚು ಪ್ರಮುಖವಾಗಿದೆ. ಈ ಅಧ್ಯಯನವನ್ನು ಹಾಗೂ ಇದರ ಫಲಿತಗಳನ್ನು ಸರಿಯಾಗಿ ಬಳಸಿಕೊಂಡು, ನೀಡುವ ಸಲಹೆಗಳನ್ನು

ತಳಪಡಿಸಿಕೊಂಡು ನೀತಿಗಳನ್ನು ರಚಿಸಿದಲ್ಲಿ ನಿಜವಾದ ಅರ್ಥದ ಮಹಿಳಾ ಸಬಲೀಕರಣ ಸಾಧ್ಯವಾಗಬಲ್ಲದು. ಈ ಅಧ್ಯಯನವು ಕೇವಲ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ ಸಬಲೀಕರಣಕ್ಕೆ ಮಾತ್ರ ಕಾರಣವಾಗದೆ ಇತರ ಹಿಂದುಳಿದ ಸಮುದಾಯಗಳ ಮಹಿಳಾ ಅಭಿವೃದ್ಧಿಗೂ ಪರೋಕ್ಷವಾಗಿ ಸಹಕರಿಸಬಲ್ಲದು. ಈ ನಿಟ್ಟಿನಲ್ಲಿ ಈ ಅಧ್ಯಯನವು ಮಹತ್ವವನ್ನು ಹೊಂದಿದೆ.

೧.೧೩. ಅಧ್ಯಯನದ ಮಿತಿ

ಈ ಅಧ್ಯಯನ, ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಿಗೆ ಸಂಬಂಧಿತ ವಿಚಾರಗಳಿಗೆ ಸೀಮಿತಗೊಂಡಿದೆ. ಮೊಗವೀರ ಮಹಿಳೆಯರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ನಡೆದಿರುವ ಅಧ್ಯಯನಗಳು ಕಡಿಮೆಯಾಗಿರುವುದರಿಂದಾಗಿ ಮಾಹಿತಿದಾರರ ಸಂದರ್ಶನವೇ ಮುಖ್ಯ ಮಾಹಿತಿಯ ಮೂಲವಾಗಿ ಇಲ್ಲಿ ಪರಿಗಣಿಸಲಾಗಿದೆ. ಈ ಅಧ್ಯಯನವು ಮೊಗವೀರ ಮಹಿಳಾ ಅಭಿವೃದ್ಧಿ ಹಾಗೂ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಿಸಿದೆ. ಆ ನಿಟ್ಟಿನಲ್ಲಿ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಬಹಳಷ್ಟು ಸಂದರ್ಭಗಳಲ್ಲಿ ಮಹಿಳಾಭಿವೃದ್ಧಿಗೆ ಸಂಬಂಧಿಸಿದ ಪೂರಕ ಮಾಹಿತಿಯನ್ನು ನೀಡಬಲ್ಲ ಸಾಮರ್ಥ್ಯವನ್ನು ಹೊಂದಿದ್ದಾಗ್ಯೂ ಮೊಗವೀರ ಪುರುಷರನ್ನು ಪ್ರಶ್ನಾವಳಿ ಮೂಲಕ ನೇರ ಸಂದರ್ಶನಕ್ಕೆ ಒಳಪಡಿಸಿಲ್ಲ. ಈ ಕಾರಣದಿಂದಾಗಿ ಪುರುಷ ದೃಷ್ಟಿಕೋನದಿಂದ ಮಹಿಳಾಭಿವೃದ್ಧಿಯನ್ನು ಪರಿಭಾವಿಸುವ ಸಾಧ್ಯತೆಗೆ ಅಧ್ಯಯನದಲ್ಲಿ ಕೊಂಚ ಹಿನ್ನಡೆಯಾಗಿದೆ. ಆದರೆ ಅಧ್ಯಯನಕ್ಕೆ ಮುಖ್ಯ ಕೊರತೆಯಾಗದಂತೆ ಅಗತ್ಯವೆಂದು ಕಂಡು ಬಂದಲ್ಲಿ ಪುರುಷ ಸದಸ್ಯರಿಂದಲೂ ಮಾಹಿತಿಯನ್ನು ಪಡೆಯಲಾಗಿದೆ.

ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ವಿಶ್ಲೇಷಿಸುವ ಉದ್ದೇಶದಿಂದ ಗ್ರಾಮ ಪಂಚಾಯತ್‌ನಲ್ಲಿ ಸ್ಪರ್ಧಿಸಿ ಆಯ್ಕೆಯಾದ ಮಹಿಳಾ ಸದಸ್ಯರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಆದರೆ ಸ್ಥಳೀಯ ಆಡಳಿತವನ್ನು ಹೊರತುಪಡಿಸಿದಂತೆ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಸ್ಪರ್ಧಿಸಿ ವಿಜಯಿಗಳಾದ ಮೊಗವೀರ ಮಹಿಳಾ ಸದಸ್ಯರನ್ನು ಸಂದರ್ಶಿಸಿ ವಿವರಗಳನ್ನು ಸೇರಿಸಿಕೊಳ್ಳಲು ಸಾಧ್ಯವಾಗಿಲ್ಲ. ಮೊಗವೀರ ಮಹಿಳೆಯರಲ್ಲಿ ಹೆಚ್ಚಿನವರು ಅನಕ್ಷರಸ್ಥರಾಗಿರುವುದರಿಂದ ಪ್ರಶ್ನಾವಳಿಗಳ ಹೊರತಾಗಿ (ಕನ್ನಡ ಭಾಷೆಯ ಕಾರಣಕ್ಕಾಗಿ) ಮಾಹಿತಿದಾರರಿಂದ ಮಾಹಿತಿ ಸಂಗ್ರಹಿಸಲು ತುಳು ಭಾಷೆಯ ಅನಿವಾರ್ಯತೆಯಿಂದಾಗಿ ಹೆಚ್ಚಿನ ಸಮಯವನ್ನು ನೀಡಬೇಕಾಯಿತು. ಮೀನುಗಾರಿಕೆಯಲ್ಲಿ ತೊಡಗಿರುವ ಮಾಹಿತಿದಾರರಲ್ಲಿ ಮಾಹಿತಿ ಸಂಗ್ರಹಿಸಲು ಮೀನುಗಾರಿಕಾ ಬಂದರುಗಳಿಗೆ ತೆರಳಬೇಕಾದ ಸಂದರ್ಭದಲ್ಲಿ ಮಾಹಿತಿದಾರರ ವಿರಾಮದ ಸಮಯವನ್ನು ಅಂದರೆ ಬೆಳಿಗ್ಗೆ ೬.೦೦ ಗಂಟೆಗೆ ತೆರಳಬೇಕಾದ ಅನಿವಾರ್ಯತೆ ಒದಗಿತ್ತು. ಪುರುಷ ಸದಸ್ಯರ ಎದುರಿನಲ್ಲಿ ಮಹಿಳಾ ಮಾಹಿತಿದಾರರು ಕೆಲವು ವಿಷಯಗಳನ್ನು ಮುಕ್ತವಾಗಿ ಮಾಹಿತಿ ನೀಡಲು ಬಯಸುವುದಿಲ್ಲ. ಅಷ್ಟೇ ಅಲ್ಲದೇ ಹೆಚ್ಚಿನ ಮೊಗವೀರ ಮಹಿಳೆಯರು ಅನಕ್ಷರಸ್ಥರಾಗಿರುವ ಕಾರಣದಿಂದಾಗಿ ಕೆಲವೊಮ್ಮೆ ಅವರ ಶಿಕ್ಷಿತ ಮಕ್ಕಳು, ಅವರ ತಾಯಿಯ ಪರವಾಗಿ ಮಾಹಿತಿ ನೀಡುವಂತೆ ಪ್ರಯತ್ನ ಮಾಡಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಜೀವನವು ಇನ್ನೂ ಪ್ರಾರಂಭಿಕ ಹಂತದಲ್ಲಿರುವುದರಿಂದಾಗಿ ಈ ಅಧ್ಯಯನದಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಮೇಲೆ ಪರಿಣಾಮ ಬೀರಬಲ್ಲ ಆಯ್ದ ಕೆಲವು ಅಂಶಗಳನ್ನು ಮಾತ್ರ ವಿಶ್ಲೇಷಿಸಲು ಸಾಧ್ಯವಾಗಿದ್ದು, ಇನ್ನೂ ವಿಸ್ತೃತ ಅಧ್ಯಯನವನ್ನು ಮುಂದುವರಿಸಿದಲ್ಲಿ ಈ ವಿಚಾರದಲ್ಲಿ ಮಹತ್ವದ ಹಾಗೂ ಸೂಕ್ತ ಸಲಹೆಗಳನ್ನು ನೀಡಬಹುದಾಗಿದೆ.

ಅಧ್ಯಯನಗಳ ವರ್ಗೀಕರಣ

ಪ್ರಸ್ತುತ ಪ್ರಬಂಧದ ವಿಷಯಗಳನ್ನು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಅಧ್ಯಾಯ ಒಂದರಲ್ಲಿ ಪ್ರಸಾವನೆ, ಸಮಸ್ಯೀಕರಣ, ಅಧ್ಯಯನದ ಉದ್ದೇಶ ಹಾಗೂ ಉದ್ದೇಶಕ್ಕೆ ಪೂರಕವಾಗಿ ಹಾಕಿಕೊಂಡಂತಹ ಊಹೆಗಳು, ಅಧ್ಯಯನದ ಮಹತ್ವ, ಅಧ್ಯಯನದ ಮಿತಿ ಇವೆಲ್ಲವುಗಳನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ.

ಅಧ್ಯಾಯ ಎರಡರಲ್ಲಿ ಮಹಿಳಾ ಸಾಮಾಜಿಕ, ಶೈಕ್ಷಣಿಕ, ಕೌಟುಂಬಿಕ, ಆರ್ಥಿಕ ಸ್ಥಿತಿಗತಿಗಳು, ಲಿಂಗ ಅಸಮಾನತೆಯ ಅಂಶಗಳು, ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಅದರಿಂದಾಗಬಹುದಾದ ಮಹಿಳಾಭಿವೃದ್ಧಿಯ ಕುರಿತಾಗಿ ನಡೆಸಲಾದ ಅಧ್ಯಯನಗಳ ಸಮೀಕ್ಷೆಯನ್ನು ನಡೆಸಲಾಗಿದೆ.

ಅಧ್ಯಾಯ ಮೂರರಲ್ಲಿ ಅಧ್ಯಯನದ ಪ್ರದೇಶವಾದ ಉಡುಪಿ ಜಿಲ್ಲೆಯ ಹಿನ್ನೆಲೆ, ಭೌಗೋಳಿಕ ಪರಿಸ್ಥಿತಿ, ಹವಾಮಾನ, ಜಾತಿ, ಧರ್ಮ, ಭಾಷೆ, ಸಂಸ್ಕೃತಿ, ಶಾಲಾ ಕಾಲೇಜುಗಳ ವಿವರಣೆ, ಕೃಷಿ, ಕಾರ್ಖಾನೆಗಳು, ಕೈಗಾರಿಕೆ, ಮೀನುಗಾರಿಕೆ, ಹಾಗೂ ಪ್ರವಾಸೋದ್ಯಮ ತಾಣಗಳು, ಇತ್ಯಾದಿಗಳ ಸಂಕ್ಷಿಪ್ತ ಮಾಹಿತಿಗಳನ್ನು ನೀಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಮಹಿಳಾ ರಾಜಕೀಯ ಸಬಲೀಕರಣ, ಸಬಲೀಕರಣದ ಆಯಾಮಗಳು, ಸಬಲೀಕರಣದ ತಂತ್ರಗಳು, ಸಬಲೀಕರಣದ ಮಹತ್ವ, ಮಹಿಳಾಭಿವೃದ್ಧಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದಂತಹ ಪ್ರಯತ್ನಗಳು, ಮಹಿಳಾಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿರುವ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಅಧ್ಯಯನ, ಮಹಿಳಾ ರಾಜಕೀಯ ಸಬಲೀಕರಣದ ವಿವಿಧ ಅಂಶಗಳು 'ಮಹಿಳೆ ಮತ್ತು ರಾಜಕೀಯ' ಅಂದರೆ ಮಹಿಳೆ ರಾಜಕೀಯದಲ್ಲಿ ಹೇಗೆ ಗುರುತಿಸಿಕೊಂಡಳು ಎಂಬುದರ ವಿವರಣೆ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯ ರಾಜಕೀಯ ಪ್ರಾತಿನಿಧ್ಯತೆಯ ವಿವರಗಳು, ಮಹಿಳಾ ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹಾಗೂ ಡಾ. ಬಿ. ಆರ್. ಅಂಬೇಡ್ಕರ್‌ರವರ ಕೊಡುಗೆಗಳು, ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಮಹಿಳಾ ಸಮಾಜವಾದ ಹಾಗೂ ಸ್ತ್ರೀವಾದದ ಮಹಿಳಾಭಿವೃದ್ಧಿ ಸಿದ್ಧಾಂತಗಳನ್ನು ಅಧ್ಯಯನ ನಡೆಸಲಾಗಿದೆ.

ಅಧ್ಯಾಯ ಐದರಲ್ಲಿ ಅಧ್ಯಯನದ ಉದ್ದೇಶಕ್ಕನುಗುಣವಾಗಿ ಮೊಗವೀರ ಸಮುದಾಯದ ಹಿರಿಯರಿಂದ ಹಾಗೂ ಮಾಹಿತಿದಾರರಿಂದ ಪಡೆದು ಕೊಂಡಂತಹ ವಿವರಣೆಗಳಾದ ಸಾಮಾಜಿಕ

ಸ್ಥಾನಮಾನ, ಆರ್ಥಿಕ ಪರಿಸ್ಥಿತಿ ಹಾಗೂ ರಾಜಕೀಯ ಪಾಲ್ಗೊಳ್ಳುವಿಕೆ ಮತ್ತು ಪ್ರಾತಿನಿಧ್ಯತೆಗೆ ಸಂಬಂಧಿಸಿದ ಮಾಹಿತಿಗಳನ್ನು ಪಟ್ಟಿ ಮಾಡಿ ಸರಾಸರಿ ವಿಧಾನಗಳ ಮೂಲಕ ಕೋಷ್ಟಕಗಳಿಗೆ ಪರಿವರ್ತಿಸಿ ವಿಶ್ಲೇಷಿಸಲಾಗಿದ್ದು, ಸೂಕ್ತ ಅರ್ಥವಿವರಣೆಯನ್ನು ನೀಡಲಾಗಿದೆ. ಹಲವಾರು ವಿಷಯಗಳಿಗೆ ಕಾರಣಗಳನ್ನು ನೀಡಲಾಗಿದೆ.

ಅಧ್ಯಾಯ ಆರರಲ್ಲಿ ಸಮಾರೋಪ ಒಳಗೊಂಡಿದ್ದು ಇಡೀ ಅಧ್ಯಯನದ ಸಾರಾಂಶವನ್ನು ನೀಡಲಾಗಿದೆ. ಅಧ್ಯಯನದಲ್ಲಿ ಇದ್ದಂತಹ ಎಲ್ಲಾ ಉದ್ದೇಶಗಳು ಈಡೇರಿದ್ದು, ಇದಕ್ಕೆ ಪೂರಕವಾಗಿ ಹಾಕಿಕೊಂಡಂತಹ ಕೆಲವೊಂದು ಊಹೆಗಳು ಅಧ್ಯಯನದ ಅನಂತರ ಬದಲಾವಣೆಯ ಸ್ವರೂಪ ಪಡೆದುಕೊಂಡಿವೆ. ಅಧ್ಯಯನದಲ್ಲಿ ಕಂಡು ಕೊಂಡಂತಹ ಮುಖ್ಯ ಫಲಿತಗಳನ್ನು ದಾಖಲಿಸಿ ಸೂಕ್ತ ಸಲಹೆಗಳನ್ನು ಕೊಡಲಾಗಿದೆ. ಉಪಸಂಹಾರದೊಂದಿಗೆ ಅಧ್ಯಯನ ವರದಿಯನ್ನು ಸಮಾಪ್ತಿಗೊಳಿಸಲಾಗಿದೆ.

ಉಲ್ಲೇಖಗಳು:

- ರೇಣುಕಾ ಕೆ, ೨೦೧೧, *'ಡೆವಲಪ್‌ಮೆಂಟ್ ಅಂಡ್ ಮಾರ್ಜಿನಲೈಸೇಷನ್ ಎ ಸ್ಟಡಿ ಆಫ್ ಫಿಶರ್‌ವುಮೆನ್ ಆಫ್ ಕೋಸ್ಟಲ್ ಕರ್ನಾಟಕ',* ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶಕುಂತಳ ಗುಪ್ತ, ೨೦೦೫, *'ವುಮೆನ್ ಡೆವಲಪ್‌ಮೆಂಟ್ ಇನ್ ಇಂಡಿಯಾ; ಎ ಕಂಪೆರೇಟಿವ್ ಸ್ಟಡಿ',* ಅನ್‌ಮೋಲ್ ಪಬ್ಲಿಕೇಷನ್, ನ್ಯೂ ಡೆಲ್ಲಿ.
- ಶಂಕರರಾವ್ ಚ.ನ. ೧೯೯೭, *'ಸಾಮಾಜಿಕ ಸಂಶೋಧನೆಯ ಕೈಪಿಡಿ',* ಜೈ ಭಾರತ ಪ್ರಕಾಶನ, ಮಂಗಳೂರು.
- ಸೀಮಾ ಜಿ.ಕೆ. ೨೦೧೭, *'ಸ್ಟೇಟಸ್ ಆಫ್ ಫಿಶರ್ ವುಮೆನ್' ಎ ಕೇಸ್ ಸ್ಟಡಿ ಆಫ್ ವುಮೆನ್ ಇನ್ ಮೊಗವೀರ ಫಿಶಿಂಗ್ ಹೌಸ್ ಹೋಲ್ಡ್ಸ್',* ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
- ಯುಎನ್‌ಡಿಪಿ ೨೦೧೮ ರ ವರದಿ.
- ಈಸ್ಟರ್ ಭೋಸರ್‌ಅಫ್, ೧೯೭೦, *'ವುಮನ್ಸ್ ರೋಲ್ ಇನ್ ಇಕಾನಾಮಿಕ್ ಡೆವಲಪ್‌ಮೆಂಟ್',* ಲಂಡನ್ ಅರ್ಥ್ ಸ್ಕ್ಯಾನ್ಸ್.
- ಸುಷ್ಮಾ ಸಾಹೇ, ೧೯೯೮, *'ವುಮೆನ್ ಅಂಡ್ ಎಂಪವರ್‌ಮೆಂಟ್ ಅಪ್ರೋಚೆಸ್ ಅಂಡ್ ಸ್ಟ್ರಾಟೆಜೀಸ್',* ಡಿಸ್‌ಕವರಿ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ.
- ಚಂದ್ರಶೇಖರ ಟಿ.ಆರ್. ೨೦೦೧, *'ಮಹಿಳೆ: ಆರ್ಥಿಕತೆ ಮತ್ತು ಅಭಿವೃದ್ಧಿ',* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

- ರಾವ್ ಎನ್, ೧೯೯೬, *'ಎಂಪವರ್‌ಮೆಂಟ್ ಥ್ರೂ ಆರ್ಗನೈಸೇಷನ್: ವುಮನ್ ವರ್ಕರ್ಸ್ ಇನ್ ದ ಇನ್‌ಫಾರ್ಮಲ್ ಸೆಕ್ಟರ್', ಇಂಡಿಯನ್ ಜೆ ಜೆಂಡ್, ಸ್ಟಡ್.೩(೨):೧೭೧–೧೯೭.*
- ಹೇಮಲತಾ ಎಚ್.ಎಂ, ೨೦೦೨, *'ಮಹಿಳಾ ಸಶಕ್ತೀಕರಣ',* ಅಭಿರುಚಿ ಪ್ರಕಾಶನ, ಪುಟ ಸಂಖ್ಯೆ ೯.
- ಜನೆಟ್ ಹೆನ್‌ಫಲ್ ಮೊಮ್‌ಸೇನ್, ೨೦೦೪, *'ಜೆಂಡರ್ ಆ್ಯಂಡ್ ಡೆವಲಪ್‌ಮೆಂಟ್',* ಲಂಡನ್, ರಾವತ್ ಲೆಡ್ಜ್, ನ್ಯೂ ಫೆಟ್ಟರ್ ಲೇನ್.
- ಹಲಫ್ ಆಫ್‌ಫರ್, ೨೦೦೧, *'ಜೆಂಡರಿಂಗ್ ದ ಮಿಲೇನಿಯಮ್ ಗ್ಲೋಬಲೈಸಿಂಗ್ ವುಮನ್' ಇನ್ ಡೆಬರಾಲ್ ಇ.ಎಡಿ (ಸಂ) ಡಿಬೇಟಿಂಗ್ ಡೆವಲಪ್‌ಮೆಂಟ್ ಎನ್‌ಜಿಓ ಆ್ಯಂಡ್ ಫ್ಯೂಚರ್ ಡೆವಲಪ್‌ಮೆಂಟ್'* ಇನ್ ಪ್ರಾಕ್ಟೀಸ್ ರೀಡರ್ಸ್ ಸಿರೀಸ್, ಜೈಪುರ: ರಾವತ್ ಪಬ್ಲಿಕೇಷನ್ಸ್, ಪುಟ ೩೩೮.
- ಯುಎನ್‌ಡಿಪಿ ೨೦೧೮ ರ ವರದಿ.
- ಸ್ಯಾಂಡ್ರ ಜಿ, ಟರ್ನರ್ ಆ್ಯಂಡ್ ಟೀನಾ ಎಂ. ಮಸ್ಚಿ, ೨೦೧೫. *'ಫೆಮಿನಿಸ್ಟ್ ಅಂಡ್ ಎಂಪವರ್‌ಮೆಂಟ್ ಥಿಯರಿ ಆ್ಯಂಡ್ ಸೋಶಿಯಲ್ ವರ್ಕ್ ಪ್ರಾಕ್ಟಿಸ್',* ಜರ್ನಲ್ ಆಫ್ ಸೋಶಿಯಲ್ ವರ್ಕ್ ಪ್ರಾಕ್ಟಿಸ್, ವಾಲ್ಯುಂ ೨೯. ನಂ.೨. ಪುಟ ಸಂಖ್ಯೆ ೧೫೧–೧೬೨.
- ಯುಎನ್‌ಡಿಪಿ ೨೦೧೮ ರ ವರದಿ.
- ರೇಣುಕಾ ಕೆ, ೨೦೧೧, *'ಡೆವಲಪ್‌ಮೆಂಟ್ ಅಂಡ್ ಮಾರ್ಜಿನಲೈಸೇಷನ್ ಎ ಸ್ಟಡಿ ಆಫ್ ಫಿಶರ್‌ವುಮೆನ್ ಆಫ್ ಕೋಸ್ಟಲ್ ಕರ್ನಾಟಕ',* ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಎಲೆಕ್ಷನ್ ಅಟ್ಲಾಸ್ ಆಫ್ ಇಂಡಿಯಾ ವರದಿ, ೨೦೧೭.
- ಸಬಿಹಾ ಭೂಮಿಗೌಡ, (ಸಂ) ೨೦೦೭, *'ಲಿಂಗತ್ವ ಸಮನ್ವಾಯ',* ಮಂಗಳೂರು ವಿಶ್ವವಿದ್ಯಾ ನಿಲಯ, ಮಂಗಳಗಂಗೋತ್ರಿ ಪುಟ ಸಂಖ್ಯೆ ೪೦.
- ರಶ್ಮಿ ಶ್ರೀ ವಾಸ್ತವ, ೨೦೦೦, *'ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಪೊಲಿಟಿಕಲ್ ಪಾರ್ಟಿಸಿಪೇಷನ್, ವಿತ್ ಸ್ಪೆಷಲ್ ರೆಫರೆನ್ಸ್ ಟು ಗೋವಾ',* ಇನ್ ನಿರೋಜ್ ಸಿನ್ಹ (ಸಂ) ವುಮೆನ್ ಇನ್ ಇಂಡಿಯನ್ ಪಾಲಿಟಿಕ್ಸ್, ಅನ್‌ಮೋಲ್ ಪಬ್ಲಿಕೇಷನ್ಸ್, ನಿವ್ಯೂ ಡೆಲ್ಲಿ, ಪುಟ ಸಂಖ್ಯೆ ೨೦೬.
- ಸತ್ಯವತಿ ಎನ್.ಎಚ್, ೨೦೧೭, *'ಮಹಿಳೆಯರ ಅಭಿವೃದ್ಧಿಯಲ್ಲಿ ಸರಕಾರಿ ಯೋಜನಗಳ ಪಾತ್ರ ಗುಲ್ಬರ್ಗ ಜಿಲ್ಲೆಯ ಅಧ್ಯಯನ',* ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.

- ಜಾಲಿ, ಸುರ್ಜಿತ್ ಕೌರ್ (ಸಂ) *'ರೀಡಿಂಗ್ ಗಾಂಧಿ'*, ಕಾನ್ಸೆಪ್ಟ್ ಪಬ್ಲಿಕೇಷನ್ ಕಂಪೆನಿ, ಡೆಲ್ಲಿ, ೨೦೦೬. ಪುಟ ಸಂಖ್ಯೆ ೨೩೭.
- ಯಲ್ಲಿಸ್ವಾಮಿ ಈ, ೨೦೧೦, *'ಮಹಿಳೆ ಮತ್ತು ಜಾತಿ ಶ್ರೇಣೀಕರಣ ಅಂಬೇಡ್ಕರ್ ದೃಷ್ಟಿಕೋನ'*, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ ಪುಟ ಸಂಖ್ಯೆ ೧೧೪-೧೧೫.
- ಯೋಗರಾಜ್ ಎಸ್. ಡಿ, ೨೦೧೩, *'ಮಹಿಳಾ ಸಬಲೀಕರಣ'* ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಪ್ರಕಾಶನ, ಬೆಂಗಳೂರು ಪುಟಸಂಖ್ಯೆ ೨೪-೨೫.
- ಸದಾನಂದ ಕೆ ಉಚ್ಚಿಲ, ೨೦೧೪, *'ಮೊಗವೀರ ಸಮಾಜ-ಒಂದು ಅಧ್ಯಯನ'*, ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ ಉಚ್ಚಿಲ ಹಾಗೂ ಮೊಗವೀರ ಮಹಾಜನ ಸೇವಾಸಂಘ, ಮುಂಬಯಿ. ಪುಟ ಸಂಖ್ಯೆ ೧೬೦-೧೬೮.
- ಪಾದೂರು ಗುರುರಾಜ ಭಟ್, ೨೦೦೯, *'ತುಳುನಾಡು'* ಡಾ| ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ) ಉಡುಪಿ ಪುಟ ಸಂಖ್ಯೆ ೧೮೦.
- ಸದಾನಂದ ಕೆ ಉಚ್ಚಿಲ, ೨೦೧೪, *'ಮೊಗವೀರ ಸಮಾಜ-ಒಂದು ಅಧ್ಯಯನ'*, ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ ಉಚ್ಚಿಲ ಹಾಗೂ ಮೊಗವೀರ ಮಹಾಜನ ಸೇವಾಸಂಘ, ಮುಂಬಯಿ. ಪುಟ ಸಂಖ್ಯೆ ೧೬೦-೧೬೮.
- ವಸುಂಧರ ಬಿ.ಸಿ, ಗುರುಲಿಂಗಯ್ಯ ಎಂ, ೨೦೧೪. 'ಬೆಸ್ತ ಸಮುದಾಯದ ಮಹಿಳೆಯರ ಸ್ಥಾನಮಾನ' ಅಚಲ ತ್ರೈಮಾಸ ಪತ್ರಿಕೆ. ಪುಟ ಸಂಖ್ಯೆ ೪೯-೫೦.
- ಸೀಮಾ ಜಿ.ಕೆ. ೨೦೧೭, *'ಸ್ಟೇಟಸ್ ಆಫ್ ಫಿಶರ್ ವುಮೆನ್' ಎ ಕೇಸ್ ಸ್ಟಡಿ ಆಫ್ ವುಮೆನ್ ಇನ್ ಮೊಗವೀರ ಫಿಶಿಂಗ್ ಹೌಸ್ ಹೋಲ್ಡ್ಸ್'*, ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
- ಸುಮಂಗಳ ನಾಯಕ್, ೨೦೦೬, *'ಸೋಶಿಯೋ ಇಕಾನಮಿಕ್ ಸ್ಟೇಟಸ್ ಆಫ್ ಫಿಶರ್‌ಮೆನ್ ಕಮ್ಯೂನಿಟಿ ಆಫ್ ಉತ್ತರ ಕನ್ನಡ ಡಿಸ್ಟ್ರಿಕ್ಟ್'*, ಧಾರವಾಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ.
- ಸ್ವಾತಿ ಚಟ್ಟೋಪಾಧ್ಯಾಯ, ೨೦೧೫, *'ಪಾಲಿಟಿಕಲ್ ಪಾರ್ಟಿಸಿಪೇಶನ್ ಆಫ್ ವುಮೆನ್'*, ಥರ್ಡ್ ಕಾನ್ಸೆಪ್ಟ್, ಮೇ, ವಾಲ್ಯುಂ ೨೯ ನಂ.೩೩೯, ಪುಟ ಸಂಖ್ಯೆ ೩೨-೩೭.
- ಜೋಸ್ ಪೌಲ್ ಪಿ.ಸಿ, ೨೦೦೦, *'ಎಂಪವರ್‌ಮೆಂಟ್ ಆಫ್ ಫಿಶರ್ ವುಮೆನ್ ಇನ್ ಫಿಶ್ ಪ್ರೊಸೆಸಿಂಗ್ ಆ್ಯಂಡ್ ವೆಂಡಿಂಗ್ ಸೆಕ್ಟರ್ಸ್- ಆನ್ ಅನಾಲಿಸಿಸ್'*, ವಾಲ್ಯೂಂ ನಂ.೨. ಪುಟ ಸಂಖ್ಯೆ ೨೯೭-೩೦೮.

- ರೇಣುಕಾ ಕೆ, ೨೦೧೧, *'ಡೆವಲಪ್‌ಮೆಂಟ್ ಅಂಡ್ ಮಾರ್ಜಿನಲೈಸೇಷನ್ ಎ ಸ್ಟಡಿ ಆಫ್ ಫಿಶರ್‌ವುಮೆನ್ ಆಫ್ ಕೋಸ್ಟಲ್ ಕರ್ನಾಟಕ',* ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕರ್ನಾಟಕ ರಾಜ್ಯದ ಮೀನುಗಾರಿಕಾ ಇಲಾಖೆಯ ೨೦೧೫-೧೬ನೇ ಸಾಲಿನ ಅಂಕಿ ಅಂಶಗಳ ವರದಿ.
- ಉಡುಪಿ ಜಿಲ್ಲಾ ಅಂಕಿ ಸಂಖ್ಯೆಗಳ ಪಕ್ಷಿನೋಟ ೨೦೧೫-೧೬.
- ಉಡುಪಿ ಜಿಲ್ಲೆಯ ಚುನಾವಣಾ ಶಾಖೆಯ ೨೦೧೫-೧೬ ರ ಸಾಲಿನ ವರದಿ.
- ಚಂದ್ರಶೇಖರ್ ಟಿ.ಆರ್., ೨೦೦೮, *'ಲಿಂಗ ಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು'* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ ಸಂಖ್ಯೆ ೩೦-೩೧.
- ಮೀನಾಕ್ಷಿ ಎಸ್, ಎನ್, ೨೦೧೨, *'ವುಮೆನ್ ಎಂಟರ್‌ಪ್ರಿನರ್‌ಶಿಪ್, ಇಶ್ಯೂಸ್-ಚಾಲೆಂಜಸ್ ಮಹಾಪಾತ್ರ್',* ಸದರ್ನ್ ಎಕಾನಮಿಸ್ಟ್, ೧ ಜನವರಿ. ವಾಲ್ಯುಂ ೫೦, ನಂ. ೧೭, ಪುಟ ಸಂಖ್ಯೆ ೧೧-೧೪.
- ಮಸ್ತಾನ್ ವಾಲಿ, ೨೦೦೨, *'ವುಮನ್ ಆಂಡ್ ಪಾಲಿಟಿಕ್ಸ್'* ಅನಮೋಲ್ ಪಬ್ಲಿಕೇಶನ್, ಪಿವಿಟಿ.ಎಲ್‌ಟಿಡಿ, ೪೩೭೪/೪ಬಿ, ಅನಸಾರಿ ರೋಡ್ ದರಿಯಾಗಂಜ್, ನ್ಯೂ ಡೆಲ್ಲಿ, ಪುಟ ಸಂಖ್ಯೆ ೪೫-೫೦.

ಅಧ್ಯಾಯ ಎರಡು

ಮಹಿಳಾ ಅಭಿವೃದ್ಧಿ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ

೨.೧. ಈ ವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

೨.೨. ಮಹಿಳಾ ಸಬಲೀಕರಣದ ಅಂಶಗಳು ಹಾಗೂ ಸಂಬಂಧಿಸಿದ ಜ್ಞಾನ ರಾಶಿಯ ವಿಶ್ಲೇಷಣೆಗಳು

೨.೩. ರಾಜಕೀಯದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ ಸಾಧ್ಯತೆಗಳ ಅವಲೋಕನ

ಅಧ್ಯಾಯ ೨

ಮಹಿಳಾ ಅಭಿವೃದ್ಧಿ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ

ಈ ವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಯಾವುದೇ ಒಂದು ಸಂಶೋಧನೆಯು ಪೂರ್ಣವಾಗಬೇಕಾದರೆ, ಅದು ಒಂದು ಕ್ಷೇತ್ರದ ಪ್ರದೇಶಕ್ಕೆ ಸೀಮಿತವಾಗಿರದೆ ಅದಕ್ಕೆ ಸಂಬಂಧಿಸಿದ ಹಲವಾರು ಕ್ಷೇತ್ರಗಳನ್ನು ಗಮನಿಸಿ ಅಲ್ಲಿ ದೊರೆಯುವ ಮತ್ತು ಸಂಶೋಧನೆಗೆ ಪೂರಕವಾದ ವಿಷಯಗಳನ್ನು ದಾಖಲೆಗಳ ಮೂಲಕ ಸಂಗ್ರಹಿಸ ಬೇಕಾಗುತ್ತದೆ. ಈ ದಾಖಲೆಗಳ ಮೂಲಕ ಕೆಲವೊಂದು ವಿಷಯಗಳನ್ನು ಹಾಗೂ ಕೆಲವೊಮ್ಮೆ ದಾಖಲೆಗಳಿಲ್ಲದೇ ವ್ಯಕ್ತಿಗಳಿಂದ ನೇರವಾಗಿ ಆಡು ಭಾಷೆಯಲ್ಲಿ ಹಲವಾರು ಮಾಹಿತಿಗಳು ದೊರಕುತ್ತವೆ. ಅಂತಹ ವಿಷಯುಗಳು ಕೂಡ ಸಂಶೋಧನೆಗೆ ಸಹಾಯಕವಾಗುತ್ತವೆ. ಅಧ್ಯಯನಕ್ಕೆ ಅಗತ್ಯವಾದ ಸಾಹಿತ್ಯ ಕೃತಿಗಳು, ಹಲವು ಲೇಖಕರು ಪ್ರಕಟಿಸಿರುವಂತಹ ಲೇಖನಗಳು, ಸಂಶೋಧನಾ ಗ್ರಂಥಗಳು, ಪ್ರಕರಣ ಅಧ್ಯಯನಗಳು, ವಿಚಾರ ಸಂಕಿರಣಗಳಲ್ಲಿ ಚರ್ಚಿಸಲಾದ ಹಲವಾರು ಮಾಹಿತಿಗಳು ಮತ್ತು ಸರ್ಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಸಂಘ-ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳಿಂದ ಪಡೆದು ಕೊಂಡಂತಹ ಅಂಕಿ ಅಂಶಗಳ ಮಾಹಿತಿಗಳೆಲ್ಲವೂ ಈ ಸಂಶೋಧನೆಗೆ ಅಗತ್ಯವಾದವುಗಳೆಂದು ಪರಿಗಣಿಸಿಕೊಂಡು ಇವುಗಳಲ್ಲಿ ಅಗತ್ಯವಾದ ಮತ್ತು ಮುಖ್ಯವಾದ ಅಂಕಿ ಅಂಶಗಳ ಹಾಗೂ ಮಾಹಿತಿಗಳನ್ನು ಬಳಸಿಕೊಂಡು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇದರಲ್ಲಿ ಎರಡು ಭಾಗಗಳಿವೆ. ಭಾಗ ಒಂದು, ಮಹಿಳಾ ಸಾಮಾಜಿಕ, ಆರ್ಥಿಕ, ಕೌಟುಂಬಿಕ ಸ್ಥಿತಿಗತಿಗಳು, ಲಿಂಗ ಅಸಮಾನತೆಯ ಅಂಶಗಳಿಗೆ ಸಂಬಂಧಿಸಿದ ಚರ್ಚೆಗಳಿಗೆ ಗಮನ ಕೊಟ್ಟಿದೆ. ಭಾಗ ಎರಡು ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಅದರಿಂದಾಗಬಹುದಾದ ಮಹಿಳಾಭಿವೃದ್ಧಿಯ ಬಗ್ಗೆ ಅಸ್ತಿತ್ವದಲ್ಲಿರುವ ಸಾಹಿತ್ಯದ ಮೇಲೆ ಗಮನವಿರಿಸಿದೆ.

೨.೧. ಮಹಿಳಾ ಸಬಲೀಕರಣದ ಅಂಶಗಳು ಹಾಗೂ ಸಂಬಂಧಿಸಿದ ಜ್ಞಾನ ರಾಶಿಯ ವಿಶ್ಲೇಷಣೆಗಳು

ಈ ಭಾಗದಲ್ಲಿ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರ ಕೌಟುಂಬಿಕ, ಸಾಮಾಜಿಕ ಹಾಗೂ ಅರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಸಾಹಿತ್ಯ ಮಾಹಿತಿಗಳನ್ನು ಚರ್ಚೆ ನಡೆಸಲಾಗಿದೆ. ಮಹಿಳಾ ಸಮಾನತೆ ನಿಜವಾದ ಅರ್ಥದಲ್ಲಿ ಸಾಧಿಸಲ್ಪಟ್ಟಿದೆಯೇ ಎಂಬುದನ್ನು ತಿಳಿಯುವ ಪ್ರಯತ್ನ ಇಲ್ಲಿದೆ.

ಅಭಿವೃದ್ಧಿಯ ಮೂಲ ಪರಿಕಲ್ಪನೆ ಸಮಾಜದ ಉನ್ನತಿಯ ಕಡೆಗಿದೆ. ಅಭಿವೃದ್ಧಿಯು ಹಲವು ತರದ ವಿಶ್ಲೇಣೆಗಳಿಗೆ ಎಡೆಮಾಡಿಕೊಟ್ಟಿದ್ದು, ಅದರ ದ್ವೇಷಿಗಳೂ ಇದ್ದಾರೆ ಹಾಗೂ ಅದನ್ನು ಪ್ರೀತಿಸುವವರೂ ಇದ್ದಾರೆ. ಅಭಿವೃದ್ಧಿಯನ್ನು ಎಲ್ಲಾ ರಾಷ್ಟ್ರಗಳಲ್ಲಿ ಸಮಾನವಾಗಿ ಪರಿಭಾವಿಸಿಕೊಂಡಿಲ್ಲ. ಬಹಳಷ್ಟು ಸಾಮಾಜಿಕ ಪರಿವರ್ತನೆಗಳಾಗಿದ್ದರೂ ಇಂದಿಗೂ ಅಭಿವೃದ್ಧಿ ಬೆಳವಣಿಗೆಯ ಮುಖ್ಯ

ಆಧಾರವಾಗಿ ಉಳಿದುಕೊಂಡಿರುವುದು ಸತ್ಯ. ಮಹಿಳಾಭಿವೃದ್ಧಿಯನ್ನು ಸಾಧಿಸಬೇಕಾದಲ್ಲಿ ಕೌಟುಂಬಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಸಬಲೀಕರಣದ ಅಗತ್ಯತೆಯಿರುವುದನ್ನು ಎಲ್ಲಾ ಅಭಿವೃದ್ಧಿಯ ಅಧ್ಯಯನಗಳಲ್ಲೂ ಗುರುತಿಸಲಾಗಿದೆ.

ಮಹಿಳೆಯರು ಕುಟುಂಬದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದು ಅವರು ಉತ್ಪಾದನೆ, ಪುನುರುತ್ಪಾದನೆ ಹಾಗೂ ಸಾಮಾಜಿಕ ಕಾರ್ಯ ಹೀಗೆ ಮೂರು ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಶ್ರೀಮತಿ ಎಚ್.ಎಸ್ (೨೦೦೨) ರ ಪ್ರಕಾರ ಉತ್ಪಾದನಾ ಕ್ಷೇತ್ರದಲ್ಲಿ ಮಹಿಳೆಯ ಪಾತ್ರ ಅಗೋಚರವಾಗಿದೆ. ಒಳ್ಳೆಯ ಆದಾಯ ಹಾಗೂ ಗೌರವಯುತ ವೃತ್ತಿಯಲ್ಲಿ ಮಹಿಳೆ ತೊಡಗಿದ್ದರೂ ಆಕೆಗೆ ಗೃಹಕೃತ್ಯದ ಜವಾಬ್ದಾರಿಗಳಿಂದ ಮುಕ್ತಿ ಇರುವುದಿಲ್ಲ. ಈ ಕಾರಣದಿಂದಾಗಿ ಮಹಿಳೆಗೆ ತನ್ನ ಸ್ವಹಿತದ ಬಗ್ಗೆ ಹಾಗೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಸಮಯವೇ ಸಿಗುವುದಿಲ್ಲ. ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಿಗೂ ಈ ಕೌಟುಂಬಿಕ ಒತ್ತಡದ ಸಮಸ್ಯೆ ಇದೆ. ಅವರು ಮೀನುಗಾರಿಕಾ ವೃತ್ತಿಯಂತಹ ಧೀರ್ಘಾವಧಿ ಕೆಲಸದಲ್ಲಿದ್ದರೂ ಗೃಹಕೃತ್ಯವನ್ನು ನಿಭಾಯಿಸಬೇಕಾದ ಅನಿವಾರ್ಯತೆ ಇದೆ. ಹೆಚ್ಚಿನ ಸಂದರ್ಭಗಳಲ್ಲಿ ಮದುವೆಯಾದ ನಂತರ ಮಹಿಳೆಗೆ ತನ್ನ ಸ್ವ ಅಭಿವೃದ್ಧಿಯ ಬಗ್ಗೆ ಯೋಚನೆ ಮಾಡಲು ಸಮಯವೇ ಸಿಗುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳೆಯ ಸಾಧನೆಗಳನ್ನು ಕುಟುಂಬ ಗುರುತಿಸುವ ಕ್ರಮ ಅಲ್ಲಲ್ಲಿ ಕಂಡು ಬರುತ್ತಿದೆ. ಇದನ್ನು ಸಾಮಾಜಿಕ ಪರಿವರ್ತನೆಯೆಂದೆ ಪರಿಗಣಿಸಬಹುದಾಗಿದೆ. ಕ್ಯಾಮರೋನ್ (೨೦೦೧)ರವರ *'ಎಜುಕೇಶನ್ ಆ್ಯಂಡ್ ಲೇಬರ್ ಮಾರ್ಕೆಟ್ ಪಾರ್ಟಿಸಿಪೇಶನ್ ಆಫ್ ವುಮೆನ್ ಎಷಿಯಾ'* ಮತ್ತು ಖಂಡೇಕ್ (೧೯೮೮) ರವರ *'ಫೈಟಿಂಗ್ ಪಾವರ್ಟಿ ವಿತ್ ಮೈಕ್ರೊ ಕ್ರೆಡಿಟ್: ಎಕ್ಸ್‌ಪೀರಿಯನ್ಸ್ ಇನ್ ಬಾಂಗ್ಲದೇಶ್'* ಎಂಬ ಅಧ್ಯಯನದಲ್ಲಿ ಮಹಿಳಾ ಶಿಕ್ಷಣದ ಮೂಲಕ ಮಹಿಳೆಯರು ಉದ್ಯೋಗ ಪಡೆದು ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿರುವ ಬಗ್ಗೆ, ಹಾಗೆಯೇ ಮದುವೆಯಾದ ನಂತರ ಮಹಿಳೆಯರ ಪತಿಯು ತನ್ನ ಪತ್ನಿಯು ಉನ್ನತ ಶಿಕ್ಷಣವನ್ನು ಮಾಡುವುದನ್ನು ಹೆಚ್ಚಿನ ಸಂದರ್ಭದಲ್ಲಿ ಪ್ರೋತ್ಸಾಹಿಸುತ್ತಾರೆ ಎಂಬುದನ್ನು ಉಲ್ಲೇಖಿಸುತ್ತಾರೆ. ಮಹಿಳಾ ಶಿಕ್ಷಣದಿಂದಾಗಿ ಮಹಿಳೆಯರು ಉದ್ಯೋಗದಲ್ಲಿ ಭಾಗಿಯಾಗುವ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡು ತಮ್ಮ ಕುಟುಂಬದ ಏಳಿಗೆಯಲ್ಲಿ ಪಾತ್ರಧಾರಿಗಳಾಗಿರುವ ಬಗ್ಗೆ ಸಂತಸವನ್ನು ವ್ಯಕ್ತಪಡಿಸಿರುವುದನ್ನು ಈ ಅಧ್ಯಯನದಲ್ಲಿ ಗಮನಿಸಲಾಗಿದೆ. ಹಾಗೆಯೇ ಮಹಿಳೆಯು ಉನ್ನತ ಶಿಕ್ಷಣವನ್ನು ಪಡೆಯುವಲ್ಲಿ ಪತಿಯಿಂದ ಸಿಗುವ ಸಂಪೂರ್ಣ ಪ್ರೋತ್ಸಾಹ ಅಗತ್ಯತೆಯ ಬಗ್ಗೆ ತಿಳಿಸಿರುತ್ತಾರೆ. ಇಲ್ಲಿ ಮಹಿಳೆಗೆ ಪತಿ ನೀಡುವ ಪ್ರೋತ್ಸಾಹವು ಮಹಿಳಾಭಿವೃದ್ಧಿಯ ಮೇಲೆ ಧನಾತ್ಮಕ ಪರಿಚಯ ಬೀರಬಲ್ಲದ್ದಾಗಿದೆ. ಮಹಿಳೆಯರು ಉದ್ಯೋಗ ಗಳಿಸಿದಾಗ ಅವರಲ್ಲಿ ಸಂತೃಪ್ತಿ ಹಾಗೂ ಸ್ವಾಭಿಮಾನ ಬೆಳೆಯುತ್ತದೆ. ಉದ್ಯೋಗಸ್ಥ ಮಹಿಳೆಯರು ಉದ್ಯೋಗರಹಿತ ಮಹಿಳೆಯರಿಗಿಂತ ಹೆಚ್ಚು ತೃಪ್ತರಾಗಿರುವುದು ಸಮೀಕ್ಷೆಗಳಲ್ಲಿ ಕಂಡುಬರುತ್ತಿದೆ. ಹಾಗೂ ಸುಗುಣ, (೨೦೦೧) ರವರ *'ವುಮೆನ್ಸ್ ಎಂಪವರ್‌ಮೆಂಟ್: ಕಾನ್ಸೆಪ್ಟ್ ಆ್ಯಂಡ್ ಫ್ರೇಮ್‌ವರ್ಕ್'* ಅಧ್ಯಯನದಲ್ಲಿ ತಿಳಿಸಿರುವಂತೆ, ಶೈಕ್ಷಣಿಕವಾಗಿ

ಮುಂದುವರಿದ ಉದ್ಯೋಗಿ ಮಹಿಳೆಯರು ಜೀವನದಲ್ಲಿ ವಿವಿಧ ಆಯಾಮಗಳಲ್ಲಿ ಸಬಲೀಕರಣಗೊಂಡು ಸ್ವ ಪ್ರತಿಷ್ಠಾಪನೆ, ಸ್ವ-ಶಿಸ್ತು, ಗುಂಪು ಆಧಾರಿತ ಚಟುವಟಿಕೆಗಳು ಮತ್ತು ಜೀವನ ಸ್ಥಿತಿಯನ್ನು ಸುಧಾರಿಸಿಕೊಂಡು ತಮ್ಮ ಕುಟುಂಬದ ಜೊತೆ ಸಂತೋಷದಲ್ಲಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಉದ್ಯೋಗಸ್ಥ ಮಹಿಳೆಯರನ್ನು ಕೇಂದ್ರೀಕರಿಸಿ ನಡೆಸಿದ ಅಧ್ಯಯನದಲ್ಲಿಯೂ ಇದೇ ಮಾಹಿತಿ ಹೊರಬಿದ್ದಿದೆ. ಶಕುಂತಳ (೨೦೧೧) ರವರ ಅಧ್ಯಯನವು ಮಹಿಳೆಯಲ್ಲಿ ಉದ್ಯೋಗವು ಕೇವಲ ಹಣವನ್ನು ಮಾತ್ರ ನೀಡುವುದಲ್ಲದೆ ಸವಾಲುಗಳನ್ನು ಎದುರಿಸಬಲ್ಲ ಆತ್ಮಸ್ಥೈರ್ಯವನ್ನು ಒದಗಿಸುತ್ತದೆ ಎಂದಿದೆ. ಲಲಿತಾ ದೇವಿ (೧೯೮೨) ರವರ *'ಸ್ಟೇಟಸ್ ಆ್ಯಂಡ್ ಎಂಪ್ಲಾಯ್‌ಮೆಂಟ್ ಆಫ್ ವುಮೆನ್ ಇನ್ ಇಂಡಿಯಾ'* ಎಂಬ ಅಧ್ಯಯನದಲ್ಲಿ ಉದ್ಯೋಗವು ಹೊಸ ಉದ್ಯೋಗ ಅವಕಾಶವನ್ನು ನೀಡುವುದಲ್ಲದೆ ಹೊಸ ಪಾತ್ರವನ್ನು ನಿರ್ವಹಿಸಲು, ಹೊಸ ಜನರೊಂದಿಗೆ ಪ್ರತಿಕ್ರಿಯಿಸಲು ಮತ್ತು ಹೊಸ ಪರಿಸ್ಥಿತಿಯನ್ನು ನಿಭಾಯಿಸಲು ಸಹಾಯ ಮಾಡುತ್ತದೆ. ಮನೆಯಿಂದ ಹೊರಗಡೆ ಹೋಗಿ ದುಡಿಯುವುದು ಮತ್ತು ಹೊಸ ಸವಾಲುಗಳನ್ನು, ಹೊಸ ಜನರನ್ನು ನಿಭಾಯಿಸುವಲ್ಲಿ ಮಹಿಳೆಯ ಸ್ವ ವಿಶ್ವಾಸವನ್ನು ಹೆಚ್ಚಿಸುವಲ್ಲಿ ಉದ್ಯೋಗವು ಪರಿಣಾಮಕಾರಿಯಾದ ಪ್ರಭಾವ ಬೀರುತ್ತದೆ.

೧೯೭೦ರ ತನಕ ಅಭಿವೃದ್ಧಿಯು ಮಹಿಳೆಯರನ್ನು ಅಭ್ಯುದಯ ಕೋನದಲ್ಲಿ ಪರಿಗಣಿಸಿತು. ಆಕೆಯ ಪಾತ್ರವನ್ನು ಕೇವಲ ಸಾಂಪ್ರದಾಯಿಕವಾಗಿ ಅಂದರೆ ತಾಯಿಯಾಗಿ, ಹೆಂಡತಿಯಾಗಿ, ಬಂಧುವಾಗಿ ಗುರುತಿಸಿತು. ಮಕ್ಕಳನ್ನು ಪಡೆಯುವುದು ಮತ್ತು ಬೆಳೆಸುವುದು ಮಹಿಳೆಯರ ಏಕೈಕ ಗುರಿ ಎಂಬುದಾಗಿ ತಿಳಿಯಲಾಗಿತ್ತು. ಈ ಹಂತದಲ್ಲಿ ಅಭಿವೃದ್ಧಿಯ ಲಾಭಗಳು ಸ್ವಯಂ ಆಗಿ ಬಡವರಿಗೆ ಸುರಿಯುತ್ತದೆ ಎಂಬುದಾಗಿ ಭಾವಿಸಲಾಗಿದೆ. ಯಾವುದೇ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳದ ಮಹಿಳೆಯರ ಆರ್ಥಿಕ ಸುಧಾರಣೆಯಾಗಬೇಕಾದರೆ ಅವರ ಗಂಡಂದಿರ ಆದಾಯ ಮತ್ತು ಆರ್ಥಿಕ ಮಟ್ಟ ಏರಬೇಕಾಗುತ್ತದೆ. ಸಾಮಾನ್ಯವಾಗಿ ಬಡವರಲ್ಲಿ ಪುರುಷರು ಮದ್ಯಪಾನದಂತಹ ದುಶ್ಚಟಗಳಿಗೆ ಬಲಿ ಬೀಳುವುದರಿಂದಾಗಿ ಅವರನ್ನು ಅವಲಂಬಿಸಿರುವ ಮಹಿಳೆಯರ ಜೀವನ ಮಟ್ಟವೂ ಕುಸಿಯುತ್ತದೆ. ಸಮಾಜದ ವಾಸ್ತವವನ್ನು ತಿಳಿಯುವಲ್ಲಿ ಹಲವು ಅಧ್ಯಯನಗಳು ಸಹಕರಿಯಾಗುತ್ತವೆ. ರೂಪ ಹಾಸನ (೨೦೧೫) ರವರು ತಮ್ಮ ಕೃತಿಯು ಆರ್ಥಿಕ ಕ್ಷೇತ್ರಗಳಲ್ಲಿ ವಿಜ್ಞಾನ ತಂತ್ರಜ್ಞಾನಗಳ ಯಥೇಚ್ಛ ಬಳಕೆ, ರಾಜಕೀಯ ಕ್ಷೇತ್ರಗಳಲ್ಲಿ ಆಧುನಿಕ ಸಂಸ್ಥೆಗಳು ಪ್ರವೇಶವಾದರೂ ಸಹ ಇವು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಬದುಕನ್ನು ಸಂಪೂರ್ಣವಾಗಿ ಬದಲಾಯಿಸಿಲ್ಲ. ವಿದ್ಯೆಯಲ್ಲಿ, ಉದ್ಯೋಗದಲ್ಲಿ, ಹಣಕಾಸಿನಲ್ಲಿ, ಆಸ್ತಿಪಾಸ್ತಿಯಲ್ಲಿ ಸ್ಥಾನಮಾನಗಳಲ್ಲಿ, ಅಧಿಕಾರದ ಹಿಂದಿನ ಸಮಾಜದಲ್ಲಿ ಏಣಿಯಲ್ಲಿ ಬುಡದಲ್ಲಿರುವವರು ಇಂದು ಕೂಡ ಏಣಿಯ ಕೆಳಹಂತದಲ್ಲೇ ಇದ್ದಾರೆ. ಮಾರುಕಟ್ಟೆ ಎಲ್ಲವನ್ನು ನಿರ್ಧರಿಸುತ್ತದೆ ಎನ್ನುವ ಇಂದಿನ ಸಂದರ್ಭಗಳಲ್ಲೂ ಜಾತಿ ಕೆಲಸ ಮಾಡುತ್ತಿದೆ. ಮಹಿಳಾ ಸ್ಥಾನಮಾನದಲ್ಲಿ ಕೂಡ ವಿಶೇಷ ಬದಲಾವಣೆಗಳಾಗಿಲ್ಲ. ನಮ್ಮ ಇಡೀ ಸಂಸ್ಕೃತಿಯೇ ಮಹಿಳೆಯ ಮೇಲೆ ನಿಂತಿದೆ ಎನ್ನುವ ಚಿತ್ರಣ ಇದೆ, ಈ ಚಿತ್ರಣವೇ ಮಹಿಳೆಯ ಸ್ವಾತಂತ್ರ್ಯ, ಸಮಾನತೆ, ಸ್ವಾಯತ್ತತೆಗಳನ್ನು ನುಂಗಿ ನೀರು ಕುಡಿಯುತ್ತಿದೆ. ಸಂಸ್ಕೃತಿಯಲ್ಲಿನ ಲಿಂಗ

ತಾರತಮ್ಯಗಳು ಅಭಿವೃದ್ಧಿಯ ಅವಕಾಶಗಳಲ್ಲಿ ಒಂದಾದ ಶಿಕ್ಷಣ, ಆರೋಗ್ಯ ಉದ್ಯೋಗ ಇತ್ಯಾದಿಗಳನ್ನು ಬಳಸಿಕೊಳ್ಳಲು ಅಡ್ಡಿಯಾಗುತ್ತಿದೆ. ಅಷ್ಟೇ ಅಲ್ಲದೇ ಪೌಷ್ಟಿಕ ಆಹಾರವು ಮನೆ ಹೊರಗೆ ಕಠಿಣ ದುಡಿಮೆ ಮಾಡುವ ಗಂಡಸಿಗೆ ಮಾತ್ರ ಎನ್ನುವ ಧೋರಣೆ, ಇಂದಲ್ಲ ನಾಳೆ ಮದುವೆಯಾಗಿ ಇನ್ನೊಂದು ಮನೆ ಸೇರಬೇಕಾದ ಹೆಣ್ಣು ಮಕ್ಕಳಿಗ್ಯಾಕೆ ಹೆಚ್ಚು ವೆಚ್ಚದ ಉನ್ನತ ಶಿಕ್ಷಣ ಅನ್ನುವ ಮನೋಭಾವಗಳು ಮಹಿಳಾ ಅಭಿವೃದ್ಧಿಗೆ ತೊಡಕಾಗಿವೆ. ಲಿಂಗ ತಾರತಮ್ಯವನ್ನು ತನ್ನ ಒಡಲೊಳಗೆ ತುಂಬಿಕೊಂಡಿರುವ ಸಂಸ್ಕೃತಿ ಹಾಗೂ ಅಭಿವೃದ್ಧಿಯಲ್ಲಿ ಬದಲಾವಣೆಯಾಗಬೇಕಾದರೆ ಸಾಂಸ್ಕೃತಿಕ ಲೋಕದಲ್ಲೂ ಲಿಂಗ ಸಮಾನತೆ ಸಮರ್ಥವಾಗಿ ಆಚರಣೆಗೆ ಬರಬೇಕಾಗಿದೆ ಎಂಬುದನ್ನು ಉಲ್ಲೇಖಿಸುತ್ತದೆ.

ಜಾಗತಿಕವಾಗಿ ಮಹಿಳೆಯರ ಸ್ಥಿತಿಗತಿಗಳನ್ನು ಅಧ್ಯಯನ ನಡೆಸುವ ಸಲುವಾಗಿ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಲ್ಲಿ ಮಹಿಳೆಯರ ಮೇಲೆ ಬೋಪರಪ್ಸ್ ನಡೆಸಿದ ಅಧ್ಯಯನ ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರದ ಮೇಲೆ ಕೇಂದ್ರೀಕರಿಸಿದೆ. ನೂತನ ವಿಮೋಚನಾ ರಾಷ್ಟ್ರಗಳಲ್ಲಿ ೧೯೬೦-೧೯೭೦ರ ದಶಕಗಳು 'ಅಭಿವೃದ್ಧಿಯ ದಶಕ'ವೆಂದು ಪರಿಗಣಿಸಿ ಐದು ಶೇಕಡಾ ಅಭಿವೃದ್ಧಿಯ ವಿಷಯ ಸೂಚಿಯೊಂದಿಗೆ ವಿಶ್ವಸಂಸ್ಥೆ ಆಚರಿಸಿದೆ. ಆದರೆ ಇಲ್ಲಿ ಮಹಿಳಾ ಅಭಿವೃದ್ಧಿಗೆ ಪ್ರತ್ಯೇಕ ಕ್ರಮಗಳಿರಲಿಲ್ಲ. ೧೯೭೫ರ ಜೂನ್ ೧೯ ರಿಂದ ಜುಲೈ ೨ ರ ತನಕ ಮೇಕ್ಸಿಕೋದಲ್ಲಿ ಯುಎನ್‌ಒ ವತಿಯಿಂದ ನಡೆದ ವಿಶ್ವ ಯೋಜನಾ ಅನುಷ್ಠಾನ, ಅಭಿವೃದ್ಧಿಯ ಮೂರು ಅಂತರ್‌ಸಂಬಂಧಿ ಅಂಶಗಳಾದ, ಸಮಾನತೆ, ಅಭಿವೃದ್ಧಿ ಮತ್ತು ಶಾಂತಿ, ಇದರ ಮೇಲೆ ಕೇಂದ್ರೀಕರಿಸಿತು. ಮುಂದಿನ ಹತ್ತು ವರ್ಷಗಳು ಮಹಿಳಾ ದಶಕವೆಂದು ಘೋಷಣೆಯನ್ನು ಸಮರ್ಥಿಸಿಕೊಂಡಿತು. ಈ ಘೋಷಣೆಗಳ ಹೊರತಾಗಿಯೂ ಕೊಪೆನ್‌ಹೇಗನ್‌ನಲ್ಲಿ ನಡೆದ ಸಮ್ಮೇಳನ ಮಹಿಳೆಯರ ಸ್ಥಾನ ಅವನತಿ ಹೊಂದಿದೆ ಎಂದು ವೀಕ್ಷಿಸಿದೆ. ಕೆಲ ರಾಷ್ಟ್ರಗಳಲ್ಲಿ ಮಹಿಳೆಯರ ಶೈಕ್ಷಣಿಕ ಮತ್ತು ಔದ್ಯೋಗಿಕ ಸ್ಥಿತಿಗಳು ಮತ್ತಷ್ಟು ಹದಗೆಟ್ಟಿವೆ. ಅಭಿವೃದ್ಧಿಯ ಈ ತಪ್ಪುಗಳನ್ನು ತಿದ್ದಲು ಸಮ್ಮೇಳನ, ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ನಿಯೋಗಿಯಾಗಿ, ಲಾಭಗಳಿಸುವರಾಗಿ ಮಹಿಳೆಯರ ಭಾಗವಹಿಸುವಿಕೆಯ ಮಹತ್ವದ ಮೇಲೆ ಕೇಂದ್ರೀಕೃತವಾಗಬೇಕೆಂದು ಘೋಷಿಸಿದೆ. ನೈರೋಬಿಯಾದಲ್ಲಿ ನಡೆದ ತೃತೀಯ ವಿಶ್ವ ಮಹಿಳಾ ಸಮ್ಮೇಳನ, ಮಹಿಳೆಯರನ್ನು ಇನ್ನು ಮುಂದೆ ರೋಗಿಗಳೆಂದು ಮನ್ನಿಸಲಾಗದು, ಅಭಿವೃದ್ಧಿಯ ನಿಯೋಗಿಗಳೆಂದು ಮನ್ನಿಸಬೇಕೆಂದು ಘೋಷಿಸಿದೆ. ಸಮಗ್ರ ವಿಶ್ವದ ಪರಿಸ್ಥಿತಿ ನಾಟಕೀಯ ಬದಲಾವಣೆ ಹೊಂದಿದ್ದು, ೧೯೯೫ ರ ಬೀಜಿಂಗ್‌ನಲ್ಲಿ ನಡೆದ ನಾಲ್ಕನೇ ಮಹಿಳಾ ವಿಶ್ವ ಸಮ್ಮೇಳನದಲ್ಲಿ ಅದರ ಚರ್ಚೆ ನಡೆದಿತ್ತು. ಬೀಜಿಂಗ್ ಅನುಷ್ಠಾನದ ವೇದಿಕೆ, ಸಮಾಜಕ್ಕೆ ತನ್ನ ಕೇಂದ್ರ ಗಮನವನ್ನು ಬದಲಿಸುತ್ತಾ ಮತ್ತು ಮಹಿಳಾ ವಿಚಾರಗಳು ಸಮಾಜಕೀಯ ವಿಷಯ ಸೂಚಿಯ ಅವಿಭಾಜ್ಯ ಭಾಗವೆಂದು ಗುರುತಿಸಿದೆ. ಈ ಪ್ರಕಾರವಾಗಿ, ಅಭಿವೃದ್ಧಿಯು ಮಹಿಳೆಯರಿಗೆ ದೊರಕುವ ಜೀವನ ಗುಣಮಟ್ಟದ ಅಳತೆಗೋಲು ಮತ್ತು ಅವರ ಬಲವರ್ಧನೆಯೆಂದು ಹೇಳಬಹುದು. ಮಹಿಳೆಯರನ್ನು ಆರ್ಥಿಕ ಅಭಿವೃದ್ಧಿಯಲ್ಲಿ ಒಳಪಡಿಸಿಕೊಳ್ಳಲು ಸ್ತ್ರೀವಾದ ಹಾಗೂ

ಮಹಿಳಾ ಸಮಾಜವಾದದ ವಿವಿಧ ಮಾದರಿಗಳು ಹಾಗೂ ಸಿದ್ಧಾಂತಗಳು ಜಾಲ್ತಿಗೆ ಬಂದವು. ಅಭಿವೃದ್ಧಿಯಲ್ಲಿ ಮಹಿಳೆ, ಸ್ತ್ರೀ ಸಮಾನತಾವಾದಗಳು ಪುರುಷ ಮತ್ತು ಮಹಿಳೆಯರ ನಡುವಿನ ಅಸಮಾನತೆಯನ್ನು ಚರ್ಚಿಸಿ ಮಹಿಳೆಗೆ ಆರ್ಥಿಕಾಭಿವೃದ್ಧಿಯಲ್ಲಿ ಸಮಾನ ಗೌರವ ನೀಡುವ ಬಗ್ಗೆ ಕೆಲಸ ಮಾಡಿದೆ. ಮಹಿಳಾಪರ ಚಳುವಳಿಗಳು ನೂತನ ಶಕೆಗೆ ಮಹಿಳೆಯರೊಂದಿಗೆ ಅಭಿವೃದ್ಧಿ ಬದಲಿಗಳು ಎಂಬ ಜಾಲದ ಸೃಷ್ಟಿಗೆ ಕಾರಣವಾಗಿ ಸೆನ್, ಪುರ್ನ (೧೯೯೯) ರವರ *'ಎನ್‌ಹ್ಯಾನ್ಸಿಂಗ್ ವುಮೆನ್ಸ್ ಚಾಯ್ಸಸ್ ಇನ್ ರೆಸ್ಪೋಂಡಿಂಗ್ ಟು ಡೊಮೆಸ್ಟಿಕ್ ವಯಲೆನ್ಸ್ ಇನ್ ಕಲ್ಕತ್ತಾ: ಎ ಕಂಪ್ಯಾರಿಸನ್ ಆಫ್ ಎಂಪ್ಲಾಯ್‌ಮೆಂಟ್ ಆ್ಯಂಡ್ ಎಜುಕೇಶನ್'* ಎಂಬ ಅಧ್ಯಯನದಲ್ಲಿ ಪುರುಷ ಮತ್ತು ಮಹಿಳೆ ಅಭಿವೃದ್ಧಿಯಲ್ಲಿ ಪರಸ್ಪರ ಅವಲಂಬಿತರು ಎಂಬ ಅಂಶಕ್ಕೆ ಒತ್ತು ನೀಡಲಾಗಿದೆ.

ಆಧುನೀಕರಣದ ವಿಮರ್ಶಾತ್ಮಕ ಸಾಹಿತ್ಯಗಳಲ್ಲಿ ಸಾರ್ವಜನಿಕ ಕ್ಷೇತ್ರ ಆಧುನಿಕತೆಯಿಂದ ಹುದುಗಿದ್ದು ಪುರುಷರಿಂದ ಕೂಡಿದೆ. ಖಾಸಗಿ ವಲಯವು ಸಂಪ್ರದಾಯದಿಂದ ಆವರಿಸಲ್ಪಟ್ಟಿದ್ದು ಮಹಿಳೆಯರಿಂದ ಕೂಡಿದೆ. ಆದ್ದರಿಂದಾಗಿ ಹೆಚ್ಚಿನ ಮಹಿಳಾಭಿವೃದ್ಧಿಯ ಚಿಂತನೆಗಳು ಅನೌಪಚಾರಿಕ ಸಮಾಜದ ಮೇಲೆ ಕೇಂದ್ರೀಕೃತಗೊಂಡಿವೆ. ೧೯ ನೇ ಶತಮಾನದ ಮೊದಲ ಭಾಗದಲ್ಲಿ ಶ್ರೀಮಂತ ವರ್ಗಗಳು ಮಹಿಳೆಯರ ಪಾತ್ರವನ್ನು ಗೌಣವಾಗಿಸಿ ಶಾಸ್ತ್ರೀಯ ಅಭಿವೃದ್ಧಿ ಮಾದರಿಗಳಿಗೆ ಹೆಚ್ಚು ಒತ್ತು ನೀಡಿದವು. ಅದರ ಪರಿಣಾಮವಾಗಿ ಆರ್ಥಿಕ ಸಂಪನ್ಮೂಲಗಳೆಲ್ಲವೂ ಶ್ರೀಮಂತ ಹಾಗೂ ಪುರುಷ ವರ್ಗಕ್ಕೆ ಸೀಮಿತಗೊಂಡು ಬಡವರ್ಗಕ್ಕೆ ಹಾಗೂ ಶೋಷಿತ ಮಹಿಳಾ ವರ್ಗಕ್ಕೆ ಹಂಚಲು ಏನೂ ಉಳಿದಿಲ್ಲವೆಂಬತಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸಮಾಜದ ಎಲ್ಲಾ ಸ್ತರಗಳಲ್ಲಿಯೂ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯನ್ನೊಳಪಡಿಸುವ ಉದ್ದೇಶವು ಈಡೇರುವಲ್ಲಿ ವಿಫಲವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಮಹಿಳಾ ಪರ ಚಿಂತನೆಗಳು ಬಲವಾಗಿದ್ದರೂ ಇಂದಿಗೂ ಲಿಂಗ ಅಸಮಾನತೆಯು ಸಮಾಜದಲ್ಲಿ ಅಸ್ತಿತ್ವವನ್ನು ಹೊಂದಿ ಕೌಟುಂಬಿಕವಾಗಿಯೂ ಮಹಿಳೆಯನ್ನು ಪುರುಷರೊಂದಿಗೆ ಸರಿಸಮಾನವಾಗಿ ಕಾಣುವ ಕ್ರಮ ಸಮಾಜದಲ್ಲಿಲ್ಲ. ಈ ಸಮಾಜ ಪರಿವರ್ತನೆಯಾಗದೆ ನಿಜವಾದ ಮಹಿಳಾ ಸಬಲೀಕರಣ ಸಾಧ್ಯವಾಗಲಾರದು. ಗ್ರೀನ್ ಹಾಲ್ (೧೯೮೫) ರವರ *'ಸೆಕ್ಸ್ಯುಲ್ ಸ್ಟ್ರಾಟಿಫಿಕೇಶನ್: ದ ಅದರ್ ಸೈಡ್ ಆಫ್ ಗ್ರೋಥ್ ವಿದ್ ಇಕ್ವಿಟಿ ಇನ್ ಈಸ್ಟ್ ಏಷಿಯಾ',* ಎಂಬ ಸಂಶೋಧನಾ ವರದಿಯು ಭಾರತದ ಇತಿಹಾಸದಲ್ಲೂ ಪುರುಷ ಪ್ರಧಾನ ಸಮಾಜದ ಬಗೆಗಿನ ಒಲವು ಮತ್ತು ಹೆತ್ತವರು ಕೂಡ ಹುಡುಗಿಯರಿಗಿಂತ ಹುಡುಗರಿಂದಲೇ ರಕ್ಷಣೆ ದೊರಕುತ್ತದೆ ಎಂದು ಕುಟುಂಬದಲ್ಲಿ ಹುಡುಗರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಾರೆ ಎಂದಿದೆ. ಈ ರೀತಿಯ ಹೆಣ್ಣುಮಕ್ಕಳ ಕಡೆಗಣನೆಯ ಧೋರಣೆ ಮಹಿಳಾಭಿವೃದ್ಧಿಗೆ ಶಾಪವಾಗಿದೆ. ಈ ನಿಟ್ಟಿನಲ್ಲಿ ಮಹಿಳಾಭಿವೃದ್ಧಿಯ ಪ್ರಯತ್ನವಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಅವರ ಮೌಲ್ಯಗಳ ಬೆಳವಣಿಗೆಗೆ ಮತ್ತು ಸಮಾಜದಲ್ಲಿ ಅವರಿಗೂ ಗೌರವ ದೊರಕುವುದಕ್ಕೆ ಸಹಕಾರಿಯಾಬಹುದು ಎಂಬುದನ್ನು ಈ ಅಧ್ಯಯನದಲ್ಲಿ ಸಲಹೆಯನ್ನು ನೀಡಿದ್ದಾರೆ. ರೋಲ್ಯಾಂಡ್ಸ್ ಜೆ, (೧೯೯೭) ರವರ 'ಎಂಪವರ್‌ಮೆಂಟ್ ಇಶ್ಯೂಸ್ ಆ್ಯಂಡ್ ಚಾಲೆಂಜಸ್' *ಎಂಬ ಅಧ್ಯಯನವು* ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ

ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಿಂತ ಹೆಚ್ಚಾಗಿ ಗ್ರಹಿಸುವ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳಲು ಅರ್ಹತೆ ನೀಡುವ ಪ್ರಕ್ರಿಯೆಯಲ್ಲಿ ಒಳಗೊಳ್ಳುವುದರ ಮೂಲಕ ಸಶಕ್ತತೆಯನ್ನು ಸಾಧಿಸಬೇಕು ಎಂಬುದಾಗಿ, ಹಾಗೆಯೇ, ಮಹಿಳಾ ಸಶಕ್ತೀಕರಣವು ವೈಯಕ್ತಿಕ, ಸಂಬಂಧಿತ ಮತ್ತು ಸಾಮೂಹಿಕವಾಗಿದೆ. ಇದು ಮಹಿಳೆಯರು ಮತ್ತು ಪುರುಷರ ಮೇಲೆ ಪರಿಣಾಮ ಬೀರುವ ಅಭಿವೃದ್ಧಿಯ ಸಮಸ್ಯೆಯೂ ಆಗಿವೆ ಎಂದಿದೆ. ಭಾರತದಲ್ಲಿ ನಡೆದ ಅಧ್ಯಯನಗಳು ಮಹಿಳೆಯರ ಸ್ಥಿತಿಗತಿಗಳು ಹಾಗೂ ಸ್ಥಾನಮಾನ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬುದನ್ನು ದಾಖಲಿಸಿ ಮಹಿಳೆಯರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಆರ್ಥಿಕವಾಗಿ ಹಾಗೂ ಸಬಲೀಕರಣಗೊಳ್ಳಬೇಕೆಂಬ ಆಶಯವನ್ನು ವ್ಯಕ್ತಪಡಿಸಿವೆ. ಮಹಿಳಾ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವುದು ಹಾಗೂ ಮಹಿಳಾ ಸ್ವಾಯತ್ತತೆಗೆ ಅನುವು ಮಾಡಿಕೊಡುವುದು ಅತೀ ಪ್ರಾಮುಖ್ಯವಾದುದು ಎಂಬುದಾಗಿ ಅಧ್ಯಯನಗಳು ತೋರಿಸಿಕೊಟ್ಟಿವೆ.

ಮಹಿಳಾ ಅಭಿವೃದ್ಧಿಯನ್ನು ಸಾಧಿಸುವ ಪ್ರಯತ್ನವಾಗಿ ಅಗತ್ಯ ಅಂಶಗಳನ್ನು ಇಲ್ಲಿ ಚರ್ಚಿಸುವುದು ಅತೀ ಮುಖ್ಯ. ವಿವಿಧ ಸಮಾಜ ಪರಿವರ್ತನಾ ಅಸ್ತ್ರಗಳಲ್ಲಿ ಪ್ರಮುಖವಾದದ್ದು ಶಿಕ್ಷಣ. ಜ್ಞಾನವನ್ನು ಪಡೆದ ಮಹಿಳೆ ತನ್ನ ಸ್ವ ನಿರ್ಧಾರದೊಂದಿಗೆ, ಉತ್ತಮ ಯೋಜನೆಗಳ ಮೂಲಕ ಸುಗಮ ಜೀವನವನ್ನು ಕಟ್ಟಿಕೊಳ್ಳಲು ಶಕ್ತಳಾಗುತ್ತಾಳೆ. ಹಲವು ಅಧ್ಯಯನಗಳ ಸಾರವು ಈ ವಿಚಾರವನ್ನು ಪುಷ್ಟೀಕರಿಸುತ್ತದೆ. ಕ್ರಿಟಿಝ್ ಮತ್ತು ಮೆಕಿನ್–ಅಡೆ–ಬುಸೊಯಿ ರವರ (೧೯೯೧) *'ಯೂತ್ ಆ್ಯಂಡ್ ರಿ ಪ್ರೊಡಕ್ಟಿವ್ ಹೆಲ್ತ್ ಇನ್ ಆಫ್ರಿಕಾ'* ಎಂಬ ತಮ್ಮ ಸಂಶೋಧನಾ ಕೃತಿಯು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವು ಮಹಿಳೆಯರ ಕೌಟುಂಬಿಕ, ಸಾಮಾಜಿಕ ನಿರ್ಧಾರದ ಮೇಲೆ ಸಕಾರಾತ್ಮಕ ಪರಿಣಾಮವನ್ನು ಉಂಟು ಮಾಡಿ ದಿನನಿತ್ಯ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಬಹಳಷ್ಟು ಪರ್ಯಾಯ ಪರಿಹಾರಾತ್ಮಕ ಆಯ್ಕೆಗಳನ್ನು ನೀಡುತ್ತದೆ ಎಂದಿದೆ. ಲಿಸಾ ಜಾನ್ ರವರ ಮುಂಬಯಿಯ ಸ್ಲಂ ಪ್ರದೇಶದಲ್ಲಿನ ಮಹಿಳೆಯರ ಶಿಕ್ಷಣದ ಕುರಿತು ನಡೆಸಿರುವ ಅಧ್ಯಯನವು ಶಿಕ್ಷಣದಿಂದಾಗಿ ಮಹಿಳೆಯರಲ್ಲಿ ನಿರ್ದಿಷ್ಟ ಸಾಮಾಜಿಕ ಗುರಿಯನ್ನು ಸಾಧಿಸಲು, ಸಂಘಟನೆಗೊಳ್ಳಲು ಮತ್ತು ಸಂಯೋಜನೆಯ ಬಲವನ್ನು ಅರಿತುಕೊಳ್ಳಲು, ಸ್ವ–ವಿಶ್ವಾಸ, ಸ್ವ–ಅರಿವನ್ನು ಬಲಗೊಳಿಸುವಲ್ಲಿ ಹಾಗೂ ಮಹಿಳೆಯರು ತಮ್ಮ ಬದುಕಿನಲ್ಲಿ ಗಂಡ, ತಂದೆ, ಅಣ್ಣಂದಿರಿಂದ ಆಗುತ್ತಿರುವ ಅನ್ಯಾಯವನ್ನು ಆರಕ್ಷಕರಲ್ಲಿ ಧೈರ್ಯವಾಗಿ ತಿಳಿಸುವಷ್ಟರ ಮಟ್ಟಿಗಿನ ಬದಲಾವಣೆಗಳಾಗಿವೆ ಎಂಬುದಾಗಿ ಉಲ್ಲೇಖಿಸಿದೆ. ಕಲ್ಪಗಮ್ (೧೯೯೧) ರವರ *'ವುಮೆನ್ ವರ್ಕ್ ಆ್ಯಂಡ್ ಡೊಮೆಸ್ಟಿಕ್ ಡ್ಯೂಟಿಸ್: ಇನ್‌ಕಮ್ ಪ್ಲಾನಿಂಗ್ ಫಾರ್ ಹೌಸ್‌ವೈವ್ಸ್'* ಎಂಬ ಲೇಖನವು ಗೃಹಿಣಿಯರ ಆದಾಯದ ಯೋಜನೆ, ಶಿಕ್ಷಣ ಮತ್ತು ಉದ್ಯೋಗದ ಜೊತೆ ಮಹಿಳೆ ಹಣಕಾಸಿನ ನಿರ್ವಹಣೆಯನ್ನು ಅಶಿಕ್ಷತ ಮಹಿಳೆಗಿಂತ ಶಿಕ್ಷಿತ ಮಹಿಳೆಯರು ಕೌಶಲ್ಯಯುತವಾಗಿ ಮಾಡುವರು. ಶಿಕ್ಷಿತ ಮಹಿಳೆ ಉದ್ಯೋಗದ ಜೊತೆಗೆ ಹೇಗೆ ಗಳಿಸಿದ ಹಣವನ್ನು ನಿಖರವಾಗಿ ಹೂಡುವುದು ಮತ್ತು ಹೇಗೆ ಮಕ್ಕಳ ಭವಿಷ್ಯಕ್ಕಾಗಿ ಆದಾಯವನ್ನು ಹೂಡುವುದು ಎಂದು ತಿಳಿದಿರುತ್ತಾಳೆ. ಅದೇ ರೀತಿ ಶಿಕ್ಷಣವು ಮಹಿಳೆಗೆ ದಿನನಿತ್ಯ ಬರುವಂತಹ

ಸಮಸ್ಯೆಗಳನ್ನು ಉತ್ತಮ ರೀತಿಯಲ್ಲಿ ಎದುರಿಸುವಂತಹ ಸಾಮರ್ಥ್ಯವನ್ನು ನೀಡುವುದಲ್ಲದೆ, ಹೆಚ್ಚಿನ ಉಪಯುಕ್ತ ಮಾಹಿತಿಗಳನ್ನು ವಿವಿಧ ಮೂಲದಿಂದ ಪಡೆಯಲು ಸಾಧ್ಯವಾಗುವುದಾಗಿ ಉಲ್ಲೇಖಿಸಿದೆ. ಹೊಲ್ಲೊಸ್ ಎಂ (೧೯೯೮) ರವರ *'ದಿ ಸ್ಟೇಟಸ್ ಆಫ್ ವುಮೆನ್ ಇನ್ ಸದರ್ನ್ ನೈಜೀರಿಯಾ: ಈಸ್ ಎಜುಕೇಶನ್ ಎ ಹೆಲ್ಪ್ ಆರ್ ಎ ಹಿಂಡ್ರೆನ್ಸ್ ಆಫ್ ವುಮೆನ್ ಆ್ಯಂಡ್ ಎಜುಕೇಶನ್ ಇನ್ ಸಬ್ ಸಹರ್ನ್ ಆಫ್ರಿಕಾ'* ಎಂಬ ಅಧ್ಯಯನವು ವಿದ್ಯಾವಂತ ಮಹಿಳೆಯರು ಅಶಿಕ್ಷಿತ ಮಹಿಳೆಯರಿಗಿಂತ ಹೆಚ್ಚು ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಪಡೆದಿರುತ್ತಾರೆ. ಶಿಕ್ಷಣವು ಮಹಿಳಾಭಿವೃದ್ಧಿಗೆ ಅತೀ ಅಗತ್ಯವಾಗಿರುವ ಸಂಪನ್ಮೂಲವೆಂಬುದಾಗಿ ಉಲ್ಲೇಖಿಸಿದೆ. ನಿರೌಲ್ ಮತ್ತು ಮೊರ್ಗನ್ (೨೦೦೦) ರವರ *'ಜೆಂಡರ್ ಇನ್ ಇಕ್ವಾಲಿಟಿ ಇನ್ ಟೂ ನೇಪಾಲಿ ಸೆಟ್ಟಿಂಗ್ಸ್'* ಎಂಬ ನೇಪಾಳದ ಮಹಿಳೆಯರ ನಿರ್ಧಾರ ತೆಗೆದುಕೊಳ್ಳುವಿಕೆಯ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ಶಿಕ್ಷಿತ ಮಹಿಳೆಯರಲ್ಲಿ ಮನೆಯ ಖರೀದಿಸುವಿಕೆಯ ನಿರ್ಧಾರ, ಹೊರಗಡೆ ಕೆಲಸ ಮಾಡುವ ನಿರ್ಧಾರ ಹಾಗೂ ಕುಟುಂಬದ ಯಾವುದೇ ಚಟುವಟಿಕೆಯಲ್ಲಿ ನಿರ್ಧಾರ ವ್ಯಕ್ತಪಡಿಸುವಿಕೆಯು ಹೆಚ್ಚು ಕಂಡು ಬರುವುದಾಗಿಯೂ ಅಶಿಕ್ಷಿತ ಮಹಿಳೆಯರ ಯಾವುದೇ ಸ್ವಾಯತ್ತತೆಯನ್ನು ಪಡೆಯದೇ ಇರುವುದಾಗಿಯೂ ತಿಳಿಸಲಾಗಿದ್ದು, ಶಿಕ್ಷಣದಿಂದ ಮಾತ್ರ ಮಹಿಳಾ ಸಬಲೀಕರಣ ಕಂಡುಕೊಳ್ಳಬಹುದಾಗಿ ಈ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಶಿಕ್ಷಣದಿಂದಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸ, ಸ್ವತಂತ್ರ ನಿರ್ಧಾರದ ಧೈರ್ಯ ಹಾಗೂ ಸ್ವಾಯತ್ತತೆಯನ್ನು ಪಡೆದುಕೊಂಡು ಕೌಟುಂಬಿಕವಾಗಿ, ಸಾಮಾಜಿಕವಾಗಿ ಸಬಲರಾಗಿರುವುದು ಕಂಡು ಬಂದಿದೆ. ಜೆರಾಲ್ಡಿನ್ ಫೋರ್ಬ್ಸ್(೧೯೯೮)ರವರ *'ದ ನ್ಯೂ ಕೆಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ: ವುಮೆನ್ ಇನ್ ಮಾಡರ್ನ್ ಇಂಡಿಯಾ'* ಎಂಬ ಕೃತಿಯಲ್ಲಿ ೧೯ ನೇ ಶತಮಾನದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ಖಂಡಿಸುತ್ತಿದ್ದ ಪುರುಷ ಸುಧಾರಕರು ಮಹಿಳೆಯರ ಸಮಸ್ಯೆಗಳ ನಿರ್ಮೂಲನೆಗೆ ಸ್ತ್ರೀ ಶಿಕ್ಷಣದ ಅವಶ್ಯಕತೆಯನ್ನು ಹಾಗೂ ಶಿಕ್ಷಣದಿಂದಾಗಿ ಮಹಿಳೆಯರ ಸ್ವಾತಂತ್ರ್ಯ, ಸಮಾನತೆ ಹಾಗೂ ಸಶಕ್ತತೆಯನ್ನು ಸಾಧಿಸ ಬಹುದಾಗಿದೆ ಎಂಬುದನ್ನು ಹಾಗೆಯೇ, ಪುರುಷರು ಸ್ತ್ರೀಯರ ಉನ್ನತೀಕರಣದ ಬಗ್ಗೆ ಎಷ್ಟೇ ತೀವ್ರತರವಾದ ಹೋರಾಟ ನಡೆಸಿ ಪ್ರತಿಫಲ ಪಡೆದುಕೊಂಡರೂ ಸಹ ಮಹಿಳೆಯರೇ ಸ್ವತ: ತಮ್ಮ ಮೇಲಾಗುತ್ತಿರುವ ದಮನ, ದೌರ್ಜನ್ಯಗಳನ್ನು ಹತ್ತಿಕ್ಕಲು ಹೋರಾಟಕ್ಕಿಳಿಯಬೇಕು ಎಂಬುದಾಗಿ ತಿಳಿಸಿರುತ್ತಾರೆ. ದೊರೈಸ್ವಾಮಿ(೨೦೦೨) ರವರ ಅಧ್ಯಯನದಲ್ಲಿ ಶಿಕ್ಷಣವು ಮಹಿಳೆಯರ ಉನ್ನತೀಕರಣ ದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದೆ. ಶಿಕ್ಷಿತ ಮಹಿಳೆಯರು ತಮ್ಮ ಆದಾಯದಲ್ಲಿ ಉಳಿತಾಯ ಮಾಡಿ ತಮ್ಮ ಕುಟುಂಬದ ಏಳಿಗೆಯಲ್ಲಿ ಅತೀ ಹೆಚ್ಚಿನ ಪಾತ್ರವನ್ನು ಬೀರಿರುವುದನ್ನು ಗಮನಿಸಲಾಗಿದೆ. ಹಾಗೆಯೇ ಶಿಕ್ಷಣ ಮತ್ತು ಆದಾಯದ ಬಗ್ಗೆ ತುಲನಾತ್ಮಕವಾಗಿ ಪರಿಶೀಲಿಸಿದಾಗ ಪುರುಷರಿಗಿಂತ ಮಹಿಳೆಯರಿಗೆ ಶಿಕ್ಷಣವು ಹೆಚ್ಚು ಸಕಾರಾತ್ಮಕ ಪರಿಣಾಮವನ್ನುಂಟು ಮಾಡಿದೆ. ಶಿಕ್ಷಣವು ಮಹಿಳೆಯರನ್ನು ಮನೆಯೊಳಗೆ ಮಾತ್ರವಲ್ಲ ಮನೆಯ ಹೊರಗಿನ ಪ್ರಪಂಚದಲ್ಲಿ, ಅಂದರೆ ಸಮಾಜದಲ್ಲಿ ಧೈರ್ಯದಿಂದ ಮುನ್ನುಗ್ಗಲು ಪ್ರೇರಣೆ ನೀಡುತ್ತದೆ. ದುವ್ವರಿ ಮತ್ತು

ಅಲೆನ್‌ಡ್ರಾಫ್ (೨೦೦೧) ರವರ *'ಡೊಮೆಸ್ಟಿಕ್ ವಯಲೆನ್ಸ್ ಇನ್ ಇಂಡಿಯಾ: ದ ರೋಲ್ಸ್ ಆಫ್ ಎಜುಕೇಶನ್ ಆ್ಯಂಡ್ ಎಂಪವರ್‌ಮೆಂಟ್'* ಎಂಬ ಅಧ್ಯಯನದಲ್ಲಿ ಗುರುತಿಸಿದಂತೆ, ಶಿಕ್ಷಿತ ಮಹಿಳೆಯರು ಅಶಿಕ್ಷಿತ ಮಹಿಳೆಯರಿಗೆ ಅವರ ಪಾತ್ರಗಳ ಮತ್ತು ಹಕ್ಕುಗಳ ಬಗ್ಗೆ ತಿಳಿಸಿ ಹೇಳುತ್ತಾರೆ. ಮಹಿಳೆಯರು ಸಮುದಾಯದ ಚಟುವಟಿಕೆಗಳಲ್ಲಿ ಮತ್ತು ಗುಂಪು ಚಟುವಟಿಕೆಗಳಲ್ಲಿ ಹೆಚ್ಚು ಭಾಗವಹಿಸುತ್ತಿದ್ದಾರೆ. ಇದು ಕೂಡ ಶಿಕ್ಷಣದಿಂದಾಗಿದ್ದು, ಶಿಕ್ಷಣವು ಮಹಿಳೆಯರ ಆಂತರಿಕ ಬಲ ಮತ್ತು ಆತ್ಮ ವಿಶ್ವಾಸವನ್ನು ಹೆಚ್ಚಿಸುವುದಲ್ಲದೆ ಬೇರೆ ಸದಸ್ಯರ ಜೊತೆ ಸಮಾನತೆಯಿಂದ ಮತ್ತು ಗೌರವದಿಂದ ಕೆಲಸ ಮಾಡಲು ಸಹಕಾರಿಯಾಗಿದೆ ಎಂದಿದ್ದಾರೆ. ಅಗರ್‌ವಾಲ್.ಡಿ (೨೦೦೧)ರವರ *'ಎಜುಕೇಶನ್ ಫಾರ್ ಎಂಪವರ್ ಮೆಂಟ್ ಮೀನಿಂಗ್‌ಫುಲ್ ಆ್ಯಂಡ್ ರೆಲೆವೆಂಟ್'*ನಲ್ಲಿ ಉದ್ಯೋಗದಿಂದ ಮಹಿಳೆಯರಿಗೆ ಆದಾಯದ ಹೊರತಾಗಿ ಆರ್ಥಿಕ ಸ್ವಾತಂತ್ರ್ಯ ಕೂಡ ದೊರಕುತ್ತದೆ ಮತ್ತು ಹಲವು ಮಹಿಳೆಯರು ಸ್ವ-ಉದ್ಯೋಗದ ಜೊತೆಗೆ ಸ್ವ-ಭರವಸೆಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಕೆಲವು ಶಿಕ್ಷಿತ ಉದ್ಯೋಗಸ್ಥ ಮಹಿಳೆಯರು ಅಶಿಕ್ಷಿತ ಮಹಿಳೆಯರಿಗೆ ಉದ್ಯೋಗ ನೀಡಲು ಸಿದ್ಧರಿದ್ದಾರೆ. ಗೃಹ ಸಂಬಂಧಿ ಸಣ್ಣ ಪ್ರಮಾಣದ ಉದ್ಯಮಗಳು ಕೆಲಸವಿಲ್ಲದ ನಿರುದ್ಯೋಗಿಗಳಿಗೆ ಮತ್ತು ಅಶಿಕ್ಷಿತ ಮಹಿಳೆಯರಿಗೆ ವರವಾಗಿದೆ. ಲಕ್ಷ್ಮೀದೇವಿ, (೧೯೯೮) ರವರ ಅಧ್ಯಯನ *'ವುಮೆನ್ ಎಂಪವರ್‌ಮೆಂಟ್ ಆ್ಯಂಡ್ ಸೋಶಿಯಲ್ ಇಂಪ್ರೂವ್‌ಮೆಂಟ್'*ನಲ್ಲಿ ಮಹಿಳೆಯರಿಗೆ ಕ್ರಿಯಾಶೀಲವಾಗಿರಲು ಶಿಕ್ಷಣವೇ ನಿಜವಾದ ಆಸ್ತಿಯಾಗಿದೆ ಮತ್ತು ವಿವಿಧ ಆಯಾಮದಲ್ಲಿ ಪಾತ್ರವಹಿಸಲು ಇದು ಸಹಕಾರಿಯಾಗಿದೆ. ಮನೆ, ಗಂಡ, ಅಡುಗೆ ಮನೆಗೆ ಕೇಂದ್ರೀಕೃತವಾಗುತ್ತಿದ್ದ ಮಹಿಳೆಯರು ಇಂದು ಶೈಕ್ಷಣಿಕವಾಗಿ ಸಬಲೀಕರಣಗೊಂಡು ಶಿಕ್ಷಣಕ್ಕೆ ಪೂರಕವಾದ ಉದ್ಯೋಗ ಪಡೆದುಕೊಂಡು ಆದಾಯ ಗಳಿಸಿ ಆರ್ಥಿಕವಾಗಿ ಸಬಲರಾಗಿದ್ದಾರೆ. ಹಾಗೆಯೇ ಮಹಿಳೆಯರು ಈಗ ಸಮುದಾಯ ಹಾಗೂ ವೃತ್ತಿ ಕೇಂದ್ರೀಕೃತರಾಗಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ. ಈ ಎಲ್ಲಾ ಅಂಶಗಳು ಮಹಿಳೆಯರಿಗೆ ಶಿಕ್ಷಣದಿಂದಾಗಿ ಬಹುವಿಧ ಲಾಭಗಳಿರುವುದನ್ನು ಸ್ಪಷ್ಟಪಡಿಸುತ್ತದೆ. ಮಹಿಳೆ ಶಿಕ್ಷಿತಳಾದಂತೆ ಆರ್ಥಿಕವಾಗಿಯೂ ಸಬಲಳಾಗುವ ಅವಕಾಶ ಒದಗಿ ಬರುತ್ತದೆ. ಆರ್ಥಿಕತೆಯಿಂದ ಅಭಿವೃದ್ಧಿಯಲ್ಲಿ ಪಾಲುದಾರರಾಗುವ ಎಲ್ಲಾ ಅವಕಾಶಗಳು ತೆರೆದುಕೊಳ್ಳುತ್ತವೆ. ಶಿಕ್ಷಣದಿಂದಾಗಿ ಮಹಿಳೆಯರು ಸಂಘಟನಾ ಕೌಶಲಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಸಮಾಜದೊಂದಿಗೆ ಬೆರೆತು ಸಂಘ ಸಂಸ್ಥೆಗಳ ಸದಸ್ಯತ್ವ ಪಡೆಯುವ ಮಹಿಳೆಯರು ಹೆಚ್ಚು ಸದೃಢರಾಗಿರುವುದು ಹಲವು ಅಧ್ಯಯನಗಳಲ್ಲಿ ಕಂಡುಬಂದಿದೆ.

ಶ್ರೀನಿವಾಸ್ ರಾವ್ ಸಿ.ಎಚ್ (೨೦೧೪)ರವರು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಬಂಟಿ ಅಟ್ ಮಕೂರ್ ಮಂಡಲದ ಮಹಿಳೆಯರ ಸ್ವ-ಸಹಾಯ ಸಂಘಗಳ ಬಗ್ಗೆ ನಡೆಸಿರುವ ಅಧ್ಯಯನದಲ್ಲಿ ಬಂಟಿ ಅಟ್ ಮಕೂರ್ ಮಂಡಲವು ಅತೀ ಹಿಂದುಳಿದ ಮಂಡಲವಾಗಿದ್ದು, ಈ ಪ್ರದೇಶದ ಮಹಿಳೆಯರಲ್ಲಿ ಹೆಚ್ಚಿನವರು ಅನಕ್ಷರಸ್ಥರು, ಅನಕ್ಷರತೆಯ ಹೊರತಾಗಿಯೂ ಸ್ವ-ಸಹಾಯ ಸಂಘಗಳಲ್ಲಿ ಸದಸ್ಯತ್ವವನ್ನು ಪಡೆದು ಉದ್ಯೋಗಿಗಳಾಗಿದ್ದಾರೆ. ಅವರು ಗಳಿಸುವ ಆದಾಯವನ್ನು ಮಕ್ಕಳ ಶಿಕ್ಷಣಕ್ಕೆ

ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬಡ ಅನಕ್ಷರಸ್ಥ ಮಹಿಳೆಯರು ತಮ್ಮ ಜೀವನದ ಉನ್ನತೀಕರಣಕ್ಕೆ ಶಿಕ್ಷಣವೇ ಕಾರಣವಾಗಿರುವುದನ್ನು ಕಂಡು ಕೊಂಡಿರುವುದನ್ನು ಈ ಅಧ್ಯಯನದಲ್ಲಿ ಗಮನಿಸಲಾಗಿದ್ದು, ಕುಟುಂಬ ಹಾಗೂ ಮಕ್ಕಳ ಶಿಕ್ಷಣಕ್ಕಾಗಿ ತಮ್ಮ ದುಡಿಮೆಯನ್ನು ಮೀಸಲಿರಿಸಿರುವುದನ್ನು ಗಮನಿಸಬಹುದಾಗಿದೆ. ಜನಸಂಖ್ಯೆ, ಆರೋಗ್ಯ ಮತ್ತು ಅಭಿವೃದ್ಧಿ ಸಂಬಂಧಿತ ಕಾರ್ಯಕ್ರಮಗಳ ಪುನರ್ ಉತ್ಪಾದನೆಯಾದಲ್ಲಿ ಮಹಿಳೆಯ ಶೈಕ್ಷಣಿಕ ಅವಕಾಶಗಳು ಬಹಳ ಪ್ರಮುಖ ಪಾತ್ರವನ್ನು ಬೀರುತ್ತವೆ ಎಂಬುದು ಸ್ಪಷ್ಟ. ಮಹಿಳೆಯ ಪರಿಸ್ಥಿತಿ ಹಾಗೂ ಸಶಕ್ತತೆಯು ಕುಟುಂಬದಲ್ಲಿ ಮಹಿಳೆಗೆ ದೊರೆಯುವ ಸ್ಥಾನಮಾನ ಹಾಗೂ ಸವಲತ್ತುಗಳನ್ನು ಆಧರಿಸಿವೆ. ಶಿಕ್ಷಣದಿಂದಾಗಿ ಮುಂದಿನ ಪೀಳಿಗೆಯಲ್ಲಿ ಪರಿಣಾಮಕಾರಿಯಾದ ಏರಿಳಿತವನ್ನು ಕಾಣಲು ಸಾಧ್ಯವಾಗಬಹುದು ಎಂಬುದನ್ನು ಈ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಕ್ಯಾರೋಲಿನ್ ಎಮ್ ಇಲಿಯೋಟ್ (೨೦೦೮) ರವರ *'ಗ್ಲೋಬಲ್ ಎಂಪವರ್‌ಮೆಂಟ್ ಆಫ್ ವುಮೆನ್ ರೆಸ್ಪೋನ್ಸ್ ಟು ಗ್ಲೋಬಲೈಜೇಶನ್ ಆ್ಯಂಡ್ ಪೊಲಿಟೈಸ್‌ಡ್ ರಿಲಿಜಿಯಸ್'* ಎಂಬ ಅಧ್ಯಯನದಲ್ಲಿ ಶಿಕ್ಷಿತ ಮಹಿಳೆಯರು ಹಾಗೂ ಅಶಿಕ್ಷಿತ ಮಹಿಳೆಯರ ಸಶಕ್ತತೆಯ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ಶಿಕ್ಷಿತ ಮಹಿಳೆಯರು ಸರಕಾರಿ ಅಥವಾ ಖಾಸಗಿ ಉದ್ಯೋಗ ಹೊಂದಿ ನಿರ್ದಿಷ್ಟ ಸಂಭಾವನೆ ಪಡದುಕೊಂಡು ಉತ್ತಮ ಜೀವನ ನಡೆಸುತ್ತಿದ್ದಾರೆ. ಆದರೆ ಅಶಿಕ್ಷಿತ ಮಹಿಳೆಯರು ಕಡಿಮೆ ಕೂಲಿಯನ್ನು ಪಡೆದು ತೀರ ಕೆಳಮಟ್ಟದಲ್ಲಿ ಜೀವನವನ್ನು ಹೊಂದಿರುವುದಾಗಿ ಉಲ್ಲೇಖಿಸಿದ್ದಾರೆ. ಮಹಿಳಾ ಶಿಕ್ಷಣದ ಮೂಲಕ ಅಭಿವೃದ್ಧಿಯಲ್ಲಿ ಭಾಗಿಗಳಾಗುವ ಪರಿಸ್ಥಿತಿಯು ಸಮಾಜದಲ್ಲಿರುವ ಆಶಾದಾಯಕ ಬೆಳವಣಿಗೆಗಳಲ್ಲಿ ಒಂದಾಗಿದೆ. ಮಹಿಳೆಯರಿಗೆ ಶಿಕ್ಷಣದಿಂದಾಗಿ ಪಿತೃಪ್ರಭುತ್ವದ ವ್ಯವಸ್ಥೆಯಿಂದ ವಿಮೋಚನೆ ದೊರೆತಂತಾಗಿದೆ.

ಇನ್ನು ಅಧ್ಯಯನದ ಪ್ರದೇಶದಲ್ಲೂ ಶಿಕ್ಷಣದಿಂದಾಗಿ ಮಹಿಳೆಯರ ಜೀವನ ಮಟ್ಟದಲ್ಲಿ ಸುಧಾರಣೆಗಳಾಗಿರುವ ಬಗ್ಗೆ ಮಾಹಿತಿ ಲಭ್ಯವಿದೆ. ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆ (ಉಡುಪಿ ಜಿಲ್ಲೆ ಪ್ರತ್ಯೇಕಗೊಳ್ಳುವ ಮೊದಲು) ಹಾಗೂ ಉಡುಪಿ ಜಿಲ್ಲೆಯಲ್ಲಿ ಶಿಕ್ಷಣದ ಪ್ರಮಾಣ ಜಾಸ್ತಿಯಿದ್ದರೂ ಹಲವು ಜಾತಿ ಸಮುದಾಯಗಳಲ್ಲಿ ಇನ್ನೂ ಶಿಕ್ಷಣ ಕನಿಷ್ಠ ಮಟ್ಟದಲ್ಲಿದೆ. ಈ ಜಿಲ್ಲೆಯಲ್ಲಿ ಶಿಕ್ಷಣವು ಮಹಿಳೆಯರನ್ನು ಮುಖ್ಯವಾಹಿನಿಗೆ ತರುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಶಾಲಿನಿ (೨೦೦೯) ರವರು ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರ ಮಹಿಳೆಯರ ಮೇಲೆ ಶಿಕ್ಷಣವು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಅವಕಾಶ ಮಾಡಿಕೊಟ್ಟ ಬಗೆಗೆ ಅಧ್ಯಯನ ನಡೆಸಿದ್ದಾರೆ. ಅವರ ಅಧ್ಯಯನದಲ್ಲಿ ಶಿಕ್ಷಣದಿಂದಾಗಿ ಮೊಗವೀರ ಮಹಿಳೆಯರು ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸಿದ ಬಗ್ಗೆ ಉಲ್ಲೇಖಿಸಿದ್ದಾರೆ. ಅದೇ ರೀತಿ ಶಿಕ್ಷಣದಿಂದಾಗಿ ಆರ್ಥಿಕ ಮೂಲಗಳ ಪರಿಚಯ ಹಾಗೂ ಆಯ್ಕೆ ಇವುಗಳ ಬಗೆಗಿನ ಅರಿವು ಹೆಚ್ಚಾಗಿದೆ. ಆರ್ಥಿಕವಾಗಿಯೂ ಮಹಿಳೆಯ ದುಡಿಮೆ ಕುಟುಂಬದ ಸಬಲೀಕರಣಕ್ಕೆ ಕಾರಣವಾದ ಬಗ್ಗೆ ಮತ್ತು ಮಹಿಳೆಯರ ಉಡುಗೆ, ಸಂಸ್ಕೃತಿ ಹಾಗೂ ಸಮಾಜದಲ್ಲಿ ಪುರುಷರೊಂದಿಗೆ ಸಮಾನವಾದ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಪಡೆಯುತ್ತಿರುವ ಬಗ್ಗೆಯೂ ದಾಖಲಿಸಿದ್ದಾರೆ. ಶಶಿಕಲಾ (೨೦೧೦) *'ಉಡುಪಿ ಜಿಲ್ಲೆಯ ಮೊಗವೀರ ಸಮುದಾಯದ ಮಹಿಳೆಯರ*

ಶೈಕ್ಷಣಿಕ ಸಾಧನೆಗಳ ನಿರ್ಧಾರಕಗಳು' ಎಂಬ ಅಧ್ಯಯನದಲ್ಲಿ ಪ್ರಸ್ತುತ ಮೊಗವೀರ ಸಮುದಾಯದಲ್ಲಿ ಇರುವ ಶಿಕ್ಷಣದ ಪ್ರಮಾಣ, ಮೊಗವೀರರು ತಮ್ಮ ಮಕ್ಕಳಿಗೆ ನೀಡಲು ಬಯಸುವ ಶಿಕ್ಷಣದ ಅಪೇಕ್ಷೆ, ಪುರುಷ ಮತ್ತು ಸ್ತ್ರೀಯರ ಮಧ್ಯೆ ಇರುವ ಶೈಕ್ಷಣಿಕ ವ್ಯತ್ಯಾಸ, ಮಹಿಳಾ ಶಿಕ್ಷಣಕ್ಕೆ ಮೊಗವೀರರು ಕೊಡುತ್ತಿರುವ ಪ್ರಾಮುಖ್ಯತೆ, ಸರಕಾರಿ ಶಾಲೆಗಳ ಬಗ್ಗೆ ಮೊಗವೀರರಿಗೆ ಇರುವ ಧೋರಣೆ, ಶಿಕ್ಷಣದಿಂದಾಗಿ ಮಹಿಳಾ ಸ್ಥಾನಮಾನದಲ್ಲಿ ಆಗಿರುವ ಬದಲಾವಣೆ ಇತ್ಯಾದಿಗಳ ಕುರಿತು ವಿಶ್ಲೇಷಿಸಿದ್ದಾರೆ. ಅವರ ಪ್ರಕಾರ ಇತ್ತೀಚಿನ ದಿನಗಳಲ್ಲಿ ಪುರುಷರಷ್ಟೇ ಮಹಿಳಾ ಶಿಕ್ಷಣಕ್ಕೂ ಮೊಗವೀರರು ಆದ್ಯತೆ ನೀಡುತ್ತಿದ್ದಾರೆ. ಶಿಕ್ಷಣದಿಂದಾಗಿ ಮೊಗವೀರ ಸಮುದಾಯದಲ್ಲಿ ಮಹಿಳಾ ಅಂತಸ್ತು ಶೇಕಡಾ ೯೭ರಷ್ಟು ಬದಲಾವಣೆಯಾಗಿದೆ ಎಂದು ತಮ್ಮ ಅಧ್ಯಯನದಲ್ಲಿ ದಾಖಲಿಸಿದ್ದಾರೆ. ಈ ಎಲ್ಲ ಅಂಶಗಳು ಉಡುಪಿ ಜಿಲ್ಲೆಯಲ್ಲಿ ಶಿಕ್ಷಣದಿಂದಾಗಿ ಮಹಿಳಾ ಅಭಿವೃದ್ಧಿಯ ಕನಸು ಸಾಕಾರವಾಗಿರುವುದು ಸ್ಪಷ್ಟವಾಗಿದೆ. ಮಹಿಳೆಯರಲ್ಲಿ ಶಿಕ್ಷಣದಿಂದಾಗಿ ಆರ್ಥಿಕ ಸಾಮರ್ಥ್ಯದಲ್ಲಿ ಪ್ರಗತಿ ಕಂಡು ಬರುತ್ತಿದೆ. ಆರ್ಥಿಕ ಸಾಮರ್ಥ್ಯ, ಆರ್ಥಿಕ ಸ್ವಾವಲಂಬನೆ ಹಾಗೂ ಮಹಿಳಾಭಿವೃದ್ಧಿಯ ನಡುವಿನ ಸಂಬಂಧವನ್ನು ತಿಳಿಯುವ ಪ್ರಯತ್ನವನ್ನು ಈ ಭಾಗದಲ್ಲಿ ಮಾಡಲಾಗಿದೆ.

ಸಿಡ್ನಿ ಸೆಗುಲರ್ ಮತ್ತು ಸೈಯದ್ ಹಷಮ್ (೧೯೯೬) ರವರ *'ರೂರಲ್ ಕ್ರೆಡಿಟ್ ಪ್ರೋಗ್ರಾಂ ಆ್ಯಂಡ್ ವುಮೆನ್ಸ್ ಎಂಪವರ್‌ಮೆಂಟ್ ಇನ್ ಬಾಂಗ್ಲಾದೇಶ್'* ಎಂಬ ಅಧ್ಯಯನದಲ್ಲಿ ಆರ್ಥಿಕ ಸ್ಥಿತಿಗತಿಯು ಉತ್ತಮಗೊಂಡಿದ್ದಾಗ ಮಹಿಳೆಯರಲ್ಲಿ ಭದ್ರತೆ, ನಿರ್ಧಾರ ಕೈಗೊಳ್ಳುವ ಅಧಿಕಾರ, ಸಾರ್ವಜನಿಕ ಕ್ಷೇತ್ರದಲ್ಲಿ, ವಿವಿಧ ಸಂಘಟನೆಯಲ್ಲಿ ಭಾಗಿಯಾಗುವ ಸಾಮರ್ಥ್ಯದ ಹಾಗೂ ತನ್ನ ನಿರ್ಧಾರಗಳನ್ನು ವ್ಯಕ್ತಪಡಿಸಲು ಧೈರ್ಯ ಬರುವುದಾಗಿ ತಿಳಿಸಿದ್ದು, ಉತ್ತಮ ಆರ್ಥಿಕ ಸ್ಥಿತಿಗತಿಯು ಮಹಿಳೆಯ ಶೈಕ್ಷಣಿಕ ಸಶಕ್ತತೆಯನ್ನು ಆಧರಿಸಿದೆ ಎಂಬುದಾಗಿ ತಿಳಿಸಿರುತ್ತಾರೆ. ಅನ್ನಪೂರ್ಣೇಶ್ವರಿ.ಎನ್ (೨೦೧೨)ರವರು ಭಾರತದ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಮಹಿಳೆಯರ ಅಭಿವೃದ್ಧಿಯ ಸಮಸ್ಯೆಗಳ ಬಗ್ಗೆ ನಡೆಸಿರುವ ಅಧ್ಯಯನದಲ್ಲಿ ಗ್ರಾಮೀಣ ಪ್ರದೇಶದಲ್ಲಿ ದೊರೆಯುವ ಸಂಪನ್ಮೂಲದ ಕೊರತೆ ಹಾಗೂ ಬಂಡವಾಳ ಹಂಚುವಿಕೆ ಸಾಮರ್ಥ್ಯ ಕಡಿಮೆ ಇರುವಿಕೆಯೇ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಮಾರಕವಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರ ಅಭಿವೃದ್ಧಿಗೆ ಸರಕಾರವು ಅವಶ್ಯವಿರುವ ಸೌಲಭ್ಯವನ್ನು ಒದಗಿಸುವುದು ಜೊತೆಗೆ ಮಹಿಳೆಯರು ಸರಕಾರದ ಯೋಜನಾ ಪ್ರಕ್ರಿಯೆಯಲ್ಲಿ, ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸುವಂತಾದರೆ ಗ್ರಾಮೀಣ ಪ್ರದೇಶದ ಮಹಿಳಾಭಿವೃದ್ಧಿ ಸಾಧ್ಯವಾಗುವುದಾಗಿ ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಮೈತ್ರೇಯಿ ಮುಖ್ಯೋಪಾಧ್ಯಾಯ (೨೦೦೩) ರವರ ಅಧ್ಯಯನವು ಮಹಿಳೆಯರ ಕಡೆಗಣನೆಯ ಬಗ್ಗೆ ಬೆಳಕು ಚೆಲ್ಲಿದೆ. ಪ್ರಪಂಚದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಕಾರ್ಮಿಕ ಶಕ್ತಿಯ ೧/೩ ಭಾಗ, ಒಟ್ಟು ದುಡಿತದ ೨/೩ ಅಂಶ ಅವಧಿಯಲ್ಲಿ ಮಹಿಳೆಯರೇ ದುಡಿಯುತ್ತಾರೆ. ಆದರೆ ಅವರಿಗೆ ಸಿಗುವ ಪ್ರತಿಫಲ ಪ್ರಪಂಚದ ಒಟ್ಟು ಆದಾಯದ ೧/೩ ಭಾಗ ಮಾತ್ರ, ಜಗತ್ತಿನ ಆಸ್ತಿಯಲ್ಲಿ ಅವರ ಪಾಲು ೧% ಕ್ಕಿಂತಲೂ ಕಡಿಮೆ. ಮಹಿಳೆಯರ ಸಾಮಾಜಿಕ ಸಮಸ್ಯೆಗಳನ್ನು ನೀಗಿಸಿಬಿಡುವ

ಉಪಾಯವಾಗಿ ಶಿಕ್ಷಣ ಒಂದು ನೆಲೆಯಲ್ಲಿ ಅವಳಿಗೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯವನ್ನು ಕನಿಷ್ಠ ಪ್ರಮಾಣದಲ್ಲಿ ನೀಡಿದೆ. ಆದರೆ ಅವಳ ಅಂತರಂಗದ ಅಭೀಪ್ಸೆಯಂತೆ ಬದುಕುವುದು, ಯೋಚಿಸುವುದು, ಬರೆಯುವುದು ಸಾಧ್ಯವಾಗಿಲ್ಲ. ಪುರುಷರೊಂದಿಗೆ ಸರಿಸಮನಾಗಿ ದುಡಿದು ಆರ್ಥಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಮಹಿಳೆ ಸಾಧಕಳಾಗಿ ಬದುಕುತ್ತಿದ್ದರೂ, ಇವರ ಬದುಕಿಗೂ ದೇಶದ ಮುಕ್ಕಾಲು ಪಾಲು ಮಹಿಳೆಯರ ಬದುಕಿಗೂ ಹೋಲಿಕೆಯಿಲ್ಲ. ಈ ದೃಷ್ಟಿಯಲ್ಲಿ ಬದುಕಿನ ಮಾದರಿಯ ಮಾಪನದಿಂದ ಉಳಿದ ಮಹಿಳೆಯರ ಸುಖ ದುಃಖ ಅಳೆಯಲಾಗದು ಎಂಬುದನ್ನು ಅಧ್ಯಯನವು ಉಲ್ಲೇಖಿಸುತ್ತದೆ.

ರಾಧಾಕೃಷ್ಣನ್.ಎನ್ (೨೦೦೮)ರವರ ಅಧ್ಯಯನವು *'ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಎಂಟರ್‌ಪ್ರೆನರ್‌ಶಿಫ್'*ನಲ್ಲಿ ಮಹಿಳೆಯರ ಸ್ಥಿತಿಗತಿ, ಉದ್ಯಮಿ ಮಹಿಳೆಯರು ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸುತ್ತದೆ. ಇವರ ಪ್ರಕಾರ ಮಹಿಳೆಯರನ್ನು ಈಗಲೂ ಕೂಡ ಎರಡನೇ ನಾಗರೀಕರನ್ನಾಗಿ ಮತ್ತು ಪುರುಷರ ಅಧೀನರಾಗಿಯೇ ನೋಡುತ್ತಿದ್ದಾರೆ. ಸರಕಾರ ನೀಡುತ್ತಿರುವ ಬೆಂಬಲ ಮತ್ತು ಶ್ರಮದ ಸರಿಯಾದ ಉಪಯೋಗವನ್ನು ಮಹಿಳೆಯರು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಪ್ರಸ್ತುತ ಭಾರತದಲ್ಲೂ ಮಹಿಳೆಯರು ಎಲ್ಲಾ ಕ್ಷೇತ್ರದ ಆರ್ಥಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು ಹೆಚ್ಚಾಗುತ್ತಿದೆ. ಶಿಕ್ಷಣ, ಆರೋಗ್ಯ, ಮನೆವಾರ್ತೆ, ಉದ್ಯಮಗಳಲ್ಲಿ ಹಾಗೂ ಐಟಿ ಕ್ಷೇತ್ರಗಳು ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯ ಕ್ರಿಯಾಶೀಲ ಒಳಗೊಳ್ಳುವಿಕೆಯ ಪರಿಣಾಮವಾಗಿ ತನ್ನ ಸಮರ್ಥನೀಯ ಅಭಿವೃದ್ಧಿಯನ್ನು ಸಾಬೀತು ಪಡಿಸುತ್ತಿದ್ದಾಳೆ ಎಂದಿದೆ.

ಮಹಿಳಾ ಸಬಲೀಕರಣದ ಕನಸನ್ನು ನನಸಾಗಿಸಲು ಗಾಂಧೀಜಿಯವರ ಮಹಿಳಾ ಅಭಿವೃದ್ಧಿಯ ಮಾದರಿಯನ್ನು ನಾವು ಬಳಸಬಹುದಾಗಿದೆ. ಗಾಂಧೀಜಿಯವರು ಮಹಿಳೆಯರನ್ನು ಗುಡಿ ಕೈಗಾರಿಕೆ, ನೂಲುವುದು, ಕೃಷಿ ಇತ್ಯಾದಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಣೆ ನೀಡಿ, ಗೃಹಕೃತ್ಯದೊಂದಿಗೆ ಆರ್ಥಿಕ ಸಬಲತೆಗೆ ದಾರಿ ತೋರಿದರು. ಮಹಿಳಾ ಸಶಕ್ತೀಕರಣದ ಆಶಯವನ್ನು ಈಡೇರಿಸಲು ಮಹಿಳೆಯರು ಪೂರಕ ಆರ್ಥಿಕ ಚಟುವಟಿಕೆಯಲ್ಲಿ ತೊಡಗುವುದು ಸೂಕ್ತ ಎಂದು ಗಾಂಧೀಜಿ ಅಭಿಪ್ರಾಯ ಪಟ್ಟಿದ್ದರು. ಒಡೆಯರ್.ಡಿ ಹೆಗ್ಗಡೆ ಮತ್ತು ಅನ್ನಪೂರ್ಣೇಶ್ವರಿ.ಎನ್ (೨೦೦೯)ರವರ ಅಧ್ಯಯನವು ಮಹಿಳೆಯರ ಗೃಹಪಯೋಗಿ ದುಡಿಮೆಯು ಆದಾಯ ರಹಿತ ದುಡಿಮೆಯಾಗಿ ಪರಿಣಮಿಸಿರುವ ಕಾರಣ ಇಲ್ಲಿ ಮಹಿಳೆಯರ ಶ್ರಮ ವ್ಯರ್ಥವೆನಿಸಿದೆ ಹಾಗೂ ಪಿತೃಪ್ರಧಾನ ವ್ಯವಸ್ಥೆಯಿಂದಾಗಿ ಮಹಿಳೆಯರು ಸಂಪೂರ್ಣವಾಗಿ ಪರಾವಲಂಬಿಗಳಾಗಿರುವಂತಾಗಿದೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಮಹಿಳೆಯರು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದಂತೆ ಆರ್ಥಿಕವಾಗಿ ಬೆಳೆಯುವ ಪೂರಕ ವಾತಾವರಣ ನಿರ್ಮಾಣಗೊಳ್ಳುವುದು ಅಧ್ಯಯನಗಳಲ್ಲಿ ಕಂಡು ಬರುತ್ತದೆ. ಶಿಕ್ಷಣದ ಜೊತೆಗೆ ಆಧುನೀಕರಣವು ಕೂಡಾ ಮಹಿಳೆಯರ ಪ್ರಗತಿಗೆ ಸಹಕಾರಿಯಾಗಿದೆ. ಗೀತಾ ಕೃಷ್ಣಮೂರ್ತಿ (೨೦೦೧)ರವರು ತಮ್ಮ ಅಧ್ಯಯನದಲ್ಲಿ ಭಾರತೀಯ ಮಹಿಳೆಯರು ಖಾಸಗಿ ಜೀವನದಿಂದ ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಲು ಪಾಶ್ಚಾತ್ತ್ಯೀಕರಣ ಪ್ರತ್ಯಕ್ಷವಾಗಿ ಮತ್ತು

ಪರೋಕ್ಷವಾಗಿ ಕಾರಣವಾಯಿತು. ತತ್ಪರಿಣಾಮವಾಗಿ, ಹಿಂದೂ ಸಮಾಜದ ಮಹಿಳೆಯ ಶೋಷಿತ ಪರಿಸ್ಥಿತಿಯ ಬಗ್ಗೆ ಜಾಗೃತಿ ಮೂಡಲಾರಂಭಿಸಿತು ಮತ್ತು ಸಾಂಪ್ರದಾಯಿಕ ಆಚರಣೆಗಳು ಮತ್ತು ಪದ್ಧತಿಗಳನ್ನೇ ಒರೆಗೆ ಹಚ್ಚಿ ನೋಡಲು ಭಾರತೀಯರಿಗೆ ದೊರೆತ ಇಂಗ್ಲಿಷ್ ಶಿಕ್ಷಣದಿಂದ ಸಾಧ್ಯವಾಯಿತು ಎಂಬುದಾಗಿ ಉಲ್ಲೇಖಿಸಿದ್ದಾರೆ.

ಇನ್ನು ಮೀನುಗಾರಿಕಾ ವೃತ್ತಿನಿರತ ಮಹಿಳೆಯರ ಜೀವನಕ್ರಮ, ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಹಾಗೂ ಅವರ ಅಭಿವೃದ್ಧಿ ಸಂಬಂಧಿತ ಅಧ್ಯಯನಗಳು ಲಭ್ಯವಿದ್ದು ಎಲ್ಲಾ ಅಧ್ಯಯನಗಳು ವಾಸ್ತವವಾಗಿ ಮಹಿಳೆಯರು ಎದುರಿಸುತ್ತಿರುವ ಹೆಚ್ಚಿನ ಸವಾಲುಗಳನ್ನು ತೋರಿಸಿವೆ. ರೆನಾಲ್ಡ್ ಎರ್ರಿಕ್.ಜೆ (೧೯೯೧)ಅವರು ಆಫ್ರಿಕ ಉಪಖಂಡದಲ್ಲಿ ಮೀನುಗಾರಿಕೆಯ ಕ್ಷೇತ್ರದಲ್ಲಿನ ಮೀನು ಬಳಕೆ, ವಿತರಣೆ ಮತ್ತು ಮಾರುಕಟ್ಟೆ ವಿಧಾನಗಳ ಬಗ್ಗೆ ನಡೆಸಿರುವ ಅಧ್ಯಯನದಲ್ಲಿ ಮೀನುಗಾರಿಕಾ ವೃತ್ತಿಯನ್ನು ಅವಲಂಬಿಸಿ ಬದುಕುತ್ತಿರುವ ಜನ ಸಮುದಾಯವು ವಾಸ್ತವದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಅಧ್ಯಯನದಲ್ಲಿ ಪ್ರಸ್ತುತ ಪಡಿಸಿದ್ದಾರೆ. ಮೀನುಗಾರಿಕೆಯ ರಖಂ ವ್ಯಾಪಾರವು ಗಂಡಸರ ಅಧೀನದಲ್ಲಿದ್ದು, ಮಹಿಳೆಯರು ಕೇವಲ ಚಿಲ್ಲರೆ ವ್ಯಾಪಾರದಲ್ಲಿ ಭಾಗಿಯಾಗಿದ್ದು, ವ್ಯಾಪಾರದಲ್ಲಿ ಆಧುನಿಕ ಮಾರುಕಟ್ಟೆ, ಹೋಟೆಲ್, ರೆಸ್ಟೋರೆಂಟ್ ಮತ್ತು ಮೀನು ವ್ಯಾಪರಸ್ಥರಿಂದ ಏರ್ಪಟ್ಟಿರುವ ಸ್ಪರ್ಧೆ ಎದುರಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಅವುಗಳಲ್ಲಿ ಮುಖ್ಯವಾಗಿ ಸಣ್ಣ ಪ್ರಮಾಣದ ಯಾಂತ್ರೀಕೃತ ಕ್ಷೇತ್ರದ ಮಿತಿಮೀರಿದ ಬಂಡವಾಳೀಕರಣ, ಸಾಂಪ್ರದಾಯಿಕ ಮೀನುಗಾರರ ಅಪ್ರಧಾನೀಕರಣ, ತಡೆಯಲಾದ ಅಸಂಪೂರ್ಣ ಉದ್ಯೋಗ, ಕಡಿಮೆ ಬಂಡವಾಳ ಗಳಿಕೆ ಮತ್ತು ಬದಲಿ ಉದ್ಯೋಗ ಅವಕಾಶಗಳ ಕೊರತೆ ಇತ್ಯಾದಿ. ಇವು ಮಹಿಳೆಯರು ಎದುರಿಸಿರುವ ಸಮಸ್ಯೆಗಳು ಎಂಬುದಾಗಿ ದಾಖಲಿಸಿದ್ದಾರೆ. ಈ ಅಧ್ಯಯನದಲ್ಲಿ ಮೀನುಗಾರಿಕಾ ವೃತ್ತಿಯಲ್ಲಿ ಲಿಂಗ ಅಸಮಾನತೆಯ ಅಂಶವು ಪ್ರಬಲವಾಗಿರುವುದು ಕಂಡುಬರುತ್ತದೆ. ರೆಡ್ಡಿ ಮತ್ತು ಮೊಹಂಟರಿ (೨೦೦೩)ಅವರ ಅಧ್ಯಯನವು ಜಲಚರ ಸಾಕಣೆ ಮತ್ತು ಆಳ ಸಮುದ್ರದ ಮೀನುಗಾರಿಕೆ ಕ್ಷೇತ್ರದ ಶೀಘ್ರ ಬೆಳವಣಿಯಲ್ಲಾದ ಕೊಡುಗೆಗಳ ಬಗ್ಗೆ ತಿಳಿಸುತ್ತದೆ. ಭಾರತವು ಮೀನು ಉತ್ಪಾದನೆಯಲ್ಲಿ ವಿಶ್ವದಲ್ಲೇ ೭ನೇ ಸ್ಥಾನ ಪಡೆದಿದೆ. ಅದೇ ರೀತಿ ಭಾರತವು ಒಳನಾಡು ಮೀನುಗಾರಿಕೆ ಮತ್ತು ಸಾಂಪ್ರದಾಯಿಕ ಮೀನು ಹಿಡಿಯುವ ವಿಧಾನದಲ್ಲಿ ವಿಶ್ವದ ೨ನೇ ಅತೀ ದೊಡ್ಡ ದೇಶವಾಗಿರುವುದನ್ನು ತನ್ನ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಸ್ವಾತಿ ಆಕ್ಷೇಪ್.ಎಸ್, ವಿಪಿನ್ ಕುಮಾರ್.ವಿ (೨೦೦೦)ಅವರು ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಮಲ್ಪೆ ಮೀನುಗಾರಿಕಾ ಬಂದರಿನ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ಮಲ್ಪೆ ಬಂದರಿನಲ್ಲಿ ದಿನನಿತ್ಯ ನಡೆಯುವ ಮೀನುಗಾರಿಕಾ ಚಟುವಟಿಕೆಗಳನ್ನು ಅಧ್ಯಯನ ನಡೆಸಿ, ಮೀನುಗಾರಿಕೆಯು ಮೂರು ವಲಯಗಳನ್ನು ಒಳಗೊಂಡಿದೆ. ಮೊದಲನೆಯ ವಲಯದಲ್ಲಿ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡ ಮೀನುಗಾರರು, ಎರಡನೆಯ ವಲಯದಲ್ಲಿ ಸುಗ್ಗಿಯ ನಂತರದ ಮೀನುಗಾರಿಕೆ ನಡೆಸುವವರು, ಮೂರನೆಯ ವಲಯವು ಮೀನುಗಾರಿಕಾ ಪೂರಕ ಚಟುವಟಿಕೆಗಳನ್ನು ಒಳಗೊಂಡಿದೆ ಎಂದು ತಿಳಿಸಿದ್ದಾರೆ. ಮೀನುಗಾರಿಕೆಯ ಈ ಮೂರು

ವಲಯಗಳಲ್ಲಿಯೂ ಮೀನುಗಾರ ಮಹಿಳೆಯರು ಸಕ್ರಿಯವಾಗಿ ದುಡಿಮೆಯಲ್ಲಿ ನಿರತರಾಗಿರುವ ಬಗ್ಗೆ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ.

ಮೊಗವೀರ ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದ ಕೆಲವು ಅಧ್ಯಯನಗಳು ಮೀನುಗಾರಿಕಾ ವೃತ್ತಿಯಲ್ಲಿರುವ ಪ್ರಮುಖ ಸವಾಲುಗಳನ್ನು ಗುರುತಿಸುವ ಪ್ರಯತ್ನ ಮಾಡಿವೆ. ಸತಿಯದಾಸ್ (೨೦೦೩)ಅವರು ೫೯೦ ಕಿಲೋ ಮೀಟರ್ ಕರಾವಳಿ ತೀರ ಹೊಂದಿರುವ ಕೇರಳ ರಾಜ್ಯದ ಮೀನುಗಾರಿಕಾ ಮಹಿಳೆಯರ ಬಗ್ಗೆ ನಡೆಸಲಾದ ಅಧ್ಯಯನವು ಮೀನುಗಾರ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಉಲ್ಲೇಖಿಸಿದೆ. ಕೇರಳ ರಾಜ್ಯದಲ್ಲಿ ೨೨೬ ಮೀನು ತಂಗುದಾಣ ಕೇಂದ್ರಗಳಿರುವುದಾಗಿ ಅಲ್ಲಿ ಉದ್ಯೋಗ ನಿರತ ೨೦೦ ಮಂದಿ ಮೀನುಗಾರ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಅತೀ ಮುಖ್ಯವಾಗಿರುವುದೇ ಸಮಯದ ಅಭಾವ. ಅಂದರೆ ದಿನದಲ್ಲಿ ಮಹಿಳೆಯು ೧೨ ತಾಸುಗಳ ಕಾಲ ಮೀನುಗಾರಿಕಾ ಕ್ಷೇತ್ರದಲ್ಲಿ ಇರುವುದರಿಂದ ಮನೆ, ಮಕ್ಕಳ ಬಗ್ಗೆ ಗಮನಹರಿಸುವಲ್ಲಿ ತೊಂದರೆಗಳುಂಟಾಗುತ್ತಿದೆ. ಆದರೆ ಮೀನುಗಾರಿಕೆ ಉದ್ಯೋಗವು ಕುಟುಂಬ ನಿರ್ವಹಣೆಗೆ ಅನಿವಾರ್ಯವಾಗಿರುವುದರಿಂದ ಅತೀ ಹೆಚ್ಚಿನ ಸಮಯ ಉದ್ಯೋಗ ಕ್ಷೇತ್ರದಲ್ಲಿ ಕಳೆಯಲೇಬೇಕಾಗಿದ್ದು, ಇದರಿಂದಾಗಿ ಮಕ್ಕಳ ಶಿಕ್ಷಣ ಮತ್ತು ಆರೋಗ್ಯದಲ್ಲಿ ಬಹಳಷ್ಟು ಸಮಸ್ಯೆಗಳನ್ನು ಎದುರಿಸುವಂತಾಗಿದೆ ಎಂದಿದೆ. ಜೋಸ್ ಪೌಲ್.ಪಿ.ಸಿ (೨೦೧೪)ಅವರ ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆಯಲ್ಲಿ ನಿರತ ರಾಗಿರುವ ಮಹಿಳೆಯರ ಬಗ್ಗೆ ನಡೆಸಲಾಗಿರುವ ಅಧ್ಯಯನದಲ್ಲಿ ಭಾರತದ ಅತೀ ದೊಡ್ಡ ಮೀನು ಉತ್ಪಾದನಾ ರಾಜ್ಯಗಳಲ್ಲಿ ೫ನೇ ರಾಜ್ಯವಾಗಿರುವ ಕರ್ನಾಟಕ ಸುಮಾರು ೩೨೦ ಕಿಲೋ ಮೀಟರ್ ಉದ್ದದ ಕರಾವಳಿ ತೀರವನ್ನು ಹೊಂದಿದ್ದು ಮೀನುಗಾರಿಕೆಗೆ ಪ್ರಶಸ್ತ ರಾಜ್ಯವಾಗಿದೆ. ಮೀನು ಸಂಸ್ಕರಣಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವವರಲ್ಲಿ ಅತೀ ದೊಡ್ಡ ಪ್ರಮಾಣ ಮಹಿಳೆಯರಾಗಿದ್ದು, ಇದರಲ್ಲಿ ಕಾರ್ಯನಿರತ ಮಹಿಳೆಯರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದಾಗಿ ತಿಳಿಸಿದ್ದು, ಮೀನುಗಾರ ಮಹಿಳೆಯರು ದಿನನಿತ್ಯ ಬೆಳಿಗ್ಗೆ ಐದು ಗಂಟೆಯಿಂದ ರಾತ್ರಿ ಐದು ಗಂಟೆಯವರೆಗೆ ಮೀನುಗಾರಿಕಾ ಕ್ಷೇತ್ರದಲ್ಲಿ ದುಡಿಯುವುದಾಗಿಯೂ, ಕುಟುಂಬದ ನಿರ್ವಹಣೆಯು ತಮ್ಮ ದುಡಿಮೆಯನ್ನೇ ಅವಲಂಬಿಸಿದೆ ಎಂದಿರುವುದಾಗಿಯೂ, ಹೆಚ್ಚು ಶಿಕ್ಷಣ ಇಲ್ಲದೇ ಇರುವ ಕಾರಣದಿಂದಾಗಿ, ಮೀನುಗಾರಿಕಾ ಉದ್ಯೋಗವನ್ನೇ ಅವಲಂಬಿಸಿರುವುದಾಗಿ ತಿಳಿಸುತ್ತಾರೆ. ಈ ಉದ್ಯೋಗವನ್ನು ತೊರೆದರೆ ಕುಟುಂಬ ನಿರ್ವಹಣೆ ಕಷ್ಟಸಾಧ್ಯ. ಮಹಿಳೆಯರು ದಿನದ ಹೆಚ್ಚಿನ ಸಮಯ ಮನೆಯಿಂದ ಹೊರಗೆ ಉದ್ಯೋಗ ಕ್ಷೇತ್ರದಲ್ಲಿ ಇರುವುದರಿಂದ ಮಕ್ಕಳ ಆರೋಗ್ಯ ಹಾಗೂ ಶಿಕ್ಷಣದ ಕಡೆಗೆ ಗಮನ ಕೊಡಲು ಕಷ್ಟವಾಗುತ್ತಿದ್ದು, ಉದ್ಯೋಗದಲ್ಲಿಯೂ ಯಾವುದೇ ಭದ್ರತೆ ಇಲ್ಲದೇ ಇರುವುದು, ಸಂಸ್ಕರಣ ಘಟಕದಲ್ಲಿ ಯಂತ್ರಾಧಾರಿತ ಉದ್ಯೋಗದ ಅರಿವಿನ ಕೊರತೆ, ಸಾಲಗಾರರು ಹಾಗೂ ಹರಾಜುಗಾರರಿಂದ ನಡೆಯುವ ಶೋಷಣೆಯು ಮಹಿಳೆಯು ಸಬಲೀಕರಣ ಹೊಂದುವಲ್ಲಿ ತೊಡಕಾಗಿದೆ ಎಂದು ಉಲ್ಲೇಖಿಸಿದ್ದಾರೆ. ಇತ್ತೀಚೆಗೆ ಅಭಿವೃದ್ಧಿಗೊಳ್ಳುತ್ತಿರುವ ಮೀನು ಉದ್ಯಮಗಳಲ್ಲಿ ಸ್ಥಳೀಯ ಸ್ತ್ರೀಯರು ಸಣ್ಣ ಪ್ರಮಾಣದ ಮೀನು

ಸಂಸ್ಕರಣಾ ಘಟಕದಲ್ಲಿ ನಿರತರಾಗಿದ್ದು ಉದ್ಯೋಗ ಹಾಗೂ ಜೀವನದ ಭದ್ರತೆ ಇಲ್ಲದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಷ್ಟೇ ಅಲ್ಲದೆ ಮೀನು ಸಂಸ್ಕರಣಾ ಕಾರ್ಯದಲ್ಲಿ ನಿರತ ಮಹಿಳೆಯರು ನಿರ್ವಹಿಸುವ ಮೀನು ಒಣಗಿಸುವಿಕೆ, ಮೀನುಗಳ ಬೇರ್ಪಡಿಸುವಿಕೆ, ಉಪ್ಪು ಹಾಕಿ ಒಣಗಿಸುವಿಕೆ, ಪೇಸ್ಟ್ ಹಾಗೂ ತುಂಡುಗಳಾಗಿ ಮೀನುಗಳನ್ನು ಹಂತ ಹಂತವಾಗಿ ವಿಭಾಗಿಸುವ ಕಾರ್ಯದಲ್ಲಿ ತೊಡಗಿರುವ ಮಹಿಳೆಯರು ದಿನನಿತ್ಯದಲ್ಲಿ ನಡೆಸುವ ಅನಿರ್ದಿಷ್ಟ ಅವಧಿಯ ದುಡಿಮೆಯು ಆಕೆಯ ಕುಟುಂಬ, ಆರೋಗ್ಯ, ಮಕ್ಕಳ ಲಾಲನೆ, ಪಾಲನೆಗೆ ತೊಂದರೆ ಉಂಟಾಗುತ್ತಿರುವುದು ಮತ್ತು ಔಪಚಾರಿಕ ಘಟಕದಲ್ಲಿ ಕಾರ್ಯ ನಿರ್ವಹಿಸುವ ಮಹಿಳೆಯು ಕೆಲವು ಬಾರಿ ದಿನನಿತ್ಯ ಸಂಬಳ ಪಡೆಯದೇ ವಾರ ಅಥವಾ ತಿಂಗಳಿಗೊಮ್ಮೆ ಪಡೆಯುವ ಕಾರಣ ದುಡಿಮೆಯು ಸರಿಯಾದ ಸಮಯಕ್ಕೆ ಉಪಯೋಗಕ್ಕೆ ಬಾರದೇ ಇರುವ ಚಿಂತಾಜನಕ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಮೀನು ಮಾರಾಟಕ್ಕಾಗಿ ಮೀನಿನ ಖರೀದಿಯಲ್ಲಿ ಪುರಷರೊಂದಿಗೆ ಮಹಿಳೆಯು ಸ್ಪರ್ಧಿಸಬೇಕಾಗಿರುವ ಕಾರಣ ಆಕೆಯು ಬೆಳಗಿನ ಜಾವ ಬಂದರಿನಲ್ಲಿ ಐದು ಗಂಟೆಗೆ ತೆರಳುವ ಅಗತ್ಯತೆಯೂ ಇದೆ. ಮಾರುಕಟ್ಟೆಯಲ್ಲಿನ ನೈರ್ಮಲ್ಯದ ಕೊರತೆ, ಶುದ್ಧ ಕುಡಿಯುವ ನೀರಿನ ಕೊರತೆ, ಶೌಚಾಲಯದ ಕೊರತೆ, ಮಹಿಳಾ ವಿಶ್ರಾಂತಿ ಕೊಠಡಿಯಿಲ್ಲದೇ ಇರುವ ಪರಿಸ್ಥಿತಿ, ಐಸ್ ಬಾಕ್ಸ್, ಟೇಬಲ್ ವ್ಯವಸ್ಥೆ ಇಲ್ಲದೇ ಇರುವುದು. ಅಷ್ಟೇ ಅಲ್ಲದೇ ಗೂಂಡಾಗಳ ಹಪ್ತಾ ವಸೂಲಿ ಕೂಡಾ ಆಕೆಯು ಎದುರಿಸುತ್ತಿರುವ ಸಮಸ್ಯೆಗಳಾಗಿವೆ. ಮಹಿಳೆಯು ಹೆಚ್ಚು ಸಮಯ ಉರಿಯುವ ಸೂರ್ಯನ ಬಿಸಿಲ ಕಿರಣಗಳಿಗೆ ಮೈ ಒಡ್ಡುವ ಪರಸ್ಥಿತಿ ನಿರ್ಮಾಣವಾಗುವ ಕಾರಣ ನಿರ್ಜಲೀಕರಣದಂತಹ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಹಿಳೆಯು ಮೀನುಗಾರಿಕೆಯಲ್ಲಿ ನಿರ್ವಹಿಸುವ ಪಾತ್ರವು ಎರಡನೇ ದರ್ಜೆಯಾಗಿದ್ದು, ಆರ್ಥಿಕ ಹಾಗೂ ಸಾಮಾಜಿಕವಾಗಿ ಕಡಿಮೆ ಪ್ರಾಶಸ್ತ್ಯವನ್ನು ನೀಡುವುದು, ಮಧ್ಯವರ್ತಿಗಳ ಹಾವಳಿ, ಬಲವಂತದ ದುಡಿಮೆ, ಕಡಿಮೆ ವೇತನ, ಪೂರಕ ಉದ್ಯೋಗಕ್ಕೆ ತರಬೇತಿ ಇಲ್ಲದೇ ಇರುವುದು. ಇವು ಮೀನುಗಾರ ಮಹಿಳೆಯರನ್ನು ಬಡತನದ ಸರಹದ್ದಿನಲ್ಲಿಯೇ ಇಡುತ್ತವೆ ಎಂಬುದಾಗಿ ಈ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ.

ಕಲವಾಸ್ (೧೯೮೧)ಅವರ ಅಧ್ಯಯನವು ಮಹಾರಾಷ್ಟ್ರ ಮೀನುಗಾರರ ಜೀವನವು ಶೋಚನೀಯ ಪರಿಸ್ಥಿತಿಯಲ್ಲಿರುವುದನ್ನು ಉಲ್ಲೇಖಿಸಿದೆ. ಆ ಪ್ರದೇಶದಲ್ಲಿನ ಆರ್ಥಿಕ ಬೆಳವಣಿಗೆಯ ಕೊರತೆಯು ಮೀನುಗಾರಿಕೆಯ ನಿರತರನ್ನು ವಲಸೆ ಕಾರ್ಮಿಕರನ್ನಾಗಿ ಮೀನುಗಾರಿಕಾ ಪ್ರದೇಶಗಳಿಗೆ ವಲಸೆ ಹೋಗುವಂತೆ ಪ್ರೇರೇಪಿಸುತ್ತದೆ. ಇದರಿಂದ ಆ ಸಮುದಾಯದ ಮಹಿಳೆಯರು ಆರ್ಥಿಕವಾಗಿ ತುಂಬಾ ತೊಂದರೆಗೆ ಒಳಗಾಗುತ್ತಿದ್ದಾರೆ. ಮೀನುಗಾರ ಸಮುದಾಯದ ಸಾಲದ ವ್ಯಾಪ್ತಿಯು ಅಗಾಧ ಪ್ರಮಾಣದಲ್ಲಿರುತ್ತದೆ. ಇಲ್ಲಿಯ ಮೀನುಗಾರ ಸಮುದಾಯದ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳು, ಸಾರಿಗೆ ಸಂಪರ್ಕ ಸೌಲಭ್ಯ, ನೀರಿನ ಸೌಲಭ್ಯ, ವಿದ್ಯುತ್ ಸೌಲಭ್ಯ ಇತ್ಯಾದಿಗಳು ಅತೀ ಅವಶ್ಯಕವಾದವುಗಳು. ಆ ನಿಟ್ಟಿನಲ್ಲಿ ಸರಕಾರಗಳು ಕಾರ್ಯಪ್ರವೃತ್ತವಾದರೆ ಮೀನುಗಾರಿಕೆಗಾಗಿ ವಲಸೆ

ಹೋಗುವುದನ್ನು ಕಡಿಮೆ ಮಾಡಿ ಆ ಪ್ರದೇಶದ ಮೀನುಗಾರಿಕಾ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿ ಆರ್ಥಿಕ ಸದೃಢತೆಯನ್ನು ಸಾಧಿಸಬಹುದಾಗಿದೆ ಎಂದಿದೆ.

ಇವೆಲ್ಲದರ ಜೊತೆಗೆ ಮೀನುಗಾರಿಕಾ ವೃತ್ತಿನಿರತ ಮಹಿಳೆಯರಿಗೆ ತಮ್ಮ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿರುವುದು ಕೆಲವು ಅಧ್ಯಯನಗಳಿಂದ ತಿಳಿದು ಬರುತ್ತದೆ. ಅಕ್ಷತಾ (೨೦೧೦)ಅವರು ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಆರ್ಥಿಕ ಸಮಸ್ಯೆಗಳ ಬಗ್ಗೆ ನಡೆಸಿರುವ ಅಧ್ಯಯನದಲ್ಲಿ, ಮೀನುಗಾರ ಮಹಿಳೆಯರಿಗೆ ಮಾರುಕಟ್ಟೆಯಲ್ಲಿ ಸ್ಪರ್ಧೆ, ಮನೆಯಲ್ಲಿ ಮಕ್ಕಳ ಲಾಲನೆ–ಪಾಲನೆ, ಮನೆ ಕೆಲಸ ಮತ್ತು ಮೀನಿನ ಅಲಭ್ಯತೆ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂದು ವಿಶ್ಲೇಷಿಸಿದ್ದಾರೆ. ಮೀನಿನ ಸಾಗಾಟವೂ ಅತೀ ದೊಡ್ಡ ಸಮಸ್ಯೆ ಯಾಗಿ ಮೊಗವೀರ ಮಹಿಳೆಯರನ್ನು ಕಾಡುತ್ತಿದೆ ಎಂದಿದ್ದಾರೆ. ಮನಜಿತ್ ಸಿಂಗ್.ಕೆ (೨೦೧೧)ಅವರ ಅಧ್ಯಯನದಲ್ಲಿ ಮೀನುಗಾರಿಕಾ ಕುಟುಂಬಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿವೆ. ಮೀನುಗಾರರ ಶೋಷಣೆಯಲ್ಲಿ ಮಧ್ಯವರ್ತಿಗಳ ಪಾತ್ರ ಬಹಳಷ್ಟಿವೆ. ೧೯೬೦ರ ನಂತರ ಅತಿಯಾದ ಯಾಂತ್ರೀಕೃತ ಮೀನುಗಾರಿಕೆಯಿಂದಾಗಿ ಮಾರುಕಟ್ಟೆ ಚಾಲಿತ ಪರಿಸ್ಥಿತಿಯಿಂದಾಗಿ ಮೀನು ಕೃಷಿ ಅವಲಂಬಿತ ಮೀನುಗಾರರು ತಮ್ಮ ಜೀವನೋಪಾಯದಿಂದ ವಂಚಿತರಾಗಿರುವುದಾಗಿ ತಿಳಿಸಿರುತ್ತಾರೆ. ಹಲವು ಅಧ್ಯಯನಗಳಲ್ಲಿ ಕೇವಲ ಸಮಸ್ಯೆಯನ್ನು ಮಾತ್ರ ಗುರುತಿಸದೆ ಮಹಿಳಾಭಿವೃದ್ಧಿಗೆ ಪೂರಕ ಸಲಹೆಗಳನ್ನು ನೀಡಿರುವುದು ಕಂಡು ಬರುತ್ತದೆ. ವಸುಂಧರ.ಬಿ.ಸಿ ಹಾಗೂ. ಗುರುಲಿಂಗಯ್ಯ.ಎಂ (೨೦೧೪)ಅವರು ಬೆಸ್ತ ಸಮುದಾಯದ ಶೈಕ್ಷಣಿಕ ಸ್ಥಾನಮಾನದ ಬಗ್ಗೆ ಶಿವಮೊಗ್ಗ ತಾಲೂಕಿನಲ್ಲಿ ನಡೆಸಿದ ಸಂಶೋಧನಾ ಅಧ್ಯಯನದಲ್ಲಿ ಪ್ರಸ್ತುತ ದಿನಗಳಲ್ಲಿ ಮೊಗವೀರ ಮಹಿಳೆಯರು ಕುಲಕಸುಬನ್ನು ಬಿಟ್ಟು ಇತರೆ ಉದ್ಯೋಗಗಳನ್ನು ಅವಲಂಬಿಸಿದ್ದಾರೆ. ಇದು ಅವರ ಆರ್ಥಿಕ ಸುಧಾರಣೆಯಲ್ಲಿ ಸಹಾಯಕವಾಗಿದೆ. ಆದರೆ ಈ ಸಮುದಾಯಕ್ಕೆ ಉನ್ನತ ಶಿಕ್ಷಣ ಎಟುಕಲಾರದ ಸಂಗತಿ. ಇವರಿಗೆ ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಕಲ್ಪಿಸಿಕೊಡುವ ಪರ್ಯಾಯ ವ್ಯವಸ್ಥೆಯೊಂದರ ಅಗತ್ಯವಿದೆ. ಔಪಚಾರಿಕ ಶಿಕ್ಷಣವು ಹಿಂದುಳಿದ ಸಮುದಾಯಗಳಲ್ಲಿ ಬದುಕಿನ ಹೋರಾಟಗಳಿಗಾಗಿ ಅವರನ್ನು ತಯಾರು ಮಾಡುವ ಪ್ರಯತ್ನದಲ್ಲಿ ವಿಫಲವಾಗಿರುವುದರಿಂದ ಜ್ಞಾನಾರ್ಜನೆಯ ಜೊತೆಗೆ ಆದಾಯ ಗಳಿಕೆಗೂ ಪೂರಕವಾದಂತಹ ಕ್ರಮವಾಗಿದೆ. ಅಗತ್ಯ ಹಾಗೂ ಸಮುದಾಯಗಳ ಆಸಕ್ತಿ ಹಾಗೂ ಸೂಕ್ತ ಪ್ರತಿಭೆಗಳಿಗೆ ಅನುಗುಣವಾಗಿ ಕೌಶಲ್ಯಗಳನ್ನು ರೂಢಿಸಿಕೊಳ್ಳುವ ಅಥವಾ ಇರುವ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳುವ ಅವಕಾಶಗಳನ್ನು ಈ ಸಮುದಾಯಕ್ಕೆ ಕಲ್ಪಿಸಿಕೊಡಬೇಕಾಗಿದೆ ಎಂಬ ಅಂಶವನ್ನು ತಮ್ಮ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಮಹಿಳೆಯರ ಹೆಚ್ಚಿನ ಸಾಮಾಜಿಕ ಹಾಗೂ ಔದ್ಯೋಗಿಕ ಸಮಸ್ಯೆಗಳ ಪರಿಹಾರಕ್ಕೆ ಶಿಕ್ಷಣವನ್ನು ಪರಿಹಾರವಾಗಿ ಹೆಚ್ಚಿನ ಅಧ್ಯಯನಗಳು ಸೂಚಿಸಿವೆ. ಕಲಿತ ನಾರಿ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಬಲ್ಲಳು. ಶಿಕ್ಷಣದಿಂದಾಗಿ ಮಹಿಳೆಯರಲ್ಲಿ ಜಾಗೃತಿ ಮೂಡಿ ಸಾಮಾಜಿಕ, ಕೌಟುಂಬಿಕ ಸ್ಥಾನಮಾನಗಳು ಉನ್ನತಿಗೇರಲು ಸಾಧ್ಯವೆಂಬುದು ಹಲವು ಅಧ್ಯಯನಗಳ ಸಾರವಾಗಿದೆ.

ಮಂಜು ಪಥ್ನಿಯಾ ಜಿಸ್ವಾಸ್ ಆ್ಯಂಡ್ ರಾಮ ಮೋಹನ ರಾವ್.ಎಂ (೨೦೧೪)ಅವರ 'ಫಿಶರ್ ವುಮೆನ್ ಆಫ್ ದ ಈಸ್ಟ್ ಕೋಸ್ಟಲ್ ಇಂಡಿಯಾ ಸ್ಟಡಿ'ಎಂಬ ಅಧ್ಯಯನದಲ್ಲಿ ವೆಸ್ಟ್ ಬೆಂಗಾಲ್, ಓಡಿಶಾ, ಆಂಧ್ರಪ್ರದೇಶ ಹಾಗೂ ತಮಿಳುನಾಡಿನ ಮೀನುಗಾರಿಕಾ ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ಆರೋಗ್ಯ ಸಂಬಂಧಿತ ವಿಷಯಗಳ ಬಗ್ಗೆ ಅಧ್ಯಯನ ನಡೆಸಿದ್ದು, ಮೀನುಗಾರಿಕೆಯಲ್ಲಿ ನಿರತರಾಗಿರುವ ಮಹಿಳೆಯು ಗೃಹಕೃತ್ಯ ಹಾಗೂ ಆದಾಯ ತರುವ ಮೀನುಗಾರಿಕಾ ಉದ್ಯೋಗದಲ್ಲಿ ನಿರತರಾಗಿದ್ದು, ಅವರು ಎದುರಿಸುತ್ತಿರುವ ಅನೇಕ ಸಮಸ್ಯೆಗಳಾದ ಮೀನಿನ ದರದಲ್ಲಿನ ವ್ಯತ್ಯಾಸ, ಅನಾರೋಗ್ಯಕರವಾದ ಮಾರುಕಟ್ಟೆಯ ಸ್ಥಳ ಇತ್ಯಾದಿಗಳ ಬಗ್ಗೆ ತಿಳಿಸುತ್ತಾ, ಮುಖ್ಯವಾಗಿ ಮಹಿಳೆಯರು ಶಿಕ್ಷಣ ವಂಚಿತರಾಗಿರುವುದೇ ಎಲ್ಲಾ ರೀತಿಯ ಸಮಸ್ಯೆಗಳಿಗೆ ಕಾರಣವಾಗಿರುವುದಾಗಿ ತಮ್ಮ ಲೇಖನದಲ್ಲಿ ದಾಖಲಿಸಿದ್ದಾರೆ. ಈ ಎಲ್ಲಾ ಸಮಸ್ಯೆಗಳಿಗೆ ಪೂರಕವಾಗಿ ಕೆಲವೊಂದು ಸಲಹೆಗಳನ್ನು ನೀಡಿದ್ದು, ಮಹಿಳೆಯರಿಗೆ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣವನ್ನು ನೀಡುವುದು, ಸಾಮಾಜಿಕ ಹಾಗೂ ಆರ್ಥಿಕವಾಗಿ ಮುಂದುವರೆಯುವಂತಹ ಮಾಹಿತಿಗಳನ್ನು, ಅಭಿವೃದ್ಧಿಯಾಧಾರಿತ ಕೌಶಲ್ಯಗಳ ತರಬೇತಿಗಳನ್ನು ಸ್ವ-ಸಹಾಯ ಸಂಘಗಳ ಮುಖೇನ ಕೊಡುವಂತಹ ವ್ಯವಸ್ಥೆಗಳನ್ನು ಸರಕಾರದ ವತಿಯಿಂದ ನೀಡುವ ಅಗತ್ಯತೆ ಇದೆ ಎಂಬುದನ್ನು ತಮ್ಮ ಅಧ್ಯಯನದಿಂದ ಕಂಡುಕೊಂಡಿದ್ದಾರೆ.

ಹೆಚ್ಚಿನ ಅಧ್ಯಯನಗಳು ಮೀನುಗಾರಿಕಾ ವೃತ್ತಿಯಲ್ಲಿರುವ ಮಹಿಳೆಯರ ಮುಂದಿರುವ ಸವಾಲು ಹಾಗೂ ಸಮಸ್ಯೆಗಳನ್ನು ಗುರುತಿಸಿದರೆ, ಕೆಲವು ಅಧ್ಯಯನಗಳು ಧನಾತ್ಮಕ ಫಲಿತಗಳನ್ನು ನೀಡಿವೆ. ಮೀನುಗಾರಿಕಾ ವೃತ್ತಿ ನಿರತ ಮಹಿಳೆಯರ ಪ್ರಗತಿಯನ್ನು ಈ ಕೆಳಗಿನ ಅಧ್ಯಯನಗಳು ರುಜುವಾತು ಪಡಿಸಿವೆ. ಮಂಜುಳ ಬಸಪ್ಪ ಗುಡಿಮನಿ (೨೦೧೭)ಅವರು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸ್ವ-ಸಹಾಯ ಗುಂಪಿನ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಬಗ್ಗೆ ನಡೆಸಲಾದ ಅಧ್ಯಯನವು ಕೊಪ್ಪಳ ಜಿಲ್ಲೆಯ ೧೬ ಸ್ವ-ಸಹಾಯ ಗುಂಪಿನಿಂದ ಒಟ್ಟು ೭೯ ಮಹಿಳೆಯರನ್ನು ಅಧ್ಯಯನಕ್ಕೊಳಪಡಿಸಿತ್ತು. ಸ್ವ-ಸಹಾಯ ಗುಂಪಿನ ಸದಸ್ಯತ್ವದಿಂದಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸ, ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಕುಟುಂಬ ಹಾಗೂ ಸಮಾಜದಲ್ಲಿ ಗುರುತಿಸಿಕೊಳ್ಳುವಿಕೆ, ಸಾಮಾಜಿಕ ಅರಿವು, ಸಂಪರ್ಕ ಸಂವಹನ ಸಾಮಾರ್ಥ್ಯ ಹೆಚ್ಚಳ, ಸಮಸ್ಯೆಗಳ ಪರಿಹಾರ ಸಾಮಾರ್ಥ್ಯ, ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿಕೆ, ಸಾಲ ಪಡೆದುಕೊಳ್ಳುವ ವಿಧಾನಗಳ ಅರಿವು, ವೈಯಕ್ತಿಕವಾಗಿ, ಆರ್ಥಿಕವಾಗಿ ಸ್ಥಾನಮಾನ ಕಾಯ್ದುಕೊಳ್ಳುವ ಅರಿವು, ಆದಾಯಗಳ ಉಳಿತಾಯ ಮಾಡುವಿಕೆಯಲ್ಲಿ ಹೆಚ್ಚಳ, ಬಡತನದ ವಿರುದ್ಧ ಹೋರಾಡುವಲ್ಲಿ ಆರ್ಥಿಕ ಆದಾಯವಾಗಿ ಸಹಾಯಕವಾಗಿದೆ ಎಂಬುದನ್ನು ತಿಳಿಸುತ್ತದೆ. ವಿಕ್ಕೀ ಮೆನರ್ (೧೯೮೯)ಅವರ ಕೇರಳದ ಮೀನುಗಾರಿಕಾ ಸಮುದಾಯದ ಮೇಲೆ ನಡೆಸಿರುವ ಅಧ್ಯಯನವು ಮೀನುಗಾರಿಕೆಯಲ್ಲಿ ಅಳವಡಿಸಲಾದ ಆಧುನೀಕರಣ ತಂತ್ರಜ್ಞಾನ, ತಳಿಗಳ ಆಯ್ಕೆ, ಭೂ ನಿಲುಗಡೆ, ಜಟ್ಟಿ ಕೇಂದ್ರಗಳು, ಆಧುನಿಕ ಮಾರುಕಟ್ಟೆ ಸೌಲಭ್ಯಗಳಿಂದಾಗಿ ಮೀನುಗಾರಿಕಾ ಸಮುದಾಯದ ಮಹಿಳೆಯರಿಗೆ ಹೊಸ ಹೊಸ ಉದ್ಯೋಗ ಅವಕಾಶಗಳು ಲಭ್ಯವಾಗಿ ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗಿದೆ ಎಂದಿದೆ. ಷಣ್ಮುಗ್‌ರಾಜ್ ಹಾಗೂ

ಮತ್ತಿತರರು(೧೯೯೮) ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ೩೮ ಮೀನುಗಾರ ಹಳ್ಳಿಗಳಿಂದಲೂ ತೂತುಕುಡಿ ಜಿಲ್ಲೆಯ ೧೧ ಮೀನುಗಾರ ಹಳ್ಳಿಗಳಿಂದಲೂ ನಡೆಸಲಾದ ಅಧ್ಯಯನದಲ್ಲಿ ಮೀನುಗಾರರು ಮೀನುಗಾರಿಕೆಯ ಸ್ತರಗಳಾದ ಮೀನು ಬೇರ್ಪಡಿಸುವಿಕೆ, ಒಣಗಿಸುವಿಕೆ, ಸ್ವಚ್ಛತೆ ಹಾಗೂ ಮಾರಾಟ ಕೆಲಸಗಳಲ್ಲಿ ನಿರತರಾಗಿದ್ದು, ಅವರುಗಳ ಮೀನುಗಾರಿಕಾ ದಿನಗಳಲ್ಲಿ ಉತ್ತಮ ಆದಾಯವನ್ನು ಗಳಿಸುವುದಾಗಿ ತಿಳಿಸಿರುತ್ತಾರೆ. ಮೀನುಗಾರಿಕೆ ಅಭಿವೃದ್ಧಿಗೆ ಸರಕಾರ ಹಾಗೂ ಸರಕಾರೇತರ ಸಂಘ ಸಂಸ್ಥೆಗಳ ಸಹಕಾರ ಉತ್ತಮವಾಗಿರುವುದೇ ಮೀನುಗಾರಿಕಾ ಹಳ್ಳಿಗಳ ಅಭಿವೃದ್ಧಿಗೆ ಕಾರಣವಾಗಿರುವುದು ಹಾಗೆಯೇ ಈ ಅಧ್ಯಯನವು ಮೀನುಗಾರಿಕೆಯು ನಿರ್ದಿಷ್ಟವಾದ ಆದಾಯವನ್ನು ತರುವ ಉದ್ಯೋಗವಾಗದೇ ಇರುವುದೇ ಮೀನುಗಾರರ ಸಮಸ್ಯೆ ಎಂಬುದನ್ನು ಗುರುತಿಸಿದೆ. ಅಹಿಲನ್.ಬಿ ಮತ್ತು ಸೆಲ್ವರಾಜ್.ಪಿ (೧೯೯೧)ಅವರು ತಮಿಳುನಾಡಿನ ಚಿದಂಬರ ಜಿಲ್ಲೆಯಲ್ಲಿ ನಡೆಸಲಾದ ಅಧ್ಯಯನದಲ್ಲಿ ಮೀನುಗಾರಿಕಾ ನಿರತ ಮಹಿಳೆಯರು ಮೀನುಗಾರಿಕೇತರ ಮಹಿಳೆಯರಿಗಿಂತ ಹೆಚ್ಚು ಸಂಪಾದಿಸುವುದಾಗಿಯೂ, ಹೆಚ್ಚು ಸಂಪಾದನೆಯು ಮೀನುಗಾರಿಕಾ ಮಹಿಳೆಯರ ಸಾಮಾಜಿಕವಾಗಿ ಉತ್ತಮ ಸ್ಥಾನಮಾನ ಪಡೆಯುವಲ್ಲಿ ಹಾಗೂ ಕುಟುಂಬದಲ್ಲಿ ಮಹಿಳೆಯು ನಿರ್ಧಾರ ಕೈಗೊಳ್ಳಲು ಸೂಕ್ತ ಅವಕಾಶವನ್ನು ಪಡೆದುಕೊಂಡಿದ್ದಾರೆ ಇದು ಮಹಿಳೆಯ ಆರ್ಥಿಕ ಭದ್ರತೆಯ ಕಾರಣದಿಂದಾಗಿದೆ ಎಂಬುದನ್ನು ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ರಾಮನ್ (೧೯೯೦)ಅವರ ಅಧ್ಯಯನದಲ್ಲಿ ಒಣಮೀನು ಮಾರಾಟ ಮಾಡುವ ಮಹಿಳೆಯರ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ಒಣಮೀನು ವ್ಯಾಪಾರವು ಹೆಚ್ಚಿನ ಲಾಭವನ್ನು ಪಡೆಯುವ ಉದ್ಯೋಗವಾಗಿದ್ದು, ಒಣಮೀನು ವ್ಯಾಪಾರದಿಂದ ಮಹಿಳೆಯರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮ ಬದಲಾವಣೆಗಳಾಗುತ್ತಿವೆ ಎಂದಿದ್ದಾರೆ. ಸಂಜೀವ್ ಘೋಷ್ (೧೯೯೧)ಅವರು ಕರ್ನಾಟಕ ರಾಜ್ಯದಲ್ಲಿ ಒಳನಾಡಿನ ಮೀನುಗಾರಿಕೆಗಳ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ಸರಕಾರವು ಸಾಂಪ್ರದಾಯಿಕ ಹಾಗೂ ಆಧುನಿಕ ಮೀನುಗಾರಿಕೆಗೆ ಪೂರಕ ಸವಲತ್ತುಗಳನ್ನು ಒದಗಿಸಿರುವುದರಿಂದಾಗಿ ಮೀನಿನ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ. ಇದರಿಂದಾಗಿ ಮೀನುಗಾರಿಕಾ ಕ್ಷೇತ್ರದಲ್ಲಿ ದುಡಿಯುವ ಮೀನುಗಾರ ಸಮುದಾಯ ಹಾಗೂ ಮಹಿಳೆಯರು ಆರ್ಥಿಕವಾಗಿ ಅಭಿವೃದ್ಧಿಯನ್ನು ಕಾಣುತ್ತಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ.

ಈ ಎಲ್ಲಾ ಧನಾತ್ಮಕ ಅಂಶಗಳನ್ನು ಅಧ್ಯಯನಕಾರರು ಗುರುತಿಸಿದ್ದರೂ ಮೀನುಗಾರಿಕಾ ವೃತ್ತಿಯಲ್ಲಿರುವ ಸವಾಲುಗಳು ಋಣಾತ್ಮಕವಾಗಿ ಹೆಚ್ಚು ಪರಿಣಾಮಕಾರಿಯಾಗಿ ಕಂಡು ಬರುತ್ತದೆ. ಮಹಿಳಾ ಅಭಿವೃದ್ಧಿಯ ಕನಸು ನನಸಾಗಬೇಕಾದರೆ ಮೀನುಗಾರಿಕಾ ವೃತ್ತಿಯ ಸವಾಲುಗಳನ್ನು ತೊಡೆದು ಹಾಕಿ ವೃತ್ತಿಯನ್ನು ಇನ್ನಷ್ಟು ಸಹ್ಯಗೊಳಿಸಬೇಕಾದ ಅನಿವಾರ್ಯತೆಯಿದೆ.

೨.೨. ರಾಜಕೀಯದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ ಸಾಧ್ಯತೆಗಳ ಅವಲೋಕನ

ಈ ಭಾಗವು ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಆ ಮೂಲಕ ಸಾಕಾರಗೊಳ್ಳಬಲ್ಲ ಮಹಿಳಾಭಿವೃದ್ಧಿಯ ಮೇಲೆ ಕೇಂದ್ರೀಕೃತಗೊಂಡಿದೆ. ಮಹಿಳೆಯರು ಕೇವಲ ಕೌಟುಂಬಿಕವಾಗಿ,

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸದೃಢರಾದರೆ ಸಾಲದು. ಅವರು ರಾಜಕೀಯವಾಗಿಯೂ ಬೆಳೆದು ಉತ್ತಮ ನಾಯಕತ್ವ ನೀಡುವಂತಾಗಬೇಕು. ಮಹಿಳಾ ರಾಜಕೀಯ ಸಬಲೀಕರಣದ ಅಧ್ಯಯನದ ಅಗತ್ಯತೆಯು ಇಂದಿನ ಸಮಾಜದಲ್ಲಿ ಬಹಳಷ್ಟಿದೆ. ಮಹಿಳೆ ರಾಜಕೀಯ ಪ್ರವೇಶ ಪಡೆದು ಸಮಾನತೆಯ ನೀತಿ ನಿಯಮಗಳನ್ನು ಜಾರಿಗೊಳಿಸುವ ಅವಕಾಶ ಸಿಕ್ಕರೆ ಖಂಡಿತವಾಗಿಯೂ ಅಭಿವೃದ್ಧಿ ಸಾಧ್ಯ. ಮೊಗವೀರ ಮಹಿಳೆಯರು ಮೀನುಗಾರಿಕಾ ಕುಲಕಸುಬನ್ನು ಹೊಂದಿರುವವರು. ಆರ್ಥಿಕವಾಗಿ ಕುಟುಂಬ ನಿರ್ವಹಣೆಯಲ್ಲಿ ಪ್ರಧಾನ ಪಾತ್ರವನ್ನು ಈಗಾಗಲೇ ವಹಿಸಿದ್ದಾರೆ. ಆದರೆ ರಾಜಕೀಯದಲ್ಲಿ ಅವರ ಸಾಧನೆ ಇನ್ನೂ ಅಷ್ಟಕಷ್ಟೇ. ಈ ಭಾಗದಲ್ಲಿ ಮೊಗವೀರ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯ ಪರಿಚಯವನ್ನು ಮಾಡಿಕೊಂಡು ಮೊಗವೀರ ಮಹಿಳಾ ರಾಜಕೀಯ ಅಭಿವೃದ್ಧಿಗೆ ತೊಡಕಾಗಿರುವ ಅಂಶಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಮೊಗವೀರ ಮಹಿಳಾ ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಿತ ಪೂರಕ ವಾತಾವರಣಕ್ಕೆ ಸಂಬಂಧಿಸಿದ ಜ್ಞಾನರಾಶಿಯನ್ನು ಕ್ರೋಢೀಕರಿಸಿ ಇಲ್ಲಿ ನೀಡಲಾಗಿದೆ.

ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಮಹಿಳಾ ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದ ಅಧ್ಯಯನಗಳ ಸಾಹಿತ್ಯ ಸಮೀಕ್ಷೆಯನ್ನು ಈ ಭಾಗದಲ್ಲಿ ನೀಡಲಾಗಿದೆ. ಮೊಗವೀರ ಮಹಿಳಾ ರಾಜಕೀಯ ಅಭಿವೃದ್ಧಿಗೆ ತೊಡಕಾಗಿರುವ ಅಂಶಗಳೇನು? ಮಹಿಳಾ ರಾಜಕೀಯ ಸಬಲೀಕರಣವನ್ನು ಸಾಧಿಸಲು ಬೇಕಾದ ಪೂರಕ ವಾತವರಣವೇನು? ಎಂಬುದರ ಬಗ್ಗೆ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಡೆದ ಅಧ್ಯಯನಗಳ ಫಲಿತಗಳನ್ನು ಕ್ರೋಢೀಕರಿಸಿ ಇಲ್ಲಿ ನೀಡಲಾಗಿದೆ.

ರಾಜಕೀಯ ಸಬಲೀಕರಣದ ಬಗ್ಗೆ ಅಧ್ಯಯನಕಾರರು ವಿಭಿನ್ನ ದೃಷ್ಟಿಕೋನ ಹೊಂದಿದ್ದಾರೆ. ಸಿವಾಲ್‌ರವರ ಅಭಿಪ್ರಾಯದಂತೆ ರಾಜಕೀಯ ಸಬಲೀಕರಣವು ಜಾಗೃತಿ ಹಾಗೂ ಅರಿವು ಮೂಡಿಸಿ ಸಾಮರ್ಥ್ಯ ವೃದ್ಧಿಗೊಳಿಸಿ ಹೆಚ್ಚಿನ ರಾಜಕೀಯ ಪಾಲ್ಗೊಳ್ಳುವಿಕೆ, ಹೆಚ್ಚಿನ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಹಾಗೂ ಪರಿವರ್ತಕ ಕ್ರಿಯೆಗೆ ಒಳಪಡಿಸುವ ನಿರಂತರ ಪ್ರಕ್ರಿಯೆಯಾಗಿದೆ. ರಾಜಕೀಯ ಸಬಲೀಕರಣದಿಂದಾಗಿ ಮಹಿಳೆಯರು ಪುರುಷರಷ್ಟೇ ಸೂಕ್ತ ಮಾನ್ಯತೆಯನ್ನು ಪಡೆದು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಶಕ್ತರಾಗುತ್ತಾರೆ. ರಾಜಕೀಯ ಸಬಲೀಕರಣವು ಮಹಿಳೆಯರಿಗೆ ನೀತಿ ನಿಯಮಗಳ ರಚನೆ ಹಾಗೂ ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸುವಿಕೆಯ ಮೂಲಕ ಅವರಿಗೆ ವಿಶೇಷ ಪಾತ್ರವನ್ನು ನಿರ್ಮಾಣ ಮಾಡುತ್ತದೆ. ಮಹಿಳೆಯರ ರಾಜಕೀಯ ಪ್ರವೇಶದ ಮೂಲದ ಬಗ್ಗೆ ತಿಳಿದುಕೊಳ್ಳಲು ಯರ್ರಿಸ್ವಾಮಿ.ಈ (೨೦೧೦)ಅವರ *'ರಾಜಕೀಯ ನಿರ್ಧಾರಗಳಲ್ಲಿ ಮಹಿಳೆ'* ಎಂಬ ಅಧ್ಯಯನವು ಪೂರಕವಾಗಿದೆ. ೧೯೯೦ರ ದಶಕದಲ್ಲಿ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನವು ಹಾಗೂ ಅದಕ್ಕೆ ಸಂಬಂಧಿಸಿದ ವಿಚಾರ ವಿಮರ್ಶೆಗಳು ರಾಷ್ಟ್ರದಾದ್ಯಂತ ನಡೆದವು. ಅದರ ಪೂರ್ವದಲ್ಲಿ ದೇಶದ ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಮಹಿಳೆ ನಿರ್ಧಾರ ತೆಗೆದುಕೊಳ್ಳುವ ವಿಚಾರ ಮೊದಲ ಬಾರಿಗೆ ಪ್ರಸ್ತಾಪವಾಯಿತು. ಸ್ವಾತಂತ್ರ್ಯಾ ನಂತರ

ಶಿಕ್ಷಣ, ಆಡಳಿತ, ರಾಜಕೀಯ ಎಲ್ಲೆಡೆ ಮಹಿಳೆಯರ ಕೊಡುಗೆ ಅಪಾರ. ಇಂಥವರನ್ನು ಸಾಧಕ ಮಹಿಳೆಯರನ್ನಾಗಿ ಸ್ವೀಕರಿಸಿ ಪುರುಷರಿಗೆ ನೀಡುವ ಗೌರವ, ಸ್ಥಾನಮಾನ ಸಹ ನೀಡಲಾಯಿತು. ಇವೆಲ್ಲದರ ಪರಿಣಾಮವಾಗಿ ಮಹಿಳೆಯರು ಮನೆಯಿಂದ ಹೊರಬಂದು ಸಮಾಜಿಕ ಸಂಘಟನೆಗಳಲ್ಲಿ ಪಾಲ್ಗೊಳ್ಳುವಂತಾಯಿತು. ಸ್ವಾತಿ ಚಟ್ಟೋಪಾಧ್ಯಾಯ (೨೦೧೫) ರವರು ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಮಹಿಳೆಯರ ೧೯೭೫ ರಿಂದ ೨೦೧೨ ರವರೆಗಿನ ರಾಜಕೀಯ ಪಾಲ್ಗೊಳ್ಳುವಿಕೆಯ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ಜಿಲ್ಲಾ ಕಾಂಗ್ರೆಸ್ ತನ್ನ ರಾಜಕೀಯ ಪಾಲ್ಗೊಳ್ಳುವಿಕೆಯ ಉಸ್ತುವಾರಿಯನ್ನು ಜಿಲ್ಲಾ ಮಹಿಳಾ ಕಾಂಗ್ರೆಸ್ ಎಂಬ ಸಮಿತಿಗೆ ನೀಡಿತ್ತು. ೧೯೬೭ ರಿಂದ ೨೦೦೫ ರವರೆಗೆ ಆರು ಜನ ಮಹಿಳಾ ಸದಸ್ಯರನ್ನೊಳಗೊಂಡ ಸಮಿತಿಯು ೧೯೭೦ರ ವರೆಗೆ ಹೆಣ್ಣು ಮಕ್ಕಳ ಸಾಗಾಣಿಕೆ, ವರದಕ್ಷಿಣೆಯ ಕಿರುಕುಳದ ವಿರುದ್ಧ, ವಿಧವೆಯರ ರಕ್ಷಣೆ, ಮಹಿಳೆಯರ ಹಿತರಕ್ಷಣೆಯ ಕಾನೂನು ಪುನರ್ ರಚನೆ ಬಗ್ಗೆ ಹೋರಾಡುತ್ತಿತ್ತು. ನಂತರದಲ್ಲಿ ಈ ಸಮಿತಿಯು ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಬಗ್ಗೆ ಕಾರ್ಯವನ್ನು ಮುಂದುವರೆಸಿತು. ೧೯೯೨ರಲ್ಲಿ ಮುರ್ಷಿದಾಬಾದ್ ಜಿಲ್ಲೆಯ ೨೫ ಗ್ರಾಮ ಪಂಚಾಯತ್‌ನ ಸದಸ್ಯರಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಕೇವಲ ೨ ರಷ್ಟಿತ್ತು. ೧೯೯೪ರಲ್ಲಿ ಜಾರಿಗೆ ಬಂದ ಪಶ್ಚಿಮ ಬಂಗಾಳದ ಪಂಚಾಯತ್ ರಾಜ್ ಕಾಯ್ದೆ, ೧೯೯೪ರ ಪಶ್ಚಿಮ ಬಂಗಾಳದ ನಗರಾಡಳಿತ ಕಾಯ್ದೆ, ೧೯೯೪ರ ಪಶ್ಚಿಮ ಬಂಗಾಳದ ಮಹಾನಗರ ಪಾಲಿಕೆ ಕಾಯ್ದೆ ಅನುಸಾರ ಸ್ಥಳೀಯ ಸರ್ಕಾರದಲ್ಲಿ ೧/೩ ರಷ್ಟು ಮಹಿಳಾ ಮೀಸಲಾತಿಯನ್ನು ನೀಡಿತು. ಇದರನ್ವಯ ಸ್ಥಳೀಯಾಡಳಿತದಲ್ಲಿ ಮಹಿಳೆಯರ ಸಂಖ್ಯೆ ಶೇಕಡಾ ೩೪ ಅಂದರೆ ೨೮೧೩ ಸದಸ್ಯರಲ್ಲಿ ಮಹಿಳಾ ಸದಸ್ಯರ ಸಂಖ್ಯೆ ೧೦೭೭ ರಷ್ಟಿತ್ತು. ೨೦೧೨ ಮಾರ್ಚ್ ೧೨ ರಿಂದ ೨೦೧೩ರ ಫೆಬ್ರವರಿ ೧೪ ರವರೆಗೆ ನಡೆದ ಸ್ಥಳೀಯಾಡಳಿತದ ಚುನಾವಣೆಯಲ್ಲಿ ಶೇಕಡಾ ೩೩ರಿಂದ ಶೇಕಡಾ ೫೦ ರವರೆಗೆ ಮಹಿಳಾ ಸದಸ್ಯರ ಸ್ಥಾನವನ್ನು ಮೀಸಲಿರಿಸಿತು. ಇದರಿಂದಾಗಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಹೆಚ್ಚಳವನ್ನು ಕಂಡಿತು. ಮಹಿಳೆಯರು ಸಾಮಾಜಿಕ ಪಿಡುಗುಗಳು ಹಾಗೂ ಮಹಿಳಾ ಹಕ್ಕಿನ ಬಗ್ಗೆ ತೀವ್ರ ಸ್ವರೂಪದಲ್ಲಿ ಹೋರಾಟ ನಡೆಸಿ, ಸಾಕ್ಷರತೆ ಹಾಗೂ ಮೂಲ ಸೌಕರ್ಯಗಳನ್ನು ನೀಡುವಲ್ಲಿ ಸರ್ಕಾರದ ಗಮನ ಸೆಳೆದರು. ೧೯೯೧ರಲ್ಲಿ ಮುರ್ಷಿದಾಬಾದ್ ಜಿಲ್ಲೆಯ ಹೆಣ್ಣು ಮಕ್ಕಳ ಸಾಕ್ಷರತೆಯ ಪ್ರಮಾಣ ಶೇಕಡಾ ೨೯.೫೭ರಷ್ಟಿತ್ತು. ಅದು ೨೦೦೧ರಲ್ಲಿ ಶೇಕಡಾ ೪೮.೩೩ ರವರೆಗೆ ಹೆಚ್ಚಳವನ್ನು ಕಂಡಿತು. ಹಾಗೆಯೇ ಮಹಿಳೆಯರು ಸ್ವ-ಸಹಾಯ ಸಂಘಗಳ ಮೂಲಕ ಸಾಲವನ್ನು ಪಡೆದು ಸ್ವ ಉದ್ಯೋಗವನ್ನು ಮಾಡಿ ಆರ್ಥಿಕವಾಗಿ ಸಬಲರಾದರು. ಸ್ವ-ಸಹಾಯ ಸಂಘಗಳ ಸದಸ್ಯತ್ವದಿಂದಾಗಿ ಮತದಾನದ ಬಗ್ಗೆ ಅರಿವು ಹೆಚ್ಚಾಗಿ ಮಹಿಳಾ ಮತದಾನ ಪ್ರಮಾಣದಲ್ಲಿಯೂ ಹೆಚ್ಚಳವಾಗಿರುವುದಾಗಿ ತಮ್ಮ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಮುಸ್ತಾನ್ ವಾಲಿ.ಎಂ.ಡಿ ಅವರ *'ವುಮೆನ್ ಅಂಡ್ ಪಾಲಿಟಿಕ್ಸ್'* ಕೃತಿಯ ಪ್ರಕಾರ ಮಹಿಳಾ ರಾಜಕೀಯ ಪ್ರವೇಶ ಸಾಮಾಜಿಕ ಪರಿವರ್ತನೆಯಿಂದ ಪ್ರೇರಿತಗೊಂಡಿದೆ. ಮಹಿಳೆಯರಿಗೆ ರಾಜಕೀಯ ಅವಕಾಶಗಳು ಜಾಸ್ತಿ ದೊರೆತಾಗ ಅವರ ಅಭಿವೃದ್ಧಿ ಸುಲಭವಾಗುತ್ತದೆ. ಮುಸ್ತಾನ್ ವಾಲಿಯವರು ತಿಳಿಸುವಂತೆ

ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಕೆಲವು ಐತಿಹಾಸಿಕ ಕಾರಣಗಳಿಂದ ನಿರ್ಲಕ್ಷಿಸಲಾಗಿದೆ. ಇದು ಪ್ರಪಂಚದ ಹಲವು ದೇಶಗಳಲ್ಲಿ ಕಂಡುಬರುತ್ತದೆ. ಶಿಕ್ಷಣ ಮತ್ತು ಆಧುನೀಕರಣದಿಂದಾಗಿ ಮಹಿಳೆಯರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವಿಕೆಯು ಆರಂಭವಾಯಿತು. ಹಲವಾರು ಸ್ತ್ರೀವಾದಿ ಸಂಘಟನೆಗಳು ಹಾಗೂ ಮಹಿಳೆಯರು ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ತಮ್ಮ ಸ್ಥಾನವನ್ನು ಪಡೆಯಲು ಹಾಗೂ ರಾಜಕೀಯ ಹಕ್ಕುಗಳನ್ನು ಪ್ರತಿಪಾದಿಸಲು ಪ್ರಾರಂಭಿಸಿದರು. ಇದರಿಂದಾಗಿ ಮಾನವ ಸಮುದಾಯದಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನು ಸರ್ಕಾರದ ಎಲ್ಲ ವಲಯಗಳಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆಯ ಮಹತ್ವನ್ನು ಅರಿತುಕೊಂಡವು. ಪರಿಣಾಮವಾಗಿ ಕಾನೂನು, ರಾಜಕೀಯ ಆಡಳಿತದಲ್ಲಿ ಮಹಿಳೆಯರನ್ನು ಒಳಗೂಡಿಸಿಕೊಳ್ಳುವ ಪ್ರಕ್ರಿಯೆ ಆರಂಭಗೊಂಡಿತು. ಮಹಿಳಾ ರಾಜಕೀಯ ಪ್ರವೇಶದಿಂದಾಗಿ ಅವರ ಜೀವನದಲ್ಲಾಗಿರುವ ಧನಾತ್ಮಕ ಬದಲಾವಣೆಗಳನ್ನು ಹೆಚ್ಚಿನ ಅಧ್ಯಯನಗಳು ಸಾಬೀತುಪಡಿಸಿವೆ. ಮಹಿಳೆಗೆ ಶಿಕ್ಷಣವು ಹಲವು ವಿಧಗಳಲ್ಲಿ ಪ್ರಯೋಜನಗಳನ್ನು ನೀಡುತ್ತದೆ. ಮಹಿಳೆಯರ ಕೌಟುಂಬಿಕ, ಸಾಮಾಜಿಕ ಹಾಗೂ ಅರ್ಥಿಕ ಬೆಳವಣಿಗೆ ಅಥವಾ ಅಭಿವೃದ್ಧಿಗೆ ಶಿಕ್ಷಣವೇ ಮೂಲ ಕಾರಣವಾಗಿದೆ. ಇನ್ನು ರಾಜಕೀಯವಾಗಿಯೂ ಮಹಿಳೆಯ ಪಾಲ್ಗೊಳ್ಳುವಿಕೆಗೆ ಶಿಕ್ಷಣ ನೀಡಿರುವ ಕೊಡುಗೆ ಅಸಾಮಾನ್ಯವಾದುದಾಗಿದೆ. ಶಿಕ್ಷಿತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪ್ರವೇಶ ಮಾಡಿರುವುದು ಅಧ್ಯಯನಗಳಲ್ಲಿ ಕಂಡುಬರುತ್ತದೆ. ಮಾಣಿಕ್ಯಾಂಬ (೧೯೮೯)ಅವರ ಆಂಧ್ರಪ್ರದೇಶದ ಅಧ್ಯಯನ ಒಂದರಲ್ಲಿ ಶಿಕ್ಷಣವನ್ನು ಹೊಂದಿರುವ ಮಹಿಳೆಯರು ಹೆಚ್ಚು ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುತ್ತಾರೆ. ಈ ಪಾಲ್ಗೊಳ್ಳುವಿಕೆಗೆ ಶಿಕ್ಷಣವೇ ಮೂಲ ಪ್ರೇರಣೆಯಾಗಿದ್ದು, ಶಿಕ್ಷಿತ ಹಾಗೂ ಹದಿಹರೆಯದ ಮಹಿಳಾ ಪ್ರತಿನಿಧಿಗಳು ಪಂಚಾಯತಿಯ ಎಲ್ಲಾ ಕಾರ್ಯಗಳಲ್ಲಿ ಭಾಗವಹಿಸಿರುತ್ತಾರೆ. ಹಿರಿಯ ವಯಸ್ಸಿನ ಮಹಿಳಾ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆಯು ಕಡಿಮೆ ಪ್ರಮಾಣದಲ್ಲಿರುವುದನ್ನು ಉಲ್ಲೇಖಿಸಿದ್ದಾರೆ. ವಿದ್ಯಾ.ಕೆ.ಸಿ ರವರ *'ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್ ಆ್ಯಟ್ ದ ಗ್ರಾಸ್ ರೂಟ್ಸ್'* ಎಂಬ ಕೃತಿಯಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಗೆ ಶಿಕ್ಷಣ ಪ್ರಮುಖವಾದ ಕಾರಣವಾಗಿದೆ. ಗ್ರಾಮ ಪಂಚಾಯತ್‌ಗಳಲ್ಲಿ ಎಲ್ಲ ವರ್ಗದ, ಜಾತಿಯ, ಶಿಕ್ಷಿತ, ಅಶಿಕ್ಷಿತ ಮಹಿಳೆಯರಿದ್ದಾರೆ. ಅಶಿಕ್ಷಿತ ಮಹಿಳೆಯರೂ ಶಿಕ್ಷಿತ ಮಹಿಳೆಯರೊಡಗೂಡಿ ಕ್ರಿಯಾತ್ಮಕವಾಗಿ ಭಾಗವಹಿಸಲು ಸಾಧ್ಯವಾಗಿದೆ. ಹೆಚ್ಚಾಗಿ ಮೀಸಲಾತಿಯ ಪರಿಣಾಮವಾಗಿ ಮಹಿಳೆಯರು ರಾಜಕೀಯ ಪ್ರವೇಶಿಸುವಂತಾಯಿತು. ಮೀಸಲಾತಿಯ ಪರಿಣಾಮವಾಗಿ ಮಹಿಳೆಯರನ್ನು ಚುನಾವಣೆಗೆ ಸ್ಪರ್ಧಿಸುವಂತೆ ಮನೆಯ ಸದಸ್ಯರು, ರಾಜಕೀಯ ಪಕ್ಷದವರು, ಗ್ರಾಮದ ಜನರು, ಸ್ನೇಹಿತರು ಒತ್ತಾಯಿಸುತ್ತಾರೆ. ಇದರಿಂದಾಗಿ ಮಹಿಳೆಯರು ಮನೆಯೊಳಗೆ ಸೀಮಿತವಾಗಿರುವ ಸಂಪ್ರದಾಯವನ್ನು ಮೀರಲು ಸಾಧ್ಯವಾಗಿ ಬದಲಾವಣೆಯನ್ನು ತಂದಿದೆ. ಮಹಿಳೆಯರು ಮನೆಯಲ್ಲಿಯೇ ಇರಬೇಕು ಎಂಬ ಸಾಂಪ್ರದಾಯಿಕ ಭಾವನೆ ಐತಿಹಾಸಿಕ ವಾದದ್ದು. ಮಹಿಳೆಗೆ ಶಿಕ್ಷಣವು ಸಾಮಾಜಿಕ, ರಾಜಕೀಯ ಅರಿವನ್ನು ನೀಡಲು

ಸಹಕಾರಿಯಾಗಿದೆ. ಈ ನಿಟ್ಟಿನಲ್ಲಿ ವಯಸ್ಕರ ಶಿಕ್ಷಣ ಇಲಾಖೆಯು ಮಹಿಳೆ ಹಾಗೂ ಪುರುಷರಿಗೆ ಶಿಕ್ಷಣವನ್ನು ನೀಡುವುದರ ಮೂಲಕ ಹಾಗೆಯೇ ಮಹಿಳೆಯರಿಗೆ ಟೈಲರಿಂಗ್, ಬುಟ್ಟಿ ಹೆಣೆಯುವಿಕೆಯಂತಹ ಸ್ವ ಉದ್ಯೋಗದ ತರಬೇತಿಯನ್ನು ನೀಡುವ ಸಂಸ್ಥೆಗಳು ತರಬೇತಿಯ ಜೊತೆಯಲ್ಲೇ ಮಹಿಳೆಯರನ್ನು ಪಂಚಾಯತ್ ಸದಸ್ಯೆಯರನ್ನಾಗಿಸುವಲ್ಲಿ ಪ್ರೇರಣೆಯನ್ನು ಒದಗಿಸುವ ಕಾರ್ಯಗಳನ್ನು ನಿರ್ವಹಿಸಿದರೆ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಇನ್ನಷ್ಟು ಸಹಾಯಕವಾಗುತ್ತದೆ.

ಲೋಹಿತಾಶ್ವಹೆಚ್.ಸಿ (೨೦೧೨)ಅವರು ತಮ್ಮ ಗ್ರಂಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಹುಟ್ಟು ಮತ್ತು ಬೆಳವಣಿಗೆಯನ್ನು ವಿಶ್ಲೇಷಿಸಿದ್ದಾರೆ. ಪ್ರಾಚೀನ ಕಾಲದ ಪಂಚಾಯತಿಗಳು ಅಂದರೆ, ಸ್ವಾತಂತ್ರ್ಯ ಪೂರ್ವದಲ್ಲಿದ್ದ ಭಾರತದ ಗ್ರಾಮಗಳಲ್ಲಿ ಇದ್ದಂತಹ ಸ್ಥಳೀಯ ಸರ್ಕಾರಗಳ ಬೆಳವಣಿಗೆಗಳನ್ನು ಮತ್ತು ಹಳ್ಳಿಯಲ್ಲಿ ಇರುವ ಸಮಿತಿಗಳ ಬಗ್ಗೆ ಹಾಗೂ ಆ ಸಮಿತಿಗಳಿಗೆ ಆವರಿಸಿರುವ ಅರ್ಹತೆಗಳ ಬಗ್ಗೆ ಮತ್ತು ಇಂದಿನ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಇರುವ ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಹಾಗೂ ಹಲವಾರು ಸಮಿತಿಗಳು ಮಾಡಿದ ಶಿಫಾರಸ್ಸುಗಳನ್ನು ಈ ಗ್ರಂಥದಲ್ಲಿ ಚರ್ಚಿಸಿದ್ದಾರೆ. ಈ ಗ್ರಂಥದಿಂದ ತಿಳಿದು ಬಂದಂತಹ ವಿಷಯವೆಂದರೆ ಪ್ರಾಚೀನ ಕಾಲದಲ್ಲಿ ಇದ್ದಂತಹ ಪಂಚಾಯತಿಗೂ ಇಂದಿನ ಪಂಚಾಯತ್ ರಾಜ್‌ಗೂ ಹೆಚ್ಚಿನ ರೀತಿಯಲ್ಲಿ ವ್ಯತ್ಯಾಸ ಇರುವುದನ್ನು ನಾವು ಕಾಣುತ್ತೇವೆ. ಹಿಂದೆ ಇದ್ದಂತಹ ಪಂಚಾಯತಿಗಳಲ್ಲಿ ಪಂಚಾಯಿತಿ ಆಡಳಿತ ಇರುತ್ತಿದ್ದು, ಇಂದು ಗುರುತರವಾದ ರೀತಿಯಲ್ಲಿ ಪಂಚಾಯತ್‌ರಾಜ್ ಬದಲಾವಣೆಯಾಗಿದೆ. ಹಿಂದೆ ಪಂಚಾಯತಿಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ವಿರೋಧಿಸುವ ಧೈರ್ಯ ಯಾರಿಗೂ ಇರಲಿಲ್ಲ. ಆದರೆ ಇಂದು ಮಾಹಿತಿ ಹಕ್ಕು ಇರುವುದರಿಂದ ಪ್ರಶ್ನಿಸುವಂತಹ ಹಕ್ಕು ಎಲ್ಲ ಗ್ರಾಮೀಣ ಜನತೆಗೂ ಇರುವುದು ಕಂಡುಬರುತ್ತದೆ. ಚಂದ್ರಪೂಜಾರಿ.ಎಂ. (೨೦೦೧)ಅವರ ಅಧ್ಯಯನದಲ್ಲಿ ಪಂಚಾಯತ್ ರಾಜ್ ಸಂಸ್ಥೆಯ ಅಧಿಕಾರ ವಿಕೇಂದ್ರೀಕರಣದಿಂದ ಸ್ಥಳೀಯ ಸಂಸ್ಥೆಗಳಲ್ಲಿ ಆದಂತಹ ಬದಲಾವಣೆ, ವಿಕೇಂದ್ರೀಕರಣದ ಉಪಯೋಗ ಮತ್ತು ತೊಂದರೆಗಳು, ಪಂಚಾಯತಿಗಳಲ್ಲಿ ರಾಜಕೀಯ ಪಕ್ಷಗಳ ಭಾಗವಹಿಸುವಿಕೆ ಎಷ್ಟು ಪ್ರಭಾವ ಬೀರಿದೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಹಾಗೂ ಅಧಿಕಾರ ವಿಕೇಂದ್ರೀಕರಣದಿಂದಾಗಿ ಸ್ಥಳೀಯ ಸಂಸ್ಥೆಗಳಲ್ಲಿ ಎಲ್ಲ ವರ್ಗದ ಜನರಿಗೂ ರಾಜಕೀಯ ಭಾಗವಹಿಸುವಿಕೆ ಆದಂತಾಯಿತು ಎಂಬುದಾಗಿ ತಿಳಿಸಿದ್ದಾರೆ.

ಪಂಚಾಯತ್ ರಾಜ್ ಭಾರತದಲ್ಲಿ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಮುಖ್ಯ ಪ್ರೇರಕ ಕಾಯಿದೆ ಎಂಬುದು ಸಾರ್ವಕಾಲಿಕ ಸತ್ಯ. ಪಂಚಾಯತ್ ರಾಜ್‌ನ ಕಾರಣದಿಂದಾಗಿ ಹಾಗೂ ಮೀಸಲಾತಿಯ ದೆಸೆಯಿಂದಾಗಿ ಮಹಿಳೆಯರಿಗೆ ರಾಜಕೀಯ ಪ್ರವೇಶ ಸಾಧ್ಯವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನದ ವಿಭಾಗದ ಸಮಾಜ ವಿಜ್ಞಾನ ಪತ್ರಿಕೆಯಲ್ಲಿ ಎ. ಶ್ರೀಧರ ಅವರು ಬರೆದ *'ಪಂಚಾಯತ್ ಮತ್ತು ಮಹಿಳೆ'* ಲೇಖನದಲ್ಲಿ ಪಂಚಾಯತ್ ಸದಸ್ಯತ್ವ

ಕುರಿತ ವಿವಾದಾತ್ಮಕ ಕಾಯಿದೆಗೆ ಸಂಬಂಧಿಸಿದ ಈ ಶೀರ್ಷಿಕೆಯ ಅನೇಕ ಪಂಚಾಯತ್ ಸದಸ್ಯರು ತಮ್ಮ ಸದಸ್ಯತ್ವದಿಂದ ಅನರ್ಹಗೊಂಡರೂ ಬಹುಮುಖ್ಯವಾಗಿ ಇದು ಮಹಿಳೆಯರ ಮೇಲೆ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತದೆ ಎಂಬುದನ್ನು ತಿಳಿಸಲಾಗಿದೆ. ಮಹಿಳೆಯರಿಗೆ, ಪರಿಶಿಷ್ಟರಿಗೆ ಮತ್ತು ಹಿಂದುಳಿದವರಿಗೆ ಮೀಸಲಾತಿಯನ್ನು ನೀಡುವ ಮೂಲಕ ವಿವಿಧ ರಾಜ್ಯಗಳಲ್ಲಿ ಚುನಾವಣೆಗಳು ನಡೆದು ದಾಖಲೆ ಪ್ರಮಾಣದಲ್ಲಿ ಜನಪ್ರತಿನಿಧಿಗಳು ಆಯ್ಕೆಯಾದರು. ಕರ್ನಾಟಕ ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳಾ ಪ್ರತಿನಿಧಿಗಳ ಸಂಖ್ಯೆಯ ಪ್ರಮಾಣವು ಶೇಕಡಾ ೩೩ರ ಬದಲಿಗೆ ಶೇಕಡಾ ೪೩ಕ್ಕೆ ಏರಿತು.

ಮಹಿಳಾ ಸಶಕ್ತತೆಯ ಮೂಲದ ಬಗ್ಗೆ ಅಧ್ಯಯನಗಳು ಬೆಳಕು ಚೆಲ್ಲಿವೆ. ಮಹಿಳೆಯರಿಗೆ ಸಾಮರ್ಥ್ಯ, ಸಂಘಟನಾ ಕೌಶಲಗಳು ಹೇಗೆ ಮೂಡಿಬರುತ್ತವೆ ಎಂಬುದು ಈ ಅಧ್ಯಯನಗಳ ಸಾರವಾಗಿದೆ. ಶಿಕ್ಷಣ, ಪೂರಕ ವಾತಾವರಣ, ಸ್ವ-ಸಹಾಯ ಸಂಘಗಳ ಸಹಕಾರ ಇವೆಲ್ಲದರ ಮೂಲಕ ಮಹಿಳಾ ಸಬಲೀಕರಣದ ಉದ್ದೇಶ ಈಡೇರಿಸಿಕೊಳ್ಳಲು ಸಾಧ್ಯ.

ಮರಾಮಿ ಗೋಹೈನ್(೨೦೧೫)ಅವರು ಅಸ್ಸಾಂನ ಲಕ್ಷ್ಮೀಪುರ ಜಿಲ್ಲೆಯ ಎಲ್ಲೋರದಲ್ಲಿ ನಡೆಸಲಾದ ಅಧ್ಯಯನದಲ್ಲಿ ಮಹಿಳಾ ಸಶಕ್ತತೆಯು ಆರ್ಥಿಕ ಸ್ವಾತಂತ್ರ್ಯದಿಂದಾಗಿ ದೊರೆಯುವುದು, ಮಹಿಳೆಯು ಮುಖ್ಯವಾಗಿ ಆಸ್ತಿ, ನಗದು, ಸಂಪತ್ತು, ಒಳ್ಳೆಯ ಯೋಚನೆ, ಸಮೃದ್ಧ ಮಾಹಿತಿಗಳ ಜ್ಞಾನ, ಬಲಯುತ ಹಾಗೂ ಒಳ್ಳೆಯ ನಂಬಿಕೆ, ಮೌಲ್ಯಗಳಲ್ಲಿ ತನ್ನ ಅಧಿಕಾರವನ್ನು ಚಲಾಯಿಸುವಂತಾದಾಗ ಮಹಿಳಾ ಸಶಕ್ತತೆ ಸಾಧ್ಯ. ಈ ಎಲ್ಲಾ ಅಂಶಗಳಿಗೆ ಪೂರಕವಾಗಿ ಮಹಿಳೆಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವಲ್ಲಿ ಸ್ವಸಹಾಯ ಗುಂಪುಗಳ ಪಾತ್ರ ಮಹತ್ತರವಾದುದು. ಸ್ವ-ಸಹಾಯ ಗುಂಪಿನ ಸದಸ್ಯತ್ವದ ನಂತರ ಮಹಿಳೆಯರ ಆದಾಯದಲ್ಲಿ ಹೆಚ್ಚಳವನ್ನು ಕಂಡುಕೊಂಡಿದ್ದಾರೆ. ಸ್ವ-ಸಹಾಯ ಸಂಘಗಳು ನೀಡುವ ಸಾಲವನ್ನು ಸ್ವ ಉದ್ಯೋಗದಲ್ಲಿ ತೊಡಗಿಸುವುದರ ಮೂಲಕ ಇಲ್ಲಿನ ಮಹಿಳೆಯರು ಆರ್ಥಿಕ ಸಶಕ್ತತೆಯನ್ನು ಪಡೆದಿದ್ದಾರೆ. ಮಹಿಳೆಯು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುವುದರ ಜೊತೆಗೆ ಮಾಹಿತಿಗಳನ್ನು ಕಲೆ ಹಾಕುವಿಕೆ, ಮಕ್ಕಳ ಉನ್ನತ ಶಿಕ್ಷಣಕ್ಕೆ ಪೂರಕ ಆರ್ಥಿಕ ಸಹಾಯ ಪಡೆಯುವಿಕೆ, ಹೊಸ ಯೋಜನೆಗಳ ಪ್ರಸ್ತುತಪಡಿಸುವಿಕೆ, ಸ್ಥಳೀಯ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಿಕೆ, ನಾಯಕತ್ವ, ರಾಜಕೀಯ ಪಾಲ್ಗೊಳ್ಳುವಿಕೆ, ನಿರ್ಧಾರ ತೆಗೆದುಕೊಳ್ಳುವಿಕೆಗೆ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಲ್ಲಿ ಪೂರಕ ಮಾಹಿತಿಗಳನ್ನು ಚರ್ಚಿಸುವ ಮುಖಾಂತರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಭಿವೃದ್ಧಿಯಲ್ಲಿ ಪಾತ್ರವಹಿಸುವಂತೆ ಸಹಕಾರಿಯಾಗಿದೆ.

ಮಹಿಳಾ ರಾಜಕೀಯ ಸಾಧನೆಯಲ್ಲಿ ಕುಟುಂಬದ ಹಿನ್ನೆಲೆಯ ಪಾತ್ರವನ್ನು ಇಲ್ಲಿ ಚರ್ಚಿಸಲಾಗಿದೆ. ಸ್ನೇಹಲತಾ ಪಾಂಡ (೧೯೯೬)ಅವರ *'ಒರಿಸ್ಸಾದಲ್ಲಿ ಗ್ರಾಮ ಪಂಚಾಯತಿಗಳು'* ಎಂಬ ಅಧ್ಯಯನದಿಂದ ತಿಳಿದು ಬರುವ ವಿಚಾರವೇನೆಂದರೆ, ರಾಜಕೀಯದಲ್ಲಿರುವ ಹೆಚ್ಚಿನ ಮಹಿಳೆಯರು ರಾಜಕೀಯ ಹಿನ್ನೆಲೆಯನ್ನು ಹೊಂದಿರುವ ಕುಟುಂಬದಿಂದ ಬಂದವರಾಗಿದ್ದು ಹಾಗೆಯೇ ಹೆಚ್ಚು ಒತ್ತಾಯಪೂರ್ವಕವಾಗಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿರುವುದು ಕಂಡು ಬರುತ್ತದೆ. ಹಾಗೂ ಇಲ್ಲಿ

ಗಮನಿಸಬೇಕಾದ ವಿಚಾರವೆಂದರೆ, ಇಲ್ಲಿಯ ಮಹಿಳೆಯರು ತಮ್ಮ ಪ್ರತಿನಿಧಿತ್ವದ ಹೊಣೆಯನ್ನು ಆಸಕ್ತಿ ಹಾಗೂ ಜವಾಬ್ದಾರಿಯಿಂದ ನಿಭಾಯಿಸಿರುವುದನ್ನು ಉಲ್ಲೇಖಿಸಿದ್ದಾರೆ.

ಸೋನಿ ಜಸಪ್ರಿತ್ ಕೌರ್ ಅವರ *'ವುಮನ್ ಎಂಪವರ್‌ಮೆಂಟ್ ಎಕ್ಸಪ್ಲೋರಿಂಗ್ ದ ಫ್ಯಾಕ್ಟ್ಸ್'* ಎಂಬ ಪುಸ್ತಕದಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಕುರಿತು: ಮಹಿಳೆಯರು ರಾಜಕೀಯ ಭಾಗವಹಿಸುವಿಕೆಯಲ್ಲಿ ಸಮಾನವಾಗಿ ಪಾಲ್ಗೊಳ್ಳಲು ಶಿಕ್ಷಣವನ್ನು ಪಡೆಯಬೇಕು. ಅಲ್ಲದೇ ಮಹಿಳೆಯರು ಸಾಂಪ್ರಾದಾಯಿಕ ಮೌಲ್ಯಗಳಿಂದ ಹೊರಬರಬೇಕು. ನಾಚಿಕೆ, ಅಧೈರ್ಯ, ಸಂಕೋಚದಿಂದ ಇರಬಾರದು. ಮಹಿಳೆಯರಿಗೆ ಹಕ್ಕುಗಳನ್ನು ನಿರಾಕರಿಸಿದರೆ, ಸ್ವಾತಂತ್ರ್ಯವನ್ನು ನೀಡದಿದ್ದರೆ, ಅವಕಾಶಗಳಿಂದ ವಂಚಿತರನ್ನಾಗಿ ಮಾಡಿದರೆ ಇಡೀ ಸಮಾಜವೇ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ಕೇವಲ ಮಹಿಳೆಯರಿಂದ ಅಲ್ಲ, ಶಿಕ್ಷಣವೇ ಮಹಿಳೆಯರ ಸಬಲೀಕರಣಕ್ಕೆ ಸಾಧನ. ಜ್ಞಾನ, ಕೌಶಲ್ಯ, ಸ್ವ ಸಾಮರ್ಥ್ಯವನ್ನು ನೀಡುತ್ತದೆ. ಇವುಗಳು ಮಹಿಳೆಯರ ಸಂಪೂರ್ಣ ಅಭಿವೃದ್ಧಿಯ ಪ್ರಕ್ರಿಯೆಗೆ ಸಹಾಯವಾಗುತ್ತದೆ. ತಾಯಂದಿರ ಮರಣ ಪ್ರಮಾಣ, ಶಿಕ್ಷಣ, ಉದ್ಯೋಗ, ಕೆಲಸದಲ್ಲಿ ಭಾಗವಹಿಸುವಿಕೆ, ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಪುರುಷ ಪ್ರಧಾನತೆಯನ್ನು ಸೂಚಿಸುತ್ತವೆ. ಆರ್ಥಿಕ ಸಂಘರ್ಷಗಳಿಗೆ, ಸಾಮಾಜಿಕ ಹಿಂದುಳಿದಿರುವಿಕೆಗೆ, ರಾಜಕೀಯದ ಅಧೀನತೆ ಬಡತನವೇ ಮುಖ್ಯ ಕಾರಣವಾಗಿದೆ. ಸ್ಥಳೀಯ ಮಟ್ಟದಲ್ಲಿ ಜನರ ಭಾಗವಹಿಸುವಿಕೆಯು ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯದ ಸ್ಥಿತಿಗಳನ್ನು ಅವರ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲು ಅಭಿವೃದ್ಧಿಗೊಳಿಸಲು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವವನ್ನು ಅಳತೆ ಮಾಡುವುದು ಸ್ವಾತಂತ್ರ್ಯದ ವಿಸ್ತಾರ ಅಥವಾ ಸಮಾನತೆಯ ವಿಸ್ತಾರದಲ್ಲಲ್ಲ; ಅದು ಜನರ ಭಾಗವಹಿಸುವಿಕೆಯ ಮೇಲೆ ನಿಂತಿದೆ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ರಾಜಕೀಯದಲ್ಲಿ ಮಹಿಳೆಯರ ಒಂದು ಭಾಗವಾಗಿದೆ. ಸ್ಥಳೀಯ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕ್ರಿಯಾತ್ಮಕವಾಗಿ ಮಹಿಳೆಯರ ಭಾಗವಹಿಸುವಿಕೆಯು ಕೇವಲ ಸರ್ಕಾರದ ಗುಣಮಟ್ಟವನ್ನು ಉತ್ತಮಗೊಳಿಸುವುದಿಲ್ಲ. ಮಹಿಳೆಯರ ಸಾಮಾಜಿಕ ಸ್ಥಾನ ಹಾಗೂ ಅದರ ಅಗತ್ಯಗಳನ್ನು ತಿಳಿಸುತ್ತದೆ ಎಂದು ಹೇಳಿದ್ದಾರೆ.

ಸೀಮಾ ಶರ್ಮ ಹಾಗೂ ಇತರರ *'ವುಮನ್ ಅಂಡ್ ಪಾಲಿಟಿಕ್ಸ್'* ನಲ್ಲಿ ಪ್ರಪಂಚದಲ್ಲಿ ಮಹಿಳೆಯರು ಅಂಚಿಗೆ ತಳ್ಳಲ್ಪಟ್ಟವರಾಗಿದ್ದಾರೆ. ಸಾಮಾಜಿಕ, ಧಾರ್ಮಿಕ ನಾಯಕರು ಮಹಿಳೆಯರ ಸಮಾನತೆಗೆ ಅಥವಾ ಅವರ ಸ್ವಾತಂತ್ರ್ಯ ಹಕ್ಕುಗಳಿಗೆ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಇತಿಹಾಸವು ಮಹಿಳೆಯರನ್ನು ಅದೃಶ್ಯಗೊಳಿಸಿದೆ. ಹಾಗೆಯೇ ಮುಂದುವರೆಯುತ್ತಿದೆ. ಮತದಾನದ ಹಕ್ಕಿನ ಅವಶ್ಯಕತೆಯಿದೆ. ಆದರೆ ಇದೇ ಅಂಶವು ಮಹಿಳೆಯರ ರಾಜಕೀಯದಲ್ಲಿರುವ ತಾರತಮ್ಯನ್ನು ಹೋಗಲಾಡಿಸಲು ಪರಿಣಾಮಕಾರಿಯಾಗದು. ಆರ್ಥಿಕತೆಗೆ ಮತ್ತು ರಾಜಕೀಯ ಹಕ್ಕುಗಳಿಗೆ ನಿಕಟ ಸಂಬಂಧವಿದೆ. ಇದರಿಂದ ಮಹಿಳೆಯರು ತೊಂದರೆಯನ್ನು ಅನುಭವಿಸುವಂತಾಗಿದೆ. ಹೊಸದಾಗಿ ರಾಜಕೀಯಕ್ಕೆ ಪ್ರವೇಶ ಪಡೆದ ಮಹಿಳೆಯರು ಪುರುಷ ಪ್ರಧಾನತೆಯನ್ನು ಅನುಭವಿಸಬೇಕಾಗುತ್ತದೆ

ಎಂದಿದ್ದಾರೆ. ರೋಸ್ ಮೇರಿ ಟಂಗ್ ಅವರು ಸ್ತ್ರೀವಾದದ ಹೋರಾಟ ಲಿಂಗ ತಾರತಮ್ಯವನ್ನು ನಿರ್ಮೂಲನೆ ಮಾಡಿ ಸ್ತ್ರೀ ಸಮಾನತೆಗೆ ಹೋರಾಡುವಂತಾಗಿದೆ. ಇದು ಕೇವಲ ಮಹಿಳೆಯರಿಗೆ ಮಾತ್ರ ಅನುಕೂಲತೆಯನ್ನುಂಟು ಮಾಡದೇ ಅಂಚಿನ ಸಮುದಾಯಗಳಲ್ಲೆವನ್ನು ಉಸ್ತೀಕರಿಸುತ್ತದೆ. ಅಧಿಕಾರವನ್ನು ಅರ್ಥಪೂರ್ಣವಾಗಿ ಚಲಾಯಿಸಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಹಣ, ಅಧಿಕಾರ, ಸ್ಥಾನಮಾನಗಳಿಗೆ ಹೆಚ್ಚಿನ ಮನ್ನಣೆ ಇದೆ. ಕಾನೂನು ಪುಸ್ತಕಗಳಿಂದ ಸಮಾನತೆಯನ್ನು ಸಾಧಿಸಲು ಸಾಧ್ಯವಿಲ್ಲ. ನಿರಂತರವಾಗಿ ಸುಧಾರಣೆಗಳಾಗಬೇಕಾಗುತ್ತದೆ. ಮಹಿಳಾ ಚಳುವಳಿಗಳು ಮಹಿಳೆಯರು ಹಕ್ಕುಗಳನ್ನು ಪಡೆಯಲು ಇರುವ ಅಡ್ಡಿಗಳನ್ನು ನಿವಾರಿಸಲು ಸಹಾಯಕವಾಗಿದೆ ಎಂದು ತಿಳಿಸಿದ್ದಾರೆ.

ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯ ಹಿನ್ನಲೆಯಲ್ಲಿ ಸ್ತ್ರೀವಾದದ ನೆರಳನ್ನು ಕಾಣಬಹುದು. ಹ್ಯಾರಿಯಟ್ ಟೇಲರ್ ಮಿಲ್, ೧೮೫೫ ಅವರ ಕೃತಿಯು ತಿಳಿಸುವಂತೆ, ರಾಜಕೀಯ ತತ್ವದ ಚರಿತ್ರೆಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪುನರ್ ಪರಿಶೀಲಿಸಿದರೆ ಪ್ರಮುಖ ಚಿಂತಕರು ಮತ್ತು ತತ್ವಜ್ಞಾನಿಗಳು ರಾಜಕೀಯ ಹಾಗೂ ಕಾನೂನು ಕ್ಷೇತ್ರಗಳಿಂದ ಮಹಿಳೆಯರನ್ನು ಹೊರಗಿಟ್ಟಿರುವುದು, ಅಲ್ಲಿ ಅವರ ಸ್ಥಾನವನ್ನು ನಿರ್ಲಕ್ಷಿಸಿರುವುದು ಕಂಡುಬರುತ್ತದೆ. ಇದರ ಬಗ್ಗೆ ಬೆರಳೆಣಿಕೆಯಷ್ಟು ಚಿಂತಕರು ವಿಶೇಷ ಸಂದರ್ಭದಲ್ಲಿ ಹೆಸರಿಸಿದ್ದಾರೆ. ಆಕಿನ್ ಎಂಬ ಚಿಂತಕ ಪಶ್ಚಿಮದ ರಾಜಕೀಯ ಸಿದ್ಧಾಂತ ಪರಂಪರೆಯಲ್ಲಿ ಮಾನವ ಜನಾಂಗದ ಅರ್ಧದಷ್ಟಿರುವ ಸ್ತ್ರೀಯರನ್ನು ಸೇರಿಸುವುದು ಸರಳ ವಿಷಯವಲ್ಲ ಎಂದು ಹೇಳಿದ್ದಾನೆ. ಪ್ಲೇಟೋ ತನ್ನ 'ರಿಪಬ್ಲಿಕ್' ಗ್ರಂಥದಲ್ಲಿ ಪೋಷಕ ವರ್ಗದಲ್ಲಿ ಮಹಿಳೆಯರನ್ನು ಸೇರಿಸಿದ್ದಾನೆ. ಆದರೆ ಅದು ಮಹಿಳೆಯರಿಗೆ ಅನುಕೂಲವಾಗುವಂತಹ ವಿಶೇಷ ಸಂದರ್ಭದಲ್ಲಿ ಮಾತ್ರವಿತ್ತು. ಕಾನೂನಿಗೆ ಸಂಬಂಧಿಸಿದಂತೆ ಪ್ಲೇಟೋ ಪುರುಷ ಪ್ರಧಾನ ಆಡಳಿತವನ್ನು ಒಪ್ಪಿಕೊಂಡನು. ಅರಿಸ್ಟಾಟಲನು ಮಹಿಳೆಯರಿಗೆ ರಾಜಕೀಯದಲ್ಲಿ ಭಾಗವಹಿಸಲು ಸಮಯವಿರುವುದಿಲ್ಲ ಎಂದು ಅವರನ್ನು ಸಂಪೂರ್ಣವಾಗಿ ಹೊರಗಿಟ್ಟನು. ರೂಸೋ ಕೂಡ ಮಹಿಳೆಯರನ್ನು ನಾಗರಿಕ ಹಕ್ಕಿನಿಂದ ದೂರವಿಟ್ಟನು. ಉದಾರವಾದಿ ಸ್ತ್ರೀವಾದ ಚಿಂತಕಿ ಹ್ಯಾರಿಯಟ್ ಟೇಲರ್ ಮಿಲ್ ರ *'ದಿ ಎನ್ ಫ್ರಾನ್ಸ್‌ಮೆಂಟ್ ಆಫ್ ವಿಮೆನ್'* ಪುಸ್ತಕದಲ್ಲಿ ಆಕೆ ಲಿಂಗ ಅಸಮಾನತೆ ಹೋಗಲಾಡಿಸಲು ಮಹಿಳೆಯರಿಗೆ ವೈಚಾರಿಕ ಸಮಾನ ಶಿಕ್ಷಣ, ಸಮಾನ ಉದ್ಯೋಗ, ವಿವಾಹ ಸಂದರ್ಭದಲ್ಲಿ ಸಹಭಾಗಿತ್ವ ಬೇಕು ಎಂದು ವಾದಿಸಿದ್ದಾರೆ.

ಈ ಭಾಗದಲ್ಲಿ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಪೂರಕವಾಗಿರುವ ಪ್ರಮುಖ ಸವಾಲುಗಳನ್ನು ಚರ್ಚಿಸಲಾಗಿದೆ. ಮೇತ್ರೇಯಿ ಕೃಷ್ಣರಾಜ್ (೧೯೯೮)ಅವರ ಅಧ್ಯಯನವು ಮಹಿಳೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳು, ಮಹಿಳೆಯು ಕುಟುಂಬದಲ್ಲಿ ನಿರ್ವಹಿಸುವ ಕಾರ್ಯ, ಮಕ್ಕಳ ಪಾಲನೆ, ಪೋಷಣೆ ಕಾರ್ಯ ವೇತನ ರಹಿತವಾಗಿದ್ದು, ಆರ್ಥಿಕ ಭದ್ರತೆಯ ಕೊರತೆಯು ರಾಜಕೀಯ ಕ್ಷೇತ್ರದಲ್ಲಿ ಮುನ್ನಡೆಯುವಲ್ಲಿ ಮಹಿಳೆಯರಿಗೆ ಕಂಟಕವಾಗುತ್ತಿದೆ ಎಂದಿದೆ. ಕವಿತಾ ಮಿಶ್ರಾ ರವರ *'ವುಮನ್ಸ್ ರೋಲ್ ಇನ್ ಪಾಲಿಟಿಕ್ಸ್ ಇನ್ ಮಾಡರ್ನ್ಸ್ ವರ್ಲ್ಡ್'* ಎಂಬ ಪುಸ್ತಕದಲ್ಲಿ 'ಮಹಿಳೆ

ಮತ್ತು ಪಂಚಾಯತ್ ರಾಜ್' ಎಂಬ ಲೇಖನದಲ್ಲಿ ಮಹಿಳೆಯರು ಗ್ರಾಮ ಪಂಚಾಯತ್ ಸ್ಥಾನಗಳಲ್ಲಿ ಆಯ್ಕೆಯಾಗಿರುವುದು ಮಹಿಳಾ ಸಬಲೀಕರಣದ ದ್ಯೋತಕವಾಗಿದೆ. ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವಲ್ಲಿ ಪುರುಷರು ಹಲವಾರು ಕಾರಣಗಳಿಂದ ವಿರೋಧ ವ್ಯಕ್ತಪಡಿಸುತ್ತಾರೆ. ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದರಿಂದ ಮನೆಯ ಹೊಂದಾಣಿಕೆಗೆ ಅಡ್ಡಿಯಾಗುತ್ತದೆ. ಮನೆಯ ಕೆಲಸ ಕಾರ್ಯಗಳನ್ನು ಯಾರು ನೋಡಿಕೊಳ್ಳುತ್ತಾರೆ? ಮನೆಯ ಹೊರಗಿನ ಕೆಲಸಗಳನ್ನು ಮಾಡಲು ಸಾಕಷ್ಟು ಸಮಯ ವ್ಯಯವಾಗುವ ಕಾರಣ ಗೃಹಕೃತ್ಯದ ಮಹಿಳೆಯರ ಪಾತ್ರಗಳನ್ನು ಯಾರು ನಿಭಾಯಿಸುತ್ತಾರೆ? ಮಹಿಳೆಯರು ಸಾಮಾಜಿಕ ನಾಯಕರಾಗಿ ಜನರ ಸಮಸ್ಯೆಗಳನ್ನು ಆಲಿಸಬೇಕಾಗುತ್ತದೆ. ದಿನದ ೨೪ ಗಂಟೆಗಳ ಕಾಲ ಇದಕ್ಕೆ ವ್ಯಯಿಸಬೇಕಾಗುತ್ತದೆ. ಇದರಿಂದ ಮನೆಯ ಹಾಗೂ ಮಕ್ಕಳ ಹೊಣೆಯನ್ನು ಯಾರು ಹೊರುತ್ತಾರೆ? ಎಂದು ಪುರುಷ ವರ್ಗವು ಪ್ರಶ್ನಿಸುತ್ತದೆ. ಇಂತಹ ಪುರುಷ ಪ್ರಧಾನತೆಯ ಅಂಶಗಳಿಗೆ ಬೆಲೆ ಕೊಡದೆ ಇವುಗಳನ್ನು ಬದಲಾಯಿಸಲು ಮಹಿಳೆಯರು ಎಲ್ಲ ಹಂತದ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗುತ್ತದೆ. ಆದ್ದರಿಂದಾಗಿ ಮಹಿಳೆಯ ರಾಜಕೀಯ ಪ್ರವೇಶವನ್ನು ನಕಾರಾತ್ಮಕವಾಗಿ ಪರಿಭಾವಿಸುವ ಪ್ರಯತ್ನ ಕೆಲವು ಕುಟುಂಬದಲ್ಲಿದೆ ಎಂಬುದು ಸಾಬೀತಾಗಿದೆ.

ಸಂವಿಧಾನದ ೭೩ ಹಾಗೂ ೭೪ನೇ ತಿದ್ದುಪಡಿ ಹಾಗೂ ಅದರಿಂದಾಗಿ ಸೃಷ್ಟಿಯಾದ ಪಂಚಾಯತ್ ರಾಜ್ ವ್ಯವಸ್ಥೆಯು ಮಹಿಳಾ ರಾಜಕೀಯ ಪ್ರವೇಶಕ್ಕೆ ಉತ್ತಮ ಕೊಡುಗೆ ನೀಡಿದೆ. ಮಹಿಳೆಯರ ನಿಜವಾದ ರಾಜಕೀಯ ಪ್ರವೇಶ ಆರಂಭಗೊಂಡದ್ದೇ ಈ ಹಂತದಲ್ಲಿ ಎಂಬುದು ಸ್ಪಷ್ಟ. ಗಾಯತ್ರಿ ನಾವಡ (೨೦೦೩)ಅವರು ಅಧ್ಯಯನ ನಡೆಸಿ ಸಂವಿಧಾನದಲ್ಲಿ ಸಮಾನತೆಯನ್ನು ಉಲ್ಲೇಖಿಸಿದ್ದು, ಸಂವಿಧಾನದ ೭೩ ಹಾಗೂ ೭೪ನೇ ತಿದ್ದುಪಡಿಗಳು ಮಹಿಳೆಗೆ ರಾಜಕೀಯವಾಗಿ ಪಾಲ್ಗೊಳ್ಳಲು ಅವಕಾಶವನ್ನು ನೀಡಿವೆ. ಆದರೂ ಮಹಿಳೆ ರಾಜಕೀಯವಾಗಿ ಬಹಳ ಹಿಂದುಳಿದಿದ್ದಾಳೆ. ಮಹಿಳೆಯು ದಿನನಿತ್ಯ ಜೀವನದಲ್ಲಿ ಮನೆಯ ಹೊರಗೆ ಹಾಗೂ ಮನೆಯ ಒಳಗೆ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾಳೆ. ಅವುಗಳಲ್ಲಿ ಮುಖ್ಯವಾಗಿ, ಹೆಣ್ಣು ಭ್ರೂಣ ಹತ್ಯೆ, ಅತ್ಯಾಚಾರ, ವರದಕ್ಷಿಣೆ, ವೈಧವ್ಯದ ಸಮಸ್ಯೆಗಳು ಇತ್ಯಾದಿ. ಇಂತಹ ಸಮಸ್ಯೆಗಳ ಪರಿಹಾರಕ್ಕಾಗಿ ಅನೇಕ ರೀತಿಯ ಕಾಯಿದೆ ಕಾನೂನೂಗಳಿದ್ದರೂ ಅವುಗಳ ಅನ್ವಯಿಕತೆಯಲ್ಲಿನ ತೊಡಕುಗಳನ್ನು ನಿವಾರಿಸುವ ಹೊತ್ತಿನಲ್ಲಿ ಮಹಿಳೆ ತನ್ನ ಜೀವನದ ಅರ್ಧ ಆಯಸ್ಸನ್ನೇ ಮುಗಿಸಿರುತ್ತಾಳೆ. ಇಂತಹ ಸಂದರ್ಭದಲ್ಲಿ ಮಹಿಳೆಯು ರಾಜಕೀಯವಾಗಿ ಪಾಲ್ಗೊಳ್ಳುವ ಅವಕಾಶವನ್ನು ಕಳೆದುಕೊಳ್ಳುತ್ತಾಳೆ ಎಂಬುದಾಗಿ ಉಲ್ಲೇಖಿಸಿದ್ದಾರೆ. ಜಯಲಕ್ಷ್ಮಿ.ಕೆ. (೧೯೯೭)ಅವರು ಮಧ್ಯಪ್ರದೇಶದಲ್ಲಿ ನಡೆಸಿದ ಕ್ಷೇತ್ರಾಧ್ಯಯನದಿಂದ ಪಂಚಾಯತ್ ರಾಜ್ ಸಂಸ್ಥೆಯಲ್ಲಿ ನೀಡಲಾಗಿರುವ ಮೀಸಲಾತಿಯಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ಎಲ್ಲಾ ವರ್ಗದವರ ಪಾಲ್ಗೊಳ್ಳುವಿಕೆ ಸಾಧ್ಯವಾಗಿದೆ. ಸಾಮಾಜಿಕ ನ್ಯಾಯ ಒದಗಿಸಲು ಹಾಗೂ ಸಮಾನತೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮಹಿಳಾ ಮೀಸಲಾತಿ ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಮಧ್ಯಪ್ರದೇಶದಲ್ಲಿ ನಡೆಸಿದ ಅಧ್ಯಯನದಲ್ಲಿ ಮಹಿಳಾ ಮೀಸಲಾತಿಯಿಂದಾಗಿ ಮಹಿಳಾ ಸಂಖ್ಯೆಯಲ್ಲಿ ಹೆಚ್ಚಿನ ಬದಲಾವಣೆ ಉಂಟಾಗಿದೆ. ಆದರೆ ಗುಣಾತ್ಮಕ ಬದಲಾವಣೆಯಲ್ಲಿ ಹೆಚ್ಚಿನ

ಅವಶ್ಯಕತೆಯ ಅನಿವಾರ್ಯತೆ ಬಗ್ಗೆ ಉಲ್ಲೇಖಿಸಿದ್ದಾರೆ. ಗೋಪಿಂದ ಗೌಡ ಮತ್ತು ಇತರರು, (೧೯೯೭)ಅವರ ಕರ್ನಾಟಕದಲ್ಲಿ ಚುನಾಯಿತ ಮಹಿಳಾ ನಾಯಕರ ಕುರಿತಾಗಿ ನಡೆಸಿದ ಅಧ್ಯಯನದಲ್ಲಿ ಮಹಿಳಾ ನಾಯಕರು ಶಿಕ್ಷಣ, ಜಾತಿ, ಆರ್ಥಿಕ ಸಬಲತೆ, ವಯಸ್ಸು, ಕುಟುಂಬದ ವಾರ್ಷಿಕ ಆದಾಯ, ಒಟ್ಟಾರೆಯಾಗಿ ಸಾಮಾಜಿಕ ಅಭಿವೃದ್ಧಿಯಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚು ಹಾಗೂ ಪ್ರಬಲವಾಗಿ ಇರುವುದು ಕಂಡುಬರುತ್ತದೆ ಹಾಗೂ ಹಿಂದುಳಿದ ತಾಲೂಕುಗಳ ಮಹಿಳಾ ಪ್ರತಿನಿಧಿಗಳು ಹೆಚ್ಚು ಅಭಿವೃದ್ಧಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಈ ಅಧ್ಯಯನದಿಂದ ಕಂಡುಕೊಂಡ ಅಂಶವೆಂದರೆ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಮಹಿಳೆಯರಿಗೆ ಗುರುತಿಸುವಿಕೆ ಮತ್ತು ಪ್ರೋತ್ಸಾಹವನ್ನು ಕೊಟ್ಟರೆ ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಮಹಿಳೆಯರು ಹೆಚ್ಚು ಜವಾಬ್ದಾರಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಯುತ್ತದೆ.

ಪಂಚಾಯತ್ ರಾಜ್ ವ್ಯವಸ್ಥೆಯು ಕೆಲವೊಂದು ನ್ಯೂನತೆಗಳು ಮಹಿಳೆಯರ ನಿರಂತರ ಹಾಗೂ ಸ್ಥಿರ ರಾಜಕೀಯ ನಡೆಗೆ ಅಡೆತಡೆಯಾಗಿ ಪರಿಣಮಿಸಿವೆ. ಅದರಲ್ಲೂ ಮುಖ್ಯವಾಗಿ ರೊಟೇಶನ್ ಪದ್ಧತಿಯು ಮಹಿಳೆಯರ ಮುಂದಿನ ಬಾರಿಯ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಖಾತರಿಗೊಳಿಸುವುದಿಲ್ಲ. ಮಂಡಲ್ ಅಮಲ್ ರವರ 'ವುಮನ್ ಇನ್ ಪಂಚಾಯತ್ ರಾಜ್ ಇನ್‌ಸ್ಟಿಟ್ಯೂಶನ್' ನಲ್ಲಿ ಪಶ್ಚಿಮ ಬಂಗಾಳದ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರ ಗ್ರಾಮ ಪಂಚಾಯತ್‌ನಲ್ಲಿನ ಭಾಗವಹಿಸುವಿಕೆ ಯಾವ ರೀತಿ ಇದೆ ಎಂಬುದನ್ನು ವಿವರಿಸಿದ್ದಾರೆ. ಮೊದಲ ಬಾರಿ ಪಂಚಾಯತ್‌ಗಳಿಗೆ ಆಯ್ಕೆಯಾದ ಮಹಿಳೆಯರು ತಮ್ಮ ರಾಜಕೀಯ ಜೀವನವನ್ನು ಮುಂದುವರೆಸಲು ರೊಟೇಶನ್ ವ್ಯವಸ್ಥೆಯು ಅಡ್ಡಿಯಾಗುತ್ತಿರುವ ಬಗ್ಗೆ ಅಂದರೆ ಪ್ರಥಮ ಬಾರಿಗೆ ಆಯ್ಕೆಯಾದ ಮಹಿಳೆಯರು ಚೈತ್ಯನ್ಯ, ಸ್ಫೂರ್ತಿ, ಆಸಕ್ತಿಯಿಂದ ಕೆಲಸ ನಿರ್ವಹಿಸುತ್ತಿರುತ್ತಾರೆ. ಮತ್ತೊಂದು ಬಾರಿಗೆ ಆಯ್ಕೆಯಾಗಲು ಅವಕಾಶವಿಲ್ಲದೆ ಇದ್ದಾಗ ಅವರಲ್ಲಿ ಉಂಟಾಗುವ ನಿರಾಶೆ ಅವರನ್ನು ರಾಜಕೀಯದತ್ತ ಸಂಪೂರ್ಣ ಒಳಗೊಳ್ಳದಂತೆ ತಡೆಯುತ್ತದೆ. ರಾಜಕೀಯವೆಂದರೆ ಒಂದು ಅಥವಾ ಎರಡು ಬಾರಿ ಸದಸ್ಯತ್ವ ಪಡೆಯುವಂತಾಗಿರದೇ ನಿರಂತರವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುವಂತಾದರೆ ರಾಜಕೀಯದ ಆಗು ಹೋಗುಗಳ ಸಂಪೂರ್ಣ ಅರಿವಾಗಿ ತಮ್ಮ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಯನ್ನು ಸಾಧಿಸಲು ನೆರವಾಗುತ್ತದೆ.

ಯತೀಂದ್ರ ಸಿಂಗ್ ಸಿಸೊಡಿಯಾ (೨೦೦೬)ಅವರು ಮಧ್ಯಪ್ರದೇಶದಲ್ಲಿ ಪಂಚಾಯತ್ ರಾಜ್ ಸಂಸ್ಥೆಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ನಡೆಸಿರುವ ಅಧ್ಯಯನದಲ್ಲಿ ಸಂವಿಧಾನದ ೭೩ನೇ ತಿದ್ದುಪಡಿಯ ತರುವಾಯ ಮಹಿಳೆಯರ ರಾಜಕೀಯ ಪ್ರವೇಶ ಪ್ರಕ್ರಿಯೆಯಲ್ಲಿ ಹೆಚ್ಚಳವಾಗಿದ್ದು, ದೇಶದ ಸಂರಚನೆ, ಅಭಿವೃದ್ಧಿಯಲ್ಲಿ ಹಾಗೂ ಕಲ್ಯಾಣ ಚಟುವಟಿಕೆಯಲ್ಲಿ ಮಹಿಳೆಯರ ಪಾತ್ರ ಹೆಚ್ಚಳವಾಗಿದ್ದು, ಮಹಿಳೆಯ ನಾಯಕತ್ವದಲ್ಲಿ ನಡೆಯುವ ಕಾರ್ಯಗಳು ಸಕಾರಾತ್ಮಕ ದೃಷ್ಟಿಕೋನದಲ್ಲಿದ್ದು,

ಇದು ದೇಶದ ಬದಲಾವಣೆಯಲ್ಲಿ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ಸಕಾರಾತ್ಮಕ ಬದಲಾವಣೆ ತರುವುದು ಎಂದಿದ್ದಾರೆ.

ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇತ್ತೀಚೆಗೆ ಹೆಚ್ಚಾಗಿರುವುದು ಕಂಡು ಬರುತ್ತಿದೆ. ಆದರೆ ಅವರ ಪಾಲ್ಗೊಳ್ಳುವಿಕೆ ಪೂರ್ಣ ಪ್ರಮಾಣದಲ್ಲಿಲ್ಲ ಎಂಬುದನ್ನು ಹಲವು ಅಧ್ಯಯನಗಳು ತೋರಿಸಿಕೊಟ್ಟಿವೆ. ಮಹಿಳೆಯರು ರಾಜಕೀಯ ಪ್ರವೇಶಿಸಿದ್ದಾಗ್ಯೂ ಪುರುಷರ ಪ್ರಭಾವಕ್ಕೆ ಒಳಗಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ವಹಿಸಿ ಮಹಿಳಾ ಸಬಲೀಕರಣದ ಪ್ರಯತ್ನ ನಡೆಸದಿದ್ದರೆ ಪಂಚಾಯತ್ ರಾಜ್‌ನ ಒಟ್ಟು ಪ್ರಕ್ರಿಯೆಯೇ ಅರ್ಥಹೀನವಾಗಿ ಬಿಡುತ್ತದೆ.

ಸುಶೀಲ್ ಕುಮಾರ್ ಮತ್ತು ವಿನಿತ್ ಪಾರ್ಮರ್ (೨೦೧೬)ಅವರ *'ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಪಂಚಾಯತ್‌ನಲ್ಲಿ ರಾಜಕೀಯ ಪ್ರಾತಿನಿಧ್ಯ'* ಎಂಬ ಅಧ್ಯಯನದಲ್ಲಿ ಪಂಚಾಯತ್‌ಗಳಲ್ಲಿ ಪ್ರತಿನಿಧಿಗಳಾಗಿರುವ ಮಹಿಳೆಯರ ಅಧ್ಯಯನ ನಡೆಸಿ ಮಹಿಳೆ ಪಂಚಾಯತ್‌ನ ಪ್ರತಿನಿಧಿಗಳಾಗಿದ್ದರೂ ಸಹ ಆಕೆಯ ಪತಿ ಅಥವಾ ಪುರುಷ ಸದಸ್ಯರ ಪ್ರಭುತ್ವಕ್ಕೆ ಒಳಗಾಗಿರುವ ಬಗ್ಗೆ ಉಲ್ಲೇಖಿಸಿ, ಮಹಿಳೆಯರ ರಾಜಕೀಯ ಪ್ರಾತಿನಿಧ್ಯಕ್ಕೆ ಅನುಕೂಲವಾಗುವಂತೆ ಮೀಸಲಾತಿ ವ್ಯವಸ್ಥೆಯನ್ನು ಕಲ್ಪಿಸಿದ್ದರೂ ಸಹ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ನಿರೀಕ್ಷಿತ ಪ್ರಮಾಣದಲ್ಲಿ ಸಾಗುತ್ತಿಲ್ಲ. ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹೆಚ್ಚಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಯ ಆಯವ್ಯಯದಲ್ಲಿ ಮಹಿಳಾ ಸವಲತ್ತುಗಳ ಯೋಜನೆಗಳನ್ನು ಅಳವಡಿಸಿಕೊಳ್ಳುವುದು, ಸ್ವ-ಸಹಾಯ ಸಂಘಗಳ ಕಾರ್ಯಗಳನ್ನು ಎಲ್ಲಾ ಮಟ್ಟದ ಪಂಚಾಯತ್ ರಾಜ್ ವ್ಯವಸ್ಥೆಗಳೊಂದಿಗೆ ಜೋಡಿಸುವುದು, ಲಿಂಗ ಸಂಬಂಧಿತ ಸಮಸ್ಯೆಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮುಂತಾದ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಅಗತ್ಯತೆಯ ಬಗ್ಗೆ ವಿವರಿಸಿದ್ದಾರೆ. ಸುಜಿತ್ ಕುಮಾರ್ ಹಾಗೂ ಇತರರ *'ಎಂಪವರಿಂಗ್ ರೂರಲ್ ವುಮೆನ್ ಇನ್ ಪಂಚಾಯತ್'* ಅಧ್ಯಯನದಲ್ಲಿ ೭೩ ಹಾಗೂ ೭೪ನೆಯ ತಿದ್ದುಪಡಿಯಿಂದಾಗಿ ಮಹಿಳೆಯರು ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ ಪ್ರವೇಶವನ್ನು ಪಡೆಯಲು ಸಹಾಯವಾಗಿದೆ. ೭೩ನೆಯ ಸಂವಿಧಾನ ತಿದ್ದುಪಡಿಯಿಂದಾಗಿ ಮಹಿಳೆಯರು ಗ್ರಾಮ ಪಂಚಾಯತ್ ಆಡಳಿತದಲ್ಲಿ ಮೊದಲ ಬಾರಿಗೆ ಪ್ರವೇಶಿಸಿರುವುದರಿಂದ ಅನುಭವವಿರುವುದಿಲ್ಲ. ಗ್ರಾಮೀಣ ಭಾರತದ ಇಲಾಖೆಯಿಂದ ಸಹಾಯ ಸಹಕಾರ ಮಾತ್ರವಲ್ಲದೇ ಅನುಭವವಿರುವ ಸ್ಥಳೀಯ ಮಟ್ಟದ ನಾಯಕರುಗಳಿಂದ, ಬ್ಲಾಕ್ ಹಂತದ ಜನರಿಂದಲೂ ಬೇಕಾಗುತ್ತದೆ. ಪಶ್ಚಿಮ ಬಂಗಾಳ ಸರ್ಕಾರವು ಎಲ್ಲ ಹಂತಗಳಲ್ಲಿ ಆಯ್ಕೆಯಾದ ಮಹಿಳೆಯರಿಗೆ ತರಬೇತಿಯನ್ನು ನೀಡುತ್ತದೆ. ಆದರೆ ಒಂದು ಅಥವಾ ಎರಡು ದಿನದ ತರಬೇತಿಯು ಅವಶ್ಯಕತೆಯನ್ನು ಪೂರೈಸುವುದಿಲ್ಲ. ಕ್ಷೇತ್ರ ಅಧ್ಯಯನದ ಸಂದರ್ಭದಲ್ಲಿ ಮಹಿಳೆಯರು ಆಯ್ಕೆಯಾಗಿ ಎರಡು ವರ್ಷಗಳಾದರೂ ಈವರೆವಿಗೂ ಯೋಜನೆ, ಕೆಲಸ ಕಾರ್ಯಗಳ ಕುರಿತು ಸರಿಯಾದ ಮಾಹಿತಿ ಲಭ್ಯವಾಗಿಲ್ಲ. ನಮ್ಮ ಮೇಲಿನ ಅಧಿಕಾರಿಗಳನ್ನು,

ಬ್ಲಾಕ್ ಹಂತದ ಅಧಿಕಾರಿಗಳ ಮೇಲೆ ಅವಲಂಬಿಸಬೇಕಾಗಿದೆ. ಇದರಿಂದ ನಮಗೂ ಪ್ರತಿ ಬಾರಿಯೂ ಅವರನ್ನು ಕೇಳಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಎಲ್ಲ ಸಮಯ, ಸಂದರ್ಭಗಳಲ್ಲಿ ಅವರು ಸಹಾಯ ಮಾಡಲಾರರು ಎಂಬುದನ್ನು ಈ ಅಧ್ಯಯನ ತಿಳಿಸುತ್ತದೆ.

ಮಹಿಳೆಯರ ರಾಜಕೀಯ ಪ್ರವೇಶದಿಂದಾಗಿ ಬಹುವಿಧ ಪ್ರಯೋಜನಗಳನ್ನು ಪಡೆದುಕೊಂಡಿರುವುದು ಹಲವು ಅಧ್ಯಯನಗಳಲ್ಲಿ ರುಜುವಾತಾಗಿದೆ. ಭಾರತಿ.ಎಂ, (೨೦೧೧)ಅವರ *'ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಯ ಗ್ರಾಮ ಪಂಚಾಯತಿ ಮಹಿಳಾ ಸದಸ್ಯರ ಪಾತ್ರ ನಿರ್ವಹಣೆ: ಸಮಾಜಶಾಸ್ತ್ರೀಯ ಅಧ್ಯಯನ'* ಎಂಬ ಸಂಶೋಧನಾ ಕೃತಿಯಲ್ಲಿ ಮಹಿಳೆಯರು ಗ್ರಾಮ ಪಂಚಾಯತಿ ಮಹಿಳಾ ಸದಸ್ಯರ ಪಾತ್ರ ನಿರ್ವಹಣೆಯಲ್ಲಿ ಜ್ಞಾನದ ಸಮರ್ಥವಾದ ಬಳಕೆ, ಪ್ರತಿನಿಧಿಕರಣ ಹಾಗೂ ಕುಟುಂಬದಲ್ಲಿ ಇರುವಂತಹ ಸ್ಥಾನ ಎರಡರಲ್ಲೂ ತನ್ನ ಪಾತ್ರವನ್ನು ಅತಿ ಚಾಣಾಕ್ಷತನದಿಂದ ನಿರ್ವಹಿಸಿಕೊಂಡು ಎರಡು ಸ್ಥಾನಗಳಿಗೂ ನ್ಯಾಯ ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಾಮ ಪಂಚಾಯತಿಯಲ್ಲಿನ ಮಹಿಳಾ ಪ್ರಾತಿನಿಧ್ಯತೆ, ಮಹಿಳಾ ಸಮುದಾಯದ ಸಬಲೀಕರಣಕ್ಕೆ ಸಹಕಾರಿಯಾಗಿದೆ. ಮಹಿಳೆಯ ಕ್ರಿಯಾಶೀಲ ಭಾಗವಹಿಸುವಿಕೆ ಸಾಮಾಜಿಕ ಸಮತೋಲನವನ್ನು ಸಾಧ್ಯವನ್ನಾಗಿಸಿದೆ. ಅವಕಾಶಗಳು ಹೆಚ್ಚಾಗಿ ಇರುವುದರಿಂದ ಸಾಮಾನ್ಯ ಮಹಿಳೆಯು ಸಹ ಚುನಾವಣೆಗೆ ಸ್ಪರ್ಧಿಸುತ್ತಾಳೆ. ಹಿಂದೆ ಇದ್ದಂತೆ ರಾಜಕಾರಣದಲ್ಲಿ ತೊಡಗಿಕೊಂಡ ಮನೆತನ ಮಾತ್ರ ರಾಜಕೀಯ ಪ್ರವೇಶಿಸಬೇಕು ಎಂಬ ಭಾವನೆ ಇಂದು ಬದಲಾಗಿದ್ದು, ಎಲ್ಲಾ ವರ್ಗದ ಜನರ ಭಾಗವಹಿಸುವಿಕೆ ಕಾಣುತ್ತದೆ. ಅವರ ಅಧ್ಯಯನದಲ್ಲಿ ರಾಜಕೀಯ ಹಿನ್ನೆಲೆ ಕುಟುಂಬದವರು ಶೇಕಡ ೫೦ರಷ್ಟು ಮಾತ್ರ ಕಂಡು ಬಂದಿರುವುದಾಗಿ ತಿಳಿಸಿರುತ್ತಾರೆ. ಆಡಳಿತದಲ್ಲಿ ಮಹಿಳೆಯರ ಸಹಭಾಗಿತ್ವದ ಅವಶ್ಯಕತೆಯನ್ನು ಅಧ್ಯಯನವು ಎತ್ತಿ ತೋರಿಸಿದೆ. ಹಾಗೂ ಮಹಿಳೆಯ ಪಾಲುದಾರಿಕೆಯೊಂದಿಗೆ ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಬದಲಾವಣೆಗಳು ಸಾಧ್ಯವಾಗುವುದಾಗಿ ತಿಳಿಸಿದ್ದಾರೆ. ಮೀನಾಕ್ಷಿ.ಜೆ ಅವರ *'ವುಮೆನ್ ಇನ್ ಪಂಚಾಯತ್ ರಾಜ್'* ಎಂಬ ಅಧ್ಯಯನದಲ್ಲಿ ಸ್ಥಳೀಯ ಮಟ್ಟದಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದ ಮಹಿಳೆಯರನ್ನು ಸಮಾಜ ನೋಡುವ ದೃಷ್ಟಿಕೋನದಲ್ಲಿ ಬದಲಾವಣೆಯಾಗಲು ಪ್ರಾರಂಭಿಸಿದೆ. ಸ್ಥಳೀಯ ಮಟ್ಟದಲ್ಲಿ ಮೀಸಲಾತಿಯನ್ನು ನೀಡುವುದರ ಮೂಲಕ ಸ್ಥಳೀಯ ಮಟ್ಟದಲ್ಲಿರುವ ನಾಯಕಿಯರನ್ನು ಗುರುತಿಸುವಂತಾಗಿದೆ. ಮಹಿಳಾ ಸಬಲೀಕರಣಕ್ಕಾಗಿ ಕೆಲಸ ಮಾಡುವ ಸಂಸ್ಥೆಗಳು/ಸಂಘಟನೆಗಳು ಮಹಿಳೆಯರ ಸಾಮಾಜಿಕ, ರಾಜಕೀಯ ಸವಾಲುಗಳನ್ನು ಎದುರಿಸುವಲ್ಲಿ ಸಂಪೂರ್ಣವಾದ ಸಹಕಾರವನ್ನು ನೀಡುತ್ತಿರುವುದಾಗಿ ಈ ಅಧ್ಯಯನದಲ್ಲಿ ತಿಳಿಸಿದ್ದಾರೆ. ಲೀಲಾದೇವಿ ಪ್ರಸಾದ್.ಆರ್ ಅವರ *'ಇಪ್ಪತ್ತನೆಯ ಶತಮಾನದ ಕರ್ನಾಟಕ ರಾಜಕೀಯ ಮಹಿಳೆ'* ಎಂಬ ಕೃತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಹಾಗೂ ಸಮಾಜದ ಮೇಲೆ ರಾಜಕೀಯದ ಪ್ರಭಾವ ಇದ್ದೇ ಇರುತ್ತದೆ. ಪ್ರಸ್ತುತ ವಿಶ್ವದಲ್ಲಿ ರಾಜಕೀಯ ಶಕ್ತಿ ಸಮಾಜದ ಎಲ್ಲ ವರ್ಗಗಳ ಮೇಲೆ, ವ್ಯಕ್ತಿಗತ ಜೀವನದ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಈ ಪ್ರಭಾವ ಸಮಾಜಕ್ಕೆ ಒಳಿತನ್ನೂ ಮಾಡಬಹುದು ಇಲ್ಲವೇ ಕೆಡುಕನ್ನು ಮಾಡಬಹುದು.

ಹಿಂದಿನ ಕಾಲದಲ್ಲಿ ರಾಜಕೀಯ ಶಕ್ತಿ ನಿರಂಕುಶ ಪ್ರಭುವಿನ ಸ್ವತ್ತಾಗಿತ್ತು. ಆ ನಿರಂಕುಶ ಪ್ರಭು ನಡೆದದ್ದೇ ದಾರಿ, ನುಡಿದದ್ದೇ ಶಾಸನವಾಗಿತ್ತು. ಆದರೆ ಇಂದು ಪ್ರಜಾಪ್ರಭುತ್ವದ ಆಡಳಿತ ಜಾರಿಯಲ್ಲಿದೆ. ಇದರಿಂದಾಗಿಯೇ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಇಂದು ಹಲವು ಹಂತಗಳಲ್ಲಿ ಕಾಣಬಹುದು ಎಂದಿದ್ದಾರೆ.

ಕರ್ನಾಟಕದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಪಂಚಾಯತ್ ರಾಜ್‌ನ ಆಶಯದಂತೆ ಮಹಿಳೆಯರಿಗೆ ಅವಕಾಶ ಮಾಡಿಕೊಡಲಾಗಿದೆ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವೇ ರಾಜಕೀಯ ಶಕ್ತಿಯ ಮೂಲ. ಈ ಮತದಾನದ ಹಕ್ಕು ಮಹಿಳೆಯರಿಗೆ ದೊರೆತಿದ್ದು ಹೋರಾಟದ ಮೂಲಕ. ಆದರೆ ಚುನಾವಣೆಗೆ ನಿಲ್ಲುವ ಶಕ್ತಿ ಬಹುಕಾಲ ಸಿಕ್ಕಿರಲಿಲ್ಲ. ಆ ಶಕ್ತಿ ಬಂದ ಮೇಲೆ ಅದು ತೋರಿಕೆಯ ಶಕ್ತಿಯಾಗುತ್ತಿದೆಯೇ ಹೊರತು ಕ್ರಿಯಾತ್ಮಕ ಶಕ್ತಿಯಾಗಿರುವುದಿಲ್ಲ. ಇಂತಹ ಕ್ರಿಯಾತ್ಮಕ ಶಕ್ತಿಯನ್ನು ಕಾರ್ಯರೂಪಕ್ಕೆ ತಂದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ಸಹಕಾರಿ ರಂಗದ ಮೂಲಕ ಅನಂತರ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಮಹಿಳೆ ಸ್ವ ಶಕ್ತಿಯಿಂದ ಗೆಲ್ಲಬಲ್ಲಳು ಎಂಬುದನ್ನು ಕರ್ನಾಟಕ ರಾಜ್ಯ ಭಾರತಕ್ಕೆ ತೋರಿಸಿದೆ. ನಿರ್ಮಲ ಬುಚ್ (೨೦೦೦)ಅವರ ಅಧ್ಯಯನವು ೭೩ನೇ ತಿದ್ದುಪಡಿಯ ಮೊದಲು ಕರ್ನಾಟಕದಲ್ಲಿ ಲಿಂಗಾಯಿತರು ಮತ್ತು ಒಕ್ಕಲಿಗ ಪ್ರತಿನಿಧಿಗಳೇ ಹೆಚ್ಚು ಹೆಚ್ಚು ಕಂಡು ಬರುತ್ತಿದ್ದರು. ಆದರೆ ಸಂವಿಧಾನದ ೭೩ನೇ ತಿದ್ದುಪಡಿಯ ನಂತರದ ದಿನಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳಾ ಪ್ರತಿನಿಧಿಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮಹಿಳೆಯರು ಹಾಗೂ ಅನಕ್ಷರಸ್ಥರಾಗಿರುವ ಮಹಿಳೆಯರು ಸೇರಿರುವುದು ಹಾಗೆಯೇ ವಯಸ್ಸಿನಲ್ಲಿ ಚಿಕ್ಕವರಾಗಿರುವ, ಸಾರ್ವಜನಿಕ ಹಾಗೂ ರಾಜಕೀಯ ಕ್ಷೇತ್ರಕ್ಕೆ ಹೊಸಬರಾಗಿರುವ ಮಹಿಳೆಯರು ಆಯ್ಕೆಯಾಗಿ ಬಂದಿರುವುದು ಕಂಡುಬರುತ್ತಿದೆ. ಪಂಚಾಯತ್ ರಾಜ್‌ಗೆ ಪೂರ್ವದಲ್ಲಿ ಕೌಟುಂಬಿಕ ರಾಜಕೀಯ ಹಿನ್ನೆಲೆಯುಳ್ಳ ಮಹಿಳೆಯರು ಮಾತ್ರ ಅವಕಾಶ ಪಡೆಯುತ್ತಿದ್ದರು. ಆದರೆ ಪ್ರಸ್ತುತ ಪರಿಸ್ಥಿತಿ ಬದಲಾಗಿದ್ದು ಹೊಸ ಮುಖಗಳಿಗೆ ಅವಕಾಶ ದೊರೆತಂತಾಗಿದೆ ಎಂಬ ಸಂಗತಿಯನ್ನು ಬಹಿರಂಗ ಪಡಿಸಿದೆ.

ಸಂವಿಧಾನದ ತಿದ್ದುಪಡಿ ಹಾಗೂ ಪಂಚಾಯತ್ ರಾಜ್‌ನ ಆಶಯಗಳು ಸಂಪೂರ್ಣವಾಗಿ ಈಡೇರಿಲ್ಲ ಎಂಬುದನ್ನು ಕೆಲವು ಅಧ್ಯಯನಗಳು ಖಚಿತಪಡಿಸಿವೆ. ಸಮಾಜದಲ್ಲಿ ಇನ್ನೂ ಮಹಿಳೆಯರನ್ನು ರಾಜಕೀಯ ಪ್ರತಿನಿಧಿಯಾಗಿ ನೋಡಬಯಸುವವರ ಸಂಖ್ಯೆ ಕಡಿಮೆಯಿದೆ. ಅವರನ್ನು ಮತದಾರರಾಗಿ ಪ್ರಯೋಜನ ಪಡೆಯುವ ಹವಣಿಕೆ ರಾಜಕೀಯ ಕ್ಷೇತ್ರದಲ್ಲಿರುವ ಪುರುಷರಲ್ಲಿರುವುದು ಕಂಡುಬರುತ್ತದೆ. ಯೋಗರಾಜು.ಎಸ್.ಡಿ. (೨೦೧೪)ಅವರ ಮಂಡ್ಯ ಜಿಲ್ಲೆಯಲ್ಲಿ ನಡೆಸಿರುವ ಸಂಶೋಧನಾ ಪ್ರಬಂಧದಲ್ಲಿ ಗ್ರಾಮೀಣ ಆಡಳಿತದಲ್ಲಿ ಎಲ್ಲರ ಪಾಲುಗಾರಿಕೆ ಸಮಾನವಾಗಿರಬೇಕೆಂದು ಸಂವಿಧಾನದ ಆಶಯವನ್ನು ಈಡೇರಿಸಲು ಅಸ್ತಿತ್ವಕ್ಕೆ ಬಂದ ಬಲವಂತರಾಯ್ ಮೆಹ್ತಾ, ಅಶೋಕ್ ಮೆಹ್ತಾ ಸಮಿತಿಗಳ ಬಗ್ಗೆ ಹಾಗೂ ಇದರನ್ವಯ ಸಂವಿಧಾನಕ್ಕೆ ತಂದ ೭೩ ಹಾಗೂ ೭೪ನೇ ತಿದ್ದುಪಡಿಯು ಮಹಿಳೆಯರ ಸ್ಥಳೀಯಾಡಳಿತದ ಮೀಸಲಾತಿಯಲ್ಲಿ

ಮಾಡಿದ ಬದಲಾವಣೆಗಳ ಬಗ್ಗೆ ಈ ಅಧ್ಯಯನದಲ್ಲಿ ಸವಿವರವಾಗಿ ವಿವರಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಯಲ್ಲಿ ನೀಡಲಾಗಿರುವ ಮೀಸಲಾತಿಯಿಂದಾಗಿ ಎಲ್ಲಾ ವರ್ಗದವರಿಗೂ ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸುವಿಕೆ ಸಾಧ್ಯವಾಗಿದೆ. ಮಹಿಳಾ ಮೀಸಲಾತಿಯಿಂದಾಗಿ ಗುಣಾತ್ಮಕ ಅಭಿವೃದ್ಧಿ ಬದಲು ಪರಿಮಾಣಾತ್ಮಕ ಬದಲಾವಣೆ ಮಾತ್ರವೇ ಅಸ್ತಿತ್ವಕ್ಕೆ ಬಂದಿದೆ. ಪ್ರಸ್ತುತ ಎಲ್ಲಾ ರಾಜಕೀಯ ಪಕ್ಷಗಳಿಗೂ ಮಹಿಳೆಯರು ಮತದಾರರಾಗಿ ಮಾನ್ಯರೆ ಹೊರತು, ನಾಯಕಿಯಾಗಿ ಅಲ್ಲ. ಮಹಿಳಾ ಪರವಾದ ಅಲೋಚನೆಗಳು, ಕಾರ್ಯಗಳು ರಾಜಕೀಯ ಪಕ್ಷಗಳಲ್ಲಿ ಹಾಗೂ ಅವರ ಸಿದ್ಧಾಂತಗಳಲ್ಲಿ ಕಂಡು ಬರುತ್ತಿಲ್ಲ ಎಂದು ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ರಶ್ಮಿ ಅರುಣ್ (೧೯೯೭)ಅವರು ಮಧ್ಯಪ್ರದೇಶದ ಮಹಿಳಾ ರಾಜಕೀಯ ಪ್ರಾತಿನಿಧ್ಯತೆಯ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ತಿಳಿಸಿರುವ ವಿಚಾರವೆಂದರೆ ರಾಜಕೀಯ ಪ್ರಾತಿನಿಧ್ಯತೆಯನ್ನು ಹೊಂದಿರುವ ಮಹಿಳೆಯರು ಗೃಹಿಣಿಯರಾಗಿದ್ದು, ಪ್ರಥಮ ಬಾರಿಗೆ ರಾಜಕೀಯಕ್ಕೆ ಬಂದವರಾಗಿರುತ್ತಾರೆ ಮತ್ತು ಅವರುಗಳಲ್ಲಿ ಬಹಳಷ್ಟು ಜನ ಅನಕ್ಷರಸ್ಥರಾಗಿದ್ದು, ಇಲ್ಲವೇ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿರುವವರಾಗಿರುವುದು ಕಂಡುಬಂದಿತು. ಅಲ್ಪ ಶಿಕ್ಷಣದಿಂದಾಗಿ ಪರಿಣಾಮಕಾರಿ ಪಾಲ್ಗೊಳ್ಳುವಿಕೆಯು ಮಹಿಳೆಯರಿಗೆ ಸಾಧ್ಯವಾಗುತ್ತಿಲ್ಲ.

ಮಹಿಳೆಯರ ರಾಜಕೀಯ ಬೆಳವಣಿಗೆಯಲ್ಲಿ ಜಾಗತೀಕರಣದ ಪಾತ್ರವೂ ಮಹತ್ವದ್ದಾಗಿದೆ. ಮಹಿಳಾ ಪರ ಚಿಂತನೆಗಳು, ಅಭಿವೃದ್ಧಿಪರ ಕಾಳಜಿ, ಲಿಂಗ ಸಮಾನತೆಯ ಚಿಂತನಗಳೆಲ್ಲವುಗಳಿಗೂ ಜಾಗತೀಕರಣವೂ ಕೂಡಾ ಕಾರಣವಾಗಿದೆ. ಜಾಗತೀಕರಣದಿಂದಾಗಿ ಲಿಂಗ ಸಮಾನತೆ, ಮಹಿಳಾ ಸ್ವಾಯತ್ತತೆಗಳಂತಹ ಸಾಧ್ಯತೆಗಳು ಒಂದು ಮಾಧ್ಯಮಗಳ ಮೂಲಕ ಈ ಆಶಯಗಳು ಸಾರ್ವತ್ರಿಕವಾಗಲು ಸಾಧ್ಯವಾಗಿದೆ. ಕವಿತಾ ರೈ.ಬಿ.ಆರ್ (೨೦೦೪)ಅವರ ಅಧ್ಯಯನದಲ್ಲಿ ಜಾಗತೀಕರಣವು ಸ್ತ್ರೀ ಪುರುಷರೆನ್ನದೇ ಮುಕ್ತ ಅವಕಾಶವನ್ನು ನೀಡುವುದರ ಹಿನ್ನೆಲೆಯಿಂದ ತೀವ್ರತರವಾದ ಸ್ಪರ್ಧೆ ಏರ್ಪಡುತ್ತದೆ. ಇದರಿಂದಾಗಿ ರಾಜಕೀಯದಲ್ಲಿಯೂ ಜಾಗತೀಕರಣದ ಪ್ರಭಾವ ಹೆಚ್ಚಾಗಿ ಮಹಿಳಾ ಸಶಕ್ತತೆ ಕಾರಣವಾಗಬಹುದು ಎಂಬುದು ಸಾಮಾನ್ಯ ಲೆಕ್ಕಾಚಾರ. ಆದರೆ ಭಾರತದ ಮಟ್ಟಿಗೆ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಸ್ಥಳೀಯ ಮಟ್ಟದಲ್ಲಿ ಮಾತ್ರ ಸಕ್ರಿಯವಾಗಿ ನಡೆದಿದೆ. ಇದು ಮಹಿಳಾ ಮೀಸಲಾತಿಯ ಕಾರಣದಿಂದಾಗಿ ಮಾತ್ರ ಎಂಬುದು ಉಲ್ಲೇಖನೀಯ. ಕೆಲವೊಂದು ಪ್ರದೇಶದ ಸ್ಥಳೀಯಾಡಳಿತದಲ್ಲಿ ಕಂಡುಬರುವ ಮಹಿಳೆಯರು ನಡೆಸುವ ರಾಜಕಾರಣವು ಅದು ಮಹಿಳೆಯರಿಂದ ಪುರುಷರಿಗಾಗಿ ನಡೆಸುವ ಪುರುಷ ರಾಜಕಾರಣವಾಗಿದೆ. ಇಂತಹ ವಾಸ್ತವವನ್ನು ಮಾಧ್ಯಮಗಳು ಮಹಿಳಾ ಪ್ರತಿನಿಧಿಗಳೆಲ್ಲರೂ ಮಹಿಳೆಯರಿಗಾಗಿಯೇ ಆಡಳಿತವೆಂಬಂತೆ ಬಿಂಬಿಸುವ ಕಾರಣ ವಾಸ್ತವವಾಗಿ ನಡೆಯುವ ಮಹಿಳೆಯರ ಅಭಿವೃದ್ಧಿಪರ ಚಳುವಳಿಗಳಿಗೆ ತೊಡಕಾಗುವ ಸನ್ನಿವೇಶ ನಿರ್ಮಾಣವಾಗುತ್ತಿರುವುದನ್ನು ತಮ್ಮ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ.

ಜಯಶ್ರೀ.ಹೆಚ್.ಎಂ. (೨೦೦೭)ಅವರು *'ಪಂಚಾಯತ ವ್ಯವಸ್ಥೆ ಹಾಗೂ ಮಹಿಳಾ ರಾಜಕೀಯ ಸಬಲೀಕರಣ'* ಎಂಬ ವಿಷಯದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧದಲ್ಲಿ ಮಹಿಳಾ ರಾಜಕೀಯ ಸಬಲೀಕರಣವು ಹಲವು ಆಯಾಮಗಳನ್ನು ಒಳಗೊಂಡಿದ್ದು, ಮಹಿಳೆಯರಿಗೆ

ರಾಜಕೀಯದಲ್ಲಿ ಮೀಸಲಾತಿಯನ್ನು ನೀಡುವುದರಿಂದ ಸಬಲೀಕರಣವಾಗುತ್ತದೆ ಎಂದು ಅರಿತುಕೊಳ್ಳುವುದು ಮಿಥ್ಯ. ಎಲ್ಲ ಸಾಮಾಜಿಕ ಆಯಾಮಗಳಿಂದ ಮಹಿಳೆಯರ ಸಬಲೀಕರಣ ಗೊಳ್ಳಬೇಕಾದ ಅಗತ್ಯವಿದೆ ಎಂದು ತಿಳಿಸಿದ್ದಾರೆ. ಮಹಿಳಾ ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸೇರಿದಂತೆ ದೇಶದಾದ್ಯಂತ ನಡೆದ ಅಧ್ಯಯನಗಳು ಕೆಲವು ಮಹತ್ವದ ಸಂಗತಿಗಳನ್ನು ಹೊರಹಾಕಿವೆ. ಪಂಚಾಯತ್ ರಾಜ್ ಕಾಯಿದೆಯಿಂದಾಗಿ ಮಹಿಳೆಯರಿಗೆ ಅವಕಾಶ ದೊರೆತು ರಾಜಕೀಯ ಪ್ರವೇಶ ಮಾಡಿದ್ದು ನಿಜವಾದರೂ ಅವರ ರಾಜಕೀಯ ಪಾಲ್ಗೊಳ್ಳುವಿಕೆ ನಿರೀಕ್ಷಿತ ಮಟ್ಟದಲ್ಲಿಲ್ಲ. ಎಲ್ಲಾ ರಾಜ್ಯಗಳಲ್ಲಿಯೂ ಪಂಚಾಯತ್ ರಾಜ್‌ನ ಮಹಿಳಾ ಸದಸ್ಯರ ಸಂಖ್ಯೆಯಲ್ಲಿ ವೃದ್ಧಿಸಿದೆ. ಆದರೆ ನಾಯಕತ್ವ ಹಾಗೂ ಮಹಿಳಾ ಸದಸ್ಯರ ಪಾಲ್ಗೊಳ್ಳುವಿಕೆಯನ್ನು ಗಮನಿಸಿದಾಗ ಆಡಳಿತವು 'ಮಹಿಳೆಯರಿಂದ ಪುರುಷರಿಗಾಗಿ ನಡೆಸುವ ಪುರಷ ರಾಜಕಾರಣ' ಎಂಬಂತಾಗಿದೆ. ಮಹಿಳೆಯರು ನಿರ್ಣಯ ತೆಗೆದುಕೊಳ್ಳುವಲ್ಲಿ ತಮಗಿರುವ ಹಕ್ಕನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ. ಮಹಿಳೆಯರ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳು ಕೂಡಾ ಮಹಿಳೆಯರ ಸ್ವಾಯತ್ತ ಚಿಂತನೆಗಳಿಗೆ ಪೂರಕವಾಗಿಲ್ಲ ಎಂಬುದನ್ನು ಹಲವು ಅಧ್ಯಯನಗಳು ತೋರಿಸಿವೆ. ಮಹಿಳಾ ಶಿಕ್ಷಣ, ಮಹಿಳೆಯರಿಗೆ ಪೂರಕ ತರಬೇತಿ ನೀಡಿ ಅವರನ್ನು ಸಿದ್ಧಗೊಳಿಸಿ ಕೌಟುಂಬಿಕ ಹಾಗೂ ಸಾಮಾಜಿಕ ಬೆಂಬಲ ನೀಡಿದಾಗ ಮಹಿಳಾ ರಾಜಕೀಯ ಸಬಲೀಕರಣ ಸಾಧ್ಯವಾಗಬಲ್ಲದ್ದು ಎಂದು ಜಯಶ್ರೀ ಅಭಿಪ್ರಾಯಪಡುತ್ತಾರೆ.

ಆಗಲೇ ಘಟಿಸಿದ ಅಧ್ಯಯನದ ವಿಶ್ಲೇಷಣೆಯು ಸಮಾಜದಲ್ಲಿ ಮಹಿಳೆಯರ ಸಬಲೀಕರಣದ ಅಗತ್ಯತೆ ಇದೆ ಎಂದು ತಿಳಿಸುತ್ತದೆ. ಶೈಕ್ಷಣಿಕ ಸಬಲೀಕರಣವು ಮೊಗವೀರ ಮಹಿಳೆಯರನ್ನು ಪ್ರಸ್ತುತ ಪರಿಸ್ಥಿತಿಯಿಂದ ಸಾಮಾಜಿಕ ಹಾಗೂ ರಾಜಕೀಯವಾಗಿ ಉನ್ನತಿಗೇರಿಸುವ ಉತ್ತಮ ಸಾಧನವಾಗಿದೆ. ಈ ಅಧ್ಯಯನದ ಮೂಲ ಉದ್ದೇಶವೇ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಹೀಗೆ ವಿವಿಧ ರೀತಿಯ ಸಬಲೀಕರಣದ ಮುಖೇನ ರಾಜಕೀಯ ಸಬಲೀಕರಣವನ್ನು ಸಾಧಿಸುವುದಾಗಿದೆ. ಈ ಹಂತದಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚು ಹೆಚ್ಚು ಕೈಗೊಳ್ಳುವಲ್ಲಿ ಪೂರಕ ಯೋಜನೆಗಳನ್ನು ಸರಕಾರವು ಜಾರಿಗೊಳಿಸುವ ಕೆಲಸವಾಗಬೇಕು. ಮಹಿಳೆಯರಿಗೆ ಹೆಚ್ಚು ರಾಜಕೀಯ ಅವಕಾಶಗಳನ್ನು ಒದಗಿಸಿಕೊಡಬೇಕು. ಹಾಗಾದಾಗ ಮಹಿಳಾಭಿವೃದ್ಧಿಗೆ ಕಾರಣವಾಗುತ್ತದೆ. ಪ್ರಸ್ತುತ ಅಧ್ಯಯನವು ಮೊಗವೀರ ಮಹಿಳೆಯರ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಬಲೀಕರಣವನ್ನು ಸಾಧಿಸುವಲ್ಲಿ ರೂಪಿಸಬೇಕಾದ ಪೂರಕ ನೀತಿ ನಿಯಮಗಳ ಬಗ್ಗೆಯೂ ಚರ್ಚಿಸುತ್ತದೆ. ಆ ಮೂಲಕ ಮೊಗವೀರ ಮಹಿಳಾಭಿವೃದ್ಧಿ ಹಾಗೂ ದೇಶದ ಅಭಿವೃದ್ಧಿಯನ್ನು ಸಾಧಿಸುವ ಗುರಿಯನ್ನು ಈ ಅಧ್ಯಯನವು ಹೊಂದಿದೆ. ಮೊಗವೀರ ಮಹಿಳೆಯರು ರಾಜಕೀಯವಾಗಿ ಈಗ ಯಾವ ಹಂತದಲ್ಲಿದ್ದಾರೆ? ನಿರೀಕ್ಷಿತ ರಾಜಕೀಯ ಸಾಧನೆ ಮಾಡಬೇಕಾದರೆ ಮೊಗವೀರ ಮಹಿಳೆಯರಿಗೆ ಯಾವ ರೀತಿಯ ಪೂರಕ ಕೌಟುಂಬಿಕ, ಸಾಮಾಜಿಕ ಪರಿಸರ ಬೇಕಾಗಿದೆ? ಪುರುಷ ಪ್ರಧಾನವಾಗಿ ಬೆಳೆದಿರುವ ರಾಜಕೀಯ ಕ್ಷೇತ್ರದಲ್ಲಿ ಮೊಗವೀರ ಮಹಿಳೆಯರಿಗೆ ಸೂಕ್ತ ಮನ್ನಣೆ,

ಸ್ಥಾನಮಾನ ನೀಡುವ ಬಗೆ ಹೇಗೆ? ಮೊಗವೀರ ಮಹಿಳೆಯರು ಪುರುಷರನ್ನು ಅವಲಂಬಿಸದೆ ಸ್ವತಂತ್ರವಾಗಿ ರಾಜಕೀಯದಲ್ಲಿ ಬೆಳವಣಿಗೆ ಹೊಂದಿ ಸೂಕ್ತ ಕೊಡುಗೆಗಳನ್ನು ನೀಡುವಂತಾಗಲು ಅವರಿಗೆ ನೀಡಬೇಕಾದ ಬೆಂಬಲವೇನು? ಎಂಬ ವಿಷಯಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಮಹಿಳೆಯರಿಗೆ ರಾಜಕೀಯವಾಗಿ ಬೆಳೆಯುವ ಪೂರಕ ವಾತಾವರಣವನ್ನು ನಿರ್ಮಿಸಿ ಕೊಡುವುದು, ಕೌಟುಂಬಿಕವಾಗಿ, ಸಾಮಾಜಿಕವಾಗಿ ಅವರನ್ನು ಬಲಗೊಳಿಸುವುದು, ಸಂವಿಧಾನದ ಮತ್ತು ಪಂಚಾಯತ್ ರಾಜ್‌ನ ಪ್ರಧಾನ ಉದ್ದೇಶಗಳನ್ನು ಈಡೇರಿಸಕೊಂಡು ಮಹಿಳಾ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವುದು ಈ ಅಧ್ಯಯನದ ಆಶಯವಾಗಿದೆ. ಲಿಂಗ ಅಸಮಾನತೆಯನ್ನು ತೊಡೆದು ಹಾಕಿ, ಮಹಿಳಾ ನಾಯಕತ್ವವನ್ನು ಪ್ರೇರೇಪಿಸಿ, ಕುಟುಂಬದಿಂದ ಹೊರತಾದ ಜವಾಬ್ದಾರಿಯನ್ನು ಮಹಿಳೆ ನಿರ್ವಹಿಸಬಲ್ಲಳು ಎಂಬುದನ್ನು ಸಾಬೀತುಪಡಿಸುವ ಪ್ರಯತ್ನವೂ ಇಲ್ಲಿದೆ.

ಅಧ್ಯಾಯ ಮೂರು
ಉಡುಪಿ ಜಿಲ್ಲೆಯ ಸಂಕ್ಷಿಪ್ತ ಮಾಹಿತಿ: ಅಧ್ಯಯನದ ವ್ಯಾಪ್ತಿಯನ್ನು ಅನುಲಕ್ಷಿಸಿ

೩.೧. ಉಡುಪಿ ಜಿಲ್ಲೆಯ ಭೌಗೋಳಿಕ ಮಾಹಿತಿ

೩.೨. ಜನಸಂಖ್ಯೆ

೩.೩. ಭಾಷೆ, ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಗಳು

೩.೪. ಸಾರಿಗೆ ಸಂಪರ್ಕಗಳು

೩.೫. ಕೃಷಿ, ಉದ್ಯಮ ಹಾಗೂ ಕೈಗಾರಿಕೆಗಳು

೩.೬. ಉಡುಪಿ ಜಿಲ್ಲೆಯಲ್ಲಿ ಮೀನುಗಾರಿಕೆ

೩.೭. ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು

೩.೮. ಉಡುಪಿ ಜಿಲ್ಲೆಯಲ್ಲಿರುವ ಶಿಕ್ಷಣ ಸಂಸ್ಥೆಗಳು

೩.೯. ಉಡುಪಿ ಜಿಲ್ಲೆಯ ಐತಿಹಾಸಿಕ ತಾಣಗಳು/ಪ್ರವಾಸೋದ್ಯಮ

೩.೧೦. ಉಡುಪಿ ಜಿಲ್ಲೆಯ ಆಡಳಿತಾತ್ಮಕ ವಿವರಣೆ

೩.೧೧. ಉಡುಪಿ ಜಿಲ್ಲೆ ಮತ್ತು ಮಹಿಳಾ ಅಭಿವೃದ್ಧಿ

ಅಧ್ಯಾಯ ೩

ಉಡುಪಿ ಜಿಲ್ಲೆಯ ಸಂಕ್ಷಿಪ್ತ ಮಾಹಿತಿ: ಅಧ್ಯಯನದ ವ್ಯಾಪ್ತಿಯನ್ನು ಅನುಲಕ್ಷಿಸಿ

ಯಾವುದೇ ಒಂದು ಪ್ರದೇಶದ ಮಹತ್ವ ಹೊರಜಗತ್ತಿಗೆ ತಿಳಿಯುವುದು ಅದರ ಮಣ್ಣಿನ ಮಹತ್ವದಿಂದ, ಅಲ್ಲಿನ ಜನಜೀವನ, ಆಡಳಿತ ವೈಖರಿ, ನಡವಳಿಕೆ, ರಾಜಕೀಯ ಮತ್ತು ಸಂಸ್ಕೃತಿಗಳಿಂದ ಹೇಗೆ ಪ್ರಭಾವಿತಗೊಂಡಿದೆ ಎಂಬುದರಿಂದ ಮನವರಿಕೆಯಾಗುತ್ತದೆ. ಈ ಹಿನ್ನಲೆಯಲ್ಲಿ ಅಧ್ಯಯನದ ಪ್ರದೇಶವಾದ ಉಡುಪಿ ಜಿಲ್ಲೆಯ ಮಹತ್ವ ಪರಿಶೀಲಿಸಿದರೆ ಅತ್ಯಂತ ಪ್ರಾಚೀನ ಕಾಲದಿಂದಲೂ ಇದೊಂದು ಮಹತ್ವದ ನೆಲವಾಗಿ ನಾಡಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ಕಾಲಕಾಲಕ್ಕೆ ನೀಡುತ್ತಾ ಬಂದಿದೆ.

೩.೧. ಉಡುಪಿ ಜಿಲ್ಲೆಯ ಭೌಗೋಳಿಕ ಮಾಹಿತಿ

ಉಡುಪಿ ಜಿಲ್ಲೆಯು ಕರ್ನಾಟಕದ ಕರಾವಳಿ ಜಿಲ್ಲೆಯಾಗಿದ್ದು, ಪೂರ್ವದಲ್ಲಿ ಪಶ್ಚಿಮ ಘಟ್ಟಗಳು ಹಾಗೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ ಸುತ್ತುವರೆದಿದೆ. ಭೌಗೋಳಿಕವಾಗಿ ಉಡುಪಿ ಜಲ್ಲೆಯ ಅಸ್ತಿತ್ವವನ್ನು ನೂರಾರು ವರ್ಷಗಳ ಹಿಂದಿನಿಂದಲೂ ಗುರುತಿಸಬಹುದು. ದೇವಾಲಯಗಳ ನಗರವೇಂದೇ ಪ್ರಸಿದ್ಧವಾದ ಉಡುಪಿಗೆ ೮೦೦ ವರ್ಷಗಳ ಇತಿಹಾಸವಿದೆ. ಪುರಾಣಾನುಸಾರ ಉಡುಪಿಯನ್ನು ರಾಮಭೋಜ ಎಂಬ ರಾಜನು ತುಲಾಭಾರ ದಾನಮಾಡಿದ ಪ್ರಾಂತ್ಯವಾದುದರಿಂದ 'ತೌಲವ' ದೇಶವೆಂದೂ, ಇಲ್ಲಿಯ ಆಗಿನ ನಿವಾಸಿಗಳು 'ತೌಲವ'ರೆಂದು ಕರೆಯಲ್ಪಡುತ್ತಾರೆ. ದಕ್ಷನ ಶಾಪಕ್ಕೆ ಒಳಗಾದ ಚಂದ್ರನು ತನ್ನ ಕಲಾಪೂರ್ಣತೆಗಾಗಿ ರಜತಪೀಠಪುರದ ಸಮೀಪವಿರುವ ಅಬ್ಜಾರಣ್ಯದಲ್ಲಿ (ಅಜ್ಜರಕಾಡು) ತಪಸ್ಸು ಮಾಡತೊಡಗುತ್ತಾನೆ. ಚಂದ್ರನಿಗೆ ಉಡುಪನೆಂದು ಹೆಸರು. ಚಂದ್ರನು ನಕ್ಷತ್ರಪತಿಯಾದುದರಿಂದ ಅವನು ತಪಸ್ಸು ಮಾಡಿದ ಸ್ಥಳವೇ 'ಉಡುಪಿ' ಎಂದು ಕರೆಯಲ್ಪಡುತ್ತಿದೆ. ಗೋವಿಂದ ಪೈ ಅವರ ಅಭಿಪ್ರಾಯದಂತೆ, ಕ್ರಿ.ಶ. ೧೭೬೩ ರಿಂದ ೧೮೦೪ ರೊಳಗೆ ಹುಟ್ಟಿದ, ಕೆಳದಿ ನೃಪ ವಿಜಯವೆಂಬ ಲಿಂಗಣನ ಕನ್ನಡ ಚಂಪೂ ಕಾವ್ಯದಲ್ಲೂ ಅದರ ಷಷ್ಠಿ ವಿಭಕ್ತಿಯ ಏಕ ವಚನದ ರೂಪವು 'ಉಡುಪಿನ' ಎಂದಿರುವುದರಿಂದ ಅದರ ನೇರಾದ ರೂಪವು 'ಉಡುಪು' ಎಂದೇ ಆಗಿರಬೇಕು. ತುಳು ಭಾಷೆಯಲ್ಲಿ ಈಗಲೂ ಅದನ್ನು 'ಉಡ್ಪು' 'ಒಡ್ಪು' ಎನ್ನುತ್ತಾರೆ. ಭಾಷಾ ಶಾಸ್ತ್ರಜ್ಞರ ಪ್ರಕಾರ ಕನ್ನಡದಲ್ಲಿ ಊಡು ಎಂದರೆ ಭೋಜನಕ್ರಿಯೆ, ಊಟ ಮತ್ತು ಊಡಿಸು, ಇದೇ ರೀತಿಯಲ್ಲಿ 'ಉಣ್' ಎಂಬ ಭೋಜನಾರ್ಥದ ಧಾತುವೂ ಇದೆ. ತುಳು ಭಾಷೆಯಲ್ಲಿ 'ಉಣ್' ಎಂದರೆ ಇದೇ ಆರ್ಥವನ್ನು ಕೊಡುತ್ತದೆ (ಊಣಸು ಅಂದರೆ ಊಟ: ಉಣ್ಪು ಅಂದರೆ ಆಹಾರ, ಅನ್ನ) ಕನ್ನಡ ಭಾವಾರ್ಥದಲ್ಲಿ ಊಟವೆಂಬ ಶಬ್ದವು ಊಡು ಧಾತುವಿನಿಂದ ಬಂತೆಂದು, ಊಠ ಎಂದೂ ಹೇಳುತ್ತಾರೆ. ಈ ಮಹಾಪ್ರಾಣಕ್ಕೆ ಸಂಸ್ಕೃತ ಜನ್ಯವೇ ಕಾರಣವಾಗಿದೆ. ಸಂಸ್ಕೃತದಲ್ಲಿ 'ಊಥಸ್', 'ಊಥ್', ಎಂಬುದಕ್ಕೆ ದನದ ಕೆಚ್ಚಲು ಎಂಬ ಅರ್ಥವಿದೆ. ದನದ ಕರುವಿಗೆ

ಆಹಾರದ ಬುತ್ತಿ 'ಊಥ'ವು ಆಹಾರಸ್ಥಾನವಾಗಿರುವಂತೆ ಮನುಷ್ಯನ ಆಹಾರ ಸ್ಥಾನವು 'ಊಡುಪಿ' ಎಂಬುದು 'ಉಡುಪು' ಎಂಬ ರೂಪಾಂತರವಾಗಿಯೂ ಜನ್ಮ ತಾಳಿವೆ ಎಂಬ ಅರ್ಥ.

ಉಡುಪಿ ತಾಲೂಕಿನ ಬಾರಕೂರು ೧೦-೧೧ನೇ ಶತಮಾನದಲ್ಲಿ ಆಳುಪರ ಅಧೀನ ಅರಸ ಹೊಂಬುಚ್ಚದ ಶಾಂತರರ ರಾಜಕೀಯ ಚಟುವಟಿಕೆಯ ಕೇಂದ್ರವಾಗಿತ್ತು. ಆಳುಪ ಅರಸು ಕರಿ ಆಳುಪೇಂದ್ರನ ಕಾಲದಲ್ಲಿ ರಾಜಧಾನಿಯಾಗಿತ್ತು. ಬಾದಾಮಿ ಚಾಲುಕ್ಯರ, ಹೊಯ್ಸಳರ ಆಳ್ವಿಕೆ ಬಳಿಕ ವಿಜಯ ನಗರ ಅರಸರ ಕಾಲದಲ್ಲಿ ಬಾರಕೂರಿಗೆ ರಾಜ್ಯಪಾಲರನ್ನು ನೇಮಿಸಲಾಗಿತ್ತು. ವಿಜಯನಗರ ಸಂಸ್ಥಾನದ ಸ್ಥಾಪನೆಯು ಅಳುಪರ ಆಳ್ವಿಕೆಯನ್ನು ಅಂತ್ಯಗೊಳಿಸಿತು. (ಸೂರ್ಯನಾಥ ಕಾಮತ್.ಯು, ೧೯೭೭)

ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆಯಾಗಿರುವ ಉಡುಪಿ ಜಿಲ್ಲೆಯು ೩,೫೮೨ ಚದರ ಕಿಲೋ ಮೀಟರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಉಡುಪಿ ಜಿಲ್ಲೆಯು ಉತ್ತರದಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದಲೂ, ದಕ್ಷಿಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದಲೂ, ಪೂರ್ವದಲ್ಲಿ ಶಿವಮೊಗ್ಗ ಜಿಲ್ಲೆ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಂದಲೂ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ ಸುತ್ತುವರೆಯಲ್ಪಟ್ಟಿದೆ. ಉಡುಪಿ ಜಿಲ್ಲೆಯು ಸಮುದ್ರ ಮಟ್ಟಕ್ಕಿಂತ ೩೭ಮೀ (೮೯ ಅಡಿ) ಎತ್ತರದಲ್ಲಿರುತ್ತದೆ. ಉಡುಪಿ ಜಿಲ್ಲೆಯು ಉಷ್ಣವಲಯದ ಹವಾಮಾನವನ್ನು ಹೊಂದಿದೆ. ಬೇಸಿಗೆಯು ಮಾರ್ಚ್ ತಿಂಗಳಿನಿಂದ ಮೇ ತಿಂಗಳವರೆಗೆ ಗರಿಷ್ಠ ಉಷ್ಣಾಂಶ ೩೮ ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಚಳಿಗಾಲವು ಹಿತಕರವಾಗಿದ್ದು, ಡಿಸೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳವರೆಗೆ ೩೨ ಡಿಗ್ರಿ ಸೆಲ್ಸಿಯಸ್‌ನಿಂದ ೨೦ ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಜಿಲ್ಲೆಯು ಜೂನ್ ತಿಂಗಳಿನಿಂದ ಸೆಪ್ಟಂಬರ್ ತಿಂಗಳವರೆಗೆ ಮಾನ್ಸೂನ್ ಅವಧಿಯನ್ನು ಹೊಂದಿದ್ದು, ವಾಡಿಕೆಯ ಮಳೆಯ ಪ್ರಮಾಣ ೩,೭೭೧ ಮಿಲಿ ಮೀಟರ್. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಆಗಸ್ಟ್ ೧೯೯೮ ರಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಎಂಬ ಎರಡು ಜಿಲ್ಲೆಗಳಾಗಿ ವಿಭಜನೆಗೊಂಡಿದೆ. ಉಡುಪಿ ಜಿಲ್ಲೆಯು ಉಡುಪಿ, ಕುಂದಾಪುರ, ಹಾಗೂ ಕಾರ್ಕಳ ಎಂಬ ಮೂರು ತಾಲೂಕುಗಳನ್ನು, ೧೫೮ ಗ್ರಾಮ ಪಂಚಾಯತಿಗಳನ್ನು, ಒಂಭತ್ತು ಹೋಬಳಿಗಳನ್ನು, ಐದು ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿದೆ.

ಕೋಷ್ಟಕ ೩.೧ ಉಡುಪಿ ಜಿಲ್ಲೆಯ ಸಾಮಾನ್ಯ ಮಾಹಿತಿ

ಮಾಹಿತಿಗಳು	ಜನಗಣತಿ ೨೦೦೧	ಜನಗಣತಿ ೨೦೧೧
ಒಟ್ಟು ಭೌಗೋಳಿಕ ಪ್ರದೇಶ	೩೫೮೨	೩೫೮೨
ಒಟ್ಟು ಪುರುಷರು	೫೨೨೨೩೧	೫೬೨೧೩೧
ಒಟ್ಟು ಮಹಿಳೆಯರು	೫೯೦೦೧೨	೬೧೫೨೩೦
ಒಟ್ಟು ಜನಸಂಖ್ಯೆ	೧೧೧೨೨೪೩	೧೧೭೭೩೬೧
ದಶಕದ ಜನಸಂಖ್ಯಾ ಬೆಳವಣಿಗೆ	೭.೧೪	೫.೮೫
ಲಿಂಗಾನುಪಾತ	೧೦೩೦	೧೦೯೪
ಸರಾಸರಿ ಸಾಕ್ಷರತೆ ದರ	೮೧.೨೫	೮೬.೨೪


ಮೂಲ: ಉಡುಪಿ ಜಿಲ್ಲೆಯ ಅಂಕಿ ಸಂಖ್ಯೆಗಳ ಪಕ್ಷಿನೋಟ ೨೦೧೩-೧೪.

೩.೧ ಕರ್ನಾಟಕದ ನಕ್ಷೆ



ಮೂಲ: ಡಬ್ಲ್ಯೂಡಬ್ಲ್ಯೂ.ಡಬ್ಲ್ಯೂ.ಜೆಡ್‌ಪಿಕರ್ನಾಟಕ.ಇನ್

೩.೨. ಉಡುಪಿ ಜಿಲ್ಲೆಯ ನಕ್ಷೆ



ಮೂಲ: ಡಬ್ಲ್ಯೂಡಬ್ಲ್ಯೂ.ಡಬ್ಲ್ಯೂ.ಜೆಡ್‌ಪಿಉಡುಪಿ.ಇನ್

೩.೨ ಜನಸಂಖ್ಯೆ

ಉಡುಪಿ ಜಿಲ್ಲೆಯಲ್ಲಿ ೨೦೧೧ರ ಜನಗಣತಿ ಪ್ರಕಾರ ೧೧,೭೭,೩೬೧ ರಷ್ಟು ಜನಸಂಖ್ಯೆಯಿದೆ ಇದು ಭಾರತದಲ್ಲಿ ಜಿಲ್ಲೆಗೆ ೪೦೩ ನೇ ಶ್ರೇಣಿಯಾಂಕವನ್ನು ನೀಡುತ್ತದೆ. (ಒಟ್ಟು ೬೪೦ರಲ್ಲಿ) ೨೦೦೧ ರಿಂದ ೨೦೧೧ರ ದಶಕದಲ್ಲಿ ಜನಸಂಖ್ಯೆಯು ೧.೯%ರಷ್ಟು ಪ್ರಮಾಣದಲ್ಲಿ ಬೆಳೆಯಿತು. ಉಡುಪಿ ಜಿಲ್ಲೆಯು ಪ್ರತಿ ಚದರ ಕಿಲೋಮೀಟರಿಗೆ (೮೫೦ ಚದರ ಮೈಲಿ) ೩೦೪ ನಿವಾಸಿಗಳ ಜನಸಾಂದ್ರತೆಯನ್ನು ಹೊಂದಿದೆ. ಪ್ರತಿ ೧೦೦೦ ಪುರುಷರಿಗೆ ೧೦೯೩ರಷ್ಟು ಮಹಿಳೆಯರ ಲಿಂಗಾನುಪಾತವಿದೆ. ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇಕಡಾ ೮೬.೨೯ರಷ್ಟಿದೆ.

ಉಡುಪಿ ಜಿಲ್ಲೆಯಲ್ಲಿ ಶೇಕಡಾ ೮೫.೭೨ರಷ್ಟು ಹಿಂದೂಗಳು, ಶೇಕಡಾ ೮.೨೨ರಷ್ಟು ಮುಸ್ಲಿಂ ಸಮುದಾಯದವರು, ಶೇಕಡಾ ೫.೫೯ರಷ್ಟು ಕ್ರಿಶ್ಚಿಯನ್ನರು, ಶೇಕಡಾ ೦.೩೯ರಷ್ಟು ಜೈನರು, ಶೇಕಡಾ ೦.೦೨ರಷ್ಟು ಸಿಖ್ಖರು, ಶೇಕಡಾ ೦.೦೧ರಷ್ಟು ಇತರ ಸಮುದಾಯದವರು ವಾಸಿಸುತ್ತಿದ್ದಾರೆ.

೩.೩ ಭಾಷೆ, ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಗಳು

ಉಡುಪಿ ಜಿಲ್ಲೆಯಲ್ಲಿ ವಾಸಿಸುವ ಬಹುಪಾಲು ಜನರು ಮಾತನಾಡುವ ಭಾಷೆಗಳು ತುಳು ಮತ್ತು ಕನ್ನಡ ಭಾಷೆಗಳಾಗಿವೆ. ತುಳು ಮಾತೃಭಾಷೆಯಾಗಿ ಗಣನೀಯ ಸಂಖ್ಯೆಯ ಜನರು ಮಾತನಾಡುತ್ತಾರೆ. ಜಿಲ್ಲೆಯ ಜನರು ಬಳಸುವ ಇತರ ಭಾಷೆಗಳೆಂದರೆ, ಕೊಂಕಣಿ, ಕುಂದ ಕನ್ನಡ, ಬ್ಯಾರಿ ಭಾಷೆಗಳು ಇತ್ಯಾದಿ.

ಉಡುಪಿ ಜಿಲ್ಲೆಯ ಜನರು ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಶ್ರೀಮಂತರಾಗಿದ್ದಾರೆ. ಇಲ್ಲಿರುವ ಹಿಂದೂ ದೇವ ದೇವತೆಗಳ ದೇವಾಲಯಗಳು ಆಧ್ಯಾತ್ಮಿಕತೆಯ ಆಳವಾದ ಅರ್ಥವನ್ನು ಹೊಂದಿವೆ. ಉಡುಪಿ ಶ್ರೀ ಕೃಷ್ಣನನ್ನು ಇಲ್ಲಿ ಪೂಜಿಸಲಾಗುತ್ತಿದೆ. ಆತ್ಮಗಳ ಆರಾಧನೆಯೂ ಜಿಲ್ಲೆಯಲ್ಲಿ ಪ್ರಚಲಿತವಾಗಿದೆ. ನಾಗಮಂಡಲ, ಭೂತ, ಕೋಲ (ದೈವಗಳನ್ನು ತೃಪ್ತಿ ಪಡಿಸುವ ಒಂದು ರೀತಿಯ ನೃತ್ಯ) ಕಂಬಳದ ಸಂಪ್ರದಾಯಗಳಿವೆ. ಕೃಷ್ಣಾಷ್ಟಮಿ, ಚೌತಿ, ನವರಾತ್ರಿ ಹಬ್ಬಗಳ ದಿನಗಳಂದು ಮಕ್ಕಳು, ಯುವಕರು ಹುಲಿವೇಷ, ಕರಡಿ ಕುಣಿತಗಳನ್ನು ಮಾಡಿ ಸಂಭ್ರಮಿಸುತ್ತಾರೆ.

೩.೪ ಸಾರಿಗೆ ಸಂಪರ್ಕಗಳು

ಉಡುಪಿ ಜಿಲ್ಲೆಯು ಸಾಕಷ್ಟು ಸಾರಿಗೆ ಸೌಲಭ್ಯವನ್ನು ಹೊಂದಿದ್ದು, ಜಿಲ್ಲೆಯಲ್ಲಿ ಸರಕಾರಿ ಹಾಗೂ ಖಾಸಗಿ ಸಾರಿಗೆ ವ್ಯವಸ್ಥೆ ಚಾಲ್ತಿಯಲ್ಲಿದೆ. ಜಿಲ್ಲೆಯ ಎಲ್ಲಾ ಗ್ರಾಮಗಳು ಎಲ್ಲಾ ರೀತಿಯ ಸಾರಿಗೆ ವಾಹನಗಳನ್ನು ಬಳಸಿಕೊಂಡು ನಗರದೊಂದಿಗೆ ಸಂಪರ್ಕ ಸಾಧಿಸಿವೆ. ಜಿಲ್ಲೆಯಲ್ಲಿ ಉತ್ತಮ ದೂರವಾಣಿ ಸಂಪರ್ಕ ಜಾಲವಿದ್ದು, ಸ್ಥಿರ ದೂರವಾಣಿ ಹಾಗೂ ನಿಸ್ತಂತು ದೂರವಾಣಿ (ಮೊಬೈಲ್)ಸಂಪರ್ಕವು ಎಲ್ಲಾ ಗ್ರಾಮಗಳಿಗೂ ಪಸರಿಸಿದೆ. ದೂರ ಸಂಪರ್ಕ ಕ್ಷೇತ್ರದಲ್ಲಿರುವ ಎಲ್ಲಾ ಪ್ರಮುಖ ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳು ಜಿಲ್ಲೆಯಲ್ಲಿ ಸೇವೆಯನ್ನು ಒದಗಿಸುತ್ತಿವೆ.

ಕೋಷ್ಟಕ ೩.೨ (ಅ) ಉಡುಪಿ ಜಿಲ್ಲೆಯಲ್ಲಿರುವ ಸಾರಿಗೆ ವ್ಯವಸ್ಥೆ (೩೧-೦೩-೨೦೧೭) ರಲ್ಲಿದ್ದಂತೆ

ತಾಲೂಕು	ಮೋಟಾರು ವಾಹನಗಳು				
	ಮೋಟಾರು ಸೈಕಲ್	ದ್ವಿ ಚಕ್ರ	ಆಟೋ ರಿಕ್ಷಾ	ಕಾರುಗಳು	ಅಂಬ್ಯುಲೆನ್ಸ್
ಉಡುಪಿ	೧,೩೦,೩೯೩	೧,೩೫,೩೬೦	೯,೦೦೬	೨೫,೪೯೪	೯
ಕುಂದಾಪುರ	೮೧,೮೨೫	೭೫,೪೩೪	೪,೪೬೦	೧೨,೮೦೬	೬
ಕಾರ್ಕಳ	೪೯,೮೨೮	೪೫,೯೯೪	೨,೫೦೧	೭,೨೬೯	೩
ಒಟ್ಟು	**೨,೬೨,೦೪೬**	**೨,೫೬,೭೮೮**	**೧೫,೯೬೭**	**೪೫,೫೬೯**	**೧೮**

ಕೋಷ್ಟಕ ೩.೨ (ಆ) ಉಡುಪಿ ಜಿಲ್ಲೆಯಲ್ಲಿರುವ ಮೋಟಾರು ವಾಹನಗಳು (೩೧-೦೩-೨೦೧೭) ರಲ್ಲಿದ್ದಂತೆ

ತಾಲೂಕು	ಮೋಟಾರು ವಾಹನಗಳು					
	ಜೀಪು	ಬಸ್ಸು	ಸರಕು ವಾಹನ	ಟ್ಯಾಕ್ಸಿ	ಟ್ಯಾಕ್ಟರ್ಸ್	ಟ್ರೆಲ್ಲರ್ಸ್
ಉಡುಪಿ	೫೮೦	೧೬೯೪	೯೭೨೦	೪೧೧೨	೧೦೯	೬೨
ಕುಂದಾಪುರ	೩೮೦	೬೮೮	೫೫೦೯	೧೯೩೧	೭೪	೫೮
ಕಾರ್ಕಳ	೧೮೬	೪೪೬	೩೦೭೭	೩೩೩	೫೪	೩೭
ಒಟ್ಟು	**೧,೧೪೬**	**೨,೮೨೮**	**೧೮,೩೦೬**	**೬,೩೭೬**	**೨೩೭**	**೧೫೭**

ಮೂಲ: ಉಡುಪಿ ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೬-೧೭

೩.೫. ಕೃಷಿ, ಉದ್ಯಮ ಹಾಗೂ ಕೈಗಾರಿಕೆಗಳು

ಉಡುಪಿ ಜಿಲ್ಲೆಯು ೩,೫೬,೪೪೬ ಹೆಕ್ಟೇರ್‌ನಷ್ಟು ಭೌಗೋಳಿಕ ವಿಸ್ತೀರ್ಣತೆಯನ್ನು ಹೊಂದಿದ್ದು, ಅದರಲ್ಲಿ ೧,೦೦,೧೦೩ ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶಗಳಾಗಿವೆ. ೧,೧೧,೪೭೪ ಹೆಕ್ಟೇರ್‌ನಷ್ಟು ಭೂಮಿಯಲ್ಲಿ ಕೃಷಿ ಭೂಮಿಯನ್ನಾಗಿ ಬಳಸಲಾಗಿದ್ದು, ಕೆರೆ, ಕಾಲುವೆ, ಬಾವಿ ಹಾಗೂ ಇತರ ಮೂಲಗಳಿಂದ ದೊರೆಯುವ ನೀರಾವರಿಯಿಂದ ಕೃಷಿ ಬೆಳೆಗಳನ್ನು ಮುಖ್ಯವಾಗಿ ಭತ್ತ, ಮುಸುಕಿನ ಜೋಳ ಇತ್ಯಾದಿ, ದ್ವಿದಳ ಧಾನ್ಯಗಳಲ್ಲಿ ಮುಖ್ಯವಾಗಿ ಹುರಳಿ, ಉದ್ದು, ಹೆಸರು, ಹಲಸಂದೆ, ಕಡಲೆಗಳನ್ನು, ಎಣ್ಣೆಕಾಳುಗಳ ಬೆಳೆಗಳಾಗಿ ಶೇಂಗಾ, ಎಳ್ಳುಗಳನ್ನು ಹಾಗೆಯೇ ವಾಣಿಜ್ಯ ಬೆಳೆಗಳಾಗಿ ಕಬ್ಬನ್ನು, ತೋಟದ ಬೆಳೆಯಾಗಿ ತೆಂಗು, ಅಡಿಕೆ, ಮೆಣಸು, ಗೋಡಂಬಿ, ಕೋಕೋ ಇತ್ಯಾದಿಗಳನ್ನು ಬೆಳೆಸಲಾಗುತ್ತಿದೆ. ಕೃಷಿ ಕ್ಷೇತ್ರದ ವಿವಿಧ ಉತ್ಪನ್ನಗಳಿಗಾಗಿ ಮೂರು ಮುಖ್ಯ ಮಾರುಕಟ್ಟೆಗಳು ಹಾಗೂ ೪೮೯ ಉಪ ಮಾರುಕಟ್ಟೆಗಳು ಜಿಲ್ಲೆಯ ಜನರ ಜೀವನ ನಿರ್ವಹಣೆಗೆ ಸಹಾಯಕಾರಿಯಾಗಿವೆ. ರೇಷ್ಮೆ ಬೆಳೆ ಲಾಭದಾಯಕವಾದ ಕೃಷಿಯಾಗಿದ್ದು, ೨೫.೧೬ ಹೆಕ್ಟೇರ್‌ಗಳಲ್ಲಿ ಹಿಪ್ಪುನೇರಳೆ ಬೆಳೆಗಳನ್ನು ಬೆಳೆಸಿ ೬.೮೫ ಲಕ್ಷ ಮೌಲ್ಯದ ರೇಷ್ಮೆಯ ಉತ್ಪಾದನೆ ನಡೆಸಲಾಗಿದೆ. ಕೃಷಿ ಕ್ಷೇತ್ರಕ್ಕೆ ಸಹಾಯಕವಾಗಿರುವ ಪಶುಪಾಲನೆ, ದನಕರುಗಳು, ಎಮ್ಮೆ ಕುರಿ, ಕೋಳಿ, ಮೇಕೆ ಹಾಗೂ ಹಂದಿ ಸಾಕಾಣಿಕೆಗಳು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿದೆ.

ಜಿಲ್ಲೆಯಲ್ಲಿ ಸೀತಾನದಿ, ಸ್ವರ್ಣನದಿ, ಶಾಂಭವಿ, ಚಕ್ರ, ವಾರಾಹಿ ಹಾಗೂ ಗಂಗೊಳ್ಳಿ ನದಿಗಳಿದ್ದು, ಇವು ಪಶ್ಚಿಮಘಟ್ಟದಲ್ಲಿ ಉಗಮಿಸಿ ಪಶ್ಚಿಮವಾಗಿ ಪ್ರವಹಿಸಿ ಅರಬ್ಬೀ ಸಮುದ್ರವನ್ನು ಸೇರುತ್ತವೆ.

ಉಡುಪಿ ಜಿಲ್ಲೆಯುಲ್ಲಿ ಒಟ್ಟು ಮೂರು ಸಿದ್ಧ ಉಡುಪಿನ ಕಾರ್ಖಾನೆಗಳು, ೧೦ ರಾಸಾಯನಿಕ ಕಾರ್ಖಾನೆಗಳು ಹಾಗೂ ೪೬೦ ಇತರೆ ಕಾರ್ಖಾನೆಗಳಿವೆ, ಇದರಲ್ಲಿ ೧೫,೯೯೦ ಪುರುಷರು ಹಾಗೂ ೧೭,೬೧೮ ಮಹಿಳಾ ಉದ್ಯೋಗಿಗಳಿದ್ದಾರೆ.

ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ೪೧ ಆಟೋಮೊಬೈಲ್ಸ್, ೧೫೬ ಎಲೆಕ್ಟ್ರಿಕಲ್ಸ್ ಹಾಗೂ ಎಲೆಕ್ಟ್ರಾನಿಕ್ಸ್, ೨೨೮ ಕೆಮಿಕಲ್ಸ್, ೩,೧೮೨ ಆಹಾರ ಮತ್ತು ಮಾದಕ ವಸ್ತುಗಳ ಕಾರ್ಖಾನೆಗಳು ಹಾಗೂ ೧೪೨ ಚರ್ಮದ ಕಾರ್ಖಾನೆಗಳು, ೪೪೫ ಕಾಗದ ಮತ್ತು ಮುದ್ರಣ, ೩೧೫ ರಬ್ಬರ್ ಮತ್ತು ಪ್ಲಾಸ್ಟಿಕ್, ೧,೫೧೭ ಟೆಕ್ಸ್ಟೈಲ್ಸ್, ೧,೦೮೪ ಮರ ಹಾಗೂ ೪,೪೮೩ ಇತರ ಕೈಗಾರಿಕಾ ಕೇಂದ್ರಗಳಿವೆ. ಇದರಲ್ಲಿ ೨೯,೨೦೨ರಷ್ಟು ಪುರುಷರು ೧೦,೬೨೧ ಮಹಿಳೆಯರು ಉದ್ಯೋಗದಲ್ಲಿ ನಿರತರಾಗಿದ್ದಾರೆ. (ಉಡುಪಿ ಜಿಲ್ಲೆಯ ಅಂಕಿ ಸಂಖ್ಯೆಗಳ ಪಕ್ಷಿ ನೋಟ, ೨೦೧೬–೧೭).

ಕೋಷ್ಟಕ ೩.೩. ಸಾರಿಗೆ ಮತ್ತು ಸಂಪರ್ಕ–ರಸ್ತೆಯ ಉದ್ದ ಕಿಲೋ ಮೀಟರ್‌ಗಳಲ್ಲಿ ದಿನಾಂಕ (೩೧.೩.೨೦೧೭ ರಲ್ಲಿದ್ದಂತೆ)

ತಾಲೂಕು	ಲೋಕೋಪಯೋಗಿ ರಸ್ತೆಗಳು				ಗ್ರಾಮೀಣ ರಸ್ತೆಗಳು
	ರಾಷ್ಟ್ರೀಯ ಹೆದ್ದಾರಿ	ರಾಜ್ಯ ಹೆದ್ದಾರಿ	ಪ್ರಮುಖ ಜಿಲ್ಲಾ ರಸ್ತೆಗಳು	ಭಾರಿ ಸೇತುವೆಗಳು	ಪಂಚಾಯತ್ ರಸ್ತೆಗಳು
ಉಡುಪಿ	೭೩.೦	೪೬.೩೬	೩೫೧.೩೦	೬	೨೦೯೯.೬೭
ಕುಂದಾಪುರ	೭೪.೪೦	೧೦೩.೬೦	೨೯೦.೦೦	೮	೨೬೫೬.೮೬
ಕಾರ್ಕಳ	೭೧.೦	೧೧೦.೩೫	೧೪೮.೭೮	೪	೧೬೫೮.೮೯
ಒಟ್ಟು	೨೧೮.೪೦	೨೬೦.೩೧	೭೯೦.೦೮	೧೮	೬೪೧೫.೪೨

ಮೂಲ: ಉಡುಪಿ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೧೬–೧೭

ಉಡುಪಿ ಜಿಲ್ಲೆಯಲ್ಲಿ ೨೨ ಕಿಲೋ ಮೀಟರ್ ಉದ್ದದ ರಾಷ್ಟ್ರೀಯ ಹೆದ್ದಾರಿ ಹಾಗೂ ೨೬೦.೩೧ ಕಿಲೋ ಮೀಟರ್‌ಗಳಷ್ಟು ರಾಜ್ಯ ಹೆದ್ದಾರಿ ವ್ಯಾಪಿಸಿಕೊಂಡಿದೆ. ಎಲ್ಲಾ ಗ್ರಾಮಗಳು ನಗರಕ್ಕೆ ಸಂಪರ್ಕಿಸುವ ರಸ್ತೆಯಿಂದ ಕೂಡಿವೆ. ನಗರದ ರಸ್ತೆಗಳು ಆಧುನೀಕರಣಗೊಂಡು ಕಾಂಕ್ರೀಟ್ ರಸ್ತೆಗಳಾಗಿ ಬದಲಾಗಿವೆ.

೩.೬. ಉಡುಪಿ ಜಿಲ್ಲೆಯಲ್ಲಿ ಮೀನುಗಾರಿಕೆ

ಉಡುಪಿ ಜಿಲ್ಲಾ ಕರಾವಳಿಯಲ್ಲಿ ಮೀನುಗಾರಿಕೆ ಒಂದು ಪ್ರಮುಖವಾದ ಉದ್ಯಮವಾಗಿದ್ದು, ಮೀನುಗಾರಿಕೆಯು ಪೌಷ್ಠಿಕ ಆಹಾರ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಜಿಲ್ಲೆಯ ಕರಾವಳಿಯು ಸುಮಾರು ೯೮ ಕಿಮೀ ಉದ್ದವಿದೆ. ಉಡುಪಿ ಜಿಲ್ಲೆಯ ಕರಾವಳಿ ತಾಲೂಕುಗಳಾದ ಉಡುಪಿ, ಕುಂದಾಪುರ ಹಾಗೂ ಒಳನಾಡು ತಾಲೂಕಾದ ಕಾರ್ಕಳವನ್ನು ಒಳಗೊಂಡಿದೆ. ಮೀನುಗಾರಿಕೆಯು ಉದ್ಯೋಗ ಅವಕಾಶ, ಪೌಷ್ಠಿಕ ಆಹಾರ ಮತ್ತು ವಿದೇಶಿ ವಿನಿಮಯದ ಒಂದು

ಪ್ರಮುಖ ಸಂಪನ್ಮೂಲವಾಗಿರುವುದರಿಂದ ಉಡುಪಿ ಜಿಲ್ಲೆಯ ಆರ್ಥಿಕ ಪ್ರಗತಿಯಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಉಡುಪಿ ಜಿಲ್ಲೆಯಲ್ಲಿ ಸುಮಾರು ೧೧೯೩೪೧ ಮೀನುಗಾರರಿದ್ದು, ಅವರಲ್ಲಿ ಸುಮಾರು ೬೫೦೦೦ ಜನರು ಮಾತ್ರ ವೃತ್ತಿಪರರಾಗಿದ್ದಾರೆ.

ಉಡುಪಿ ಜಿಲ್ಲೆಯಲ್ಲಿ ಸುಮಾರು ೬೪ ಮೀನುಗಾರಿಕಾ ಗ್ರಾಮಗಳಿದ್ದು, ಅದರಲ್ಲಿ ೩೧,೩೬೪ ಮೀನುಗಾರರ ಕುಟುಂಬಗಳಿವೆ. ಜಿಲ್ಲೆಯಲ್ಲಿ ೨೦೧೧-೧೨ ರಲ್ಲಿ ೧೦೭೯೫.೦೦ ಪ್ರಮಾಣ ಮೆಟ್ರಿಕ್ ಟನ್ ಮೀನು ಉತ್ಪಾದಿಸಿದೆ. (ಮೌಲ್ಯ ೫೪೮೫೦.೩೦ ಲಕ್ಷ). ಕೃಷಿ ಕ್ಷೇತ್ರದ ಜಿಡಿಪಿಯಲ್ಲಿ ಸುಮಾರು ಶೇಕಡಾ ೫ ರಷ್ಟು ಮೀನುಗಾರಿಕೆ ಕ್ಷೇತ್ರದಿಂದ ಬಂದಿದ್ದು, ಕೃಷಿ ವಿಭಾಗದಲ್ಲಿ ಮೀನುಗಾರಿಕೆಯು ಅತೀ ಹೆಚ್ಚು ವಿದೇಶಿ ವಿನಿಮಯ ತರುವ ಕ್ಷೇತ್ರವಾಗಿದೆ. ಉಡುಪಿ ಜಿಲ್ಲೆಯಲ್ಲಿ ೧೩೦೦ಕ್ಕೂ ಅಧಿಕ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು, ೩೫೦೦ ಮಿಕ್ಕಿ ಔಟ್ ಬೋರ್ಡ್ ಇಂಜಿನ್ ಅಳವಡಿಸಿದ ಮೋಟಾರೀಕೃತ ಹಾಗೂ ೨೦೦೦ ನಾಡದೋಣಿಗಳು ಮೀನುಗಾರಿಕೆಯಲ್ಲಿ ತೊಡಗಿವೆ.

ಉಡುಪಿ ಜಿಲ್ಲೆಯಲ್ಲಿ ೧೬ ಮೀನುಗಾರ ಮಹಿಳೆಯರ ಸಹಕಾರಿ ಸಂಘಗಳನ್ನೊಳಗೊಂಡಂತೆ ಒಟ್ಟು ೫೦ ಮೀನುಗಾರರ ಸಹಕಾರಿ ಸಂಘಗಳಿವೆ. ಈ ಮೀನುಗಾರರ ಸಹಕಾರಿ ಸಂಘಗಳಲ್ಲಿ ಒಟ್ಟು ೭೬,೦೧೭ ಮಂದಿ ಸದಸ್ಯತ್ವ ಹೊಂದಿದ್ದಾರೆ. ಉಡುಪಿಯ ಮಲ್ಪೆಯಲ್ಲಿ ಸರ್ವಋತು ಮೀನುಗಾರಿಕಾ ಬಂದರು ಹಾಗೂ ಗಂಗೊಳ್ಳಿಯಲ್ಲಿ ಕಿರು ಮೀನುಗಾರಿಕಾ ಬಂದರುಗಳಿವೆ. ಕರಾವಳಿ ಉದ್ದಕ್ಕೂ ಐದು ಮೀನುಗಾರಿಕಾ ಜೆಟ್ಟಿಗಳು, ೧೦ ಕ್ಕೂ ಮಿಕ್ಕಿ ಮೀನುಗಾರಿಕಾ ತಂಗುದಾಣ ಕೇಂದ್ರಗಳು, ಎಂಟು ಮೀನು ಸಂಸ್ಕರಣಾ ಘಟಕಗಳು, ಆರು ಫ್ರೀಜಿಂಗ್ ಪ್ಲಾಂಟುಗಳು, ಆರು ಫಿಶ್‌ಮಿಲ್ ಘಟಕಗಳು, ೬೦ ಮಂಜುಗಟ್ಟೆ ಸ್ಥಾವರಗಳು, ೨೮ ಬೋಟ್ ಬಿಲ್ಡಿಂಗ್ ಯಾರ್ಡ್‌ಗಳು, ಮೂರು ಬಲೆ ತಯಾರಿಸುವ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಮೀನುಗಳನ್ನು ಶೀಘ್ರವಾಗಿ ಮೀನು ಮಾರುಕಟ್ಟೆಗಳಿಗೆ ಸಾಗಿಸಲು ಮೀನು ಇಳಿದಾಣಗಳಿಂದ ಮುಖ್ಯರಸ್ತೆಗಳಿಗೆ ಸಂಪರ್ಕ ಸ್ಥಾಪಿಸುವ ಸಲುವಾಗಿ ಉಡುಪಿ ಜಿಲ್ಲೆಯಲ್ಲಿ ೧೪೧ ಕಿ.ಮೀ ಉದ್ದದ ಒಟ್ಟು ೮೧ ಮೀನುಗಾರಿಕಾ ಕೊಂಡಿ ರಸ್ತೆಗಳಿವೆ. ಜಿಲ್ಲೆಯಲ್ಲಿ ಸುಮಾರು ೪೦೦ ಹೆಕ್ಟೇರ್ ಹಿನ್ನೀರು ಪ್ರದೇಶವಿದ್ದು, ಇದು ಸಿಗಡಿ ಕೃಷಿ ಮಾಡಲು ಯೋಗ್ಯವಾಗಿದೆ. ಸುಮಾರು ೩೬೭ ಹೆಕ್ಟೇರ್ ವಿಸ್ತೀರ್ಣದ ೪೧೬ ಕೆರೆಗಳು, ೩೦೦ ಕಿಲೋ ಮೀಟರ್ ಉದ್ದದ ನದಿಗಳು ಇದ್ದು, ಒಳನಾಡು ಮೀನುಗಾರಿಕೆಗೆ ಉತ್ತಮ ಅವಕಾಶವಿದೆ. ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಕಾರ್ಕಳದಲ್ಲಿ ಒಳನಾಡು ಮೀನು ಮರಿಗಳ ಪಾಲನಾ ಕೇಂದ್ರವಿದೆ. ಜಿಲ್ಲೆಯಲ್ಲಿ ೫೮ ಮೀನು ಮಾರುಕಟ್ಟೆಗಳಿದ್ದು ಅವುಗಳಲ್ಲಿ ೧೦ ಆಧುನಿಕ ಮೀನು ಮಾರುಕಟ್ಟೆಗಳನ್ನು ಎನ್‌ಎಫ್‌ಡಿಬಿ ಹಾಗೂ ಅರ್.ಕೆ. ವಿ. ವೈ ನೆರವಿನೊಂದಿಗೆ ನಿರ್ಮಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಮೀನುಗಾರಿಕೆಯು ಒಂದು ಉದ್ಯಮವಾಗಿ ಬೆಳೆಯುತ್ತಿದ್ದು, ವಾರ್ಷಿಕ ೭,೨೧೨ ಟನ್ನುಗಳಷ್ಟು ಮೀನಿನ ಉತ್ಪಾದನೆಯನ್ನು ದಾಖಲಿಸಿರುತ್ತದೆ. ಜಿಲ್ಲೆಯಲ್ಲಿ ಸುಮಾರು ೧೯ ಮೀನು ಮಾರುಕಟ್ಟೆಗಳಿದ್ದು, ಮಹಿಳಾ ಮೀನುಗಾರರು ಮನೆ ಮನೆಗೆ ತೆರಳಿ

ಮಾರುಕಟ್ಟೆಯನ್ನು ಇನ್ನಷ್ಟು ವಿಸ್ತರಿಸಿದ್ದಾರೆ. (ಉಡುಪಿ ಜಿಲ್ಲಾ ಪಂಚಾಯತ್ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳು, ೨೦೧೫-೧೬)

ಕೋಷ್ಟಕ ೩.೪ (ಅ) ಮೀನುಗಾರಿಕೆ

ತಾಲೂಕು	ಹಿಡುವಳಿ ಮೀನು (ಟನ್ನುಗಳಲ್ಲಿ)	ಮಂಜುಗಡ್ಡೆ ಕಾರ್ಖಾನೆಗಳು	ಶೀಥಲೀಕರಣ ಕೇಂದ್ರಗಳು	ಮೀನುಗಾರಿಕೆ ಸಂಬಂಧಿಸಿದಂತೆ ಕೆರೆಗಳ ಸಂಖ್ಯೆ
ಉಡುಪಿ	೧೩೩೨೪೫	೬೨	೫	೫
ಕುಂದಾಪುರ	೧೭೭೭೫	೨೮	೩	೫
ಕಾರ್ಕಳ	೨೧೮೨	೦	೦	೬
ಒಟ್ಟು	**೧೫೩೨೦೨**	**೯೦**	**೮**	**೧೬**

ಮೂಲ: ಉಡುಪಿ ಜಿಲ್ಲಾ ಅಂಕಿ ಅಂಶಗಳ ಪಕ್ಷಿನೋಟ, ೨೦೧೬-೧೭

ಕೋಷ್ಟಕ ೩.೪ (ಆ) ಮೀನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳ ವಿವರ

ತಾಲೂಕು	ಮೀನು ಮಾರುಕಟ್ಟೆಗಳ ಸಂಖ್ಯೆ	ಮೀನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ
ಉಡುಪಿ	೩೩	೨೧೬೮೨
ಕುಂದಾಪುರ	೬೦	೮೮೬೪
ಕಾರ್ಕಳ	೧೬	೨೨೨
ಒಟ್ಟು	**೧೦೯**	**೩೨೨೬೬**

ಮೂಲ: ಉಡುಪಿ ಜಿಲ್ಲಾ ಅಂಕಿ ಅಂಶಗಳ ಪಕ್ಷಿನೋಟ, ೨೦೧೬-೧೭

ಮೊಗವೀರರು ಮೀನುಗಾರಿಕೆಯನ್ನು ಕುಲಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಬುಚನನು ತನ್ನ ಗ್ರಂಥದಲ್ಲಿ ಮೊಗೇರರನ್ನು 'ಮೊಗೆಯರ್' ಎಂದು ಕರೆದಿರುವನು. ಮಲೆಯಾಳದಲ್ಲಿ 'ಮುಕವರ್' ಎಂಬ ಪದಕ್ಕೆ ನೀರನ್ನು ಮೊಗೆದು ತೆಗೆಯುವವರು ಎಂಬ ಅರ್ಥವಿದೆ. ಮೊಗೆ ಎಂಬ ಮೂಲಧಾತು ಕನ್ನಡದಲ್ಲೂ ಅದೇ ಅರ್ಥದಲ್ಲಿ ಬಳಕೆಯಲ್ಲಿದೆ. ಅಂತೂ ನೀರನ್ನು ಮೊಗೆಯುವವರು ನೀರನ್ನು ಮೊಗೆದು ಮೀನನ್ನು ತೆಗೆಯುವವರು ಎಂಬ ಅರ್ಥದ ವ್ಯಾಪ್ತಿಯಲ್ಲಿ 'ಮೊಗೇರ' ಪದವು ಹುಟ್ಟಿದೆ. ಮೊಗವೀರರ ವಾಸಸ್ಥಳಕ್ಕೆ 'ಪಟ್ಣ' ಎಂಬ ಹೆಸರು ಇರವುದರಿಂದ ಅವರನ್ನು 'ಪಟ್ಣದವರು' ಎಂದು ಕರೆಯುವ ರೂಢಿ ಬಂದಿದೆ. ಹಾಗೆಯೇ ನಾಯಕ ಎಂಬುದು ನಾವಿಕ ಪದದ ಜನ್ಯ ರೂಪ, ನಾಯಕ್ ಎಂಬುದು ಈಗ ಉಪನಾಮವಾಗಿಯೂ ರೂಢಿಯಲ್ಲಿದೆ. ಪುರಾಣ ಕಾಲದ ದಶರಾಜನ ಸಂತತಿಯವರು ಎಂಬರ್ಥದಲ್ಲಿ 'ದಾಶ' ಎಂಬ ಹೆಸರು ಬಂದಿದೆ.

ಫ್ರಾನ್ಸಿಸ್ ಬುಚನನ್, "ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರನ್ನು 'ಮೊಗೆಯರ್' ಎಂದೂ ಅವರು ತುಳು ಮಾತಾನಾಡುವವರೆಂದೂ ತನ್ನ ಯಾತ್ರಾವರದಿಯಲ್ಲಿ ತಿಳಿಸಿರುವನು. ಅಲ್ಲದೆ ಅವರು ಮಲಯಾಳ ಮಾತಾಡುವ ಮುಕುವರನ್ನು ಹೋಲುವರಾದರೂ ಮುಕುವರಿಗೂ ಮೊಗೆಯರಿಗೂ ಯಾವುದೇ ಸಂಬಂಧವಿಲ್ಲವೆಂದೂ ತಿಳಿಸಿರುವನು. (ಫ್ರಾನ್ಸಿಸ್ ಬುಚನನ್, ೧೯೮೮). ಬುಚನನ್

ಅವರ ಗ್ರಂಥವಾದ 'ಗೆಜೆಟಿಯರ್ ಆಫ್ ಇಂಡಿಯಾ ಸೌತ್ ಕೆನರಾ' ದಲ್ಲಿ 'ಮೊಗವೀರರು ತುಳು ಜನರು. ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಾರೆ ಎಂದು ಉಲ್ಲೇಖಿಸಿದ್ದಾರೆ. ಅಂದರೆ ಪಾರಂಪರಿಕವಾಗಿ ತಾಯಿಯಿಂದ ತಾಯಿಯ ಮಗಳಿಗೆ ಅಥವಾ ಮಾವನಿಂದ ತಂಗಿಯ ಮಗನಿಗೆ ವರ್ಗಾಯಿಸಲ್ಪಡುತ್ತದೆ ಎಂದು ವಿವರಿಸಲಾಗಿದೆ.

ಥರ್ಸ್ಟನ್.ಇ ಅವರು ದಾಖಲಿಸಿರುವಂತೆ "ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರರು ತುಳು ಮಾತಾಡುವವರು ಹೆಚ್ಚಿನವರು ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುವವರು. ಆದರೆ ಜಿಲ್ಲೆಯ ಉತ್ತರ ಭಾಗದಲ್ಲಿ ವಾಸಿಸುವ ವರು ಕನ್ನಡ ಮಾತೃಭಾಷೆಯವರು ಮತ್ತು ಮಕ್ಕಳ ಸಂತಾನ ಪದ್ಧತಿಯನ್ನು ಅನುಸರಿಸುವವರು ಎಂದಿದ್ದಾನೆ".

ಜೆ.ಸ್ಟರಕ್ ಅವರು ದಾಖಲಿಸಿರುವಂತೆ "ಮೊಗೇರರು ದೀರ್ಘಕಾಯದ ಸುಂದರಕಾಯರು ಮತ್ತು ಧೈರ್ಯಶಾಲಿಗಳು ಅವರು ವೈಷ್ಣವರಾಗಿದ್ದು, ತಿರುಪತಿ ವೆಂಕಟರಮಣ ದೇವರನ್ನು ವಿಶೇಷ ಭಕ್ತಿಯಿಂದ ಪೂಜಿಸುತ್ತಾರೆ. ಪ್ರತಿ ವರ್ಷದ ಹೊಸ ಅಕ್ಕಿಯೂಟದ ಸಮಾರಂಭಕ್ಕಿಂತ ಮೊದಲು ತಿರುಪತಿ ದೇವರಿಗೆ ಕಾಣಿಕೆ ಸಲ್ಲಿಸುತ್ತಾರೆ. ಆದರೆ ಅವರ ಮುಖ್ಯ ಕುಲದೇವರ ಮಾಸ್ತಮ್ಮ" ಎನ್ನುತ್ತಾರೆ. ಕರ್ನಾಟಕ ಸ್ಟೇಟ್ ಗೆಜೆಟಿಯರ್‌ನಲ್ಲಿ "ಮೊಗವೀರರ ಪರಂಪರಾಗತ ವೃತ್ತಿಯು ಮೀನುಗಾರಿಕೆಯಾಗಿದೆ. ಜಿಲ್ಲೆಯ ಪ್ರಧಾನ ಮೀನುಗಾರರೂ ಮತ್ತು ನಾವಿಕರೂ ಆಗಿರುವ ಅವರು ಹೆಚ್ಚಾಗಿ ಕಡಲ ತೀರದಲ್ಲೇ ನೆಲೆಸಿರುತ್ತಾರೆ. ಅಳಿಯ ಸಂತಾನ ಪದ್ಧತಿಯನ್ನು ಅವಲಂಬಿಸಿರುವ ಮೊಗವೀರ ಸಮುದಾಯದಲ್ಲಿ ಅನೇಕ ಬಳಿಗಳಿವೆ. ವಿದ್ಯಾವಂತರಾದ ಕೆಲವು ಮೊಗವೀರರು ಮಾತ್ರ ಕುಲಕಸುಬನ್ನು ಹೊರತಾದ ಬೇರೆ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ" ಎಂದು ವಿವರಿಸಿದೆ. (ವೆಂಕಟರಾಜ ಪುಣಿಂಚತ್ತಾಯ, ೧೯೯೩)

೩.೭. ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು

ಉಡುಪಿ ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣದ ಪ್ರಯತ್ನದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ಪಾತ್ರ ಗಮನಾರ್ಹವಾಗಿದ್ದು, ಜಿಲ್ಲೆಯಲ್ಲಿ ಒಟ್ಟು ೪೫೪೦೭ ಸ್ತ್ರೀ-ಶಕ್ತಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಕೋಷ್ಟಕ ೩.೫ ಉಡುಪಿ ಜಿಲ್ಲೆಯಲ್ಲಿರುವ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು

ತಾಲೂಕು	ಸ್ತ್ರೀ ಶಕ್ತಿ ಸಂಘಗಳ ಸಂಖ್ಯೆ	ಸ್ವ-ಸಹಾಯ ಸಂಘಗಳ ಸಂಖ್ಯೆ
ಉಡುಪಿ	೧೧೭೧	೧೪೭೬೨
ಕುಂದಾಪುರ	೧೦೪೭	೧೪೧೧೬
ಕಾರ್ಕಳ	೬೨೮	೧೩೬೮೩
ಒಟ್ಟು	**೨೮೪೬**	**೪೨೫೬೧**

ಮೂಲ: ಉಡುಪಿ ಜಿಲ್ಲಾ ಅಂಕಿ ಅಂಶಗಳ ಪಕ್ಷಿನೋಟ ೨೦೧೬-೧೭

೩.೮ ಉಡುಪಿ ಜಿಲ್ಲೆಯಲ್ಲಿರುವ ಶಿಕ್ಷಣ ಸಂಸ್ಥೆಗಳು

ಉಡುಪಿ ಜಿಲ್ಲೆಯಲ್ಲಿ ೨೦೧೧ ರ ಜನಗಣತಿ ಪ್ರಕಾರ ೧೧,೭೭,೩೬೧ ಜನಸಂಖ್ಯೆಯಿದ್ದು, ೫,೬೨,೧೩೧ ಪುರುಷರು ೬,೧೫,೨೩೦ ಮಹಿಳೆಯರಿದ್ದು, ಅದರಲ್ಲಿ ೪,೬೫,೭೦೪ರಷ್ಟು ಪುರುಷರು ಅನಕ್ಷರಸ್ಥರಾಗಿದ್ದು, ೪,೬೦,೭೨೫ ಮಹಿಳೆಯರು ಅಕ್ಷರಸ್ಥರಾಗಿದ್ದಾರೆ. ಉಡುಪಿ ಜಿಲ್ಲೆಯು ಶಿಕ್ಷಣದಲ್ಲಿ ಮುಂಚೂಣಿಯಲ್ಲಿದ್ದು, ರಾಜ್ಯದ ಮಾಧ್ಯಮಿಕ ಹಾಗೂ ಪದವಿ ಪೂರ್ವ ಶಿಕ್ಷಣದ ಫಲಿತಾಂಶದಲ್ಲಿ (ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ) ಜಿಲ್ಲೆಯ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದಾರೆ. ಸುಮಾರು ನೂರು ವರ್ಷಗಳಿಗೂ ಧೀರ್ಘ ಅಸ್ತಿತ್ವ ಹೊಂದಿರುವ ವಿದ್ಯಾ ಸಂಸ್ಥೆಗಳೂ ಸೇರಿಕೊಂಡು ಜಿಲ್ಲೆಯು ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳಿರುವ ವಲಯ ಎಂಬುದಾಗಿ ಗುರುತಿಸಲ್ಪಟ್ಟಿದೆ. ಜಿಲ್ಲೆಯಲ್ಲಿ ಪದವಿ ಶಿಕ್ಷಣ, ವೈದ್ಯಕೀಯ, ತಾಂತ್ರಿಕ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳಿದ್ದು ಉನ್ನತ ಶಿಕ್ಷಣದ ಅವಕಾಶವನ್ನು ನೀಡುತ್ತವೆ. ಜಿಲ್ಲೆಯಲ್ಲಿ ೯೬೩ ಪ್ರಾಥಮಿಕ ಶಾಲೆಗಳಲ್ಲಿ ೧೨೪೪೨೪ ವಿದ್ಯಾರ್ಥಿಗಳು, ೨೯೩ ಪ್ರೌಢ ಶಾಲೆಗಳಲ್ಲಿ ೩೪೪೫೭ ವಿದ್ಯಾರ್ಥಿಗಳು, ೧೦೮ ಪದವಿಪೂರ್ವ ಕಾಲೇಜುಗಳಲ್ಲಿ ೧೩೫೬೪ ವಿದ್ಯಾರ್ಥಿಗಳು, ೨೩ ಪದವಿ ಕಾಲೇಜುಗಳಲ್ಲಿ ೫೭೮೦ ವಿದ್ಯಾರ್ಥಿಗಳು, ಆರು ವೈದ್ಯಕೀಯ ಕಾಲೇಜುಗಳಲ್ಲಿ ೧೬೮೨ ವಿದ್ಯಾರ್ಥಿಗಳು, ಆರು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ೯೨೧ ವಿದ್ಯಾರ್ಥಿಗಳು ಹಾಗೂ ಆರು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ೧೩೪೧ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಕೋಷ್ಟಕ ೩.೬ ಉಡುಪಿ ಜಿಲ್ಲೆಯಲ್ಲಿರುವ ಶಾಲಾ/ಕಾಲೇಜುಗಳು

ತಾಲೂಕು	ಪ್ರಾಥಮಿಕ ಶಾಲೆಗಳು	ಪ್ರೌಢ ಶಾಲೆಗಳು	ಪದವಿ ಪೂರ್ವ	ಪದವಿ	ವೈದ್ಯಕೀಯ	ಪಾಲಿಟೆಕ್ನಿಕ್	ಇಂಜನಿಯರಿಂಗ್
ಉಡುಪಿ	೩೫೨	೧೪೬	೫೪	೧೩	೫	೩	–
ಕುಂದಾಪುರ	೩೯೭	೮೨	೩೦	೬	–	೧	೧
ಕಾರ್ಕಳ	೨೧೪	೬೫	೨೪	೪	೧	೨	೨
ಒಟ್ಟು	**೯೬೩**	**೨೯೩**	**೧೦೮**	**೨೩**	**೬**	**೬**	**೬**

ಮೂಲ: ಉಡುಪಿ ಜಿಲ್ಲಾ ಅಂಕಿ ಅಂಶಗಳ ಪಕ್ಷಿನೋಟ ೨೦೧೬-೧೭

೩.೯. ಉಡುಪಿ ಜಿಲ್ಲೆಯ ಐತಿಹಾಸಿಕ ತಾಣಗಳು/ಪ್ರವಾಸೋದ್ಯಮ

ಉಡುಪಿ ಜಿಲ್ಲೆಯು ದಿನಂಪ್ರತಿ ಸಾವಿರಾರು ಭಕ್ತರನ್ನು ಆಕರ್ಷಿಸುತ್ತಿರುವ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿದ್ದು, ದ್ವೈತ ಸಿದ್ಧಾಂತ ಪ್ರತಿಪಾದಕ ಶ್ರೀ ಮಧ್ವಾಚಾರ್ಯರು ಸ್ಥಾಪಿಸಿದ ಶ್ರೀ ಕೃಷ್ಣ ದೇವಸ್ಥಾನ ಪ್ರಧಾನ ಕೇಂದ್ರವಾಗಿದೆ. ಶ್ರೀ ಅನಂತೇಶ್ವರ, ಚಂದ್ರಮೌಳೇಶ್ವರ, ಆಂಜನೇಯ, ಸುಬ್ರಮಣ್ಯ ದೇವಾಲಯ ಹಾಗೂ ಅಷ್ಟಮಠಗಳಿದ್ದು, ಸಾಂಸ್ಕೃತಿಕ ಪರಂಪರೆಯ ಕೇಂದ್ರಗಳಾಗಿವೆ. ಉಡುಪಿಯಲ್ಲಿ ರಂಗ ಕಲೆಯ ಅಧ್ಯಯನ ಕೇಂದ್ರವಿದೆ. ದೇಶದಾದ್ಯಂತ ಪ್ರಸಿದ್ಧಿ ಪಡೆದ ಉಡುಪಿ ಹೋಟೆಲ್‌ಗಳ ಉಗಮ ಸ್ಥಾನವಾಗಿರುವ ಈ ಜಿಲ್ಲೆಯು ಚಿನ್ನದ ಕುಸುರಿಗೆ ಪ್ರಸಿದ್ಧಿಯನ್ನು ಪಡೆದಿದೆ. ಎರಡು ವರ್ಷಗಳಿಗೊಮ್ಮೆ ನಡೆಯುವ ಉಡುಪಿ ಪರ್ಯಾಯೋತ್ಸವ ದೇಶದಾದ್ಯಂತ ಪ್ರಸಿದ್ಧವಾಗಿದೆ. ಉಡುಪಿ ಶ್ರೀ ಕೃಷ್ಣ ಮಠವು ಉಡುಪಿಯ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಕಲಾಪೋಷಕ ಕೇಂದ್ರವಾಗಿದೆ.

ಉಡುಪಿಯ ಪಶ್ಚಿಮಕ್ಕೆ ನಾಲ್ಕು ಕಿಲೋ ಮೀಟರ್ ದೂರದಲ್ಲಿರುವ ಮಲ್ಪೆ ಪ್ರಸಿದ್ಧ ಮೀನುಗಾರಿಕಾ ಬಂದರು. ಮಲ್ಪೆ ಬಂದರಿನಿಂದ ಐದು ಕಿಲೋ ಮೀಟರ್ ದೂರದಲ್ಲಿರುವ ಸೇಂಟ್ ಮೇರಿ ದ್ವೀಪ. ೫೦೦ ವರ್ಷಗಳ ಇತಿಹಾಸ ಹೊಂದಿರುವ ಅಂಬಲಪಾಡಿ ಮಹಾಕಾಳಿ, ಜನಾರ್ಧನ ದೇವಾಲಯ, ಉಡುಪಿಯ ನೈರುತ್ಯಕ್ಕೆ ಐದು ಕಿಲೋ ಮೀಟರ್ ದೂರದ ಉದ್ಯಾವರದಲ್ಲಿ ಎತ್ತರವಾದ ವಿಸ್ತಾರವಾದ ಬಂಡೆಯ ಮೇಲಿನ ಶಿವಾಲಯವು ಐತಿಹಾಸಿಕ ಮಹತ್ವ ಸ್ಥಳವಾಗಿದ್ದು, ಇದು ಅಳುಪ ಅರಸರು ಕಟ್ಟಿದ ಪುರಾತನ ದೇವಾಲಯ. ಉಡುಪಿಯ ದಕ್ಷಿಣಕ್ಕೆ ೧೨ ಕಿಲೋ ಮೀಟರ್ ದೂರದಲ್ಲಿ ಕಾಪುವಿನಲ್ಲಿರುವ ನೂರು ಅಡಿ ಎತ್ತರದ 'ಲೈಟ್‌ಹೌಸ್' ಹಾಗೂ ದ್ವೈತ ಸಿದ್ಧಾಂತ ಪ್ರತಿಪಾದಕ ಶ್ರೀ ಮಧ್ವಚಾರ್ಯರು ಜನಿಸಿದ ಪಾಜಕ, ಎತ್ತರವಾದ ಕುಂಜಾರು ಗಿರಿಯಲ್ಲಿರುವ ದುರ್ಗಾ ದೇವಾಲಯಗಳು ಧಾರ್ಮಿಕ ಹಾಗೂ ಪ್ರವಾಸೀ ಸ್ಥಳಗಳಾಗಿವೆ. ಉಡುಪಿಯ ಆಗ್ನೇಯಕ್ಕೆ ೪೦ ಕಿಲೋ ಮೀಟರ್ ದೂರದಲ್ಲಿರುವ ಐತಿಹಾಸಿಕ ಮಹತ್ವವುಳ್ಳ ಪ್ರಸಿದ್ಧ ಜೈನ ಕೇಂದ್ರ, ಗೋಮಟೇಶ್ವರ ಬೆಟ್ಟದ ಮೇಲೆ ಪ್ರಸಿದ್ಧವಾದ ಬಾಹುಬಲಿ ವಿಗ್ರಹವಿದೆ. ಕಾರ್ಕಳದ ದಕ್ಷಿಣಕ್ಕೆ ನಾಲ್ಕು ಕಿಲೋ ಮೀಟರ್ ದೂರದಲ್ಲಿ ಪ್ರಸಿದ್ಧ ಅತ್ತೂರು ಚರ್ಚ್ ಹಾಗೆಯೇ ಕರಾವಳಿ ಭಾಗದ 'ಧಾರ್ಮಿಕ ಪ್ರವಾಸೋದ್ಯಮದ ತವರೂರು' ಎಂದು ಕರೆಯಲ್ಪಡುವ ಕುಂದಾಪುರದಲ್ಲಿ ಆದಿ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶ್ರೀ ಮೂಕಾಂಬಿಕ ಕ್ಷೇತ್ರ ಹಾಗೂ ಕುಂಭಾಶಿ ವಿನಾಯಕ ಕ್ಷೇತ್ರ ಪ್ರಸಿದ್ಧವಾಗಿವೆ. ಇಷ್ಟೆಲ್ಲಾ ಪ್ರಸಿದ್ಧ ಹಾಗೂ ಐತಿಹಾಸಿಕ ಸ್ಥಳಗಳಿದ್ದರೂ ಜಿಲ್ಲೆ ಪ್ರವಾಸೋದ್ಯಮದಲ್ಲಿ ಹೆಚ್ಚು ಆದಾಯ ಗಳಿಸುತ್ತಿಲ್ಲ. (ಉಡುಪಿ ಜಿಲ್ಲಾ ಅಂಕಿ ಅಂಶಗಳ ಪಕ್ಷಿನೋಟ ೨೦೧೬-೧೭)

೩.೧೦. ಉಡುಪಿ ಜಿಲ್ಲೆಯ ಆಡಳಿತಾತ್ಮಕ ವಿವರಣೆ

ಉಡುಪಿ ಜಿಲ್ಲೆಯಲ್ಲಿ ಮೂರು ತಾಲೂಕುಗಳಿದ್ದು, ಕುಂದಾಪುರ, ಉಡುಪಿ ಹಾಗೂ ಕಾರ್ಕಳ ತಾಲೂಕುಗಳಿವೆ. ಜನಸಂಖ್ಯೆಯ ಆಧಾರದ ಮೇಲೆ ಒಟ್ಟು ೧೫೮ ಗ್ರಾಮ ಪಂಚಾಯತಿಗಳ ರಚನೆಗೆ ಅವಕಾಶ ಮಾಡಿ ಕೊಡಲಾಗಿದೆ. ಅದರಲ್ಲಿ ಉಡುಪಿ ತಾಲೂಕಿನಲ್ಲಿ ೫೯ ಗ್ರಾಮ ಪಂಚಾಯತಿಗಳು ಕುಂದಾಪುರ ತಾಲೂಕಿನಲ್ಲಿ ೬೫ ಗ್ರಾಮ ಪಂಚಾಯತಿಗಳು, ಕಾರ್ಕಳ ತಾಲೂಕಿನಲ್ಲಿ ೩೪ ಗ್ರಾಮ ಪಂಚಾಯತಿಗಳಿವೆ. ಜಿಲ್ಲೆಯಲ್ಲಿ ಒಟ್ಟು ಒಂಭತ್ತು ಹೋಬಳಿಗಳು ನಾಲ್ಕು ನಾಡ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಉಡುಪಿ ಜಿಲ್ಲೆಯು ಐದು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಬೈಂದೂರು, (೧೧೮) ಕುಂದಾಪುರ, (೧೧೯) ಉಡುಪಿ, (೧೨೦) ಕಾಪು (೧೨೧) ಹಾಗೂ ಕಾರ್ಕಳ. (೧೨೨) ಉಡುಪಿ ಜಿಲ್ಲೆಯ ಒಟ್ಟು ಮತದಾರರು ೮,೭೪,೧೫೫. ಇದರಲ್ಲಿ ೪,೬೦,೮೩೭ ಮಹಿಳಾ ಮತದಾರರು, ೪,೧೩,೨೮೭ ಪುರುಷ ಮತದಾರರು, ೩೧ ಇತರ ಮತದಾರರು. (ಉಡುಪಿ ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೬-೧೭). ಉಡುಪಿ ವಿಧಾನ ಸಭಾ ಕ್ಷೇತ್ರಗಳಾದ ಬೈಂದೂರು, ಕುಂದಾಪುರ, ಉಡುಪಿ, ಕಾಪು, ಕಾರ್ಕಳ ಈ ೫ ಕ್ಷೇತ್ರಗಳಲ್ಲಿ ೧೯೫೭ ರಿಂದ ೨೦೧೪ ಕುಂದಾಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದವರ ಅಂಕಿ ಅಂಶಗಳನ್ನು ಗಮನಿಸಿದಾಗ ವಿನ್ನಿಫ್ರೆಡ್ ಫೆರ್ನಾಂಡೀಸ್ ಅವವರು ೧೯೬೭ ಹಾಗೂ ೧೯೭೨ರಲ್ಲಿ ೨ ಬಾರಿ ಗೆಲುವನ್ನು ಪಡೆದವರು, ಅವರ ಹೊರತಾಗಿ

ಉಡುಪಿ ವಿಧಾನ ಸಭಾ ಕ್ಷೇತ್ರದದಲ್ಲಿ ಮನೋರಮಾ ಮಧ್ವರಾಜ್‌ರವರು ಅತೀ ಹೆಚ್ಚು ಬಾರಿ ಅಂದರೆ ಒಟ್ಟು ನಾಲ್ಕು ಬಾರಿ ೧೯೭೨, ೧೯೭೮, ೧೯೮೫ ಹಾಗೂ ೧೯೮೯ ರಲ್ಲಿ ಗೆಲುವನ್ನು ಪಡೆದ ಮೊಗವೀರ ಸಮುದಾಯಕ್ಕೆ ಸೇರಿದ ಏಕೈಕ ಮಹಿಳೆಯಾಗಿದ್ದಾರೆ. ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಇಡೀ ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ವಿಜಯಿಯಾಗಿರುವ ಕೇವಲ ಎರಡು ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದು, ಅತೀ ಹೆಚ್ಚು ಬಾರಿ ವಿಧಾನಸಭೆಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಯಾಗಿರುವುದು ಮೊಗವೀರ ಮಹಿಳೆಯರ ಸಾಧನೆಗೆ ಸಾಕ್ಷಿಯಾಗಿದ್ದರೂ ಸಹ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬುದು ಸತ್ಯ. (ವಿಜಯವಾಣಿ ದಿನಪತ್ರಿಕೆ ವರದಿ, ೨೦೧೭)

೩.೧೧. ಉಡುಪಿ ಜಿಲ್ಲೆ ಮತ್ತು ಮಹಿಳಾ ಅಭಿವೃದ್ಧಿ

ಉಡುಪಿ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವು (ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್) ೨೦೦೧ ರಲ್ಲಿ ೦.೬೫೬ ರಷ್ಟಿದ್ದು, ೨೦೧೧ ರಲ್ಲಿ ೦.೭೧೪ ಕ್ಕೆ ಏರಿಕಯಾಗಿದೆ. ಈ ಮಾನವ ಅಭಿವೃದ್ಧಿಯ ಏರಿಕೆಯ ಹಂತವು ಶೇಕಡಾ ೧೦ ರಷ್ಟಿದ್ದು ಅದು ರಾಜ್ಯದ ಸರಾಸರಿಗಿಂತ (೦.೬೫೦) ಹೆಚ್ಚಾಗಿದೆ. ೨೦೧೧ರ ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ ಉಡುಪಿ ಜಿಲ್ಲೆಯು ಮೂರನೇ ಸ್ಥಾನದಲ್ಲಿದ್ದು, ಬೆಂಗಳೂರು ನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ಕ್ರಮವಾಗಿ ಮೊದಲ ಹಾಗೂ ದ್ವಿತೀಯ ಸ್ಥಾನದಲ್ಲಿವೆ.

ಪಂಚಾಯತ್ ರಾಜ್ ವ್ಯವಸ್ಥೆಯು ಉಡುಪಿ ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಂಡಿದ್ದು ಜಿಲ್ಲೆಯಲ್ಲಿ ಒಟ್ಟು ೫೧.೧೪೪ ರಷ್ಟು ಮಹಿಳೆಯರು ಗ್ರಾಮ ಪಂಚಾಯತ್ ಸದಸ್ಯರಾಗಿದ್ದಾರೆ. (೨೦೧೪ ರ ಚುನಾವಣೆ) ತಾಲೂಕು ಹಾಗೂ ಜಿಲ್ಲಾ ಪಂಚಾಯತ್‌ಗಳಲ್ಲೂ ಕ್ರಮವಾಗಿ ೨೨ ಶೇಕಡಾ ಹಾಗೂ ೨೮ ಶೇಕಡಾ ಮಹಿಳಾ ಸದಸ್ಯರಿದ್ದಾರೆ. ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆಯೂ ಜಿಲ್ಲೆಗೆ ಒಳ್ಳೆಯ ಹೆಸರಿದೆ. ಪಾರಂಪರಿಕ ಆಸ್ತಿಯ ಹಕ್ಕನ್ನು ಮಹಿಳೆಯರಿಗೆ ಈ ಜಿಲ್ಲೆಯಲ್ಲಿ ನೀಡಲಾಗಿದೆ. ಜಿಲ್ಲೆಯಲ್ಲಿ ಹೆಚ್ಚು ದೇವತೆಗಳ ಆರಾಧನೆಯಿದ್ದು, ಇದು ಮಹಿಳೆಯರಿಗೆ ನೀಡುವ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಜಿಲ್ಲೆಯಲ್ಲಿ ಮದುವೆಗಳಲ್ಲಿ 'ಅಳಿಯ ಸಂತಾನ' ಕಟ್ಟುಪಾಡು ಹೆಚ್ಚು ಬಳಕೆಯಲ್ಲಿದ್ದು ಮಹಿಳಾ ಪರವಾಗಿದೆ. ಆಸ್ತಿಯನ್ನು ಹೊಂದುವ ಹಕ್ಕು ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಈ ಜಿಲ್ಲೆಯ ಮಹಿಳೆಯರ ಸ್ಥಿತಿಗತಿಗಳು ಬೇರೆ ಜಿಲ್ಲೆಯ ಮಹಿಳೆಯರಿಗಿಂತ ಉತ್ತಮವಾಗಿದೆ. ಜಿಲ್ಲೆಯು ಶಿಕ್ಷಣ ಕ್ರಾಂತಿಗೆ ಹೆಸರಾಗಿದ್ದು ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಮಹಿಳಾ ಸಂಘಟನೆಗಳು ಹಾಗೂ ಮಹಿಳೆಯರಿಂದ ನಡೆಸಲ್ಪಡುವ ವ್ಯವಹಾರೋದ್ಯಮ ಗಳು ಜಿಲ್ಲೆಯಲ್ಲಿ ಬಹಳಷ್ಟಿವೆ. ಮಹಿಳೆ ಮತ್ತು ಪುರುಷರ ನಡುವಿನ ಶಿಕ್ಷಣದ ಅನುಪಾತ ೧೦೦:೯೭ ರಷ್ಟಿದೆ. ಜಿಲ್ಲೆಯ ಒಟ್ಟು ಕಾರ್ಮಿಕ ವರ್ಗದಲ್ಲಿ ಶೇಕಡಾ ೪೧.೧೩ ರಷ್ಟು ಮಹಿಳೆಯರಿದ್ದಾರೆ. ಇದು ರಾಜ್ಯದ ಸರಾಸರಿ ಮಹಿಳಾ ಕಾರ್ಮಿಕ ಸಂಖ್ಯೆಗಿಂತ (ಶೇಕಡಾ ೩೧) ಹೆಚ್ಚಾಗಿದೆ. ಮಹಿಳಾ ಸರಾಸರಿ ಜೀವತಾವಧಿ ೬೯ ವರ್ಷಗಳಾಗಿದ್ದು, ಇದು ಪುರುಷರಿಗಿಂತ (೬೬ ವರ್ಷ) ಮೂರು ವರ್ಷಗಳಷ್ಟು ಅಧಿಕವಾಗಿದೆ. (ಎಚ್.ಡಿ.ಆರ್ ವರದಿ)

ಮಹಿಳೆಯರ ಸ್ಥಾನಮಾನಗಳು, ಆರ್ಥಿಕ ಸ್ವಾಯತ್ತತೆ ಇತರ ಜಿಲ್ಲೆಗಳಿಗೆ ಹೋಲಿಸಿದಾಗ ಉಡುಪಿ ಜಿಲ್ಲೆಯಲ್ಲಿ ತೃಪ್ತಿಕರವಾಗಿ ಕಂಡು ಬರುತ್ತದೆ. ಹಿಂದುಳಿದ ವರ್ಗಗಳೆಂದು ಪರಿಗಣಿಸಲಾಗಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲೂ ಕೂಡಾ ಶಿಕ್ಷಣದ ಹಾಗೂ ಉದ್ಯೋಗದ ಅವಕಾಶವನ್ನು ಒದಗಿಸಿಕೊಡಲಾಗಿದೆ. ಸ್ವ-ಸಹಾಯ ಸಂಘಗಳ ಪಾಲ್ಗೊಳ್ಳುವಿಕೆಯು ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಉನ್ನತೀಕರಣಕ್ಕೆ ಪೂರಕವಾಗಿದೆ. ಹೀಗೆ ಮಹಿಳಾ ಸಬಲೀಕರಣದ ಅಂಶಗಳಾದ ಶಿಕ್ಷಣ, ಅರಿವು, ಔದ್ಯೋಗಿಕ ಅವಕಾಶ, ಸಾಮಾಜಿಕ ಸ್ಥಾನಮಾನ ಹಾಗೂ ರಾಜಕೀಯ ಪಾಲ್ಗೊಳ್ಳುವಿಕೆಯ ನೆಲೆಗಟ್ಟಿನಲ್ಲಿ ಗಮನಿಸಿದಾಗ ಉಡುಪಿ ಜಿಲ್ಲೆಯಲ್ಲಿ ಮಹಿಳೆಯರು ಉತ್ತಮ ಸ್ಥಿತಿಯಲ್ಲಿರುವುದು ಕಂಡು ಬರುತ್ತದೆ.

ಉಲ್ಲೇಖಗಳು:

- ಸೂರ್ಯನಾಥ ಕಾಮತ್ ಯು, ೧೯೭೭, *'ಸೌತ್ ಕೆನರಾ ಡೈರೆಕ್ಟರಿ'*, ಮಂಗಳ ಪಬ್ಲಿಕೇಷನ್ಸ್, ಮಂಗಳೂರು, ಪುಟ ಸಂಖ್ಯೆ ೪-೮.
- ಉಡುಪಿ ಜಿಲ್ಲೆಯ ಅಂಕಿ ಸಂಖ್ಯೆಗಳ ಪಕ್ಷಿನೋಟ ೨೦೧೩-೧೪. ಪುಟ ಸಂಖ್ಯೆ ೧-೩.
- ಡಬ್ಲ್ಯೂಡಬ್ಲೂ.ಡಬ್ಲ್ಯೂಜೆಡ್‌ಪಿಕರ್ನಾಟಕ.ಇನ್
- ಡಬ್ಲ್ಯೂಡಬ್ಲೂ.ಡಬ್ಲ್ಯೂಜೆಡ್‌ಪಿಉಡುಪಿ.ಇನ್
- ಉಡುಪಿ ಜಿಲ್ಲಾ ಪಂಚಾಯತ್ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳು, ೨೦೧೫-೧೬, ಪುಟ ಸಂಖ್ಯೆ ೧-೩.
- ವೆಂಕಟರಾಜ ಪುಣಿಂಚತ್ತಾಯ, ೧೯೯೩, 'ಮೊಗವೀರ ಸಂಸ್ಕೃತಿ' ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಉಡುಪಿ ಜಿಲ್ಲಾ ಅಂಕಿ ಅಂಶಗಳ ಪಕ್ಷಿನೋಟ ೨೦೧೬-೧೭, ಪುಟ ಸಂಖ್ಯೆ ೧೭೧-೧೭೫.
- ವಿಜಯವಾಣಿ ದಿನಪತ್ರಿಕೆ, ೧೩-೦೫-೨೦೧೭. ಪುಟಸಂಖ್ಯೆ ೬.
- ಡಿಸ್ಟ್ರಿಕ್ಟ್ ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಉಡುಪಿ, ಕರ್ನಾಟಕ ಸರಕಾರ, ಪುಟ ಸಂಖ್ಯೆ ೧೨೮.

ಅಧ್ಯಾಯ ನಾಲ್ಕು

ಮಹಿಳಾ ರಾಜಕೀಯ ಮತ್ತು ಮಹಿಳಾಭಿವೃದ್ಧಿಯ ನೆಲೆಗಳು

ಅಧ್ಯಾಯ-೪

ಮಹಿಳಾ ರಾಜಕೀಯ ಮತ್ತು ಮಹಿಳಾಭಿವೃದ್ಧಿಯ ನೆಲೆಗಳು

೪.೧ ಪರಿಚಯ

ಈ ಅಧ್ಯಾಯದಲ್ಲಿ ಮೊಗವೀರ ಮಹಿಳಾ ರಾಜಕೀಯ ಸಬಲೀಕರಣವನ್ನು ಸ್ತ್ರೀ ವಾದಿ ದೃಷ್ಟಿಕೋನ ಹಾಗೂ ರಾಜಕೀಯ ದೃಷ್ಟಿಕೋನಗಳಿಂದ ಪರಿಭಾವಿಸಿಕೊಳ್ಳಲಾಗಿದೆ. ಮಹಿಳಾ ಸಬಲೀಕರಣವನ್ನು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಂಶಗಳಲ್ಲಿ ಮಹಿಳೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಆಧರಿಸಿ ಅಧ್ಯಯನ ನಡೆಸಲಾಗಿದೆ. ಮಹಿಳೆಯ ರಾಜಕೀಯ ಸಬಲೀಕರಣವನ್ನು ಕೇವಲ ರಾಜಕೀಯ ಸಂಗತಿಗಳನ್ನು ಮಾತ್ರ ಪರಿಗಣಿಸದೆ ಅದರಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳನ್ನಿಟ್ಟುಕೊಂಡು ಮುಖ್ಯವಾಗಿ ಸಾಮಾಜಿಕ ಸಂಗತಿಗಳಾಗಿ; ಶಿಕ್ಷಣ, ಆರೋಗ್ಯ, ಕೌಟುಂಬಿಕ ವ್ಯವಸ್ಥೆ, ಆರ್ಥಿಕ ಸಂಗತಿಗಳಾಗಿ ಉದ್ಯೋಗ, ವರಮಾನ, ಮಾರುಕಟ್ಟೆ ವ್ಯವಸ್ಥೆ, ಉಳಿತಾಯ ಹಾಗೂ ರಾಜಕೀಯ ಸಂಗತಿಗಳಾಗಿ; ಚುನಾವಣೆ, ಮತದಾನ, ಪ್ರಾತಿನಿಧ್ಯ, ಈ ನೆಲೆಗಳಲ್ಲಿ ಮಹಿಳೆ ತನ್ನ ಅಧಿಕಾರ ಪಡೆಯುವಲ್ಲಿ ಹಕ್ಕನ್ನು ಚಲಾಯಿಸುವ ಕ್ರಮವನ್ನು ಆಧರಿಸಿ ಮಹಿಳಾ ರಾಜಕೀಯ ಸಬಲೀಕರಣವನ್ನು ಅಧ್ಯಯನ ನಡೆಸಲಾಗಿದೆ.

ಸಬಲೀಕರಣ ಅನ್ನುವಂತಹದ್ದು, ಅನುಕಂಪದಿಂದ ಬರುವ ಸಂಗತಿಯಲ್ಲ. ಯಾರು ಯಾರಿಗೋ ಕೊಡುವ ಸಂಗತಿಯಲ್ಲ. ಸಬಲೀಕರಣ ಹಕ್ಕು. ಈ ಹಕ್ಕನ್ನು ಚಲಾಯಿಸುವಲ್ಲಿ ಮಹಿಳೆ ಅಕ್ಷರಸ್ಥರಾಗಿರಬೇಕು. ಆರ್ಥಿಕವಾಗಿ ತನ್ನ ಕಾಲ ಮೇಲೆ ತಾನು ನಿಂತಿದ್ದಾಗ ಮಾತ್ರ ಮಹಿಳೆಗೆ ತನ್ನ ಹಕ್ಕನ್ನು ಚಲಾಯಿಸುವ ಸಾಮರ್ಥ್ಯ ಬರಲು ಸಾಧ್ಯ. (ಚಂದ್ರಶೇಖರ.ಟಿ.ಆರ್, ೨೦೧೧). ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಕೇವಲ ಸ್ಥಾನ ಕೊಡುವುದರ ಮೂಲಕ ಮಹಿಳಾ ಸಬಲೀಕರಣ ಸಾಧ್ಯವಿಲ್ಲ. (ಅನ್ನಪೂರ್ಣೇಶ್ವರಿ.ಎನ್) ಈ ದೃಷ್ಟಿಯಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣವನ್ನು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನೆಲೆಗಳಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ರಾಜಕೀಯ ಸಬಲೀಕರಣ ಅನ್ನೋದು ಏಕಾಧಾರವಾಗಿರುವುದಿಲ್ಲ. ಇಲ್ಲಿ ಮಹಿಳೆಯ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳು ಉತ್ತಮಗೊಂಡಿದ್ದಾಗ ಮಾತ್ರ ರಾಜಕೀಯ ಅಧಿಕಾರ ಅಥವಾ ಹಕ್ಕನ್ನು ಚಲಾಯಿಸುವ ಸಾಮರ್ಥ್ಯ ಬರುವಂತಹದ್ದು. ಸಬಲೀಕರಣವು ರಾಜಕೀಯ ಪರಿಭಾವನೆಯಾಗಿದ್ದು, ಅದು ಅಧಿಕಾರ ಹಂಚಿಕೆಗೆ ಸಂಬಂಧಿಸಿದ ಸಂಗತಿ (ಚಂದ್ರಶೇಖರ ಟಿ.ಆರ್ ೨೦೧೧). ಹಾಗಾಗಿ ಮಹಿಳಾ ಸಬಲೀಕರಣ ಅನ್ನೋದು ಒಬ್ಬ ಮಹಿಳೆ ತನ್ನ ಬದುಕಿಗೆ ಸಂಬಂಧಪಟ್ಟ ಹಾಗೆ, ತನ್ನ ದೇಹಕ್ಕೆ ಸಂಬಂಧಪಟ್ಟ ಹಾಗೆ ತಾನು ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಾಗಿರುತ್ತದೆ. ಇದರರ್ಥ ಸ್ವ-ಸಹಾಯ ಗುಂಪಿನಲ್ಲಿ ಸದಸ್ಯತ್ವ ಪಡೆದುಕೊಂಡಾಗ, ಸೂಕ್ತ ಉದ್ಯೋಗ ದೊರಕಿದಾಗ ಮಾತ್ರ ಮಹಿಳಾ ಸಬಲೀಕರಣವಾಗುವುದು ಎಂದಲ್ಲ. ಇಲ್ಲಿ ಮಹಿಳೆ ಸಶಕ್ತಳಾಗಿ ರೂಪುಗೊಳ್ಳಲು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ, ರಾಜಕೀಯ ಸಂಗತಿಗಳು ಬೇಕು. ಈ ಎಲ್ಲಾ ಸಂಗತಿಗಳು ಸಮಾಜದಲ್ಲಿ ಮಹಿಳೆಯ ಅನುಕೂಲಕ್ಕೆ ತಕ್ಕ ಹಾಗೆ ಇದೆ ಅಂದಾಗ ಮಹಿಳಾ ಸಬಲೀಕರಣ ಸುಲಭ ಸಾಧ್ಯ.

ಸಬಲೀಕರಣ ಎಂಬುದು ಅವಕಾಶ ವಂಚಿತರಿಗೆ ಸೂಕ್ತ ಅವಕಾಶ ನೀಡುವುದು ಎಂಬ ಅರ್ಥವನ್ನು ನೀಡುತ್ತದೆ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯಕ್ಕೆ ಸಂಬಂಧಿಸಿದಂತೆ ಸಬಲೀಕರಣವೆಂದರೆ ಯಾವುದೇ ವ್ಯಕ್ತಿ ಅಥವಾ ವರ್ಗ ಆ ಸಂಪನ್ಮೂಲಗಳ ಮೇಲಿನ ನಿಯಂತ್ರಣ ಮತ್ತು ನಿರ್ಧಾರ ಕೈಗೊಳ್ಳುವ ಹಕ್ಕನ್ನು ಪಡೆಯುವುದೇ ಆಗಿದೆ. ಆದರೆ ಸ್ತ್ರೀ ವಾದಿಗಳ ಚಿಂತನೆಗಳು ಈ ಮೇಲಿನ ವ್ಯಾಖ್ಯೆಗಳಿಗಿಂತ ಭಿನ್ನವಾಗಿದ್ದು, "ಮಹಿಳೆಯರ ಪರಾಧೀನ ಪರಿಸ್ಥಿತಿಗೆ ಕಾರಣವಾಗಿರುವ ಪ್ರಸ್ತುತ ಸಾಮಾಜಿಕ ರಚನೆಯಲ್ಲಿ ತೀವ್ರ ಬದಲಾವಣೆ ತರುವುದೇ ಸಶಕ್ತೀಕರಣ" ಎಂಬ ಅಭಿಪ್ರಾಯ ವನ್ನು ಪ್ರತಿಪಾದಿಸಿದ್ದಾರೆ. (ಹೇಮಲತಾ.ಎಚ್.ಎಂ, ೨೦೦೪)

೪.೨ ಮಹಿಳಾ ಸಬಲೀಕರಣ

ಮಹಿಳಾ ಸಬಲೀಕರಣದ ಬಗ್ಗೆ ಎಂ. ಹಾಪ್ಕಿಹಾಲೆರವರು "ಕುಟುಂಬ ಮತ್ತು ಸಮಾಜದಲ್ಲಿನ ಲಿಂಗ ಸಂಬಂಧವನ್ನು ಪುನರ್ ರಚಿಸಿ ಮಹಿಳೆಯರನ್ನು ಪುರುಷರಿಗೆ ಸಮಾನವಾಗಿ ಸ್ವತಂತ್ರವಾಗಿ ಗುರುತಿಸುವುದು" ಎಂದಿದ್ದಾರೆ. ನೈಲಾ ಕಬೀರ್‌ರವರು, "ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ಹೆಚ್ಚಿಸಿಕೊಳ್ಳುವ ಸ್ವಾತಂತ್ರ್ಯದ ಹಕ್ಕನ್ನು ಪ್ರತಿಪಾದಿಸುವ, ಆಯ್ಕೆ ಮಾಡುವ, ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವ ಮತ್ತು ತಮ್ಮ ಪರಾಧೀನತೆಯನ್ನು ಪ್ರಶ್ನಿಸಿ ಅದನ್ನು ಹೋಗಲಾಡಿಸುವ ಕ್ರಿಯೆಯೇ ಮಹಿಳಾ ಸಶಕ್ತೀಕರಣ" ಎಂಬುದಾಗಿ ಪ್ರತಿಪಾದಿಸಿದ್ದಾರೆ. ಮಹಿಳೆಯು ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು, ಆತ್ಮವಿಶ್ವಾಸ, ಅರಿವು, ಆತ್ಮಗೌರವ ಬೆಳೆಸಿಕೊಂಡು ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಪಡೆಯುವುದೇ ಮಹಿಳಾ ಸಶಕ್ತೀಕರಣವಾಗುತ್ತದೆ. (ಯೋಗರಾಜ್.ಎಸ್.ಡಿ, ೨೦೧೩) ದೇಶದಲ್ಲಿ ಸಮಾನ ಸಹಭಾಗಿತ್ವದ ಆಡಳಿತಕ್ಕೆ ವಿವಿಧ ಆಯಾಮಗಳಲ್ಲಿ ಅಂದರೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರು ಸಕ್ರಿಯ ಪಾಲುಗಾರಿಕೆಯನ್ನು ಹೊಂದುವ ಅಗತ್ಯತೆ ಇದೆ. (ಇಂದಿರಾ.ಆರ್)

ಮಹಿಳಾ ಸಬಲೀಕರಣವು ಸಾಮಾಜಿಕ ಸಬಲೀಕರಣ, ಶೈಕ್ಷಣಿಕ ಸಬಲೀಕರಣ, ಆರ್ಥಿಕ ಸಬಲೀಕರಣ ಹಾಗೂ ರಾಜಕೀಯ ಸಬಲೀಕರಣಗಳೆಂಬ ಮೂಲಾಂಶಗಳನ್ನು ಒಳಗೊಂಡಿದೆ. ಮಹಿಳಾ ಸಬಲೀಕರಣದ ಆಯಾಮಗಳು ಮುಖ್ಯವಾಗಿ, ಸಾಮಾಜಿಕವಾಗಿ, ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಕಾನೂನಾತ್ಮಕ ಹಕ್ಕುಗಳ ಜಾರಿ ಹಾಗೂ ಮಹಿಳೆಯರ ತಾರತಮ್ಯದ ವಿರುದ್ಧ ಸಂಘಟಿತರಾಗುವುದು, ನಿರ್ಣಯ ತೆಗೆದುಕೊಳ್ಳುವಿಕೆ, ಚಲನಶೀಲತೆ, ಶಿಕ್ಷಣದಲ್ಲಿ ಮಹಿಳೆಯರು ಪ್ರವೇಶ ಹೊಂದುವುದು, ಮಹಿಳೆಯರ ಆರೋಗ್ಯ, ಸುರಕ್ಷೆಗಳಿಗೆ ಒತ್ತು ನೀಡುವುದು ಇತ್ಯಾದಿ. ಆರ್ಥಿಕವಾಗಿ, ಮಹಿಳೆಯರಿಗೆ ಆರ್ಥಿಕ ಸಂಪನ್ಮೂಲಗಳಿಗೆ ಪ್ರವೇಶ ಅಂದರೆ ಅವಕಾಶಗಳ ಸೃಷ್ಟಿಸುವಿಕೆ ಹಾಗೂ ಆರ್ಥಿಕ ಸ್ವಾತಂತ್ರ್ಯ ನೀಡುವುದು ಮತ್ತು ರಾಜಕೀಯವಾಗಿ ರಾಜಕೀಯ ಪಾಲ್ಗೊಳ್ಳುವಿಕೆ, ಪ್ರಾತಿನಿಧ್ಯತೆ ಹೊಂದುವುದು ಹಾಗೂ ಮಹಿಳಾ ಸಬಲೀಕರಣಕ್ಕೆ ಅವಶ್ಯಕವಾದ ಕಾನೂನು ಮತ್ತು ಶಾಸನಾತ್ಮಕ ಚೌಕಟ್ಟು ನಿರ್ಮಾಣ ಮಾಡುವುದನ್ನು ಒಳಗೊಂಡಿದೆ (ಒಡೆಯರ್.ಡಿ. ಹೆಗ್ಗಡೆ, ಅನ್ನಪೂರ್ಣೇಶ್ವರಿ.ಎನ್, ೨೦೧೧).

೪.೨.೧ ಮಹಿಳೆಯರ ಸಾಮಾಜಿಕ ಸಬಲೀಕರಣ

ಸಾಮಾಜಿಕ ಸಬಲೀಕರಣವು ಸ್ತ್ರೀಯರು ಸಾಮಾಜಿಕ ಸ್ಥಾನಮಾನಗಳಲ್ಲಿ ಪುರುಷರಂತೆ ಸಮಾನವಾದ ಹಕ್ಕು ಮತ್ತು ಮೂಲಭೂತ ಸ್ವಾತಂತ್ರ್ಯ ಅನುಭವಿಸುವುದನ್ನು ಪ್ರೇರೇಪಿಸುತ್ತದೆ. ಸಾಮಾಜಿಕ ಸಬಲೀಕರಣದ ಮುಖ್ಯ ಸೂಚಿಗಳಾಗಿ, ಮಹಿಳಾ ಸಾಕ್ಷರತೆ, ಆರೋಗ್ಯ, ರಕ್ಷಣಾ ಸೌಲಭ್ಯಗಳು ಮತ್ತು ಜನನ ನಿಯಂತ್ರಣ ಸೌಲಭ್ಯಗಳು, ಮಹಿಳೆಯರ ಶಿಕ್ಷಣದ ಸ್ಥಿತಿಗತಿ, ವಿವಾಹದ ವಯಸ್ಸು, ಸಾಕ್ಷರತೆಯ ಪ್ರಮಾಣ ಮತ್ತು ಮನೆಯ ಹೊರಗಿನ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಹಾಗೂ ನಿರ್ಧಾರ ತೆಗೆದುಕೊಳ್ಳುವಿಕೆ ಇತ್ಯಾದಿಗಳನ್ನು ಪರಿಗಣಿಸುತ್ತದೆ.

೪.೨.೨ ಮಹಿಳೆಯರ ಶೈಕ್ಷಣಿಕ ಸಬಲೀಕರಣ

ಮಹಿಳೆಯರ ಸಾಮಾಜಿಕ ಸಬಲೀಕರಣವನ್ನು ಸಾಧಿಸುವಲ್ಲಿ ಶೈಕ್ಷಣಿಕ ಸಶಕ್ತೀಕರಣವು ಉತ್ತಮ ಸಾಧನವಾಗಿವೆ. ಶಿಕ್ಷಣವು ಮಹಿಳೆಯರ ಸ್ವಾತಂತ್ರ್ಯ ಮತ್ತು ಸಬಲೀಕರಣದ ಒಂದು ಪ್ರಬಲ ಉಪಕರಣವಾಗಿದೆ. ಶಿಕ್ಷಣವು ಮಹಿಳಾ ಸಬಲೀಕರಣದ ಮೈಲಿಗಲ್ಲು. ಏಕೆಂದರೆ ಶಿಕ್ಷಣವು ಮಹಿಳೆಗೆ ಒದಗಿ ಬರುವ ಅವಕಾಶಕ್ಕೆ ಪ್ರತಿಕ್ರಿಯೆ ನೀಡಲು, ಸಾಂಪ್ರದಾಯಿಕ ಪಾತ್ರಕ್ಕೆ ಸವಾಲು ಹಾಕಲು ಮತ್ತು ಜೀವನವನ್ನು ಬದಲಾಯಿಸಿಕೊಳ್ಳಲು ಸಹಕಾರಿಯಾಗಿದೆ. ಶಿಕ್ಷಣವು ಮುಖ್ಯವಾಗಿ ಮಹಿಳಾ ಸಬಲೀಕರಣದ ಜೊತೆಗೆ ಜ್ಞಾನ, ಕೌಶಲ್ಯ, ಆತ್ಮವಿಶ್ವಾಸವನ್ನು ಅಭಿವೃದ್ಧಿಪಡಿಸುವ ಜೊತೆಗೆ ಸಾಮಾಜಿಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತದೆ. ಶಿಕ್ಷಣವು ಅರಿವನ್ನು ಹೆಚ್ಚಿಸಲು ಕೌಟುಂಬಿಕವಾಗಿ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳಲು ಮತ್ತು ಸಬಲೀಕರಣದ ಎಲ್ಲಾ ಹಂತದ ಜ್ಞಾನವನ್ನು ಸಂಪಾದಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ. ವ್ಯಕ್ತಿಯ ವ್ಯಕ್ತಿತ್ವ ನಿರೂಪಣೆಯಲ್ಲಿ ಶಿಕ್ಷಣ ಮಹತ್ತರ ಪಾತ್ರ ವಹಿಸುತ್ತಿದೆ. ಮಹಿಳೆಯರಿಗೆ ಸಾಮಾನ್ಯ ಶಿಕ್ಷಣದ ಜೊತೆಗೆ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಗಳ ಅವಕಾಶವನ್ನು ಒದಗಿಸಿ ಕೊಡುವುದು ಮಹಿಳಾ ಸಬಲೀಕರಣಕ್ಕೆ ಪೂರಕವಾಗುತ್ತದೆ. (ಶಶಿಕಲಾ, ೨೦೧೦)

೪.೨.೩ ಮಹಿಳಾ ಆರ್ಥಿಕ ಸಬಲೀಕರಣ

ಆರ್ಥಿಕ ಸಬಲೀಕರಣವು ಮಹಿಳೆಯರಿಗೆ ಉನ್ನತ ಶಿಕ್ಷಣ ಪಡೆಯಲು, ಸ್ವತಂತ್ರವಾಗಿ ಯೋಚಿಸಲು, ಭೂಮಿ ಮತ್ತು ಆಸ್ತಿಗೆ ಸಂಬಂಧಪಟ್ಟಂತೆ ಕಾನೂನು ಮತ್ತು ಹಕ್ಕುಗಳನ್ನು ತಿಳಿದು ಕೊಳ್ಳುವಲ್ಲಿ ಸಹಕಾರಿಯಾಗಿವೆ. ಯಾವ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಾರೋ ಅವರು ಪ್ರಬಲವಾಗಿ ಅಭಿವೃದ್ಧಿ ಹೊಂದುತ್ತಾರೆ. ಉದ್ಯೋಗ, ಉತ್ತಮ ವ್ಯಾಪಾರ ವಾತಾವರಣ ಮತ್ತು ಹಣಕಾಸಿನ ಸೇವೆಗಳು ಮಹಿಳೆಯರಿಗೆ ಆರ್ಥಿಕ ಸಬಲೀಕರಣವನ್ನು ಸಾಧಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಆರ್ಥಿಕ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯ ಎಂಬ ಮಾತಿದೆ. ವ್ಯಕ್ತಿ ಆರ್ಥಿಕ ಉತ್ಪಾದನೆಯಲ್ಲಿ ತೊಡಗಿದರೆ ಸಾಲದು ತನ್ನ ದುಡಿಮೆಯ ಆಳ್ವಿಕೆಯ ನಿರ್ವಹಣೆಯಲ್ಲಿ ಸಕ್ರಿಯವಾದ ಪಾತ್ರವನ್ನು ವಹಿಸಬೇಕು. ಆಗ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ದೊರೆಯುತ್ತದೆ. ಆರ್ಥಿಕ ಸಬಲೀಕರಣವು ಮಹಿಳೆಯರ ಸಾಮಾಜಿಕ, ರಾಜಕೀಯಕ್ಕೆ ಸಬಲೀಕರಣಕ್ಕೆ ದಾರಿ ಮಾಡಿಕೊಡುತ್ತದೆ. (ಸಬಿಹಾ ಭೂಮಿಗೌಡ, ೨೦೦೩)

ಭಾರತದಲ್ಲಿ ಪಂಚವಾರ್ಷಿಕ ಯೋಜನೆ ಪ್ರಾರಂಭವಾದಗಿನಿಂದಲೂ ಮಹಿಳೆಯರ ಅಭಿವೃದ್ಧಿಗೆ ಸರ್ಕಾರ ಗಮನ ನೀಡಿದೆ. ೧೯೯೩ ರಲ್ಲಿ ಸ್ತ್ರೀಯರ ಅವಶ್ಯಕತೆಗಾಗಿ 'ರಾಷ್ಟ್ರೀಯ ಮಹಿಳಾ ಕೋಶ' ವನ್ನು ಆರಂಭಿಸಲಾಗಿದೆ. ೧೯೯೪-೯೫ ರ ಅವಧಿಯಲ್ಲಿ ಗ್ರಾಮೀಣ ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಆರ್ಥಿಕ ಸಬಲೀಕರಣಕ್ಕಾಗಿ ೭೬೦೦ ಕೋಟಿ ರೂಪಾಯಿಗಳನ್ನು ಮೀಸಲಿರಿಸಿದೆ. ೧೯೯೭-೨೦೦೨ ರ ೯ ನೇ ಪಂಚವಾರ್ಷಿಕ ಯೋಜನೆಯಲ್ಲಿ 'ಸ್ತ್ರೀ-ಸಬಲೀಕರಣ' ಪ್ರಥಮ ಆದ್ಯತೆಯ ವಿಷಯವಾಗಿದೆ. ಭಾರತ ಸರ್ಕಾರವು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಬಹಳಷ್ಟು ಉಪಕ್ರಮಗಳನ್ನು ತೆಗೆದುಕೊಂಡಿವೆ. ಮುಖ್ಯವಾಗಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ, ಮಹಿಳೆಯರಿಗೆ ವಿಶೇಷ ಉತ್ತೇಜಕಗಳು, ಹೆರಿಗೆ ರಜೆಯ ಸೌಲಭ್ಯ, ಉದ್ಯಮಿ ಮಹಿಳೆಯರಿಗೆ ವಿಶೇಷ ರಿಯಾಯಿತಿಗಳು, ಮಹಿಳೆಯರ ಸ್ವಯಂ ಸೇವಾ ಸಂಘಗಳಿಗೆ ಸಹಾಯ ಮಹಿಳೆಯರಿಗೆ ಆದಾಯ ತೆರಿಗೆ ವಿನಾಯಿತಿ. ಆರ್ಥಿಕ ತೊಂದರೆಗಳಿಗೆ ಸೂಕ್ತ ಪರಿಹಾರ ಕಂಡು ಕೊಳ್ಳುವುದೇ ಆರ್ಥಿಕ ಸಬಲೀಕರಣದ ಉದ್ದೇಶವಾಗಿದೆ. (ಯೋಗರಾಜ.ಎಸ್.ಡಿ, ೨೦೧೩).

೪.೨.೪ ಮಹಿಳಾ ರಾಜಕೀಯ ಸಬಲೀಕರಣ

ಮಹಿಳಾ ರಾಜಕೀಯ ಸಬಲೀಕರಣವು ಕೇವಲ ಆಡಳಿತ ನಡೆಸುವುದನ್ನು ಮಾತ್ರ ಒಳಗೊಳ್ಳದೇ, ರಾಜಕೀಯ ಪಕ್ಷಗಳ ಸದಸ್ಯತ್ವ ಹೊಂದುವುದು, ಪಕ್ಷದ ಬೆಳವಣಿಗೆಗೆ ಸಂಘಟನೆಯಲ್ಲಿ ತೊಡಗುವುದು. ಹೊಸ ಪಕ್ಷ ಕಟ್ಟುವುದು, ಚುನಾವಣೆಯಲ್ಲಿ ಸ್ಪರ್ಧಿಸುವುದು, ನಾಮಪತ್ರ ಸಲ್ಲಿಸುವುದು, ಪಕ್ಷದ ಪರವಾಗಿ ಚುನಾವಣಾ ಪ್ರಚಾರ ನಡೆಸುವುದು, ಮತ ಚಲಾಯಿಸುವುದು, ಚುನಾವಣೆ ಬಗ್ಗೆ ಮಾಹಿತಿ ಪಡೆಯುವುದು, ಚರ್ಚಿಸುವುದು, ರಾಜಕೀಯ ಪಕ್ಷಗಳ ಸಭೆಗಳಿಗೆ ಹಾಜರಾಗುವುದು, ಸಭೆ ನಡೆಸುವುದು, ರಾಜಕೀಯ ಪಕ್ಷಗಳಿಗೆ ಆರ್ಥಿಕ ವಂತಿಗೆ ನೀಡುವುದು, ರಾಜಕೀಯ ಗುಂಪುಗಳ ಸದಸ್ಯತ್ವ ಹೊಂದುವುದು, ಶಾಸಕರು ಅಥವಾ ರಾಜಕೀಯ ಮುಖಂಡರೊಡನೆ ರಾಜಕೀಯ ನೇರ ಸಂಪರ್ಕ ಹೊಂದುವುದು, ಅಲ್ಲದೇ ಪಕ್ಷದ ಮೂಲಕ ಪ್ರದರ್ಶನ ಮತ್ತು ಮುಷ್ಕರ ನಡೆಸುವುದು, ಕರಪತ್ರ ಹಂಚುವುದು, ಲೇಖನ ಬರೆಯುವುದು, ಭಾಷಣ ಮಾಡುವುದು, ರಾಜಕೀಯ ಪಕ್ಷದ ವಕ್ತಾರರಾಗಿ ಕಾರ್ಯನಿರ್ವಹಿಸುವುದು, ರಾಜಕೀಯ ನೀತಿ ನಿರ್ಣಯಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಪ್ರಕ್ರಿಯೆಗಳನ್ನು ಒಳಗೊಳ್ಳುವಿಕೆಯಾಗಿದೆ. (ಮೀನಾಕ್ಷಿ.ಡಿ, ೨೦೧೦).

ರಾಜಕೀಯ ಎಂಬುದು ಕೇವಲ ಪ್ರಾತಿನಿಧ್ಯ ಅಲ್ಲ. ಪ್ರಾತಿನಿಧ್ಯವನ್ನು ಮೀರಿ ಆಡಳಿತಾತ್ಮಕ ಚೌಕಟ್ಟು ಕೂಡಾ ಇರುವಂತಹದ್ದಾಗಿದೆ. ಮಹಿಳೆಯರಿಗೆ ಶೇಕಡಾ ೩೩.೩ ರಷ್ಟು ಮೀಸಲಾತಿ ಸಂವಿಧಾನದತ್ತವಾಗಿ ಸಿಗುವಂತಹದ್ದು, ಈ ಪ್ರಾತಿನಿಧ್ಯ ಮಹಿಳೆ ಇಷ್ಟ ಪಡಲಿ, ಇಷ್ಟ ಪಡದೇ ಇರಲಿ ಸಿಕ್ಕೇ ಸಿಗುವಂತಹದ್ದು, ಅದನ್ನು ಮೀರಿ ಪ್ರಾತಿನಿಧ್ಯ ಕಂಡು ಬಂದಲ್ಲಿ ಆಗ ಮಾತ್ರ ರಾಜಕೀಯ ಅಧಿಕಾರ ದಕ್ಕಿಸಿಕೊಳ್ಳಲಿಕ್ಕೆ ಸಾಧ್ಯ. (ಸಿನ್ಹಾ.ಜೆ.ಪಿ, ೨೦೦೦). ಮಹಿಳಾ ಪ್ರಾತಿನಿಧ್ಯತೆ ಎನ್ನುವುದು ಏಕಾಏಕಿಯಾಗಿ ದೊರೆಯುವುದಾಗಿರದೇ ರಾಜಕೀಯದ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರ ಪರಿಣಾಮಾತ್ಮಕ ಹಾಗೂ ಗುಣಾತ್ಮಕವಾಗಿ ಏರಿಕೆಯಾಗುವುದು ಮಹಿಳೆಯರ ರಾಜಕೀಯವಾಗಿ ಸಶಕ್ತತೆಯನ್ನು ಹೊಂದಿರುವುದಾಗಿ ಸೂಚಿಸುತ್ತದೆ.

೪.೩ ಸಬಲೀಕರಣದ ತಂತ್ರಗಳು

ಸಬಲೀಕರಣದ ತಂತ್ರಗಳು ವೈವಿಧ್ಯಮಯವಾಗಿದ್ದು, ಈ ತಂತ್ರಗಳಿಂದ ಮಹಿಳೆಯರ ಸಾಮರ್ಥ್ಯದ ಸರಿಯಾದ ಬಳಕೆಯಾಗುತ್ತದೆ. ಇದು ಹೆಚ್ಚಿನ ಜ್ಞಾನ ಮತ್ತು ಸಂಪನ್ಮೂಲಗಳನ್ನು ಪಡೆಯಲು, ಹೆಚ್ಚಿನ ನಿರ್ಧಾರ ಕೈಗೊಳ್ಳುವ ಸ್ವಾಯತ್ತತೆಯನ್ನು ಪಡೆಯಲು, ಜೀವನದಲ್ಲಿ ಯೋಜನೆಗಳನ್ನು ಕೈಗೊಳ್ಳುವ ಸಾಮರ್ಥ್ಯವನ್ನು, ಪರಿಸ್ಥಿತಿಯನ್ನು ನಿಯಂತ್ರಿಸಲು ಮತ್ತು ನಂಬಿಕೆ ಮತ್ತು ಆಚರಣೆಗಳ ಕೊಂಡಿಯಿಂದ ಸ್ವತಂತ್ರವಾಗಲು ದಾರಿ ಮಾಡಿಕೊಡುತ್ತದೆ. ಪ್ರಸ್ತುತ ಮಹಿಳೆಯರು ದಬ್ಬಾಳಿಕೆಯಿಂದ ತಾವು ತಾವಾಗಿಯೇ ಜಾಗೃತವಾಗದಿದ್ದರೆ ಮತ್ತು ತಮ್ಮ ಸ್ಥಿತಿಗತಿಯನ್ನು ಬದಲಾಯಿಸಲು ಸರಿಯಾದ ಉಪಕ್ರಮಗಳನ್ನು ತಾವೇ ತೆಗೆದುಕೊಳ್ಳದೇ ಹೋದಲ್ಲಿ ಮಹಿಳೆಯರು ಸಶಕ್ತತೆಯನ್ನು ಹೊಂದಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಮಹಿಳಾ ಸಬಲೀಕರಣದ ಪೂರಕ ವಿವಿಧ ತಂತ್ರಗಳು ಈ ಕೆಳಗಿನಂತಿವೆ.

- ಉನ್ನತ ಶಿಕ್ಷಣದ ಪ್ರಯತ್ನ.
- ಮಹಿಳೆ ಮತ್ತು ಮಕ್ಕಳ ಆರೋಗ್ಯ ಉತ್ತಮಗೊಳಿಸುವುದು.
- ಮದುವೆಯ ವಯಸ್ಸಿನ ಹೆಚ್ಚಳ.
- ಆಧುನಿಕ ವಲಯದ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಪಾಲ್ಗೊಳ್ಳುವಿಕೆ.
- ಸ್ವ ಉದ್ಯೋಗಕ್ಕೆ ವಿವಿಧ ಮೂಲಗಳಿಂದ ಹಣಕಾಸು ಮತ್ತು ಸೇವೆಯ ಬೆಂಬಲ.
- ಅಧಿಕಾರದಲ್ಲಿ ಉನ್ನತ ಹಂತದ ಅವಕಾಶಗಳ ಬಳಕೆ.
- ಮಹಿಳೆ ತನ್ನ ಹಕ್ಕು ಮತ್ತು ಮೇಲಿನ ಎಲ್ಲಾ ತಂತ್ರಗಳ ಬಗ್ಗೆ ಸಂಪೂರ್ಣವಾದ ಜ್ಞಾನ ಹೊಂದುವುದು.
- ಸ್ವ-ನಂಬಿಕೆ, ಸ್ವ-ಗೌರವ ಮತ್ತು ಘನತೆಯಿಂದ ಬಾಳುವುದು.

೪.೪ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಸಬಲೀಕರಣದ ಪ್ರಯತ್ನಗಳು

ಮಹಿಳಾ ಅಭಿವೃದ್ಧಿಯ ನಿಟ್ಟಿನಲ್ಲಿ ವಿಶ್ವಸಂಸ್ಥೆಯ ಪಾತ್ರವು ಬಹುಮುಖ್ಯವಾದುದಾಗಿದೆ. ವಿಶ್ವಸಂಸ್ಥೆಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಸಮಾನತೆಯನ್ನು ಸಾಧಿಸುವಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟಿತು. ವಿಶ್ವಸಂಸ್ಥೆಯಲ್ಲಿ ಅನೇಕ ರಾಷ್ಟ್ರಗಳ ಮಹಿಳಾ ಪ್ರತಿನಿಧಿಗಳು ಶಿಕ್ಷಣ, ಉದ್ಯೋಗ, ವೇತನ, ರಾಜಕಾರಣದಲ್ಲಿ ಪಾಲ್ಗೊಳ್ಳುವಿಕೆ ಹಾಗೂ ಮತದಾನ ಇತ್ಯಾದಿಗಳಲ್ಲಿ ಕಂಡು ಬರುವ ಲಿಂಗ ಅಸಮಾನತೆಯನ್ನು ಪ್ರತಿಭಟಿಸಿದರು. ಅಷ್ಟೇ ಅಲ್ಲದೇ ತಮ್ಮ ಹಕ್ಕುಗಳ ಕುರಿತಾದ ಅಹವಾಲುಗಳನ್ನು ವಿಶ್ವಸಂಸ್ಥೆಯಲ್ಲಿ ಮಂಡಿಸಿದರು. ಇದರನ್ವಯ ೧೯೪೬ ರಲ್ಲಿ ಮಾನವ ಹಕ್ಕುಗಳ ಆಯೋಗ ಮತ್ತು ಮಹಿಳಾ ಸ್ಥಿತಿಗತಿಗಳ ಆಯೋಗಗಳ ರಚನೆಯಾಯಿತು. ವಿಶ್ವಸಂಸ್ಥೆಯು ಮಹಿಳೆಯರ ವಿರುದ್ಧ ಇರುವ ಎಲ್ಲಾ ಬಗೆಯ ತಾರತಮ್ಯಗಳನ್ನು ತೊಡೆದು ಹಾಕಿ ಅವರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಿಗೆ

ಸರಿಸಮಾನವಾದ ಸ್ಥಾನಮಾನವನ್ನು ನೀಡುವ ಹಿನ್ನೆಲೆಯಲ್ಲಿ ೧೯೪೮ ರಲ್ಲಿ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಮಾಡಿತು. ಮಹಿಳಾ ಸಮಾನ ಹಕ್ಕುಗಳ ಕಾನೂನಾತ್ಮಕ ನೆಲೆ ಸ್ಥಾಪಿಸುವ ಪ್ರಯತ್ನವನ್ನು ವಿಶ್ವಸಂಸ್ಥೆಯು ನಡೆಸಿತು. ೧೯೫೦ ರ ಸುಮಾರಿಗೆ ಪ್ರಪಂಚದಲ್ಲಿ ತೈವಾನ್ ಬಿಟ್ಟರೆ ಬಹುತೇಕ ಎಲ್ಲ ದೇಶಗಳು ಸ್ವತಂತ್ರ ಪಡೆದವು. ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳಾ ಚಳುವಳಿ ತನ್ನದೇ ಪಾತ್ರ ವಹಿಸಿತು. ಹಾಗಾಗಿಯೇ ಪ್ರಪಂಚದ ಎಲ್ಲ ದೇಶಗಳು ಮಹಿಳೆಯರಿಗೆ ಮತದಾನದ ಹಕ್ಕಿನ ಜೊತೆಗೆ ಇತರ ಸೌಲಭ್ಯವನ್ನು ನೀಡಲು ಮುಂದಾದವು.

೧೯೭೫ ರ ಮಾರ್ಚ್ ೦೮ ರಂದು ಮಹಿಳೆಯರ ಅಭಿವೃದ್ಧಿಗಾಗಿ ಮೆಕ್ಸಿಕೋದಲ್ಲಿ ಒಂದು ಸಮ್ಮೇಳನ ಜರಗಿಸಲಾಯಿತು. ಅಂದಿನಿಂದ ಮಾರ್ಚ್‌ನ್ನು ಅಂತಾರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಯಿತು. (ಶಿವಚಿತ್ತಪ್ಪ.ಕೆ, ೨೦೦೬) ಮತ್ತು ೧೯೭೫ನ್ನು ಅಂತಾರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ವಿಶ್ವಸಂಸ್ಥೆ ಘೋಷಿಸಿತು. (ನಾಗಮಣಿ, ೨೦೧೨) ೧೯೭೫ರ ಜೂನ್ ೧೯ರಂದು ಮೆಕ್ಸಿಕೋ ನಗರದಲ್ಲಿ ಪ್ರಥಮ ವಿಶ್ವ ಮಹಿಳಾ ಸಮಾವೇಶವು ಪ್ರಾರಂಭವಾಯಿತು. ಇದರಲ್ಲಿ ವಿಶ್ವಸಂಸ್ಥೆಯ ೧೩೩ ಸದಸ್ಯ ರಾಷ್ಟ್ರಗಳು ಹಾಜರಾಗಿದ್ದು ೧೧೩ರಷ್ಟು ಮಹಿಳೆಯರು ರಾಷ್ಟ್ರೀಯ ನಿಯೋಗಗಳ ಮುಖ್ಯಸ್ಥರಾಗಿದ್ದರು. ಮಹಿಳಾ ಸಮಾನತೆ, ಅಭಿವೃದ್ಧಿ ಮತ್ತು ಶಾಂತಿಗೆ ಮಹಿಳೆಯರ ಕೊಡುಗೆ ಇದು ಮೆಕ್ಸಿಕೋ ಘೋಷಣೆಯಾಗಿತ್ತು. ಮಹಿಳಾಭಿವೃದ್ಧಿಗೆ ಸಂಬಂಧಿಸಿದ ೩೫ ಪ್ರತ್ಯೇಕ ಗೊತ್ತುವಳಿಗಳು ಮತ್ತು ತೀರ್ಮಾನಗಳನ್ನು ಈ ಸಮಾವೇಶದಲ್ಲಿ ಅಳವಡಿಸಲಾಗಿತ್ತು. ಮಹಿಳೆಗೆ ಪ್ರತಿ ಹಂತದ ಶಿಕ್ಷಣ ಮತ್ತು ತರಬೇತಿಗೆ ಸಮಾನ ಪ್ರವೇಶಾವಕಾಶ, ಮೂಲಭೂತ ಅವಶ್ಯಕತೆಗಳಾದ ಪೌಷ್ಠಿಕ ಆಹಾರ, ವಸತಿ, ಶೌಚಾಲಯ, ಆರೋಗ್ಯ ಸೇವೆಗಳು ಮತ್ತು ಕುಟುಂಬ ಯೋಜನೆ, ಉದ್ಯೋಗ ಅವಕಾಶಗಳಲ್ಲಿ ಹೆಚ್ಚಳ, ಮಹಿಳಾ ಖೈದಿಗಳಿಗೆ ಮತ್ತು ಮಹಿಳಾ ಅಪರಾಧಿಗಳಿಗೆ ಪುನರ್ ವಸತಿ, ಬಲವಂತದ ವೇಶ್ಯಾವೃತ್ತಿಗೆ ಕಡಿವಾಣ, ಮಹಿಳಾ ರಾಜಕೀಯ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳು ಇತ್ಯಾದಿಗಳ ಬಗ್ಗೆ ೧೯೭೫ರ ಮೆಕ್ಸಿಕೋ ಸಮಾವೇಶವು ೧೯೮೦ ರೊಳಗಾಗಿ ಸಾಧಿಸಲು ಕನಿಷ್ಠ ಗುರಿಗಳನ್ನು ಹೊಂದಿತ್ತು. ಮೊಟ್ಟ ಮೊದಲ ಬಾರಿಗೆ ಮಹಿಳೆಯರ ಸಮಸ್ಯೆಗಳ ಬಗ್ಗೆ ವಿಶ್ವದ ಗಮನ ಸೆಳೆಯಿತು. ಅಷ್ಟೇ ಅಲ್ಲದೇ ಪ್ರತಿ ದೇಶವು ತನ್ನ ರಾಷ್ಟ್ರೀಯ ಕಾರ್ಯವ್ಯೂಹದಲ್ಲಿ ಈ ಗುರಿಗಳನ್ನು ಸಾಧಿಸುವತ್ತ ಗಮನ ಹರಿಸುವಂತಾಯಿತು. ಮಹಿಳೆಯರು ನಡೆಸುವ ಹೋರಾಟಗಳಿಗೆ ಸೈದ್ಧಾಂತಿಕ ನೆಲೆಗಳನ್ನು, ಗೊತ್ತು ಗುರಿಗಳನ್ನು ಕಲ್ಪಿಸದೇ ಹೋದಲ್ಲಿ ಅಭಿವೃದ್ಧಿ ಪ್ರಕ್ರಿಯೆ ಫಲದಾಯಕವಾಗದು, ಉತ್ತಮ ಸಮಾಜ ನಿರ್ಮಾಣವಾಗಲಾರದು ಎಂಬ ಅಂಶವನ್ನು ಮಹಿಳಾ ಸಮಾವೇಶಗಳ ಮುಖೇನ ವಿಶ್ವಸಂಸ್ಥೆಯು ತನ್ನ ಸದಸ್ಯ ರಾಷ್ಟ್ರಗಳಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ಸನ್ನು ಕಂಡುಕೊಂಡಿತ್ತು. ೧೯೭೬ರಲ್ಲಿ ಪ್ರಾರಂಭವಾದ 'ಮಹಿಳಾ ಅಭಿವೃದ್ಧಿ ನಿಧಿ' ಯು ಹಣಕಾಸು ಹಾಗೂ ತಾಂತ್ರಿಕ ನೆರವನ್ನು ನೀಡುತ್ತದೆ. (ಸಿಂದುಜಾ.ಪಿ, ೨೦೧೭)

ಡೆನ್ಮಾರ್ಕಿನ ಕೋಪನ್ ಹೇಗ್‌ನಲ್ಲಿ ೧೯೮೦ರ ಜುಲೈ ೧೪ ರಿಂದ ೩೦ರವರೆಗೆ ಎರಡನೆ ವಿಶ್ವ ಮಹಿಳಾ ಸಮಾವೇಶ ಜರುಗಿತು. ಈ ಸಮಾವೇಶದ ಮೂರು ಮುಖ್ಯ ಉದ್ದೇಶಗಳಾಗಿ;

ಮೊದಲನೆಯದಾಗಿ, ೧೯೭೫ರ ಮೆಕ್ಸಿಕೋ ಸಮಾವೇಶದ ಶಿಫಾರಸ್ಸುಗಳ ಜಾರಿ ಕುರಿತು ಪರಾಮರ್ಶನ, ಎರಡನೆಯದಾಗಿ, ಸದರಿ ಕ್ರಿಯಾ ಯೋಜನೆಯಲ್ಲಿನ ಬದಲಾವಣೆಗಳಿಗೆ ಪುನರ್ ಹೊಂದಿಸುವುದು, ಮೂರನೆಯದಾಗಿ ಮಹಿಳಾ ಹಿತಾಸಕ್ತಿಯನ್ನು ಸಾಧಿಸುವಲ್ಲಿ ಮಹಿಳೆಯರಿಗೆ ಉದ್ಯೋಗ, ಉತ್ತಮ ಆರೋಗ್ಯ ಮತ್ತು ಶಿಕ್ಷಣವನ್ನು ಕಲ್ಪಿಸುವುದು. ಈ ಮೂರು ಕ್ಷೇತ್ರಗಳು ಬಹು ಪ್ರಮುಖವಾದುದೆಂದು ಪರಿಗಣಿಸಲಾಗುವುದು. ಕೋಪನ್ ಹೇಗನ್ ಸಮಾವೇಶಗಳಲ್ಲಿ ವಿಶ್ವಸಂಸ್ಥೆಯ ಮಹಿಳಾ ಆಯೋಗಗಳು ನಡೆಸಿರುವ ಅಧ್ಯಯನಗಳಲ್ಲಿ ಕಂಡುಕೊಂಡ ಫಲಿತಾಂಶಗಳು ಮುಖ್ಯವಾಗಿ, ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಪುರುಷರ ಪಾಲ್ಗೊಳ್ಳುವಿಕೆಯ ಗಣನೀಯ ಕೊರತೆ, ರಾಜಕೀಯ ಇಚ್ಛಾಶಕ್ತಿಯ ಕೊರತೆ, ಪುರುಷ ಮತ್ತು ಮಹಿಳೆಯರ ರಚನಾತ್ಮಕವಲ್ಲದ ನಡವಳಿಕೆಗಳು, ಮಹಿಳೆಯರ ಕೊಡುಗೆಗಳನ್ನು ಸಮಾಜ ಮಾನ್ಯ ಮಾಡದಿರುವುದು, ಮಹಿಳಾ ಯೋಜನೆಗಳ ಬಗ್ಗೆ ವಿಶೇಷ ಗಮನ ನೀಡದಿರುವಿಕೆಯನ್ನು, ತೀರ್ಮಾನ ನೀಡುವ ಸ್ಥಾನಗಳಲ್ಲಿನ ಮಹಿಳೆಯರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಲ್ಲದಿರುವಿಕೆಯನ್ನು ಮಹಿಳೆಯ ಪಾತ್ರವನ್ನು ಬೆಂಬಲಿಸುವ ಸೇವೆಗಳ ಕೊರತೆ, ಮಹಿಳೆಯರು ಮತ್ತು ನೀತಿ ನಿರೂಪಕರ ನಡುವೆ ಇರುವ ಮಾಹಿತಿ ಸಂವಹನದ ಕೊರತೆ, ಮಹಿಳೆಯರ ಅಭಿವೃದ್ಧಿಪರ ಯೋಜನೆಗಳು, ಅವಕಾಶಗಳು, ಕಾರ್ಯಕ್ರಮಗಳ ಬಗ್ಗೆ ಮಹಿಳೆಯರ ಅಜ್ಞಾನ, ಇತ್ಯಾದಿ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೋಪನ್ ಹೇಗನ್ ಸಮಾವೇಶವು ೪೮ ಗೊತ್ತುವಳಿಗಳನ್ನು ಒಳಗೊಂಡ ಕ್ರಿಯಾಯೋಜನೆಗಳನ್ನು ಸಿದ್ಧಪಡಿಸಿತು. ಅವುಗಳಲ್ಲಿ ಮುಖ್ಯವಾಗಿ ಮಹಿಳೆಯರ ಸ್ಥಿತಿಗತಿಗಳನ್ನು ಕುರಿತಂತೆ ಅಂಕಿ ಅಂಶಗಳನ್ನು ಲಿಂಗ ಮತ್ತು ವಯಸ್ಸಿನ ನೆಲೆಯಲ್ಲಿ ಸಂಗ್ರಹಿಸುವುದರ ಮೂಲಕ ಗ್ರಾಮೀಣ ಮಹಿಳೆಯರು, ನಿರುದ್ಯೋಗಿಗಳು, ಯುವಪೀಳಿಗೆ, ವಲಸಿಗರು, ವೃದ್ಧರು ಹಾಗೂ ಏಕ ತಾಯಂದಿರ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದು ಹೆಚ್ಚು ಪ್ರಯೋಜನಕಾರಿ ಎಂಬುದನ್ನು ಮನಗಂಡಿತು. (ಒಡೆಯರ್.ಡಿ ಹೆಗ್ಗಡೆ, ಎನ್.ಅನ್ನಪೂರ್ಣೇಶ್ವರಿ).

೧೯೮೫ ರ ಜುಲೈ ೧೫ ರಂದು ನೈರೋಬಿಯಲ್ಲಿ ಮಹಿಳಾ ಸ್ಥಿತಿಗತಿ ಆಯೋಗದ ಆಶ್ರಯದಲ್ಲಿ ಮೂರನೇ ವಿಶ್ವ ಮಹಿಳಾ ಸಮಾವೇಶ ಜರುಗಿತು. ಈ ಸಮಾವೇಶದಲ್ಲಿ ಹಿಂದಿನ ಎರಡು ಸಮಾವೇಶಗಳ ಕಾರ್ಯಯೋಜನೆಗಳ ಫಲಿತಾಂಶದ ಪರಾಮರ್ಶೆಯನ್ನು ನಡೆಸಲಾಯಿತು. ಕಡು ಬಡತನ ಮಹಿಳಾ ಅಭಿವೃದ್ಧಿಗೆ ಇರುವ ಮುಖ್ಯ ತೊಡಕುಗಳು. ಅಷ್ಟೇ ಅಲ್ಲದೆ ಸಾಮಾಜಿಕ, ಸಾಂಪ್ರದಾಯಿಕ, ಸಾಂಸ್ಕೃತಿಕ ಹಾಗೂ ಶಾಸನಾತ್ಮಕ ನೆಲೆಯಲ್ಲಿಯೂ ಮಹಿಳೆಯು ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿದ್ದಾಳೆ ಎಂಬುದರ ಬಗ್ಗೆ ಚರ್ಚೆಗಳು ನಡೆದವು. ಈ ಸಮ್ಮೇಳನದಲ್ಲಿ ಆಯಾ ದೇಶಗಳು ಹೊಂದಿರುವ ಸಂಪನ್ಮೂಲಗಳ ಸಾಮರ್ಥ್ಯಗಳ ಯೋಗ್ಯತೆಗೆ ಅನುಸಾರವಾಗಿ ಅಭಿವೃದ್ಧಿ ನೀತಿಗಳ ನೆಲೆಯಲ್ಲಿ ಆದ್ಯತೆಗಳನ್ನು ಹೊಂದಲು ಆಯ್ಕೆ ಸ್ವಾತಂತ್ರ್ಯವನ್ನು ನೀಡಲಾಯಿತು. ಕುಟುಂಬದಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ಶಾಂತಿಗೆ ಸಂಬಂಧಿಸಿದ ಸಮಸ್ಯೆ ಎಂಬುದಾಗಿ ಮೊತ್ತ ಮೊದಲ ಬಾರಿಗೆ ಈ ಸಮಾವೇಶದಲ್ಲಿ ಗಮನಕ್ಕೆ ಬಂದು ವ್ಯಾಪಕ

ಚರ್ಚೆಗೊಳಪಟ್ಟು ಮಹಿಳಾ ರಕ್ಷಣಾ ಕಾರ್ಯಕ್ಕೆ ಅನುವಾಗುವಂತೆ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಕರೆಕೊಟ್ಟಿತು. (ಸುನೀತಾ ಪಥಾನಿಯ, ೨೦೦೧)

ನಾಲ್ಕನೆಯ ವಿಶ್ವ ಮಹಿಳಾ ಸಮಾವೇಶವು ಚೀನಾದ ಬೀಜಿಂಗ್‌ನಲ್ಲಿ ೧೯೯೫ ರ ಸೆಪ್ಟೆಂಬರ್ ೪ ರಿಂದ ೧೫ ರ ರವೆಗೆ ನಡೆಯಿತು. ಇದರಲ್ಲಿ ೨೫೦೦ ಸರ್ಕಾರೇತರ ಸಂಸ್ಥೆಯ ಮಹಿಳೆಯರು ಭಾಗವಹಿಸಿದ್ದರು. ಈ ಸಮ್ಮೇಳನದ ಕ್ರಿಯಾ ಯೋಜನೆಯಲ್ಲಿ ಮಹಿಳೆಗೆ ಸಂಬಂಧಿಸಿದಂತೆ ೧೨ ಕ್ಷೇತ್ರಗಳನ್ನು ಗುರುತಿಸಿತು. ಅವುಗಳಲ್ಲಿ ಮುಖ್ಯವಾಗಿ ಬಡತನದಿಂದಾಗಿ ಮಹಿಳೆಯರ ಮೇಲೆ ನಿರಂತರವಾಗಿ ಹೆಚ್ಚುತ್ತಿರುವ ಹೊರೆ, ಶಿಕ್ಷಣ ಮತ್ತು ತರಬೇತಿ ಪಡೆದುಕೊಳ್ಳುವಲ್ಲಿ ಮಹಿಳೆಯರು ಎದುರಿಸುತ್ತಿರುವ ಅಸಮಾನತೆ ಹಾಗೂ ಕೊರತೆಗಳು ಹಾಗೂ ವಿಶ್ವ ಸಮ್ಮೇಳನದಲ್ಲಿ ನಿರ್ಧಾರ ತೆಗೆದು ಕೊಳ್ಳುವ ಹಾಗೂ ಕಾಯ್ದೆ ರಚಿಸುವ ಕಾರ್ಯದಲ್ಲಿ ಮಹಿಳೆಯರ ಸಮಾನ ಪಾಲುದಾರಿಕೆ ಇತ್ಯಾದಿ (ರಾಘವ್, ೨೦೦೮).

ಮಹಿಳಾ ರಾಜಕೀಯ ಮೂಲಭೂತ ಹಕ್ಕುಗಳ ಅಂತಾರಾಷ್ಟ್ರೀಯ ಮಾನದಂಡವನ್ನು ಈ ಸಮ್ಮೇಳನಗಳಲ್ಲಿ ರೂಪಿಸಲಾಯಿತು. ಇದರನ್ವಯ ೧೧ ವಿಧಿಗಳನ್ನು ಅದು ಒಳಗೊಂಡಿದೆ. ವಿಧಿ (೧)ರ ಪ್ರಕಾರ ಮಹಿಳೆಯರು ಎಲ್ಲಾ ಚುನಾವಣೆಗಳಲ್ಲಿ ಯಾವುದೇ ತಾರತಮ್ಯಕ್ಕೊಳಗಾಗದೇ ಪುರುಷರಷ್ಟೇ ಸಮಾನವಾಗಿ ಪಾಲ್ಗೊಳ್ಳುವುದು. ವಿಧಿ (೨) ರ ಪ್ರಕಾರ ಮಹಿಳೆಯರು ಎಲ್ಲಾ ಚುನಾವಣೆಗಳಲ್ಲಿ ಸ್ಪರ್ಧಿಗಳಾಗಿ ಯಾವುದೇ ತಾರತಮ್ಯಕ್ಕೆ ಒಳಗಾಗದೇ ಪುರುಷರಷ್ಟೇ ಸಮಾನವಾಗಿ ಪಾಲ್ಗೊಳ್ಳುವುದು. ವಿಧಿ (೩) ರನ್ವಯ ಮಹಿಳೆಯರು ಯಾವುದೇ ತಾರತಮ್ಯಕ್ಕೊಳಗಾಗದೆ ಪುರುಷರಷ್ಟೇ ಸಮಾನವಾಗಿ ರಾಷ್ಟ್ರೀಯ ಕಾನೂನಿಂದ ರಚಿತವಾದ ಎಲ್ಲಾ ಸಾರ್ವಜನಿಕ ಕಛೇರಿ ಹೊಂದುವ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಹಕ್ಕುಗಳಿವೆ. ವಿಧಿ (೪) ರಲ್ಲಿ ಒಳಗೊಂಡಂತೆ ಮಾತೃತ್ವಕ್ಕೆ ವಿಶೇಷ ರಕ್ಷಣೆಯನ್ನು ನೀಡುವ ಗುರಿಯನ್ನು ಹೆಚ್ಚಿಸುವ ಅಂಶಗಳು ಪುರುಷರು ಮತ್ತು ಮಹಿಳೆಯರ ನಡುವಿನ ತಾರತಮ್ಯವನ್ನು ಪ್ರತಿಬಿಂಬಿಸಲಾರದು. ವಿಧಿ (೭) ರನ್ವಯ ಮಹಿಳೆಯು ರಾಜಕೀಯ ಹಾಗೂ ಸಾರ್ವಜನಿಕ ಜೀವನದಲ್ಲಿ ಚುನಾವಣೆ, ಸರಕಾರ ಹಾಗೂ ಸರಕಾರೇತರ ಸಂಘಸಂಸ್ಥೆಗಳಲ್ಲಿ ಪಾಲ್ಗೊಳ್ಳಲು ಸಮಾನತೆಯನ್ನು ಹೊಂದಿರುವಳು. ವಿಧಿ (೮) ರಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರು ತಮ್ಮ ಸರಕಾರವನ್ನು ಪ್ರತಿನಿಧಿಸಲು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸಕಾರ್ಯಗಳಲ್ಲಿ ಪಾಲ್ಗೊಳ್ಳಲು ರಾಜ್ಯಗಳ ಪಕ್ಷಗಳು ಸಮಾನ ಅವಕಾಶಗಳನ್ನು ಖಾತರಿಪಡಿಸುತ್ತವೆ. (ಸತ್ಯವತಿ.ಎನ್.ಎಚ್, ೨೦೧೭)

ಮಹಿಳಾ ಸಶಕ್ತತೆಯ ಉದ್ದೇಶ ಸಾಧನೆಯ ದಿಸೆಯಲ್ಲಿ ಮಹಿಳೆಯರ ಹಕ್ಕುಗಳನ್ನು ರಕ್ಷಿಸಿ, ಅವರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡು ಹಿಡಿಯಲು ನಾಲ್ಕು ಮಹಿಳಾ ಸಮ್ಮೇಳನಗಳನ್ನು ೧೯೭೫ ರಿಂದ ೧೯೯೫ ರ ಅವಧಿಯಲ್ಲಿ ನಡೆಸಲಾಗಿದ್ದು, (ರಾಘವ್, ೨೦೦೮) ಈ ಆಯೋಗವು ಮಹಿಳೆಯರಿಗೆ ಸಂಬಂಧಿಸಿದಂತೆ ಮುಖ್ಯವಾಗಿ ಧರ್ಮ, ಭಾಷೆ, ಜನಾಂಗ, ರಾಷ್ಟ್ರೀಯತೆ, ಇವೆಲ್ಲವನ್ನು ಹೊರತು ಪಡಿಸಿ, ಎಲ್ಲಾ ಮಹಿಳೆಯರ ಸ್ಥಿತಿಗತಿಯನ್ನು ಉತ್ತಮಗೊಳಿಸುವಂತಹ ಅನೇಕ

ರೀತಿಯ ತೀರ್ಮಾನಗಳನ್ನು ಕೈಗೊಂಡಿತು. ವಿಶ್ವಸಂಸ್ಥೆಯು ಮಹಿಳಾ ಸಮಾವೇಶಗಳನ್ನು ಕೈಗೊಳ್ಳುವುದರ ಮೂಲಕವಾಗಿ ಮಹಿಳೆಯರ ಹಕ್ಕು, ಸಮಾನತೆ, ಮಹಿಳೆಯರ ವಿರುದ್ಧದ ತಾರತಮ್ಯ ಕೊನೆಗಾಣಿಸುವಿಕೆ, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇತ್ಯಾದಿಗಳನ್ನು ಸಾಧಿಸಲು ವಿವಿಧ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳ್ಳುವ ನಿಟ್ಟಿನಲ್ಲಿ ಸಮಾವೇಶಗಳು ಜಾರಿಗೆ ಬಂದವು. ಈ ಸಮಾವೇಶಗಳ ದಿಟ್ಟ ನಿರ್ಧಾರಗಳು ಮೊಟ್ಟ ಮೊದಲ ಬಾರಿಗೆ ಮಹಿಳೆಯರ ಸಮಸ್ಯೆಗಳ ಬಗ್ಗೆ ವಿಶ್ವದ ಗಮನ ಸೆಳೆದವು. ಅಂತರರಾಷ್ಟ್ರೀಯ ಮಟ್ಟದಲ್ಲಾದ ಈ ಚಟುವಟಿಕೆಗಳು ಆಯಾಯ ದೇಶಗಳಲ್ಲಿ ವಿವಿಧ ಕಾರ್ಯನೀತಿ, ಕಾರ್ಯತಂತ್ರಗಳ ಮುಖಾಂತರ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆಯಾಯಿತು. (ಜನೆಟ್ ಮಾಮ್‌ಸೆನ್ ಹೆನ್ಸಾಲ್, ೨೦೦೪).

೪.೫. ಭಾರತ ದೇಶದಲ್ಲಿ ಮಹಿಳಾ ಸಬಲೀಕರಣದ ಹೆಜ್ಜೆಗಳು

ಭಾರತ ದೇಶದಲ್ಲಿ ಮಹಿಳಾ ಅಭಿವೃದ್ಧಿಗಾಗಿ ಸಾಕಷ್ಟು ಪ್ರಯತ್ನಗಳು ನಡೆದಿವೆ. ಎಲ್ಲಾ ಕ್ಷೇತ್ರದಲ್ಲಿಯೂ ಸಮಾನತೆ ಸಾರುವ ಸಂವಿಧಾನಾತ್ಮಕ ಹಕ್ಕುಗಳು ಹಾಗೂ ಸಂವಿಧಾನದಲ್ಲಿಯೇ ವಿಶೇಷ ಸವಲತ್ತುಗಳನ್ನು ಒದಗಿಸಲಾಗಿದೆ. ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಹಾಗೂ ಕಾರ್ಯರೂಪಕ್ಕೆ ತರಲು ಮಸೂದೆಗಳಿವೆ. ಮಹಿಳೆಯರ ಮೇಲಾಗುವ ದೌರ್ಜನ್ಯ ಹಾಗೂ ತಾರತಮ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಹಿಳೆಯರಿಗಾಗಿಯೇ ವಿಶೇಷ ಕಾಯಿದೆ, ಕಾನೂನುಗಳನ್ನು ಮಾಡಲಾಗಿದೆ. ಮಹಿಳಾ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಿಳೆಯರ ಸಶಕ್ತೀಕರಣ ಮಾಡಲಾಗುತ್ತಿದೆ. ಮಹಿಳೆಯರ ಅಭಿವೃದ್ಧಿಗಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ಪ್ರಾರಂಭಿಸಿ ಇದರಡಿ ಸಮಗ್ರ ಮಹಿಳೆಯರ ಸಶಕ್ತೀಕರಣಕ್ಕಾಗಿ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಮಹಿಳಾ ಆಯೋಗಗಳ ಮೂಲಕ ಮಹಿಳೆಯರ ಕಾನೂನು ಹಾಗೂ ಸಂವಿಧಾನಾತ್ಮಕ ಹಕ್ಕುಗಳನ್ನು ರಕ್ಷಿಸಲಾಗುತ್ತಿದೆ. ಸಾರ್ವಜನಿಕವಾಗಿ ಸರ್ಕಾರಿ ಉದ್ಯೋಗ ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಕೊಡಲಾಗಿದೆ. ಮಹಿಳೆಯರನ್ನು ಸಂಘಟಿಸಿ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಿದೆ. ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ನಿಟ್ಟಿನಲ್ಲಿ ಸೂಕ್ತ ತರಬೇತಿಗಳೊಂದಿಗೆ ಹಣಕಾಸು ನೆರವು ನೀಡಲಾಗುತ್ತಿದೆ. ಹಾಗೆಯೇ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಯೋಜನೆ, ಕಾರ್ಯತಂತ್ರಗಳನ್ನು ಪಂಚವಾರ್ಷಿಕ ಯೋಜನೆಗಳು ರೂಪಿಸಿವೆ. (ಸರಸ್ವತಿ ರಾಜು, ೨೦೦೬).

೪.೬. ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳಾಪರ ಕಾಳಜಿಗಳು

ಅಭಿವೃದ್ಧಿ ಯೋಜನೆಯಲ್ಲಿ ಮಹಿಳಾ ದೃಷ್ಟಿಕೋನ ತರಲು, ಗಂಭೀರ ಪ್ರಯತ್ನಗಳನ್ನು ಮಾಡಿದ ದೇಶಗಳಲ್ಲಿ ಭಾರತ ಪ್ರಪ್ರಥಮ ರಾಷ್ಟ್ರವಾಗಿದೆ. ಮಹಿಳಾ ಸಬಲೀಕರಣದ ದಿಟ್ಟ ಹೆಜ್ಜೆಗಳಲ್ಲಿ ದೇಶದ ಪಂಚವಾರ್ಷಿಕ ಯೋಜನೆಗಳಿಗೆ ತನ್ನದೇ ಆದ ಪ್ರಾಶಸ್ತ್ಯವಿದೆ. ಪಂಚವಾರ್ಷಿಕ ಯೋಜನೆಗಳು

ದೇಶದ ಬೆನ್ನೆಲುಬು ಇದ್ದಂತೆ. ದೇಶದ ಅಭಿವೃದ್ಧಿಯು ಆ ದೇಶ ಕೈಗೊಳ್ಳುವ ಯೋಜನೆಗಳಲ್ಲಿ ಅಡಗಿವೆ. ದೇಶದ ಅಭಿವೃದ್ಧಿಗೆ ಅನೇಕ ರೀತಿಯ ಕಲ್ಯಾಣ ಕ್ರಮಗಳನ್ನು ಕೈಗೊಳ್ಳಲಾಯಿತು. ಈ ಕಲ್ಯಾಣ ಕಾರ್ಯಕ್ರಮಗಳ ಒಟ್ಟಾರೆ ಮೌಲ್ಯಮಾಪನ ಕೈಗೊಂಡಾಗ ಯೋಜನೆಗಳು ನಿಗದಿತ ಗುರಿಯನ್ನು ತಲುಪದೇ ಇರುವುದು ಗೋಚರವಾಗಿ ಕಾರಣಗಳನ್ನು ಹುಡುಕ ಹೊರಟಾಗ ದೇಶದ ಅರ್ಧದಷ್ಟಿರುವ ಮಹಿಳೆಯರ ಕಡೆಗಣನೆ ಕಂಡು ಬರಲು, ಪ್ರತ್ಯುತ್ತರವಾಗಿ ಮಹಿಳೆ ಈ ಯೋಜನೆಗಳ ಮುಖ್ಯ ರೂವಾರಿಯಾದಲ್ಲಿ ನಿಗದಿತ ಗುರಿ ಸಾಧಿಸಬಹುದು ಎಂಬ ಅಂಶದನ್ವಯ ಮಹಿಳೆಯನ್ನು ಸಹ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಸೇರಿಸುವ ಪ್ರಯತ್ನ ಈ ಪಂಚವಾರ್ಷಿಕ ಯೋಜನೆಗಳ ಮೂಲಕ ನಡೆಯಿತು. (ದೇವಕಿ ಜೈನ್, ೨೦೦೬)

೪.೬.೧ ಪ್ರಥಮ ಪಂಚವಾರ್ಷಿಕ ಯೋಜನೆ (೧೯೫೧-೫೬)

ನಿರ್ಗತಿಕ ವಿಧವಾ ಮಹಿಳೆಯರಿಗೆ ಕರಕುಶಲ ಹ್ಯಾಂಡ್‌ಲೂಮ್ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮಹಿಳಾ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ಕೊಡಲಾಯಿತು. ಈ ಯೋಜನೆಯು ಮಹಿಳೆಯರ ಸ್ವಾವಲಂಬನೆ ಮತ್ತು ಸಂತೃಪ್ತಿಯ ಮೇಲೆ ಕೇಂದ್ರಿಕರಿಸಿದೆ. (ಇಂದಿರಾ ರಾಜರಾಮ್, ೨೦೦೭)

೪.೬.೨ ಎರಡನೆ ಪಂಚವಾರ್ಷಿಕ ಯೋಜನೆ (೧೯೫೬-೬೧)

ಮಹಿಳಾ ಮಂಡಳಿಗಳನ್ನು ಸ್ಥಾಪಿಸುವುದರ ಮೂಲಕ ಮಹಿಳಾ ಸಂಘಟನಾ ಕಾರ್ಯವನ್ನು ಹಮ್ಮಿಕೊಂಡು ಅವುಗಳ ಮುಖೇನ ಹೊಲಿಗೆ, ಎಂಬ್ರಾಯಿಡರಿ, ಗೃಹ ನಿರ್ವಹಣೆ, ಮಕ್ಕಳ ಪಾಲನೆ, ತೋಟಗಾರಿಕೆಗಳಲ್ಲಿ ತರಬೇತಿ ಇತ್ಯಾದಿಗಳನ್ನು ಮಹಿಳೆಯರು ನಿರ್ವಹಿಸುವ ದ್ವಿಪಾತ್ರವನ್ನು ಅಂದರೆ ತಾಯಿ ಹಾಗೂ ಗೃಹಿಣಿಯಾಗಿ ನಿರ್ವಹಿಸುವ ಪಾತ್ರಕ್ಕೆ ಪೂರಕವಾಗಿ ತರಬೇತಿಗಳನ್ನು ನೀಡುವ ಪ್ರಯತ್ನ ಮಾಡಲಾಯಿತು.

೪.೬.೩ ಮೂರು (೧೯೬೧-೬೬) ಮತ್ತು ನಾಲ್ಕನೇ (೧೯೬೯-೭೪) ಪಂಚವಾರ್ಷಿಕ ಯೋಜನೆಗಳು

ಮಹಿಳಾ ಶಿಕ್ಷಣಕ್ಕೆ ಆದ್ಯತೆ, ಗರ್ಭಿಣಿಯರಿಗೆ, ಹಾಲುಣಿಸುವ ತಾಯಂದಿರಿಗೆ ಹಾಗೂ ಮಕ್ಕಳಿಗೆ ಪೌಷ್ಠಿಕ ಆಹಾರ ನೀಡುವ ಯೋಜನೆಯನ್ನು ಮೂರು ಮತ್ತು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಿಸಿತು.

೪.೮.೪ ಐದನೇ ಪಂಚವಾರ್ಷಿಕ ಯೋಜನೆ (೧೯೭೪-೭೮)

ಈ ಯೋಜನೆಯಲ್ಲಿ ಮಹಿಳಾ ಕಲ್ಯಾಣ ಯೋಜನೆಗಳನ್ನು ಮಾರ್ಪಡಿಸಿ ಮಹಿಳಾಭಿವೃದ್ಧಿ ಯನ್ನು ಸಾಧಿಸುವ ಪ್ರಯತ್ನ ಮಾಡಲಾಯಿತು. 'ಸಮಗ್ರ ಬಾಲವಿಕಾಸ' ಯೋಜನೆಯನ್ನು ಜಾರಿ ಗೊಳಿಸಿ ಮುಖ್ಯವಾಗಿ ಗ್ರಾಮೀಣ ಮಟ್ಟದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯಕ್ಕೆ ಆದ್ಯತೆಯನ್ನು ನೀಡಿತು.

೪.೬.೫ ಆರನೇ ಪಂಚವಾರ್ಷಿಕ ಯೋಜನೆ (೧೯೮೦-೮೫)

ಈ ಯೋಜನೆಯಲ್ಲಿ 'ಮಹಿಳಾ ಅಭಿವೃದ್ಧಿ' ಎಂಬ ಪ್ರತ್ಯೇಕ ಅಧ್ಯಯನವನ್ನು ಸೇರಿಸುವ ಮೂಲಕ ಮಹಿಳಾ ಅಭಿವೃದ್ಧಿಗೆ ಮುಖ್ಯವಾಗಿ ಮಹಿಳೆಯರ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗಕ್ಕೆ ಆದ್ಯತೆ ನೀಡುವ ಬಹುಮುಖಿ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ೧೯೮೫ ರಲ್ಲಿ 'ಡ್ವಾಕ್ರಾ ಯೋಜನೆ'ಯನ್ನು ಗ್ರಾಮೀಣ ಮಹಿಳೆಯರ ಅಭಿವೃದ್ಧಿಗಾಗಿ ಜಾರಿಗೊಳಿಸಿತು. ಕೇಂದ್ರ ಸರ್ಕಾರ ೧೯೮೫ ರಲ್ಲಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಪ್ರತ್ಯೇಕ ಸಚಿವಾಲಯವನ್ನು ಆರಂಭಿಸಿತು. (ಸುಸಾನೆ ಸ್ಕಾಹೆಚ್ ಮತ್ತು ಹಗ್ಗೀಸ್ ಜೇನ್, ೨೦೦೦)

೪.೬.೬ ಏಳನೇ ಪಂಚವಾರ್ಷಿಕ ಯೋಜನೆ (೧೯೮೫-೯೦)

ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನವನ್ನು ಉತ್ತಮಪಡಿಸಿ ಮಹಿಳೆಯರನ್ನು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮುಖ್ಯವಾಹಿನಿಗೆ ತರುವ ಪ್ರಯತ್ನಗಳನ್ನು ನಡೆಸಲಾಯಿತು ಈ ನಿಟ್ಟಿನಲ್ಲಿ ಮಹಿಳೆ ಮತ್ತು ಶಿಶು ಅಭಿವೃದ್ಧಿ ಇಲಾಖೆಯಡಿ ೨೭ ಅಭಿವೃದ್ಧಿ ಯೋಜನೆಗಳನ್ನು ಪರಿಚಯಿಸಿತು. ೧೯೯೦ ರಲ್ಲಿ 'ರಾಷ್ಟ್ರೀಯ ಮಹಿಳಾ ಆಯೋಗ'ವನ್ನು ಪ್ರಾರಂಭಿಸಿತು.

೪.೬.೭ ಎಂಟನೇ ಪಂಚವಾರ್ಷಿಕ ಯೋಜನೆ (೧೯೯೨-೯೭)

ಈ ಯೋಜನೆಯಲ್ಲಿ ಮಹಿಳೆಯರನ್ನು ಕಲ್ಯಾಣ ಕ್ರಮಗಳಲ್ಲಿನ ಫಲಾನುಭವಿಗಳನ್ನಾಗಿ ಮಾತ್ರ ನೋಡದೇ ಅವರನ್ನು ಅಭಿವೃದ್ಧಿ ಪ್ರಕ್ರಿಯೆಯ ಸಮಾನ ಪಾಲುದಾರರಾಗಿ ಭಾಗವಹಿಸುವಂತೆ ಮಾಡಲಾಯಿತು. ಎಂಟನೇ ಯೋಜನೆ ಪ್ರಥಮ ಬಾರಿಗೆ, ಲಿಂಗ ದೃಷ್ಟಿಕೋನದ ಮೇಲೆ ಬೆಳಕು ಚೆಲ್ಲಿತು. ಮತ್ತು ಮಹಿಳೆಯರಿಗೆ ಸಾಮಾನ್ಯ ಅಭಿವೃದ್ಧಿ ವಿಭಾಗಗಳಿಂದ ಖಚಿತ ಹಣದ ಹರಿವನ್ನು ಖಾತ್ರಿಗೊಳಿಸಿತು. ೧೯೯೩ ರಲ್ಲಿ 'ರಾಷ್ಟ್ರೀಯ ಮಹಿಳಾ ಕೋಶ'ವನ್ನು ಮಹಿಳೆಯರ ಅವಶ್ಯಕತೆಗಾಗಿ ಆರಂಭಿಸಿತು.

೪.೬.೮ ಒಂಬತ್ತನೇ ಪಂಚವಾರ್ಷಿಕ ಯೋಜನೆ(೧೯೯೭-೨೦೦೨)

ಈ ಯೋಜನೆಯಲ್ಲಿ 'ಮಹಿಳಾ ಸಶಕ್ತತೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದಕ್ಕಾಗಿ ೨೦೦೧ ರಲ್ಲಿ ರಾಷ್ಟ್ರೀಯ ಮಹಿಳಾ ನೀತಿಯನ್ನು ರೂಪಿಸಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀಯರು ಭಾಗವಹಿಸುವ ಮತ್ತು ತೀರ್ಮಾನ ತೆಗೆದುಕೊಳ್ಳುವಲ್ಲಿ ಸಮಾನತೆಯನ್ನು ಸಾಧಿಸುವುದು; ಶಿಕ್ಷಣ, ಆರೋಗ್ಯ, ರಕ್ಷಣೆ ಮತ್ತು ಸಾರ್ವಜನಿಕ ಹುದ್ದೆ ಹೊಂದುವಲ್ಲಿ ಸಮಾನಾವಕಾಶ ನೀಡುವುದು, ಮೂಢನಂಬಿಕೆಗಳ ನಿರ್ಮೂಲನೆ ಮಾಡಿ ವೈಜ್ಞಾನಿಕ ಮನೋಭಾವ ಮೂಡಿಸುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಮಹಿಳೆಯರನ್ನು ಗುರುತಿಸುವುದು, ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯವನ್ನು ಹತ್ತಿಕ್ಕುವುದು, ಮಹಿಳಾ ಸಂಘಟನೆಗಳಿಗೆ ನಾಗರಿಕ ಸಮಾಜ ರಚನೆ ಮತ್ತು ಕಾಯ್ದೆ ರಚನೆ ನಿರೂಪಣೆಯಲ್ಲಿ ಸಕ್ರಿಯ ಪಾಲುಗಾರರನ್ನಾಗಿ ಮಾಡುವ ಅವಕಾಶ ನೀಡುವುದು, ಆಸ್ತಿ

ಹಕ್ಕಿನಲ್ಲಿ ಮಹಿಳೆಯರಿಗೆ ಸಹಭಾಗಿತ್ವ ನೀಡುವುದೇ ಆಗಿತ್ತು. 'ಸ್ತ್ರೀ ಸಬಲೀಕರಣ'ವನ್ನು ಸಾಮಾಜಿಕ ಪರಿವರ್ತನೆ ಮತ್ತು ಅಭಿವೃದ್ಧಿಯ ಒಂದು ಮುಖ್ಯ ಸಾಧನವೆಂದೇ ಪರಿಗಣಿಸಿ ಈ ಯೋಜನೆಯಲ್ಲಿ ಪ್ರಥಮ ಆದ್ಯತೆಯ ವಿಷಯವನ್ನಾಗಿ ಅಳವಡಿಸಲಾಯಿತು.

ಮಹಿಳಾ ಸಂಬಂಧಿತ ಕ್ಷೇತ್ರಗಳಿಗೆ ಶೇಕಡಾ ೩೦ ರಷ್ಟು ಹಣ ಮೀಸಲಿಡುವ ಸಲುವಾಗಿ ರಾಜ್ಯ ಮತ್ತು ಕೇಂದ್ರಗಳಲ್ಲಿ 'ಮಹಿಳಾ ಘಟಕ ಯೋಜನೆ'ಯನ್ನು ಆರಂಭಿಸಲಾಯಿತು. ೧೯೯೮ ರಲ್ಲಿ 'ವಿಶೇಷ ಕಾರ್ಯಯೋಜನೆ' ಅನ್ವಯ ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ಮತ್ತು ಅವಕಾಶಗಳನ್ನು ನೀಡುವುದು. ಶೈಕ್ಷಣಿಕ ಕ್ಷೇತ್ರಗಳಲ್ಲಿನ ಲಿಂಗ ತಾರತಮ್ಯವನ್ನು ತೊಡೆದು ಹಾಕುವ ಕಾರ್ಯಕ್ರಮಗಳಿಗೆ ಚಾಲನೆಯನ್ನು ನೀಡಲಾಯಿತು. ಹೆಣ್ಣುಮಕ್ಕಳಿಗೆ ವೃತ್ತಿಪರ ಶಿಕ್ಷಣ ಸೇರಿದಂತೆ ಉನ್ನತ ವಿದ್ಯಾಭ್ಯಾಸವನ್ನು ಉಚಿತವಾಗಿ ದೊರೆಯುವ ಯೋಜನೆಗಳನ್ನು ರೂಪಿಸಲಾಯಿತು. (ದೇವಕಿ ಜೈನ್, ೨೦೦೬)

ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಪ್ರಯುಕ್ತ ಮಹಿಳಾ ಉದ್ಯಮಿಗಳಿಗಾಗಿ ಅಭಿವೃದ್ಧಿ ಬ್ಯಾಂಕ್‌ನ್ನು ತೆರೆಯಲಾಯಿತು. ಮಹಿಳಾ ಸಬಲೀಕರಣ ಹಾಗೂ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸಿದ ಐದು ಜನ ಮಹಿಳೆಯರಿಗೆ ಪ್ರತಿವರ್ಷ 'ಸ್ತ್ರೀ ಶಕ್ತಿ ಪುರಸ್ಕಾರ' ಕೊಡುವ ಯೋಜನೆಯನ್ನು ಪ್ರಾರಂಭಿಸಲಾಯಿತು. 'ಸ್ವಾಧಾರ' ಕೇಂದ್ರಗಳನ್ನು ಸಂಕಷ್ಟಕ್ಕೊಳಗಾದ ಮಹಿಳೆಯರ ಪುನರ್ ವಸತಿಗಾಗಿ ಸ್ಥಾಪಿಸಲಾಯಿತು. ೨೦೦೨ ರಲ್ಲಿ ಕೌಟುಂಬಿಕ ನಿಷೇಧ ಕಾಯಿದೆಯನ್ನು ಜಾರಿಗೊಳಿಸಲಾಯಿತು.

೪.೬.೯ ಹತ್ತನೇ ಪಂಚವಾರ್ಷಿಕ ಯೋಜನೆ (೨೦೦೨–೨೦೦೭):

ಮಹಿಳಾ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗಕ್ಕೆ ಹೆಚ್ಚಿನ ಒತ್ತು ನೀಡಲಾಯಿತು. ಈ ಯೋಜನೆಯಲ್ಲಿ ಮಹಿಳೆಯರನ್ನು ಸಮಾಜೋ–ಆರ್ಥಿಕ ಬದಲಾವಣೆ ಮತ್ತು ಅಭಿವೃದ್ಧಿಯ ನಿಯೋಗಿಯಾಗಿ ಬಲವರ್ಧಿಸುವ ಕ್ರಮಗಳನ್ನು ಜಾರಿಗೆ ತಂದಿವೆ. ಈ ಯೋಜನೆಯ ಕಾಲ ಘಟ್ಟಗಳಲ್ಲಿ ಲಿಂಗ ಅಸಮಾನತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದವು.

೪.೬.೧೦ ಹನ್ನೊಂದನೇ ಪಂಚವಾರ್ಷಿಕ ಯೋಜನೆ (೨೦೦೭–೨೦೧೨)

ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರ ಮರಣ ದರವನ್ನು ಕಡಿಮೆ ಮಾಡುವ ಮೂಲಕ ಲಿಂಗಾನುಪಾತವನ್ನು ಸರಿದೂಗಿಸುವ ಹಾಗೂ ಲಿಂಗ ತಾರತಮ್ಯ ದೌರ್ಜನ್ಯಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದವು. ಈ ಯೋಜನೆಯಲ್ಲಿ ಸರಕಾರವು ಸ್ತ್ರೀವಾದಿಗಳು ಹಾಗೂ ಅರ್ಥಶಾಸ್ತ್ರಜ್ಞರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಿ ಸಾರ್ವಜನಿಕ ಸಂಪನ್ಮೂಲಗಳನ್ನು ಲಿಂಗ ಸೂಕ್ಷ್ಮ ಹಂಚುವಿಕೆಯನ್ನು ನಿಶ್ಚಿತಗೊಳಿಸಿತು. (ಯೋಗರಾಜು ಎಸ್.ಡಿ, ೨೦೧೩).

ಒಟ್ಟಾರೆಯಾಗಿ ಮಹಿಳಾಭಿವೃದ್ಧಿಯಲ್ಲಿ ಪಂಚವಾರ್ಷಿಕ ಯೋಜನೆಗಳ ಪಾತ್ರವು ಸಹ ತುಂಬಾ ಮಹತ್ವವಾದುದಾಗಿದೆ. ಪ್ರಾರಂಭದ ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳಾ ಪರ ಕಾಳಜಿ

ಕಂಡುಬರದಿದ್ದರೂ ಆರನೇ ಪಂಚವಾರ್ಷಿಕ ಯೋಜನೆಯಿಂದ ಮಹಿಳಾಭಿವೃದ್ಧಿ ಎಂಬ ಪ್ರತ್ಯೇಕ ಅಧ್ಯಯನವನ್ನು ಸೇರಿಸುವುದರ ಮೂಲಕ ಮಹಿಳಾ ವಿಷಯಗಳು ಪ್ರಾಮುಖ್ಯತೆಯನ್ನು ಪಡೆದು ಕೊಂಡವು. ಒಂಭತ್ತನೇ ಪಂಚವಾರ್ಷಿಕ ಯೋಜನೆಯಿಂದ ಹಿಡಿದು ಮುಂದಿನ ಯೋಜನೆಗಳಲ್ಲಿ ಸಮಗ್ರ ಮಹಿಳೆಯರ ಸಬಲೀಕರಣದ ದೃಷ್ಟಿಯಿಂದ ಕಾರ್ಯಕ್ರಮ ಹಾಗೂ ಯೋಜನೆಗಳು ರೂಪುಗೊಳ್ಳುವುದರ ಮೂಲಕ ಮಹಿಳಾಭಿವೃದ್ಧಿಯ ಹೊಸ ಹಾದಿ ತೆರೆದು ಕೊಂಡಿತು.

೪.೭ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರಕಾರದ ಯೋಜನೆಗಳು

ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿ ಕರ್ನಾಟಕ ಸರಕಾರವು ಪೂರ್ಣವಾಗಿ ಹಾಗೂ ಕೇಂದ್ರ ಸರಕಾರದ ಸಹಭಾಗಿತ್ವದಲ್ಲಿ ಕಾಲಕಾಲಕ್ಕೆ ಹಲವು ಯೋಜನೆಗಳನ್ನು ರೂಪಿಸಿದ್ದು ಅದರ ಪರಿಚಯವನ್ನು ಈ ಭಾಗದಲ್ಲಿ ನೀಡಲಾಗಿದೆ.

೪.೭.೧ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ

ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನಾ ಘಟಕವನ್ನು ನಿರ್ಮಿಸಿ ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ನಿಧಿಯನ್ನು ಸ್ಥಾಪಿಸಿ ಅಂತರವಲಯ ಹಂಚಿಕೆ ಮಾಡುವ ಯೋಜನೆಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ದಿನಾಂಕ ೦೩-೦೫-೨೦೦೩ ರಂದು ಜಾರಿಗೆ ತರಲಾಗಿದೆ. ಸರ್ಕಾರದ ವಿವಿಧ ಇಲಾಖೆಗಳ ಎಲ್ಲಾ ಫಲಾನುಭವಿಯಾಧಾರಿತ ಯೋಜನೆಗಳಲ್ಲಿ ಹಾಗೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಕಾರ್ಯಕ್ರಮಗಳಿಗೆ ಒದಗಿಸುವ ಸಂಪನ್ಮೂಲಗಳಲ್ಲಿ ೧/೩ ಭಾಗವನ್ನು ಮಹಿಳೆಯರಿಗೆ ಮೀಸಲಿಡುವುದೇ ಈ ಯೋಜನೆಯ ಉದ್ದೇಶವಾಗಿರುತ್ತದೆ. (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು)

೪.೭.೨ ಸ್ತ್ರೀ ಶಕ್ತಿ ಯೋಜನೆ

ಸ್ತ್ರೀ ಶಕ್ತಿ ಯೋಜನೆಯನ್ನು ಗ್ರಾಮೀಣ ಮಹಿಳೆಯರ ಸಬಲೀಕರಣ ಹಾಗೂ ಸ್ವಾವಲಂಬಿ ಗಳನ್ನಾಗಿಸುವ ಮುಖ್ಯ ಗುರಿಯನ್ನಾಗಿರಿಸಿಕೊಂಡು ದಿನಾಂಕ ೧೮-೧೦-೨೦೦೦ ರಂದು ಅನುಷ್ಠಾನಗೊಳಿಸಲಾಗಿದೆ. ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಮಹಿಳೆಯರನ್ನು ಸಂಘಟಿಸುವುದರ ಮುಖಾಂತರ ಅವರಲ್ಲಿ ಆತ್ಮವಿಶ್ವಾಸ, ಸ್ವಾವಲಂಬನೆ ಮೂಡಿಸಿ ಸಂಪನ್ಮೂಲಗಳ ಹತೋಟಿ, ಸಂಪನ್ಮೂಲಗಳಿಗೆ ದಾರಿ ಮತ್ತು ಹಿಡಿತ ಸಾಧಿಸುವಂತೆ ಮಾಡುವ ಉದ್ದೇಶದಿಂದ ಸ್ತ್ರೀ ಶಕ್ತಿ ಯೋಜನೆ ರೂಪುಗೊಂಡಿದೆ. ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನು ತೊಡಗಿಸುವುದರ ಮೂಲಕ ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ ಅವರಲ್ಲಿ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು ತನ್ಮೂಲಕ ಬಡತನ ನಿವಾರಣೆ ಮಾಡುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಸೇವೆಗಳನ್ನು ಒಮ್ಮುಖಗೊಳಿಸುವುದರ ಮೂಲಕ ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ ಅವರಲ್ಲಿ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು ತನ್ಮೂಲಕ ಬಡತನ ನಿವಾರಣೆ ಮಾಡುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ

ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಸೌಲಭ್ಯ ದೊರೆಯುವಂತೆ ಅವಕಾಶ ಕಲ್ಪಿಸುವುದು ಹಾಗೂ ಸಾಲ ನೀಡುವಂತಹ ಸಂಸ್ಥೆಗಳೊಡನೆ ಸಂಪರ್ಕ ಕಲ್ಪಿಸಿ ಈ ಮಹಿಳೆಯರಿಗೆ ಸಾಲ ದೊರೆಯುವಂತೆ ಕ್ರಮ ಕೈಗೊಳ್ಳುವುದು ಈ ಯೋಜನೆಯ ಉದ್ದೇಶವಾಗಿದೆ.

ಸ್ತ್ರೀ ಶಕ್ತಿ ಗುಂಪುಗಳು ಉಳಿತಾಯ ಮನೋಭಾವನೆ ಬೆಳೆಸಲು ಸರ್ಕಾರವು ಹೆಚ್ಚು ಉಳಿತಾಯ ಮಾಡುವ ಗಂಪುಗಳಿಗೆ ಪ್ರೋತ್ಸಾಹ ಧನವನ್ನು ನಗದು ರೂಪದಲ್ಲಿ ನೀಡುತ್ತದೆ. ೭೫,೦೦೦/- ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿವರೆಗಿನ ಉಳಿತಾಯಕ್ಕೆ ೧೫,೦೦೦/ ರೂಪಾಯಿಗಳ ಪ್ರೋತ್ಸಾಹಧನ ನೀಡಲಾಗುತ್ತದೆ. ಒಂದು ಲಕ್ಷ ರೂಪಾಯಿಗೂ ಮೇಲ್ಪಟ್ಟ ಉಳಿತಾಯಕ್ಕೆ ೨೦,೦೦೦/- ರೂಪಾಯಿಗಳ ಪ್ರೋತ್ಸಾಹ ಧನ ನೀಡಲಾಗುತ್ತದೆ. ಸ್ತ್ರೀ ಶಕ್ತಿ ಗುಂಪುಗಳು ಆರ್ಥಿಕವಾಗಿ ಸಬಲತೆ ಹೊಂದುವ ನಿಟ್ಟಿನಲ್ಲಿ ಬ್ಯಾಂಕ್ ಸಂಪರ್ಕದೊಂದಿಗೆ ಆದಾಯೋತ್ಪನ್ನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅನುವು ಮಾಡುವುದಲ್ಲದೇ ಈ ಬಗ್ಗೆ ಕೌಶಲ ತರಬೇತಿಯನ್ನು ಸಹ ನೀಡುತ್ತದೆ. ಈ ಗುಂಪುಗಳಿಗೆ ನೇಯ್ಗೆ, ಸಿದ್ಧ ಉಡುಪುಗಳ ಮಾರಾಟ, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ತಯಾರಿಕೆ, ಕಿರಾಣಿ ಅಂಗಡಿ, ಎರೆಹುಳ ಗೊಬ್ಬರ ತಯಾರಿಕೆ, ಹಸು, ಕುರಿ, ಕೋಳಿ ಸಾಕಾಣಿಕೆ ಇತ್ಯಾದಿ ಕುರಿತು ತರಬೇತಿಗಳನ್ನು ನೀಡುತ್ತದೆ. ಅಷ್ಟೇ ಅಲ್ಲದೆ, ಸ್ತ್ರೀ ಶಕ್ತಿ ಯೋಜನೆಯಡಿ ರಚಿಸಲಾಗುವ ಗುಂಪುಗಳಿಗೆ ಯೋಜನೆ ಬಗ್ಗೆ ಮಾಹಿತಿ ನೀಡುವ ತರಬೇತಿಯಲ್ಲದೆ ಗುಂಪುಗಳಿಗೆ ಪುಸ್ತಕ ನಿರ್ವಹಣೆ, ಸಾಲ ನಿರ್ವಹಣೆ ಹಾಗೂ ಸಾಮಾಜಿಕ ವಿಷಯಗಳ ತರಬೇತಿಯನ್ನು ನೀಡುತ್ತದೆ

ಸರ್ಕಾರದ ಇತರೆ ಇಲಾಖೆಗಳಲ್ಲಿಯೂ ಮಹಿಳೆಯರಿಗೆ ಲಭ್ಯವಾಗುವಂತಹ ಇನ್ನಿತರ ಸೌಲಭ್ಯಗಳನ್ನು ಈ ಗುಂಪುಗಳಿಗೆ ಒದಗಿಸಲಾಗಿದೆ. ಅದರಲ್ಲಿ ಮುಖ್ಯವಾಗಿ,

- ಪಶು ಸಂಗೋಪನಾ ಇಲಾಖೆಯಿಂದ ಗಿರಿರಾಜ ಕೋಳಿ ತಳಿಗಳನ್ನು ಖರೀದಿಸಿ ಕೋಳಿ ಸಾಕಾಣಿಕೆ ಪ್ರೋತ್ಸಾಹಿಸುವುದು.
- ರಾಷ್ಟ್ರೀಯ ಹಿಂದುಳಿದ ನಿಗಮ ವತಿಯಿಂದ ನ್ಯೂ ಪೂರ್ಣಿಮಾ ಯೋಜನೆಯಡಿ ಸಾಲ ಸೌಲಭ್ಯ ನೀಡುವುದು.
- ರಾಜೀವ್ ಗಾಂಧಿ ವಸತಿ ನಿಮಗದಿಂದ ಮಹಿಳೆಯರಿಗೆ ಕಟ್ಟಡ ನಿರ್ಮಾಣ ಕುರಿತು ನಿರ್ಮಿತಿ ಕೇಂದ್ರದಿಂದ ತರಬೇತಿ ನೀಡುವುದು.
- ಶಿಕ್ಷಣ ಇಲಾಖೆಯಿಂದ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಸ್ತ್ರೀ ಶಕ್ತಿ ಗುಂಪುಗಳನ್ನು ತೊಡಗಿಸುವುದು.
- ಸ್ತ್ರೀ ಶಕ್ತಿ ಸಮೃದ್ಧಿ ಯೋಜನೆಯಡಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟಗಳನ್ನು ರಚಿಸಿ ನೋಂದಾಯಿಸುವುದು.
- ಸ್ತ್ರೀ ಶಕ್ತಿ ಕೌಶಲ್ಯ ಯೋಜನೆಯನ್ನು ಜಾರಿಗೆ ತರುವುದು.

೪.೭.೩ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮಗಳು

ಸಮಗ್ರ ಬಾಲ ವಿಕಾಸ ಯೋಜನೆಯಡಿ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದ್ದು, ಆರು ವರ್ಷದೊಳಗಿನ ಮಕ್ಕಳು, ಗರ್ಭಿಣಿ ಮತ್ತು ಬಾಣಂತಿಯರ ಪೌಷ್ಟಿಕ ಮಟ್ಟವನ್ನು ಸುಧಾರಿಸುವುದು ಹಾಗೂ ಈ ವರ್ಗಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಪೌಷ್ಟಿಕತೆಯನ್ನು ಹೋಗಲಾಡಿಸುವುದು ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯ ಪೂರ್ಣವೆಚ್ಚದ ಅರ್ಧಭಾಗವನ್ನು ಕೇಂದ್ರ ಸರ್ಕಾರ ಉಳಿದ ಅರ್ಧ ಭಾಗವನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಈ ಯೋಜನೆಯಲ್ಲಿ ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಆರು ತಿಂಗಳುಗಳಿಂದ ಆರು ವರ್ಷದ ಮಕ್ಕಳು, ಗರ್ಭಿಣಿಯರು, ಬಾಣಂತಿಯರು ಮತ್ತು ೧೧ ರಿಂದ ೧೬ ವರ್ಷದ ಆಯ್ದ ಜಿಲ್ಲೆಯ ಕಿಶೋರಿಯರಿಗೆ ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತದೆ.

೪.೭.೪ ರಾಷ್ಟ್ರೀಯ ಕುಟುಂಬ ನೆರವು ಯೋಜನೆ

ಈ ಯೋಜನೆಯು ಸಹ ವಿಧವೆಯರಿಗೆ ಸಂಬಂಧಿಸಿದ್ದಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಇದರ ಅನ್ವಯ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬದ ಮುಖ್ಯಸ್ಥನ ಮರಣವಾದಲ್ಲಿ ೨೦,೦೦೦ ರೂಪಾಯಿ ಸಹಾಯ ಧನ ನೀಡಲಾಗುವುದು. ಕುಟುಂಬದ ಮುಖ್ಯಸ್ಥನ ವಯಸ್ಸು ಮರಣದ ಸಂದರ್ಭದಲ್ಲಿ ೧೮ ರಿಂದ ೬೫ ಕ್ಕಿಂತ ಕಡಿಮೆ ಇರಬೇಕು. ನಿಗದಿತ ಅರ್ಜಿಯೊಂದಿಗೆ ವಾಸಸ್ಥಳ ಪ್ರಮಾಣ ಪತ್ರ, ಮರಣ ಪ್ರಮಾಣ ಪತ್ರ ಹಾಗೂ ಪಡಿತರ ಚೀಟಿಯೊಂದಿಗೆ ಸಂಬಂಧಿಸಿದ ತಾಲೂಕು ತಹಸಿಲ್ದಾರರಿಗೆ ಸಲ್ಲಿಸಬೇಕು. ಪತಿ ಮರಣವಾದ ಒಂದು ವರ್ಷದೊಳಗಾಗಿ ಪ್ರಕ್ರಿಯೆ ಮಾಡಿಕೊಳ್ಳುವುದು ಕಡ್ಡಾಯ.

೪.೭.೫ ನಿರ್ಗತಿಕ ವಿಧವಾ ವೇತನ ಯೋಜನೆ

ನಿರ್ಗತಿಕ ವಿಧವಾ ವೇತನ ಯೋಜನೆಯು ಕೇಂದ್ರ ಹಾಗೂ ರಾಜ್ಯ ಸರಕಾರದ ಸಹಯೋಗದೊಂದಿಗೆ ೧೯೮೩ ಏಪ್ರಿಲ್ ೧ ರಿಂದ ಜಾರಿಗೆ ಬಂದಿದೆ. ಈ ವಿಧವಾ ವೇತನದ ಮೊತ್ತ ತಿಂಗಳಿಗೆ ರೂಪಾಯಿ ೫೦೦. ವಿಧವಾ ವೇತನ ಸೌಲಭ್ಯ ಪಡೆಯಲು ಪತಿಯ ಮರಣ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣ ಪತ್ರ, ಆದಾಯ ಪ್ರಮಾಣ ಪತ್ರ, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿಯಾದರೆ ರೂ. ೧೨,೦೦೦ ದೊಳಗಾಗಿದ್ದು, ನಗರ ಪ್ರದೇಶಗಳಲ್ಲಿ ೧೭,೦೦೦ ವನ್ನು ಮೀರಿರಬಾರದು. ವಯಸ್ಸಿನ ದೃಢೀಕರಣ ಪತ್ರವನ್ನು ಗೊತ್ತುಪಡಿಸಿದ ನಮೂನೆಯಲ್ಲಿ ಅರ್ಜಿಯೊಂದಿಗೆ ಸಂಬಂಧಪಟ್ಟ ತಾಲೂಕಿನ ತಹಸೀಲ್ದಾರರಿಗೆ ಸಲ್ಲಿಸಬೇಕು. ಮಹಿಳೆ ಮೃತರಾಗುವವರೆಗೆ ಅಥವಾ ಪುನರ್ವಿವಾಹವಾಗುವವರೆಗೆ ಅಥವಾ ಉದ್ಯೋಗ ಪಡೆದು ನಿಗದಿತ ವಾರ್ಷಿಕ ಆದಾಯಕ್ಕಿಂತ ಹೆಚ್ಚಿನ ಆದಾಯ ಪಡೆಯುವವರೆಗೆ ಈ ಯೋಜನೆಯ ಸೌಲಭ್ಯ ಪಡೆಯಬಹುದು.

ನಿರ್ಗತಿಕ ವಿಧವೆಯರ ವಿವಾಹಕ್ಕಾಗಿ ೧೦,೦೦೦ ರೂಪಾಯಿಗಳ ಸಹಾಯಧನ ನೀಡಲಾಗುತ್ತದೆ. ಇದರಲ್ಲಿ ೫೦೦೦ ರೂಪಾಯಿಗಳನ್ನು ವಿವಾಹದ ಖರ್ಚುಗಳ ಮೊತ್ತವನ್ನು ಭರಿಸಲು ದಂಪತಿಗಳಿಗೆ

ಹಾಗೆಯೇ ಉಳಿದ ೫೦೦೦ ರೂಪಾಯಿಗಳನ್ನು ಮಹಿಳೆಯ ಹೆಸರಿನಲ್ಲಿ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರದಲ್ಲಿ ತೊಡಗಿಸಲಾಗುವುದು. ನಿರ್ಗತಿಕ ವಿಧವೆಯು ೧೮ ರಿಂದ ೬೫ ವರ್ಷ ವಯಸ್ಸಿನವಳಾಗಿದ್ದು, ಕರ್ನಾಟಕದಲ್ಲಿ ಐದು ವರ್ಷಕ್ಕಿಂತ ಮೇಲ್ಪಟ್ಟು ವಾಸವಾಗಿರಬೇಕು.

೪.೭.೬ ಭಾಗ್ಯಲಕ್ಷ್ಮೀ ಯೋಜನೆ

ಭಾಗ್ಯಲಕ್ಷ್ಮೀ ಯೋಜನೆಯನ್ನು ರಾಜ್ಯ ಸರಕಾರವು ೦೧ ಏಪ್ರಿಲ್ ೨೦೦೬ ರಂದು ಜಾರಿಗೆ ತಂದಿತು. ಇದರನ್ವಯ ಬಡತನದ ರೇಖೆಗಿಂತ ಕೆಳಗಿನ ಹಾಗೂ ಮೂರಕ್ಕಿಂತ ಕಡಿಮೆ ಮಕ್ಕಳು ಇರುವ ಕುಟುಂಬದಲ್ಲಿ ಜನಿಸಿರುವ ಮಕ್ಕಳಲ್ಲಿ ಗರಿಷ್ಠ ಇಬ್ಬರು ಹೆಣ್ಣು ಮಕ್ಕಳಿಗೆ ಈ ಸೌಲಭ್ಯವನ್ನು ನೀಡಲಾಗುತ್ತದೆ. ಈ ಯೋಜನೆಯನ್ವಯ ಮಗು ಜನಿಸಿದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಿ ಭಾರತೀಯ ಜೀವ ವಿಮಾ ನಿಗಮಕ್ಕೆ ಮಾಹಿತಿ ನೀಡಬೇಕು. ೨೦೦೮ ರವರೆಗೆ ಜನಿಸಿರುವ ಭಾಗ್ಯಲಕ್ಷ್ಮೀ ಫಲಾನುಭವಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಆರೋಗ್ಯ ವಿಮೆಯ ಸೌಲಭ್ಯಗಳಿರುವುದು. ೧೫ ವರ್ಷ ಪೂರ್ಣಗೊಳಿಸಿದ ಬಳಿಕ ೧೦ ನೇ ತರಗತಿ ಉತ್ತೀರ್ಣಳಾಗಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಭಾಗ್ಯಲಕ್ಷ್ಮೀ ಬಾಂಡ್‌ನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅಡಮಾನವಿರಿಸಿ ರೂಪಾಯಿ ೫೦೦೦ ದವರೆಗೆ ಸಾಲವನ್ನು ಪಡೆಯಬಹುದು. ಭಾಗ್ಯಲಕ್ಷ್ಮೀ ಯೋಜನೆಯು ಹೆಣ್ಣು ಮಗುವಿನ ಜನನವನ್ನು ಪ್ರೋತ್ಸಾಹಿಸುವ ಹಾಗೂ ಹೆಣ್ಣು ಮಗುವಿನ ಶಿಕ್ಷಣವನ್ನು ಬೆಂಬಲಿಸುವ ಒಂದು ಪ್ರಮುಖ ಯೋಜನೆಯಾಗಿದೆ.

೪.೭.೭ ಸಾಂತ್ವನ ಯೋಜನೆ

ದೌರ್ಜನ್ಯ ಹಾಗೂ ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ಸಲಹೆ, ಆರ್ಥಿಕ ಪರಿಹಾರ, ತಾತ್ಕಾಲಿಕ ಆಶ್ರಯ ಒದಗಿಸುವುದು ಹಾಗೂ ಸ್ವ ಉದ್ಯೋಗ ಮಾಡಲು ಅನುಕೂಲವಾಗುವಂತೆ ತರಬೇತಿ ನೀಡಿ ಸ್ವಾವಲಂಬಿಗಳಾಗಿ ಬದುಕುವಂತೆ ಮಾಡುವ ಯೋಜನೆಯೇ ಸಾಂತ್ವನ ಯೋಜನೆ. ಈ ಯೋಜನೆಯು ರಾಜ್ಯಮಟ್ಟದಲ್ಲಿ ೨೮ ಕೇಂದ್ರಗಳಲ್ಲಿಯೂ ತಾಲೂಕು ಮಟ್ಟದಲ್ಲಿ ೨೨ ಕೇಂದ್ರಗಳಲ್ಲಿಯೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಒಟ್ಟು ೫೦ ಮಹಿಳಾ ಸಹಾಯವಾಣಿ ಕೇಂದ್ರಗಳು ಬೆಳಿಗ್ಗೆ ಎಂಟು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೆ ಕಾರ್ಯ ನಿರ್ವಹಿಸುತ್ತಿವೆ. ತೊಂದರೆಗೊಳಗಾದ ಮಹಿಳೆಯರು ಉಚಿತ ದೂರವಾಣಿ ಕರೆಸಂಖ್ಯೆ ೧೯೯೧ ರ ಸಂಖ್ಯೆಗೆ ಸಂಪರ್ಕಿಸಿದಲ್ಲಿ ಅವರಿಗೆ ಅವಶ್ಯಕ ನೆರವು ನೀಡುವ ವ್ಯವಸ್ಥೆ ಈ ಯೋಜನೆಯಲ್ಲಿ ಲಭ್ಯ.

ಸಾಂತ್ವನ ಯೋಜನೆಯಲ್ಲಿ ನೊಂದ ಮಹಿಳೆಗೆ ಈ ಕೆಳಕಂಡ ಸಹಾಯಗಳನ್ನು ಮಾಡಲಾಗುತ್ತಿದೆ.

- ಸಲಹಾ ಸೇವೆ ಮತ್ತು ಕಾನೂನು ನೆರವು ಒದಗಿಸುವುದು
- ಸ್ವಯಂ ಸೇವಾ ಸಂಘಗಳಲ್ಲಿ, ಅಲ್ಪಾವಧಿ ವಸತಿ ಗೃಹಗಳಲ್ಲಿ, ರಾಜ್ಯ ನಿಲಯಗಳಲ್ಲಿ ಮತ್ತು ಸ್ವೀಕಾರ ಕೇಂದ್ರಗಳಲ್ಲಿ ತಾತ್ಕಾಲಿಕ ಆಶ್ರಯವನ್ನು ನೀಡುವುದು.

- ಮಹಿಳೆಯರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಆಸಕ್ತಿ ತೋರಿದ್ದಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಲ್ಲಿ ಆಶ್ರಯ ಒದಗಿಸಲಾಗುವುದು.
- ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ ರೂಪಾಯಿ ಎರಡು ಸಾವಿರದಿಂದ ರೂಪಾಯಿ ಹತ್ತು ಸಾವಿರದವರೆಗೆ ಆರ್ಥಿಕ ಪರಿಹಾರ ನೀಡುವುದು.
- ದೌರ್ಜನಕ್ಕೆ ಒಳಗಾದ ಮಹಿಳೆಯು ಮರಣ ಹೊಂದಿದಲ್ಲಿ ಅಂತಹ ಮಹಿಳೆಯ ಮಕ್ಕಳ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ರೂಪಾಯಿ ಐದು ಸಾವಿರದಿಂದ ರೂಪಾಯಿ ಹತ್ತು ಸಾವಿರದವರೆಗೆ ಠೇವಣಿಯನ್ನು ಇಡಲಾಗುವುದು.
- ಸಾಂತ್ವನ ಕೇಂದ್ರದಿಂದ ಶಿಫಾರಸ್ಸು ಮಾಡಲ್ಪಟ್ಟ ಮಹಿಳೆಯರಿಗೆ ಅವರ ಆಸಕ್ತಿಗೆ ಅನುಗುಣವಾಗಿ ಕೌಶಲ ಅಭಿವೃದ್ಧಿ ತರಬೇತಿ ಹೊಂದಲು ಮತ್ತು ಸ್ವ ಉದ್ದಿಮೆ ನಡೆಸಲು ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮವು ತನ್ನ ವಿವಿಧ ಯೋಜನೆಗಳಡಿಯಲ್ಲಿ ಸಹಾಯ ನೀಡುವ ಸೌಲಭ್ಯ ಈ ಸಾಂತ್ವನ ಯೋಜನೆಯಲ್ಲಿವೆ.

ದೌರ್ಜನ್ಯಕ್ಕೊಳಗಾದ ಮಹಿಳೆಯರು ಮತ್ತು ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನಿನ ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒಂದೇ ಸೂರಿನಡಿ ಒದಗಿಸಲು ೩೩ ಜಿಲ್ಲಾ ವಿಶೇಷ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗಿದೆ.

೪.೭.೮ ರಾಜ್ಯ ಮಹಿಳಾ ನಿಲಯಗಳು ಮತ್ತು ಸ್ವೀಕಾರ ಕೇಂದ್ರಗಳು

ಪೋಷಣೆ ಮತ್ತು ಆಶ್ರಯದ ಅಗತ್ಯವಿರುವ ಮತ್ತು ಅವುಗಳನ್ನು ತಾವಾಗಿಯೇ ಬಯಸಿ ಬರುವ ಹಾಗೂ ಅನೈತಿಕ ಅವ್ಯವಹಾರ (ನಿವಾರಣೆ) ಅಧಿನಿಯಮದ ಮೇರೆಗೆ (ರಕ್ಷಣೆ ಮತ್ತು ಪುನರ್ವಸತಿಗಾಗಿ) ನ್ಯಾಯಾಲಯವು ಕಳುಹಿಸುವ ಮಹಿಳೆಯರು ಮತ್ತು ಬಾಲಕಿಯರನ್ನು ಸ್ವೀಕರಿಸಲು ರಾಜ್ಯದಲ್ಲಿ ೧೧ ಸ್ವೀಕಾರ ಕೇಂದ್ರಗಳು ಮತ್ತು ಎಂಟು ರಾಜ್ಯ ಮಹಿಳಾ ನಿಲಯಗಳಿವೆ. ರಾಜ್ಯ ಮಹಿಳಾ ನಿಲಯ ಸ್ವೀಕಾರ ಕೇಂದ್ರಗಳಲ್ಲಿರುವ ನಿವಾಸಿಗಳಿಗೆ ಸರ್ಕಾರೇತರ ಸಂಸ್ಥೆಗಳ ಮೂಲಕ ಕಿಚನ್ ಗಾರ್ಡನ್, ಮೆಹಂದಿ, ಹೊಲಿಗೆ, ಎಂಬ್ರಾಯಿಡರಿ, ಬ್ಯೂಟಿಷಿಯನ್, ಟ್ರಾಫಿಕ್ ಪೊಲೀಸ್ ತರಬೇತಿಯನ್ನು ಕೊಡಿಸಲಾಗುವುದು. ವೃತ್ತಿ ತರಬೇತಿ ಪಡೆದ ನಂತರ ಉದ್ಯೋಗಗಳನ್ನು ಕೊಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಸುಧಾರಣಾ ಸಂಸ್ಥೆಗಳಲ್ಲಿರುವ ನಿರ್ಗತಿಕ ಮತ್ತು ಅನಾಥ ಹೆಣ್ಣು ಮಕ್ಕಳ ಪುನರ್ವಸತಿ ದೃಷ್ಟಿಯಿಂದ ಮದುವೆಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮವನ್ನು ಇಲಾಖೆಯು ಮಾಡುತ್ತದೆ. ಈ ಮಹಿಳೆಯರನ್ನು ವಿವಾಹ ವಾಗಲು ಅರ್ಹರಾದ ವ್ಯಕ್ತಿಯು ಮುಂದೆ ಬಂದಲ್ಲಿ ವಿವಾಹಕ್ಕೆ ರೂಪಾಯಿ ಎಳು ಸಾವಿರ ಮೊತ್ತವನ್ನು ನೀಡಲಾಗುವುದು. ಸದರಿ ಮೊತ್ತದಲ್ಲಿ ರೂಪಾಯಿ ಎರಡು ಸಾವಿರವನ್ನು ಮದುವೆ ಖರ್ಚಿಗಾಗಿ ಉಳಿದ ಐದು ಸಾವಿರ ಮೊತ್ತವನ್ನು ದಂಪತಿಗಳ ಹೆಸರಿನಲ್ಲಿ ಎರಡು ವರ್ಷಗಳ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ಇಡುವ ವ್ಯವಸ್ಥೆ ಮಾಡಲಾಗುವುದು.

೪.೭.೯ ವೃತ್ತಿ ತರಬೇತಿ ಪಡೆಯುವ ಮಹಿಳೆಯರಿಗೆ ಆರ್ಥಿಕ ಸಹಾಯ

ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಸ್ಥಾನಮಾನ ಹೆಚ್ಚಿಸಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಮಹಿಳೆಯರಿಗೆ ಅವಶ್ಯವಿರುವ ನೈಪುಣ್ಯತೆ/ಕೌಶಲತೆ ಒದಗಿಸಲು ನೆರವಾಗುವಂತೆ ದೂರದರ್ಶನ, ರೇಡಿಯೋ, ಯಂತ್ರ ರಚನೆ, ಗಡಿಯಾರ ರಿಪೇರಿ, ಬೆರಳಚ್ಚು ಮತ್ತು ಶೀಘ್ರಲಿಪಿಗಾರ, ಮೋಟಾರು ರಿವೈಂಡಿಂಗ್ ಇತ್ಯಾದಿ ತರಬೇತಿ ಪಡೆಯಲು ಆರ್ಥಿಕ ಸಹಾಯ ನೀಡಲಾಗುವುದು. ಈ ಯೋಜನೆಯನ್ನು ಪಡೆಯಲು ಮಹಿಳೆಯು ೧೫ ರಿಂದ ೪೫ ವರ್ಷ ವಯಸ್ಸಾಗಿರಬೇಕು ಮತ್ತು ಸಂಪೂರ್ಣ ವಿದ್ಯಾಭ್ಯಾಸವನ್ನು ಕರ್ನಾಟಕ ರಾಜ್ಯದಲ್ಲಿಯೇ ಮಾಡಿರಬೇಕು. ಮಹಿಳೆಯ ಕುಟುಂಬದ ವಾರ್ಷಿಕ ಆದಾಯ ಗ್ರಾಮಾಂತರ ಪ್ರದೇಶದಲ್ಲಿಯಾದರೆ ೧೫,೦೦೦ ರೂಪಾಯಿ ಹಾಗೂ ನಗರ ಪ್ರದೇಶದಲ್ಲಾದರೆ ೨೪,೦೦೦ ರೂಪಾಯಿಯನ್ನು ಮೀರಿರಬಾರದು. ನಡೆಸಲಾಗುವುದು ಅರ್ಹತಾ ಪರೀಕ್ಷೆಯನ್ನು ಮೊದಲ ಪ್ರಯತ್ನದಲ್ಲಿಯೇ ಉತ್ತೀರ್ಣರಾಗುವುದು ಕಡ್ಡಾಯ.

೪.೭.೧೦ ಪ್ರಸೂತಿ ಆರೈಕೆ ಯೋಜನೆ

ಮಹಿಳೆಯ ಗರ್ಭಾವಸ್ಥೆಯಿಂದ ಪ್ರಾರಂಭವಾಗಿ ಹೆರಿಗೆಯಾಗುವವರೆಗೂ ಈ ಯೋಜನೆಯಡಿ ಮಹಿಳೆ ಮತ್ತು ಮಗುವಿನ ಆರೋಗ್ಯದ ಬಗ್ಗೆ ವಿಚಾರಿಸಲಾಗುವುದು. ಈ ಯೋಜನೆಯಲ್ಲಿ ಮಹಿಳೆ ಹೆರಿಗೆಯಾಗುವುದರ ಒಳಗಾಗಿ ಕನಿಷ್ಠ ಮೂರು ಬಾರಿಯಾದರೂ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರಬೇಕು ಮತ್ತು ಅಂತಹ ಮಹಿಳೆಗೆ ರೂಪಾಯಿ ಐದು ಸಾವಿರ ಆರ್ಥಿಕ ಧನಸಹಾಯವನ್ನು ನೀಡಲಾಗುವುದು. ಹೆರಿಗೆಯಾದ ಬಳಿಕ ನಗರದ ಸರ್ಕಾರಿ ಆಸ್ಪತ್ರೆಯಲ್ಲಾದರೆ ರೂಪಾಯಿ ೪೦೦ರಂತೆ, ಗ್ರಾಮೀಣ ಪ್ರದೇಶದಲ್ಲಾದರೆ ರೂಪಾಯಿ ೩೦೦ರಂತೆ ಆರ್ಥಿಕ ಧನ ಸಹಾಯವನ್ನು ಸರ್ಕಾರ ನಿಗದಿಗೊಳಿಸಿದೆ.

೪.೭.೧೧ ಜನನಿ ಸುರಕ್ಷಾ ಯೋಜನೆ ಹಾಗೂ ಜನನಿ ಶಿಶು ಸುರಕ್ಷಾ ಕಾರ್ಯಕ್ರಮ

ಈ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಸವ/ಹೆರಿಗೆಯನ್ನೊಳಗೊಂಡ ಬಡತನ ರೇಖೆಗಿಂತ ಕಡಿಮೆ ಇರುವ ತಾಯಿ ಕಾರ್ಡ್ ಹೊಂದಿರುವವರಿಗೆ ನಗದು ಭತ್ಯೆ ನೀಡಲಾಗುವುದು. ಮನೆಯಲ್ಲಿ ಹೆರಿಗೆಯಾದರೆ ರೂಪಾಯಿ ೫೦೦ರಂತೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೆರಿಗೆಯಾದರೆ ರೂಪಾಯಿ ೭೦೦ರಂತೆ ಮತ್ತು ಶಸ್ತ್ರ ಚಿಕಿತ್ಸೆಯ ಮೂಲಕ ಹೆರಿಗೆಯಾದರೆ ರೂಪಾಯಿ ೧,೫೦೦ರಂತೆ ನಗದು ಭತ್ಯೆ ಕೊಡಲಾಗುವುದು. ಒಪ್ಪಂದಕ್ಕೊಳಪಟ್ಟ ಖಾಸಗಿ ಆಸ್ಪತ್ರೆಯಲ್ಲಿಯೂ ಈ ಯೋಜನೆಯ ಸೌಲಭ್ಯಗಳನ್ನು ಪಡೆಯಬಹುದಾಗಿವೆ. ಜನನಿ ಶಿಶು ಸುರಕ್ಷಾ ಯೋಜನೆಯಲ್ಲಿ ಮಹಿಳೆ ಹಾಗೂ ಆಕೆಗೆ ಹುಟ್ಟುವ ಮಗುವಿಗೆ ಒಂದು ವರ್ಷದವರೆಗೆ ಉಚಿತ ಆರೋಗ್ಯ ಸೇವೆ ಒದಗಿಸಲಾಗುವುದು. ಅಂದರೆ ವೈದ್ಯಕೀಯ ತಪಾಸಣೆ ಹಾಗೂ ಹೆರಿಗೆ, ಪ್ರಯೋಗಾಲಯ, ಔಷಧಗಳು, ಊಟ ಮತ್ತು ಸಾರಿಗೆ ವ್ಯವಸ್ಥೆಗಳನ್ನು ಉಚಿತವಾಗಿಯೇ ಒದಗಿಸಲಾಗುವುದು.

೪.೭.೧೨ ಮಹಿಳಾ ಕಾನೂನು ಪದವೀಧರರಿಗೆ ಧನ ಸಹಾಯ

ಈ ಯೋಜನೆಯಲ್ಲಿ ಕಾನೂನು ಪದವಿ ಪಡೆದಿರುವ ಮಹಿಳೆಯರಿಗೆ ಕಾನೂನು ಆಡಳಿತದಲ್ಲಿ ತರಬೇತಿ ಪಡೆಯಲು ಆರ್ಥಿಕ ಸಹಾಯ ನೀಡಲಾಗುತ್ತದೆ. ಧನ ಸಹಾಯ ಪಡೆಯುವ ಅಭ್ಯರ್ಥಿಯ ಕುಟುಂಬದ ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ೪೦,೦೦೦ ರೂಪಾಯಿಗಳನ್ನು ಮೀರಿರಬಾರದು ಹಾಗೂ ವಯಸ್ಸು ೩೫ ವರ್ಷ ಮೀರಿರಬಾರದು, ತರಬೇತಿ ಪಡೆಯಲು ಆಯ್ಕೆಯಾದ ಮಹಿಳಾ ಕಾನೂನು ಪದವೀಧರರಿಗೆ ಮಾಹೆಯಾನ ೧,೦೦೦ ರೂಪಾಯಿಗಳ ಆರ್ಥಿಕ ನೆರವು ನೀಡಲಾಗುತ್ತದೆ.

೪.೭.೧.೩ ಮನಸ್ವಿನಿ ಯೋಜನೆ

ಈ ಯೋಜನೆಯ ಫಲಾನುಭವಿಯಾಗುವ ಮಹಿಳೆಯು ಬಡತನ ರೇಖೆಗಿಂತ ಕೆಳಗಿರುವ ಅವಿವಾಹಿತ ಅಥವಾ ವಿಚ್ಛೇದಿತ ಮಹಿಳೆಯಾಗಿದ್ದು, ಆಕೆಯ ವಯಸ್ಸು ೪೦ ರಿಂದ ೬೪ ವರ್ಷ ಮೀರಿರಬಾರದು. ಇವರು ಮಾಸಿಕ ರೂಪಾಯಿ ೫೦೦ ರೂಪಾಯಿ ಪಿಂಚಣಿಯನ್ನು ಪಡೆಯಲು ಅರ್ಹರಾಗುತ್ತಾರೆ. ಈ ಯೋಜನೆಯ ಫಲಾನುಭವಿಗಳು ಬಡತನ ರೇಖೆಗಿಂತ ಕೆಳಗಿನವರಾಗಿರಬೇಕು ಅಂದರೆ ಅವರ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶಕ್ಕಾದರೆ ರೂಪಾಯಿ ೧೨,೦೦೦ ಗಳನ್ನು, ನಗರ ಪ್ರದೇಶಕ್ಕಾದರೆ ರೂಪಾಯಿ ೧೭,೦೦೦ ಗಳನ್ನು ಮೀರಿರಬಾರದು.

೪.೭.೧೪ ನ್ಯೂ ಸ್ವರ್ಣಿಮಾ ಯೋಜನೆ:

ಈ ಯೋಜನೆಯಲ್ಲಿ ಸ್ವ-ಸಹಾಯ ಸಂಘಗಳ ಮೂಲಕ ಮಹಿಳೆಯರುಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಅಂದರೆ ಅಗರಬತ್ತಿ, ರೆಡಿಮೇಡ್ ಗಾರ್ಮೆಂಟ್ಸ್, ಡೈರಿ ವ್ಯಾಪಾರ ಇತ್ಯಾದಿ ವ್ಯಾಪಾರ ಚಟುವಟಿಕೆಗಳಿಗೆ ಪ್ರತಿ ಫಲಾನುಭವಿಗಳಿಗೆ ರೂಪಾಯಿ ೩,೫೦,೦೦೦ ರಂತೆ ಗರಿಷ್ಠ ೩.೫೦ ಲಕ್ಷದವರೆಗೆ ಶೇಕಡಾ ೫ರಂತೆ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡಲಾಗುವುದು. ಸಂಘದ ಮಹಿಳೆಯರು ಹಿಂದುಳಿದ ವರ್ಗಗಳಿಗೆ ಸೇರಿದ ವರಾಗಿರಬೇಕು ಮತ್ತು ಅವರ ವಾರ್ಷಿಕ ವರಮಾನವು ಗ್ರಾಮಾಂತರ ಪ್ರದೇಶದವರಾಗಿದ್ದಲ್ಲಿ ರೂಪಾಯಿ ೪೦,೦೦೦ ವನ್ನು, ಪಟ್ಟಣ ಪ್ರದೇಶದವರಾಗಿದ್ದಲ್ಲಿ ರೂಪಾಯಿ ೫೫,೦೦೦ ವನ್ನು ಮೀರಿರಬಾರದು. (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕೈಪಿಡಿ, ಕರ್ನಾಟಕ ಸರಕಾರ, ಬೆಂಗಳೂರು).

೪.೭.೧೫ ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆ

ರಾಜ್ಯ ಸರ್ಕಾರುವು ಮೀನುಗಾರ ಮಹಿಳೆಯರ ಅನುಕೂಲಕ್ಕಾಗಿ ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆಯನ್ನು ಅನುಷ್ಠಾನಗೊಳಸಲಾಗಿದೆ. ಈ ಯೋಜನೆಯನ್ವಯ ಪ್ರತಿ ಮೀನುಗಾರ ಮಹಿಳೆಯರಿಗೆ ಮೀನು ಮಾರಾಟ, ಮೀನು ಒಣಗಿಸುವುದು, ಮೀನಿನ ಖಾದ್ಯಗಳ ತಯಾರಿ ಇವೇ ಮೊದಲಾದ ಮೀನುಗಾರಿಕಾ ಚಟುವಟಿಕೆಗಳಿಗೆ ಸ್ವ-ಸಹಾಯ ಗುಂಪಿಗೆ ದುಡಿಯುವ ಬಂಡವಾಳವನ್ನಾಗಿ ಗರಿಷ್ಠ ತಲಾ ರೂಪಾಯಿ ಒಂದು ಲಕ್ಷದವರೆಗೆ ಆವರ್ತನ ನಿಧಿ ನೀಡಲಾಗುತ್ತಿದೆ.

ಅಲ್ಲದೇ ಸಹಕಾರಿ ಸಂಘದ ಸದಸ್ಯರಿಗೆ ಸ್ಥಳೀಯ ಮೀನುಗಾರಿಕಾ ಸಹಕಾರ ಸಂಘದ ಮೂಲಕ ತಲಾ ರೂ. ೫,೦೦೦ ದಂತೆ ವೃತ್ತಿಪರ ಮೀನುಗಾರರಿಗೆ ನೆರವು ನೀಡಲಾಗುತ್ತಿದೆ.

೪.೭.೧೬ ಪಂಜರದಲ್ಲಿ ಸೀ ಬಾಸ್ ಮೀನು ಕೃಷಿಗೆ ಸಹಾಯಧನ

ಕರಾವಳಿ ಮೀನುಗಾರಿಕೆಯಲ್ಲಿ ನೂತನ ತಂತ್ರಜ್ಞಾನವನ್ನು ಅಳವಡಿಸಿ, ಪಂಜರದಲ್ಲಿ ಮೀನು ಕೃಷಿಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 'ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ' ಪಂಜರದಲ್ಲಿ ಮೀನು ಕೃಷಿ ಎಂಬ ಯೋಜನೆಯನ್ನು ಹಮ್ಮಿಕೊಂಡು ಸೀ ಬಾಸ್ ಮೀನು ಕೃಷಿ ಫಲಾನುಭವಿಗೆ ರೂಪಾಯಿ ೪೦,೦೦೦ ರಂತೆ ಆರ್ಥಿಕ ಸಹಾಯ ಧನವನ್ನು ನೀಡುವುದು.

೪.೭.೧೭ ಮತ್ಸ್ಯಾಶ್ರಯ ಯೋಜನೆ

ಈ ಯೋಜನೆಯಡಿಯಲ್ಲಿ ಮನೆ ರಹಿತ ಮತ್ತು ಸ್ವಂತ ನಿವೇಶನ ಹೊಂದಿರುವ ವೃತ್ತಿ ನಿರತ ಬಡ ಮೀನುಗಾರ ಮಹಿಳೆಯರಿಗೆ ಮನೆಗಳನ್ನು ನಿರ್ಮಿಸಿ ಕೊಡಲಾಗುತ್ತಿದೆ. ಇದರಲ್ಲಿ ಮನೆ ನಿರ್ಮಾಣಕ್ಕೆ ರೂಪಾಯಿ ೧,೨೦,೦೦೦ ವನ್ನು ಸಹಾಯಧನವಾಗಿ ನೀಡುವುದು. (ಉಡುಪಿ ಜಿಲ್ಲಾ ಪಂಚಾಯತು, ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳು, ೨೦೧೫-೧೬)

ಈ ಎಲ್ಲಾ ಸರಕಾರದ ಯೋಜನೆಗಳಿದ್ದರೂ ಸೂಕ್ತ ಅರಿವಿನ ಕೊರತೆಯಿಂದ ಯೋಜನೆಯ ಪ್ರಯೋಜನವನ್ನು ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ಸೂಕ್ತ ರೀತಿಯಲ್ಲಿ ಪಡೆದುಕೊಂಡಿಲ್ಲ. ಈ ಬಗ್ಗೆ ಅಧ್ಯಯನ ಸಂದರ್ಭದಲ್ಲಿ ವಿಚಾರಿಸಿದಾಗ ಆಶ್ಚರ್ಯದಾಯಕ ಮಾಹಿತಿಗಳು ದೊರೆತಿದ್ದು ಅದನ್ನು ಇಲ್ಲಿ ನೀಡಲಾಗಿದೆ.

ಕೋಷ್ಟಕ ೪.೧ ಸರಕಾರಿ ಸವಲತ್ತುಗಳ ಅರಿವು

ಸರಕಾರಿ ಸವಲತ್ತುಗಳ ಅರಿವು	ಸಂಖ್ಯೆ	ಶೇಕಡಾ
ಇದೆ	೪೬೪	೫೮
ಇಲ್ಲ	೩೩೬	೪೨
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ಸರಕಾರಿ ಸವಲತ್ತುಗಳ ಅರಿವನ್ನು ಗಮನಿಸಿದಾಗ ಶೇಕಡಾ ೫೮ ರಷ್ಟು ಮಾಹಿತಿದಾರರು ಮಾತ್ರ ಪ್ರಶ್ನೆಗೆ ಪರವಾದ ಉತ್ತರ ನೀಡಿದ್ದಾರೆ. ಶೇಕಡಾ ೪೨ ಮಾಹಿತಿದಾರರಿಗೆ ಸರಕಾರಿ ಸವಲತ್ತುಗಳ ಅರಿವೇ ಇಲ್ಲ. ಈ ದತ್ತಾಂಶವನ್ನು ಗಮನಿಸಿದಾಗ ೨ ಮುಖ್ಯವಾದ ಅಂಶಗಳು ಗೋಚರವಾಗುತ್ತದೆ. ಒಂದು, ಮಹಿಳೆಯರಲ್ಲಿ ಶಿಕ್ಷಣದ ಕೊರತೆ. ಎರಡು, ಮೊಗವೀರರಲ್ಲಿ ಆರ್ಥಿಕ ಸಂಪನ್ಮೂಲಕ್ಕೆ ಒತ್ತು ಕೊಡುವವರು ಹೆಚ್ಚು. ಆದ್ದರಿಂದ ಬಂದರಿನಲ್ಲಿ ಅಥವಾ ಮೀನು ಮಾರುಕಟ್ಟೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಈ ರೀತಿಯ ಸರಕಾರಿ ಸವಲತ್ತುಗಳ ಕುರಿತಾದ ಮಾಹಿತಿಯನ್ನು ಗಳಿಸುವಲ್ಲಿ ಆಸಕ್ತಿ ತೋರಿಸುವುದಿಲ್ಲ. ಅನಕ್ಷರಸ್ಥ ಮತ್ತು ಆರೋಗ್ಯವಂತ ಮಹಿಳೆಯರು ಮೀನಿನ ಉದ್ಯಮದಲ್ಲಿ ತೊಡಗಿಸಿಕೊಳ್ಳುವುದು ಉಡುಪಿ ತಾಲೂಕಿನಲ್ಲಿ ಕಂಡು ಬರುತ್ತದೆ. ಶಿಕ್ಷಿತ ಮತ್ತು ಸರಕಾರಿ ಉದ್ಯೋಗದತ್ತ ಒಲವು ತೋರಿಸುವ ಮಹಿಳೆಯರು ಸರಕಾರಿ ಸವಲತ್ತುಗಳ ಕುರಿತಾಗಿ ಪ್ರಯತ್ನಿಸುತ್ತಿರುವುದು ಕಂಡು ಬರುತ್ತದೆ.

ಮಹೇಶ್ ವಿ ಹಾಗೂ ಮತ್ತಿತರರು, (೨೦೧೧) ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಮೂರು ಮೀನುಗಾರಿಕಾ ಹಳ್ಳಿಗಳಲ್ಲಿನ ಮೀನುಗಾರಿಕೆಯಲ್ಲಿ ನಿರತ ಮಹಿಳೆಯರಿಗೆ ಸರಕಾರದ ವತಿಯಿಂದ ದೊರೆಯುವ ಪ್ರಯೋಜನಗಳ ಬಗ್ಗೆ ಕೈಗೊಂಡ ಅಧ್ಯಯನದಲ್ಲಿ ಶೇಕಡಾ ೬೭ ರಷ್ಟು ಮಹಿಳೆಯರು ಸರಕಾರದ ಸೌಲಭ್ಯಗಳ ಬಗ್ಗೆ ಸ್ವಲ್ಪ ಮಟ್ಟಿನ ಅರಿವನ್ನು ಹೊಂದಿದವರಾಗಿದ್ದಾರೆ. ಸರಕಾರಿ ಯೋಜನೆಗಳ ಸದುಪಯೋಗ ಪಡೆದುಕೊಂಡು ಮಹಿಳೆಯರು ಆರ್ಥಿಕವಾಗಿ ಸಶಕ್ತತೆಯನ್ನು ಹೊಂದಲು ಪ್ರಯತ್ನಿಸಿದ್ದಾರೆ. ಶೇಕಡಾ ೩೩ ರಷ್ಟು ಮಂದಿ ತೀರಾ ಕೆಳಮಟ್ಟದಲ್ಲಿನ ಅರಿವನ್ನು ಹೊಂದಿದವರಾಗಿದ್ದು, ಸರಕಾರದ ಯೋಜನೆಗಳ ಪ್ರಯೋಜನವನ್ನು ಪಡೆಯದೇ ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ ಎಂಬುದಾಗಿ ಉಲ್ಲೇಖಿಸಿದ್ದಾರೆ.

ಕೋಷ್ಟಕ ೪.೨ ಸರಕಾರಿ ಸವಲತ್ತುಗಳ ಫಲಾನುಭವಿಗಳ ವಿವರ

ಸರಕಾರಿ ಸವಲತ್ತುಗಳ ಫಲಾನುಭವಿಗಳು	ಸಂಖ್ಯೆ	ಶೇಕಡಾ
ಹೌದು	೫೨೦	೬೫
ಇಲ್ಲ	೨೮೦	೩೫
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೬೫ ರಷ್ಟು ಮಾಹಿತಿದಾರರು ಸರಕಾರಿ ಸವಲತ್ತುಗಳನ್ನು ಪಡೆದವರಾಗಿದ್ದು, ಶೇಕಡಾ ೩೫ ರಷ್ಟು ಮಾಹಿತಿದಾರರು ಯಾವುದೇ ಸರಕಾರಿ ಸವಲತ್ತುಗಳನ್ನು ಈ ವರೆವಿಗೂ ಪಡೆದಿರುವುದಿಲ್ಲ ಎಂದಿದ್ದಾರೆ.

ಕೋಷ್ಟಕ ೪.೩ ಸರಕಾರಿ ಸವಲತ್ತುಗಳನ್ನು ತಿಳಿದುಕೊಂಡ ಕ್ಷೇತ್ರದ ವಿವರ

ಸರಕಾರಿ ಸವಲತ್ತುಗಳನ್ನು ತಿಳಿದುಕೊಂಡ ಕ್ಷೇತ್ರಗಳು	ಸಂಖ್ಯೆ	ಶೇಕಡಾ
ಮನೆಯವರಿಂದ	೧೩೬	೧೭
ಸ್ಥಳೀಯ ಜನ ನಾಯಕರುಗಳಿಂದ	೫೦	೬.೨೫
ಸ್ನೇಹಿತರಿಂದ	೨೧೦	೨೬.೨೫
ಸಂಪರ್ಕ ಮಾಧ್ಯಮಗಳಿಂದ	೧೨೪	೧೫.೫
ಅನ್ವಯಿಸುವುದಿಲ್ಲ	೨೮೦	೩೫
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ಸರಕಾರಿ ಸವಲತ್ತುಗಳ ಬಗ್ಗೆ ತಿಳಿದುಕೊಂಡ ಮೂಲಗಳ ಬಗ್ಗೆ ಪಡೆದ ಅಂಕಿ ಅಂಶಗಳನ್ನು ತೆಗೆದುಕೊಂಡಾಗ ಸರಕಾರಿ ಸವಲತ್ತುಗಳ ಬಗ್ಗೆ ನಾನಾ ಮೂಲಗಳಿಂದ ತಿಳಿದುಕೊಂಡಿದ್ದು, ಅವುಗಳಲ್ಲಿ ಶೇಕಡಾ ೧೭ ರಷ್ಟು ಮಾಹಿತಿದಾರರು ಮನೆಯವರ ಮುಖೇನವಾಗಿಯೂ, ಶೇಕಡಾ ೬.೨೫ ರಷ್ಟು ಮಾಹಿತಿದಾರರು ಸ್ಥಳೀಯ ನಾಯಕರುಗಳಿಂದಲೂ, ಶೇಕಡಾ ೨೬.೨೫ ರಷ್ಟು ಮಾಹಿತಿದಾರರು ಸ್ನೇಹಿತರಿಂದಲೂ, ಶೇಕಡಾ ೧೫..೫ ರಷ್ಟು ಮಾಹಿತಿದಾರರು ಸಂಪರ್ಕ ಮಾಧ್ಯಮಗಳಿಂದಲೂ, ಅಂದರೆ ಟಿ.ವಿ, ರೇಡಿಯೋ, ಮೊಬೈಲ್,

ಪತ್ರಿಕೆಗಳು ಇತ್ಯಾದಿಗಳ ಮೂಲಕ ಮಾಹಿತಿಯನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಅನ್ವಯಿಸುವುದಿಲ್ಲ ಎಂಬುದಾಗಿ ಉತ್ತರಿಸಿರುವ ಶೇಕಡಾ ೩೫ ರಷ್ಟು ಮಾಹಿತಿದಾರರು ಯಾವುದೇ ಸರಕಾರಿ ಸವಲತ್ತುಗಳನ್ನು ಈವರೆವಿಗೂ ಪಡೆದಿರುವುದಿಲ್ಲ.

ಕೋಷ್ಟಕ ೪.೪ ಸರಕಾರಿ ಯೋಜನೆಗಳ ಫಲಾನುಭವಿಗಳ ವಿವರ

ಸರಕಾರಿ ಯೋಜನಗೆಳ ಫಲಾನುಭವಿಗಳ ವಿವರ	ಸಂಖ್ಯೆ	ಶೇಕಡಾ
ವಿದ್ಯಾರ್ಥಿ ವೇತನ	೩೪	೪.೨೫
ವಸತಿ ನಿಲಯ ಪ್ರವೇಶಾತಿ	೧೬	೨
ಭಾಗ್ಯಲಕ್ಷ್ಮೀ	೩೨	೪
ಸಂಧ್ಯಾ ಸುರಕ್ಷಾ	೫೬	೭
ವಿಧವಾ ವೇತನ	೧೬	೨
ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆ	೯೬	೧೨
ಮತ್ಸ್ಯಾಶ್ರಯ ಯೋಜನೆ	೨೪	೩
ಮೀನು ಮಾರಾಟ ಸಲಕರಣೆಗಳಿಗೆ ಆರ್ಥಿಕ ಸಹಾಯಧನ	೧೧೪	೧೪.೨೫
ಮೀನು ಸಂಸ್ಕರಣಾ ಸಲಕರಣೆಗಳ ಖರೀದಿಗಾಗಿ ಸಹಾಯಧನ	೬೪	೮
ಗರ್ಭಿಣಿಯರ ಪೌಷ್ಟಿಕ ಆಹಾರ	೪೮	೬
ಬಾಣಂತಿಯರ ಪೌಷ್ಟಿಕ ಆಹಾರ	೨೦	೨.೫
ಸರಕಾರಿ ಯೋಜನೆಗಳನ್ನು ಪಡೆಯದವರು	೨೮೦	೩೫
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ಸರಕಾರಿ ಯೋಜನೆಗಳ ಫಲಾನುಭವದ ಬಗ್ಗೆ ಕೇಳಲಾದ ಪ್ರಶ್ನೆಗೆ ಸುಮಾರು ಶೇಕಡಾ ೪.೨೫ರಷ್ಟು ಮಾಹಿತಿದಾರರು ಶಾಲಾ ಕಾಲೇಜುಗಳಲ್ಲಿ ದೊರೆಯುವ ಹಿಂದುಳಿದ ವರ್ಗಗಳ ವಿದ್ಯಾರ್ಥಿವೇತನ ಹಾಗೂ ಶುಲ್ಕ ವಿನಾಯಿತಿಯನ್ನು ಪಡೆದಿರುವುದಾಗಿ, ಶೇಕಡಾ ೨ರಷ್ಟು ಮಾಹಿತಿದಾರರು ಹಿಂದುಳಿದ ವರ್ಗಗಳ ವಿದ್ಯಾರ್ಥಿ ವಸತಿ ನಿಲಯದ ಸೌಲಭ್ಯವನ್ನು ಪಡೆದಿರುವುದಾಗಿಯೂ, ಶೇಕಡಾ ೪ರಷ್ಟು ಮಾಹಿತಿದಾರರು ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಗಳಾಗಿರುವುದಾಗಿಯೂ, ಶೇಕಡಾ ೭ರಷ್ಟು ಮಾಹಿತಿದಾರರು ಸಂಧ್ಯಾ ಸುರಕ್ಷಾ, ಶೇಕಡಾ ೨ರಷ್ಟು ಮಾಹಿತಿದಾರರು ವಿಧವಾ ವೇತನದ ಸೌಲಭ್ಯಗಳನ್ನು ಪಡೆದವರಾಗಿಯೂ, ಶೇಕಡಾ ೧೨ರಷ್ಟು ಮಾಹಿತಿದಾರರು ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆ, ಶೇಕಡಾ ೩ರಷ್ಟು ಮಾಹಿತಿದಾರರು ಮತ್ಸ್ಯಾಶ್ರಯ ಯೋಜನೆ, ಶೇಕಡಾ ೧೪.೨೫ರಷ್ಟು ಮಂದಿ ಮೀನು ಮಾರಾಟ ಸಲಕರಣೆಗಳಿಗೆ ಆರ್ಥಿಕ ಸಹಾಯಧನ, ಶೇಕಡಾ ೮ರಷ್ಟು ಮಾಹಿತಿದಾರರು ಮೀನು ಸಂಸ್ಕರಣಾ ಸಲಕರಣೆಗಳ ಖರೀದಿಗಾಗಿ ಸಹಾಯಧನ, ಶೇಕಡಾ ೬ರಷ್ಟು ಮಾಹಿತಿದಾರರು ಗರ್ಭಿಣಿಯರ ಪೌಷ್ಟಿಕ ಆಹಾರ, ಶೇಕಡಾ ೨.೫ರಷ್ಟು ಮಾಹಿತಿದಾರರು ಬಾಣಂತಿಯರ ಪೌಷ್ಟಿಕ ಆಹಾರದ ಸೌಲಭ್ಯವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೩೫ರಷ್ಟು ಮಾಹಿತಿದಾರರು ಯಾವುದೇ ಸರಕಾರಿ ಸವಲತ್ತುಗಳನ್ನು ಈವರೆವಿಗೂ ಪಡೆಯದವರಾಗಿರುತ್ತಾರೆ.

೪.೮. ಮಹಿಳಾ ಸಾಮಾಜಿಕ, ಆರ್ಥಿಕ ಸಬಲೀಕರಣ ಮತ್ತು ಮಹಿಳಾ ಅಭಿವೃದ್ಧಿ

ಭಾರತ ಒಂದು ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರ. ಆಳುವವರು ಮತ್ತು ಆಳಿಸಿಕೊಳ್ಳುವವರೂ ಇಬ್ಬರೂ ಪ್ರಜೆಗಳೇ ಆಗಿರುವುದು ಈ ವ್ಯವಸ್ಥೆಯ ಲಕ್ಷಣ. ಪ್ರತಿಯೊಬ್ಬ ಪ್ರಜೆಯೂ ಆಡಳಿತದ ಅವಿಭಾಜ್ಯ ಅಂಗ. ಆದಕಾರಣ ಮತದಾನ ಮಾಡುವಾಗ, ಆಡಳಿತ ನಡೆಸುವಾಗ, ಹಕ್ಕಿನ ಅವಕಾಶ ಕಲ್ಪಿಸಿಕೊಡುವಾಗ ಮಹಿಳೆ ಮತ್ತು ಪುರುಷರ ಸಹಭಾಗಿತ್ವದ ವ್ಯವಸ್ಥೆಗೆ ಆದ್ಯತೆ ನೀಡಬೇಕು. ಅಧಿಕಾರ ವಿಕೇಂದ್ರೀಕರಣ ಹಾಗೂ ಸಾಮಾಜಿಕ ನ್ಯಾಯ ಕಲ್ಪನೆ ನಮ್ಮ ಆಡಳಿತದ ವ್ಯವಸ್ಥೆಯ ಬದ್ಧತೆಯಾಗಿರಬೇಕಾಗುತ್ತದೆ. ಮಹಾತ್ಮ ಗಾಂಧೀಜಿಯವರ ಕಲ್ಪನೆಯ ಗ್ರಾಮ ಸ್ವರಾಜ್ಯ ಕಲ್ಪನೆಯು ಸಹ ಸಮಾನ ಸಹಭಾಗಿತ್ವದ ಸ್ಥಳೀಯ ಆಡಳಿತದ ಸಶಕ್ತತೆಯ ಕುರಿತು ತಿಳಿಸುತ್ತದೆ. ಅರಿಸ್ಟಾಟಲ್‌ರ 'ಪಾಲಿಟಿಕ್ಸ್' ಹಾಗೂ ಪ್ಲೇಟೋರವರ 'ರಿಪಬ್ಲಿಕ್' ಕೃತಿಗಳು ಸಹ ಮಹಿಳೆಯರ ಪಾಲುಗಾರಿಕೆಯು ಆಡಳಿತದಲ್ಲಿ ಅವಶ್ಯಕ ಎಂಬುದಾಗಿ ತಿಳಿಸಿವೆ. ದೇಶದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಿಂದ ಪ್ರಸಕ್ತ ಸ್ಥಿತಿಯವರೆವಿಗೂ ಸಮಾಜ ಮತ್ತು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಮಹಿಳೆಯರು ವಹಿಸಿರುವ ಮತ್ತು ವಹಿಸುತ್ತಿರುವ ಪಾತ್ರ ಅತ್ಯಂತ ಹಿರಿದಾದುದು. (ಮನುಜಾ ಪಟೇಲ್, ೨೦೦೮).

ಮಹಿಳಾ ಸಬಲೀಕರಣವು ಅಗತ್ಯತೆ ಉತ್ತಮ ರಾಷ್ಟ್ರಾಡಳಿತದ ದೃಷ್ಟಿಯಿಂದಲೂ ಅವಶ್ಯಕವಾಗಿದೆ. ಆದಕಾರಣ ರಾಷ್ಟ್ರಡಳಿತ ವ್ಯವಸ್ಥೆಯಲ್ಲಿ ಸಂವಿಧಾನದ ೧೪ ನೇ ವಿಧಿಯಂತೆ ಸಮಾನ ಅವಕಾಶ ಮತ್ತು ಅಧಿಕಾರ, ನೀಡಿದ್ದೇ ಆದರೆ ಸಶಕ್ತ ಮಹಿಳೆ ಸಶಕ್ತ ಸಮಾಜ ನಿರ್ಮಿಸಬಲ್ಲಳು. ಮಹಿಳಾ ಸಬಲೀಕರಣವು ಪುರುಷ ಮತ್ತು ಮಹಿಳೆಯರ ನಡುವೆ ಸಮಾನತೆಯ ಹೊಸ ಸಮಾಜ ಸೃಷ್ಟಿಸುತ್ತದೆ. ಮಹಿಳೆ ಒಂದು ಸ್ವಯಂ ನಿರ್ಧಾರ ತೆಗೆದುಕೊಂಡರೆ ಅವರೇ ಮುಂದೆ ತಮ್ಮ ಶ್ರಮ ಆದಾಯ, ಲೈಂಗಿಕತೆ, ಸಂತಾನೋತ್ಪತ್ತಿ ಹಾಗೂ ವ್ಯವಹಾರ ನಿರ್ವಹಣೆಯ ಮೇಲೆ ಸೂಕ್ತ ನಿಯಂತ್ರಣ ಹೊಂದುತ್ತಾರೆ. ನಿರ್ಬಂದ ಮುಕ್ತ ವಾತಾವರಣದಿಂದ ಸ್ವತಂತ್ರ ವ್ಯವಸ್ಥೆಗೆ ಕಾಲಿಡುವ ಸ್ತ್ರೀ ಯಾವೊಂದು ವಿಷಯ ವ್ಯವಸ್ಥೆಯನ್ನು ಮೌಢ್ಯತೆಯಿಂದ ಒಪ್ಪಿಕೊಳ್ಳದೇ ಸ್ವತಂತ್ರವಾಗಿ ಚಿಂತಿಸಿ ಅಭಿಪ್ರಾಯ ವ್ಯಕ್ತಪಡಿಸುತ್ತಾಳೆ. ಮಹಿಳೆ ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ಬರಬಹುದಾದ ಎಲ್ಲಾ ತೆರನಾದ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಲು ಸಮರ್ಥಳಾಗಿದ್ದು, ಸಂಕುಚಿತ ಮನೋಭಾವನೆಗಳಿಗೆ ಹೊರತಾಗಿ ಜಾಗತಿಕ ಭಾವನೆಗಳಿಗೆ ಹೆಚ್ಚು ಆಸಕ್ತಿ ತೋರಲು ಇಚ್ಛಿಸುತ್ತಾಳೆ. ರಾಷ್ಟ್ರ ಜೀವನದ ವಿವಿಧ ಸ್ತರಗಳಲ್ಲಿ ಗುರುತಿಸಿಕೊಳ್ಳುವ ಸ್ತ್ರೀಯರಲ್ಲಿ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವ ಪ್ರವೃತ್ತಿ ಬೆಳೆಯುತ್ತದೆ. ತಮ್ಮ ಮಕ್ಕಳನ್ನು ಹೆಚ್ಚು ಲಿಂಗ ಸೂಕ್ಷ್ಮಮತಿಗಳನ್ನಾಗಿ ಸಾಮಾಜೀಕರಿಸುತ್ತಾಳೆ. ಸೂಕ್ಷ್ಮಮತಿಗಳಾಗಿರುವ ಮಹಿಳೆಯರು ರಾಷ್ಟಾಡಳಿತದಲ್ಲಿ ಸೇರ್ಪಡೆಗೊಂಡಲ್ಲಿ ತಮ್ಮ ಪ್ರತಿಭಾ ಪ್ರಕಾಶನದೊಂದಿಗೆ ಅಮೂಲ್ಯ ಸೇವೆ ಸಲ್ಲಿಸುವಲ್ಲಿ ಮಾದರಿಯಾಗಿರುತ್ತಾರೆ. ಸಾಮಾಜಿಕ ಪಿಡುಗುಗಳ ವಿರುದ್ಧ, ಅವಕಾಶ ವಂಚಿತರಪರ ಹೋರಾಟದ ಪ್ರವತ್ತಿ ಬೆಳೆಸಿಕೊಳ್ಳುವುದಲ್ಲದೆ ಮಹಿಳೆಯರು ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸುವಲ್ಲಿ ತಮ್ಮ ಕೊಡುಗೆಯನ್ನು ನೀಡುವಲ್ಲಿ ಸಮರ್ಥರಾಗುತ್ತಾರೆ.

ಮಹಿಳಾ ಸಬಲೀಕರಣವು ಆರ್ಥಿಕ ಸ್ವಾತಂತ್ರ್ಯಕ್ಕೆ ಒತ್ತು ಕೊಟ್ಟು ಆದಾಯ ಗಳಿಕೆ ವೃದ್ಧಿಸಿ, ವರ್ಗ ರಹಿತ ವ್ಯವಸ್ಥೆಗೆ ಮಹತ್ವ ಕೊಡುತ್ತದೆ. ಇದು ಲಿಂಗಾಧಾರಿತ ಶ್ರಮವಿಭಜನೆ, ಸಾಂಪ್ರದಾಯಿಕ ಕಟ್ಟುಪಾಡುಗಳು ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ದೋಷಗಳನ್ನು ನಿವಾರಿಸುತ್ತವೆ. ಮಹಿಳೆಯರಲ್ಲಿ ಪಾರದರ್ಶಕ, ಜವಾಬ್ದಾರಿಯುತ ಭ್ರಷ್ಟಾಚಾರ ರಹಿತ, ಪ್ರಾಮಾಣಿಕ ಆಡಳಿತ ನೀಡುವ ಮನೋಭಾವ ಉಂಟು ಮಾಡುತ್ತದೆ. ಮಹಿಳೆಯು ನ್ಯಾಯ ಸಮ್ಮತವಲ್ಲದ ಸಾಂಪ್ರದಾಯಿಕ ಕಟ್ಟುಪಾಡುಗಳು ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ದೌರ್ಜನ್ಯಗಳ ವಿರುದ್ಧ ಸ್ತ್ರೀ ಪರ ಚಳುವಳಿಗಳಿಗೆ ಸ್ಪಂದಿಸುತ್ತಾಳೆ. ಮಹಿಳಾ ಸಬಲೀಕರಣವು ಪುರುಷ ಪ್ರಧಾನ ವ್ಯವಸ್ಥೆಯ ಅಧೀನತೆ ಒಪ್ಪಿಕೊಳ್ಳದೇ ಸಹಕಾರ ಹೊಂದಾಣಿಕೆ, ಸಾಮರಸ್ಯ ಭಾವನೆಯ ಸರ್ವಸಮ್ಮತ ವ್ಯವಸ್ಥೆಗೆ ಇದು ಬುನಾದಿ ಹಾಕುತ್ತದೆ. ಮಹಿಳಾ ಸಶಕ್ತತೆಯಿಂದ ಸಮಾಜದ ಪುನರ್ ರಚನೆಯಾಗುವುದರ ಮೂಲಕ ವ್ಯಾಪಕ ಬದಲಾವಣೆಗೆ ಅವಕಾಶ ಮಾಡಿಕೊಡುತ್ತದೆ. ಮತ್ತು ಮಹಿಳೆಯರು ತಮ್ಮ ಅನಿಸಿಕೆ, ಭಾವನೆ, ಅನುಭವಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಹಾಯವಾಗುತ್ತದೆ.

ಸಮಾಜ ಜೀವನದಲ್ಲಿ ಅನುಭವಿಸುವಂತಹ ಎಲ್ಲಾ ರೀತಿಯ ಸಾಮಾಜಿಕ ಅನ್ಯಾಯ ಮತ್ತು ಶೋಷಣೆಯಿಂದ ಮುಕ್ತಿ ಪಡೆದು ಮಾನವೀಯ ದೃಷ್ಟಿಯಿಂದ ಬದುಕು ಸಾಗಿಸಬೇಕಾದರೆ, ಮಹಿಳಾ ಸಬಲೀಕರಣದ ಮಹತ್ವ ಸಾಕಷ್ಟಿದೆ ಎನ್ನಬಹುದು. ಉತ್ತಮ ನಾಯಕತ್ವದ ಗುಣ ಬೆಳೆಸುವುದರ ಜೊತೆಗೆ ಆಡಳಿತಾತ್ಮಕ ತರಬೇತಿಯೊಂದಿಗೆ ಸಮಾಜದಲ್ಲಿ ಮಾದರಿ ಆಗುವುದಕ್ಕೆ ಮುಕ್ತ ಅವಕಾಶ ದೊರಕಿಸಿ ಕೊಟ್ಟಂತಾಗುತ್ತದೆ. ಲಿಂಗಾಧಾರಿತ ಅಸಮಾನತೆಯ ನೆಲೆಗಳನ್ನು ಒಡೆದುಹಾಕಿ ದೌರ್ಜನ್ಯದಿಂದ ದೂರ ಮಾಡುವ ಪ್ರಯತ್ನವನ್ನು ಎಂಗಲ್ಸ್‌ರವರ ವಿಚಾರಗಳಲ್ಲಿ ಕಾಣಬಹುದಾಗಿದೆ. 'ಸ್ತ್ರೀ ಸ್ವಾತಂತ್ರ್ಯ ಮತ್ತು ಲಿಂಗಾಧಾರಿತ ಸಮಾನತೆಗಳಿಲ್ಲದೆ ಮನುಕುಲದ ವಿಮೋಚನೆ ಅಸಾಧ್ಯ' ಎಂಬ ಬೆಬಲ್‌ರ ವಿಚಾರಗಳು ಮಹಿಳಾ ಸಬಲೀಕರಣದ ಮಹತ್ವವನ್ನು ಸಾರುತ್ತದೆ. (ಇಂದಿರಾ ಆರ್, ೨೦೧೧)

೪.೯. ಸ್ತ್ರೀವಾದ ಮತ್ತು ಮಹಿಳಾ ಅಭಿವೃದ್ಧಿಯ ಸಿದ್ಧಾಂತಗಳು

ಸಮಾಜದ ನಾನಾ ಕ್ಷೇತ್ರಗಳಲ್ಲಿರುವ ಸ್ತ್ರೀಯರು ಹಲವಾರು ರೀತಿಯ ಶೋಷಣೆ, ದಮನ ಹಾಗೂ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದು ಇದನ್ನು ಗುರುತಿಸುವುದರ ಜೊತೆಗೆ ಇಂತಹ ದುಷ್ಟ ಪ್ರವೃತ್ತಿಗಳನ್ನು ನಿವಾರಣೆ ಮಾಡಲು ಹುಟ್ಟಿಕೊಂಡ ಚಳುವಳಿಯೇ ಸ್ತ್ರೀ ವಾದ ಚಳುವಳಿ. 'ಸ್ತ್ರೀವಾದ'ವೆಂಬುದು ಒಂದು ಸಿದ್ಧಾಂತವಾಗಿದ್ದು, ಇದು ಆಧುನಿಕ ಸಮಾಜದಲ್ಲಿ ಸ್ತ್ರೀಯರು ಹೇಗೆ ಕ್ರಮಬದ್ಧವಾಗಿ ಅನಾನುಕೂಲತೆಗೆ ಒಳಗಾಗಿದ್ದಾರೆ ಎಂಬುದನ್ನು ತಿಳಿಸುವುದಲ್ಲದೆ, ಸ್ತ್ರೀ ಪುರುಷರಿಗೆ ಸಮಾನ ಅವಕಾಶಗಳಿರಬೇಕೆಂಬುದನ್ನು ಪ್ರತಿಪಾದಿಸುತ್ತದೆ.

೪.೯.೧ ಸ್ತ್ರೀವಾದದ ಉಗಮ ಮತ್ತು ಸ್ವರೂಪ

ಫೆಮಿನಿಸಂ ಅಥವಾ ಸ್ತ್ರೀ ವಾದ ಎಂಬ ಪದವು ಅದರ ಈಗಿನ ಅರ್ಥದಲ್ಲಿ ಬಹುತೇಕ ಆಧುನಿಕವಾದುದ್ದು. ಈ ಪದವನ್ನು ೧೮೭೧ ರ ಫ್ರೆಂಚ್ ವೈದ್ಯಕೀಯ ಗ್ರಂಥದಲ್ಲಿ ಮೊದಲ ಬಾರಿಗೆ

ಬಳಸಲಾಯಿತು. ಪುರುಷರ ಲೈಂಗಿಕ ಅಂಗಗಳ ಬೆಳವಣಿಗೆ ಕುಂಠಿತವಾದಾಗ ಕಾಣಿಸಿಕೊಳ್ಳುವ ಲಕ್ಷಣಗಳನ್ನು ಗುರುತಿಸಿ ಅದರಿಂದಾಗಿ ಅವರ ದೇಹ ಸ್ತ್ರೀತ್ವದಿಂದ ನರಳುತ್ತಿದೆ ಎಂದು ವಿವರಿಸಲು 'ಫೆಮಿನಿಸಂ' ಎಂಬ ಪದವನ್ನು ಬಳಸಲಾಯಿತು. ನಂತರ ೧೮೭೨ರಲ್ಲಿ ಫ್ರೆಂಚ್ ಲೇಖಕ ಅಲೆಕ್ಸಾಂಡರ್ ಡೋಮಸ್ ಎಂಬಾತ ಫೆಮಿನಿಸಂ ಪದವನ್ನು 'ವ್ಯಭಿಚಾರ' ಎನ್ನುವ ಪದಕ್ಕೆ ಸಮಾನಾಂತರವಾಗಿ ಬಳಸಿದ. ಮಹಿಳೆಯರನ್ನು ವಿಟಪುರುಷರಂತೆ ವರ್ಣಿಸಲು ಈ ಪದವನ್ನು ಅದೇ ಅರ್ಥದಲ್ಲಿ ಬಳಸಲಾಯಿತು.

ಚಿಂತನೆ, ಪ್ರತಿಪಾದನೆ ಹಾಗೂ ಹೋರಾಟಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು ಆಧರಿಸಿ ಸ್ತ್ರೀ ವಾದವು ವಿವಿಧ ಶಾಖೆಗಳಾಗಿ ಹೊರಹೊಮ್ಮಿತು. ಅವೇ ಉದಾರವಾದಿ ಸ್ತ್ರೀವಾದ, ತೀವ್ರಗಾಮಿ ಸ್ತ್ರೀವಾದ, ಮಾರ್ಕ್ಸ್‌ವಾದಿ ಸ್ತ್ರೀವಾದ, ಸಮಾಜವಾದಿ ಸ್ತ್ರೀವಾದ, ಮನೋವಿಶ್ಲೇಷಣಾತ್ಮಕ ಸ್ತ್ರೀವಾದ, ಅಸ್ತಿತ್ವವಾದಿ ಸ್ತ್ರೀವಾದ, ಆಧುನಿಕೋತ್ತರ ಸ್ತ್ರೀವಾದ, ಪರಿಸರ ಸ್ತ್ರೀವಾದ ಮತ್ತು ಸಾಂಸ್ಕೃತಿಕ ಸ್ತ್ರೀವಾದ. (ನೇಮಿಚಂದ್ರ, ೨೦೦೧).

ಮಹಿಳೆಯರ ಪರಾಧೀನತೆ ಹಾಗೂ ತುಳಿತಕ್ಕೆ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಕಾರಣ ಹುಡುಕುವಲ್ಲಿ ಸ್ತ್ರೀವಾದಿ ಸಿದ್ಧಾಂತಗಳು ಹುಟ್ಟಿಕೊಂಡವು. ಮೇರಿವುಲ್ ಸ್ಟಾನ್ ಕ್ರಾಫ್ಟಲ್ ಸ್ತ್ರೀ ಪರ ವಾದಕರ ಚಿಂತಕರಲ್ಲಿ ಮೊದಲಿಗರು. ೨೦ ನೇ ಶತಮಾನದ ಮೊದಲ ಭಾಗದಲ್ಲಿ ವರ್ಜೀನಿಯ ವುಲ್ಫ್, ಚಾರೊಲೆಟ್ ಪರ್ಕಿನ್, ಗಿಲ್‌ಮನ್, ಸಿಮೋನ್‌ದ ಬೋವಾ ಮತ್ತು ಬೆಟ್ಟಿ ಫ್ರೀಡನ್ ಇವರುಗಳು ಪ್ರಮುಖ ಸ್ತ್ರೀವಾದಿಗಳು. (ಹೇಮಲತಾ.ಎಚ್.ಎಂ, ೨೦೦೮). ಮೇರಿವುಲ್ ಸ್ಟಾನ್ ಕ್ರಾಫ್ಟಲ್ ರವರು ೧೭೯೨ರಲ್ಲಿ ಪ್ರಕಟಿಸಿರುವ 'ಎ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವುಮೆನ್ಸ್' ಎಂಬ ಕೃತಿಯಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಭಾವನೆಯ ಪರಿಕಲ್ಪನೆಯನ್ನು ಸ್ತ್ರೀಯರಿಗೂ ಅನ್ವಯಿಸುವಂತೆ ಒತ್ತಾಯಿಸಿದ್ದಾರೆ. ಜೆ.ಎಸ್.ಮಿಲ್ ಅವರು ೧೮೬೯ರಲ್ಲಿ ಪ್ರಕಟಿಸಿರುವ 'ದಿ ಸಬ್‌ಜೆಕ್ಷನ್ ಆಫ್ ದಿ ವುಮೆನ್' ಕೃತಿಯಲ್ಲಿ ಸ್ತ್ರೀಯರ ಹಿತಾಸಕ್ತಿ ಕಾಪಾಡುವುದರಲ್ಲಿ ಕಾಯ್ದೆಗಳು ಕಟ್ಟುನಿಟ್ಟಾಗಿರುವಂತೆ ವಾದಿಸಿದ್ದಾರೆ. ಅಷ್ಟೇ ಅಲ್ಲದೇ ಮಹಿಳೆಯು ತನ್ನ ಇಚ್ಛೆಯನುಸಾರ ದುಡಿಯುವ ಅಥವಾ ದುಡಿಮೆ ಬಿಡುವ ಸ್ವಾತಂತ್ರ್ಯವನ್ನು ಪಡೆದುಕೊಂಡರೆ ಮಾತ್ರ ಆಕೆ ವಿಮೋಚನೆ ಪಡೆದು ಸಶಕ್ತಳಾಗುತ್ತಾಳೆ ಎಂದಿದ್ದಾರೆ. ೧೯೬೩ರಲ್ಲಿ ಬೆಟ್ಟಿ ಫೀಡನ್ನಳ 'ದಿ ಫೆಮಿನೈನ್ ಮಿಸ್ಟಿಕ್ ಮತ್ತು ದಿ ಸೆಕೆಂಡ್ ಸ್ಟೇಜ್' ಎಂಬ ಕೃತಿಯಲ್ಲಿ ಮಹಿಳೆಯ ವ್ಯಕ್ತಿತ್ವ ವಿಕಸನಕ್ಕೆ ಮನೆಯ ಹೊರಗಡೆ ಅವರ ಕ್ರಿಯಾತ್ಮಕ ಪಾಲುಗಾರಿಕೆಯ ಅಗತ್ಯತೆ ಇದೆ ಎಂಬುದಾಗಿ ವಾದಿಸಿದ್ದಾರೆ. ಮೇಡಂ ದಿ ಸ್ಟಲ್ ರೋಲ್ಯಾಂಡ್-ಬಿಲನ್‌ತಿ ರೋಜಸ್, ದಿ ಮೆರಿಕೋಟ್ ಮುಂತಾದ ಸ್ತ್ರೀ ವಾದಿಗಳು ಪುರುಷರಷ್ಟೇ ಸಮಾನ ಹಕ್ಕುಗಳು ಮಹಿಳೆಯರಿಗೂ ಇರಬೇಕು ಎಂದಿದ್ದಾರೆ. (ಯೋಗರಾಜ್.ಎಸ್,ಡಿ, ೨೦೧೩)

ಸ್ತ್ರೀವಾದವು ಮಹಿಳೆ ಮತ್ತು ಪುರುಷರ ನಡುವೆ ಸಮಾನ ಅವಕಾಶಕ್ಕೆ ಒತ್ತು ನೀಡುತ್ತದೆ. ಇದು ಮಹಿಳೆಯರ ಸಮಾನ ಹಕ್ಕುಗಳಿಗಾಗಿ ಹೋರಾಡುವುದರ ಕಡೆಗೆ ಮಹಿಳೆಯರನ್ನು ಹುರಿದುಂಬಿಸಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಪ್ರೇರೇಪಿಸುತ್ತದೆ. ಕಾನೂನು ಹಾಗೂ

ಸಂಪ್ರದಾಯಗಳಲ್ಲಿರುವ ಲಿಂಗ ಅಸಮಾನತೆಯನ್ನು ತೊಡೆದು ಹಾಕಲು ನಡೆಸಿದ ಹೋರಾಟಗಳ ಪರಿಣಾಮವಾಗಿ ಸ್ತ್ರೀವಾದಿಗಳು ವಿಶ್ವದ ಗಮನ ಸೆಳೆದರು. ಈ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಸಶಕ್ತತೆಯನ್ನು ಸಾಧಿಸುವ ಎಲ್ಲಾ ರೀತಿಯ ಪ್ರಯತ್ನಗಳು ನಡೆದವು.

೪.೯.೨ ಸಮಾಜ ಮಹಿಳಾವಾದ

ಇಪ್ಪತ್ತನೆಯ ಶತಮಾನದಲ್ಲಿ ಮಹಿಳಾ ನಿಯತಕಾಲಿಕೆಗಳು, ಮಹಿಳೆಯ ಶೈಕ್ಷಣಿಕ ಸಂಸ್ಥೆಗಳು, ಮಹಿಳಾ ಸಂಘಟನೆಗಳು ಮತ್ತು ಮಹಿಳಾ ಪರವಾದ ಇನ್ನಿತರ ಮೂಲಗಳು ನಡೆಸಿದ ಪ್ರಯತ್ನಗಳಿಂದಾಗಿ ಮಹಿಳೆಯರು ತಮ್ಮ ಧ್ವನಿಯನ್ನು ಕಂಡುಕೊಳ್ಳುವುದು ಸಾಧ್ಯವಾಯಿತು. ಮಹಿಳೆಯರು ನಕಾರಾತ್ಮಕ ಹೆಣಭಾರದಂತಿರುವ ಸಂಸ್ಕೃತಿಯ ವಿರುದ್ಧ, ಒತ್ತಡಾತ್ಮಕ ಕೌಟುಂಬಿಕತೆಯ ವಿರುದ್ಧ, ದೂರವಿಟ್ಟ ರಾಜಕಾರಣದ ವಿರುದ್ಧ, ಹಿಂಸಿಸುವ ಮೂಢನಂಬಿಕೆ ಮತ್ತು ಆಚಾರ ವಿಚಾರಗಳ ವಿರುದ್ಧ, ಲೈಂಗಿಕ ವಸ್ತುವೆಂಬ ಭ್ರಮಾಧೀನರ ವಿರುದ್ಧ, ನಿರುದ್ಯೋಗ, ಅಪೌಷ್ಟಿಕತೆ, ಸಾರ್ವಜನಿಕತೆ, ಭಾವನಾತ್ಮಕತೆ, ಪದಾರ್ಥವಾದಿತ್ವಗಳ ವಿರುದ್ಧ ಇನ್ನೂ ಸೆಣಸುತ್ತಲೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳ ಬೇಕಿದೆ ಎಂದು ಸಮಾಜವಾದವು ಸೂಚಿಸಿತು. ಆ ಮೂಲಕ ಇವೆಲ್ಲವುಗಳನ್ನು ದೂರೀಕರಿಸಿ ಸಮಾನ ಬದುಕಿಗಾಗಿ ಹಂಬಲಿಸುವ ಆಸೆಯನ್ನು ಸಮಾಜವಾದವು ಹುಟ್ಟುಹಾಕಿತು. ಒಟ್ಟಾರೆಯಾಗಿ ಸಮಾಜವಾದವು ಮಹಿಳೆಯರನ್ನು ಜಾಗೃತಗೊಳಿಸುತ್ತಲೇ ತನ್ನ ಅಸ್ತಿತ್ವದ ಕುರಿತು ಮಹಿಳೆಯರಲ್ಲಿಯೆ ಪ್ರಶ್ನೆ ಮೂಡುವಂತೆ ಮಾಡುವ ಮೂಲಕ ಹೊಸ ಕಾರ್ಯವೊಂದಕ್ಕೆ ಅಣಿಗೊಳಿಸಿತು.

ಸಮಾನ ಸಮಾಜವು ಗಂಡು-ಹೆಣ್ಣುಗಳ ಸಮಾನ ಸಂಸ್ಥೆಯಾಗಿದೆ. ಈ ಸಂಸ್ಥೆಯಲ್ಲಿ ಯಾರೂ ಮೇಲಲ್ಲ ಯಾರು ಕೀಳೂ ಅಲ್ಲ. ಆಧುನಿಕ ಸಮಾಜವೂ ಕೂಡಾ ಮಹಿಳೆಯರ ಪರವಾದ ಉದಾತ್ತ ಚಿಂತನೆಗಳನ್ನು ಬೆಳೆಸಿಕೊಳ್ಳುವಲ್ಲಿ ಹಿಂದೇಟು ಹಾಕುತ್ತಿದೆ. ಮನೆಗೆಲಸ, ಮಕ್ಕಳನ್ನು ಹೆರುವುದು ಮತ್ತು ಹೊರುವುದು, ಮನೆಯ ಇನ್ನಿತರ ಜವಾಬ್ದಾರಿಗಳಿಂದ (ಮದುವೆ, ಕುಟುಂಬ, ತಾಯ್ತನ) ಮಹಿಳೆಯನ್ನು ಬಂಧಿಸಲಾಗಿದೆ. ಮಹಿಳೆಯು ಶಿಕ್ಷಣದಿಂದ ವಂಚಿತಳಾಗುತ್ತಿರುವುದು ಮುಕ್ತವಾಗಿ ಮುಂದುವರೆಯುತ್ತಲೇ ಇದೆ. ಸಾಮಾಜಿಕವಾಗಿ ರಾಜಕೀಯವಾಗಿ ಚೇತರಿಕೆಗಳನ್ನು ನೀಡದೆ ಆರ್ಥಿಕವಾಗಿ ದುರ್ಬಲಗೊಳಿಸುವ ಹಾಗೂ ಯಾಂತ್ರಿಕತೆಯ ಜೀವನ ಸಾಗಿಸುವ ವಸ್ತುವನ್ನಾಗಿಸಿದೆ. ಮಹಿಳೆಯರ ಪರವಾದ, ಸಮಾನ ಬದುಕಿಗೆ ಪ್ರೇರೇಪಿಸುವಂತಹ ಮಹದಂಶಗಳನ್ನು ಹೊಂದಿರುವ ಮಹಿಳೆಯರಿಗೆ ಭುಜಕೊಡುವ ಕಾರ್ಯವನ್ನು ಸಮಾಜವಾದವು ಮಾಡುತ್ತಿದೆ.

ಈ ಮೊದಲಿಗೆ ರಷ್ಯಾದಲ್ಲಿ ಮಹಾಕ್ರಾಂತಿಯ ನಂತರ ಮಹಿಳೆ ಬಗೆಗಿನ ಧೋರಣೆಗಳು ಸಮಾಜವಾದದ ವ್ಯವಸ್ಥೆಯಲ್ಲಿ ಬದಲಾದವು. ಮಹಿಳೆಯರಲ್ಲಿ ವೈಚಾರಿಕ ಮತ್ತು ವೈಜ್ಞಾನಿಕ ಬೆಳವಣಿಗೆ ಅವರನ್ನು ಶ್ರೇಷ್ಠ ವ್ಯಕ್ತಿತ್ವವನ್ನು ಹೊಂದುವಂತೆ ಮಾಡಿ ಅದಕ್ಕೆ ಬದ್ಧವಾಗಿ ಬದುಕುವಂತೆ ಪ್ರೇರೇಪಿಸಿ ಅಡಿಪಾಯ ಹಾಕಿಕೊಟ್ಟವು. ಮಹಿಳೆಯರನ್ನು ಕೌಟುಂಬಿಕ ಬಂಧನದಿಂದ ಬಿಡುಗಡೆಗೊಳಿಸಿ ತಾಯ್ತನದ ಅವಧಿಯಲ್ಲಿ ವೇತನ ಸಹಿತ ರಜೆ ಘೋಷಿಸುವುದು ತಾಯಂದಿರಿಗೆ ಪ್ರೋತ್ಸಾಹದಾಯಕವಾಗಿ ಬಿರುದು ಬಳುವಳಿಗಳನ್ನು ನೀಡುವುದು ಮಾಡಿತು. ಮಹಿಳೆಯರನ್ನು ಅಲ್ಲಿ

ಸಂಪ್ರದಾಯ, ಕಂದಾಚಾರ, ಮೌಢ್ಯ ಹಾಗೂ ಪೂರ್ವಗ್ರಹ ಪೀಡನೆ ಇವುಗಳಿಂದ ಮುಕ್ತಗೊಳಿಸಲಾಯಿತು. ಆಂತರಿಕ ಮತ್ತು ಬಾಹ್ಯ ಯಾವುದೇ ಬಗೆಯ ಶತ್ರುಗಳಾಗಲಿ ಹಾಗೂ ಎಂತಹುದೇ ಪರಿಸ್ಥಿತಿಯನ್ನಾಗಲಿ ಎದುರಿಸಲು ಸಿದ್ಧರಿರಬೇಕು ಎಂದು ಕಾಮ್ರೇಡ್ ಲೆನಿನ್ ಅಭಿಪ್ರಾಯಪಟ್ಟಿದ್ದರು. ಮಹಿಳಾ ವಿಮೋಚನೆ ಸಮಾನತೆ ಸ್ವಾತಂತ್ರ್ಯಕ್ಕೆ ಗಮನ ನೀಡಿದಂತೆಯೇ ಸಮಾಜವಾದಿ ಹೋರಾಟಗಳ ಯಶಸ್ಸಿಗೆ ಹಾಗೂ ಸಮಾಜವಾದಿ ದೇಶದ ಉಗಮಕ್ಕೆ ಮಹಿಳೆಯೂ ಕೂಡ ಪುರುಷರೊಂದಿಗೆ ಸಮನಾಗಿ ನಿಂತು ಆಡಳಿತ ಮತ್ತು ರಾಜಕೀಯದ ಒಳಹೊರಗಿನ ವ್ಯವಸ್ಥೆಯನ್ನು ನಿರ್ವಹಿಸಲು ಪಣ ತೊಟ್ಟು ನಿಲ್ಲಬೇಕೆಂದು ಅದಕ್ಕಾಗಿ ರಾಜಕೀಯ ಪ್ರವೇಶ ಮಹಿಳೆಯರಿಗೆ ಅನಿವಾರ್ಯ ಎಂದು ಲೆನಿನ್ ಹೇಳಿದ್ದರು. ಮಹಿಳೆಯರಿಗೆ ಶಿಕ್ಷಣ ನೀಡಿ ಅವರಿಗೂ ಸರಿಸಮಾನ ಸಾಮಾಜಿಕ, ಆರ್ಥಿಕ, ರಾಜಕೀಯ ಅವಕಾಶಗಳನ್ನು ಕಲ್ಪಿಸಿಕೊಡುವುದು ಕರ್ತವ್ಯವೆಂಬಂತೆ ರಷ್ಯಾ ಭಾವಿಸಿತು. ಇದು ವಿಶ್ವದ ಗಮನ ಸೆಳೆಯಿತು. ಭಾರತದಲ್ಲಿಯೂ ಸಮಾಜವಾದ ಬೆಳೆಯುತ್ತಲೆ ಮಹಿಳಾಪರವಾದ ಚಿಂತನೆಗಳಿಗೆ ರೆಕ್ಕೆ ಮೂಡಲಾರಂಭಿಸಿತು. ಸಮಾನತೆಯೆಂಬುದು ಒಂದು ಮನೋದೃಷ್ಟಿಯಾಗಿದ್ದು ಅದನ್ನು ಯಾವಾಗಲೂ ಶಾಸನ ಅಥವಾ ತರ್ಕದ ಮೂಲಕ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಜಾತಿ ಮತ್ತು ಲಿಂಗಗಳ ಆಧಾರದ ಮೇಲೆ ಜನರನ್ನು ದೂರವಿಡುವ ಮತ್ತು ಅವರ ಬಗ್ಗೆ ಪಕ್ಷಪಾತವೆಸಗುವ ಕ್ರಮಗಳು ಶಾಸನಗಳನ್ನು ಉಲ್ಲಂಘಿಸಿಯಾದರೂ ಮತ್ತು ಅನೈತಿಕವಾಗಿಯಾದರೂ ನಮ್ಮವರೇ ಆದ ಜನರನ್ನು ಶೋಷಿಸಿ ಹೆಚ್ಚು ಅನುಕೂಲ ಪಡೆದುಕೊಳ್ಳಬೇಕೆಂಬ ಬಲಾಢ್ಯರ ಕುತಂತ್ರಗಳನ್ನು ತೋರಿಸುತ್ತವೆ. ಇದನ್ನು ಸಮಾಜವಾದವು ಒಪ್ಪದೇ ಶೋಷಿಸುವ ಶಾಸನಗಳನ್ನು ತಿರಸ್ಕರಿಸುತ್ತಲೆ ಸಮಾನವಾಗಿ ಬದುಕುವ ಕಲೆಯನ್ನು ಪ್ರತಿಪಾದಿಸುತ್ತದೆ.

ಸಮಾಜವಾದಿ ಲೋಹಿಯಾ ಅವರು ಮಹಿಳೆಯೂ ಶೂದ್ರ ಎನ್ನುವ ಗುಂಪಿನಲ್ಲಿ ಸೇರುತ್ತಾಳೆ ಎಂದಿದ್ದು, ಮಹಿಳೆಯರು ಶೂದ್ರರು ಎಂಬ ಕಾರಣವು ಮಹಿಳೆಯರಿಗೆ ವ್ಯವಸ್ಥಿತವಾಗಿ ಅನ್ಯಾಯವನ್ನು ಅನುಭವಿಸಿಕೊಂಡು ಬರುವಂತಾಗಿದೆ. ಮಹಿಳೆಯರು ಪ್ರಗತಿಗಾಣಬೇಕಿದೆ. ಮಹಿಳಾ ಮೀಸಲಾತಿ ಕುರಿತಂತೆಯೂ ಸಮಾಜವಾದವು ಪ್ರತಿಪಾದಿಸಿತು. ಪುರುಷನಷ್ಟೆ ಸಮನಾದ ಬದುಕು ಮಹಿಳೆಯದಾಗಿದ್ದು ಉದ್ಯೋಗ, ರಾಜಕೀಯ, ಆರ್ಥಿಕ ಸಬಲತೆಗಳು ದೊರಕಬೇಕೆಂದು ಸಮಾಜವಾದವು ಪ್ರತಿಪಾದಿಸಿತು. ಚಳುವಳಿಗಳ ಮೂಲಕ ಮಹಿಳೆಯರ ವಿಮೋಚನೆಗೆ ಸಂಬಂಧಿಸಿದಂತೆ ದೊಡ್ಡ ಬದಲಾವಣೆ ಮಾಡಲು ಪ್ರಯತ್ನಿಸಲಾಯಿತು. ೧೯ನೇ ಶತಮಾನದಲ್ಲಿ ಮೇರಿ ಕಾರ್ಪೆಂಟರ್, ಅಗೆಟ್ಟಬೆವರಿಡ್ಜ್, ಅನಿಬೆಸೆಂಟ್, ಕಮಲಾದೇವಿ, ಪೊನ್ನಮ್ಮಾಳ್ ಮುಂತಾದ ಮಹಿಳಾ ಸುಧಾರಕರ ಪ್ರಯತ್ನವು ಸೇರಿ ಮಹಿಳೆಯರ ಶೋಷಣೆ ವಿರುದ್ಧ ಹೋರಾಟಕ್ಕೆ ನವಚೈತನ್ಯ ಪ್ರಾಪ್ತವಾಯಿತು. ವಚನ ಸಾಹಿತ್ಯವೂ ಕಾರಣವಾಗಿ ಕರ್ನಾಟಕದಲ್ಲಿ ಹೊಸ ರೂಪವನ್ನು ಮಹಿಳಾ ಸಮಾಜವಾದವು ಪಡೆದುಕೊಂಡಿತು.

ಮಹಿಳಾವಾದಗಳೂ ಮಹಿಳೆ ಹಾಗೂ ಪುರುಷರ ಮಧ್ಯೆ ಸಮಾನತೆಯ ಆಶಯವನ್ನು ಹೊಂದಿವೆ. ಮಹಿಳೆಯರನ್ನು ನಿರ್ಣಯ ತೆಗೆದುಕೊಳ್ಳುವ ಪ್ರಕಿಯೆಯಲ್ಲಿ ತೊಡಗಿಸಿಕೊಳ್ಳುವ ಬಗ್ಗೆ ಪ್ರಯತ್ನ ಹಾಗೂ ಮಹಿಳೆಯನ್ನು ಪುರುಷರ ಅಡಿಯಾಳಾಗಿ ನಡೆಸಿಕೊಳ್ಳುವ ಬಗ್ಗೆ ವಿರೋಧ ಇವು ಮಹಿಳಾವಾದದ ಮುಖ್ಯ ಕಾರ್ಯಸೂಚಿಗಳಾಗಿವೆ. ಕುಟುಂಬ ವ್ಯವಸ್ಥೆಯ ರಾಚನಿಕ ಲೋಪಗಳು ಲಿಂಗತಾರತಮ್ಯ ಮತ್ತು ಹಿಂಸೆ ಜೀವಂತವಾಗಿರಲು ಮುಖ್ಯ ಕಾರಣ ಎನ್ನುವುದು ಮಹಿಳಾವಾದಿಗಳ ಅಭಿಪ್ರಾಯವಾಗಿದೆ. ಭಾರತೀಯ ಕುಟುಂಬ ವ್ಯವಸ್ಥೆಯು ಮನೆ, ಮಕ್ಕಳು, ಸಂಸಾರದ ಸಕಲ ಏಳು ಬೀಳುಗಳನ್ನು ಹೆಣ್ಣಿನ ತಲೆಗೆ ಕಟ್ಟುತ್ತದೆ. ಎಷ್ಟು ಓದಿದರೂ, ಅಧಿಕಾರದ ಯಾವುದೇ ಸ್ಥಾನದಲ್ಲಿದ್ದರೂ, ಆರ್ಥಿಕವಾಗಿ ಸಬಲಳಾದರೂ ಕುಟುಂಬದಲ್ಲಿ ಹೆಣ್ಣು ನಿಭಾಯಿಸಬೇಕಾದ ಪಾತ್ರಗಳ ಸ್ವರೂಪ ಬದಲಾಗಿಲ್ಲ. ಅಡುಗೆ-ಮನೆವಾರ್ತೆಗಳೆಂಬ ಎರಡು ಕೊನೆಮೊದಲಿರದ ಜವಾಬ್ದಾರಿಗಳು ಮತ್ತು ಪೋಷಿಸುವ ನಿರೀಕ್ಷೆಗಳು ಹೆಣ್ಮಕ್ಕಳು ಕೌಟುಂಬಿಕ ವಲಯಕ್ಕೆ ತಮ್ಮ ಕೆಲಸ, ಶಕ್ತಿಗಳ ಮಿತಿಗೊಳಿಸಿಕೊಳ್ಳುವಂತೆ ಮಾಡುತ್ತವೆ. ಹೆಣ್ಣಿನ ಅವಕಾಶ-ಸಾಧ್ಯತೆಗಳನ್ನು ಮಿತಿಗೊಳಿಸುತ್ತವೆ. (ಮಂಜುನಾಥ.ಬಿ.ಟಿ, ೨೦೧೮).

ಮಹಿಳಾವಾದವು ಹಲವು ಸಾಮಾಜಿಕ ಸಿದ್ಧಾಂತಗಳಿಂದ, ರಾಜಕೀಯ ಚಳುವಳಿಗಳು ಹಾಗೂ ತತ್ವಗಳಿಂದ ರೂಪಿತವಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ಮಹಿಳಾವಾದವು ಪ್ರಸ್ತುತ ಸಾಮಾಜಿಕ ಸಂಬಂಧಗಳನ್ನು ಅದರಲ್ಲೂ ಲಿಂಗಾಧಾರಿತ ಸಂಬಂಧಗಳನ್ನು ಟೀಕಿಸುವ ಪ್ರಯತ್ನ ಮಾಡುತ್ತದೆ. ಇದು ಲಿಂಗಭೇದದ ಮೂಲ, ಲಕ್ಷಣಗಳು ಹಾಗೂ ವಿಧಗಳನ್ನು ಗಮನಿಸುತ್ತದೆ ಮತ್ತು ಈ ವಿಷಯಗಳನ್ನು ಬಳಸಿಕೊಂಡು ಲಿಂಗಾಧಾರಿತ ನೀತಿಗಳು, ಶಕ್ತಿ ಸಂಬಂಧಗಳು ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಅವುಗಳ ಪಾತ್ರವನ್ನು ಉಲ್ಲೇಖಿಸುತ್ತದೆ. ಮಹಿಳಾವಾದವು ಮೂಲತಃ ಜಾಗೃತ ರಾಜಕೀಯ ಕ್ರಿಯವಾದವಾಗಿದೆ. ಮಹಿಳಾವಾದದ ರಾಜಕೀಯ ಚಿಂತನೆಗಳು ಪ್ರಸ್ತುತ ಸಾಮಾಜಿಕ ಸಮಸ್ಯೆಗಳಾದ ಸಂತನೋತ್ಪತ್ತಿಯ ಹಕ್ಕು, ಕೌಟುಂಬಿಕ ದೌರ್ಜನ್ಯ, ಮಾತೃತ್ವ ರಜೆ, ಸಮಾನ ವೇತನ, ಲೈಂಗಿಕ ಕಿರುಕುಳ, ತಾರತಮ್ಯ, ಲೈಂಗಿಕ ಹಿಂಸೆ ಮತ್ತು ದಬ್ಬಾಳಿಕೆಯಿಂದ ಮಹಿಳೆಯರಿಗೆ ಶೀಘ್ರ ಪರಿಹಾರವನ್ನು ಬದಗಿಸಿ ಕೊಡುವುದಾಗಿದೆ. ಅಭಿವೃದ್ಧಿ ಸಿದ್ದಾಂತಗಳು ಮಹಿಳಾ ಶೋಷಣೆ ಹಾಗೂ ಲಿಂಗ ತರತಮ್ಯವನ್ನು ವಿರೋಧಿಸುತ್ತಾ ಬಂದಿದ್ದು ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೊರತು ಪಡಿಸಿದ ನೀತಿ ನಿರ್ಣಯಗಳಿಂದ ಅಭಿವೃದ್ಧಿ ಸಾಧಿಸಲು ಅಸಾಧ್ಯ ಎಂಬುದನ್ನು ಪ್ರಮಾಣೀಕರಿಸಿದೆ.

೪.೯.೩ ಮಹಿಳಾವಾದ ಹಾಗೂ ಮಹಿಳಾಭಿವೃದ್ಧಿಯ ವಿವಿಧ ಸಿದ್ಧಾಂತಗಳು

ಮಹಿಳಾವಾದ ಹಲವಾರು ವಿಭಿನ್ನ ಸಾಮಾಜಿಕ ಸಿದ್ಧಾಂತಗಳು, ಸಾಮಾಜಿಕ ಚಳುವಳಿಗಳು ಹಾಗೂ ತರ್ಕಗಳಿಂದ ರೂಪಿಸಲ್ಪಟ್ಟಿದೆ. ಮಹಿಳಾವಾದದ ಹೆಚ್ಚಿನ ಚಿಂತನೆಗಳು ಪ್ರಚಲಿತ ಸಾಮಾಜಿಕ ಸಂಬಂಧಗಳು ಅದರಲ್ಲೂ ಮುಖ್ಯವಾಗಿ ಲಿಂಗಾಧಾರಿತ ಸಂಬಂಧಗಳನ್ನು ಮತ್ತು ಶಕ್ತಿ ಸಂಬಂಧಗಳನ್ನು ಟೀಕಿಸುವ ಪ್ರಯತ್ನಗಳಾಗಿವೆ. ಮಹಿಳಾವಾದದಲ್ಲಿ ಅಭಿವೃದ್ಧಿಯ ವಿಷಯ ಹಾಗೂ ಪ್ರಯತ್ನಗಳು ಮುಖ್ಯವಾಗಿ ಸಮಾಜದಲ್ಲಿ ಕಂಡುಬರುವ ಅಸಮಾನತೆಯನ್ನು ತೊಡೆದುಹಾಕುವ ಬಗ್ಗೆ

ಕೇಂದ್ರೀಕೃತವಾಗಿವೆ. ಮಹಿಳೆಯರನ್ನು ಕೀಳಾಗಿ ಕಾಣುವ ಪದ್ಧತಿಯನ್ನು ನಿರ್ಮೂಲನೆ ಮಾಡುವ ಬಗ್ಗೆ ಮಹಿಳಾವಾದದ ಸಿದ್ಧಾಂತಗಳು ಗಮನ ಹರಿಸಿವೆ.

ಅ) ಮಹಿಳಾವಾದದ ಮಹಿಳಾ ಕಲ್ಯಾಣದ ಸಿದ್ಧಾಂತಗಳು

ಕಲ್ಯಾಣದ ಚಿಂತನೆಗಳು ಮಹಿಳಾ ಅಭಿವೃದ್ಧಿಯ ಆರಂಭಿಕ ಪ್ರಯತ್ನಗಳಾಗಿದ್ದು, ೧೯೫೦ ರಿಂದ ೧೯೭೦ ರವರೆಗೆ ಹೆಸರುವಾಸಿಯಾಗಿತ್ತು. ಮೋಸರ್ (೧೯೯೩)ಅವರು ಹೇಳುವಂತೆ ಅಭಿವೃದ್ಧಿಯ ಪ್ರಯತ್ನದಲ್ಲಿ ಮಹಿಳಾ ಕಲ್ಯಾಣದ ಚಿಂತನೆ ಪ್ರಸ್ತುತ ಪರಿಸ್ಥಿತಿಗೂ ಹೊಂದಿಕೆಯಾಗುತ್ತದೆ. ಅದರ ಅನುಷ್ಠಾನ ಪದ್ಧತಿಯಾದ ಸರಕು ಮತ್ತು ಸೇವೆಗಳ ಉಚಿತ ವಿತರಣೆಯು ಮಹಿಳೆಯರ ಪಾರಂಪರಿಕ ಪಾತ್ರವನ್ನು ಪೋಷಿಸುತ್ತದೆ ಹಾಗೂ ರಾಜಕೀಯ ಸಂಘರ್ಷಗಳಿಗೂ ಕಾರಣವಾಗುವುದಿಲ್ಲ. ಉಚಿತ ಆಹಾರ, ಪರಿಹಾರ ಸಾಮಾಗ್ರಿಗಳು, ತಾಯಿ-ಶಿಶುವಿನ ಆರೋಗ್ಯ ಪಾಲನೆ, ಕುಟುಂಬ ಕಲ್ಯಾಣ ಯೋಜನೆ ಇತ್ಯಾದಿಗಳು ಮಹಿಳೆಗೆ ಸಮಾಜದಲ್ಲಿ ಗೌರವಯುತ ತಾಯಿ ಹಾಗೂ ಪತ್ನಿಯ ಸ್ಥಾನವನ್ನು ನೀಡಬಲ್ಲದು. ಆದರೆ ಮಹಿಳೆಯರಲ್ಲಿರುವ ಉತ್ಪಾದಕ ಶಕ್ತಿ ಹಾಗೂ ಸಮಾಜ ನಿರ್ಮಾಣದ ಸಾಮರ್ಥ್ಯವನ್ನು ಕಲ್ಯಾಣ ಸಿದ್ಧಾಂತವು ಸಂಪೂರ್ಣವಾಗಿ ನಿರ್ಲಕ್ಷಿಸುತ್ತದೆ.

ಆ) ಅಭಿವೃದ್ಧಿಯಲ್ಲಿ ಮಹಿಳೆ ಸಿದ್ಧಾಂತ

ತಮ್ಮ ಸಾಂಪ್ರದಾಯಿಕ ಪಾತ್ರವನ್ನು ಬಿಟ್ಟು ಹೊರಬಂದು ತಮ್ಮ ಮೇಲಾಗುವ ದಬ್ಬಾಳಿಕೆಯನ್ನು ಮೆಟ್ಟಿ ನಿಲ್ಲುವ ಮಹಿಳೆಯರಿಗೆ ಪೂರಕವಾಗಿ ಅಭಿವೃದ್ಧಿಯಲ್ಲಿ ಮಹಿಳೆ (ಡಬ್ಲ್ಯೂಐಡಿ) ಸಿದ್ಧಾಂತ ರೂಪುಗೊಂಡಿದೆ. ಇದು ಮಹಿಳೆಯರ ಸ್ಥಾನಮಾನಗಳನ್ನು ಗುರುತಿಸುವ ಜೊತೆಗೆ ಅವರನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಗೋಚರಿಸುವಂತೆ ಮಾಡುವ ಪ್ರಯತ್ನ ಮಾಡಿದೆ. ಇದು ಮಹಿಳೆಯರಿಗೆ ಆರ್ಥಿಕ ಚಟುವಟಿಕೆಗಳಿಗೆ ಹಾಗೂ ತಂತ್ರಜ್ಞಾನಕ್ಕೆ ಪ್ರವೇಶವನ್ನು ಒದಗಿಸಿಕೊಟ್ಟಿರುವ ಈ ಸಿದ್ಧಾಂತವು ಲಿಂಗ ಸಂಬಂಧಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಬದಲಾಗಿ ಸಮಾನತೆ, ದಕ್ಷತೆ ಇತ್ಯಾದಿ ನೆಲೆಗಟ್ಟುಗಳ ಮೂಲಕ ಮಹಿಳೆಯರ ಉತ್ಪಾದಕತ್ವ ಹಾಗೂ ಆದಾಯ ಸೃಷ್ಟಿ ಬಗ್ಗೆ ಹೆಚ್ಚು ಗಮನ ಹರಿಸಿತು. ಸಮಾನತೆ, ಬಡತನ ನಿರ್ಮೂಲನೆ ಹಾಗೂ ದಕ್ಷತೆಯೆಂಬ ಮೂರು ಮೂಲಾಂಶಗಳನ್ನು ಮಹಿಳಾ ಅಭಿವೃದ್ಧಿಗೆ ಪೂರಕವಾಗಿ ಈ ಸಿದ್ಧಾಂತದಲ್ಲಿ ಬಿಂಬಿಸಲಾಗಿದೆ.

ಇ) ಮಹಿಳೆ ಮತ್ತು ಅಭಿವೃದ್ಧಿ (ಡಬ್ಲ್ಯೂಎಡಿ)

೧೯೭೦ ರ ಅಂತ್ಯದಲ್ಲಿ ಅಭಿವೃದ್ಧಿಯಲ್ಲಿ ಮಹಿಳೆ (ಡಬ್ಲ್ಯೂಐಡಿ) ಸಿದ್ಧಾಂತವನ್ನು ಖಂಡಿಸಿ ಮಹಿಳೆ ಮತ್ತು ಅಭಿವೃದ್ಧಿ (ಡಬ್ಲ್ಯೂಎಡಿ) ಸಿದ್ಧಾಂತ ಅಸ್ತಿತ್ವಕ್ಕೆ ಬಂತು. ಈ ಸಿದ್ಧಾಂತವು ಮಹಿಳೆ ಹಾಗೂ ಅಭಿವೃದ್ಧಿ ಪ್ರಕ್ರಿಯೆಯ ನಡುವೆ ಸಂಬಂಧವನ್ನು ಸೃಷ್ಟಿಸಿಕೊಂಡು ಮಹಿಳೆಯರನ್ನು ಉತ್ಪಾದಕ ಚಟುವಟಿಕೆಯ ಭಾಗವಾಗಿ ಬಿಂಬಿಸಿತು. ಮಹಿಳೆಯರು ಅಭಿವೃದ್ಧಿಯ ಭಾಗವಾಗಿರುವುದರಿಂದ ಅವರನ್ನು ಅಭಿವೃದ್ಧಿಯಲ್ಲಿ ಸೇರಿಸಿಕೊಳ್ಳುವ ಅಗತ್ಯವಿಲ್ಲ. ಆದರೆ ತಾರತಮ್ಯದ ಮೂಲಕ ಮಹಿಳೆಯರನ್ನು ಅಭಿವೃದ್ಧಿಯಿಂದ ಹೊರಗಿಡುವುದರ ವಿರುದ್ಧ ದನಿ ಎತ್ತಲಾಯಿತು. ಮಹಿಳೆಯರ ಸಮಸ್ಯೆಗಳನ್ನು ಅವರನ್ನು ಸೇರಿಸಿಕೊಂಡು ಪರಿಹರಿಸಬೇಕು. ಅವರ ಸಮಸ್ಯೆಗಳನ್ನು ಪ್ರತ್ಯೇಕವಾಗಿ

ನೋಡಲು ಸಾಧ್ಯವಿಲ್ಲ. ಸಾಮಾಜಿಕ ರಚನೆಯಲ್ಲಿ ಮಹಿಳೆಯ ಪಾತ್ರವನ್ನು ಈ ಸಿದ್ಧಾಂತ ಎತ್ತಿಹಿಡಿದಿದೆ. ಆದರೆ ವೈಯಕ್ತಿಕ ಹಾಗೂ ಸಮಾಜದ ಮಟ್ಟದಲ್ಲಿ ಮಹಿಳೆಯರ ಪಾತ್ರವನ್ನು ವಿಶ್ಲೇಷಿಸಿ ಸಮರ್ಥಿಸುವುದರ ಬಗ್ಗೆ ಸಿದ್ಧಾಂತ ಗಮನಹರಿಸಲಿಲ್ಲ.

(ಈ) ಲಿಂಗ ಮತ್ತು ಅಭಿವೃದ್ಧಿ ಸಿದ್ಧಾಂತ (ಜಿಎಡಿ)

ಈ ಮಾದರಿಯು ೧೯೮೦ ರಲ್ಲಿ ಅಭಿವೃದ್ಧಿಯಲ್ಲಿ ಮಹಿಳೆ ಹಾಗೂ ಮಹಿಳೆ ಮತ್ತು ಅಭಿವೃದ್ಧಿ ಸಿದ್ಧಾಂತಗಳ ನ್ಯೂನ್ಯತೆಗಳನ್ನು ಸರಿಪಡಿಸುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿತು. ಸಾಮಾಜಿಕ ಮಹಿಳಾವಾದದ ಆಧಾರದಲ್ಲಿ ಲಿಂಗ ಮತ್ತು ಅಭಿವೃದ್ಧಿ ಸಿದ್ಧಾಂತಗಳು ರೂಪುಗೊಂಡಿವೆ. ಈ ಸಿದ್ಧಾಂತವು ಮಹಿಳೆ ಹಾಗೂ ಪುರುಷರ ನಡುವಿನ ಸಂಬಂಧ ಮತ್ತು ಸಂವಹನವನ್ನು ಪರೀಕ್ಷಿಸಿ ಮಹಿಳೆಯನ್ನು ಅಭಿವೃದ್ಧಿಪಡಿಸಲು ಇರುವ ಸವಾಲುಗಳು ಹಾಗೂ ಸಮಾಜದಲ್ಲಿ ಮಹಿಳೆ ಹೊರಗುಳಿಯಲು ಇರುವ ಕಾರಣಗಳನ್ನು ಗುರುತಿಸಿಕೊಂಡಿತು. ಸಮಾಜದಲ್ಲಿರುವ ಲಿಂಗಾಧಾರಿತ ಕಾರ್ಮಿಕ ವರ್ಗಗಳು ಹಾಗೂ ಲಿಂಗಾಧಾರಿತವಾಗಿ ಕಾರ್ಮಿಕರ ವಿಭಜನೆ, ಕೌಟುಂಬಿಕ ಶಕ್ತಿ ಸಂಬಂಧಗಳು ಹಾಗೂ ಲಿಂಗಾಧಾರಿತವಾಗಿ ಕಟ್ಟಲ್ಪಟ್ಟಿರುವ ಹಲವಾರು ಸಾಮಾಜಿಕ ವಾಸ್ತವ ಸ್ಥಿತಿಗಳನ್ನು ಈ ಸಿದ್ಧಾಂತವು ಗಮನಿಸಿತು. ಕೇವಲ ಮಹಿಳೆಯ ಅಭಿವೃದ್ಧಿಯನ್ನೇ ಕೇಂದ್ರೀಕರಿಸದೆ ಸಾಮಾಜಿಕ ಸಂಬಂಧಗಳು ಪುರುಷ ಹಾಗೂ ಮಹಿಳೆಯರ ನಡುವಿನ ಸಾಮಾಜಿಕ ಸಂಬಂಧ ಹಾಗೂ ಕೆಲಸದ ಸ್ಥಳಗಳಲ್ಲಿನ ಪರಿಸ್ಥಿತಿಗಳನ್ನು ಗಮನಿಸಿಕೊಂಡು ಸಾಮಾಜಿಕ ಸ್ಥಿತಿಗಳ ನಿರ್ಮಾಣಕ್ಕೆ ಪ್ರಯತ್ನಿಸಿತು. ಈ ಸಿದ್ಧಾಂತದ ಪ್ರಕಾರ ಉತ್ತಮ ಸಾಮಾಜಿಕ ಸ್ಥಿತಿಯನ್ನು ನಿರ್ಮಾಣ ಮಾಡಿದಾಗ ಪುರುಷ ಹಾಗೂ ಮಹಿಳೆಯರಿಬ್ಬರೂ ಬಡತನದಿಂದ ಬಿಡುಗಡೆಗೊಂಡು ಹೊರಬರಲು ಸಾಧ್ಯವಾಗುತ್ತದೆ. ಲಿಂಗ ಮತ್ತು ಅಭಿವೃದ್ಧಿ ಚಿಂತನೆಗಳು ಕಲ್ಯಾಣ ಹಾಗೂ ಬಡತನ ನಿರ್ಮೂಲನೆಯ ಕ್ರಮಗಳನ್ನು ಸಮಾನತೆಯನ್ನು ಸಾಧಿಸುವ ಪ್ರಯತ್ನವನ್ನಾಗಿ ಪರಿವರ್ತಿಸುವ ಮಹಿಳಾ ಸಬಲೀಕರಣ ಈ ಸಿದ್ಧಾಂತಗಳ ಅಂತಿಮ ಗುರಿಯಾಗಿದೆ. ಮಹಿಳೆಯರು ಬೆಳವಣಿಗೆಯ ಹಂತಗಳನ್ನು ದಾಟುತ್ತಾ ತಮ್ಮ ಹಕ್ಕು ಹಾಗೂ ಇಷ್ಟಗಳಿಗಾಗಿ ತಾವೇ ಹೋರಾಡುವ ಹಂತವನ್ನು ತಲುಪುವಂತಾಗಬೇಕೆಂಬ ಗುರಿಯನ್ನು ಈ ಸಿದ್ಧಾಂತ ಹೊಂದಿದೆ. ಈ ಸಿದ್ಧಾಂತವು ಬಡತನವನ್ನು ಸ್ತ್ರೀವಾದಕ್ಕೆ ಸಮೀಕರಿಸಿ ನಿಗದಿತ ಅವಧಿಯೊಳಗೆ ಸಬಲೀಕರಣದ ಗುರಿ ತಲುಪಬೇಕೆಂಬ ಆಶಯ ಹೊಂದಿದೆ.

೧೯೮೦ ರ ಮಧ್ಯಭಾಗದಲ್ಲಿ ಮಹಿಳೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಸಬಲೀಕರಣವು ಒಂದು ಹೊಸ ಪ್ರಯತ್ನವಾಗಿ ರೂಪುಗೊಂಡಿತು. ಮೋಸರ್ (೧೯೯೩)ಅವರು ತಿಳಿಸುವಂತೆ ಸಬಲೀಕರಣದ ಚಿಂತನೆಯು ಮಹಿಳಾವಾದದ ಬರಹಗಳಿಂದ ಹಾಗೂ ಅಂತರರಾಷ್ಟ್ರೀಯ ಸಂಘಟನೆಗಳ ಅನುಭವದಿಂದ ಹುಟ್ಟಿಕೊಂಡಿದೆ. ಸಬಲೀಕರಣವೆಂಬುದು ಶಕ್ತಿ ಎಂಬ ಪದಕ್ಕೆ ಸಂಬಂಧಿಸಿದ್ದು ವ್ಯಕ್ತಿಗೆ ಇರುವ ಶಕ್ತಿಯ ವಸ್ತುರೂಪದ ಆಸ್ತಿ, ಬೌದ್ಧಿಕ ಸಂಪನ್ಮೂಲಗಳು ಹಾಗೂ ಚಿಂತನೆಗಳನ್ನು ನಿಯಂತ್ರಿಸುವ ಶಕ್ತಿ ಎಂಬುದಾಗಿ ಅರ್ಥೈಸಿಕೊಳ್ಳಬಹುದಾಗಿದೆ. ಆಸ್ತಿಯನ್ನು ನಿಯಂತ್ರಿಸುವ ಹಕ್ಕು ವ್ಯಕ್ತಿಯ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಆಸ್ತಿಯನ್ನು ಹೊಂದುವ,

ನಿಯಂತ್ರಿಸುವ ಹಾಗೂ ಹಂಚಿಕೆಯ ಕ್ರಮಗಳು ಸಮಾಜದಲ್ಲಿ ಹಾಗೂ ವೈಯಕ್ತಿಕ ನೆಲೆಯಲ್ಲಿ ಸಂಬಂಧಗಳನ್ನು ಪ್ರಭಾವಿಸುತ್ತದೆ. ಆ ನಿಟ್ಟಿನಲ್ಲಿ ಮಹಿಳಾ ಸಬಲೀಕರಣದ ಚಿಂತನೆಯು ಮಹಿಳೆಯರ ಆಸ್ತಿಯನ್ನು ಹೊಂದುವ ಹಕ್ಕು ಮತ್ತು ಸ್ವಾವಲಂಬನೆಯನ್ನು ಹೊಂದುವ ಬಗ್ಗೆ ಪ್ರಚೋದಿಸುತ್ತದೆ. ಮಹಿಳೆಯರು ತಮ್ಮ ಸ್ವಂತ ಬದಲಾವಣೆಗಳನ್ನು ಮಾಡಿಕೊಂಡು ಇತರರಲ್ಲೂ ಬದಲಾವಣೆ ತರಬಲ್ಲಂತಹ ಪ್ರಯತ್ನ ನಡೆಸಬೇಕೆಂಬ ಆಶಯ ಇದರಲ್ಲಿದೆ.

ಅಭಿವೃದ್ಧಿಯಲ್ಲಿ ಮಹಿಳೆ (ಡಬ್ಲ್ಯೂಐಡಿ)	**ಮಹಿಳೆ ಮತ್ತು ಅಭಿವೃದ್ಧಿ (ಡಬ್ಲ್ಯೂಎಡಿ)**	**ಲಿಂಗ ಮತ್ತು ಅಭಿವೃದ್ಧಿ (ಜಿಎಡಿ)**	**ಮಹಿಳೆ, ಪರಿಸರ ಸಬಲೀಕರಣ ಹಾಗೂ ಅಭಿವೃದ್ಧಿ**	**ಆಧುನೀಕರಣ ಮತ್ತು ಅಭಿವೃದ್ಧಿ**
ಉದಾರವಾದಿ ಆಧುನಿಕತೆಯ ನೀತಿಗಳು	ಮಹಿಳಾ ಸಮಾಜವಾದ ಪರ್ಯಾಯ	ಮೂಲಭೂತ ಮಹಿಳಾವಾದ	ಮಹಿಳಾಪರ ರಾಜಕೀಯ	ಆಧುನೀಕರಣದ ನಂತರದ ಮಹಿಳಾವಾದ
ಅಭಿವೃದ್ಧಿ ಕಾರ್ಯಕ್ರಮಗಳ ಪುನರ್ರಚನೆ	ಅಭಿವೃದ್ಧಿ ಅವಲಂಬನೆ ಜಾಗತಿಕ	ಮಹಿಳಾ ವಿಮೋಚನೆ	ಪರಿಸರ ರಕ್ಷಣೆ	ವಿಭಿನ್ನ ಅಭಿವೃದ್ಧಿ ಪ್ರಾತಿನಿಧ್ಯ
ಕಲ್ಯಾಣ	ಬಂಡವಾಳಶಾಹಿ	ಬಂಡವಾಳ ಶಾಹಿ	ಸುಸ್ಥಿರ ಅಭಿವೃದ್ಧಿ	ಪ್ರತಿನಿಧಿತ್ವ
ಸಮಾನತೆ ಬಡತನ ನಿರ್ಮೂಲನೆ ದಕ್ಷತೆ	ಪಿತೃಪ್ರಭುತ್ವ ವಿರೋಧ	ಪಿತೃಪ್ರಭುತ್ವ ವಿರೋಧ	ಜ್ಞಾನದ ಹಂಚಿಕೆ	ಅಭಿಪ್ರಾಯ ಮಂಡನೆ,
ಸಬಲೀಕರಣ		ಜನಾಂಗೀಯತೆ	ರಾಜಕೀಯದ ಹಕ್ಕುಗಳು	ಜ್ಞಾನದ ಹಂಚಿಕೆ

ಮೂಲ: ಸ್ಯಾಂಡ್ರ ಜಿ, ಟರ್ನರ್ ಅಂಡ್ ಟೀನಾ ಎಂ. ಮಸ್ಚಿ, ೨೦೧೫, "ಫೆಮಿನಿಸ್ಟ್ ಅಂಡ್ ಎಂಪವರ್‌ಮೆಂಟ್ ಥಿಯರಿ ಆಂಡ್ ಸೋಶಿಯಲ್ ವರ್ಕ್ ಪ್ರಾಕ್ಟೀಸ್.

೪.೧೦ ಮಹಿಳಾ ರಾಜಕೀಯ ಸಬಲೀಕರಣ

ಮಹಿಳಾ ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದ ಮಾದರಿಗಳು, ಮಹಿಳಾ ಸಬಲೀಕರಣದ ಮುಂದಿರುವ ಸವಾಲುಗಳು ಹಾಗೂ ಮಹಿಳೆಯರಿಗೆ ರಾಜಕೀಯ ಪ್ರವೇಶದ ಅವಕಾಶಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಭಾಗದಲ್ಲಿ ನೀಡಲಾಗಿದೆ. ಭಾರತದಲ್ಲಿ ಹಾಗೂ ಜಾಗತಿಕವಾಗಿ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆ ಯಾವ ರೀತಿಯಲ್ಲಿದೆ ಎಂಬ ಬಗ್ಗೆಯೂ ವಿವರಗಳನ್ನು ಸಂಗಹಿಸಿ ನೀಡಲಾಗಿದೆ. ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಪ್ರಾತಿನಿಧ್ಯದ ಮಾದರಿ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯ ಕೊಡುಗೆ, ಪಂಚಾಯತ್ ರಾಜ್ ವ್ಯವಸ್ಥೆಯ ಸಾಧನೆಯ ಬಗ್ಗೆ ಮಾಹಿತಿಗಳನ್ನು ಇಲ್ಲಿ ನೀಡಲಾಗಿದೆ.

೪.೧೧. ಭಾರತದಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ

ಭಾರತದಲ್ಲಿ ಮಹಿಳಾ ರಾಜಕೀಯ ಭಾಗವಹಿಸುವಿಕೆಯ ಹಿನ್ನೆಲೆಯನ್ನು ಗಮನಿಸುವುದಾದರೆ, ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಆಸ್ತಿವಂತರು, ತೆರಿಗೆದಾರರು ಮಾತ್ರ ಕಾಯ್ದೆ ರಚನೆ, ತೀರ್ಮಾನ ತೆಗೆದುಕೊಳ್ಳುವಿಕೆ, ಆಡಳಿತದಲ್ಲಿ ಪಾಲುಗಾರಿಕೆ, ಮತದಾನ ಇತ್ಯಾದಿಗಳಲ್ಲಿ ಸಹಭಾಗಿಗಳಾಗಿದ್ದರು. ಇಂತಹ ಅವಕಾಶ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. (ಲಿಯೋಸ್ ಮರಿಯೋ ವರ್ಗಸ್, ೧೯೮೯). ೧೯೧೮ರಲ್ಲಿ ಮಾಂಟೆಗೋ ಚೆಮ್ಸ್‌ಫರ್ಡ್ ಸುಧಾರಣೆಗಳ ಕರಡು ಸಿದ್ಧಗೊಳ್ಳುತ್ತಿರುವ ಸಂದರ್ಭದಲ್ಲಿ ಸರೋಜಿನಿ ನಾಯ್ಡು ಅವರ ನಾಯಕತ್ವದಲ್ಲಿ ಮಹಿಳೆಯರ ನಿಯೋಗವು ಸೆಕ್ರಟರಿ ಆಫ್ ಸ್ಟೇಟ್ ಲಾರ್ಡ್ ಮಾಂಟೆಗೋರವರಲ್ಲಿ ತಮ್ಮ ಚುನಾವಣಾ ಹಕ್ಕಿಗಾಗಿ ಆಗ್ರಹಿಸಿ ಮನವಿ ಸಲ್ಲಿಸಿದ ಪರಿಣಾಮವಾಗಿ ೧೯೨೪ರಲ್ಲಿ ರಾಜ್‌ಕೋಟ್‌ನಿಂದ ಪ್ರಾರಂಭಿಸಿ ನಾನಾ ಪ್ರಾಂತ್ಯಗಳಲ್ಲಿ ನಾನಾ ರಾಜ್ಯಗಳಲ್ಲಿ ಮಹಿಳೆಯರು ಮತದಾನದ ಹಕ್ಕನ್ನು ಪಡೆದರು. ೧೯೨೭ರಲ್ಲಿ ಸ್ಥಾಪಿಸಲಾದ ಅಖಿಲ ಭಾರತ ಮಹಿಳಾ ಒಕ್ಕೂಟವು ವಿಭಿನ್ನ ಮಹಿಳಾ ಸಂಘಟನೆಗಳ ಸಂಗಮವಾಗಿತ್ತು. ಈ ಸಂಘಟನೆಗಳು ಶಾಸನಾತ್ಮಕ ಸಂರಚನೆಗಳಿಗೆ ಮಹಿಳೆಯರಿಗೆ ಪ್ರವೇಶ ನೀಡುವಂತೆ ಹೋರಾಡಿತು. ೧೯೩೧ರ ಕರಾಚಿ ಕಾಂಗ್ರೆಸ್ ಅಧಿವೇಶನವು ಲಿಂಗ ಸಮಾನತೆಯು ಒಂದು ಮೂಲಭೂತ ಹಕ್ಕೆಂದು ಪ್ರತಿಪಾದಿಸಿತು. ಸಮಾನತೆಯ ತತ್ವವನ್ನು ಆಧರಿಸದ ಸಮಾಜದಲ್ಲಿ ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯಗಳಿಗೆ ಸಮಾನ ಅವಕಾಶ ಇರಬೇಕೆಂಬುದು ಸ್ವಾತಂತ್ರ್ಯ ಪ್ರೇಮಿಗಳ ಬೇಡಿಕೆಯಾಗಿತ್ತು. ಹೀಗಾಗಿ ದೇಶದ ಸಂವಿಧಾನ ರಚನಾ ಸಭೆಯಲ್ಲೂ ಶ್ರೀಮತಿ ರಾಜಕುಮಾರಿ ಅಮೃತ ಕೌರ್, ಸರೋಜಿನಿ ನಾಯ್ಡು ಮುಂತಾದ ೧೫ ಮಂದಿ ಸ್ತ್ರೀಯರಿಗೆ ಸೂಕ್ತ ಅವಕಾಶ ಕಲ್ಪಿಸಿಕೊಡಲಾಗಿತ್ತು. ಸ್ವಾತಂತ್ರ್ಯ ನಂತರ ನಮ್ಮ ಸಂವಿಧಾನ ರಚನಾಕಾರರ ಆಶಯದಂತೆ ವಿವಿಧ ಪಕ್ಷ ಮತ್ತು ಸರ್ಕಾರಗಳು ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಸಮಾನ ಸಹಭಾಗಿತ್ವದ ಅವಕಾಶವನ್ನು ಎಲ್ಲಾ ವರ್ಗದವರಿಗೂ ನೀಡಲು ಪ್ರಯತ್ನಿಸಿದ್ದಾರೆ. ೧೯೧೦ರಲ್ಲಿಯೇ ರಾಜಕೀಯ ಕ್ಷೇತ್ರದಲ್ಲಿ ಒಂದು ಚಳುವಳಿ ಆರಂಭವಾಗಿ ೧೯೨೯ರ ವೇಳೆಗೆ ಸಾರ್ವತ್ರಿಕ ಮತದಾನ ಪದ್ಧತಿಗಾಗಿ ತಮ್ಮ ಹಕ್ಕುಗಳನ್ನು ಸ್ಥಾಪಿಸಲು ಮಹಿಳೆಯರು ಹೋರಾಟವನ್ನೇ ಮಾಡಿದ್ದಾರೆ. ೧೮೪೮ರಲ್ಲಿ ಪ್ರಥಮ ಬಾರಿಗೆ ನ್ಯೂಯಾರ್ಕ್‌ನಲ್ಲಿ ತನ್ನ ಮತದಾನದ ಹಕ್ಕಿಗಾಗಿ ಮಹಿಳೆ ಧ್ವನಿ ಎತ್ತಿದ್ದರೂ ೧೯೨೦ರ ಹೊತ್ತಿಗೆ ಕೇವಲ ೧೫ ರಾಷ್ಟ್ರಗಳಲ್ಲಿ ಮಾತ್ರ ಮತ ಚಲಾಯಿಸುವ ರಾಜಕೀಯ ಅವಕಾಶ ಮಹಿಳೆಯರಿಗೆ ದೊರೆತಿತ್ತು. ಭಾರತದಲ್ಲಿ ೧೯೩೭ರಲ್ಲಿ ಮಹಿಳೆಗೆ ಸೀಮಿತ ಮತದಾನದ ಹಕ್ಕನ್ನು ನೀಡಲಾಯಿತು. ಅಂದಿನಿಂದೀಚೆಗೆ ಮತದಾರಳಾಗಿ, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯಾಗಿ, ರಾಜ್ಯ ವಿಧಾನ ಮಂಡಲದ ಹಾಗೂ ರಾಷ್ಟ್ರಮಟ್ಟದಲ್ಲಿ ಸಂಸತ್ತಿನ ಚರ್ಚೆಗಳಲ್ಲಿ ಭಾಗವಹಿಸುವ ಮೂಲಕ ಹಾಗೂ ಕಾರ್ಯಾಂಗ ಹಾಗೂ ನ್ಯಾಯಾಂಗಗಳಲ್ಲಿ ವಿವಿಧ ಹಂತಗಳ ಅಧಿಕಾರ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುವ ಮೂಲಕ ಮಹಿಳೆ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾ ಬಂದಿದ್ದಾಳೆ. (ಯೋಗರಾಜು.ಎಸ್.ಡಿ, ೨೦೧೩) ತತ್ಸಬಂಧ

೧೯೩೭ರಲ್ಲಿ ಮೊದಲ ಬಾರಿಗೆ ಪ್ರಾಂತೀಯ ಸ್ವಾಯತ್ತೆ ಮಂಜೂರು ಮಾಡಿ ಚುನಾವಣೆ ನಡೆಸಿದಾಗ ಭಾರೀ ಉತ್ಸಾಹದೊಂದಿಗೆ ಅದರಲ್ಲಿ ಮಹಿಳೆಯರು ಭಾಗವಹಿಸಿದರು. ಸಾಮಾನ್ಯ ಕ್ಷೇತ್ರಗಳಿಂದ ಎಂಟು ಮತ್ತು ಮೀಸಲು ಕ್ಷೇತ್ರಗಳಿಂದ ೪೨ ಮಹಿಳೆಯರು ಆರಿಸಿ ಬಂದರು. ೧೯೫೨ರಲ್ಲಿ ಜಾರಿಗೆ ತರಲಾದ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಗ್ರಾಮೀಣ ಮಟ್ಟದಲ್ಲಿ ಸ್ತ್ರೀಯರ ಸಹಭಾಗಿತ್ವದಲ್ಲಿ ಪರಿಣಾಮಕಾರಿಯಾಗಿ ತೀರ್ಮಾನ ತೆಗೆದುಕೊಳ್ಳುವಲ್ಲಿ ಸಾಕಷ್ಟು ಮಹತ್ವ ನೀಡದೇ ಇದ್ದುದರಿಂದ ಯಶಸ್ವಿಯಾಗಲಿಲ್ಲ. ಪರಿಣಾಮವಾಗಿ ಈ ವ್ಯವಸ್ಥೆಯನ್ನು ಸಶಕ್ತಗೊಳಿಸಲು ೧೯೫೮ ರಲ್ಲಿ ಬಲವಂತರಾಯ್ ಮೆಹ್ತಾರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಲಾಯಿತು. ಇದು ಗ್ರಾಮೀಣ ಮಟ್ಟದಲ್ಲಿ ಎರಡು ಹಂತದ ಆಡಳಿತ ವ್ಯವಸ್ಥೆಗೆ ಶಿಫಾರಸು ಮಾಡಿ ಅಭಿವೃದ್ಧಿಪರ ಕಾರ್ಯಗಳನ್ನು ಸಮಾನ ಅಂಶಗಳ ಆಧಾರದ ಮೇಲೆ ರೂಪಿಸುವ ಅವಕಾಶ ನೀಡಿತು. ಆದರೆ ಮಹಿಳಾ ಪ್ರಾತಿನಿಧ್ಯತೆ ಎಂಬುದು ಇಲ್ಲಿ ಕೇವಲ ಸಾಂಕೇತಿಕವಾಗಿತ್ತು. ಅಂದರೆ ಪಂಚಾಯಿತಿಯ ಒಟ್ಟು ಸ್ಥಾನಗಳಲ್ಲಿ ಶೇಕಡಾ ೫ ರಷ್ಟು ಸ್ಥಾನಗಳನ್ನು ಮಾತ್ರ ಮಹಿಳೆಯರಿಗೆ ಮೀಸಲಿರಿಸಿತು. ತದನಂತರ ಈ ವ್ಯವಸ್ಥೆಯ ದೋಷ ಸರಿಪಡಿಸಲು ೧೯೭೮ರಲ್ಲಿ ಶ್ರೀ ಅಶೋಕ್ ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿ ನೇಮಿಸಲಾಯಿತು. ಈ ಸಮಿತಿಯೂ ಸಹ ಗ್ರಾಮೀಣ ಆಡಳಿತದಲ್ಲಿ ಮಹಿಳೆಯರನ್ನೂ ಪಾಲುದಾರರಾಗುವಂತಹ ಅವಕಾಶ ನೀಡಿದ್ದರೂ ಅಲ್ಲಿಯೂ ಪ್ರಾತಿನಿಧ್ಯ ಸಾಂಕೇತಿಕವಾಗಿಯೇ ಇತ್ತು. ಅಂದರೆ ಸ್ವಾತಂತ್ರ್ಯ ನಂತರದ ಪಂಚಾಯತ್ ರಾಜ್ ವ್ಯವಸ್ಥೆಯ ಅಸ್ತಿತ್ವಕ್ಕೆ ಬಂದಂತಹ ಈ ಎರಡು ಪ್ರಮುಖ ಸಮಿತಿಗಳು ಮಹಿಳೆಯರ ಸಮಾನ ಪಾಲುಗಾರಿಕೆಯನ್ನು ಸಾಂಸ್ಥಿಕಗೊಳಿಸಲಿಲ್ಲ.

ಮಹಾತ್ಮ ಗಾಂಧೀಜಿಯವರು ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರನ್ನು ಸಕ್ರಿಯವಾಗಿ ಪಾಲ್ಗೊಳಿಸಿದ ಹಿನ್ನೆಲೆಯ ಭಾರತದ ಮಹಿಳಾ ಚಳುವಳಿಯು ರಾಷ್ಟ್ರೀಯ ರಾಜಕಾರಣದ ಅವಿಭಾಜ್ಯ ಅಂಗವಾಗಿ ಹೊರಹೊಮ್ಮಿತು. ಮಹಿಳೆಯರಲ್ಲಿ ಮೂಡಿದ ರಾಷ್ಟ್ರೀಯ ಮನೋಭಾವ ಮಹಿಳೆಯರ ಕ್ರಿಯಾಶೀಲತೆಯನ್ನು ಹೆಚ್ಚಿಸಿತು. ಪರಿಣಾಮವಾಗಿ, ಮಹಿಳೆ ಮೆರವಣಿಗೆಗಳಲ್ಲಿ ಭಾಗವಹಿಸಿದಳು, ರಾಜಕೀಯ ಸಮಾವೇಶಗಳಲ್ಲಿ ಭಾಗವಹಿಸಿದಳು, ಕಾಂಗ್ರೆಸ್ ಸಭೆಗಳನ್ನು ಸಮಾವೇಶಗೊಳಿಸಿದಳು. ಜೈಲಿಗೆ ಹೋದಳು. ಮಹಿಳೆ ತನ್ನ ಗೃಹಕೃತ್ಯದ ಕಾರ್ಯಕ್ಕೆ ಯಾವುದೇ ತೊಡಕು ಬಾರದ ರೀತಿಯಲ್ಲಿ ನಿರ್ವಹಿಸುವ ಜೊತೆ ಜೊತೆಗೆ ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಳ್ಳುವ ಮೂಲಕ ಎರಡು ಕಾರ್ಯಗಳಿಗೂ ನ್ಯಾಯ ಒದಗಿಸುವ ಮಹಾನ್ ಕಾರ್ಯವನ್ನು ಮಹಾತ್ಮ ಗಾಂಧೀಜಿಯವರ ತರಬೇತಿಯೊಂದಿಗೆ ಯಶಸ್ವಿಯಾಗಿ ನಿರ್ವಹಿಸಿದಳು. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಸಾಮೂಹಿಕ ಪಾಲ್ಗೊಳ್ಳುವಿಕೆಯು ರಾಜಕೀಯ ಸಮಾನತೆಯನ್ನು ಸಾಧಿಸಲು ಮಹಿಳೆಯರಿಗೆ ಸೂಕ್ತ ವೇದಿಕೆಯನ್ನು ಒದಗಿಸಿಕೊಟ್ಟಿತು. ಇಂತಹ ಸಾಮಾಜಿಕ ಸುಧಾರಣೆಯ ಚಳುವಳಿಯ ಫಲವಾಗಿ ಹಲವಾರು ಮಹಿಳಾ ಸಂಘಟನೆಗಳು ಪ್ರಾರಂಭಗೊಂಡವು. ೧೯೧೭ ರಲ್ಲಿ ಅನಿಬೆಸೆಂಟ್, ಮಾರ್ಗರೇಟ್ ಕಸಿನ್ ಮತ್ತು ಡೊರತಿ ಜವಾರಜುಡೊಸ್‌ರವರಿಂದ ಮದ್ರಾಸಿನಲ್ಲಿ ಸ್ಥಾಪಿಸಲ್ಪಟ್ಟ

'ಭಾರತೀಯ ಮಹಿಳಾ ಸಂಘ' ಹಾಗೂ ೧೯೨೬ ರಲ್ಲಿ 'ದೇಶ್ ಸೆ ವಿಕಾಸ್' ಎಂಬ ಮಹಿಳಾ ಸಂಘಟನೆಗಳು ಮಹಿಳಾಭಿವೃದ್ಧಿ ಹಾಗೂ ಸಾಮಾಜಿಕ ಸುಧಾರಣೆಯನ್ನು ಅಹಿಂಸಾತ್ಮಕ ನೆಲೆಯಲ್ಲಿ ಸ್ಥಾಪಿಸಲು ರಚನೆಯಾದವು. ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಸಂಘಟನೆಗಳು ಮಹಿಳೆಯರ ಚುನಾವಣೆಯ ಹಕ್ಕನ್ನು ದೃಢಪಡಿಸಿತು. ೧೯೨೭ ರ ಹೊತ್ತಿಗೆ ಅಖಿಲ ಭಾರತ ಮಹಿಳಾ ಸಮ್ಮೇಳನ ವಿಸ್ತರಿಸಲ್ಪಟ್ಟು ಸ್ತ್ರೀ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣಗಳನ್ನು ಸಾಧಿಸುವ ನಿಟ್ಟಿನಲ್ಲಿ ಹೋರಾಟ ನಡೆಸಿತು. (ಷಣ್ಮುಖ ಎ, ೨೦೦೬)

೪.೧೨. ಭಾರತದ ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಸ್ಥಿತಿಗತಿ

ಅಂತರ ಸಂಸದೀಯ ಸಂಸ್ಥೆ ಎಂಬ ಜಾಗತಿಕ ಸಂಸ್ಥೆಯು ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಎಂಬ ವಿಷಯವಾಗಿ ಒಂದು ವರದಿಯನ್ನು ನೀಡಿದೆ (೨೦೧೭). ಇದರ ಹಿನ್ನೆಲೆಯಲ್ಲಿ ಭಾರತದಲ್ಲಿ ರಾಜಕೀಯ ಪರಿಸ್ಥಿತಿಯೇನು ಎಂಬುದರ ಚಿತ್ರಣವನ್ನು ಈ ವರದಿ ತಿಳಿಸುತ್ತದೆ. ಮಹಿಳೆಯರು ವಿಶ್ವದ ಜನಸಂಖ್ಯೆಯ ಸುಮಾರು ಅರ್ಧದಷ್ಟಿದ್ದಾರೆ. ಜಾಗತಿಕವಾಗಿ ಒಟ್ಟು ಜನಸಂಖ್ಯೆಯ ೫೦.೬% ಪುರುಷರು ಮತ್ತು ೪೯.೬% ಮಹಿಳೆಯರು ಇದ್ದಾರೆ. ೨೦೧೧ ರ ಜನಗಣತಿಯ ಪ್ರಕಾರ ಭಾರತದಲ್ಲಿ ೫೧.೫% ಪುರುಷರು ಹಾಗೂ ೪೮.೫% ಮಹಿಳೆಯರು ಇದ್ದಾರೆಂದು ವರದಿಯಾಗಿದೆ. ಸಾಮಾಜಿಕ ಚೌಕಟ್ಟಿನಲ್ಲಿ ಈಗಲೂ ಪುರುಷ ಪ್ರಾಧಾನ್ಯತೆ ಅಧಿಕವಾಗಿದ್ದು ಲಿಂಗ ಸಮಾನತೆ ಮತ್ತು ಸಮಾನ ಅಭಿವೃದ್ಧಿಗೆ, ಅದರಲ್ಲೂ ರಾಜಕಾರಣದಲ್ಲಿ ಬಹಳ ಹಿನ್ನಡೆಯಾಗಿದೆ. ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರು ಸಾಂಸ್ಥಿಕವಾಗಿ ಹಾಗೂ ಸಾಮಾಜಿಕ, ರಾಜಕೀಯ ವ್ಯವಸ್ಥೆಗಳಿಂದ ಹೊರಗಿಡಲ್ಪಟ್ಟಿದ್ದಾರೆ. ಮಹಿಳೆಯರ ಅಸಮರ್ಪಕ ಅಭಿವೃದ್ಧಿಗೆ, ಕಾನೂನು ರಚನಾತ್ಮಕ ಪ್ರಕ್ರಿಯೆಯಲ್ಲಿ ರಾಜಕೀಯವಾಗಿ ಅವರ ಪ್ರತಿನಿಧಿತ್ವದ ಕೊರತೆಯೇ ಬಹುಮುಖ್ಯ ಕಾರಣವಾಗಿದೆ. ವಿಶ್ವದ ರಾಜಕೀಯದಲ್ಲಿ ಮಹಿಳೆಯರು ಪಾಲ್ಗೊಳ್ಳುವಿಕೆಯನ್ನು ಅಂತರ ಸಂಸದೀಯ ಒಕ್ಕೂಟವು (ಐ.ಪಿ.ಯು) ವಾರ್ಷಿಕವಾಗಿ ದಾಖಲಿಸುತ್ತದೆ. ಈ ಸಂಸ್ಥೆ 'ರಾಜಕೀಯದಲ್ಲಿ ಮಹಿಳೆಯರು-೨೦೧೭' ಎಂಬ ವರದಿಯನ್ನು ನೀಡಿದ್ದು, ದೇಶದ ರಾಜಕೀಯ ಮತ್ತು ಆಡಳಿತದಲ್ಲಿ ಮಹಿಳೆಯರು ಪಾಲ್ಗೊಳ್ಳುವಿಕೆಯ ಸಾರಾಂಶವನ್ನು ನೀಡಿ, ಸಂಸತ್ತಿನಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಸಾರಾಂಶವನ್ನು ನೀಡುತ್ತದೆ. ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಮತ್ತು ಸಂಪುಟದಲ್ಲಿ ಹೊಂದಿರುವ ಕ್ಯಾಬಿನೆಟ್ ದರ್ಜೆಯ ಸ್ಥಾನಗಳ ಆಧಾರದ ಮೇಲೆ ಈ ದಾಖಲೆಗಳನ್ನು ತಯಾರಿಸಲಾಗುತ್ತದೆ. ಉನ್ನತ ಮಟ್ಟದ ಅರಿವು ಮತ್ತು ಹಕ್ಕೊತ್ತಾಯ ಇದ್ದರೂ ಸಹ ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಸಂಶಯಾತ್ಮಕವಾಗಿ ಬಹಳ ಕಡಿಮೆ ಎಂದು ಈ ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಅಂತರ ಸಂಸದೀಯ ಒಕ್ಕೂಟದ ವರದಿ ಪ್ರಕಾರ ಮಹಿಳೆಯರು ಜಾಗತಿಕವಾಗಿ ಸಂಸತ್ತಿನ ಕೇವಲ ೨೩.೪ರಷ್ಟು ಸ್ಥಾನಗಳನ್ನು ಹೊಂದಿದ್ದಾರೆ. ಸಂಸತ್ತಿನಲ್ಲಿ ಮಹಿಳೆಯರ ಶೇಕಡಾವಾರು ಸಂಖ್ಯೆ

ವಿವಿಧ ಪ್ರಾಂತೀಯ ಹಾಗೂ ಉಪ-ಪ್ರಾಂತೀಯ ಆಧಾರದ ಮೇಲೆ ಕಡಿಮೆಯಾಗುತ್ತದೆ. ಭಾರತದಲ್ಲಿ, ಪಿತೃಪ್ರಭುತ್ವ ಸಮಾಜದ ವ್ಯವಸ್ಥೆಯಿಂದಾಗಿ ಮಹಿಳೆಯರಿಗೆ ಹಿಂದಿನಿಂದಲೂ ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ನೈತಿಕವಾಗಿ ಸಿಗಬೇಕಿದ್ದ ಅವಕಾಶವನ್ನು ನಿರಾಕರಿಸಲಾಗಿದೆ. ರಾಜಕೀಯ ವ್ಯವಸ್ಥೆಯಲ್ಲಿರುವ ಜಾತಿ ಮತ್ತು ಸ್ಥಾನಮಾನ ಎಂಬ ಅಸಮಾನತೆಗಳು ಲಿಂಗಾಧಾರಿತ ತಾರತಮ್ಯವನ್ನು ಮತ್ತಷ್ಟು ಜಟಿಲಗೊಳಿಸಿವೆ. ಹಾಗಾಗಿ ಪ್ರಜಾಪ್ರಭುತ್ವವನ್ನು ಶಕ್ತಗೊಳಿಸಲು ಲಿಂಗಾಧಾರಿತ ಆಡಳಿತ ಒಂದು ನಿರ್ಣಾಯಕ ಹಾಗೂ ವ್ಯವಸ್ಥೆಯ ಪೂರ್ವಾಪೇಕ್ಷಿತ ಅಂಶವಾಗುತ್ತದೆ. ಸಾಮಾಜಿಕ-ಸಾಂಸ್ಕೃತಿಕ ವೈವಿಧ್ಯತೆ ಇದ್ದರೂ ದಕ್ಷಿಣ ಏಷ್ಯಾ ಪ್ರಾಂತ್ಯದ ಸಂಸತ್ತುಗಳಲ್ಲಿ ಮಹಿಳೆಯರ ಪ್ರತಿನಿಧಿತ್ವದಲ್ಲಿ ಭಾರತವು ತುಲನಾತ್ಮಕವಾಗಿ ವಿಶ್ವದ (೨೩.೪) ಮತ್ತು ಏಷ್ಯಾ (೧೯.೬) ಗಿಂತ ಹಿಂದೆ ಉಳಿದಿದೆ. ಭಾರತದ ಸಂಸತ್ತಿನಲ್ಲಿ ಮಹಿಳೆಯರ ಪ್ರತಿನಿಧಿತ್ವದ ಸಂಖ್ಯೆ ೧೨, ಇದು ವಿಶ್ವ ಮತ್ತು ಏಷ್ಯಾಗಿಂತ ಕಡಿಮೆ ಇದೆ. ವಿಶ್ವದ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಒಂದಾದ ಭಾರತದಲ್ಲಿ ಬಹಳ ಹಿಂದೆಯೇ ಮಹಿಳೆಯರಿಗೆ ಮತದಾನದ ಹಕ್ಕು ನೀಡಿದ್ದರೂ ಸಹ ಅದು ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿನ ಮಹಿಳೆಯರ ರಾಜಕೀಯ ಪ್ರಾತಿನಿಧ್ಯವನ್ನು ಪ್ರತಿಬಿಂಬಿಸುವುದಿಲ್ಲ.

೨೦ ನೇ ಸಾಮಾನ್ಯ ಚುನಾವಣೆಯ ನಂತರ ಸಂಸತ್ತಿನಲ್ಲಿ ಮಹಿಳೆಯರ ಸಹಭಾಗಿತ್ವ ಕ್ರಮೇಣ ಏರಿಕೆಯಾಗಿರುವ ಬಗ್ಗೆ ದಾಖಲೆಗಳು ತಿಳಿಸುತ್ತವೆ. ಇತ್ತೀಚೆಗೆ ೨೦೧೪ರಲ್ಲಿ ನಡೆದ ಚುನಾವಣೆಯಲ್ಲಿ ಶೇಕಡಾ ೧೧.೮ ರಷ್ಟು ಮಹಿಳೆಯರು ಚುನಾಯಿತರಾಗಿದ್ದಾರೆ. ೨೦೧೭ ಜನವರಿಯ ಮಾಹಿತಿ ಪ್ರಕಾರ ಸಂಸತ್ತಿನ ಮೇಲ್ಮನೆಯಲ್ಲಿ (ರಾಜ್ಯ ಸಭೆ) ಶೇಕಡ ೧೧, ಅಂದರೆ ೨೪೫ ಸದಸ್ಯರ ಪೈಕಿ ೨೭ ಮಹಿಳಾ ಸದಸ್ಯರಿದ್ದಾರೆ ಮತ್ತು ಲೋಕಸಭೆಯಲ್ಲಿ ಸರಾಸರಿ ೧೧.೪ರಷ್ಟಿದ್ದಾರೆ. ಅಂತರ ಸಂಸದೀಯ ಒಕ್ಕೂಟದ ಪ್ರಕಾರ ಸಂಸತ್ತಿನಲ್ಲಿ ಕೇವಲ ಶೇಕಡಾ ೧೨ರಷ್ಟು ಮಹಿಳಾ ಪ್ರತಿನಿಧಿತ್ವದೊಂದಿಗೆ ಭಾರತವು ೧೯೦ ರಾಷ್ಟ್ರಗಳ ಪೈಕಿ ೧೪೮ನೇ ಸ್ಥಾನ ಪಡೆದಿದೆ. ಸೂಡಾನ್ (೩೦.೫), ದಕ್ಷಿಣ ಸೂಡಾನ್ (೨೮.೫), ಪಾಕಿಸ್ತಾನ (೨೦.೬) ಮತ್ತು ಬಾಂಗ್ಲಾದೇಶ (೨೦.೩) ಮಹಿಳಾ ಸಂಸತ್ತಿನ ಪ್ರತಿನಿಧಿತ್ವದೊಂದಿಗೆ ಭಾರತಕ್ಕಿಂತ ಮೊದಲ ಸ್ಥಾನ ಪಡೆದಿವೆ.

ಸಂಸತ್ತಿಗಿಂತ ಕರ್ನಾಟಕ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ತೀರಾ ಕಡಿಮೆ. ರಾಜ್ಯಗಳ ಶಾಸಕಾಂಗಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಕೇವಲ ೯%, ವಿಧಾನ ಪರಿಷತ್ತುಗಳಲ್ಲಿ ಕೇವಲ ಶೇಕಡಾ ೫ ರಷ್ಟು ಮಹಿಳೆಯರು ಸದಸ್ಯರಾಗಿದ್ದಾರೆ. ೧೯೯೨-೯೩ ರಲ್ಲಿ ಆದ ಸಂವಿಧಾನದ ೭೩ ಮತ್ತು ೭೪ ನೇ ತಿದ್ದುಪಡಿಗಳು ಸ್ಥಳೀಯ ನಿರ್ಣಯಾತ್ಮಕ ಪ್ರಕ್ರಿಯೆಗಳಲ್ಲಿ ಸಂಯುಕ್ತ ರಾಜಕಾರಣ ಹಾಗೂ ಮಹಿಳೆಯರ ಭಾಗವಹಿಸುವಿಕೆಯನ್ನು ವಿಸ್ತಾರಗೊಳಿಸಿದೆ. ಮೂರು ಸ್ತರದ ಪಂಚಾಯತಿಗಳಲ್ಲಿ ಮಹಿಳೆಯರು ಶೇಕಡಾ ೪೬ ರಷ್ಟು ಸ್ಥಾನಗಳನ್ನು ಹೊಂದಿದ್ದಾರೆ. ಇದು ಸ್ಥಳೀಯವಾಗಿ ಮಾತ್ರವಲ್ಲದೆ, ಶಾಸಕಾಂಗ ಮತ್ತು ಸಂಸತ್ತಿನಲ್ಲಿ ಭಾಗವಹಿಸುವಿಕೆಯನ್ನು ಉತ್ತೇಜಿಸಿದೆ. ಆದರೂ ಸಂಸತ್ತು ಮತ್ತು ವಿಧಾನ ಮಂಡಲಗಳಲ್ಲಿ ೧/೩ ಭಾಗ ಮೀಸಲಿರಿಸುವ ಉದ್ದೇಶ ಹೊಂದಿದ್ದ ಸಂವಿಧಾನ ತಿದ್ದುಪಡಿ (೧೦೮) ಮಸೂದೆ ಅಥವಾ ಮಹಿಳಾ ಮೀಸಲು ಮಸೂದೆ,

೨೦೦೪ ಸಂಸತ್ತಿನಲ್ಲಿ ಅಂತ್ಯ ಕಂಡಿದೆ. ರಾಜಕೀಯ ಮತ್ತು ಆಡಳಿತದಲ್ಲಿ ಮಹಿಳೆಯರ ಕಡಿಮೆ ಪ್ರತಿನಿಧಿತ್ವಕ್ಕೆ ಈ ಕೆಳಗಿನ ಅಂಶಗಳು ಕಾರಣವೆನ್ನಬಹುದು. ೧) ರಾಜಕೀಯ ಪಕ್ಷಗಳಲ್ಲಿ ಬದ್ಧತೆಯ ಕೊರತೆ ೨) ಸಾಮಾಜಿಕ ಪಿತೃಪ್ರಭುತ್ವ ೩) ಮಹಿಳಾ ಮೀಸಲಾತಿ ನೀತಿಯ ಅಲಭ್ಯತೆ ೪) ರಾಜಕೀಯದಲ್ಲಿನ ಭ್ರಷ್ಟಾಚಾರ ಮತ್ತು ಅಪರಾಧೀಕರಣ ೫) ವಂಶೀಯತೆ.

ರಾಜಕೀಯದಲ್ಲಿ ಮಹಿಳೆಯರು–೨೦೧೭ ಎಂಬ ಅಂತರ ಸಂಸದೀಯ ಒಕ್ಕೂಟದ ದಾಖಲೆಗಳು ಮಹಿಳಾ ಸಚಿವರುಗಳು ಹೊಂದಿರುವ ಖಾತೆಗಳ ಬಗ್ಗೆ ಆಸಕ್ತಿಕರ ಮಾಹಿತಿಯನ್ನು ಹೊರ ಹಾಕಿದೆ. ಮಹಿಳೆಯರು ನಿರ್ವಹಿಸಿದ ಖಾತೆಗಳೆಂದರೆ, ಪರಿಸರ, ನೈಸರ್ಗಿಕ ಸಂಪತ್ತು, ಸಮಾಜ ಮತ್ತು ಮಹಿಳಾ ಕಲ್ಯಾಣ, ಲಿಂಗ ಸಮಾನತೆ, ಕುಟುಂಬ ಮತ್ತು ಯುವಜನ ಹಾಗೂ ಶಿಕ್ಷಣ ಮತ್ತು ಸಂಸ್ಕೃತಿ. ಈ ಕ್ಷೇತ್ರಗಳು ಯಾವುದೇ ರಾಷ್ಟ್ರದ ಸಾಮಾಜಿಕ ಆರ್ಥಿಕತೆಯ ಅಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳಾಗಿರುತ್ತವೆ. ಒಂದು ರಾಷ್ಟ್ರವಾಗಿ ನಾವು ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರನ್ನು ಆಡಳಿತಾತ್ಮಕವಾಗಿ ತೊಡಗಿಸುವ ನಿಟ್ಟಿನಲ್ಲಿ ಮೀಸಲಾತಿಯನ್ನು ಜಾರಿಗೊಳಿಸಿ ಅವರ ಪಾತ್ರವನ್ನು ಬಲಪಡಿಸಬೇಕಿದೆ. ರಕ್ಷಣಾ ಸಚಿವೆ ಮತ್ತು ಲೋಕಸಭೆಯ ಸಭಾಧ್ಯಕ್ಷೆಯಂತಹ ಸ್ಥಾನ ಪಡೆದಂತಹ ಉತ್ಕೃಷ್ಟ ಉದಾಹರಣೆಗಳಿದ್ದರೂ ಸಹ ಮಹಿಳೆಯರ ಸಾಮರ್ಥ್ಯ ಅರಿಯುವ ಮತ್ತು ಅವರಿಗೆ ಸಮಾನವಾದ ಅಧಿಕಾರ ಮತ್ತು ಅಧಿಪತ್ಯ ನೀಡುವ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳ ಉದಾಸೀನತೆ ಮತ್ತು ನಿರಾಕರಣೆ ಸಂಕುಚಿತ ಮನೋಭಾವನೆಯ ಸಂಕೇತವೆನಿಸುತ್ತದೆ. ಇದು ಭಾರತದ ರಾಜಕೀಯದಲ್ಲಿರುವ ಪುರುಷ ಲಿಂಗ ಪ್ರಾಬಲ್ಯತೆಯನ್ನು ಪ್ರತಿಬಿಂಬಿಸುತ್ತದೆ. ಆಡಳಿತ ವ್ಯವಸ್ಥೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ರಾಜಕೀಯವಾಗಿ ಸಾಧ್ಯವಾಗಿಸುವ ನಿಟ್ಟಿನಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಇದು ಅತ್ಯಂತ ಸೂಕ್ತ ಸಮಯವೆಂದು ಪರಿಗಣಿಸಬಹುದು. (ವಿರೇಶ್ ನಾಯಕ್, ೨೦೧೮).

ಕೋಷ್ಟಕ ೪.೫ ಸಂಸತ್ ನಲ್ಲಿ ಮಹಿಳಾ ಸಶಕ್ತತೆಯ ಪ್ರಾತಿನಿಧ್ಯ

ವರ್ಷ	ಲೋಕಸಭೆ			ರಾಜ್ಯಸಭೆ		
	ಒಟ್ಟು ಸ್ಥಾನ	ಮಹಿಳಾ ಸದಸ್ಯರು	ಶೇಕಡಾ ಪ್ರಮಾಣ	ಒಟ್ಟು ಸ್ಥಾನ	ಮಹಿಳಾ ಸದಸ್ಯರು	ಶೇಕಡಾ ಪ್ರಮಾಣ
೧೯೫೨	೪೯೯	೨೨	೪.೪೧	೨೧೯	೧೬	೭.೩೧
೧೯೫೭	೫೦೦	೨೭	೫.೪	೨೩೭	೧೮	೭.೫೯
೧೯೬೨	೫೦೩	೩೪	೬.೭೬	೨೩೮	೧೮	೭.೫೬
೧೯೬೭	೫೨೩	೩೧	೫.೯೩	೨೪೦	೨೦	೮.೩೩
೧೯೭೧	೫೨೧	೨೨	೪.೨೨	೨೪೩	೧೭	೭
೧೯೭೭	೫೪೪	೧೯	೩.೪೯	೨೪೪	೨೫	೧೦.೨೫
೧೯೮೦	೫೪೪	೨೮	೫.೧೫	೨೪೪	೨೪	೯.೮೪
೧೯೮೪	೫೪೪	೪೪	೮.೦೯	೨೪೪	೨೮	೧೧.೪೮
೧೯೮೯	೫೧೭	೨೭	೫.೨೨	೨೪೫	೨೪	೯.೮
೧೯೯೧	೫೪೪	೩೯	೭.೧೭	೨೪೫	೩೮	೧೫.೫೧
೧೯೯೬	೫೪೩	೩೯	೭.೧೮	೨೨೩	೧೯	೮.೫೨
೧೯೯೮	೫೪೩	೪೩	೭.೯೨	೨೪೫	೧೫	೬.೧೨
೧೯೯೯	೫೪೩	೪೯	೯.೦೨	೨೪೫	೧೯	೭.೭೬
೨೦೦೪	೫೪೩	೪೫	೮.೨೮	೨೪೫	೨೮	೧೧.೪
೨೦೦೯	೫೪೩	೫೯	೧೦.೮೬	೨೪೫	೨೨	೮.೯೮
೨೦೧೩	–	–	–	೨೪೧	೨೮	೧೧.೬೨
೨೦೧೪	೫೪೩	೬೧	೧೧.೨೩	–	–	–
ಸರಾಸರಿ	**೫೩೦**	**೩೫**	**೬.೫೯**	**೨೪೦**	**೨೧**	**೯**

ಮೂಲ: ಸಿಎಸ್‌ಡಿಸಿ ಡಾಟಾ ಯುನಿಟ್ ಹೆಚ್‌ಟಿಟಿಪಿ: ಡಬ್ಲ್ಯೂ ಡಬ್ಲ್ಯೂಡಬ್ಲ್ಯೂ ಇಂಡಿಯಾ ಸ್ಟ್ಯಾಟ್.ಕಮ್/೨೦೧೫

ಮೇಲಣ ಕೋಷ್ಟಕವು ರಾಷ್ಟ್ರೀಯ ಸ್ತರದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಳಪೆಯಾಗಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅದೇ ರೀತಿಯಲ್ಲಿ ರಾಜ್ಯಸಭೆಯಲ್ಲಿ ಕೂಡಾ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆ ಅತಿ ಕನಿಷ್ಠವಾಗಿದೆ. ಇದಕ್ಕೆ ಅನೇಕ ಕಾರಣಗಳಿವೆ. ಅವುಗಳ ಪೈಕಿ ಒಂದು ಪ್ರಧಾನ ಕಾರಣವೆಂದರೆ ಲಿಂಗತ್ವ ಪಾತ್ರಗಳ ಸಾಂಸ್ಕೃತಿಕ ಸಂಯೋಜನೆ ಮತ್ತು ರಾಜಕೀಯವನ್ನು ಅಪರಾಧೀಕರಣಗೊಳಿಸಿರುವುದು. ಓರ್ವ ರಾಜಕೀಯ ಪ್ರತಿನಿಧಿಯಾಗುತ್ತಲೇ ಮಹಿಳೆಯು ಹೆಚ್ಚು ವೇಳೆಯನ್ನು ಮನೆಯಾಚೆಗೆ ಕಳೆಯಬೇಕಾಗುತ್ತದೆ. ಮತ್ತು ಪುರುಷರೊಂದಿಗೆ ವ್ಯವಹರಿಸುವುದು ಅತಿ ಅಗತ್ಯವಾಗುತ್ತದೆ. ಕುಟುಂಬದಲ್ಲಿ ಸಾಕಷ್ಟು ಪೂರಕ ಬೆಂಬಲದ ರಚನೆಗಳು ಇಲ್ಲದಿರುವುದರಿಂದ ತನ್ನ ಕಾರ್ಯಗಳನ್ನು ಪೂರ್ಣಗೊಳಿಸಲು ಮಹಿಳೆಗೆ ಕಷ್ಟಸಾಧ್ಯವಾಗುತ್ತದೆ. ಅಲ್ಲದೆ, ಮಹಿಳೆಯು

ಜನಪ್ರತಿನಿಧಿಯಾದ ಮಾತ್ರಕ್ಕೆ ಮನೆವಾರ್ತೆಯ ಜವಾಬ್ದಾರಿಗಳಿಂದ ಪೂರ್ತಿಯಾಗಿ ಕಳಚಿಕೊಳ್ಳಲು ಸಾಧ್ಯವಾಗದೇ ಇರುವುದು. ಕೂಡಾ ಮಹಿಳೆ ರಾಜಕೀಯವಾಗಿ ಸಾಧನೆ ಮಾಡುವಲ್ಲಿ ಸವಾಲಾಗುತ್ತದೆ.

ಕೋಷ್ಟಕ ೪.೬ ಮಂತ್ರಿಗಳ ಒಕ್ಕೂಟ ವ್ಯವಸ್ಥೆಯಲ್ಲಿ ಮಹಿಳಾ ಪ್ರತಿನಿಧಿಗಳು

ವರ್ಷ	ಮಂತ್ರಿಗಳ ಸಂಖ್ಯೆ			ಮಹಿಳಾ ಮಂತ್ರಿಗಳ ಸಂಖ್ಯೆ		
	ಸಂಪುಟ ಸಚಿವರು	ರಾಜ್ಯ ಸಚಿವರು	ಉಪ ಮಂತ್ರಿ	ಸಂಪುಟ ಸಚಿವರು	ರಾಜ್ಯ ಸಚಿವರು	ಉಪ ಮಂತ್ರಿ
೧೯೮೫	೧೫	೨೫	೦	೧	೩	೦
೧೯೯೦	೧೭	೧೭	೫	೦	೧	೧
೧೯೯೫	೧೨	೩೭	೩	೧	೪	೧
೧೯೯೬	೧೮	೨೧	೦	೦	೧	೦
೧೯೯೮	೨೦	೨೪	೦	೦	೫	೦
೧೯೯೯	೨೧	೨೧	೦	೦	೩	೦
೨೦೦೧	೩೦	೩೦	೩೫	೩	೨	೪
೨೦೦೨	೩೧	೩೧	೦	೨	೫	೦
೨೦೦೪	೨೮	೩೮	೦	೧	೬	೦
೨೦೦೯	೩೪	೪೫	೦	೩	೫	೦
೨೦೧೪	೨೩	೨೩	೦	೬	೧	೦

ಮೂಲ: ಕುಲ್ದೀಪ್ ಫಾಡಿಯಾ, ೨೦೧೪, 'ವುಮೆನ್ ಎಂಪವರ್‌ಮೆಂಟ್ ಥ್ರೂ ಪಾಲಿಟಿಕಲ್ ಪಾರ್ಟಿಸಿಪೇಶನ್ ಇನ್ ಇಂಡಿಯಾ',

ಮೇಲ್ಕಂಡ ಕೊಷ್ಟಕದಲ್ಲಿ ತೋರಿಸುವಂತೆ ೧೯೮೫ ರಿಂದ ೨೦೧೪ ರವರೆಗಿನ ಮಂತ್ರಿಗಳ ಒಕ್ಕೂಟ ವ್ಯವಸ್ಥೆಯಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆ ಅತಿ ಕನಿಷ್ಠವಾಗಿದ್ದು ಒಂದಂಕಿಯನ್ನು ದಾಟಿದ್ದಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ರಾಜಕೀಯ ಪಕ್ಷಗಳು ಮಹಿಳಾ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಲು ಹಿಂದೇಟು ಹಾಕುವುದು ಒಂದು ಪ್ರಮುಖ ಕಾರಣವಾಗಿದೆ. ಜೊತೆಗೆ ಚುನಾವಣಾ ಪ್ರಚಾರದ ಭಾರೀ ವೆಚ್ಚ ಮಹಿಳಾ ಅಭ್ಯರ್ಥಿಗಳಿಗೆ ಒಂದು ಬೆದರಿಕೆಯಾಗಿ ಪರಿಣಮಿಸುತ್ತದೆ. ಇವೆಲ್ಲವೂ ಮಹಿಳೆಯರ ರಾಜಕೀಯ ಹಿನ್ನಡೆಗೆ ಕಾರಣವಾಗುತ್ತದೆ.

ಕೋಷ್ಟಕ ೪.೭ ವಿಶ್ವವಾರು ಸಂಸತ್ತಿನಲ್ಲಿ ಗರಿಷ್ಠ ಮಹಿಳಾ ಪ್ರಾತಿನಿಧ್ಯ ಹೊಂದಿರುವ ಐದು ರಾಷ್ಟ್ರಗಳು ದಿನಾಂಕ ೦೧-೧೫-೨೦೧೮ ರಲ್ಲಿದ್ದಂತೆ

ಅತ್ಯಧಿಕ ಮಹಿಳಾ ಪ್ರಾತಿನಿಧ್ಯ ಹೊಂದಿರುವ ಐದು ರಾಷ್ಟ್ರಗಳು	ಶೇಕಡವಾರು ಪ್ರಾತಿನಿಧ್ಯ
ರುವಾಂಡಾ	೬೧.೩
ಕ್ಯೂಬಾ	೫೩.೨
ಬೊಲಿವಿಯಾ	೫೩.೧
ಗ್ರೆನೆಡಾ	೪೬.೭
ನಮೀಬಿಯಾ	೪೬.೨

ಮೂಲ: ಡಬ್ಲ್ಯೂ ಡಬ್ಲ್ಯೂಡಬ್ಲ್ಯೂ ವರ್ಲ್ಡ್ ಬ್ಯಾಂಕ್.ಓರ್ಗ್.

ಕೋಷ್ಟಕ ೪.೭ರಲ್ಲಿ ತಿಳಿಸಿರುವಂತೆ ವಿಶ್ವವಾರು ಸಂಸತ್ತಿನಲ್ಲಿ ಅತೀ ಹೆಚ್ಚು ಮಹಿಳಾ ಪ್ರಾತಿನಿಧ್ಯ ಹೊಂದಿರುವ ಐದು ರಾಷ್ಟ್ರಗಳಲ್ಲಿ ರುವಾಂಡಾ ದೇಶದ ಸಂಸತ್ತಿನಲ್ಲಿ ಶೇಕಡಾ ೬೧.೩ರಷ್ಟು ಮಹಿಳಾ ಪ್ರತಿನಿಧಿಗಳಿದ್ದು ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಹಾಗೆಯೇ ಎರಡನೇ ಸ್ಥಾನದಲ್ಲಿ ಶೇಕಡಾ ೫೩.೨ರಷ್ಟು ಮಹಿಳಾ ಪ್ರತಿನಿಧಿಗಳನ್ನೊಳಗೊಂಡ ಕ್ಯೂಬಾ ದೇಶವಿದೆ. ಬೊಲಿವಿಯಾ ದೇಶವು ಶೇಕಡಾ ೫೩.೧ರಷ್ಟು ಮಂದಿ ಮಹಿಳಾ ಪ್ರತಿನಿಧಿಗಳನ್ನೊಳಗೊಂಡು ಮೂರನೆಯ ಸ್ಥಾನವನ್ನು ಪಡೆದಿದೆ. ಶೇಕಡಾ ೪೬.೭ರಷ್ಟು ಮಹಿಳಾ ಪ್ರತಿನಿಧಿಗಳನ್ನೊಳಗೊಂಡ ಗ್ರೆನಡಾ ದೇಶವು ನಾಲ್ಕನೆಯ ಸ್ಥಾನವನ್ನು ಪಡೆದರೆ, ಐದನೆಯ ಸ್ಥಾನದಲ್ಲಿ ಶೇಕಡಾ ೪೬.೨ರಷ್ಟು ಮಹಿಳಾ ಪ್ರತಿನಿಧಿಗಳನ್ನೊಳಗೊಂಡ ನಮೀಬಿಯಾ ದೇಶವಿದೆ.

ಕೋಷ್ಟಕ ೪.೮ ವಿಶ್ವವಾರು ಸಂಸತ್ತುಗಳಲ್ಲಿ ಕನಿಷ್ಠ ಮಹಿಳಾ ಪ್ರಾತಿನಿಧ್ಯ ಹೊಂದಿರುವ ರಾಷ್ಟ್ರಗಳು ದಿನಾಂಕ ೦೧-೧೫-೨೦೧೮ ರಲ್ಲಿದ್ದಂತೆ

ಅತೀ ಕಡಿಮೆ ಮಹಿಳಾ ಪ್ರಾತಿನಿಧ್ಯ ಹೊಂದಿರುವ ಐದು ರಾಷ್ಟ್ರಗಳು	ಶೇಕಡವಾರು ಪ್ರಾತಿನಿಧ್ಯ
ಮೆಕ್ರೊನೇಷಿಯಾ, ಪಾಲುವಾ ನಿವ್ಯೂ ಗ್ವೈನಿಯಾ, ವನ್ವಟ್, ಯೆಮೆನ್ ಗಣರಾಜ್ಯ	೦
ಓಮನ್	೧.೨
ಸೊಲೋಮನ್ ಐಲ್ಯಾಂಡ್ಸ್	೨
ಹೈಯ್ತಿ	೨.೫
ಲೆಬನಾನ್	೩.೧

ಮೂಲ: ಡಬ್ಲ್ಯೂ ಡಬ್ಲ್ಯೂಡಬ್ಲ್ಯೂ ವರ್ಲ್ಡ್ ಬ್ಯಾಂಕ್ .ಓರ್ಗ್.

ಮೇಲಿನ ಕೋಷ್ಟಕ ೪.೮ರಲ್ಲಿ ಅತೀ ಕಡಿಮೆ ಸ್ಥಾನವನ್ನು ಹೊಂದಿರುವ ಅಂದರೆ ೧೮೯ನೇ ಸ್ಥಾನದಲ್ಲಿ ಸೊನ್ನೆ ಶೇಕಡಾದೊಂದಿಗೆ ಒಟ್ಟು ನಾಲ್ಕು ರಾಷ್ಟ್ರಗಳಿವೆ. ಅವುಗಳು ಮೈಕ್ರೋನೇಷಿಯಾ,

ಪಾಲುವಾ ನ್ಯೂ ಗೂಯನಿಯಾ, ವನೌಟಾ ಯೇಮನ್, ೧೮೮ನೇ ಸ್ಥಾನದಲ್ಲಿ ೧.೨ ಶೇಕಡಾದೊಂದಿಗೆ ಓಮನ್ ರಾಷ್ಟ್ರವಿದ್ದರೆ, ೧೮೭ನೇ ಸ್ಥಾನದಲ್ಲಿ ಶೇಕಡಾ ೨ರಷ್ಟು ಸ್ಥಾನವನ್ನು ಹೊಂದಿರುವ ಸೊಲೊಮನ್ ಐಲ್ಯಾಂಡ್ ರಾಷ್ಟ್ರವಿದೆ. ೧೮೭ನೇ ಸ್ಥಾನದಲ್ಲಿ ಶೇಕಡಾ ೨.೫ರಷ್ಟು ಸ್ಥಾನವನ್ನು ಪಡೆದಿರುವ ಹೈತಿ ರಾಷ್ಟವಿದೆ. ಹಾಗೆಯೇ ೧೯೬ನೇ ಸ್ಥಾನ ಪಡೆದಿರುವ ಲೆಬನಾನ್ ರಾಷ್ಟ್ರವು ತನ್ನ ಸಂಸತ್ತಿನಲ್ಲಿ ಶೇಕಡಾ ೩.೧ರಷ್ಟು ಮಹಿಳಾ ಪ್ರತಿನಿಧಿಗಳನ್ನು ಒಳಗೊಂಡಿದೆ.

೪.೧೩. ಪಂಚಾಯತ್ ರಾಜ್ ಕಾಯ್ದೆ ಹಾಗೂ ಮಹಿಳಾ ರಾಜಕೀಯ ಸಬಲೀಕರಣ

ಸ್ಥಳೀಯ ಸಂಸ್ಥೆಗಳ ನಿರ್ಮಾಣದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಒಂದು ವಿಭಿನ್ನ ಆವಿಷ್ಕಾರವಾಗಿದೆ. ಇವು ಮೂಲತಃ ರಾಜಕೀಯ ಘಟಕಗಳಾಗಿದ್ದು ಅಥವಾ ಸಂಸ್ಥೆಗಳಾಗಿದ್ದು ವಿಕೇಂದ್ರಿತ ಶಕ್ತಿ ಮತ್ತು ಅಧಿಕಾರದ ಸ್ಥಾನಗಳಾಗಿವೆ. ಗ್ರಾಮೀಣ ಪ್ರದೇಶದ ಹೆಚ್ಚಿನ ಅಭಿವೃದ್ಧಿ ಚಟುವಟಿಕೆಗಳನ್ನು ಈ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುತ್ತಿದೆ.

ಪಂಚಾಯತ್ ರಾಜ್‌ಗೆ ಸಂಬಂಧಿಸಿದಂತೆ ಮೆಹ್ತಾ ವರದಿಯಲ್ಲಿರುವ ಹಲವು ಶಿಫಾರಸ್ಸುಗಳಲ್ಲಿ ಬಹುಮುಖ್ಯವಾದುದು ಮೂರು ಶ್ರೇಣಿಯ ಸಾಂಸ್ಥಿಕ ವ್ಯವಸ್ಥೆ, ಗ್ರಾಮ, ತಾಲೂಕು ಹಾಗೂ ಜಿಲ್ಲಾ ಹಂತಗಳಲ್ಲಿ ರಾಜಕೀಯ ವಿಕೇಂದ್ರೀಕರಣದ ಚಿಂತನೆಯನ್ನು ನೀಡಿದ ವರದಿ ಅಭಿವೃದ್ಧಿ ಪೂರಕ ಪಾಲ್ಗೊಳ್ಳುವಿಕೆಯನ್ನು ಸಕಾರಾಗೊಳಿಸಿತು. ಆ ಮೂಲಕ ಸ್ಥಳೀಯ ಸರಕಾರದ ಹೊಸ ಯುಗವನ್ನು ಭಾರತದಲ್ಲಿ ಪರಿಚಯಿಸಿತು.

ಮೂರು ಶ್ರೇಣಿಯ ಪಂಚಾಯತ್ ರಾಜ್ ವ್ಯವಸ್ಥೆಯ ತತ್ವಗಳು ಈ ಕೆಳಗಿನಂತಿವೆ:

ಅ) ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಮೂರು ಹಂತದ ಆಡಳಿತ ಮಂಡಳಿಗಳನ್ನು ರೂಪಿಸಿಕೊಂಡು ಕೆಳಹಂತದಿಂದ ಮೇಲ್‌ಹಂತದವರೆಗೆ ಸೂಕ್ತ ಕೊಂಡಿಯನ್ನು ಹೊಂದುವುದು.

ಆ) ಶಕ್ತಿ ಮತ್ತು ಜವಾಬ್ದಾರಿಗಳು ಈ ಸಂಸ್ಥೆಗಳಿಗೆ ಪೂರ್ಣವಾಗಿ ಹಾಗೂ ಪ್ರಮಾಣಿಕವಾಗಿ ವರ್ಗಾವಣೆಗೊಳ್ಳುವಂತೆ ಮಾಡುವುದು.

ಇ) ಈ ಸಂಸ್ಥೆಗಳು ಸರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವಂತೆ ಸಾಕಷ್ಟು ಹಣಕಾಸಿನ ಸಂಪನ್ಮೂಲಗಳನ್ನು ಒದಗಿಸಿಕೊಡುವುದು.

ಈ) ಎಲ್ಲಾ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈ ಸಂಸ್ಥೆಗಳ ಮೂಲಕವೇ ಚಾಲನೆಗೊಳಿಸುವುದು.

ಉ) ಈ ವ್ಯವಸ್ಥೆಯ ಮುಂದಿನ ದಿನಗಳಲ್ಲಿ ಇನ್ನಷ್ಟು ಶಕ್ತಿ ಮತ್ತು ಅಧಿಕಾರದ ವಿಕೇಂದ್ರೀಕರಣವನ್ನು ಸಾಧಿಸಲು ಸಾಧ್ಯವಾಗುವಂತೆ ವಿಕಸನಗೊಳಿಸುವುದು.

ಈ ಎಲ್ಲಾ ಆಶಯಗಳನ್ನು ಈಡೇರಿಸಿಕೊಂಡು ಸ್ಥಳೀಯ ಸರಕಾರವನ್ನು ಪ್ರೋತ್ಸಾಹಿಸುವ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೇಂದ್ರವು ರಾಜ್ಯ ಸರಕಾರಗಳಿಗೆ ನಿರ್ದೇಶನಗಳನ್ನು ನೀಡಿತು. ಕೆಲವು ರಾಜ್ಯಗಳಲ್ಲಿ ಮೂರು ಶ್ರೇಣಿಯ ಈ ವ್ಯವಸ್ಥೆಯು ಸ್ವಲ್ಪ ಮಟ್ಟಿನ ಹಿನ್ನಡೆಯನ್ನು ಅನುಭವಿಸಿತು. ಕೆಲವು ಸಂದರ್ಭದಲ್ಲಿ ಸಮಾಜದ ಶ್ರೀಮಂತ ವರ್ಗ ಹಾಗೂ ಮೇಲ್ಜಾತಿಗೆ ಸೇರಿದವರು ಈ ಸರಕಾರಗಳ

ಮೇಲೆ ಪ್ರಭಾವ ಬೀರಿದ ಹಾಗೂ ಪ್ರಾಬಲ್ಯ ಸಾಧಿಸಿದ ಪ್ರಕರಣಗಳು ನಡೆದವು. ಪರಿಣಾಮವಾಗಿ ಪಂಚಾಯತ್ ರಾಜ್ ವ್ಯವಸ್ಥೆಯ ಕೆಲಸಗಳನ್ನು ಗಮನಿಸಿಕೊಂಡು ಅದನ್ನು ಇನ್ನಷ್ಟು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಲಹೆಗಳನ್ನು ನೀಡಬೇಕೆಂಬ ಉದ್ದೇಶದಿಂದ ಭಾರತ ಸರಕಾರವು ೧೯೭೭ರಲ್ಲಿ ಅಶೋಕ್ ಮೆಹ್ತಾ ಸಮಿತಿಯನ್ನು ರಚಿಸಿತು. ಪಂಚಾಯತ್ ರಾಜ್‌ನ ಏಳುಬೀಳುಗಳನ್ನು ಸಮಿತಿಯು ಪರಾಮರ್ಶಿಸಿತು. ಈ ಸಮಿತಿಯು ನೀಡಿದ ೧೩೨ ಶಿಫಾರಸ್ಸುಗಳು ಮುಖ್ಯವಾಗಿ ಪಂಚಾಯತ್ ರಾಜ್‌ಗೆ ಸೂಕ್ತ ಸಾಂವಿಧಾನಿಕ ಸ್ಥಾನಮಾನ ನೀಡುವ ಬಗ್ಗೆ ಉಲ್ಲೇಖಿಸಿತು. ಈ ಸಮಿತಿಯು ವರದಿಯ ಎರಡು ಶ್ರೇಣಿಗಳ ವ್ಯವಸ್ಥೆಯನ್ನು ಶಿಫಾರಸು ಮಾಡಿತು. ಪಂಚಾಯತ್ ಚುನಾವಣೆಗಳನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿ ನಡೆಸಬೇಕೆಂದು ಸಲಹೆಯನ್ನು ಸಮಿತಿ ನೀಡಿತು. ಆದರೆ ಈ ಸಮಿತಿಯ ವರದಿಯ ಅಂಶಗಳನ್ನು ಕರ್ನಾಟಕ ಮತ್ತು ಆಂಧ್ರಪ್ರದೇಶದಂತಹ ಕೆಲವೇ ರಾಜ್ಯಗಳು ಅಳವಡಿಸಿಕೊಂಡವು. ೧೯೭೭ ರಿಂದ ೧೯೮೭ ರವರೆಗಿನ ಅವಧಿಯಲ್ಲಿ ಪಂಚಾಯತ್ ರಾಜ್‌ಗೆ ಸಂಬಂಧಿಸಿದಂತೆ ನಿರ್ಲಕ್ಷದ ವರ್ತನೆಯನ್ನು ಹಲವು ರಾಜ್ಯಗಳಲ್ಲಿ ಗಮನಿಸಬಹುದಾಗಿದೆ.

೭೩ನೇ ಸಂವಿಧಾನ ತಿದ್ದುಪಡಿಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಾಂವಿಧಾನಿಕ ಗೌರವವನ್ನು ಒದಗಿಸಿಕೊಟ್ಟಿತು. ಆ ಮೂಲಕ ಪ್ರಜಾಪ್ರಭುತ್ವವನ್ನು ವಿಕೇಂದ್ರೀಕರಿಸುವ ವ್ಯವಸ್ಥೆಯ ವಿಕಸನದಲ್ಲಿ ದೊಡ್ಡ ಹೆಗ್ಗುರುತಾಗಿ ಗುರುತಿಸಲ್ಪಟ್ಟಿತು. ಗ್ರಾಮೀಣ ಬಡ ಜನರಿಗೆ ತರಬೇತಿ ನೀಡಿ ಜವಾಬ್ದಾರಿ ವಹಿಸಿಕೊಳ್ಳುವ ಸಾಮರ್ಥ್ಯವನ್ನು ವೃದ್ಧಿಸಿ, ರಾಜಕೀಯ ಶಿಕ್ಷಣವನ್ನು ನೀಡುವ ಒಂದು ಬೃಹತ್ ಯೋಜನೆ ಈ ಮೂಲಕ ಅನುಷ್ಠಾನಗೊಂಡಿತು.

ಕರ್ನಾಟಕದಲ್ಲಿ ೧೯೫೬ ರಿಂದಲೇ ರಾಜಕೀಯ ವಿಕೇಂದ್ರೀಕರಣ ಹಾಗೂ ಸ್ಥಳೀಯ ಸರಕಾರದ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಲಾಗಿದೆ. ೧೯೮೩ರ ಕರ್ನಾಟಕ ಕಾಯ್ದೆಯು ಪಂಚಾಯತ್ ರಾಜ್ ಜಾರಿಗೊಳ್ಳುವಲ್ಲಿ ಮುಖ್ಯ ಮೈಲಿಗಲ್ಲಾಯಿತು. ಅಶೋಕ್ ಮೆಹ್ತಾ ಸಮಿತಿಯು ಸೂಚಿಸಿದ ದ್ವಿ ಶ್ರೇಣಿ ಆಡಳಿತ ವ್ಯವಸ್ಥೆಯನ್ನು ಹಾಗೂ ಜಿಲ್ಲಾ ಮತ್ತು ಮಂಡಲ ಪಂಚಾಯತ್‌ಗಳ ನಾಯಕತ್ವವನ್ನು ನೇರ ಚುನಾವಣೆಯ ಮೂಲಕ ನಿರ್ಧರಿಸುವ ಕ್ರಮವನ್ನು ಈ ಕಾಯಿದೆಯು ಅನುಮೋದಿಸಿತು.

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩ ಜಿಲ್ಲಾ ಪಂಚಾಯತ್‌ಗಳ ಅಧಿಕಾರವನ್ನು ತಾಲೂಕು ಪಂಚಾಯತ್‌ಗಳಿಗೆ ವಿಸ್ತರಿಸಿ ಆ ಮೂಲಕ ತಾಲೂಕು ಪಂಚಾಯತ್‌ಗಳಿಗೆ ಬಲ ನೀಡಿತು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಪಾತ್ರವನ್ನು ಬಲಪಡಿಸಿ ಚುನಾಯಿತ ಪ್ರತಿನಿಧಿಗಳ ನಿರ್ಣಯಗಳಿಗೆ ಸರಕಾರದ ದೃಢೀಕರಣದ ಅಗತ್ಯತೆಯನ್ನು ಸ್ಪಷ್ಟಪಡಿಸಲಾಯಿತು. ಜಿಲ್ಲಾ ಪಂಚಾಯತ್‌ಗಳನ್ನು ಸರಕಾರಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಸಂಸ್ಥೆಯಾಗಿ ಗುರುತಿಸಲಾಯಿತು.

೧೯೮೬ ರಲ್ಲಿ ಎಲ್.ಎಂ.ಸಿಂಘ್ವಿ ಸಮಿತಿಯು ಪಂಚಾಯತ್ ರಾಜ್ ವ್ಯವಸ್ಥೆಯ ಅಧ್ಯಯನ ನಡೆಸಿ ವಿಕೇಂದ್ರೀಕೃತ ಪ್ರಜಾಪ್ರಭುತ್ವಕ್ಕೆ ಗ್ರಾಮ ಸಭೆಯನ್ನು ಅಡಿಪಾಯವಾಗಿ ಪರಿಗಣಿಸುವಂತೆ ಸಲಹೆ ನೀಡಿತು. ಈ ಸಮಿತಿಯು ಪಂಚಾಯತ್ ರಾಜ್ ಸಂಸ್ಥೆಗಳನ್ನು ಸ್ವಯಮಾಡಳಿತದ ಭಾಗವೆಂದು

ಪರಿಗಣಿಸಿಕೊಂಡು ಯೋಜನೆ ಮತ್ತು ಅಭಿವೃದ್ಧಿಗೆ ಸಾರ್ವಜನಿಕ ಪಾಲ್ಗೊಳ್ಳುವಿಕೆಗೆ ಪೂರಕ ಪ್ರಕ್ರಿಯೆಯಾಗಿ ಗುರುತಿಸಿದೆ. ಈ ಸಮಿತಿಯು ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಿಗೆ ಸಾಂವಿಧಾನಿಕ ಗುರುತು ಮತ್ತು ಈ ಉದ್ದೇಶಕ್ಕಾಗಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ವಿಷಯವನ್ನು ಸಂವಿಧಾನದಲ್ಲಿ ಹೆಚ್ಚುವರಿ ಅಧ್ಯಾಯವಾಗಿ ಸೇರಿಸಿಕೊಳ್ಳುವಂತೆ ಶಿಫಾರಸು ಮಾಡಿತು. ಸಂವಿಧಾನದ ೭೩ನೇ ತಿದ್ದುಪಡಿಯು ಗ್ರಾಮ ಸಭೆಗಳನ್ನು ಮೂರು ಶ್ರೇಣಿ ಸ್ಥಳೀಯಾಡಳಿತದ ಅಡಿಪಾಯವಾಗಿ ಪರಿಗಣಿಸಿತು.

ಸ್ಥಳೀಯಾಡಳಿತಕ್ಕೆ ಸಂಬಂಧಿಸಿದಂತೆ ೬೪ನೇ ಸಂವಿಧಾನಿಕ ತಿದ್ದುಪಡಿಯನ್ನು ೧೯೮೯ರಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿಯವರು ಸಂಸತ್ತಿನಲ್ಲಿ ಮಂಡಿಸಿದರು. ಆದರೆ ಸೂಕ್ತ ಬಹುಮತವಿಲ್ಲದೆ ವಿಧೇಯಕ ವಿಫಲವಾಯಿತು. ೧೯೯೦ರಲ್ಲಿ ಮರು ಪ್ರಯತ್ನ ನಡೆಸಲಾಯಿತಾದರೂ ಅದರಲ್ಲಿಯೂ ನಿರೀಕ್ಷಿತ ಬೆಂಬಲ ಸಿಗಲಿಲ್ಲ. ೧೯೯೧ರಲ್ಲಿ ಪಿ.ವಿ.ನರಸಿಂಹರಾವ್ ಪ್ರಧಾನಿಯಾಗಿದ್ದ ಸಮಯದಲ್ಲಿ ಹೊಸ ಪಂಚಾಯತ್ ರಾಜ್ ವಿಧೇಯಕವನ್ನು ಮಂಡಿಸಿ ಅದನ್ನು ಸಂವಿಧಾನದ ೭೩ನೇ ತಿದ್ದುಪಡಿ ಕಾಯ್ದೆ ೧೯೯೨ ಎಂಬುದಾಗಿ ಅಂಗೀಕರಿಸಲಾಯಿತು. ಕೆಲವು ಕಿರು ಮಾರ್ಪಾಡುಗಳೊಂದಿಗೆ ೨೪ ಏಪ್ರಿಲ್ ೧೯೯೩ರಲ್ಲಿ ಜಾರಿಗೊಳಿಸಲಾಯಿತು. ೭೩ನೇ ತಿದ್ದುಪಡಿಯು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪುನರ್ರಚಿಸಿ ಅದನ್ನು ಜನಸಾಮಾನ್ಯರ ಮಟ್ಟಕ್ಕೆ ತರುವ ಪ್ರಯತ್ನವಾಗಿದೆ. ಈ ಕಾಯ್ದೆಯು ಪಂಚಾಯತ್ ರಾಜ್‌ಗೆ ಸಾಂವಿಧಾನಿಕ ಸ್ಥಾನಮಾನ ನೀಡಿತಲ್ಲದೆ ಎಲ್ಲಾ ರಾಜ್ಯಗಳು ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗೊಳಿಸುವಂತೆ ನಿರ್ದೇಶಿಸಿದೆ. ಈ ತಿದ್ದುಪಡಿಯು ರಾಷ್ಟ್ರಾದ್ಯಂತ ಪಂಚಾಯತ್‌ಗಳ ರಚನೆ, ಸಂಯೋಜನೆ, ಅಧಿಕಾರ, ಕಾರ್ಯ ವಿಧಾನಗಳಲ್ಲಿ ಏಕರೂಪತೆಯನ್ನು ತರಲು ಸಹಕಾರಿಯಾಯಿತು. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಲು ಅವಕಾಶವನ್ನು ಈ ತಿದ್ದುಪಡಿಯು ನೀಡಿತು.

೭೩ ನೇ ತಿದ್ದುಪಡಿಯಿಂದಾಗಿ ಪ್ರಜಾಪ್ರಭುತ್ವದ ವಿಕೇಂದ್ರೀಕರಣ ಸಾಧ್ಯವಾಗಿ ೨೪೬೯೮೦ ಪಂಚಾಯತ್‌ಗಳಲ್ಲಿ ೨.೩೮ ಮಿಲಿಯನ್ ಚುನಾಯಿತ ಪ್ರತಿನಿಧಿಗಳು ಸೇರ್ಪಡೆಗೊಳ್ಳುವಂತಾಯಿತು. ಈ ಕಾಯ್ದೆಯ ಪ್ರಮುಖ ನಿಬಂಧನೆಯಾದ ಮಹಿಳಾ ಮೀಸಲಾಯತಿಯು ಒಟ್ಟು ಆಯ್ಕೆಗೊಂಡ ಪ್ರತಿನಿಧಿಗಳಲ್ಲಿ ೪೪.೫೨ ಶೇಕಡಾದಷ್ಟು ಅಂದರೆ ೧.೨೬ ಮಿಲಿಯನ್ ಮಹಿಳೆಯರು ಸ್ಥಳೀಯಾಡಳಿತಕ್ಕೆ ಸೇರ್ಪಡೆಗೊಂಡರು. ಭಾರತದಲ್ಲಿ ಸಂಸತ್ತಿಗಿಂತ ಅಧಿಕ ಸಂಖ್ಯೆಯಲ್ಲಿ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರು ಭಾಗವಹಿಸಿದ್ದಾರೆ. ೨೦೦೮ರಲ್ಲಿ ಪಂಚಾಯತ್ ರಾಜ್ ಇಲಾಖೆ ದಾಖಲಿಸಿರುವಂತೆ ಗ್ರಾಮ ಪಂಚಾಯತ್‌ನಲ್ಲಿ ೩೭.೮ ಶೇಕಡಾ, ತಾಲೂಕು ಪಂಚಾಯತ್‌ಗಳಲ್ಲಿ ಶೇಕಡಾ ೩೭ ಹಾಗೂ ಜಿಲ್ಲಾ ಪಂಚಾಯತ್‌ಗಳಲ್ಲಿ ಶೇಕಡಾ ೩೫.೩ ಮಹಿಳಾ ಸದಸ್ಯರಾಗಿದ್ದಾರೆ. ಈ ಎಲ್ಲಾ ಮೂರು ಶ್ರೇಣಿಗಳಲ್ಲಿ ಒಟ್ಟು ಮಹಿಳಾ ಪ್ರಾತಿನಿಧ್ಯ ಶೇಕಡಾ ೩೬.೮೭ರಷ್ಟಿದೆ.

ಭಾರತ ಸಂವಿಧಾನದ ೨೪೩ ಡಿ ವಿಧಿಯು ಎಲ್ಲಾ ಶ್ರೇಣಿಯಲ್ಲಿಯೂ ಮಹಿಳೆಯರಿಗೆ ೧/೩ ಭಾಗ ಸ್ಥಾನಗಳನ್ನು ಕಡ್ಡಾಯವಾಗಿ ಮೀಸಲಿರಿಸಿರುವುದು ಇದೆಲ್ಲದಕ್ಕೂ ಮೂಲ ಕಾರಣವಾಗಿದೆ.

೨೦೦೯ ರಲ್ಲಿ ಈ ಮೀಸಲಾತಿಯನ್ನು ಶೇಕಡಾ ೫೦ ಕ್ಕೆ ಏರಿಸುವ ಬಗ್ಗೆ ತಿದ್ದುಪಡಿ ತರುವ ಪ್ರಯತ್ನ ನಡೆಸಲಾಯಿತಾದರೂ ಅದು ಯಶಸ್ಸು ಕಾಣಲಿಲ್ಲ. ಆದರೆ ಬಿಹಾರ, ಚತ್ತೀಸ್‌ಗಡ್, ಮಧ್ಯಪ್ರದೇಶ, ರಾಜಸ್ಥಾನ್, ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಕೇರಳ ರಾಜ್ಯಗಳು ಈಗಾಗಲೇ ಶಾಸನದಲ್ಲಿ ತಿದ್ದುಪಡಿ ತಂದು ಮಹಿಳೆಯರಿಗೆ ಶೇಕಡಾ ೫೦ ರಷ್ಟು ಸ್ಥಾನಗಳನ್ನು ಮೀಸಲಿರಿಸಿವೆ. ಸಿಕ್ಕಿಂ ರಾಜ್ಯವು ಮಹಿಳೆಯರಿಗೆ ಶೇಕಡಾ ೪೦ ರಷ್ಟು ಮೀಸಲಾತಿ ಕಲ್ಪಿಸಿ ಶಾಸನಾತ್ಮಕ ತಿದ್ದುಪಡಿ ನಡೆಸಿದ್ದು, ಇನ್ನುಳಿದಂತೆ ಇತರ ಯಾವುದೇ ರಾಜ್ಯಗಳು ಮಹಿಳಾ ಮೀಸಲಾತಿಯನ್ನು ಹೆಚ್ಚಿಸುವ ಪ್ರಯತ್ನ ಮಾಡಿಲ್ಲ.

ಮೂರು ಶ್ರೇಣಿಗಳ ಪಂಚಾಯತ್ ರಾಜ್ ನ ಒಟ್ಟು ೨೮ ಲಕ್ಷ ಚುನಾಯಿತ ಪ್ರತಿನಿಧಿಗಳಲ್ಲಿ ೧೦ ಲಕ್ಷಗಿಂತ ಅಧಿಕ ಸಂಖ್ಯೆಯ ಮಹಿಳಾ ಸದಸ್ಯರಿದ್ದಾರೆ. ಡಿಸೆಂಬರ್ ೨೦೧೬ ರಲ್ಲಿದ್ದಂತೆ ವಿವಿಧ ರಾಜ್ಯಗಳಲ್ಲಿ ಪಂಚಾಯತ್ ರಾಜ್ ಪ್ರತಿನಿಧಿಸಿದ ಮಹಿಳೆಯರ ಸಂಖ್ಯೆಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೪.೯ ಭಾರತದಲ್ಲಿ ಮೂರು ಶ್ರೇಣಿಯ ಪಂಚಾಯತ್ ರಾಜ್ ನಲ್ಲಿ ಆಯ್ಕೆಗೊಂಡ ಮಹಿಳಾ ಪ್ರತಿನಿಧಿಗಳ ಸಂಖ್ಯೆ

ರಾಜ್ಯ	ಪಂಚಾಯತ್ ಗಳ ಸಂಖ್ಯೆ	ಆಯ್ಕೆ ಗೊಂಡ ಮಹಿಳಾ ಪ್ರತಿನಿಧಿಗಳು							
		ಸಾ.ವ	ಪ.ಜಾ	ಶೇ.	ಪ. ಪಂ	ಶೇ.	ಒಟ್ಟು	ಮಹಿಳೆಯರು	ಶೇ.
ಆಂಧ್ರ ಪ್ರದೇಶ	೨೨೯೪೫	೧೭೨೧೩೬	೩೪೦೨೫	೧೫.೨	೧೭೮೪೨	೮.೦	೨೨೪೦೦೩	೭೪೦೧೯	೩೩.೦
ಅರುಣಾಚಲ ಪ್ರದೇಶ	೧೭೮೯	೦	೦	೦	೮೨೬೦	೧೦೦	೮೨೬೦	೩೧೮೩	೩೮.೫
ಅಸ್ಸಾಂ	೨೪೩೧	೨೩೨೦೬	೧೩೪೪	೫.೩	೮೮೬	೩.೫	೫೨೪೩೬	೯೯೦೩	೩೮.೯
ಬಿಹಾರ್	೯೦೪೦	೧೦೯೭೬೭	೧೯೪೪೦	೧೪.೯	೮೮೪	೦.೭	೧೩೦೦೯೧	೭೦೪೦೦	೫೪.೧
ಚತ್ತೀಸ್‌ಗಡ್	೯೯೮೨	೭೬೦೧೩	೧೭೫೪೦	೧೦.೯	೬೬೮೩೩	೪೧.೭	೧೬೦೩೮೬	೫೪೧೦೨	೩೩.೭
ಗೋವಾ	೧೯೨	೧೫೦೦	೦	೦	೦	೦	೧೫೦೦	೪೫೩	೩೦.೨
ಗುಜರಾತ್	೧೪೦೬೮	೮೩೯೮೨	೭೯೭೦	೭.೦	೨೨೨೩೫	೧೯.೫	೧೧೪೧೮೭	೩೮೦೬೬೮	೩೩.೩
ಹರಿಯಾಣ	೬೩೨೫	೫೪೫೦೮	೧೪೯೬೫	೨೧.೫	೦	೦	೬೯೪೭೩	೨೪೯೯೪	೩೬.೦
ಹಿಮಾಚಲ ಪ್ರದೇಶ	೩೩೩೦	೧೬೭೯೩	೮೭೨೪	೩೨.೦	೧೭೫೩	೬.೪	೨೭೨೭೦	೯೧೨೮	೩೩.೫
ಜಾರ್ಖಂಡ	೩೯೭೯	೦	೦	೦	೦	೦	೦	೦	೦
ಕರ್ನಾಟಕ	೫೮೫೬	೬೭೯೨೦	೧೭೮೫೯	೧೮.೬	೧೦೩೧೧	೧೦.೭	೯೬೦೯೦	೪೧೨೧೦	೪೨.೯

ಕೇರಳ	೧೧೬೫	೧೬೨೪೬	೨೦೦೫	೧೦.೮	೨೩೨	೧.೩	೧೮೪೮೩	೬೫೧೫	೩೫.೨
ಮಧ್ಯ ಪ್ರದೇಶ	೨೩೪೧೨	೨೨೨೮೩೬	೬೧೧೦೩	೧೫.೪	೧೧೨೯೩೮	೨೮.೫	೩೯೬೮೭೭	೧೩೪೩೬೮	೩೩.೯
ಮಹಾರಾಷ್ಟ್ರ	೨೮೩೦೨	೧೭೬೮೭೭	೨೫೨೬೮	೧೧.೦	೨೭೫೬೫	೧೨.೦	೨೨೯೭೧೦	೭೭೧೧೮	೩೩.೬
ಮಣಿಪುರ	೧೬೯	೧೬೮೪೪	೪೩	೨.೪	೪೧	೨.೩	೧೭೬೮	೬೪೬	೩೬.೫
ಒರಿಸ್ಸಾ	೬೫೭೮	೫೬೫೭೬	೧೬೯೧೦	೧೬.೮	೨೭೩೭೬	೨೭.೧	೧೦೦೮೬೨	೩೬೦೮೬	೩೫.೮
ಪಂಜಾಬ್	೧೨೬೦೫	೬೨೬೮೦	೨೮೩೭೬	೩೧.೨	೦	೦	೯೧೦೫೬	೩೧೮೩೮	೩೫.೦
ರಾಜಸ್ಥಾನ	೯೪೫೭	೭೩೦೩೦	೨೫೩೬೪	೨೧.೨	೨೧೪೧೦	೧೭.೯	೧೧೯೮೦೪	೪೨೪೦೨	೩೫.೪
ಸಿಕ್ಕಿಂ	೧೭೦	೬೩೯	೫೭	೫.೭	೩೦೯	೩೦.೭	೧೦೦೫	೩೮೪	೩೮.೨
ತಮಿಳು ನಾಡು	೧೩೦೩೧	೯೧೯೫೮	೨೩೬೫೩	೨೦.೩	೮೭೭	೦.೮	೧೧೬೪೮೮	೩೯೩೬೪	೩೩.೮
ತ್ರಿಪುರ	೫೪೦	೩೯೧೪	೧೫೦೯	೨೬.೩	೩೧೦	೫.೪	೫೭೩೩	೧೯೮೬	೩೪.೬
ಉತ್ತರ ಪ್ರದೇಶ	೫೨೮೯೦	೫೭೮೯೮೪	೧೯೧೯೫೦	೨೪.೯	೭೨೭	೦.೧	೭೭೧೬೬೧	೨೯೯೦೨೫	೩೮.೮
ಉತ್ತರಾಖಂಡ	೭೩೩೫	೪೪೪೫೦	೧೧೦೭೭	೧೯.೩	೧೯೭೩	೩.೪	೫೭೫೦೦	೨೧೨೧೭	೩೭.೪
ಪಶ್ಚಿಮ ಬಂಗಾಳ	೩೭೧೩	೩೭೨೭೭	೧೭೧೫೮	೨೯.೨	೪೩೧೪	೭.೩	೫೮೭೪೯	೨೧೪೨೮	೩೬.೫
ಕೇಂದ್ರಾಡಳಿತ ಪ್ರದೇಶಗಳು									
ಅಂಡಮಾನ್ ನಿಕೋಬರ್	೭೫	೮೫೬	೦	೦	೦	೦	೮೫೬	೨೯೬	೩೪.೬
ಚಂಡೀಗಡ	೧೯	೧೫೩	೩೪	೧೮.೨	೦	೦	೧೮೭	೬೨	೩೩.೨
ದಾದ್ರ & ನಗರ ಹವೇಲಿ	೧೨	೭	೩	೨.೪	೧೧೫	೯೨	೧೨೫	೪೯	೩೯.೨
ದಿಯು ಅಂಡ್ ಡಾಮನ್	೧೫	೭೧	೪	೪.೧	೨೨	೨೨.೭	೯೭	೩೭	೩೮.೧
ಲಕ್ಷದ್ವೀಪ್	೧೧	೧	೦	೦	೧೦೦	೯೯	೧೦೧	೩೮	೩೭.೬
ಪುದುಚೇರಿ	೧೦೮	೭೮೪	೨೩೭	೨೩.೨	೦	೦	೧೦೨೧	೩೭೦	೩೬.೨
ಒಟ್ಟು	೨೩೯೫೪೪	೧೯೭೪೮೪೮	೫೨೬೬೧೮	೧೮.೬	೩೨೭೩೧೩	೧೧.೬	೨೮೨೮೭೭೯	೧೦೩೪೮೮೯	೩೬.೭

ಮೂಲ: ಡಬ್ಲ್ಯೂಡಬ್ಲ್ಯೂಡಬ್ಲ್ಯೂ. ಪೇಪರ್ ಪಬ್ಲಿಕೇಷನ್ಸ್.ಓರ್ಗ್

ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ ಬಿಹಾರದಲ್ಲಿ ೫೦ ಶೇಕಡಾದಷ್ಟು ಸದಸ್ಯ ಸ್ಥಾನಗಳನ್ನು ಹಾಗೂ ನಾಯಕತ್ವದ(ಅಧ್ಯಕ್ಷ) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಈ ರಾಜ್ಯದಲ್ಲಿ ಸ್ಥೂಲವಾಗಿ ೫೫ ಶೇಕಡಾ ಮಹಿಳಾ ಪ್ರಾತಿನಿಧ್ಯ ಪಂಚಾಯತ್‌ಗಳಲ್ಲಿ ಕಂಡು ಬರುತ್ತದೆ.

ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ೩೪ ಶೇಕಡಾದಷ್ಟಿದ್ದರೆ ಕರ್ನಾಟಕದಲ್ಲಿ ಮಹಿಳಾ ಪ್ರತಿನಿಧಿಗಳು ಶೇಕಡಾ ೪೩ರಷ್ಟಿದ್ದಾರೆ.

ಭಾರತ ಸರಕಾರವು ಮಹಿಳಾ ಸಬಲೀಕರಣವನ್ನು ಸಾಧಿಸಲು ಪೂರಕವಾಗಿ ರಾಜಕೀಯ ನಿಬಂಧನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದೆ. ಗ್ರಾಮೀಣ ಮಟ್ಟದಲ್ಲಿ ಮಹಿಳೆಯರ ಸಬಲೀಕರಣಕ್ಕೆ ಮಹಿಳಾ ಮೀಸಲಾತಿಯು ಬಹುದೊಡ್ಡ ಅಸ್ತ್ರವಾಗಿದೆ. ಆದರೆ ಮಹಿಳಾ ಮೀಸಲಾತಿಯೊಂದರಿಂದಲೇ ಆಯ್ಕೆ ಹೊಂದುವ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಗುಣಮಟ್ಟವನ್ನು ನಿರ್ಧರಿಸಲು ಸಾಧ್ಯವಿಲ್ಲ. ೨೪೩ ಡಿ ವಿಧಿಯ ತಿದ್ದುಪಡಿ ಮೂಲಕ ಶೇಕಡಾ ೫೦ ಮೀಸಲಾತಿಯನ್ನು ನೀಡುವ ವಿಧೇಯಕವನ್ನು ೨೦೦೯ ರಲ್ಲಿ ಲೋಕಸಭೆಯಲ್ಲಿ ಮಂಡಿಸಲಾಗಿದೆ. ಈ ಎಲ್ಲಾ ಬೆಳವಣಿಗೆಗಳ ನಡುವೆ ಈ ಕೆಳಗಿನ ಸಲಹೆಗಳು ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ಪೂರಕವೆಂದು ಭಾವಿಸಬಹುದಾಗಿದೆ.

೧. ಸಾಮರ್ಥ್ಯ ವರ್ಧನೆಗಾಗಿ ತರಬೇತಿಗಳು

೨. ಮಹಿಳಾ ಸಭೆಗಳನ್ನು ಪ್ರೋತ್ಸಾಹಿಸುವುದು

೩. ಸ್ವ-ಸಹಾಯ ಸಂಘಗಳೊಂದಿಗೆ ಸಂಪರ್ಕಗೊಳಿಸುವುದು.

ಪಂಚಾಯತ್ ರಾಜ್ ಮಹಿಳಾ ರಾಜಕೀಯ ಪ್ರವೇಶಕ್ಕೆ ಪ್ರಮುಖ ಆಧಾರವಾಗಿದ್ದರೂ ಅದು ಎಲ್ಲಾ ಹಂತದಲ್ಲೂ ಯಶಸ್ಸನ್ನು ಕಂಡಿಲ್ಲ. ಬಹಳಷ್ಟು ಅಧ್ಯಯನಗಳು ಪಂಚಾಯತ್ ರಾಜ್ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳನ್ನು ಉನ್ನತಿಗೇರಿಸುವಲ್ಲಿ ವಿಫಲವಾಗಿದೆ ಎಂದು ತಿಳಿಸಿವೆ. ಜಿ.ಎಸ್. ಮೆಹ್ತಾ (೨೦೦೨) ಪಂಚಾಯತ್ ರಾಜ್ ವ್ಯವಸ್ಥೆಯು ಮಹಿಳಾ ಪಾಲ್ಗೊಳ್ಳುವಿಕೆ ಎಂಬ ಅಧ್ಯಯನದಲ್ಲಿ ಪಂಚಾಯತ್ ವ್ಯವಸ್ಥೆಯ ಸಾಧನೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಪಂಚಾಯತ್ ಸಾಧನೆಗಳು ತೃಪ್ತಿಕರವಾಗಿಲ್ಲ ಎಂದು ತಿಳಿಸುತ್ತಾ ಭಾರತದಲ್ಲಿ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಸಬಲೀಕರಣಗೊಳಿಸುವಲ್ಲಿ ಪಂಚಾಯತ್ ರಾಜ್ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ ಎಂದಿದ್ದಾರೆ. ಸೀಮಾ ಸಲ್ಲಾಂಕರ್ (೨೦೦೦) ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆ ಗೋವಾ ರಾಜ್ಯದಲ್ಲಿ ನಡೆದ ವಿವರಣಾತ್ಮಕ ಅಧ್ಯಯನದಲ್ಲಿ ತಿಳಿಸಿದಂತೆ ಮಹಿಳೆಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಪಾಲುದಾರಿಕೆಯಿಂದ ವಂಚಿಸಲಾಗಿದೆ. ಆಡಳಿತದಲ್ಲಿ ನಿರ್ಧಾರ ತೆಗೆದುಕೊಳ್ಳುವ ವಿಷಯದಲ್ಲಿ ಮಹಿಳೆಯರು ಪಾಲ್ಗೊಳ್ಳುವಿಕೆಯಿಂದ ವಂಚಿತರಾಗಿರುವುದಕ್ಕೆ ಹಲವಾರು ಕಾರಣಗಳಿದ್ದು, ಅನಕ್ಷರತೆ, ಸಾಂಪ್ರದಾಯಿಕತೆ, ಪೂರ್ವಾಗ್ರಹ, ಆರ್ಥಿಕ ಅವಲಂಬನೆ, ಪ್ರತಿಕೂಲ ರಾಜಕೀಯ ರಚನೆ ಮುಂತಾದವುಗಳು ಮುಖ್ಯವಾಗಿವೆ.

ಉನ್ನತಿ (೨೦೦೧) ರಲ್ಲಿ ಗುಜರಾತಿನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಸ್ಥಾನಮಾನ ಎಂಬ ಅಧ್ಯಯನದಲ್ಲಿ ತೋರಿಸಿದಂತೆ ಗ್ರಾಮ ಪಂಚಾಯತ್‌ನಲ್ಲಿರುವ ೬೦ ಶೇಕಡಾ ಮಹಿಳೆಯರು ಅಕ್ಷರಸ್ಥರು, ೬ ಶೇಕಡಾ ಮಹಿಳೆಯರು ೨೧-೩೫ ವಯೋಮಾನದವರಾಗಿದ್ದು, ಅದರಲ್ಲಿ ೯೦

ಶೇಕಡಾ ವಿವಾಹಿತರಾಗಿದ್ದು ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುವವರಾಗಿದ್ದಾರೆ. ಅದರಲ್ಲಿ ಶೇಕಡಾ ೫೮ ರಷ್ಟು ಮಂದಿ ಪಂಚಾಯತ್ ರಾಜ್‌ನಲ್ಲಿ ಈ ಹಿಂದೆ ಯಾವುದೇ ಅನುಭವವನ್ನು ಪಡೆದವರಾಗಿಲ್ಲ. ಈ ಅಂಕಿ ಅಂಶಗಳು ಗುಜರಾತ್‌ನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಬದಲಾವಣೆಯ ಪ್ರಕ್ರಿಯೆಯನ್ನು ತಯಾರು ಮಾಡಿದೆ. ಈ ಎಲ್ಲಾ ಸಮಸ್ಯೆಗಳ ಕಾರಣ ಕೇವಲ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿಲ್ಲ. ಮಹಿಳೆಯರ ಕೌಟುಂಬಿಕ, ಸಾಮಾಜಿಕ ಪರಿಸ್ಥಿತಿ ಉತ್ತಮಗೊಳ್ಳಲು ಅವರ ಸ್ವ ಪ್ರಯತ್ನ, ಅವರ ಕುಟುಂಬದ ಸಹಕಾರ ಇವೆಲ್ಲವೂ ಮುಖ್ಯವಾಗುತ್ತದೆ. ಹಾಗಿದ್ದಾಗ್ಯೂ ನಿರ್ದಿಷ್ಟ ಮಾರ್ಪಾಡುಗಳನ್ನು ಪಂಚಾಯತ್ ರಾಜ್‌ನಲ್ಲಿ ಅಳವಡಿಸಿದಲ್ಲಿ ನಿರೀಕ್ಷಿತ ಯಶಸ್ಸು ಸಾಧ್ಯ.

೪.೧೪. ಪಂಚಾಯತ್ ರಾಜ್ ವ್ಯವಸ್ಥೆಯ ಮೌಲ್ಯಮಾಪನ

ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆಯಿರುವ ಹಿನ್ನೆಲೆಯಲ್ಲಿ ಮಹಿಳೆಯರನ್ನು ಅವಧಿ ಪೂರ್ಣವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಒಳಗೊಳ್ಳುವಂತೆ ಮಾಡಲು ಸರಕಾರದ ಮಟ್ಟದಲ್ಲಿ ಪ್ರಯತ್ನಗಳು ನಡೆದಿದೆ. ಸಂವಿಧಾನದ ೭೩ನೇ ತಿದ್ದುಪಡಿ ಕಾಯ್ದೆ ೧೯೯೩ ಹಾಗೂ ಸಂವಿಧಾನದ ೭೪ನೇ ತಿದ್ದುಪಡಿ ಕಾಯ್ದೆಗಳು ಮಹಿಳೆಯರಿಗೆ ಸ್ಥಾನಗಳ ಮೀಸಲಾತಿಯನ್ನು ಕಲ್ಪಿಸಿ ಅವರ ಸಬಲೀಕರಣಕ್ಕೆ ಬಲವನ್ನು ನೀಡಿವೆ. ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಟ್ಟು ನೇರ ಚುನಾವಣೆಯಿಂದ ಆಯ್ಕೆ ಪ್ರಕ್ರಿಯೆ ನಡೆಸುವ ಪದ್ಧತಿಯ ಮೂಲಕ ನಡೆಸಿದ ಪ್ರಯತ್ನವು ಸಾಂವಿಧಾನಿಕ ಬೆಂಬಲದೊಂದಿಗೆ ಅರ್ಥಪೂರ್ಣವಾಗಿ ಜಾರಿಗೊಂಡಿದೆ. ಆಡಳಿತ ವಿಕೇಂದ್ರೀಕರಣ ಹಾಗೂ ಸ್ಥಳೀಯ ಸರಕಾರದ ಪರಿಕಲ್ಪನೆಯ ಪಂಚಾಯತ್ ರಾಜ್ ನಲ್ಲಿ ಮಹಿಳೆಯರ ಪ್ರಾತಿನಿಧ್ಯ ಮೂರನೇ ಹಂತದವರೆಗಿದೆ. ಆದರೆ ಸಂಸತ್ತಿನ ಆಡಳಿತದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ ನಗಣ್ಯವಾಗಿದೆ ಎಂದೇ ಪರಿಗಣಿಸಬಹುದಾಗಿದೆ. ಭಾರತದಲ್ಲಿ ಇಲ್ಲಿಯವರೆಗೆ ಲೋಕಸಭೆಗೆ ೧೫ ಚುನಾವಣೆಗಳು ನಡೆದಿವೆ. ನವೆಂಬರ್ ೨೦೧೧ರಲ್ಲಿ ಪ್ರಪಂಚದ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಲೋಕಸಭೆಯಲ್ಲಿದ್ದ ಒಟ್ಟು ೫೪೪ ಸದಸ್ಯರಲ್ಲಿ ಕೇವಲ ೬೦ ಜನ ಮಹಿಳೆಯರಿದ್ದರು ಹಾಗೂ ರಾಜ್ಯಸಭೆಯಲ್ಲಿ ೨೪೧ ಸದಸ್ಯರ ಪೈಕಿ ಕೇವಲ ೨೬ ಮಂದಿ ಮಹಿಳೆಯರಿದ್ದರು. ರಾಜ್ಯದ ವಿಧಾನಸಭೆಯಲ್ಲಿ ಹಾಗೂ ರಾಷ್ಟ್ರದ ಸಂಸತ್ತಿನಲ್ಲಿ ಮಹಿಳಾ ಮೇಲ್‌ಸ್ತರದ ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು ಮಹಿಳಾ ಮೀಸಲಾತಿ ಮಸೂದೆಯನ್ನು ೧೯೯೬ರಲ್ಲಿ ಸಂವಿಧಾನದ ೮೧ನೇ ತಿದ್ದುಪಡಿಯನ್ವಯ ರಚಿಸಲಾಗಿದೆ. ಈ ಮಸೂದೆಯನ್ನು ೧೯೯೬, ೧೯೯೮ ಹಾಗೂ ೧೯೯೯ರಲ್ಲಿ ಮಂಡಿಸಲಾಯಿತಾದರೂ ಮಸೂದೆಯು ಅಂಗೀಕಾರವಾಗಲಿಲ್ಲ.

ಮಹಿಳಾ ರಾಜಕೀಯ ಸಬಲೀಕರಣವು ಮಹಿಳೆಯರಿಗೆ ಸಂಬಂಧಿಸಿದಂತೆ ರಾಜಕೀಯ ಸ್ವಾತಂತ್ರ್ಯ ನೀಡುವ ಮತ್ತು ಮಹಿಳೆಯರಿಗೆ ಅಧಿಕಾರ ಮತ್ತು ಸಾಮಾಜಿಕ ಮೌಲ್ಯಗಳ ಹಂಚುವಿಕೆಯ ಪ್ರಕ್ರಿಯೆಯಾಗಿದೆ. ಸಂವಿಧಾನದ ೧೪ನೇ ವಿಧಿಯು ಮಹಿಳೆಯರಿಗೆ ರಾಜಕೀಯ ಸಮಾನತೆಯ

ಅವಕಾಶವನ್ನು ಒದಗಿಸಿಕೊಟ್ಟಿದೆ. ವಿಧಿ ೧೬(೨) ರನ್ವಯ ಧರ್ಮ, ಜಾತಿ, ವರ್ಗ ಹಾಗೂ ಲಿಂಗಾಧಾರಿತ ತಾರತಮ್ಯವನ್ನು ನಿಷೇಧಿಸುತ್ತದೆ. ಸಂವಿಧಾನದ ಅಧ್ಯಾಯ ೪ ಕಲ್ಯಾಣ ರಾಜ್ಯದ ಉದ್ದೇಶವನ್ನು ಈಡೇರಿಸುವ ಬಗ್ಗೆ ಮಹಿಳೆಯರ ಸ್ಥಾನಮಾನದ ಏರಿಕೆಗೆ ಕಾರಣವಾಗಿದೆ. ಮಹಿಳೆ ಹಾಗೂ ಪುರುಷರಿಗೆ ಸಮಾನ ವೇತನ, (೩೯ಇ) ಮಹಿಳೆಯರ ಹಾಗೂ ಮಕ್ಕಳ ಆರೋಗ್ಯ ಹಾಗೂ ಸಾಮರ್ಥ್ಯ ವೃದ್ಧಿ, ಮಾತೃತ್ವ ರಜೆಯ ಅನುಕೂಲತೆ ಇತ್ಯಾದಿಗಳು ಸಂವಿಧಾನದಲ್ಲಿ ನೀಡಿರುವ ಮೂಲಭೂತ ಹಕ್ಕುಗಳಲ್ಲಿ ಸೇರಿವೆ. ಈ ಎಲ್ಲಾ ಅಂಶಗಳು ಸಮಾನತೆಯ ಆಶಯವನ್ನು ಹೊಂದಿದ್ದು, ಹೊಸ ಸಾಮಾಜಿಕ ತತ್ವಗಳ ನಿರ್ಮಾಣಕ್ಕೆ ಕಾರಣವಾಗಿವೆ. ಸಂವಿಧಾನದ ೭೩ನೇ ತಿದ್ದುಪಡಿಯ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಮೇಲೆ ಪ್ರಭಾವ ಬೀರಿದ ಹೆಗ್ಗುರುತಾಗಿದೆ. ಮಹಿಳಾ ಸಬಲೀಕರಣವನ್ನು ಸಾಧಿಸಲು ರಾಜಕೀಯದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆಯನ್ನು ಬಲಪಡಿಸಲು ಈ ಸಂಸ್ಥೆಗಳಲ್ಲಿ ೩೩ ಶೇಕಡಾದಷ್ಟು ಅವಕಾಶವನ್ನು ಮಹಿಳೆಯರಿಗೆ ಮೀಸಲಿಡಲಾಯಿತು. ಆ ಪ್ರಕಾರವಾಗಿ ಭಾರತದ ಸಂಸತ್ತು ೭೩ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯನ್ನು ೧೯೯೨ರಲ್ಲಿ ಜಾರಿಗೊಳಿಸಿತು. ಸ್ಥಳೀಯ ಸಂಸ್ಥೆಗಳ ಎಲ್ಲಾ ಹಂತಗಳಲ್ಲಿ ೩೩ ಶೇಕಡಾದಷ್ಟು ಅವಕಾಶವನ್ನು ಮಹಿಳೆಯರಿಗೆ ಮೀಸಲಿಡಲಾಯಿತು. ಮಾತ್ರವಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಗಳಲ್ಲಿ ಮೂರನೇ ಒಂದಂಶಗಳನ್ನು ಮಹಿಳೆಯರಿಗೆ ಮೀಸಲಿಡಲಾಯಿತು. ಈ ಎಲ್ಲಾ ಬೆಳವಣಿಗೆಗಳು ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅವರನ್ನು ಸಕ್ರಿಯ ಪಾಲುದಾರರನ್ನಾಗಿ ಮಾಡಲು ನೀತಿ ರೂಪಿಸುವಲ್ಲಿ ಸಹಕಾರಿಯಾದವು.

೧೯೯೩ರಲ್ಲಿ ಜಾರಿಗೆ ಬಂದ ಸಂವಿಧಾನದ ೭೩ನೇ ತಿದ್ದುಪಡಿ ಮಸೂದೆಯಿಂದ ಲಕ್ಷಾಂತರ ಮಹಿಳೆಯರು ಸ್ಥಳೀಯಾಡಳಿತದಲ್ಲಿ ಭಾಗವಹಿಸುವಂತಾಯಿತು. ಈ ದಿಸೆಯಲ್ಲಿ ಕರ್ನಾಟಕ ರಾಜ್ಯ ೧೯೯೫ ರಲ್ಲಿ ಮತ್ತು ೨೦೦೨ರಲ್ಲಿ ಸೂಕ್ತ ಬದಲಾವಣೆ ಮಾಡಿ ೪೩.೬ರಷ್ಟು ಮಹಿಳೆಯರು ಆಡಳಿತದಲ್ಲಿ ಭಾಗವಹಿಸುವಂತೆ ಹಾಗೂ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ರೋಸ್ಟರ್ ಪದ್ಧತಿ ಅಳವಡಿಸಿ ಸಾಮಾಜಿಕ ನ್ಯಾಯ ಕಾಪಾಡಿಕೊಂಡು ಬರಲು ಅನುಕೂಲ ಮಾಡಿಕೊಟ್ಟಿರುವುದರ ಪರಿಣಾಮವಾಗಿ ಇಂದು ಎಲ್ಲಾ ವರ್ಗದ ಮಹಿಳೆಯರು ಸ್ಥಳೀಯಾಡಳಿತವಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. (ಪಾಟೀಲ್.ಆರ್.ಎಲ್.ಎಂ, ೨೦೦೩)

೪.೧೫. ರಾಜಕೀಯ ಪಾಲ್ಗೊಳ್ಳುವಿಕೆ ಮತ್ತು ಮಹಿಳಾ ಅಭಿವೃದ್ಧಿ

ಎಸ್.ನಾಗೇಂದ್ರ, ಶೈಲಜಾ ನಾಗೇಂದ್ರ, (೨೦೦೬) 'ಪಂಚಾಯತ್ ರಾಜ್‌ನಲ್ಲಿ ಮಹಿಳೆಯರ ಪಾತ್ರ'ದಲ್ಲಿ ತಿಳಿಸಿದಂತೆ, ಪಂಚಾಯತ್ ರಾಜ್‌ನಲ್ಲಿ ಮಹಿಳೆಯರ ಹೆಚ್ಚಿನ ಪಾಲ್ಗೊಳ್ಳುವಿಕೆ ಕೇವಲ ಪ್ರಾತಿನಿಧಿತ್ವವನ್ನು ಉತ್ತೇಜಿಸುವುದಿಲ್ಲ ಬದಲಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಹೆಚ್ಚು ದಕ್ಷ, ಪ್ರಾಮಾಣಿಕ ಹಾಗೂ ಹೆಚ್ಚು ಜವಾಬ್ದಾರಿಯುತವಾಗಿ ಮಾಡುವಲ್ಲಿ ಮಹಿಳಾ ಪಾಲ್ಗೊಳ್ಳುವಿಕೆ ಸಹಕರಿಸುತ್ತದೆ. ಎಂ.ಸಮದ್, (೨೦೦೭) ಕೇರಳದಲ್ಲಿ ಸಂಸ್ಥೆಗಳು ಹಾಗೂ ಮಹಿಳಾ ಸಬಲೀಕರಣ ಎಂಬ ಅಧ್ಯಯನದಲ್ಲಿ ಕೇರಳದಲ್ಲಿ ಇತರ ರಾಜ್ಯಗಳಿಗಿಂತ ಹೆಚ್ಚಿನ ಮಹಿಳೆಯರು ರಾಜಕೀಯ

ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಗುರುತಿಸಿದ್ದಾರೆ. ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯ ಕ್ರಾಂತಿಕಾರಿ ಬದಲಾವಣೆ ತಂದು ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಉನ್ನತೀಕರಣಗೊಳಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಎಲ್ಲಾ ಅಧ್ಯಯನಗಳು ರಾಜಕೀಯ ಪಾಲ್ಗೊಳ್ಳುವಿಕೆ ಮಹಿಳೆಯರ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಉನ್ನತೀಕರಿಸಿದ ಬಗ್ಗೆ ಉಲ್ಲೇಖಿಸಿವೆ.

ಶಿವಣ್ಣ.ಎನ್, (೧೯೯೮) ಕರ್ನಾಟಕದಲ್ಲಿ ವಿಕೇಂದ್ರೀಕೃತ ಆಡಳಿತ ಮತ್ತು ಯೋಜನೆ ಎಂಬ ಅಧ್ಯಯನದಲ್ಲಿ ಕರ್ನಾಟಕದಲ್ಲಿ ಸ್ಥಳೀಯ ಆಡಳಿತದ ಇತಿಹಾಸವನ್ನು ತಿಳಿಸುತ್ತಾ ರಾಜ್ಯದಲ್ಲಿ ವಿಕೇಂದ್ರೀಕೃತ ಆಡಳಿತ ಹಾಗೂ ಯೋಜನೆಯು ಮುಖ್ಯವಾಹಿನಿಗೆ ಬರುತ್ತಿದೆ. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩ ರಲ್ಲಿ ಪಂಚಾಯತ್ ರಾಜ್‌ನ ಮೂರು ಹಂತದ ರಚನೆಯನ್ನು ಹೊಂದಿದ್ದು ಅದರಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್, ತಾಲೂಕು ಹಂತದಲ್ಲಿ ತಾಲೂಕು ಪಂಚಾಯತ್ ಹಾಗೂ ಗ್ರಾಮೀಣ ಮಟ್ಟದಲ್ಲಿ ಗ್ರಾಮ ಪಂಚಾಯತ್ ಕಾರ್ಯ ನಿರ್ವಹಿಸುತ್ತದೆ. ಈ ಮೂರು ಪಂಚಾಯತ್‌ಗಳು ನೇರವಾಗಿ ಚುನಾಯಿತ ಸಂಸ್ಥೆಗಳಾಗಿವೆ. ಪಂಚಾಯತ್ ವ್ಯವಸ್ಥೆಯಲ್ಲಿ ಆಯ್ಕೆಗೊಂಡ ಸುಮಾರು ೬೦ ಶೇಕಡಾ ಮಹಿಳೆಯರು ಕಿರಿಯ ವಯಸ್ಸಿನವರಾಗಿದ್ದಾರೆ. ಕಿರಿಯರಿಗೆ ರಾಜಕೀಯ ಅನುಭವ ಇಲ್ಲದಿರುವುದರಿಂದ ಆಡಳಿತಕ್ಕೆ ಸೂಕ್ತರಲ್ಲ ಎಂಬ ಅಭಿಪ್ರಾಯವಿದೆ. ಆದರೆ ಅವರ ರಾಜಕೀಯ ಪಾಲ್ಗೊಳ್ಳುವಿಕೆಯೇ ಇತ್ತೀಚಿನದ್ದು ಎಂಬ ನೆಲೆಗಟ್ಟಿನಲ್ಲಿ ಗಮನಿಸಿದಾಗ ಅಂತಹ ವಾದಗಳು ಸಮರ್ಥನೀಯವಾಗುವುದಿಲ್ಲ. ಮಹಿಳೆಯರು ರಾಜಕೀಯದಲ್ಲಿ ವಿಶೇಷ ಸಾಧನೆಯನ್ನು ಸೃಷ್ಟಿಸಬೇಕಾದರೆ ಅವರು ಈ ವ್ಯವಸ್ಥೆಯಲ್ಲಿ ಹಲವಾರು ವರ್ಷಗಳ ಕಾಲ ನಿರಂತರವಾಗಿ ತೊಡಗಿಸಿಕೊಳ್ಳಬೇಕಾಗುತ್ತದೆ. ಅವರನ್ನು ರಾಜಕೀಯ ಶಕ್ತಿಯಾಗಿ ರೂಪಿಸಬೇಕಾದರೆ ಅಗತ್ಯ ಸಾಮಾಜಿಕ ಪರಿವರ್ತನೆ ಸಾಮಾಜಿಕ ಮೌಲ್ಯ ಹಾಗೂ ಧೋರಣೆಗಳಲ್ಲಿ ಬದಲಾವಣೆಯನ್ನು ತರಬೇಕಾಗುತ್ತದೆ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಸಹಭಾಗಿತ್ವಕ್ಕೆ ಸಂಬಂಧಿಸಿದ ಅಧ್ಯಯನಗಳು ಮಹಿಳಾ ನಾಯಕತ್ವದಿಂದ ಮಹಿಳೆಯರಿಗೆ ತಮ್ಮ ಸ್ವ ಅನುಕೂಲಕ್ಕಾಗಿ ಹೋರಾಟ ಮಾಡುವ ಶಕ್ತಿಯ ಜೊತೆಗೆ ಪ್ರತಿಕೂಲ ಸಾಮಾಜಿಕ ಮಾನದಂಡಗಳ ವಿರುದ್ಧ ಹೋರಾಡುವ ಬಲ ಬರುತ್ತದೆ. ಅವರು ಗ್ರಾಮ ಸಭೆ ಹಾಗೂ ಪಂಚಾಯತ್‌ನ್ನು ಸಕ್ರಿಯಗೊಳಿಸುವ ಜೊತೆಗೆ ಪಂಚಾಯತ್ ಸಭೆಗಳಲ್ಲಿ ಜನರ ಉತ್ತಮ ಪಾಲ್ಗೊಳ್ಳುವಿಕೆಯನ್ನು ಪ್ರೇರೇಪಿಸುತ್ತಾರೆ. ಗ್ರಾಮಸ್ಥರು ಅಭಿಪ್ರಾಯ ಪಡುವಂತೆ ಮಹಿಳೆಯರು ಗ್ರಾಮದ ಸಮಸ್ಯೆಗಳ ಬಗ್ಗೆ ಹೆಚ್ಚಿನ ಸಂವೇದನಾಶೀಲತೆ ಹೊಂದಿದ್ದು ಚರ್ಚೆಗಳನ್ನು ಉತ್ತೇಜಿಸುತ್ತಾರೆ. ಅತ್ಯಲ್ಪ ಅವಧಿಯಲ್ಲೇ ಮಹಿಳೆಯರು ಶಕ್ತಿಯುತ ಹಾಗೂ ಪರಿಣಾಮಕಾರಿ ನಾಯಕರಾಗಿ ಹೊರಹೊಮ್ಮಿದ್ದು ಈ ಮಹಿಳೆಯರಲ್ಲಿರುವ ಸಂಭಾವ್ಯ ಶಕ್ತಿಯನ್ನು ಪ್ರಕಟಿಸುತ್ತದೆ. ಮಹಿಳಾ ಸಬಲೀಕರಣಕ್ಕೆ ಪೂರಕವಾಗಿ ಮಹಿಳಾ ರಾಜಕೀಯ ಸಹಭಾಗಿತ್ವದ ಪರಿಕಲ್ಪನೆಯಿದ್ದು ಉದ್ದೇಶಗಳು

ನಿಜವಾಗಿ ಸಾಕಾರವಾಗಬೇಕಾದರೆ ಮಹಿಳೆಯರ ಸ್ವಯಂ ಪ್ರಯತ್ನ ಹಾಗೂ ಸ್ವಾಯತ್ತ ಚಿಂತನೆಗಳ ಅಗತ್ಯವಿದೆ.

ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯ ವಿಶ್ಲೇಷಣೆಯಲ್ಲಿ ನಾಯಕತ್ವ ಹಾಗೂ ದುರ್ಬಲ ನಾಯಕತ್ವ ಎರಡೂ ಕಂಡು ಬರುತ್ತದೆ. ಪರಿಣಾಮಕಾರಿ ನಾಯಕತ್ವದ ಉದಾಹರಣೆಗಳಲ್ಲಿ ಗಮನಿಸುವ ಮಹಿಳೆಯರು ವೈಯಕ್ತಿಕ ಹಂತದಲ್ಲಿ ಉತ್ತಮ ಶಿಕ್ಷಣ, ಸಾಮಾಜಿಕ ಬೆಂಬಲ ಹಾಗೂ ಕೌಟುಂಬಿಕ ಬೆಂಬಲವನ್ನು ಪಡೆದವರಾಗಿದ್ದಾರೆ. ಮಹಿಳೆಯರ ದುರ್ಬಲ ನಾಯಕತ್ವಕ್ಕೆ ಕಾರಣಗಳನ್ನು ಗುರುತಿಸಬಹುದಾಗಿದ್ದು ಅವರಲ್ಲಿ ಅನಕ್ಷರತೆ, ಸಾಮಾಜಿಕ ನಿರ್ಬಂಧಗಳು, ಸಂಕೋಚ ಪ್ರವೃತ್ತಿ, ದುರ್ಬಲ ಅಭಿವ್ಯಕ್ತಿ, ಕೌಟುಂಬಿಕ ಬೆಂಬಲದ ಕೊರತೆ ಹಾಗೂ ಪಂಚಾಯತ್‌ನಲ್ಲಿ ಸಹ ಸದಸ್ಯರ ಬೆಂಬಲದ ಕೊರತೆ ಇವೆಲ್ಲವೂ ಮುಖ್ಯವಾಗಿವೆ.

೪.೧೬. ಪ್ರಾತಿನಿಧ್ಯದ ಸಿದ್ಧಾಂತಗಳು

ಹಲವಾರು ಪ್ರಾತಿನಿಧ್ಯದ ಸಿದ್ಧಾಂತಗಳಿದ್ದು ಇವು ಯಾವುವೂ ಒಂದೇ ಅಭಿಪ್ರಾಯಕ್ಕೆ ಬರುವ ಸಿದ್ಧಾಂತಗಳಲ್ಲ. ಈ ಸಿದ್ಧಾಂತಗಳು ರಾಜಕೀಯ ಹಾಗೂ ಸೈದ್ಧಾಂತಿಕ ಊಹೆಗಳ ಮೇಲೆ ಅವಲಂಬಿತವಾಗಿವೆ. ಆ ಊಹೆಗಳಾವುವೆಂದರೆ, ಮೊದಲನೆಯದು ಎಡ್ಮಂಡ್ ಬ್ರೂಕ್ ಸಾದರಪಡಿಸಿದ ಪ್ರಾತಿನಿಧ್ಯ, ಅದರಲ್ಲಿ ಪ್ರತಿನಿಧಿಗಳು ಅವರ ಕ್ಷೇತ್ರಗಳನ್ನು ತಮ್ಮದೇ ಎಂದು ಪರಿಭಾವಿಸಿಕೊಂಡು ಕೆಲಸ ಮಾಡುತ್ತಾರೆ. ಎರಡನೆಯದು, ಒಬ್ಬ ಪ್ರತಿನಿಧಿಯು ಸೂಕ್ತ ನಿರ್ದೇಶನ ಹಾಗೂ ಮಾರ್ಗದರ್ಶನ ದನ್ವಯ ಇನ್ನೊಬ್ಬರ ಪರವಾಗಿ ಕಾರ್ಯನಿರ್ವಹಿಸಲು ಯೋಜಿತನಾದವನು. ಇಲ್ಲ ಪ್ರತಿನಿಧಿಯು ಇತರರ ಅಭಿಪ್ರಾಯವನ್ನು ಇನ್ನಿತರರಿಗೆ ತಲುಪುವಂತೆ ಮಾಡುವವನಾಗಿ ಕಾರ್ಯನಿರ್ವಹಿಸುತ್ತಾನೆ. ಇಲ್ಲಿ ಪ್ರತಿನಿಧಿಯು ತನ್ನ ಸ್ವಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸುವವನಾಗಿರುವುದಿಲ್ಲ. ಮೂರನೆಯದಾಗಿ, ಪ್ರತಿನಿಧಿಯು ಒಂದು ಆಜ್ಞೆಯನ್ನು ಹೊತ್ತುಕೊಳ್ಳುವವನಾಗಿದ್ದು, ತಾನು ಚುನಾವಣೆಯಲ್ಲಿ ನೀಡಿದ ಆಶ್ವಾಸನೆಯನ್ನು ಈಡೇರಿಸುವ ಬಗ್ಗೆ ಮಾತ್ರ ಕಾಳಜಿ ಹೊಂದಿರುತ್ತಾನೆ. ಇಲ್ಲಿ ಪ್ರತಿನಿಧಿಯು ವೈಯಕ್ತಿಕವಾಗಿ ಕಾರ್ಯ ನಿರ್ವಹಿಸುವುದಾಗಿದ್ದು ಅವನ ರಾಜಕೀಯ ಪಕ್ಷದ ಪ್ರಭಾವ ಇರುವುದಿಲ್ಲ. ನಾಲ್ಕನೆಯದಾಗಿ ಪ್ರತಿನಿಧಿಯು ತಾನು ಪ್ರತಿನಿಧಿಸುವ ಗುಂಪನ್ನು ಹೋಲುವ ವನಾಗಿದ್ದು ಆ ಗುಂಪಿನಿಂದ ರೂಪಿತಗೊಂಡವನಾಗಿರುತ್ತಾನೆ. ಆ ಗುಂಪಿನಿಂದ ಬಂದವನಾಗಿದ್ದು ತನ್ನ ಮೂಲ ಗುಂಪಿನ ಕಾರ್ಯಗಳಿಗಾಗಿ ಶ್ರಮಿಸುತ್ತಾನೆ. ಸಾಮಾಜಿಕವಾಗಿ ಪ್ರತಿನಿಧಿಗಳು ಒಂದೊಂದು ಚಿಕ್ಕ ಗುಂಪುಗಳನ್ನು ಪ್ರತಿನಿಧಿಸುವವರಾಗಿದ್ದು ಅಡ್ಡ ವಿಭಾಗದ ಪ್ರತಿನಿಧಿತ್ವದ ಪರಿಕಲ್ಪನೆಯನ್ನು ಹುಟ್ಟು ಹಾಕುತ್ತದೆ.

ರಾಜಕೀಯ ವಿಜ್ಞಾನಿಯಾದ ಹನ್ನಾ ಪಿಟ್ಕಿನ್ ಅವರು ೧೯೬೦ರಲ್ಲಿ ಶಾಸ್ತ್ರೀಯ ರಾಜಕೀಯ ಪ್ರತಿನಿಧಿತ್ವದ ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಿದರು. ಆಕೆ ಜರ್ಮನ್‌ನಲ್ಲಿ ಪ್ರಾತಿನಿಧಿತ್ವವನ್ನು ಸ್ವಯಂ ತೀರ್ಮಾನ(ವೆರ್ಟೆಟೆನ್), ಹೊಣೆಗಾರಿಕೆ ಹೊಂದಿರುವ ಪ್ರತಿನಿಧಿತ್ವ(ದಾರ್ಸ್‌ಟೆಲ್ಲನ್) ಹಾಗೂ ಇವೆರಡರ ನಡುವಿನ ಕೊಂಡಿಯಾಗಿರುವ ಪ್ರಾತಿನಿಧಿತ್ವದ ಪರಿಕಲ್ಪನೆಯನ್ನು ಹುಟ್ಟು ಹಾಕಿದರು.

ಪ್ರಾತಿನಿಧಿತ್ವ ಎಂಬ ಪದವು ಸಾಮಾಜಿಕ ಹಿತದೃಷ್ಟಿಯಿಂದ ಮಹತ್ವದ್ದಾಗಿದೆ. ಮಾನ್ಸ್‌ಬ್ರಿಡ್ಜ್ ಅವರು ಪ್ರಾತಿನಿಧಿತ್ವವನ್ನು ಪೂರ್ವಭಾವಿ ಯೋಜಿತ ಪ್ರಾತಿನಿಧಿತ್ವ, ಆತ್ಮಾವಲೋಕನ ಪ್ರಾತಿನಿಧಿತ್ವ ಹಾಗೂ ಅತಿಕ್ರಮಣ ಪ್ರಾತಿನಿಧಿತ್ವ ಎಂದು ವಿಂಗಡಿಸಿದ್ದಾರೆ. ಪ್ರಾತಿನಿಧಿತ್ವದ ಸಿದ್ಧಾಂತಗಳೆಲ್ಲವೂ ಯಾವುದೇ ಒಂದು ನಿಲುವಿಗೆ ಬದ್ಧವಾಗದಿದ್ದರೂ, ನಾಯಕತ್ವ ಅಥವಾ ಪ್ರಾತಿನಿಧಿತ್ವ ಸಾರ್ವತ್ರಿಕವಾಗಿ ಸಾಮಾಜಿಕ ಗುಂಪುಗಳ ಮೂಲಕ ಹುಟ್ಟಿಕೊಂಡಾಗ ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ತಿಳಿಸುತ್ತದೆ. (ಮಾನ್ಸ್‌ಬ್ರಿಡ್ಜ್ ಜೇನ್, ೨೦೦೩)

ಮೇಲಿನ ಅಂಶಗಳು ರಾಜಕೀಯ ಪ್ರಾತಿನಿಧಿತ್ವದ ಬಗ್ಗೆ ವಿಸ್ತಾರವಾದ ಅರ್ಥವನ್ನು ನೀಡುತ್ತವೆ. ನಾಯಕತ್ವವು ಸಮಾಜದ ಒಪ್ಪಿಗೆಯಿಂದ ಬಂದಾಗ ಅದು ಅಭಿವೃದ್ಧಿಗೆ ಹೆಚ್ಚು ಕೊಡುಗೆ ನೀಡುತ್ತದೆ. ಮಹಿಳಾ ಪ್ರತಿನಿಧಿತ್ವದ ಬಗ್ಗೆ ಗಮನಿಸಿದಾಗ ಕೌಟುಂಬಿಕ ಹಾಗೂ ಸಾಮಾಜಿಕ ಸಹಕಾರದಿಂದ ಮಹಿಳೆ ರಾಜಕೀಯದಲ್ಲಿ ಬೆಳೆದರೆ ಅದು ಹೆಚ್ಚಿನ ಪ್ರಯೋಜನ ನೀಡಬಲ್ಲದೆಂದು ಇದರಿಂದ ರುಜುವಾತಾಗುತ್ತದೆ.

೪.೧೭. ಮಹಿಳಾ ಸಬಲೀಕರಣದ ಪರಿಕಲ್ಪನೆಗೆ ಮಹಾತ್ಮ ಗಾಂಧೀಜಿ ಹಾಗೂ ಡಾ. ಬಿ. ಆರ್ ಅಂಬೇಡ್ಕರ್‌ರವರ ಕೊಡುಗೆಗಳು

ಮಹಾತ್ಮ ಗಾಂಧೀಜಿ ಹಾಗೂ ಅಂಬೇಡ್ಕರ್ ರವರು ಮಹಿಳಾ ಸಂಘಟನೆ ಹಾಗೂ ಸಾಮಾಜಿಕ ಸಬಲೀಕರಣಕ್ಕೆ ಭಾರತ ದೇಶದಲ್ಲಿ ಚಾಲನೆ ನೀಡಿದವರು. ಆ ನಿಟ್ಟಿನಲ್ಲಿ ಮಹಿಳಾ ಸಾಮಾಜಿಕ ಹಾಗೂ ರಾಜಕೀಯ ಸಬಲೀಕರಣಕ್ಕೆ ಅವರು ನೀಡಿದ ಪ್ರತ್ಯಕ್ಷ ಹಾಗೂ ಪರೋಕ್ಷ ಕೊಡುಗೆಗಳನ್ನು ಇಲ್ಲಿ ವಿವರವಾಗಿ ನೀಡಲಾಗಿದೆ.

ಮಹಿಳೆಯರ ಅಭಿವೃದ್ಧಿ ಮತ್ತು ಸಬಲೀಕರಣದ ಮೂಲವಿರುವುದು ಮಹಿಳೆಯರ ಸ್ವಾಯತ್ತ ಅಥವಾ ಸ್ವತಂತ್ರ ಚಿಂತನೆಯಲ್ಲಿ. ಮಹಿಳೆಯರ ಸಾಧನೆಯನ್ನು ಗುರುತಿಸಿ, ಅವರಲ್ಲಿ ಸಂಘಟನಾ ಕೌಶಲವನ್ನು ಬೆಳೆಸಿ, ದೌರ್ಜನ್ಯಗಳನ್ನು ಮೆಟ್ಟಿ ನಿಲ್ಲುವ ಚಿಂತನೆಯನ್ನು ನೀಡಿದವರಲ್ಲಿ ಗಾಂಧೀಜಿ ಹಾಗೂ ಅಂಬೇಡ್ಕರ್ ಪ್ರಮುಖರು. ಅವರ ಪ್ರೇರಣೆಯಿಂದಾಗಿ ಮಹಿಳೆಯರು ಮನೆಯಿಂದ ಹೊರಬಂದು ಸಂಘಟನೆಗಳಲ್ಲಿ ತೊಡಗಿಸಿಕೊಂಡರು. ಈ ಕಾರಣಕ್ಕಾಗಿ ಗಾಂಧೀಜಿ ಹಾಗೂ ಅಂಬೇಡ್ಕರ್‌ರವರ ಕೊಡುಗೆಗಳು ಮಹಿಳಾ ಸಬಲೀಕರಣಕ್ಕೆ ಮೂಲ ಧಾತುಗಳೆಂಬ ನೆಲೆಯಲ್ಲಿ ಅವರ ಚಿಂತನೆಗಳನ್ನು ಈ ಭಾಗದಲ್ಲಿ ಸೇರಿಸಲಾಗಿದೆ.

೪.೧೭.೧ ಮಹಿಳಾ ಸಬಲೀಕರಣದಲ್ಲಿ ಮಹಾತ್ಮ ಗಾಂಧೀಜಿಯವರ ಚಿಂತನೆಗಳು

ಗಾಂಧೀಜಿಯವರನ್ನು ಭಾರತದ ಇತಿಹಾಸದಲ್ಲೇ ಒಬ್ಬ ದಾರ್ಶನಿಕ, ಧಾರ್ಮಿಕ ಹಾಗೂ ಪ್ರಮಾಣಿಕ ವ್ಯಕ್ತಿತ್ವವೆಂಬುದಾಗಿ ಗುರುತಿಸಲಾಗಿದೆ. ಗಾಂಧೀಜಿ ಪ್ರಚುರಪಡಿಸಿದ ಅಹಿಂಸೆ ಸಿದ್ಧಾಂತವು ನವೀನವಲ್ಲದಿದ್ದರೂ ಕ್ರಾಂತಿಕಾರಿ ಸಿದ್ಧಾಂತವೆಂಬುದಾಗಿ ಪ್ರಪಂಚದಾದ್ಯಂತ ಗೌರವಿಸಲ್ಪಟ್ಟಿದೆ. ಅಹಿಂಸೆ ತತ್ವದ ಮೂಲಕ ಗಾಂಧೀಜಿ ನಡೆಸಿದ ಸ್ವಾತಂತ್ರ್ಯ ಸಂಗ್ರಾಮವು ಮಾನವತೆಯ ಸಂದೇಶವನ್ನು ಎಲ್ಲೆಡೆ ಪಸರಿಸಿತು.

ಭಾರತದಲ್ಲಿ ಮಹಿಳಾ ಸಬಲೀಕರಣವು ೧೯೯೦ ರ ನಂತರ ಸರಕಾರದ ನೀತಿಗಳ ಮುಖ್ಯ ಅಂಶವಾಗಿದೆ. ಆರ್ಥಿಕ ಹಾಗೂ ರಾಜಕೀಯ ಸಬಲೀಕರಣಗಳನ್ನೊಳಗೊಂಡ ಅವಳಿ ಪ್ರಕ್ರಿಯೆಗಳ ಮೂಲಕ ಸರಕಾರಗಳು ಸಬಲೀಕರಣವನ್ನು ಸಾಧಿಸಲು ಪ್ರಯತ್ನಿಸಿವೆ. ಆದರೆ ಮಹಿಳಾ ಸಬಲೀಕರಣಕ್ಕೆ ಪೂರಕವಾಗಿ ಸಾಮಾಜಿಕ ಪ್ರಗತಿಯಾಗಬೇಕೆಂಬ ಚಿಂತನೆಯನ್ನು ನೀಡಿದವರು ಮಹಾತ್ಮ ಗಾಂಧೀಜಿಯವರು. ಮಹಿಳಾ ಅಭಿವೃದ್ಧಿಗಾಗಿ ಉತ್ತಮ ಸಾಮಾಜಿಕ, ಪರಿಸ್ಥಿತಿಯನ್ನು ನಿರ್ಮಾಣ ಮಾಡಬಲ್ಲಂತಹ 'ನವೋದಯ' ಎಂಬ ಪರಿಕಲ್ಪನೆ ಗಾಂಧೀಜಿಯವರದಾಗಿತ್ತು.

ಮಹಿಳಾ ವಿಮೋಚನೆಯೆಂಬ ಚಿಂತನೆಯು ಗಾಂಧೀಜಿಯವರಂತಹ ಭಾರತದ ಪ್ರಬುದ್ಧ ನಾಯಕರಿಂದ ಆರಂಭಗೊಂಡು ಹೆಚ್ಚು ಹೆಚ್ಚು ಸಂಖ್ಯೆಯ ಮಹಿಳೆಯರನ್ನು ಒಳಗೊಳ್ಳುತ್ತಾ ಮುಂದೆ ದೇಶ ವಿದೇಶಗಳ ಗಮನ ಸೆಳೆಯುವಲ್ಲಿ ಸಫಲವಾಯಿತೆಂಬುದು ಇತಿಹಾಸ. ಸುಮಾರು ೬೦ ವರ್ಷಗಳ ಹಿಂದೆಯೇ ಗಾಂಧೀಜಿಯವರು ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಅರಿತುಕೊಂಡು ಸಂಘಟಿತರಾಗಿ ಸಮಾಜದಲ್ಲಿ ಪರಿವರ್ತನೆ ತರಬೇಕೆಂದು ಪ್ರತಿಪಾದಿಸಿದ್ದರು. ಗಾಂಧೀಜಿಯವರ ಎಲ್ಲಾ ನೀತಿಗಳು ಮಹಿಳಾ ಸ್ನೇಹಿಯಾಗಿರದಿದ್ದರೂ ಕೂಡಾ ಅವರ ಸ್ವ-ಗೌರವ, ಸ್ವಯಂ ಸಾಕ್ಷಾತ್ಕಾರ ಹಾಗೂ ನಿಸ್ವಾರ್ಥ ಸೇವೆಯ ಸಂಘಟಿತ ಚಟುವಟಿಕೆಗಳು ಮಹಿಳೆಯರನ್ನು ಒಳಗೊಂಡಂತೆ ಎಲ್ಲಾ ವರ್ಗದ ಜನರಿಗೆ ನ್ಯಾಯ ಒದಗಿಸುವಲ್ಲಿ ಸಹಕರಿಸಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಕುಟುಂಬದ ಒಳಗೆ ಹಾಗೂ ಹೊರಗೆ ಮಹಿಳೆಯರ ದೌರ್ಜನ್ಯ ಅತಿಯಾಗಿ ಕಂಡುಬರುತ್ತಿತ್ತು. ಆ ಹಂತದಲ್ಲಿ ಗಾಂಧೀಜಿಯವರಿಗಿಂತ ಮೊದಲೇ ಸಾಮಾಜಿಕ ಚಿಂತನೆ ಹೊಂದಿದ್ದ ರಾಜಾರಾಮ್ ಮೋಹನ್‌ರಾಯ್ ಹಾಗೂ ಸ್ವಾಮಿ ದಯಾನಂದ ಸರಸ್ವತಿಯವರು ಸಾಮಾಜಿಕ ಪರಿವರ್ತನೆಗೆ ಪ್ರಯತ್ನಿಸಿದ್ದರು. ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಿ ಅವರನ್ನು 'ಉತ್ತಮ ಸತಿ' ಹಾಗೂ 'ಉತ್ತಮ ತಾಯಿ'ಯಾಗಿ ಮಾಡಬೇಕೆಂಬ ಚಿಂತನೆಯನ್ನು ಪಸರಿಸಿದ್ದರು. ಗಾಂಧೀಜಿಯವರು ಕಾನೂನು ಕಟ್ಟಲೆಗಳು ಹಾಗೂ ಕಟ್ಟುಪಾಡುಗಳಲ್ಲಿ ಮಹಿಳೆಯರನ್ನು ಅಬಲರನ್ನಾಗಿ ಮಾಡಿರುವುದನ್ನು ಗಮನಿಸಿ, ನಿಯಮಗಳು ಹಾಗೂ ಕಾನೂನುಗಳನ್ನು ಜಾರಿಗೊಳಿಸುವಾಗ ಮಹಿಳೆಯರ ಅಭಿಪ್ರಾಯವನ್ನು ಸೇರಿಸಿಕೊಂಡು ಪರಸ್ಪರ ಸಹಕಾರ ಮನೋಭಾವದಿಂದ ಮನ್ನಡೆಯಬೇಕೆಂದು ಕರೆಕೊಟ್ಟರು. ಮಹಿಳೆಯರನ್ನು ಪುರುಷರ ಕೈಕೆಳಗಿನ ಆಳುಗಳಂತೆ ಪರಿಗಣಿಸುವುದನ್ನು ಗಾಂಧೀಜಿಯವರು ವಿರೋಧಿಸಿದರು. ಕುಟುಂಬ ವ್ಯವಸ್ಥೆಯಲ್ಲಿ ಪತ್ನಿಗೆ ಗೌರವ ಹಾಗೂ ಅವಕಾಶಗಳನ್ನು ನೀಡಬೇಕು ಅಶಿಕ್ಷಿತ ಮಹಿಳೆಯರಿಗೆ ಅವರ ಪತಿ ಶಿಕ್ಷಣದ ಅವಕಾಶವನ್ನು ಒದಗಿಸಿ ಕೊಡಬೇಕೆಂದು ತಿಳಿಸಿದರು. (ಭಾರತಿ ಥಾಕೂರ್, ೨೦೦೬)

ಗಾಂಧೀಜಿಯವರು ಮಹಿಳೆಯರನ್ನು 'ಸುಧಾರಣೆಯ ಅಂಶ'ಗಳಾಗಿ ಪರಿಗಣಿಸಲಿಲ್ಲ. ಬದಲಾಗಿ ಮಹಿಳೆಯರನ್ನು 'ಸ್ವಯಂ ಜಾಗೃತಿ ಘಟಕ'ಗಳಾಗಿ ತಿಳಿದುಕೊಂಡಿದ್ದರು. ಗಾಂಧೀಜಿಯವರು ಮಹಿಳೆಯರ ಚಿಂತನೆಗಳನ್ನು ಬದಲಾಯಿಸಿ ಮಾನಸಿಕ ಸ್ಥೈರ್ಯವನ್ನು ತುಂಬಲು ಪ್ರಯತ್ನಿಸಿದರು. ಅವರನ್ನು ಸಮೂಹದೊಂದಿಗೆ ಸೇರಿಸಿಕೊಂಡು ಸಮಾಜದಲ್ಲಿ ಪರಿವರ್ತನೆ ತರಲು ಪ್ರಯತ್ನ

ಮಾಡಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವಂತೆ ಮಹಿಳೆಯರಿಗೆ ಕರೆನೀಡಿದ್ದ ಗಾಂಧೀಜಿ ಮಹಿಳೆಯರಿಗೆ ಸಂಘಟನಾ ಸಾಮರ್ಥ್ಯವನ್ನು ಬೆಳೆಸಲು ಅವಕಾಶ ನೀಡಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ವಿಶೇಷ ಕೊಡುಗೆಯನ್ನು ಗಾಂಧೀಜಿ ಗುರುತಿಸಿಕೊಂಡರು. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಎಲ್ಲಾ ಚಳುವಳಿಗಳಲ್ಲಿ ಅಂದರೆ ಅಸಹಕಾರ ಚಳುವಳಿ, ನಾಗರಿಕ ಅವಿಧೇಯತೆಯ ಚಳವಳಿ ಹಾಗೂ ಕ್ವಿಟ್ ಇಂಡಿಯಾ ಚಳುವಳಿಗಳೆಲ್ಲದರಲ್ಲಿಯೂ ಮಹಿಳೆಯರ ಸಹಕಾರ ಕೋರಿದರು. ಶಿಕ್ಷಿತ ಮಹಿಳೆಯರು ಗಾಂಧೀಜಿಯವರ ಆಶ್ರಮವಾಸಿಗಳಾಗಿ ಗಾಂಧಿ ತತ್ವವನ್ನು ಪ್ರಚಾರ ಮಾಡುವ, ಖಾದಿಯನ್ನು ಬೆಂಬಲಿಸುವ ಹಾಗೂ ಇತರ ಪೂರಕ ಕಾರ್ಯಗಳಲ್ಲಿ ಗಾಂಧೀಜಿಗೆ ಸಂಪೂರ್ಣ ಸಹಕಾರ ನೀಡಿದರು.

ಗಾಂಧೀಜಿಯವರು ಮಹಿಳೆ ಹಾಗೂ ಪುರುಷರು ಸಮಾನ ಶಕ್ತಿ ಹೊಂದಿರುವವರು ಎಂಬ ಚಿಂತನೆಯನ್ನು ಪ್ರಚಾರಗೊಳಿಸಿದರು. ೧೯೨೧ರಲ್ಲಿ ಮಹಿಳೆಯರಿಗೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಬೆಂಬಲ ನೀಡಿದರು. ದಂಡೀಯಾತ್ರೆ ಹಾಗೂ ಸತ್ಯಾಗ್ರಹಗಳಲ್ಲಿ ಮಹಿಳೆಯರು ಭಾಗವಹಿಸಿ ಯಶಸ್ವಿಗೊಳಿಸಿದರು. ಮುಂದೆ ಸ್ವಾತಂತ್ರ್ಯ ಸಂಗ್ರಾಮದ ಹಲವಾರು ಚಳುವಳಿಗಳಲ್ಲಿ ಮಹಿಳೆಯರು ಪ್ರಧಾನ ಪಾತ್ರ ವಹಿಸಿದರು. (ಗಂಗ್ರೆಡೆ.ಕೆ.ಡಿ, ೨೦೦೦). ಮಹಿಳೆಯರಲ್ಲಿರುವ ಅಂತರ್ಗತ ಶಕ್ತಿ ಸಾಮರ್ಥ್ಯಗಳ ಬಗ್ಗೆ ಗಾಂಧೀಜಿ ಅತೀವ ವಿಶ್ವಾಸ ಹೊಂದಿದ್ದರು. ದೇವರು ಮಹಿಳೆಗೆ ಪ್ರೀತಿ, ದಯೆ, ಕ್ಷಮಾಗುಣ ಹಾಗೂ ತ್ಯಾಗದಂತಹ ಮಹಾನ್ ಗುಣಗಳನ್ನು ಕೊಟ್ಟಿದ್ದಾನೆ. ಆ ಕಾರಣದಿಂದಾಗಿ ಮಹಿಳೆ ಪುರುಷನಿಗಿಂತ ಉತ್ತಮವಾಗಿ ಸಾಧನೆ ಮಾಡಬಲ್ಲಳು. ಅಂತಹ ಮಹಿಳೆಯ ಸಾಮರ್ಥ್ಯವನ್ನು ಸರಿಯಾಗಿ ಬಳಸದಿದ್ದಲ್ಲಿ ಸಮಾಜದ ಅಭಿವೃದ್ಧಿ ಅಸಾಧ್ಯ ಎಂದು ಗಾಂಧೀಜಿ ಭಾವಿಸಿದ್ದರು. ಮಹಿಳೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗುರುತರವಾದ ಜವಾಬ್ದಾರಿಯನ್ನು ವಹಿಸಿಕೊಂಡು ನಾಯಕತ್ವ ಗುಣವನ್ನು ತೋರ್ಪಡಿಸಿದ್ದನ್ನು ಗಮನಿಸಿದ ಗಾಂಧೀಜಿಯವರು ಮಹಿಳೆಯರಿಗೆ ನಾಯಕತ್ವ ಒದಗಿಸಿಕೊಡುವ ರಾಜಕೀಯ ಪಾಲ್ಗೊಳ್ಳುವಿಕೆಗೆ ಪ್ರೇರೇಪಿಸುವ ಬಗ್ಗೆ ಚಿಂತನೆ ನಡೆಸಿದರು. ಮಹಿಳೆಯರ ಸಾಮಾಜಿಕ, ಹಾಗೂ ರಾಜಕೀಯ ಜೀವನದ ಪರಿವರ್ತನೆಗೆ ಪ್ರಯತ್ನಿಸಿದ ಗಾಂಧೀಜಿಯವರು ಕೋಮುವಾದ, ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗುಗಳ ನಿವಾರಣೆಗೆ ಮಹಿಳಾ ಸಬಲೀಕರಣವೇ ಸೂಕ್ತ ಪರಿಹಾರವೆಂಬುದಾಗಿ ಗುರುತಿಸಿದರು. (ಜಾಲಿ, ಸುರ್ಜಿತ್ ಕೌರ್, ೨೦೦೬)

ಸಾಮಾಜಿಕ ಪರಿವರ್ತನೆ ಹಾಗೂ ಮಹಿಳಾ ಅಭಿವೃದ್ಧಿಯನ್ನು ಸಾಧಿಸಲು ಗಾಂಧೀಜಿವರು 'ಕಾಂಗ್ರೆಸ್ ಸಂಘಟನೆ'ಯನ್ನು ವೇದಿಕೆಯಾಗಿ ಬಳಸಿಕೊಂಡರು. ಎಲ್ಲಿಯವರೆಗೆ ನಾವು ಸಾಂಪ್ರದಾಯಿಕ ಕಟ್ಟುಪಾಡುಗಳಿಂದ ಹೊರಬರುವುದಿಲ್ಲವೋ ಅಲ್ಲಿಯವರೆಗೆ ಸಮಾಜದಲ್ಲಿ ಬದಲಾವಣೆ ಅಸಾಧ್ಯ ಎಂಬುದಾಗಿ ಹೇಳಿದರು. ಬಾಲ್ಯವಿವಾಹ, ಸತಿ ಪದ್ಧತಿ, ವಿಧವಾ ವಿವಾಹ ನಿಷೇಧದಂತಹ ಪದ್ಧತಿಗಳನ್ನು ಗಾಂಧೀಜಿ ಖಂಡಿಸಿದರು. ನಾನು ಒಬ್ಬ ಸಾಂಪ್ರದಾಯಿಕ ಹಿಂದೂ ಎಂದು ಹೇಳಿಕೊಂಡ ಗಾಂಧೀಜಿ ಮಹಿಳೆಯರಿಗೆ ಸಮಾಜ ಹಕ್ಕು ಹಾಗೂ ಗೌರವವನ್ನು ನೀಡಬೇಕೆಂದು ಪ್ರತಿಪಾದಿಸಿದರು. ಸಮಾಜದ ಅನಿಷ್ಟ ಪದ್ಧತಿಗಳನ್ನು ಹೊಡೆದೋಡಿಸಲು ಮಹಿಳೆಯರು

ಸಂಘಟನಾತ್ಮಕ ಪ್ರಯತ್ನಗಳನ್ನು ಮಾಡುವಂತೆ ಕರೆಕೊಟ್ಟರು. 'ಪರ್ದಾ ಪದ್ಧತಿ' ಯು ಮಹಿಳೆಯರನ್ನು ಬಂಧನದಲ್ಲಿಟ್ಟಂತೆ ಮಾಡುತ್ತದೆ ಎಂದು ಆ ಪದ್ಧತಿಯನ್ನು ಬಹಿರಂಗವಾಗಿ ಪ್ರಶ್ನಿಸಿದರು.

ಶಿಕ್ಷಣ ಮಹಿಳೆಯರ ಹಕ್ಕು ಎಂಬುದಾಗಿ ಪ್ರತಿಪಾದಿಸಿದ ಗಾಂಧೀಜಿಯವರು ಮಹಿಳೆಗೆ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳಲು ಶಿಕ್ಷಣ ಪೂರಕವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದರು. ಮಹಿಳಾ ದೌರ್ಜನ್ಯವನ್ನು ತಡೆದು ಮಹಿಳಾ ವಿಮೋಚನೆ ಹಾಗೂ ಅಭಿವೃದ್ಧಿಗೆ ಶಿಕ್ಷಣವೇ ಆಶಾಕಿರಣ ಎಂದು ತಿಳಿಸಿದರು. ಮಹಿಳಾ ಸಬಲೀಕರಣದ ಜವಾಬ್ದಾರಿಯನ್ನು ಕೇವಲ ಮಹಿಳೆಗೆ ಹೊಂದಲು ಸಾಧ್ಯವಿಲ್ಲ. ಸಬಲೀಕರಣದ ಪ್ರಕ್ರಿಯೆಯ ಯಶಸ್ಸು ಪುರುಷ ಹಾಗೂ ಮಹಿಳೆಯರೆಲ್ಲರ ತೊಡಗಿಸಿಕೊಳ್ಳುವಿಕೆ, ಪ್ರಾಮಾಣಿಕತೆ, ಶ್ರದ್ಧೆ ಹಾಗೂ ಸಾಮರ್ಥ್ಯಗಳ ಮೇಲೆ ನಿರ್ಧರಿತವಾಗಿದೆ. ಮಹಿಳೆಯರು ಸ್ವತಂತ್ರ ನಿರ್ಣಯಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯಗಳಿಸುವುದು ಮಹಿಳಾ ಸಬಲೀಕರಣದ ಮೂಲಾಂಶಗಳಲ್ಲಿ ಒಂದಾಗಿದೆ. (ಗಂಗ್ರೆಡೆ ಕೆ.ಡಿ, ೨೦೦೦)

ಗಾಂಧೀಜಿ ತಿಳಿದುಕೊಂಡಂತೆ ಸಮಾಜದ ಸಮಸ್ಯೆಗಳನ್ನು ಪರಿಹರಿಸಲು ಸತ್ಯಾಗ್ರಹ ಸರಿಯಾದ ಮಾರ್ಗವಾಗಿದೆ. ಸಂಘಟನೆಯ ಮೂಲಕ ಎಲ್ಲ ಪರಿವರ್ತನೆಗಳೂ ಸಾಧ್ಯ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಭಾರತದಲ್ಲಿ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ದಾರಿಯನ್ನು ತೆರೆದುಕೊಟ್ಟಿತು. ಹಲವಾರು ಸತ್ಯಾಗ್ರಹಗಳಲ್ಲಿ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಮಹಿಳೆಯರು ತೋರಿದ ಸಾಧನೆ ಅದರಲ್ಲಿರುವ ಸಂಘಟನಾ ಸಾಮರ್ಥ್ಯ ಹಾಗೂ ನಾಯಕತ್ವ ಗುಣವನ್ನು ಮುನ್ನಡೆಗೆ ತಂದವು. ಮುಂದೆ ಭಾರತ ಸಂವಿಧಾನದ ವಿಧಿ ೧೫ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಹಕ್ಕನ್ನು ಬಲಪಡಿಸಿತು. ಗಾಂಧೀಜಿಯವರು ಮಹಿಳೆಯರ ವಿಷಯಗಳನ್ನು ರಾಷ್ಟ್ರೀಯ ಚಳುವಳಿಗೆ ಜೋಡಿಸುವ ಮೂಲಕ ಮಹಿಳೆಯರ ಸ್ಥಾನಮಾನವನ್ನು ಮೇಲೆಕ್ಕೆತ್ತಿರುವುದು ಸ್ಪಷ್ಟವಾಗಿದೆ. ಮಹಿಳೆಯರು ಸೀಮಾತೀತವಾಗಿ ಕೆಲಸ ಮಾಡುವ, ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಸೇರಿಕೊಂಡು ಪ್ರಗತಿ ಕಾಣುವ ಪ್ರಯತ್ನಕ್ಕೆ ಗಾಂಧೀಜಿಯವರ ಚಿಂತನೆಗಳು ದಾರಿದೀಪವಾಗಿವೆ. ಗಾಂಧೀಜಿಯವರ ಮಹಿಳಾ ವಿಮೋಚನೆ ಹಾಗೂ ಮಹಿಳಾ ಸಾಮರ್ಥ್ಯದ ಮೇಲಿನ ವಿಶ್ವಾಸದಂತಹ ಚಿಂತನೆಗಳಿಂದಾಗಿ ಮಹಿಳೆಯರು ಹಕ್ಕು ಮತ್ತು ಸಮಾನತೆಗಾಗಿ ಹೋರಾಟ ನಡೆಸುವ ಹಂತದವರೆಗೆ ಮುಂದುವರೆಯಲು ಸಾಧ್ಯವಾಗಿದೆ. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ೧೯೩೧ರಲ್ಲಿ ತೆಗೆದುಕೊಂಡ ಮೂಲಭೂತ ಹಕ್ಕು ನಿರ್ಣಯವು ಮಹಿಳೆಗೆ ಸಮಾನ ಹಕ್ಕನ್ನು ನೀಡಲು ಮಾಡಿದ ಪ್ರಯತ್ನವಾಗಿದೆ. ಪುರುಷ ಹಾಗೂ ಮಹಿಳೆಯರ ಮಧ್ಯೆ ಅಸಮಾನತೆ ಇರಬಾರದೆಂದು ವೇತನ ತಾರತಮ್ಯವನ್ನು ಗಾಂಧೀಜಿ ನಿಷೇಧಿಸಿದರು. ಆ ಮೂಲಕ ನಮ್ಮ ದೇಶದ ಮಹಿಳೆಯರಿಗೆ ಗಾಂಧೀಜಿಯವರು ಅಸಮಾನತೆಯಿಂದ ಸ್ವಾತಂತ್ರ್ಯವನ್ನು ಘೋಷಿಸಿದರು. ಅಬಲೆಯರೆಂದು ಗುರುತಿಸಿದ್ದ ಮಹಿಳೆಯರನ್ನು ಸಬಲರಾಗಿ ಮಾಡುವ ಪ್ರಯತ್ನ ಮಾಡಿದ ಗಾಂಧೀಜಿಯವರು ಎಲ್ಲಾ ವರ್ಗದ ಶೋಷಿತರನ್ನು ಎಚ್ಚರಿಸುವ ಪ್ರಯತ್ನ ಮಾಡಿದರು.

ಗಾಂಧೀಜಿಯವರು ಅವರ ೩೦ನೇ ವಯಸ್ಸಿನಿಂದ ಆಫ್ರಿಕಾದಲ್ಲಿದ್ದ ಸಮಯದಿಂದಲೂ ಮಹಿಳೆಯರಲ್ಲಿದ್ದ ಶಕ್ತಿ ಸಾಮರ್ಥ್ಯಗಳ ಬಗ್ಗೆ ಗೌರವ ಹೊಂದಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರು ಸ್ವತಂತ್ರವಾಗಿ ಸಭೆಗಳನ್ನು ನಡೆಸಲು, ಖಾದಿಯನ್ನು ಪ್ರಚಾರ ಮಾಡಲು, ಸ್ವಾತಂತ್ರ್ಯ ಸಮರದ ಸಾಹಿತ್ಯವನ್ನು ಪ್ರಸರಿಸಲು ಸಾಧ್ಯವಾಗಿದ್ದು ಗಾಂಧೀಜಿಯವರು ನೀಡಿದ ಪ್ರೋತ್ಸಾಹದಿಂದಾಗಿ, ಗಾಂಧೀಜಿಯವರೊಂದಿಗಿನ ಒಡನಾಟದಿಂದ ಮಹಿಳೆಯರಿಗೆ ಅವರ ಹಕ್ಕುಗಳನ್ನು ಅರಿತುಕೊಳ್ಳಲು ಸಹಕಾರಿಯಾಯಿತು. ಪುರುಷ ಪ್ರಧಾನ ಸಮಾಜದ ಎಲ್ಲ ಕಟ್ಟುಪಾಡುಗಳನ್ನು ನಾವು ಒಪ್ಪಿಕೊಳ್ಳಬೇಕಾಗಿಲ್ಲ ಎಂಬ ಚಿಂತನೆಯನ್ನು ಅವರು ಬೆಳೆಸಿಕೊಂಡರು.

೧೯೪೬ರಲ್ಲಿ ಗಾಂಧೀಜಿಯವರು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಬಗ್ಗೆ ಹೇಳುತ್ತಾ 'ಮಹಿಳೆಯರಿಗೆ ಸಮಾನ ಮತದಾನದ ಹಕ್ಕು ಹಾಗೂ ಸಮಾನ ಗೌರವ ಇರುವುದು ಸತ್ಯ. ಆದರೆ ಮಹಿಳೆಯರು ರಾಜಕೀಯ ವ್ಯವಸ್ಥೆಯ ಚರ್ಚೆಗಳಲ್ಲಿ ಮುಕ್ತವಾಗಿ ಭಾಗವಹಿಸುವವರೆಗೆ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆ ಪರಿಪೂರ್ಣವಾಗಲಾರದು'. ಮಹಿಳಾ ಅಭಿವೃದ್ಧಿಯಾಗಬೇಕಾದರೆ ಮಹಿಳೆಯರ ಸ್ವ ಪ್ರಯತ್ನದಿಂದಷ್ಟೇ ಸಾಧ್ಯ. ಮೊದಲು ಶಾಸ್ತ್ರಗಳಿಂದ ಬಂದಿರುವ ಸಮಾಜಕ್ಕೆ ಮಾರಕವಾದ ಕಟ್ಟುಪಾಡುಗಳನ್ನು ಎದುರಿಸಿ ನಿಲ್ಲುವ ಮನೋಸ್ಥೈರ್ಯವನ್ನು ಮಹಿಳೆಯರು ಪ್ರಕಟಿಸಬೇಕು. ಸಂಘಟನಾ ಪ್ರಯತ್ನವು ಮಹಿಳಾ ಪ್ರಗತಿಗೆ ಪೂರಕ ಸಾಧನವಾಗಿದೆ. ಗಾಂಧೀಜಿಯವರು ಕಂಡುಕೊಂಡಂತೆ ಭಾರತದ ಮಹಿಳೆ ಹೊಸದಾಗಿ ಗುರುತಿಸಿಕೊಂಡಿದ್ದಾಳೆ. ಸಮಾಜದ ಸಾಂಪ್ರದಾಯಿಕ ಪದ್ಧತಿಗಳನ್ನು ವಿರೋಧಿಸಿ ಹಕ್ಕುಗಳನ್ನು ಗಳಿಸುವಲ್ಲಿ ಮಹಿಳೆಗೆ ಇಡೀ ಸಮಾಜದ ಸಹಕಾರ ಅಗತ್ಯವಿದೆ. (ಮಧು.ಜಾ, ೨೦೦೫).

೪.೧೭.೨ ಮಹಿಳಾ ವಿಮೋಚನೆ ಹಾಗೂ ಮಹಿಳಾ ಸಬಲೀಕರಣ: ಡಾ. ಬಿ.ಆರ್. ಅಂಬೇಡ್ಕರ್ ರವರ ಚಿಂತನೆಗಳು

ಅಂಬೇಡ್ಕರ್ ಕಾಲದಲ್ಲಿ ಸಮಾಜದಲ್ಲಿ ಶ್ರೇಣೀಕೃತ ಅಸಮಾನತೆ ಅಸ್ತಿತ್ವದಲ್ಲಿತ್ತು. ಈ ಕಾರಣದಿಂದಾಗಿ ಕೆಲವರನ್ನು ಎತ್ತರದ ಸ್ಥಾನದಲ್ಲಿಯೂ ಹಾಗೂ ಇತರರನ್ನು ತುಂಬಾ ಕೆಳಮಟ್ಟದಲ್ಲಿಯೂ ನಡೆಸಿಕೊಳ್ಳುವ ಅಸಮಾನತೆಯನ್ನು ಪಾಲಿಸಲಾಗುತ್ತಿತ್ತು. ಸಾಮಾಜಿಕ ಮತ್ತು ಕಾನೂನಿನ ಅಸಮಾನತೆಗಳು ೧೯ನೇ ಶತಮಾನದ ಆರಂಭದಿಂದ ಅಸಮಾನತೆಯು ವಿರುದ್ಧದ ಚಳುವಳಿಗಳು ಹುಟ್ಟಿಕೊಳ್ಳಲು ಪ್ರೇರೇಪಿಸಿತು. ಈ ಹಂತದಲ್ಲಿ ನಡೆದ ಹೆಚ್ಚಿನ ಚಳುವಳಿಗಳು ಮೂಲತಃ ಸಮಾಜದ ಕಟ್ಟುಪಾಡುಗಳು ಮತ್ತು ಪದ್ಧತಿಗಳನ್ನು ತಿದ್ದಬೇಕೆಂಬ ಬಗ್ಗೆ ಕೇಂದ್ರೀಕೃತವಾಗಿದ್ದವು. ಆದರೆ ಬ್ರಿಟಿಷ್ ಸರಕಾರವು ಕಟ್ಟುಪಾಡುಗಳು ಹಾಗೂ ಸಾಮಾಜಿಕ ಪದ್ಧತಿಗಳ ಬಗ್ಗೆ ತನ್ನ ಹಸ್ತಕ್ಷೇಪವಿಲ್ಲವೆಂಬ ಅಭಿಪ್ರಾಯವನ್ನು ತೋರಿಸಿಕೊಂಡ ಕಾರಣದಿಂದಾಗಿ ಮಹಿಳೆಯರ ಹಕ್ಕುಗಳ ಬಗ್ಗೆ ಧ್ವನಿ ಎತ್ತಲು ಕಷ್ಟ ಸಾಧ್ಯವಾಯಿತು. ಬ್ರಿಟಿಷರು ಕೇವಲ ಪಾಶ್ಚಾತ್ಯ ಪದ್ಧತಿಗೆ ವಿರೋಧವೊಡ್ಡುವ ಪದ್ಧತಿಗಳನ್ನಷ್ಟೇ ವಿರೋಧಿಸುವ ಕಾಯ್ದೆಗಳನ್ನು ರೂಪಿಸಿದರೇ ಹೊರತು ಈ ದೇಶದಲ್ಲಿದ್ದ ಇತರ ಕೆಟ್ಟ ಪದ್ಧತಿಗಳ ನಿರ್ಮೂಲನಕ್ಕೆ ಕಾನೂನು ರೂಪಿಸುವ ಪ್ರಯತ್ನವನ್ನು ಮಾಡಿರಲಿಲ್ಲ. (ಚೈತ್ರ ಸಿನ್ಹ, ೨೦೦೭).

ಮಹಿಳೆಯರ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಕುಟುಂಬ ಹಾಗೂ ಸಮಾಜದಲ್ಲಿ ಅವರಿಗಿರುವ ಅವಕಾಶ ಹಾಗೂ ನಡೆಸಿಕೊಳ್ಳುವ ಕ್ರಮಗಳ ಬಗ್ಗೆ ಚರ್ಚೆ ಹಾಗೂ ಚಳುವಳಿಗಳು ಆ ಹಂತದಲ್ಲಿ ಹುಟ್ಟಿಕೊಂಡವು. ಸಾಂಪ್ರದಾಯಿಕ ಪದ್ಧತಿಗಳಾಗಿದ್ದ 'ಸತಿ ಪದ್ಧತಿ', 'ವಿಧವಾ ವಿವಾಹ' ಹಾಗೂ 'ಮಹಿಳಾ ಶಿಕ್ಷಣ ನಿಷೇಧ' ದಂತಹ ಅನಿಷ್ಟಗಳ ವಿರುದ್ಧ ಮಹಿಳೆಯರು ದನಿ ಎತ್ತಲಾರಂಭಿಸಿದರು. ೧೮ ಹಾಗೂ ೧೯ನೇ ಶತಮಾನದ ಆರಂಭದಲ್ಲಿ ಆದಂತಹ ಶಿಕ್ಷಣದ ಅಭಿವೃದ್ಧಿಯೂ ಹಲವಾರು ಸಾಮಾಜಿಕ ಹಾಗೂ ಧಾರ್ಮಿಕ ಚಳುವಳಿಗಳಿಗೆ ಕಾರಣವಾಯಿತು. ಸಾಮಾಜಿಕ ಚಳುವಳಿಗಾರರು ಸಮಾಜದ ದುಷ್ಟ ಪದ್ಧತಿಗಳಾದ ಸತಿಪದ್ಧತಿ, ವಿಧವೆಯನ್ನು ನಡೆಸಿಕೊಳ್ಳುವ ರೀತಿ ಹಾಗೂ ವಿಧವಾ ವಿವಾಹಕ್ಕೆ ಇದ್ದ ಅಡೆತಡೆ, ಬಾಲ್ಯವಿವಾಹ, ಮಹಿಳೆಯರಿಗೆ ಆಸ್ತಿ ಹಕ್ಕು ನೀಡದಿರುವುದು ಹಾಗೂ ಮಹಿಳೆಯರನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ಪದ್ಧತಿಗಳನ್ನು ಸಾರ್ವಜನಿಕವಾಗಿ ವಿರೋಧಿಸಲಾರಂಭಿಸಿದರು.

ರಾಜಾರಾಮ್ ಮೋಹನ್ ರಾಯ್‌ರವರು ೧೮೨೮ರಲ್ಲಿ ಸ್ಥಾಪಿಸಿದ 'ಬ್ರಹ್ಮ ಸಮಾಜ'ವು ಸಮಾಜದಲ್ಲಿದ್ದ ಲಿಂಗ ಅಸಮಾನತೆಯನ್ನು ತೊಡೆದು ಹಾಕಿ ಮಹಿಳೆಯರಿಗೆ ಹಕ್ಕುಗಳನ್ನು ಒದಗಿಸಿಕೊಡುವಲ್ಲಿ ಸಹಕಾರಿಯಾಯಿತು. ಬಾಲ್ಯ ವಿವಾಹ, ಬಹುಪತ್ನಿತ್ವವನ್ನು ವಿರೋಧಿಸುವಲ್ಲಿ ಹಾಗೂ ಮಹಿಳೆಯರಿಗೆ ಶಿಕ್ಷಣದ ಅವಕಾಶವನ್ನು ಒದಗಿಸಿಕೊಡುವಲ್ಲಿ ಬ್ರಹ್ಮ ಸಮಾಜವು ಯಶಸ್ವಿಯಾಯಿತು. ಮುಂದೆ ೧೮೬೯ರಲ್ಲಿ ಎಂ.ಜಿ.ರಾನಡೆ, ಕೆ.ಟಿ.ತೆಲಂಗ್ ಹಾಗೂ ಭಂಡಾರ್‌ಕಾರ್ ಅಸ್ತಿತ್ವಕ್ಕೆ ತಂದ 'ಪ್ರಾರ್ಥನಾ ಸಮಾಜ'ವು ಕೂಡಾ ಮಹಿಳೆಯರ ಸಮಸ್ಯೆಗಳ ಬಗ್ಗೆ ಗಮನ ನೀಡಿತು. ೧೮೭೫ರಲ್ಲಿ ದಯಾನಂದ ಸರಸ್ವತಿಯವರು ಸ್ಥಾಪಿಸಿದ 'ಆರ್ಯ ಸಮಾಜ' ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಸುಧಾರಿಸುವ ಜೊತೆಗೆ ಜಾತಿ ಪದ್ಧತಿಯಲ್ಲಿ ಸುಧಾರಣೆಯನ್ನು ತಂದಿತು. ೧೯ನೇ ಶತಮಾನದಲ್ಲಿ ಮಹಿಳೆಯರು ರಾಷ್ಟ್ರೀಯ ಸಂಗ್ರಾಮದಲ್ಲಿ ಭಾಗವಹಿಸಿದರು. ೧೯೦೫ರಲ್ಲಿ ಬಂಗಾಳದ ವಿಭಜನೆಯಲ್ಲಿ, ೧೯೨೧ರ ಅಸಹಕಾರ ಚಳುವಳಿಯಲ್ಲಿ, ೧೯೩೦ರಲ್ಲಿ ನಡೆದ ನಾಗರಿಕ ಅಸಹಕಾರ ಚಳುವಳಿಗಳಲ್ಲಿ ಅಗಾಧ ಸಂಖ್ಯೆಯ ಮಹಿಳೆಯರು ಭಾಗವಹಿಸಿದ್ದು, ಮಹಿಳೆ ಪುರುಷನಿಂದ ಹೊರತಾಗಿ ಸ್ವಂತ ನಿರ್ಧಾರ ತೆಗೆದುಕೊಳ್ಳಲು ಸಮರ್ಥಳು ಎಂಬುದನ್ನು ಪ್ರತಿಪಾದಿಸಿತು.

೧೯೦೩ ರಿಂದ ೧೯೨೬ ರವರೆಗೆ ದೇಶದಾದ್ಯಂತ ಹಲವು ಮಹಿಳಾ ಸಂಘಟನೆಗಳು ಹುಟ್ಟಿಕೊಂಡವು. ಆದರೆ ಈ ಎಲ್ಲಾ ಸಂಘಟನೆಗಳ ಮಾರ್ಗದರ್ಶಕರಂತೆ ೧೯೧೭ ರಲ್ಲಿ ಭಾರತೀಯ ಮಹಿಳಾ ಸಂಘ ಮತ್ತು ೧೯೨೬ ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನಗಳು ಮಹಿಳಾ ಚಳುವಳಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾರಂಭಿಸಿದವು. (ನೀರಾ ದೇಸಾಯಿ, ಮೈತ್ರೇಯಿ ಕೃಷ್ಣರಾಜ್, ೨೦೦೪)

ಡಾ. ಬಿ.ಆರ್. ಅಂಬೇಡ್ಕರ್‌ರವರು ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ಅದರ ರೂಢಿಗಳು, ಪದ್ಧತಿಗಳು ಹಾಗೂ ಸಾಮಾಜಿಕ ಕ್ರಮಗಳನ್ನು ವಿವರವಾಗಿ ಅಧ್ಯಯನ ನಡೆಸಿ ಇವುಗಳಿಂದಾಗಿ

ಸಮಾಜದ ಜನರ ಮೇಲಾಗುವ ಪರಿಣಾಮಗಳ ಬಗ್ಗೆ ಅಭ್ಯಸಿಸಿದರು. ಸಮಾಜದಲ್ಲಿ ದಲಿತರು ಹಾಗೂ ಅಸ್ಪೃಶ್ಯರ ಮೇಲಾಗುತ್ತಿರುವ ತಾರತಮ್ಯಕ್ಕೆ ಮೂಲ ಕಾರಣವನ್ನು ಹುಡುಕುವ ಪ್ರಯತ್ನ ಮಾಡಿದ ಅಂಬೇಡ್ಕರ್ ಈ ಅಸಮಾನತೆ ಹಾಗೂ ತುಳಿತಕ್ಕೊಳಗಾದ ವರ್ಗಗಳ ಏಳಿಗೆಗಾಗಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚಿಂತನೆ ನಡೆಸಿದರು. ಸಮಾಜದಲ್ಲಿರುವ ಲಿಂಗ ಅಸಮಾನತೆಯನ್ನು ಅರ್ಥೈಸಿಕೊಳ್ಳಲು ಅಂಬೇಡ್ಕರ್ ಸಾಂದರ್ಭಿಕ ಹಾಗೂ ಪ್ರಾಸಂಗಿಕ ಮಾದರಿಗಳನ್ನು ಬಳಸಿಕೊಂಡರು. ಮಹಿಳೆಯರಿಗೆ ಸೂಕ್ತ ಸ್ಥಾನಮಾನಗಳು ದೊರೆಯದಿರಲು ಕಾರಣಗಳೇನು ಎಂಬ ಬಗ್ಗೆ ಇತಿಹಾಸವನ್ನು ಅಧ್ಯಯನ ಮಾಡಿ ನಂತರ ಮಹಿಳಾ ವಿಮೋಚನೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಮಾಜಿಕ ಹಾಗೂ ರಾಜಕೀಯ ಪರಿಹಾರಗಳನ್ನು ಸೂಚಿಸಿದರು. ಅವರು ಮಹಿಳಾ ಸಮಸ್ಯೆಗಳ ಸೂಕ್ತ ಅರಿವಿಗಾಗಿ ಹಿಂದೂ ಪುರಾಣ ಗ್ರಂಥಗಳು, ಸ್ಮೃತಿಗಳು ಹಾಗೂ ಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ಸಮಾಜದಲ್ಲಿ ನಾಲ್ಕು ವರ್ಗಗಳಿದ್ದು ಮಹಿಳೆಯರನ್ನು ಶೂದ್ರರಂತೆ ಪರಿಗಣಿಸಿರುವುದನ್ನು ಅಂಬೇಡ್ಕರ್ ಗುರುತಿಸಿದರು. ಅದರ ಮೂಲವನ್ನು ಹುಡುಕಿದಾಗ ಕ್ರಿಸ್ತ ಪೂರ್ವ ೨೦೦ ರಲ್ಲಿ ರಚಿಸಲಾಗಿರುವ 'ಮನುಸ್ಮೃತಿ' ಯ ವಿಚಾರಗಳನ್ನು ಹಿಂದೂ ಧರ್ಮದಲ್ಲಿ ಅಳವಡಿಸಿಕೊಳ್ಳಲಾಗಿದ್ದು, 'ಮನುಸ್ಮೃತಿ' ಯಲ್ಲಿ ಮಹಿಳೆಯರನ್ನು ಪುರುಷರೊಂದಿಗೆ ಸಮಾನವಾಗಿ ಪರಿಗಣಿಸಲಾಗಿರಲಿಲ್ಲ. ಲಿಂಗ ಅಸಮಾನತೆಯ ತತ್ವವನ್ನು ಒಪ್ಪಿಕೊಳ್ಳದ ಅಂಬೇಡ್ಕರ್ ತಾರತಮ್ಯದ ಪದ್ಧತಿಗಳನ್ನು ಬಹಿರಂಗವಾಗಿ ವಿರೋಧಿಸಿದರು. ಮನುಸ್ಮೃತಿಯಲ್ಲಿದ್ದ ಅಮಾನವೀಯತೆ, ಅಸಮಾನತೆ ಹಾಗೂ ವಿವೇಚನಾ ರಹಿತತೆಯನ್ನು ಖಂಡಿಸಿದ ಅಂಬೇಡ್ಕರ್ ವ್ಯಕ್ತಿಗಳ ಮಧ್ಯೆ ಸಮಾನತೆಯನ್ನು ತರದಿದ್ದಲ್ಲಿ ಧರ್ಮವು ಶ್ರೇಷ್ಠವಾಗಲಾರದು ಎಂದು ಪ್ರತಿಪಾದಿಸಿದರು. ಪುರುಷರು ಪ್ರಜಾಪತಿಯ ಮಕ್ಕಳೇ ಆಗಿದ್ದರೂ ಅವರು ಪ್ರಜಾಪತ್ನಿಯ ದೇಹದಿಂದ ಹೊರಬಂದವರಲ್ಲವೇ ಎಂದು ಪ್ರಶ್ನಿಸಿದರು. ಪುರುಷರನ್ನು ಸಾಮರ್ಥ್ಯ ಹಾಗೂ ಗುಣಲಕ್ಷಣಗಳ ಆಧಾರದಲ್ಲಿ ಪ್ರತ್ಯೇಕಿಸಿದರೂ ಅವರು ಮನುಷ್ಯರೇ ಆಗಿರುತ್ತಾರೆ. ಆದ್ದರಿಂದ ಪುರುಷ ಹಾಗೂ ಮಹಿಳೆಯರನ್ನು ಸಮಾನರು ಎಂದೇ ಪರಿಗಣಿಸಬೇಕಾಗುತ್ತದೆ.

ಅಂಬೇಡ್ಕರ್‌ರವರು ಹಿಂದೂ ಧರ್ಮದಲ್ಲಿದ್ದ ಶ್ರೇಣೀಕೃತ ಅಸಮಾನತೆಯನ್ನು ಕಟುವಾಗಿ ವಿರೋಧಿಸಿ ಮಹಿಳೆಯನ್ನು ತಾರತಮ್ಯದ ದೃಷ್ಟಿಕೋನದಿಂದ ನೋಡುವುದು ಸರಿಯಲ್ಲ, ಅಸಮಾನತೆಯಿಂದ ಮಹಿಳೆಯರನ್ನು ಅಗೌರವದಿಂದ ನಡೆಸಿಕೊಳ್ಳುವವರೆಗಿನ ಚಿಂತನೆಗಳು ಸಾಮಾಜಿಕ ಪಿಡುಗುಗಳು ಎಂದು ಪ್ರತಿಪಾದಿಸಿದರು. ಮನುಸ್ಮೃತಿಯಿಂದ ರೂಪಿತಗೊಂಡ ಸಮಾಜದಲ್ಲಿರುವ ಶ್ರೇಣೀಕೃತ ಅಸಮಾನತೆಯು ಬ್ರಾಹ್ಮಣ ವರ್ಗದ ಪ್ರಾಬಲ್ಯವನ್ನು ಹೆಚ್ಚಿಸುತ್ತದೆ. ಇಂದು ಹಲವು ವರ್ಗಗಳ ಸೃಷ್ಟಿಗೆ ಹಾಗೂ ವರ್ಣಭೇದಗಳಿಗೆ ದಾರಿಯಾಗುತ್ತದೆ ಎಂದು ಹೇಳುವ ಅಂಬೇಡ್ಕರ್ ವೇದಗಳ ನಂತರದ ಕಾಲದಲ್ಲಿ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನದ ಕುಸಿತಕ್ಕೆ ಮನುವೇ ನೇರ ಕಾರಣ ಎಂದು ಅಭಿಪ್ರಾಯಪಟ್ಟರು. ಮನುವನ್ನು ಟೀಕಿಸುತ್ತಾ ಅಂಬೇಡ್ಕರ್ 'ಮನುವಿನ ದೃಷ್ಟಿಯಲ್ಲಿ ಹೆಣ್ಣು ಯಾವುದೇ ಮೌಲ್ಯವಿರದ ಒಂದು ವಸ್ತುವಿನಂತೆ ಭಾರತದಲ್ಲಿ

ಮಹಿಳೆಯರ ಸ್ಥಾನಮಾನದ ಕುಸಿತಕ್ಕೆ ಮನುವೇ ಜವಾಬ್ದಾರ' ಎಂದು ಹೇಳಿದ್ದಾರೆ. ಮನು ಪ್ರತಿಪಾದಿಸುವ ಸಾಮಾಜಿಕ ತತ್ವಗಳು ಹಿಂದೂ ಸಮಾಜದಲ್ಲಿ ಮಹಿಳೆಯರ ಅವನತಿಗೆ ಕಾರಣವಾಗಿದೆ ಎಂದು ಅಂಬೇಡ್ಕರ್ ಮನುವಿನ ಚಿಂತನೆಗಳನ್ನು ಖಂಡಿಸಿದರು.

ಅಂಬೇಡ್ಕರ್‌ರವರು ಮುಕ್ತ ಹಾಗೂ ಉದಾರವಾದಿ ಚಿಂತನೆಯನ್ನು ಹೊಂದಿದ್ದವರಾಗಿದ್ದು ಸಮಾಜದಲ್ಲಿ ಮನುಷ್ಯರ ಪ್ರಗತಿ ಅತೀ ಮುಖ್ಯವಾದುದು, ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ಆಶಯವನ್ನು ಹೊಂದದ ಸಮಾಜದಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ ಎಂದರು. ಈ ಉದ್ದೇಶದೊಂದಿಗೆ ಅಂಬೇಡ್ಕರ್ ಹಿಂದೂ ಧರ್ಮದಲ್ಲಿ ಬಲವಾಗಿ ಬೇರೂರಿದ್ದ ಪದ್ಧತಿಗಳನ್ನು ವಿರೋಧಿಸುವ ಅಪಾಯವನ್ನು ಕೈಗೆತ್ತಿಕೊಂಡರು. ಸಮಾಜದಲ್ಲಿ ದಮನಿತ ವರ್ಗಗಳನ್ನು ಮೇಲೆತ್ತಬೇಕೆಂದು ಮತ್ತು ದೂಷಿತ ವರ್ಗಗಳಿಗೂ ಅವಕಾಶ ನೀಡಬೇಕೆಂಬ ಹಂಬಲದಿಂದಾಗಿ ವ್ಯವಸ್ಥೆ ಬದಲಾಗಬೇಕಾದರೆ ಆ ವ್ಯವಸ್ಥೆಯನ್ನು ಪ್ರಶ್ನಿಸಬೇಕೆಂಬ ಚಿಂತನೆಗಳೊಂದಿಗೆ ಹಿಂದೂ ಧರ್ಮದ ಪದ್ಧತಿ ಹಾಗೂ ಕ್ರಮಗಳನ್ನು ಖಂಡಿಸುವ ಪ್ರಯತ್ನವನ್ನು ಅಂಬೇಡ್ಕರ್ ಮಾಡಿದರು.

ಅಂಬೇಡ್ಕರ್‌ರವರು ಜಾತಿ ಪದ್ಧತಿಯು ಮಹಿಳಾ ಅಧೀನತೆ ಹಾಗೂ ದೌರ್ಜನ್ಯಕ್ಕೆ ಒಂದು ಮುಖ್ಯ ಕಾರಣವಾಗಿದೆ ಎಂದು ಹೇಳಿ ಜಾತಿ ಪದ್ಧತಿಯ ನ್ಯೂನತೆಗಳನ್ನು ಹಾಗೂ ಅದರಿಂದಾಗುವ ಸಮಸ್ಯೆಗಳನ್ನು ಚರ್ಚಿಸಲಾರಂಭಿಸಿದರು. ಜಾತಿ ಪದ್ಧತಿಯ ವಿಶ್ಲೇಷಣೆಯ ಮೂಲಕ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಸತಿ ಪದ್ಧತಿ, ಬಾಲ್ಯವಿವಾಹ ಹಾಗೂ ವಿಧವಾ ವಿವಾಹದ ನಿಷೇಧ ಇತ್ಯಾದಿಗಳ ಮೂಲ ಕಾರಣವನ್ನು ಪರಾಮರ್ಶಿಸಿದರು. ಅಂತರ್‌ಜಾತಿ ವಿವಾಹಗಳನ್ನು ನಡೆಯಲು ಈ ಪದ್ಧತಿಗಳು ಸಹಾಯಕವಾಗಿವೆ. ಈ ರೀತಿಯ ದೌರ್ಜನ್ಯಗಳು ಹಾಗೂ ಲಿಂಗ ಅಸಮಾನತೆಯ ಸಮಸ್ಯೆಗಳು ಹಿಂದೂ ಧರ್ಮ ಮಾತ್ರವಲ್ಲದೇ ಇತರ ಧರ್ಮಗಳಲ್ಲೂ ಇದೆ ಎಂಬುದನ್ನು ಅಂಬೇಡ್ಕರ್ ಗುರುತಿಸಿದರು. ಅವರು ಮುಸ್ಲಿಂ ಮಹಿಳೆಯರಲ್ಲಿದ್ದ 'ಪರ್ದಾ' ಕ್ರಮವನ್ನು ವಿರೋಧಿಸಿದರು. ಅದು ಒಂದು ಒಳ್ಳೆಯ ಸಾಮಾಜಿಕ ಜೀವನದಿಂದ ಮಹಿಳೆಯನ್ನು ಹೊರಗಿಡುತ್ತದೆ ಎಂದು ಅವರು ಅಭಿಪ್ರಾಯ ಪಟ್ಟರು. ಇಂತಹ ಪದ್ಧತಿಗಳು ಮಹಿಳೆಯರ ಶೈಕ್ಷಣಿಕ ಹಾಗೂ ಧಾರ್ಮಿಕ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ ಎಂದು ಹೇಳಿದರು

ಅಂಬೇಡ್ಕರ್ ಸೂಚಿಸಿದ ಸುಧಾರಣೆಗಳಲ್ಲಿ ಧಾರ್ಮಿಕ ಸುಧಾರಣೆ ಅತೀ ಮುಖ್ಯವಾದುದಾಗಿದೆ. ಸಾಮಾಜಿಕ ಸುಧಾರಣೆಯ ನಿಜವಾದ ಫಲಿತಾಂಶ ಒದಗಿ ಬರಬೇಕಾದರೆ ಧಾರ್ಮಿಕ ಚಿಂತನೆಗಳು ಅದಕ್ಕೆ ಪೂರಕವಾಗಿರಬೇಕು ಎಂದು ಪ್ರತಿಪಾದಿಸಿದರು. ಸಾಮಾಜಿಕ ಕ್ರಮಗಳನ್ನು ಬದಲಿಸದೆ ಮಹಿಳಾ ಸಮಾನತೆಯ ಉದ್ದೇಶವನ್ನು ಈಡೇರಿಸಿಕೊಳ್ಳುವುದು ಕಷ್ಟ ಎಂದರಿತ ಅಂಬೇಡ್ಕರ್ ಜಾತಿ ಪದ್ಧತಿಯ ಮೇಲೆ ದಾಳಿ ಮಾಡುವ ಮೂಲಕ ಕೆಳವರ್ಗದವರಿಗೆ ಮಾತ್ರವಲ್ಲ ಅಸಮಾನತೆಯಿಂದ ಬಳಲುತ್ತಿರುವ ಮಹಿಳೆಯರನ್ನು ಮೇಲೆತ್ತುವ ಪ್ರಯತ್ನ ಮಾಡಿದರು.

ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯವು ಐಕ್ಯತೆ, ಸಮಾನತೆ ಹಾಗೂ ಮಹಿಳಾ ಹಾಗೂ ಪುರುಷರಿಗೆ ಸಮಾನ ಗೌರವ ಎಂದೆಲ್ಲಾ ಅಂಶಗಳನ್ನು ಒಳಗೊಂಡಿದೆ. 'ಜಾತಿ ಮುಕ್ತ

ಸಮಾಜ' ಅಂಬೇಡ್ಕರ್ ಕನಸಾಗಿದ್ದು, ಆದರ್ಶ ಸಮಾಜವು ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವಗಳೆಂಬ ಅಂಶಗಳಿಂದ ಆಗಿರಬೇಕೆಂದರು. ಕಾನೂನಿನ ಮೂಲಕವಷ್ಟೇ ಹಿಂದೂ ಧರ್ಮದಲ್ಲಿ ಪದ್ಧತಿಗಳ ಬದಲಾವಣೆಯನ್ನು ತರಲು ಸಾಧ್ಯ ಎಂಬುದನ್ನು ಅಂಬೇಡ್ಕರ್ ಅರ್ಥೈಸಿಕೊಂಡರು. ಶಿಕ್ಷಣದ ಹಕ್ಕನ್ನು ಎಲ್ಲರಿಗೂ ನೀಡುವ ಬಗ್ಗೆ ಅಂಬೇಡ್ಕರ್ ಚಿಂತಿಸಿದರು ಹಾಗೂ ಮಹಿಳೆಯರಿಗೂ ಶಿಕ್ಷಣದ ಅವಕಾಶಗಳನ್ನು ಒದಗಿಸುವ ಬಗ್ಗೆ ಯೋಜನೆಗಳನ್ನು ರೂಪಿಸಿದರು. ಮಹಿಳೆಯರಿಗೆ ಸಮಾನ ಆರ್ಥಿಕ ಹಕ್ಕು, ಜೀವನಾಂಶ ನೀಡಿಕೆ ಹಾಗೂ ಸಮಾನ ಉದ್ಯೋಗದ ಹಕ್ಕುಗಳನ್ನು ಸರಕಾರ ನೀಡುವಂತೆ ಸಲಹೆ ನೀಡಿದರು. ಮಹಿಳಾ ಸಾಮಾರ್ಥ್ಯ ವೃದ್ಧಿಗೆ ಪ್ರಾಮುಖ್ಯತೆ ನೀಡುವಂತೆ ತಿಳಿ ಹೇಳಿ ಮಹಿಳೆಯರು ತಮ್ಮ ಮಕ್ಕಳಿಗೆ ಗೌರವಯುತ ಜೀವನ ನಡೆಸುವ ಬಗ್ಗೆ ಅವರನ್ನು ಸೂಕ್ತ ಶಿಕ್ಷಣ ಹಾಗೂ ಸಲಹೆ ನೀಡಿ ಸಿದ್ಧಗೊಳಿಸುವಂತೆ ಕೋರಿದರು. ಮಹಿಳೆಯರು ಯುದ್ಧ ಭೂಮಿಯಲ್ಲಿ ಹೋರಾಡಿದ ಇತಿಹಾಸವಿದ್ದು, ಅವರಿಗೆ ಒದಗಿ ಬರುವ ಎಲ್ಲಾ ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಳ್ಳಬೇಕೆಂದು ತಿಳಿಸಿದರು. ಮಹಿಳಾ ಅಭಿವೃದ್ಧಿ ಹಾಗೂ ಸಬಲೀಕರಣ ಸರಕಾರಗಳ ನೇರ ಹೊಣೆಗಾರಿಕೆ ಎಂದು ಅವರು ಪ್ರತಿಪಾದಿಸಿದರು.

'ಹಿಂದು ಕೋಡ್ ಬಿಲ್'ನ ಅನುಷ್ಠಾನದ ಮೂಲಕ ಮಹಿಳೆಯರಿಗೆ ಆಸ್ತಿಯನ್ನು ಹೊಂದುವ ಕಾನೂನಿನ ಹಕ್ಕನ್ನು ಒದಗಿಸಿದರು. ಕಾನೂನಿನ ದೃಷ್ಟಿಯಲ್ಲಿ ಮಹಿಳೆ ಹಾಗೂ ಪುರುಷ ಸಮಾನರು ಎಂಬುದನ್ನು ತೋರಿಸಿಕೊಟ್ಟ ಅಂಬೇಡ್ಕರ್‌ರವರ ಎಲ್ಲಾ ಚಿಂತನೆಗಳಿಗೆ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಚೌಕಟ್ಟನ್ನು ಒದಗಿಸಲು ಶ್ರಮಿಸಿದರು. ಮಹಿಳೆಯರಿಗೆ ಹಾಗೂ ಪುರುಷರಿಗೆ ಸಮಾಜದಲ್ಲಿ ಸಮಾನ ಗೌರವ ಸಿಗುವಂತಾಗಬೇಕೆಂಬ ಉದ್ದೇಶದಿಂದಾಗಿ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯ ಕಡೆಗೆ ಒಲವು ತೋರಿಸಿದರು. ಅಂಬೇಡ್ಕರ್ ಪ್ರತಿಪಾದಿಸಿದ್ದ ಮಾತೃತ್ವ ಕಾಯಿದೆ, ಗರ್ಭಪಾತ ಹಾಗೂ ಜನನ ನಿಯಂತ್ರಣ ಸಂಬಂಧಿಸಿದ ಕಾನೂನು ಹಾಗೂ ಕರಡು ನಿಯಮಗಳು ಮಹಿಳೆಯರ ಗೌರವವನ್ನು ಎತ್ತಿಹಿಡಿಯುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಮಾಲೀಕರು ಕಾರ್ಮಿಕರಿಗೆ ನೀಡಬೇಕಾದ ಹೆರಿಗೆ ರಜೆ ಇತ್ಯಾದಿ ಸೌಲಭ್ಯಗಳು ಮಹಿಳಾ ಅಭಿವೃದ್ಧಿಯಲ್ಲಿ ಪೂರಕವಾಗಿವೆ.

ಅಂಬೇಡ್ಕರ್‌ರವರು ಸಾಮಾಜಿಕ ಬದಲಾವಣೆಯನ್ನು ತರುವ ಉದ್ದೇಶದಿಂದ ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಿದರು. ಸಾಮಾಜಿಕ ಕಟ್ಟುಪಾಡುಗಳನ್ನು ಎದುರಿಸಲು ಶಿಕ್ಷಿತ ವರ್ಗಕ್ಕೆ ಸುಲಭವಾಗುತ್ತದೆ. ಕಾನೂನಿನ ಅವಕಾಶಗಳನ್ನು ಬಳಸಿಕೊಳ್ಳಬೇಕಾದರೆ ಅರಿವು ಶಿಕ್ಷಣ ಅಗತ್ಯ ಎಂಬುದಾಗಿ ಅಂಬೇಡ್ಕರ್ ಮನಗಂಡು ಶಿಕ್ಷಣ ಕ್ರಾಂತಿಗೆ ನಾಂದಿ ಹಾಡಿದರು.

೧೯೩೧ರಲ್ಲಿ ಮುಂಬೈಯ ಕಾಮತೀಪುರದ ಶೋಷಿತ ಮಹಿಳೆಯರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸಿದರು. ಮುಂದೆ ೧೯೪೨ರಲ್ಲಿ ನಾಗಾಪುರದಲ್ಲಿ ನಡೆದ ಅಖಿಲ ಭಾರತ ದಮನಿತ ಮಹಿಳೆಯರ ಸಮಾವೇಶವನ್ನು ಸಂಘಟಿಸಿ ದಲಿತ ಮಹಿಳೆಯರಿಗೆ ಹೊಸ ಚೈತನ್ಯ ನೀಡಿದರು. ನಾವು ಕೀಳು ಜಾತಿಯವರೆಂಬ ಭಾವದಿಂದ ಹೊರಬರಲು ಅವರಿಗೆ ಮನಸ್ಥೈರ್ಯ ನೀಡಿದರು.

ಅಂಬೇಡ್ಕರ್ ಮಹಿಳಾ ಸಮಾವೇಶಗಳಲ್ಲಿ ಭಾಗವಹಿಸಿ ಸಾಮಾಜಿಕ ಪರಿವರ್ತನೆಗೆ ದಾರಿತೋರಿದರು. ದಮನಿತ ವರ್ಗದ ಪ್ರತಿನಿಧಿಯಾಗಿ ಅಂಬೇಡ್ಕರ್‌ರವರು ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು.

ಮಹಿಳೆಯರು ಹಲವಾರು ಸಮಾವೇಶಗಳಲ್ಲಿ ಭಾಗವಹಿಸಲು ಸಾಧ್ಯವಾದದ್ದು ಅಂಬೇಡ್ಕರ್‌ರವರ ಸಬಲೀಕರಣ ಪ್ರಯತ್ನಗಳ ಫಲವಾಗಿ ಎಂಬುದು ಗಮನಾರ್ಹ. ೧೯೪೫ರಲ್ಲಿ ನಡೆದ ಅಖಿಲ ಭಾರತ ಪರಿಶಿಷ್ಟ ಜಾತಿ ಮಹಿಳಾ ಸಮಾವೇಶದಲ್ಲಿ ೫,೦೦೦ ಮಂದಿ ಹಾಗೂ ೧೯೪೬ರಲ್ಲಿ ಮುಂಬೈಯ ಗಣಪತಿ ನರೇ ಪಾರ್ಕ್‌ನಲ್ಲಿ ನಡೆದ ಸಭೆಯಲ್ಲಿ ೨೦,೦೦೦ ಜನರು ಭಾಗವಹಿಸಿದರು. ೧೯೫೩ರಲ್ಲಿ ನಡೆದ ಪರಿಶಿಷ್ಟ ಜಾತಿ ಮಹಿಳಾ ಮಂಡಲಗಳ ಸಭೆಯಲ್ಲಿ ಭಾಗವಹಿಸಿದ ಅಂಬೇಡ್ಕರ್ ದಮನಿತರು ತಮ್ಮ ಪ್ರಗತಿಯ ಕಡೆಗೆ ಹೆಚ್ಚು ಲಕ್ಷ್ಯ ವಹಿಸಬೇಕು. ವೃಥಾ ಟೀಕೆಗಳನ್ನು ಮಾಡುವ ಕಡೆಗೆ ಪ್ರಾಮುಖ್ಯತೆ ನೀಡಬಾರದೆಂದು ಸಲಹೆ ನೀಡಿದರು.

೧೯೨೭ರಲ್ಲಿ ನಡೆದ ಮಹಾದ್ ಸತ್ಯಾಗ್ರಹವು ಅಸ್ಪೃಶ್ಯರೆಂದು ಪರಿಗಣಿಸಲಾಗಿದ್ದವರಿಗೆ ಸಾರ್ವಜನಿಕ ಬಾವಿಯಲ್ಲಿ ನೀರು ತೆಗೆಯಲು ಅವಕಾಶ ಒದಗಿಸಿಕೊಟ್ಟಿತು. ಮಾನಸಿಕವಾಗಿ ಮಹಿಳೆಯರನ್ನು ಸದೃಢರನ್ನಾಗಿ ಮಾಡಿ ಆತ್ಮಸ್ಥೈರ್ಯವನ್ನು ತುಂಬಲು ಅಂಬೇಡ್ಕರ್ ಪ್ರಯತ್ನಿಸಿದರು. ಕೀಳರಿಮೆಯನ್ನು ದೂರ ಮಾಡಿ ಸಮಾನತೆಯನ್ನು ಬಯಸುವ ಮನಸ್ಥಿತಿಯನ್ನು ಬೆಳೆಸಲು ಪ್ರಯತ್ನಿಸಿದರು. ಮಹಿಳಾ ಅಭಿವೃದ್ಧಿ ಹಾಗೂ ಸಬಲೀಕರಣಕ್ಕೆ ಅಂಬೇಡ್ಕರ್ ಎರಡು ಹಂತಗಳಲ್ಲಿ ಪ್ರಯತ್ನಿಸಿದ್ದಾರೆ. ಮೊದಲನೆಯದಾಗಿ, ಸಂಘ-ಸಂಸ್ಥೆಗಳಲ್ಲಿ ಮಹಿಳೆಯರನ್ನು ಒಗ್ಗೂಡಿಸಿ ಅವರಿಗೆ ಸ್ವಗೌರವವನ್ನು ಕಲಿಸಿ ಹಕ್ಕುಗಳ ಬಗ್ಗೆ ಬೇಡಿಕೆಯನ್ನು ಹುಟ್ಟಿಸುವುದು ಹಾಗೂ ಎರಡನೆಯದಾಗಿ, ಕಾನೂನು ಹಾಗೂ ಆಡಳಿತಾತ್ಮಕ ಕ್ರಮಗಳ ಮೂಲಕ ಸಾಮಾಜಿಕ ಪದ್ಧತಿಗಳನ್ನು ಬದಲಾಯಿಸಿ ಆ ಮೂಲಕ ಮಹಿಳೆಯರ ಸಬಲೀಕರಣವನ್ನು ಸಾಧಿಸುವುದು.

ಅಂಬೇಡ್ಕರ್ ರವರು ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ ನ ಸದಸ್ಯರಾಗಿ ೧೯೨೭ ರಿಂದ ೧೯೩೯ರವರೆಗೆ ಹಲವಾರು ಕಾನೂನು ನಿಯಮಗಳ ಜಾರಿಗೆ ಕಾರ್ಯಕರ್ತರಾಗಿದ್ದಾರೆ. ಮಾತೃತ್ವ ರಜೆಯ ಪರಿಕಲ್ಪನೆಯು ಮಹಿಳಾ ವರ್ಗಕ್ಕೆ ಮುಖ್ಯ ಆಶಾಕಿರಣವಾಗಿ ಕಂಡುಬರುತ್ತದೆ. ಅಂಬೇಡ್ಕರ್ ಒಬ್ಬ ಸಾಮಾಜಿಕ ಕಾರ್ಯಕರ್ತರಂತೆ ಎಲ್ಲಾ ದಮನಿತ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದಂತೆ ಅನ್ಯಾಯ, ಅಸಮಾನತೆ ಹಾಗೂ ಅಮಾನವೀಯತೆಯನ್ನು ತೊಡೆದು ಹಾಕುವಲ್ಲಿ ಅಂಬೇಡ್ಕರ್ ಚಿಂತನೆಗಳು ಬಹಳಷ್ಟು ಗಟ್ಟಿಯಾದವುಗಳು. ಅವರ ಪ್ರಕಾರ ಹಿಂದೂ ಸಮಾಜದಲ್ಲಿನ ಜಾತಿ ಪದ್ಧತಿಯನ್ನು ಸಂಪೂರ್ಣ ನಿರ್ಮೂಲನೆಗೊಳಿಸದೆ ಮಹಿಳೆಯರ ಎಲ್ಲಾ ಹಕ್ಕುಗಳನ್ನು ಒದಗಿಸಿಕೊಡುವುದು ಕಷ್ಟಸಾಧ್ಯ. ನಿರಂತರ ಚಳುವಳಿಯಿಂದಷ್ಟೆ ಸಾಮಾಜಿಕ ಪರಿವರ್ತನೆ ಹಾಗೂ 'ಜಾತಿ ಮುಕ್ತ' ಸಮಾಜದ ನಿರ್ಮಾಣ ಸಾಧ್ಯ. ಸಾಮಾಜಿಕ ಜಾಗೃತಿ ಹಾಗೂ ಸಾಮಾಜಿಕ ಜವಾಬ್ದಾರಿಯಂತಹ ಅಂಶಗಳೊಂದಿಗಿನ ಮಹಿಳಾ

ಸಬಲೀಕರಣದ ಪರಿಕಲ್ಪನೆ ಹೆಚ್ಚು ಸೂಕ್ತವಾದದ್ದು. ಶಿಕ್ಷಣದ ಮೂಲಕ ಸಾಮಾಜಿಕ ಸುಧಾರಣೆಯ ಉದ್ದೇಶವನ್ನು ಈಡೇರಿಸಿಕೊಳ್ಳಬಹುದಾಗಿದೆ.

ಮಹಿಳೆಯರ ಅಭಿವೃದ್ಧಿಯಲ್ಲಿ ಸಾಮಾಜಿಕ ಅಭಿವೃದ್ಧಿಯನ್ನು ಶಿಕ್ಷಣ, ಸಂಘಟನೆ ಹಾಗೂ ಚಳುವಳಿ ಮೂಲಕ ಪಡೆದುಕೊಳ್ಳಬೇಕು. ರಾಜಕೀಯ ಪ್ರಗತಿಯನ್ನು ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಮೂಲಕ ಗಳಿಸಿಕೊಂಡಲ್ಲಿ ಮಹಿಳಾ ಸಬಲೀಕರಣ ಸಾಧ್ಯ. ೧೯೧೮ ರಲ್ಲಿ ಅಂಬೇಡ್ಕರ್ ಕೆಳವರ್ಗಗಳಿಗೆ ರಾಜಕೀಯದಲ್ಲಿ ಮೀಸಲಾತಿಯನ್ನು ನೀಡುವ ಬಗ್ಗೆ ಧ್ವನಿಯೆತ್ತಿದ್ದರು. ೧೯೪೯ ರಲ್ಲಿ ಕಾನ್ಸ್ಟಿಟ್ಯೂಂಟ್ ಅಸೆಂಬ್ಲಿಯಲ್ಲಿ ಮಾತನಾಡಿದ ಅಂಬೇಡ್ಕರ್ 'ಸಾಮಾಜಿಕ ಪ್ರಜಾಪ್ರಭುತ್ವ ಇಲ್ಲದಿರುವಲ್ಲಿ ರಾಜಕೀಯ ಪ್ರಜಾಪ್ರಭುತ್ವಕ್ಕೆ ಯಾವುದೇ ಅರ್ಥವಿಲ್ಲ' ಎಂದಿದ್ದರು.

ಮಹಿಳೆಯರಿಗೆ ಸಂಬಂಧಿಸಿದಂತೆ ಸಂವಿಧಾನದ ಅನುಚ್ಛೇದಗಳು;

ಸ್ವತಂತ್ರ ಭಾರತದ ನಂತರ ರಚನೆಯಾದ ಸಂವಿಧಾನವು ಲಿಂಗತಾರತಮ್ಯ ಮಾಡದೆ ಸ್ತ್ರೀಯರಿಗೂ ಕೂಡ ಪುರುಷರಿಗೆ ಸಮಾನವಾದ ವೈಯಕ್ತಿಕ ಸ್ವಾತಂತ್ರ್ಯ ಮೂಲಭೂತ ಹಕ್ಕುಗಳು, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ, ವೈವಾಹಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಸ್ವಾತಂತ್ರ್ಯ ಹೀಗೆ ಎಲ್ಲಾ ಬಗೆಯ ಸ್ವಾತಂತ್ರ್ಯವನ್ನು ನೀಡಿದೆ ಮಾತ್ರವಲ್ಲದೇ ಸಮಾನತೆ ಮತ್ತು ಸಮಾನಾವಕಾಶಗಳ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು ಮತ್ತು ಸಮಸ್ಯೆ ಸಂಕಷ್ಟಗಳಿಗೆ ಸಂವಿಧಾನಿಕ ಪರಿಹಾರಗಳನ್ನು ಕಂಡುಕೊಳ್ಳುವ ಮಹತ್ವದ ಹಕ್ಕುಗಳನ್ನು ನೀಡಿದೆ.

ಸಂವಿಧಾನದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಅನುಚ್ಛೇದಗಳೆಂದರೆ,

೧. ಸಮಾನತೆ ಹಕ್ಕು (೧೪, ೧೫, ೧೬ ನೇ ವಿಧಿ).

೨. ೨೩ ನೇ ವಿಧಿಯಾನುಸಾರ ಶೋಷಣೆಯ ವಿರುದ್ಧ ಹಕ್ಕು.

೩. ೩೯ (ಎ) (ಡಿ) (ಇ) ಹಾಗೂ ೪೨ ನೇ ವಿಧಿಯಾನುಸಾರ ರಾಜ್ಯ ನಿರ್ದೇಶನ ತತ್ವಗಳು.

೪. ೫೧ ಡಬ್ಲ್ಯೂಇ ವಿಧಿಯಾನುಸಾರ ಮೂಲಭೂತ ಕರ್ತವ್ಯಗಳು.

೫. ೩೨೫ ನೇ ವಿಧಿಯಾನುಸಾರ ಚುನಾವಣೆಗಳು ಹಾಗೂ ಮಹಿಳೆಯರನ್ನು ಭೇದ ಭಾವದಿಂದ ರಕ್ಷಿಸಲು, ಹಿಂದೂ ನಿಯಮಾವಳಿ, ಮಹಿಳೆಯರಿಗೆ ಸಮಾನ ಅನುವಂಶೀಯ ಹಕ್ಕನ್ನು ಸೂಚಿಸಿತು.

ಡಾ. ಬಿ.ಆರ್. ಅಂಬೇಡ್ಕರ್ ಹೇಳುವಂತೆ ಅಭಿವೃದ್ಧಿಯನ್ನು ಸಾಮಾಜಿಕ ಆಯಾಮಗಳಿಂದ ಪ್ರಾತಿನಿಧ್ಯದ ಆಧಾರದಲ್ಲಿ ನೋಡಬೇಕು. ಇಲ್ಲದೇ ಹೋದರೆ ಅಸಮಾನತೆಯ ಅಂತರಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತವೆ. ಸಮುದಾಯಗಳು ತಮ್ಮ ತಮ್ಮ ಗುಂಪಿನಲ್ಲಿ ಸ್ಪರ್ಧೆಗಳನ್ನು ಒಡ್ಡಿಕೊಂಡು, ಭಿನ್ನ ಗುಂಪುಗಳನ್ನು ರಚಿಸಿಕೊಂಡು, ಆಂತರಿಕ ಗೊಂದಲಗಳು ಮುಂದಿನ ದಿನಗಳಲ್ಲಿ ಬಹುದೊಡ್ಡ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಸಮಾಜದಲ್ಲಿರುವ ಸಾಮಾಜಿಕ ನ್ಯಾಯದ ಸಂಘಟನೆಗಳು, ದಲಿತ ಸಂಘಟನೆಗಳು, ಜಾತಿ ಸಂಘಟನೆಗಳು ಮತ್ತು ಒಳಗುಂಪುಗಳು ಹಾಗೂ ಸರ್ಕಾರ ಒಟ್ಟಾಗಿ ಬಂದು ಚರ್ಚಿಸಬೇಕು. ಇಲ್ಲಿಯವರೆಗೆ ಯಾವ ಜಾತಿಗಳು ಅಭಿವೃದ್ಧಿಯಲ್ಲಿ ಅಗೋಚರವಾಗಿ

ಉಳಿದಿದೆಯೋ ಅವುಗಳಿಗೆ ಧ್ವನಿಯಾಗಬೇಕು. ಅವುಗಳ ಅಭಿವೃದ್ಧಿ ನಮ್ಮ ಆದ್ಯತೆಗಳಾಗಬೇಕು. ಪರಸ್ಪರ ಅಂತರಗಳನ್ನು ಕಡಿಮೆ ಮಾಡಿಕೊಳ್ಳಬೇಕು. (ಯರ್ರಿಸ್ವಾಮಿ.ಈ, ೨೦೧೦).

ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಿದ್ಧಾಂತಗಳು ವಿವಿಧ ಹಂತಗಳಲ್ಲಿ ಮಹಿಳಾಭಿವೃದ್ಧಿಯನ್ನು ಸೂಚಿಸಿವೆ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಮಹಿಳೆಯರು ಅಭಿವೃದ್ಧಿಯಾದಾಗ ನಿಜವಾದ ಅರ್ಥದಲ್ಲಿ ಮಹಿಳಾ ಸಬಲೀಕರಣ ಸಾಧ್ಯವಾಗುತ್ತದೆ. ಈ ಅಧ್ಯಯನದಲ್ಲಿ ಮೇಲಿನ ಸಿದ್ಧಾಂತಗಳನ್ನು ಅಭ್ಯಸಿಸಿ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಅಭಿವೃದ್ಧಿಗೆ ಸೂಕ್ತ ಸಲಹೆಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ.

ಉಲ್ಲೇಖಗಳು:

- ❖ ಚಂದ್ರಶೇಖರ ಟಿ.ಆರ್, ೨೦೧೧, 'ಹಕ್ಕು ಹಂಗು', ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಪುಟ ಸಂಖ್ಯೆ ೧೧–೨೧೯.
- ❖ ಅನ್ನಪೂರ್ಣೇಶ್ವರಿ ಎನ್, ೨೦೧೪, 'ಮಹಿಳಾ ಸಬಲೀಕರಣಕ್ಕಾಗಿ ಶಿಕ್ಷಣ' ಸತೀಶ ಎಂ.ಇ (ಸಂ) ಸ್ತ್ರೀ ವಾದ ಮತ್ತು ಭಾರತೀಯತೆ, ಕಾಲ ಪ್ರಕಾಶನ, ಬೆಂಗಳೂರು ಪುಟ ಸಂಖ್ಯೆ ೫೮–೬೫

- ❖ ಚಂದ್ರಶೇಖರ ಟಿ.ಆರ್, ೨೦೧೧, 'ಹಕ್ಕು ಹಂಗು', ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಪುಟ ಸಂಖ್ಯೆ ೧೧–೨೧೯.

- ❖ ಹೇಮಲತಾ ಎಚ್.ಎಂ, ೨೦೦೨, *'ಮಹಿಳಾ ಸಶಕ್ತೀಕರಣ'*, ಅಭಿರುಚಿ ಪ್ರಕಾಶನ, ಪುಟ ಸಂಖ್ಯೆ ೯.
- ❖ ಯೋಗರಾಜ್ ಎಸ್. ಡಿ, ೨೦೧೩, *'ಮಹಿಳಾ ಸಬಲೀಕರಣ'* ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಪ್ರಕಾಶನ, ಬೆಂಗಳೂರು ಪುಟಸಂಖ್ಯೆ ೨೩–೧೨೦.
- ❖ ಇಂದಿರಾ ಆರ್, ೨೦೧೧, 'ಮಹಿಳಾ ಸಬಲೀಕರಣ', ಯೋಜನಾ ಮಾಸ ಪತ್ರಿಕೆ, ಪುಟಸಂಖ್ಯೆ ೩೨.
- ❖ ಒಡೆಯರ್ ಡಿ ಹೆಗ್ಗಡೆ, ಅನ್ನಪೂರ್ಣೇಶ್ವರಿ ಎನ್, ೨೦೧೧, ಮಹಿಳಾ ಅಧ್ಯಯನಗಳು, ಸಿ.ಪಿ ಇನ್ನೋವೇಷನ್ಸ್ ಪ್ರಕಾಶಕರು, ಬೆಂಗಳೂರು ಪುಟ ಸಂಖ್ಯೆ ೩೫–೪೪.
- ❖ ಶಶಿಕಲ, ೨೦೧೦, 'ಮೊಗವೀರ ಮಹಿಳೆಯರ ಶೈಕ್ಷಣಿಕ ನಿರ್ಧಾರಕಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ', ಎಂ.ಫಿಲ್. ಪ್ರಬಂದ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

❖ ಸಜಿಹಾ ಭೂಮಿಗೌಡ, (ಸಂ), ೨೦೦೭, *'ಲಿಂಗತ್ವ ಸಮನ್ವಾಯ'* ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಪುಟ ಸಂಖ್ಯೆ ೪೦.

❖ ಯೋಗರಾಜ್ ಎಸ್. ಡಿ, ೨೦೧೩, *'ಮಹಿಳಾ ಸಬಲೀಕರಣ'* ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಪ್ರಕಾಶನ, ಬೆಂಗಳೂರು ಪುಟಸಂಖ್ಯೆ ೨೪–೨೫.

❖ ಮೀನಾಕ್ಷಿ ಡಿ. ೨೦೧೦ *'ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ'* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

❖ ಸಿನ್ಹ ಜೆ.ಪಿ, ೨೦೦೦, 'ಇಂಡಿಯನ್ ಡೆಮೋಕ್ರಸಿ ಅಂಡ್ ಎಂಪವರ್‌ಮೆಂಟ್ ಆಫ್ ವುಮೆನ್' ದ ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಅಡ್‌ಮಿನಿಸ್ಟ್ರೇಶನ್, ವೊಲ್ಯೂಂ ೪೬, ಪುಟ ಸಂಖ್ಯೆ ೬೧೯.

❖ ಸಿಂಧುಜಾ ಪಿ, ೨೦೧೭, *'ಗ್ಲೋಬಲ್ ಫ್ರೇಮ್‌ವರ್ಕ್ಸ್ ಫಾರ್ ಜೆಂಡರ್ ಇಕ್ವಾಲಿಟಿ ಇನ್ ಪಾಲಿಟಿಕ್ಸ್,* ಥರ್ಡ್ ಕಾನ್ಸೆಪ್ಟ್, ಮಾರ್ಚ್ ೯. ವೊಲ್ಯುಂ ನಂ.೩೧. ನಂ.೩೬೧. ಪುಟ ಸಂಖ್ಯೆ ೩೫ –೩೮.

❖ ಶಿವಚಿತ್ತಪ್ಪ ಕೆ, ೨೦೦೬, *'ಮಹಿಳಾ ಸಬಲೀಕರಣದ ವಿಭಿನ್ನ ನೆಲೆಗಳು',* ಲಕ್ಷ್ಮಿ ಪ್ರಿಂಟಿಂಗ್, ಮತ್ತು ಪಬ್ಲಿಕೇಷನ್ ಹೌಸ್, ಮೈಸೂರು ೧೨೨.

❖ ನಾಗಮಣಿ ಎಸ್ ರಾವ್, ೨೦೧೨, *'ಸ್ತ್ರೀ ಪಥ',* ನವ ಕರ್ನಾಟಕ ಪ್ರಕಾಶನ, ಬೆಂಗಳೂರು ಪುಟ ಸಂಖ್ಯೆ ೨೪.

❖ ಸಿಂಧುಜಾ ಪಿ, ೨೦೧೭ *'ಗ್ಲೋಬಲ್ ಫ್ರೇಮ್‌ವರ್ಕ್ಸ್ ಫಾರ್ ಜೆಂಡರ್ ಇಕ್ವಾಲಿಟಿ ಇನ್ ಪಾಲಿಟಿಕ್ಸ್,* ಥರ್ಡ್ ಕಾನ್ಸೆಪ್ಟ್, ಮಾರ್ಚ್. ವೊಲ್ಯುಂ ನಂ.೩೧. ನಂ.೩೬೧. ಪುಟ ಸಂಖ್ಯೆ ೩೫ –೩೮.

❖ ಒಡೆಯರ್ ಡಿ ಹೆಗ್ಗಡೆ, ಅನ್ನಪೂರ್ಣೇಶ್ವರಿ ಎನ್, ೨೦೧೧, ಮಹಿಳಾ ಅಧ್ಯಯನಗಳು, ಸಿ.ಪಿ ಇನ್ನೋವೇಷನ್ಸ್ ಪ್ರಕಾಶಕರು, ಬೆಂಗಳೂರು ಪುಟ ಸಂಖ್ಯೆ ೩೫–೪೪.

❖ ಸುನೀತಾ ಪಥಾನಿಯ, ೨೦೦೧, *'ವುಮೆನ್ ಆ್ಯಂಡ್ ಡೆವಲಪ್‌ಮೆಂಟ್ ಫ್ರಮ್ ಮೈಕ್ಸಿಕೋ ಟು ಬೀಜಿಂಗ್ ಕಂಟ್ರೀಸ್ ಅದರ್ ದ್ಯಾನ್ ಇಂಡಿಯಾ. ಪ್ರೆಸಿಡೆನ್ಷಿಯಲ್ ಎಡ್ರೆಸ್ ಓನ್ ದ ಇಂಡಿಯನ್ ಇಸ್ಟ್ರಿ ಕಾಂಗ್ರೆಸ್',* ಕುರುಕ್ಷೇತ್ರ ವಿಶ್ವವಿದ್ಯಾನಿಲಯ. ಪುಟ ಸಂಖ್ಯೆ ೩–೪೩

- ರಾಘವ್, ೨೦೦೮, 'ಮಹಿಳಾ ಅಧ್ಯಯನದ ಆಯಾಮಗಳು', ಗ್ರಾಮೀಣ ಪ್ರದೇಶದ ಮಹಿಳೆ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ಸ್, ಮೈಸೂರು ಪುಟ ಸಂಖ್ಯೆ ೩೩೪.
- ಸತ್ಯವತಿ ಎನ್.ಎಚ್, ೨೦೧೭, 'ಮಹಿಳೆಯರ ಅಭಿವೃದ್ಧಿಯಲ್ಲಿ ಸರ್ಕಾರಿ ಯೋಜನೆಗಳ ಪಾತ್ರ ಗುಲಬರ್ಗಾ ಜಿಲ್ಲೆಯ ಅಧ್ಯಯನ', ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.
- ರಾಘವ್, ೨೦೦೮, 'ಮಹಿಳಾ ಅಧ್ಯಯನದ ಆಯಾಮಗಳು', ಗ್ರಾಮೀಣ ಪ್ರದೇಶದ ಮಹಿಳೆ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ಸ್, ಮೈಸೂರು ಪುಟ ಸಂಖ್ಯೆ ೩೩೪.
- ಜನೆಟ್ ಮಾಮ್‌ಸೆನ್ ಹೆನ್ಸಾಲ್, ೨೦೦೪, 'ಜೆಂಡರ್ ಅಂಡ್ ಡೆವಲಪ್‌ಮೆಂಟ್' ಲಂಡನ್: ರೂಟ್‌ಬೆಡ್ಸ್ ನಿವ್ಯೂ ಫೆಟ್ಟೆರ್ ಲೇನ್, ಪುಟ ಸಂಖ್ಯೆ ೧೨-೧೩.
- ಸರಸ್ವತಿ ರಾಜು, ೨೦೦೬, *'ಲೋಕೆಟಿಂಗ್ ವುಮೆನ್ ಇನ್ ಸೋಶಿಯಲ್ ಡೆವಲಪ್‌ಮೆಂಟ್ ಇಂಡಿಯಾ, ಸೋಶಿಯಲ್ ಡೆವಲಪ್‌ಮೆಂಟ್ ರಿಪೋರ್ಟ್ ೯ ಕೌನ್ಸಿಲ್ ಫಾರ್ ಸೋಶಿಯಲ್ ಡೆವಲಪ್‌ಮೆಂಟ್'*, ನಿವ್ಯೂ ಡೆಲ್ಲಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಪುಟುಸಂಖ್ಯೆ ೭೯.
- ದೇವಕಿ ಜೈನ್, ೨೦೦೬ 'ವುಮೆನ್ *ಅಂಡ್ ಪ್ಲಾನ್ಸ್,'* ಯೋಜನಾ, ಫೆಬ್ರವರಿ ಪುಟ ಸಂಖ್ಯೆ ೬೧
- ಇಂದಿರಾ ರಾಜರಾಮ್, 'ವುಮೆನ್ ಇನ್ ದ ಇಲೆವೆನ್ತ್ ಪ್ಲಾನ್', ಯೋಜನಾ, ಮೇ ೨೦೦೭. ಪುಟ ಸಂಖ್ಯೆ ೨೮.
- ಸುಸಾನೆ ಸ್ಕಾಹೆಚ್ ಮತ್ತು ಹಗ್ಗೀಸ್ ಜೇನ್, ೨೦೦೦, *'ಕಲ್ಚರ್ ಅಂಡ್ ಡೆವಲಪ್‌ಮೆಂಟ್ ಎ ಕ್ರಿಟಿಕಲ್ ಇಂಟ್ರೋಡಕ್ಷನ್, ಮಾಲ್ಡೆನ್ ಮೈನ್ ಸ್ಟ್ರೀಟ್'*, ಬ್ಲ್ಯಾಕ್ ವೆಲ್ ಪಬ್ಲಿಷಿಂಗ್ ಲಿಮಿಟೆಡ್, ಪುಟ ಸಂಖ್ಯೆ ೯೦-೯೨.
- ದೇವಕಿ ಜೈನ್, ೨೦೦೬, 'ವುಮೆನ್ *ಅಂಡ್ ಪ್ಲಾನ್ಸ್,'* ಯೋಜನಾ, ಫೆಬ್ರವರಿ ಪುಟ ಸಂಖ್ಯೆ ೬೧.
- ಯೋಗರಾಜ್ ಎಸ್. ಡಿ, ೨೦೧೩, *'ಮಹಿಳಾ ಸಬಲೀಕರಣ'* ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಪ್ರಕಾಶನ, ಬೆಂಗಳೂರು ಪುಟಸಂಖ್ಯೆ ೨೪.

❖ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೈಪಿಡಿ, ಕರ್ನಾಟಕ ಸರಕಾರ, ಬೆಂಗಳೂರು. ಪುಟ ಸಂಖ್ಯೆ ೧-೩೦.

❖ ಉಡುಪಿ ಜಿಲ್ಲಾ ಪಂಚಾಯತು, ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳು, ೨೦೧೫-೧೬.

❖ ಮನುಜಾಪಾಟೀಲ್, ೨೦೦೮, *'ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವೂ'*, ಆದಿಚುಂಚನಗಿರಿ ಮಾಸಪತ್ರಿಕೆ ಅಕ್ಟೋಬರ್ ಪುಟ ಸಂಖ್ಯೆ ೩೦

❖ ಇಂದಿರಾ ಆರ್, ೨೦೧೧, 'ಮಹಿಳಾ ಸಬಲೀಕರಣ', ಯೋಜನಾ ಮಾಸಪತ್ರಿಕೆ, ಪುಟ ಸಂಖ್ಯೆ ೩೨.

❖ ನೇಮಿಚಂದ್ರ, ೨೦೦೧, *'ಮಹಿಳಾ ಅಧ್ಯಯನ'*, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

❖ ಹೇಮಲತಾ ಎಚ್.ಎಂ, ೨೦೦೨, *'ಮಹಿಳಾ ಸಶಕ್ತೀಕರಣ'*, ಅಭಿರುಚಿ ಪ್ರಕಾಶನ. ಪುಟ ಸಂಖ್ಯೆ ೯.

❖ ಯೋಗರಾಜ್ ಎಸ್. ಡಿ, ೨೦೧೩, *'ಮಹಿಳಾ ಸಬಲೀಕರಣ'* ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಪ್ರಕಾಶನ, ಬೆಂಗಳೂರು, ಪುಟಸಂಖ್ಯೆ ೨೩-೧೨೦.

❖ ಮಂಜುನಾಥ ಬಿ.ಟಿ. 'ಮಹಿಳಾ ಸಮಾಜವಾದ ಒಂದು ವಿಶ್ಲೇಷಣೆ', ಸಂವಾದ, ಸೆಪ್ಟೆಂಬರ್ ೨೦೧೮.

❖ ಸ್ಯಾಂಡ್ರ ಜಿ, ಟರ್ನರ್ ಅಂಡ್ ಟೀನಾ ಎಂ. ಮಸ್ಟಿ, ೨೦೧೫, "ಫೆಮಿನಿಸ್ಟ್ ಅಂಡ್ , ಎಂಪವರ್‌ಮೆಂಟ್ ಥಿಯರಿ ಆಂಡ್ ಸೋಶಿಯಲ್ ವರ್ಕ್ ಪ್ರಾಕ್ಟಿಸ್.

❖ ಲಿಯೋಸ್ ಮರಿಯೋ ವರ್ಗಸ್, ೧೯೮೯, *'ಫಾವರ್ಡ್ ಟು ದ ಅದರ್‌ಫಾತ್ ದ ಇನ್‌ವಿಸಿಬಲ್ ರೆವೊಲ್ಯುಶನ್ ಇನ್ ದ ವರ್ಲ್ಡ್'*, ಸ್ಟುವರ್ಟ್ ಕಾರ್ ಬ್ರಿಡ್ಜ್ (ಸಂ) ಡೆವಲಪ್‌ಮೆಂಟ್ ಸ್ಟಡೀಸ್ ಎ ರೀಡರ್, ಲಂಡನ್: ೩೩೮, ಈಸ್ಟನ್ ರೋಡ್. ಪುಟ ಸಂಖ್ಯೆ ೨೮೯-೨೯೫.

❖ ಯೋಗರಾಜ್ ಎಸ್. ಡಿ, ೨೦೧೩, *'ಮಹಿಳಾ ಸಬಲೀಕರಣ'* ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಪ್ರಕಾಶನ, ಬೆಂಗಳೂರು ಪುಟಸಂಖ್ಯೆ ೨೪

❖ ಷಣ್ಮುಖ ಎ, ೨೦೦೬, *'ಕರ್ನಾಟಕ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳಾ ಮೀಸಲಾತಿ ಶಿವಮೊಗ್ಗ ಜಿಲ್ಲೆಯ ಒಂದು ಅಧ್ಯಯನ'*, ಸಂಶೋಧನಾ ಗ್ರಂಥ, ಕುವೆಂಪು ವಿಶ್ವವಿದ್ಯಾನಿಲಯ. ಪುಟ ಸಂಖ್ಯೆ ೧೦.

- ❖ ವಿರೇಶ್ ನಾಯಕ್, ೨೦೧೮, *'ರಾಜಕೀಯದಲ್ಲಿ ಮಹಿಳೆಯರು, ೨೦೧೭ ವರದಿ ಭಾರತದ ಸ್ಥಿತಿಗತಿಗಳೇನು?'* ಹೊಸತು, ಸೆಪ್ಟೆಂಬರ್, ಪುಟ ಸಂಖ್ಯೆ ೩೨.
- ❖ ಸಿಎಸ್‌ಡಿಸಿ ಡಾಟಾ ಯುನಿಟ್ ಹೆಚ್‌ಟಟಿಪಿ: ಡಬ್ಲ್ಯು ಡಬ್ಲ್ಯುಡಬ್ಲ್ಯು ಇಂಡಿಯಾ ಸ್ಟ್ಯಾಟ್.ಕಮ್/೨೦೧೫
- ❖ ಕುಲ್ದೀಪ್ ಫಾಡಿಯಾ, ೨೦೧೪, 'ವುಮೆನ್ ಎಂಪವರ್‌ಮೆಂಟ್ ಥ್ರೂ ಪಾಲಿಟಿಕಲ್ ಪಾರ್ಟಿಸಿಫೇಶನ್ ಇನ್ ಇಂಡಿಯಾ',
- ❖ ಡಬ್ಲ್ಯು ಡಬ್ಲ್ಯುಡಬ್ಲ್ಯು ವರ್ಲ್ಡ್ ಬ್ಯಾಂಕ್.ಓರ್ಗ್.
- ❖ ಡಬ್ಲ್ಯುಡಬ್ಲ್ಯುಡಬ್ಲ್ಯು ಪೇಪರ್ ಪಬ್ಲಿಕೇಷನ್ಸ್.ಓರ್ಗ್
- ❖ ಮೆಹ್ತಾ ಜಿ.ಎಸ್, ೨೦೦೨, *'ಪಾರ್ಟಿಸಿಪೇಶನ್ ಆಫ್ ವುಮೆನ್ ಇನ್ ದ ಪಂಚಾಯತ್ ರಾಜ್ ಸಿಸ್ಟಮ್',* ಕಾನಿಷ್ಕ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ನಿವ್ಯೂ ಡೆಲ್ಲಿ.
- ❖ ಸೀಮಾ ಸಲ್ಗೊಂಕರ್, ಪಿ, ೨೦೦೦, 'ವುಮೆನ್ ಇನ್ ಪಂಚಾಯತ್ ರಾಜ್ ಇನ್ಸ್ಟಿಟ್ಯೂಷನ್ಸ್ ಎ ಕೇಸ್ ಸ್ಟಡಿ ಇನ್ ಗೋವಾ', ಸಕ್ಸೆನಾ ಕಿರಣ್ (ಸಂ) ವುಮೆನ್ ಆ್ಯಂಡ್ ಪಾಲಿಟಿಕ್ಸ್, ಗ್ಯಾನ ಪಬ್ಲಿಷಿಂಗ್ ಹೌಸ್, ನಿವ್ಯೂ ಡೆಲ್ಲಿ, ಪುಟ ಸಂಖ್ಯೆ ೧೪೨–೧೫೩.
- ❖ ಉನ್ನತಿ, ೨೦೦೧, *'ಸ್ಟೇಟಸ್ ಆಫ್ ಪಂಚಾಯತ್ ರಾಜ್ ಇನ್ಸ್ಟಿಟ್ಯೂಷನ್ಸ್ ಇನ್ ಗುಜರಾತ್ ಅಂ ಅಹಮದಬಾದ್.*
- ❖ ನಾಗೇಂದ್ರ ಎಸ್, ಅಂಬೇಡ್ಕರ್, ಶೈಲಜಾ ನಾಗೇಂದ್ರ, ೨೦೦೬, 'ರೋಲ್ ಆಫ್ ವುಮೆನ್ ಇನ್ ಪಂಚಾಯತಿ ರಾಜ್, ಎಬಿಸಿ, ಪಬ್ಲಿಷರ್, ಜೈಪುರ.
- ❖ ಸಮದ್ ಅಬ್ದುಲ್, ೨೦೦೭, *'ವುಮೆನ್ ಎಂಪವರ್‌ಮೆಂಟ್ ಆ್ಯಂಡ್ ಪಂಚಾಯತಿ ರಾಜ್ ಇನ್ಸ್ಟಿಟ್ಯೂಷನ್ಸ್ ಇನ್ ಕೇರಳ',* ಕುರುಕ್ಷೇತ್ರ ಜರ್ನಲ್ ಒನ್ ರೂರಲ್ ಡೆವಲಪ್‌ಮೆಂಟ್, ಪುಟ ಸಂಖ್ಯ ೭–೪೧.
- ❖ ಶಿವಣ್ಣ ಎನ್, ೧೯೯೮, *'ಡಿಸೆಂಟ್ರಲೈಸ್ಡ್ ಗೋವರೆನ್ಸ್ ಆ್ಯಂಡ್ ಪ್ಲಾನಿಂಗ್ ಇನ್ ಕರ್ನಾಟಕ: ಎ ಹಿಸ್ಟೋರಿಕಲ್ ರಿವ್ಯೂ,* ಸೊಶಿಯಲ್ ಚೇಂಜ್, ವೊಲ್ಯೂಂ.೮, ನಂ.೧.
- ❖ ಮನ್ಸ್‌ಬ್ರಿಡ್ಜ್ ಜೇನ್, ೨೦೦೩, *'ರೀಥಿಂಕಿಂಗ್ ರೆಪ್ರೆಸೆಂಟೇಶನ್',* ಅಮೇರಿಕನ್ ಪಾಲಿಟಿಕಲ್ ಸಯನ್ಸ್, ರಿವ್ಯೂ, ವೊಲ್ಯುಂ ನಂ. ೯೭, ನವೆಂಬರ್, ಪುಟ ೫೧೫.
- ❖ ಭಾರತಿ ಥಾಕೂರ್, ೨೦೦೬, 'ವುಮೆನ್ ಇನ್ ಗಾಂಧೀ'ಸ್ ಮಾಸ್ ಮೂವ್‌ಮೆಂಟ್ ದೀಪಾ ಪಬ್ಲಿಕೇಷನ್ಸ್, ನಿವ್ಯೂ ಡೆಲ್ಲಿ ಪುಟಸಂಖ್ಯೆ ೧೫.

❖ ಗಂಗ್ರೆಡೆ ಕೆ.ಡಿ, ೨೦೦೦, ಗಾಂಧಿ ಆಸ್ ಮಿಲೇನಿಯಮ್ ಮಿಥ್' ಗಾಂಧಿ ಮಾರ್ಗ, ವೊಲ್ಯೂಂ ನಂ.೨೨ ಪುಟ ಸಂಖ್ಯೆ ೩೩.

❖ ಜಾಲಿ ಸುರ್ಜೀತ್ ಕೌರ್(ಸಂ), ೨೦೦೫, 'ರೀಡಿಂಗ್ ಗಾಂಧಿ, ಕಾನ್ಸೆಪ್ಟ್ ಪಬ್ಲಿಕೇಷನ್ ಕಂಪೆನಿ, ಡೆಲ್ಲಿ, ಪುಟ ಸಂಖ್ಯೆ ೨೩೭.

❖ ಗಂಗ್ರೆಡೆ ಕೆ.ಡಿ, ೨೦೦೦, 'ಗಾಂಧಿ ಅಂಡ್ ಎಂಪವರ್‌ಮೆಂಟ್ ಆಫ್ ವುಮೆನ್', ಗಾಂಧಿ ಮಾರ್ಗ, ವೊಲ್ಯೂಂ ನಂ.೨೨ ಪುಟ ಸಂಖ್ಯೆ ೪೨೭.

❖ ಮಧು ಜಾ, ೨೦೦೫, *'ವುಮೆನ್ ಇನ್ ಡಿಸಿಶನ್ ಮೇಕಿಂಗ್ ಪೊಸಿಷನ್',* ಕಾನಿಷ್ಕ ಪಬ್ಲಿಕೇಷನ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ನಿವ್ಯೂ ಡೆಲ್ಲಿ, ಪುಟ ಸಂಖ್ಯೆ ೧೪.೧೫.

❖ ಚೈತ್ರ ಸಿನ್ಹ, ೨೦೦೭, 'ಇಮೇಜೆಸ್ ಆಫ್ ಮದರ್‌ಹುಡ್: ದ ಹಿಂದು ಕೋಡ್ ಬಿಲ್ ಡಿಸ್‌ಕೋರ್ಸ್, ಇಕಾನಾಮಿಕ್ ಆ್ಯಂಡ್ ಪಾಲಿಟಿಕಲ್ ವೀಕ್ಲೀ, ವೊಲ್ಯುಂ ೪೨, ನಂ.೪೩, ಪುಟಸಂಖ್ಯೆ ೪೯–೫೭.

❖ ನೀರಾ ದೇಸಾಯಿ, ಮೈತ್ರೇಯಿ ಕೃಷ್ಣರಾಜ್, ೨೦೦೪, 'ಆ್ಯನ್ ಓವರ್‌ವ್ಯೂವ್ ಆಫ್ ದ ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ', ಮೋಹಂತಿ ಮನೋರಂಜನ್ (ಸಂ) 'ರೀಡಿಂಗ್ಸ್ ಇನ್ ಇಂಡಿಯನ್ ಗಾವರ್ನ್‌ಮೆಂಟ್ ಆ್ಯಂಡ್ ಪಾಲಿಟಿಕ್ಸ್: ಕ್ಲಾಸ್, ಕಾಸ್ಟ್, ಜೆಂಡರ್, ನಿವ್ಯೂ ಡೆಲ್ಲಿ: ಸೇಜ್ ಪಬ್ಲಿಕೇಷನ್ ಪುಟ ಸಂಖ್ಯೆ ೩–೧೧.

❖ ಯರ್ರಿಸ್ವಾಮಿ ಈ, ೨೦೧೦, *'ಮಹಿಳೆ ಮತ್ತು ಜಾತಿ ಶ್ರೇಣೀಕರಣ ಅಂಬೇಡ್ಕರ್ ದೃಷ್ಟೀಕೋನ',* ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ ಪುಟ ಸಂಖ್ಯೆ ೧೧೪–೧೧೫.

ಅಧ್ಯಾಯ ಐದು

ಮೊಗವೀರ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಾನಮಾನ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ: ಪ್ರಾತಿನಿಧ್ಯದ ಆಯಾಮಗಳು

೫.೧. ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ವಿಶ್ಲೇಷಣೆ

೫.೨. ರಾಜಕೀಯ ಪ್ರಾತಿನಿಧ್ಯತೆ: ಮೊಗವೀರ ಮಹಿಳೆಯರ ಅಭಿಪ್ರಾಯ

ಅಧ್ಯಾಯ ೫

ಮೊಗವೀರ ಮಹಿಳೆಯರ ಸಾಮಾಜಿಕ ಸ್ಥಾನಮಾನ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ: ಪ್ರಾತಿನಿಧ್ಯದ ಆಯಾಮಗಳು

ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣ: ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ ಎಂಬ ಅಧ್ಯಯನವು ಒಂದು ವಿವರಣಾತ್ಮಕ ಅಧ್ಯಯನವಾಗಿದ್ದು, ಪ್ರಶ್ನಾವಳಿ, ಅವಲೋಕನ ಹಾಗೂ ಸಂದರ್ಶನದ ಮೂಲಕ ಮೊಗವೀರ ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಪರಿಸ್ಥಿತಿ ಹಾಗೂ ರಾಜಕೀಯ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ಈ ಅಧ್ಯಾಯದಲ್ಲಿ ನೀಡಲಾಗಿದೆ. ಹಲವಾರು ವಿಷಯಗಳಿಗೆ ಕಾರಣಗಳನ್ನು ನೀಡಲಾಗಿದೆ. ತನ್ಮೂಲಕ ಸಂಶೋಧನೆಗೆ ಪೂರಕವಾದ ಹಿನ್ನೆಲೆಯನ್ನು ರೂಪಿಸಿಕೊಳ್ಳಲಾಗಿದೆ ಹಾಗೂ ಅಗತ್ಯವಿರುವೆಡೆಯಲ್ಲಿ ಅಧ್ಯಯನಗಳ ಸಮೀಕ್ಷೆಯನ್ನು ಕೂಡ ಅಗತ್ಯಕ್ಕನುಗುಣವಾಗಿ ಬಳಸಿಕೊಳ್ಳಲಾಗಿದೆ.

ಸಂಗ್ರಹಿಸಲಾದ ಮಾಹಿತಿಗಳ ವಿಶ್ಲೇಷಣೆಯ ಈ ಭಾಗದಲ್ಲಿ ಮಾಹಿತಿದಾರರ ವೈಯಕ್ತಿಕ ಮಾಹಿತಿಯ ವಿಶ್ಲೇಷಣೆ ಹಾಗೂ ಮಾಹಿತಿದಾರರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಈ ಮಾಹಿತಿಗಳ ವಿಶ್ಲೇಷಣೆಯು ರಾಜಕೀಯ ಸಬಲೀಕರಣದ ಮೇಲೆ ಯಾವ ರೀತಿ ಪರಿಣಾಮ ಬೀರಬಲ್ಲದೆಂಬುದನ್ನು ವಿಮರ್ಶಿಸುವ ಪ್ರಯತ್ನ ಮಾಡಲಾಗಿದೆ.

ಕೋಷ್ಟಕ ೫.೧ ಮಾಹಿತಿದಾರರ ವಯಸ್ಸಿನ ವರ್ಗೀಕರಣ

ವಯಸ್ಸು	ಸಂಖ್ಯೆ	ಸರಾಸರಿ
೨೦ ರಿಂದ ೩೦	೮೨	೧೦.೨೫
೩೧ ರಿಂದ ೪೦	೧೫೦	೧೮.೭೫
೪೧ ರಿಂದ ೫೦	೨೬೪	೩೩
೫೧ ರಿಂದ ೬೦	೨೦೦	೨೫
೬೧ ರಿಂದ ಮೇಲ್ಪಟ್ಟು	೧೦೪	೧೩
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಈ ಅಧ್ಯಯನದಲ್ಲಿ ಸಂಪರ್ಕಿಸಲಾದ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ಶೇಕಡಾ ೧೦.೨೫ ರಷ್ಟು ಮಾಹಿತಿದಾರರು ೨೦ ರಿಂದ ೩೦ ವರ್ಷ ವಯಸ್ಸಿನವರು, ಶೇಕಡಾ ೧೮.೭೫ ರಷ್ಟು ೩೧ ರಿಂದ ೪೦ ವರ್ಷ ವಯಸ್ಸಿನವರು, ಶೇಕಡಾ ೩೩ ರಷ್ಟು ೪೧ ರಿಂದ ೫೦ ರಷ್ಟು ವರ್ಷ ವಯಸ್ಸಿನವರು, ಶೇಕಡಾ ೨೫ ರಷ್ಟು ಮಾಹಿತಿದಾರರು ೫೧ ರಿಂದ ೬೦ ವರ್ಷ ವಯಸ್ಸಿನವರು, ಉಳಿಕೆ ಶೇಕಡಾ ೧೩ ರಷ್ಟು ಮಾಹಿತಿದಾರರು ೬೧ ವರ್ಷ ಮೇಲ್ಪಟ್ಟ ವಯಸ್ಸಿನವರಾಗಿರುತ್ತಾರೆ. ಎಲ್ಲಾ

ವಯೋಮಾನದ ಮಾಹಿತಿದಾರರನ್ನು ಅಧ್ಯಯನದಲ್ಲಿ ಬಳಸಿದ್ದು, ಅಧ್ಯಯನದಲ್ಲಿ ಪಡೆಯಲಾದ ಅಭಿಪ್ರಾಯದ ಗುಣಮಟ್ಟದ ದೃಷ್ಟಿಯಿಂದ ಪೂರಕವಾಗಿದೆ.

ಈ ಅಧ್ಯಯನದಲ್ಲಿ ೨೦ ರಿಂದ ೭೫ ವರ್ಷಗಳವರೆಗಿನ ವಯೋಮಾನದ ಮಾಹಿತಿದಾರರನ್ನು ಸಂದರ್ಶಿಸಲಾಗಿದೆ. ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಬಲೀಕರಣದ ಮಾಹಿತಿಯನ್ನು ನೀಡುವಲ್ಲಿ ಈ ವಯೋಮಾನದ ಮಾಹಿತಿದಾರರು ಸೂಕ್ತವಾಗಿ ಸ್ಪಂದಿಸಿದ್ದಾರೆ.

ಕೋಷ್ಟಕ ೫.೨ ಮಾಹಿತಿದಾರರ ಶೈಕ್ಷಣಿಕ ವಿವರಗಳು

ಶಿಕ್ಷಣದ ಮಟ್ಟ	ಸಂಖ್ಯೆ	ಶೇಕಡಾ
ಅನಕ್ಷರಸ್ಥ	೧೨೦	೧೫
ಪ್ರಾಥಮಿಕ ಶಿಕ್ಷಣ	೩೯೨	೪೯
ಪ್ರೌಢ ಶಿಕ್ಷಣ	೧೨೦	೧೫
ಪದವಿ ಪೂರ್ವ ಹಂತ	೯೬	೧೨
ಪದವಿ ಶಿಕ್ಷಣ	೪೦	೫
ಸ್ನಾತಕೋತ್ತರ ಪದವಿ	೩೨	೪
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಹಿಳಾ ಮಾಹಿತಿದಾರರ ಶೈಕ್ಷಣಿಕ ಮಟ್ಟದ ಕೋಷ್ಟಕವನ್ನು ಗಮನಿಸಿದಾಗ, ಒಟ್ಟು ೮೦೦ ಮಾಹಿತಿದಾರರಲ್ಲಿ ಶೇಕಡ ೧೫ರಷ್ಟು ಮಾಹಿತಿದಾರರು ಅನಕ್ಷರಸ್ಥರಾಗಿರುವುದು ತಿಳಿದು ಬರುತ್ತದೆ. ಮೂಲತಃ ಅಲೆಮಾರಿ ಜನ ಸಮುದಾಯವಾಗಿರುವ ಮೊಗವೀರ ಸಮುದಾಯವು ಮೀನು ಬೇಟೆಯನ್ನು ಮಾಡಿಕೊಂಡು ಅಕ್ಷರ ಜ್ಞಾನವಿಲ್ಲದೇ ಜೀವಿಸುತ್ತಿದ್ದಾರೆ. ಮೊಗವೀರರು ಸಂಪ್ರದಾಯ ವ್ಯವಸ್ಥೆಗಳ ಬಗ್ಗೆ ಹೆಚ್ಚು ನಂಬಿಕೆಯುಳ್ಳವರಾಗಿದ್ದು, ವಿವಿಧ ಅಭಿವೃದ್ಧಿಗಳ ಪರಿಕಲ್ಪನೆ, ವಿಜ್ಞಾನ ಮತ್ತು ಆಧುನಿಕ ಸೌಲಭ್ಯಗಳ ಅರಿವು ಗಮನಕ್ಕೆ ಬಾರದೇ ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಾಹಿತಿದಾರರಲ್ಲಿ ಶೇಕಡಾ ೮೫ರಷ್ಟು ಮಾಹಿತಿದಾರರು ಅಕ್ಷರಸ್ಥರಾಗಿದ್ದು, ಅದರಲ್ಲಿ ಶೇಕಡ ೪೯ರಷ್ಟು ಮಾಹಿತಿದಾರರು ಪ್ರಾಥಮಿಕ ಶಿಕ್ಷಣವನ್ನು, ಶೇಕಡ ೧೫ರಷ್ಟು ಮಾಹಿತಿದಾರರು ಪ್ರೌಢ ಶಿಕ್ಷಣವನ್ನು, ಶೇಕಡಾ ೧೨ರಷ್ಟು ಮಾಹಿತಿದಾರರು ಪದವಿ ಪೂರ್ವ ಶಿಕ್ಷಣವನ್ನು, ಶೇಕಡಾ ೫ರಷ್ಟು ಮಾಹಿತಿದಾರರು ಪದವಿ ಶಿಕ್ಷಣವನ್ನು, ಶೇಕಡಾ ೪ರಷ್ಟು ಮಾಹಿತಿದಾರರು ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಪಡೆದಿರುವವರಾಗಿರುತ್ತಾರೆ.

ರೇಣುಕಾ.ಕೆ (೨೦೧೧) ಅವರ ಅಧ್ಯಯನವು ಅನೇಕ ರಾಜ್ಯಗಳಲ್ಲಿ ಮೀನುಗಾರ ವೃತ್ತಿ ಅವಲಂಬಿತ ಮಹಿಳೆಯರ ಶಿಕ್ಷಣದ ಮಟ್ಟವನ್ನು ಕಲೆಹಾಕಿದ್ದು, ಅದರಲ್ಲಿ ಕೇರಳದ ತೆಕ್ಕಂಟ್‌ಭಾಗಮ್ ಮೀನುಗಾರಿಕಾ ಗ್ರಾಮದಲ್ಲಿ ಶೇಕಡಾ ೯೧ ರಷ್ಟು ಮೀನುಗಾರ ಮಹಿಳೆಯರು ಸ್ನಾತಕೋತ್ತರ ಮಟ್ಟದ ವ್ಯಾಸಂಗವನ್ನು, ತಮಿಳುನಾಡಿನ ತೂತುಕುಡಿ ಹಳ್ಳಿಯಲ್ಲಿ ಶೇಕಡಾ ೭೬ ರಷ್ಟು ಮೀನುಗಾರ ಮಹಿಳೆಯರು ಪ್ರೌಢಶಾಲೆಯವರೆಗಿನ ಶಿಕ್ಷಣವನ್ನು, ಎರ್ನಾಕುಲಂ ಹಳ್ಳಿಯ ಶೇಕಡಾ ೫೫.೩೬ರಷ್ಟು

ಮೀನುಗಾರ ಮಹಿಳೆಯರು ಓದು ಹಾಗೂ ಬರೆಯಲು ತಿಳಿದಷ್ಟು ಮಾತ್ರ ಜ್ಞಾನವನ್ನು ಹೊಂದಿದವರಾಗಿದ್ದು, ವಿಶಾಖಪಟ್ಟಣದ ಮೀನುಗಾರ ಮಹಿಳೆಯರು ಯಾವುದೇ ಅಕ್ಷರ ಜ್ಞಾನವನ್ನು ಹೊಂದಿಲ್ಲದೇ ಇರುವುದಾಗಿಯೂ, ಬಾಂಗ್ಲಾದೇಶದಲ್ಲಿ ಶೇಕಡಾ ೩೨ ರಷ್ಟು ಮೀನುಗಾರ ಮಹಿಳೆಯರು ಕೇವಲ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ಮೊಗವೀರ ಸಮುದಾಯದ ಶೈಕ್ಷಣಿಕ ಹಿನ್ನಡೆಗೆ ಬಡತನದ ಹೊರತಾಗಿ ಸಣ್ಣ ಪ್ರಾಯದಲ್ಲಿ ಆದಾಯಗಳಿಸುವ ಅವರ ಅನಿವಾರ್ಯತೆಯ ಕಾರಣದಿಂದಾಗಿ ಮೀನುಗಾರಿಕೆ ವೃತ್ತಿಯನ್ನು ಅವಲಂಬಿಸಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಈ ಮಾಹಿತಿಗಳನ್ನು ಗಮನಿಸಿದಾಗ ಉಳಿದ ರಾಜ್ಯಗಳಿಗೆ ಹೋಲಿಸಿದರೆ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ಶಿಕ್ಷಣದಲ್ಲಿ ಮಾಡಿರುವ ಸಾಧನೆಯು ತೃಪ್ತಿಕರವಾಗಿಲ್ಲ. ಇದಕ್ಕೆ ಪ್ರಮುಖ ಕಾರಣ ಅವರ ಕಸುಬಿನ ಹಿನ್ನೆಲೆ ಎಂದೆನ್ನಬಹುದು. ಕೇವಲ ತುತ್ತಿನ ಚೀಲ ತುಂಬಿಸುವದೇ ಸರ್ವಸ್ವ ಎಂದು ನಂಬಿರುವ ಇವರಿಗೆ ವೇಗವಾಗಿ ಬದಲಾಗುತ್ತಿರುವ ಸಮಾಜದಲ್ಲಿ ನಾವೂ ಹೆಜ್ಜೆ ಹಾಕಬೇಕೆಂಬ ಅರಿವಿನ ಕೊರತೆಯಿದೆ. ಹಿಂದುಳಿದ ಸಮುದಾಯಗಳಲ್ಲಿ ಗುರುತಿಸಿಕೊಳ್ಳುವ ಮೊಗವೀರ ಸಮುದಾಯವು ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದು, ಸಮಾಜದಲ್ಲಿ ಮೊಗವೀರ ಸಮುದಾಯದಲ್ಲಿರುವ ಕೀಳರಿಮೆ ಮತ್ತು ಅಸ್ಪೃಶ್ಯತಾ ಭಾವನೆಯನ್ನು ಹೋಗಲಾಡಿಸಬೇಕೆಂಬ ಅಭಿಪ್ರಾಯವನ್ನು ಹೊಂದಿರುವುದಾಗಿಯೂ ಶಿಕ್ಷಣದಿಂದಾಗಿ ಇತ್ತೀಚಿನ ದಿನಗಳಲ್ಲಿ ಮೊಗವೀರ ಸಮುದಾಯದಲ್ಲಿ ಧನಾತ್ಮಕ ಬದಲಾವಣೆಗಳಾಗುತ್ತಿವೆ. ಸಾಮಾಜಿಕ ಹಿನ್ನೆಲೆಯಲ್ಲಿ ಶಿಕ್ಷಣದ ಅಗತ್ಯತೆಯನ್ನರಿತ ಈ ಸಮುದಾಯದ ಹಿರಿಯರು ತಮ್ಮ ಮಕ್ಕಳ ಶಿಕ್ಷಣದತ್ತ ಕಾಳಜಿ ವಹಿಸುತ್ತಿದ್ದಾರೆ. ಅಲ್ಲದೇ ಸರ್ಕಾರ ನೀಡುತ್ತಿರುವ ಶೈಕ್ಷಣಿಕ ಸೌಲಭ್ಯಗಳಿಂದ ಪ್ರೇರಿತರಾಗಿ ಶಿಕ್ಷಣ ಕೊಡಿಸುವತ್ತ ಆಸಕ್ತಿ ವಹಿಸುತ್ತಿರುವುದು ಕಂಡುಬಂದಿದೆ.

ಕೋಷ್ಟಕ ೫.೩ ಮಾಹಿತಿದಾರರ ಶೈಕ್ಷಣಿಕ ಹಿನ್ನಡೆಗೆ ಕಾರಣಗಳು

ಶೈಕ್ಷಣಿಕ ಹಿನ್ನಡೆಯ ಕಾರಣಗಳು	ಸಂಖ್ಯೆ	ಶೇಕಡಾ
ಬಡತನ	೨೮೦	೩೫
ಅನಾರೋಗ್ಯ	೪೮	೬
ಶಿಕ್ಷಣದ ಅನಾಸಕ್ತಿ	೧೨೦	೧೫
ಕಿರಿಯರ ಆರೈಕೆ	೮೦	೧೦
ವಿವಾಹ	೨೨೪	೨೮
ಅನ್ವಯಿಸುವುದಿಲ್ಲ	೪೮	೬
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯಲ್ಲಿ ಮಾಹಿತಿದಾರರ ಶೈಕ್ಷಣಿಕ ಹಿಂದುಳಿಯುವಿಕೆಗೆ ಹಲವಾರು ಕಾರಣಗಳಿವೆ. ಈ ಅಧ್ಯಯನದ ಸಮೀಕ್ಷೆಯ ಪ್ರಕಾರ ಶೇಕಡಾ ೩೫ ರಷ್ಟು ಮಾಹಿತಿದಾರರು ಬಡತನದ

ಕಾರಣದಿಂದಾಗಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ತಾಯಿಯ ಜೊತೆ ಮೀನುಗಾರಿಕೆ ವೃತ್ತಿಗೆ ತೆರಳಿರುವುದಾಗಿಯೂ, ಶೇಕಡಾ ೬ ರಷ್ಟು ಮಾಹಿತಿದಾರರು ಅನಾರೋಗ್ಯದ ನಿಮಿತ್ತವಾಗಿಯೂ, ಶೇಕಡಾ ೧೫ ರಷ್ಟು ಮಾಹಿತಿದಾರರು ಶಿಕ್ಷಣದ ಮೇಲಿನ ಅನಾಸಕ್ತಿಯ ಕಾರಣಕ್ಕಾಗಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿರುವುದಾಗಿಯೂ, ಶೇಕಡಾ ೧೦ ರಷ್ಟು ಮಂದಿ ಮನೆಯಲ್ಲಿ ತಾಯಿ ತಂದೆ ಇಬ್ಬರೂ ಮೀನುಗಾರಿಕಾ ವೃತ್ತಿಗೆ ತೆರಳುವ ಪ್ರಯುಕ್ತ ಗೃಹಕೃತ್ಯದ ಜೊತೆಗೆ ಸಹೋದರ–ಸಹೋದರಿಯನ್ನು ನೋಡಿಕೊಳ್ಳುವ ಜವಾಬ್ದಾರಿಯ ಪರಿಣಾಮವಾಗಿ, ಶೇಕಡಾ ೨೮ ರಷ್ಟು ಮಾಹಿತಿದಾರರು ವಿವಾಹದ ಕಾರಣದಿಂದಾಗಿ ಶೈಕ್ಷಣಿಕ ಹಿನ್ನಡೆಯಾಗಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೬ ರಷ್ಟು ಮಾಹಿತಿದಾರರಲ್ಲಿ ಸ್ನಾತಕೋತ್ತರ ಪದವಿ, ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣವನ್ನು ಪೂರೈಸಿದ್ದು ಉದ್ಯೋಗದಲ್ಲಿರುವ ಕಾರಣದಿಂದಾಗಿ ತಮಗೆ ಶೈಕ್ಷಣಿಕ ಹಿನ್ನಡೆಯಾಗಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಮಾಹಿತಿದಾರರ ಹಾಗೂ ಮಾಹಿತಿದಾರರ ಮಕ್ಕಳ ಶೈಕ್ಷಣಿಕ ಹಿನ್ನಡೆಯ ಕಾರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾಹಿತಿದಾರರ ಶಿಕ್ಷಣದ ಹಿನ್ನಡೆಗೆ ಬಡತನವೇ ಮೂಲ ಕಾರಣವಾದರೆ, ಮಕ್ಕಳ ಶೈಕ್ಷಣಿಕ ಹಿನ್ನಡೆಗೆ ಅವರ ಬೇಜವಾಬ್ದಾರಿತನದಿಂದಾದ ಶಿಕ್ಷಣದ ನಿರಾಸಕ್ತಿಯು ಕೂಡಾ ಪ್ರಮುಖ ಕಾರಣವಾಗಿದೆ. ಮಾಹಿತಿದಾರರು ತಾವು ತಮ್ಮ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಹೆಚ್ಚು ಕಾಳಜಿ ವಹಿಸುವುದಾಗಿ ತಿಳಿಸಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಮೊಗವೀರ ಸಮುದಾಯದ ಹೆಣ್ಣುಮಕ್ಕಳು ಹೆಚ್ಚಾಗಿ ವಿದ್ಯಾಭ್ಯಾಸವನ್ನು ಮುಂದುವರೆಸುವಲ್ಲಿ ಪೂರಕ ಪರಿಸ್ಥಿತಿಯಿರುವುದಾಗಿ ಮಾಹಿತಿದಾರರು ತಿಳಿಸಿದ್ದು, ಇದು ಮೊಗವೀರ ಮಹಿಳೆಯರ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿದೆ.

ಇತ್ತೀಚಿನ ದಿನಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉಡುಪಿ ಜಿಲ್ಲೆಯ ಮಹಿಳೆಯರಲ್ಲಿ ಜಾಗೃತಿ ಮೂಡಿದೆ. ಇಂದಿನ ಹೊಸ ತಲೆಮಾರಿನ ತಾಯಂದಿರು ತಮ್ಮ ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳಿಗೆ ನೀಡುವಂತೆಯೇ ಶಿಕ್ಷಣದ ಅವಕಾಶವನ್ನು ನೀಡಲು ಪ್ರಯತ್ನಿಸಿದ್ದಾರೆ. ಮಾಹಿತಿದಾರ ಮಹಿಳೆಯರು ಗಂಡು ಮತ್ತು ಹೆಣ್ಣಿನ ಮಧ್ಯೆ ಶಿಕ್ಷಣದ ಅವಕಾಶಗಳಿಗೆ ಸಂಬಂಧಿಸಿದಂತೆ ಭೇದಭಾವ ಸಲ್ಲದೆಂದು ಅಭಿಪ್ರಾಯ ಪಟ್ಟಿದ್ದಾರೆ.

ಕೋಷ್ಟಕ ೫.೪ ಮಕ್ಕಳನ್ನು ಶಾಲೆಗೆ ಸೇರಿಸುವ ಆಯ್ಕೆ ಹಾಗೂ ನಿರ್ಧಾರದ ಅವಲಂಬನೆ

ಮಕ್ಕಳನ್ನು ಶಾಲೆಗೆ ಸೇರಿಸುವ ಆಯ್ಕೆ ಹಾಗೂ ನಿರ್ಧಾರ ಅವಲಂಬಿಸಿರುವುದು	**ಸಂಖ್ಯೆ**	**ಶೇಕಡಾ**
ತಾಯಿ	೨೮೦	೩೫
ತಂದೆ	೪೩೬	೫೪.೫
ಸಹೋದರ ಮಾವಂದಿರು	೩೬	೪.೫
ಅನ್ವಯಿಸುವುದಿಲ್ಲ	೪೮	೬
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವ ನಿರ್ಧಾರದಲ್ಲಿ ಶೇಕಡಾ ೩೫ರಷ್ಟು ಮಾಹಿತಿದಾರರು ಕುಟುಂಬದಲ್ಲಿ ತಾಯಿಯ ನಿರ್ಧಾರವನ್ನು ಅವಲಂಬಿಸಿ ಇರುವುದಾಗಿ ತಿಳಿಸಿದ್ದು, ಇಲ್ಲಿ ಆರ್ಥಿಕವಾಗಿ ಸದೃಢವಾಗಿರುವ ಕುಟುಂಬದ ಮಹಿಳೆಯರು ಹಾಗೂ ಶಿಕ್ಷಿತ ಮಹಿಳೆಯರು ತಮ್ಮ ಮಕ್ಕಳನ್ನು ಯಾವ ಶಾಲೆಗೆ ಸೇರಿಸಬೇಕು, ಎಲ್ಲಿಯವರೆಗೆ ಶಿಕ್ಷಣವನ್ನು ಕೊಡಬೇಕು ಎಂಬುದನ್ನು ತಾವೇ ಆಯ್ಕೆ ಮಾಡಿ ನಿರ್ಧಾರ ವ್ಯಕ್ತಪಡಿಸುವುದಾಗಿ ತಿಳಿಸಿರುತ್ತಾರೆ. ಶೇಕಡ ೫೪.೫ರಷ್ಟು ಮಾಹಿತಿದಾರರು ಕುಟುಂಬದ ಮಹಿಳೆಯರು ಈ ವಿಷಯದಲ್ಲಿ ಗಂಡನ ಆಯ್ಕೆ ಹಾಗೂ ನಿರ್ಧಾರವನ್ನು ಅವಲಂಬಿಸಿರುವುದಾಗಿ ತಿಳಿಸಿದ್ದು, ತಾವು ಅನಕ್ಷರಸ್ಥೆಯಾಗಿರುವ ಕಾರಣದಿಂದಾಗಿ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಸಿದ್ಧರಿಲ್ಲ ಎನ್ನುವ ಪ್ರಾಮಾಣಿಕ ಉತ್ತರ ನೀಡುತ್ತಾರೆ. ಅವಿಭಕ್ತ ಕುಟುಂಬ ಹೊಂದಿರುವ ಕುಟುಂಬಗಳಲ್ಲಿನ ಮಾಹಿತಿದಾರರು ತಮ್ಮ ಮಕ್ಕಳ ಜವಾಬ್ದಾರಿಯನ್ನು ಹೊರುವುದು ಆ ಕುಟುಂಬದ ಸಹೋದರ, ಮಾವಂದಿರ ಜವಾಬ್ದಾರಿಯಾಗಿರುವುದರಿಂದ ಶೇಕಡಾ ೪.೫ರಷ್ಟು ಮಾಹಿತಿದಾರರು ಸಹೋದರರು ಆಯ್ಕೆ ಮಾಡಿ ನಿರ್ಧಾರ ವ್ಯಕ್ತಪಡಿಸುವವರಾಗಿರುತ್ತಾರೆ. ಶೇಕಡಾ ೪ರಷ್ಟು ಮಾಹಿತಿದಾರರು ಅವಿವಾಹಿತರಾಗಿದ್ದು ಹಾಗೆಯೇ ಶೇಕಡಾ ೨ರಷ್ಟು ಮಾಹಿತಿದಾರರು ಮಕ್ಕಳಿಲ್ಲದೇ ಇರುವ ಕಾರಣ ಈ ವಿಷಯದ ಬಗ್ಗೆ ತಟಸ್ಥರಾಗಿರುವುದು ಕಂಡು ಬಂದಿದೆ.

ಮಕ್ಕಳ ಶಿಕ್ಷಣದ ಜವಾಬ್ದಾರಿಗೆ ಸಂಬಂಧಿಸಿದಂತೆ ವಯಸ್ಸಿನಲ್ಲಿ ಹಿರಿಯರಾದ ಮಹಿಳೆಯರು ಪುರುಷ ಪ್ರಧಾನ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದಾರೆ. ಆದರೆ ಹೊಸ ತಲೆಮಾರಿನ ಮತ್ತು ೨೦ ರಿಂದ ೪೦ರ ವಯೋಮಾನದ ಮಹಿಳೆಯರು ಮಕ್ಕಳ ಶಿಕ್ಷಣದ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ತಮ್ಮ ಹಕ್ಕೆಂಬುದಾಗಿ ಭಾವಿಸಿಕೊಂಡಿದ್ದಾರೆ.

ಕೋಷ್ಟಕ ೫.೫ ಉನ್ನತ ವ್ಯಾಸಂಗ ಮಾಡುತ್ತಿರುವ ಉಡುಪಿ ಜಿಲ್ಲೆಯ ಮೊಗವೀರ ವಿದ್ಯಾರ್ಥಿಗಳ ಸಂಖ್ಯೆ

ವರ್ಷ	ಪ್ರೌಢ ಶಾಲೆ			ಪದವಿ ಪೂರ್ವ		
	ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರು	ಮೊಗವೀರ ವಿದ್ಯಾರ್ಥಿನಿಯರು	ಶೇಕಡಾ ಮೊಗವೀರ ವಿದ್ಯಾರ್ಥಿನಿಯರು	ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರು	ಮೊಗವೀರ ವಿದ್ಯಾರ್ಥಿನಿಯರು	ಶೇಕಡಾ ಮೊಗವೀರ ವಿದ್ಯಾರ್ಥಿನಿಯರು
೨೦೧೩-೧೪	೨೫೨೮೫	೧೨೩೩	೪.೯೦	೧೫೩೮೧	೭೫೩	೪.೮೯
೨೦೧೪-೧೫	೧೭೨೦೫	೧೧೯೦	೬.೯೦	೧೫೭೩೫	೭೪೬	೪.೭೪
೨೦೧೫-೧೬	೧೬೭೧೪	೧೦೫೫	೬.೩೦	೧೩೫೬೪	೭೪೦	೫.೪೫
೨೦೧೬-೧೭	೧೫೩೧೮	೧೦೨೨	೬.೭	೧೨೪೫೬	೭೩೭	೫.೯೧
೨೦೧೭-೧೮	೧೫೧೧೦	೧೦೧೪	೬.೮	೧೧೫೩೭	೭೨೪	೬.೨೭
ಒಟ್ಟು	೮೯೬೩೨	೫೫೧೪	೬.೨	೬೮೬೭೩	೩೭೦೦	೫.೩೮

ವರ್ಷ	ಪದವಿ		
	ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರು	ಮೊಗವೀರ ವಿದ್ಯಾರ್ಥಿನಿಯರು	ಶೇಕಡಾ ಮೊಗವೀರ ವಿದ್ಯಾರ್ಥಿನಿಯರು
೨೦೧೩-೧೪	೧೪೯೦೩	೪೦೮	೩.೭೪
೨೦೧೪-೧೫	೧೦೪೬೨	೩೭೭	೩.೬೦
೨೦೧೫-೧೬	೧೬೭೧೪	೪೮೩	೪.೮೯
೨೦೧೬-೧೭	೧೫೩೧೮	೩೪೫	೩.೬೩
೨೦೧೭-೧೮	೧೫೧೧೦	೩೫೩	೩.೭೯
ಒಟ್ಟು	೮೯೬೩೨	೧೯೬೬	೩.೯೨

ಮೂಲಗಳು: ೧. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಡುಪಿ ಉತ್ತರ ಹಾಗೂ ದಕ್ಷಿಣ ವಲಯ, ಕುಂದಾಪುರ, ಕಾರ್ಕಳ, ಬೈಂದೂರು ವಲಯ.

೨. ಉಪ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಉಡುಪಿ.

೩. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಚೇರಿ, ಮಂಗಳೂರು

೪. ಉಡುಪಿ ಜಿಲ್ಲಾ ಅಂಕಿ ಸಂಖೆಗಳ ಪಕ್ಷಿನೋಟ ೨೦೧೩-೧೪ ರಿಂದ ೨೦೧೭-೧೮.

ಕೋಷ್ಟಕ ೫.೫.ರಲ್ಲಿ ೨೦೧೩-೧೪ರ ಸಾಲಿನಿಂದ ೨೦೧೭-೧೮ರ ಸಾಲಿನವರೆಗಿನ ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಹಂತದಲ್ಲಿ ಮೊಗವೀರ ವಿದ್ಯಾರ್ಥಿನಿಯರ ದಾಖಲೆಯ ವಿವರಗಳನ್ನು ನೀಡಲಾಗಿದೆ. ಈ ಮಾಹಿತಿಯನ್ನು ಗಮನಿಸಿದಾಗ ೨೦೧೭-೧೮ರ ಸಾಲಿನಲ್ಲಿ ಪ್ರೌಢಶಾಲಾ ವಿಭಾಗದಲ್ಲಿ ೧೦೧೪ರಷ್ಟು, ಪದವಿಪೂರ್ವ ಹಂತದಲ್ಲಿ ೭೨೪ರಷ್ಟು ಹಾಗೂ ಪದವಿ ಹಂತದಲ್ಲಿ ೩೫೩ರಷ್ಟು ಮೊಗವೀರ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಈ ಮಾಹಿತಿಯನ್ನು ವಿಶ್ಲೇಷಿಸಿದಾಗ ಮೊಗವೀರ ವಿದ್ಯಾರ್ಥಿನಿಯರ ದಾಖಲಾತಿಯು ಪ್ರೌಢಶಾಲಾ ವಿಭಾಗದಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರ ದಾಖಲಾತಿಯ ಸರಾಸರಿ ಶೇಕಡಾ ೬.೨ರಷ್ಟಿದ್ದು, ಪದವಿಪೂರ್ವ ಹಂತದಲ್ಲಿ ಸರಾಸರಿ ಶೇಕಡಾ ೫.೩೮ರಷ್ಟಿದೆ ಹಾಗೂ ಪದವಿ ವಿಭಾಗದಲ್ಲಿ ಸರಾಸರಿ ಶೇಕಡಾ ೩.೯೨ರಷ್ಟಿದೆ. ಈ ಎಲ್ಲಾ ಮಾಹಿತಿಗಳನ್ನು ಸಮಗ್ರವಾಗಿ ವಿಶ್ಲೇಷಿಸಿದಾಗ ಉಡುಪಿ ಜಿಲ್ಲೆಯಲ್ಲಿ ಒಟ್ಟು ಮಹಿಳೆಯರ ಸಂಖ್ಯೆ ೬೧೫೨೩೦ರಷ್ಟಿದ್ದು, ಅದರಲ್ಲಿ ೩೪೯೮ರಷ್ಟು ಮೊಗವೀರ ಮಹಿಳೆಯರಿದ್ದಾರೆ. ಈ ಮಾಹಿತಿಯ ಆಧಾರದಲ್ಲಿ ಗಮನಿಸುವಾಗ ಒಟ್ಟು ಸಂಖ್ಯೆ ೨೧೦೫ರಷ್ಟು ಸಂಖ್ಯೆಯ ಮೊಗವೀರ ವಿದ್ಯಾರ್ಥಿನಿಯರು ೨೦೧೭-೧೮ರ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವುದರಿಂದ ಈ ಜಿಲ್ಲೆಯಲ್ಲಿ ಮೊಗವೀರ ಮಹಿಳೆಯರ ಶಿಕ್ಷಣದ ಪ್ರಮಾಣ ತೃಪ್ತಿಕರವಾಗಿ ಕಂಡುಬರುತ್ತಿದೆ.

ಶಿಕ್ಷಣದ ಪ್ರಮಾಣದಲ್ಲಿ ಉಡುಪಿ ಜಿಲ್ಲೆಯು ಕರ್ನಾಟಕ ರಾಜ್ಯದಲ್ಲಿ ಮುಂಚೂಣಿಯಲ್ಲಿದೆ. ಕಳೆದ ಹತ್ತು ವರ್ಷಗಳಲ್ಲಿ ಪ್ರೌಢ ಶಿಕ್ಷಣ(ಎಸ್.ಎಸ್.ಎಲ್.ಸಿ) ಹಾಗೂ ಪದವಿ ಪೂರ್ವ ಶಿಕ್ಷಣದ (ಪಿಯುಸಿ)

ಫಲಿತಾಂಶದಲ್ಲಿ ಈ ಜಿಲ್ಲೆಯ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ. ಸರಾಸರಿ ಫಲಿತಾಂಶದಲ್ಲಿ ರಾಜ್ಯದ ಜಿಲ್ಲೆಗಳಲ್ಲಿ ಮೊದಲ ಉತ್ತಮ ಫಲಿತಾಂಶದ ಎರಡು ಸ್ಥಾನಗಳಲ್ಲಿ ಒಂದನ್ನು ಈ ಜಿಲ್ಲೆ ಪಡೆಯುತ್ತಾ ಬಂದಿದೆ. ಮಹಿಳಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಪುರುಷ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿದ್ದು ಮೊಗವೀರ ಮಹಿಳಾ ಶಿಕ್ಷಣವೂ ಕೂಡಾ ಇತರ ಜಿಲ್ಲೆಗಳಿಗೆ ಹೋಲಿಸಿದಾಗ ತೃಪ್ತಿಕರವಾಗಿ ಕಂಡು ಬರುತ್ತದೆ.

ಕೋಷ್ಟಕ ೫.೬ ಶೈಕ್ಷಣಿಕ ಸಬಲೀಕರಣಕ್ಕೆ ಸಂಬಂಧಿಸಿದಂತೆ ಮಾಹಿತಿದಾರರ ಅಭಿಪ್ರಾಯ

ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದ ಅಂಶ	ಹೌದು		ಇಲ್ಲ		ಒಟ್ಟು ಮಾಹಿತಿ ದಾರರು
	ಮಾಹಿತಿದಾರರ ಸಂಖ್ಯೆ	ಶೇಕಡಾ	ಮಾಹಿತಿದಾರರ ಸಂಖ್ಯೆ	ಶೇಕಡಾ	
ಶಿಕ್ಷಣ ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರುತ್ತದೆ	೫೯೨	೭೪	೨೦೮	೨೬	೮೦೦
ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅಗತ್ಯತೆ ಇದೆ	೪೪೦	೫೫	೩೬೦	೪೫	೮೦೦
ಹಿರಿಯ ತಲೆಮಾರಿನ ಸ್ತ್ರೀಯರು ಸುಶಿಕ್ಷಿತರು	೧೫೦	೧೮.೭೫	೬೫೦	೮೧.೨೫	೮೦೦

ಮೂಲ: ಪ್ರಾಥಮಿಕ ದತ್ತಾಂಶ

ಮೇಲಿನ ಕೋಷ್ಟಕ ೫.೬ರ ಪ್ರಶ್ನೆ ಒಂದರಲ್ಲಿ ಕೇಳಲಾದ ಶಿಕ್ಷಣವು ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರಿದೆಯೇ ಎಂಬ ಪ್ರಶ್ನೆಗೆ ಶೇಕಡಾ ೭೪ರಷ್ಟು ಮಾಹಿತಿದಾರರು ಅವರ ಸಾಮಾಜಿಕ ಜೀವನದ ಮೇಲೆ ಶಿಕ್ಷಣ ಪ್ರಭಾವ ಬೀರಿರುವುದಾಗಿಯೂ, ಶೇಕಡಾ ೨೬ರಷ್ಟು ಮಾಹಿತಿದಾರರು ಶಿಕ್ಷಣದಿಂದಾಗಿ ತಮ್ಮ ಸಾಮಾಜಿಕ ಜೀವನದಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಸಮೀಕ್ಷೆಯಲ್ಲಿ ಗಮನಿಸಿದಂತೆ ಮನೆಯಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು. ಮಕ್ಕಳ ಶಿಕ್ಷಣದ ಬಗ್ಗೆ ಚಿಂತಿಸುವುದು ಮತ್ತು ಆರ್ಥಿಕ ಮೂಲವನ್ನು ರೂಢಿಸಿಕೊಳ್ಳುವುದು, ಸಭೆ ಸಮಾರಂಭಗಳಲ್ಲಿ ಪಾಲ್ಗೊಳ್ಳುವುದು, ಸ್ವ-ಸಹಾಯ, ಸ್ತ್ರೀ ಶಕ್ತಿ, ಪ್ರಾಥಮಿಕ ಮೀನುಗಾರರ ಸಹಕಾರಿ ಸಂಘಗಳಲ್ಲಿ ಅಧ್ಯಕ್ಷ ಸ್ಥಾನವನ್ನು ಪಡೆಯಲು, ಇತ್ಯಾದಿಗಳಲ್ಲಿ ಶಿಕ್ಷಿತ ಮಹಿಳೆಯರು ತಮ್ಮ ಸ್ವಂತಿಕೆಯನ್ನು ಬಳಸಿಕೊಳ್ಳುತ್ತಿರುವುದು ಕಂಡು ಬರುತ್ತದೆ. ಶಿಕ್ಷಿತ ಮೊಗವೀರ ಮಹಿಳೆಯರು ತಮಗೆ ಸಿಕ್ಕ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು ಸಾಮಾಜಿಕವಾಗಿ ಸಬಲೀಕರಣಗೊಂಡಿರುವುದು ಸಮೀಕ್ಷೆಯಲ್ಲಿ ಕಂಡು ಬರುತ್ತದೆ.

ನಂತರದಲ್ಲಿ ಕೇಳಲಾದ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಅಗತ್ಯವೇ ಎಂಬ ಪ್ರಶ್ನೆಗೆ ಶೇಕಡಾ ೫೫ರಷ್ಟು ಮಾಹಿತಿದಾರರು ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅವಶ್ಯಕತೆ ಇದೆ ಎಂಬುದಾಗಿಯೂ, ಶೇಕಡಾ ೪೫ರಷ್ಟು ಮಾಹಿತಿದಾರರು ಉನ್ನತ ಶಿಕ್ಷಣದ ಅವಶ್ಯಕತೆ ಇಲ್ಲ ಎಂಬುದಾಗಿ

ಉತ್ತರಿಸಿರುತ್ತಾರೆ. ಉಡುಪಿ ಜಿಲ್ಲೆಯ ಶೇಕಡಾ ೨೦ರಷ್ಟು ಮಾಹಿತಿದಾರರು ತಮ್ಮ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದಿಂದಾಗಿಯೇ ಉತ್ತಮ ನೆಂಟಸ್ತಿಕೆ ದೊರೆತ್ತಿರುವುದಾಗಿ ತಿಳಿಸಿರುತ್ತಾರೆ, ಶೇಕಡಾ ೨೫ರಷ್ಟು ಮಾಹಿತಿದಾರರು ಉದ್ಯೋಗಕ್ಕಾಗಿ, ಶೇಕಡಾ ೧೦ರಷ್ಟು ಮಾಹಿತಿದಾರರು ಉನ್ನತ ಶಿಕ್ಷಣದಿಂದಾಗಿ ಸಾಮಾಜಿಕ ಪ್ರತಿಷ್ಠೆ ಹೆಚ್ಚಿರುವುದಾಗಿ ತಿಳಿಸಿರುತ್ತಾರೆ.

ಸ್ಮಿತಾ ಸುರೇಬಾನಕರ, (೨೦೦೯), ರವರ ಅಧ್ಯಯನವು ತಿಳಿಸಿರುವಂತೆ, ಒಂದು ನಾಡಿನ ಸಂಸ್ಕೃತಿಯ ಮಾನದಂಡವು ಆ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಇದ್ದ ಸ್ಥಾನಮಾನವನ್ನು ಅವಲಂಬಿಸಿರುವುದಾಗಿದೆ. ಹಿಂದೆ ಶಾಲೆ ಕಾಲೇಜುಗಳ ಮುಖ ಕಾಣದ ಮೊಗವೀರರ ಸಮುದಾಯದ ಹೆಣ್ಣು ಮಕ್ಕಳು ಬುಟ್ಟಿ ಹೆಣೆಯುವ, ಬರೀ ಮೀನು ಹೊತ್ತು ಊರುಗಳಲ್ಲಿ ಮಾರಿ ಬರುವ ಕೆಲಸ ಮಾಡುತ್ತಿದ್ದವರು. ಋತುಮತಿಯಾದ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತಿದ್ದರು. ಈಗಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಪ್ರಯತ್ನವನ್ನು ಈ ಸಮುದಾಯ ಮಾಡುತ್ತಿದೆ. ಆಧುನಿಕತೆಯ ಗಾಳಿಯಿಂದ ಮೊಗವೀರರು ಗ್ರಾಮಗಳಲ್ಲಿ, ಅರೆ ನಗರಗಳಲ್ಲಿ ವಾಸವಾಗಿದ್ದು, ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅರಿವನ್ನು ಮೂಡಿಸುವ ಪ್ರಯತ್ನದಲ್ಲಿದ್ದಾರೆ. ಮಾಹಿತಿದಾರರಲ್ಲಿ ಅರ್ಧಕ್ಕಿಂತ ಹೆಚ್ಚಿನವರು ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯನ್ನು ಒಪ್ಪಿಕೊಂಡಿದ್ದಾರೆ. ಸರಳ, ಸಾಮಾನ್ಯವಾದ ಜೀವನವನ್ನು ನಡೆಸುವ ಈ ಸಮುದಾಯವು ತಮ್ಮ ಹೆಣ್ಣು ಮಕ್ಕಳು ಆರ್ಥಿಕವಾಗಿ ಸಬಲರಾಗಲು ಶಿಕ್ಷಣವೇ ಮುಖ್ಯ ಮಾರ್ಗ ಎಂಬ ಸತ್ಯವನ್ನು ತಿಳಿದುಕೊಂಡಿದ್ದಾರೆ.

ಉಡುಪಿ ಜಿಲ್ಲೆಯ ಮೊಗವೀರ ಮಹಿಳಾ ಮಾಹಿತಿದಾರರು ತಮ್ಮ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಅಗತ್ಯತೆ ಇಲ್ಲ ಎನ್ನುವುದಕ್ಕೆ ಕೊಡುವ ಕಾರಣಗಳು ಈ ರೀತಿ ಇವೆ; ಶೇಕಡಾ ೫ರಷ್ಟು ಮಾಹಿತಿದಾರರು ಉನ್ನತ ಶಿಕ್ಷಣವು ಖರ್ಚಿಗೆ ದಾರಿಯಾಗುವುದಾಗಿ, ಶೇಕಡಾ ೧೫ರಷ್ಟು ಮಾಹಿತಿದಾರರು ಹೆಣ್ಣು ಮಕ್ಕಳು ಮದುವೆಯಾಗಿ ಗಂಡನ ಮನೆ ಸೇರುವವಳು ಎಂಬ ಧೋರಣೆಯಿಂದಾಗಿ, ಶೇಕಡಾ ೧೫ರಷ್ಟು ಮಂದಿ ಮಾಹಿತಿದಾರರು ಹೆಣ್ಣು ಮಕ್ಕಳ ಶಿಕ್ಷಣವು ಯಾವಾಗಲೂ ಗಂಡು ಮಕ್ಕಳ ಶಿಕ್ಷಣಕ್ಕಿಂತ ಜಾಸ್ತಿ ಇರಬಾರದು ಎಂಬ ಕಾರಣಕ್ಕಾಗಿ, ಹಾಗೆಯೇ ಶೇಕಡಾ ೧೦ರಷ್ಟು ಮಹಿಳೆಯರು ಉನ್ನತ ಶಿಕ್ಷಣ ಪಡೆದಂತಹ ಮಹಿಳೆಯರು ಕುಲಕಸುಬಾಗಿರುವ ಮೀನುಗಾರಿಕಾ ವೃತ್ತಿಯನ್ನು ಅವಲಂಬಿಸುವುದಿಲ್ಲವಾದ್ದರಿಂದ ನಂತರ ತಮ್ಮ ವ್ಯಾಪಾರ ನೋಡಿಕೊಳ್ಳಲು ಕಷ್ಟವಾಗುತ್ತದೆ ಎಂಬ ಕಾರಣಕ್ಕಾಗಿ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅವಶ್ಯಕತೆ ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಕವಿತಾ ರೈ.ಬಿ.ಆರ್(೨೦೧೧)ಅವರ ಅಧ್ಯಯನದಲ್ಲಿ ಹೆಚ್ಚಿನ ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ, ವೃತ್ತಿಪರ ಶಿಕ್ಷಣ, ವೃತ್ತಿ ಕೌಶಲ ಶಿಕ್ಷಣವನ್ನು ನೀಡುವುದರ ಬಗ್ಗೆ ಒಪ್ಪಿಗೆ ಇರುವುದಿಲ್ಲ. ಹಾಗೆಯೇ ಹೆಣ್ಣು ಮತ್ತು ಗಂಡು ಮಕ್ಕಳಿಗೆ ನೀಡುವ ಶಿಕ್ಷಣದ ಮೂಲಭೂತ ವ್ಯತ್ಯಾಸವನ್ನು

ಕುಟುಂಬವೇ ಮಾಡುತ್ತದೆ ಎಂದಿದ್ದಾರೆ. ಈ ವಿಚಾರವು ಉಡುಪಿ ಜಿಲ್ಲೆಯ ಮೊಗವೀರ ಸಮುದಾಯದಲ್ಲೂ ಸ್ವಲ್ಪ ಮಟ್ಟಿನ ಆಗತ್ರವನ್ನು ಹೊಂದಿರುವುದು ಗೋಚರಿಸುತ್ತದೆ.

ಹಿಂದಿನ ತಲೆಮಾರಿನ ಶೈಕ್ಷಣಿಕ ವಿವರಗಳ ಬಗ್ಗೆ ಕೇಳಲಾಗಿ, ಕೇವಲ ಶೇಕಡಾ ೧೮.೭೫ ರಷ್ಟು ಮಾಹಿತಿದಾರರು ತಮ್ಮ ಹಿರಿಯ ತಲೆಮಾರಿನವರು ಸುಶಿಕ್ಷಿತರಾಗಿರುವುದಾಗಿ, ಶೇಕಡಾ ೮೧.೨೫ ರಷ್ಟು ಮಾಹಿತಿದಾರರು ಅವಿದ್ಯಾವಂತರಾಗಿರುವುದಾಗಿಯೂ ತಿಳಿಸಿರುತ್ತಾರೆ. ಮಾಹಿತಿದಾರರಿಗೂ ಹಾಗೂ ಮಾಹಿತಿದಾರರ ಹಿರಿಯ ತಲೆಮಾರಿನವರ ಶೈಕ್ಷಣಿಕ ಮಟ್ಟವನ್ನು ಗಮನಿಸಿದಾಗ ಯುವ ತಲೆಮಾರಿನವರಲ್ಲಿ ೬೬.೨೫ ರಷ್ಟು ಮಾಹಿತಿದಾರರು ಹೆಚ್ಚಳವಾಗಿರುವುದು ಕಂಡುಬಂದಿದ್ದು, ಇದು ಮಹಿಳೆಯರ ಶೈಕ್ಷಣಿಕ ಸಬಲೀಕರಣಕ್ಕೆ ಸಾಕ್ಷಿ. ಮಾಹಿತಿದಾರರಲ್ಲಿ ಕಂಡು ಬರುವ ಪದವಿ ಶಿಕ್ಷಣವನ್ನು ಪಡೆದಿರುವ ಯುವ ಮಹಿಳೆಯರು ಈ ಕುಟುಂಬದ ಮೊದಲ ತಲೆಮಾರಿನ ಸುಶಿಕ್ಷಿತರು ಎಂಬುದು ಗಮನಾರ್ಹ ಅಂಶವಾಗಿದೆ.

ಮೊಗವೀರ ಮಹಿಳೆಯರಲ್ಲಿ ತಮ್ಮ ಸಾಮಾಜಿಕ ಸ್ಥಾನಮಾನವನ್ನು ಉತ್ತಮಗೊಳಿಸುವ ಹಂಬಲವಿದ್ದು, ಅದನ್ನು ಶಿಕ್ಷಣದ ಮೂಲಕ ಸಾಧಿಸಲು ಸಾಧ್ಯ ಎಂಬ ಅಭಿಪ್ರಾಯ ಹೊಂದಿದ್ದಾರೆ. ತಮ್ಮ ಕಷ್ಟಗಳನ್ನು ಬದಿಗಿಟ್ಟು ಶಿಕ್ಷಣದ ಅವಕಾಶವನ್ನು ತಮ್ಮ ಮಕ್ಕಳಿಗೆ ಒದಗಿಸಿ ಕೊಡಲು ಎಲ್ಲ ಯುವ ಮಹಿಳೆಯರು ಆಸಕ್ತಿ ತೋರಿರುವುದು ಕಂಡು ಬರುತ್ತದೆ. ಮೊದಲ ತಲೆಮಾರಿನ ಪದವೀಧರರನ್ನು ಹೊಂದಿರುವ ಕುಟುಂಬಗಳಲ್ಲಿ ಮುಂದಿನ ತಲೆಮಾರುಗಳು ಶಿಕ್ಷಿತರಾಗಿ ಉನ್ನತ ಶಿಕ್ಷಣವನ್ನು ಪಡೆಯುವ ಸಾಧ್ಯತೆ ಗೋಚರಿಸುತ್ತದೆ.

ಕೋಷ್ಟಕ ೫.೭ ಶಿಕ್ಷಣದಿಂದಾಗಿ ಮಾಹಿತಿದಾರರ ಮೇಲಾಗಿರುವ ಧನಾತ್ಮಕ ಪ್ರಭಾವಗಳು

ಶಿಕ್ಷಣದಿಂದಾದ ಬದಲಾವಣೆಗಳು	ಸಂಖ್ಯೆ	ಶೇಕಡಾ
ಸರಕಾರಿ ಉದ್ಯೋಗ ದೊರಕಿರುವುದು	೪೦	೫
ಉತ್ತಮ ಸ್ಥಾನಮಾನ	೨೦೦	೨೫
ಸಂಪರ್ಕದಲ್ಲಿ ಹೆಚ್ಚಳ	೯೬	೧೨
ಉತ್ತಮ ವ್ಯವಹಾರ ಜ್ಞಾನ	೨೫೬	೩೨
ಯಾವುದೇ ಪ್ರಯೋಜನವಾಗಿಲ್ಲದೇ ಇರುವವರು	೨೦೮	೨೬
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ಶೇಕಡಾ ೫ರಷ್ಟು ಮಾಹಿತಿದಾರರು ಶಿಕ್ಷಣದಿಂದಾಗಿ ಸರಕಾರಿ ಉದ್ಯೋಗ ಪ್ರಯೋಜನ ಪಡೆದಿರುವುದಾಗಿ, ಶೇಕಡಾ ೨೫ರಷ್ಟು ಮಾಹಿತಿದಾರರು ತಾವು ಪಡೆದ ಶಿಕ್ಷಣದಿಂದಾಗಿ ಸಮುದಾಯದ ಸಂಘಟನೆಗಳಲ್ಲಿ, ಕುಟುಂಬದ ಕಾರ್ಯಕ್ರಮಗಳಲ್ಲಿ ತಮ್ಮ ನಿರ್ಧಾರಕ್ಕೆ ಬೆಲೆ ಸಿಕ್ಕಿರುವುದರ ಮೂಲಕ ಉತ್ತಮ ಸ್ಥಾನಮಾನ ಲಭಿಸಿರುವುದಾಗಿ, ಶೇಕಡಾ ೧೨ರಷ್ಟು ಮಾಹಿತಿದಾರರು ಶಿಕ್ಷಣದಿಂದಾಗಿ ಅನೇಕ ಸಂಘಟನೆಗಳಲ್ಲಿ ಸದಸ್ಯತ್ವ ಪಡೆದು ಸಾರ್ವಜನಿಕ ಸಂಪರ್ಕದಲ್ಲಿ ಹೆಚ್ಚಳವಾಗಿರುವುದಾಗಿ, ಹಾಗೆಯೇ ಶೇಕಡಾ ೩೨ರಷ್ಟು ಮಾಹಿತಿದಾರರು ಉತ್ತಮ ವ್ಯವಹಾರ ಜ್ಞಾನವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ

೨೬ರಷ್ಟು ಮಾಹಿತಿದಾರರು ಶಿಕ್ಷಣದಿಂದಾಗಿ ಸಾಮಾಜಿಕ ಜೀವನದಲ್ಲಿ ಯಾವುದೇ ಬದಲಾವಣೆಗಳಾಗಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಈ ಎಲ್ಲಾ ಮಾಹಿತಿದಾರ ಮಹಿಳೆಯರಲ್ಲಿ ಶಿಕ್ಷಣ ಅವರ ಜೀವನದಲ್ಲಿ ಧನಾತ್ಮಕ ಪರಿಣಾಮ ಬೀರಬಲ್ಲದೆಂಬುದರ ಅರಿವಿದೆ.

ಕೋಷ್ಟಕ ೫.೮ ಮಾಹಿತಿದಾರರ ಕುಟುಂಬದ ವಿಧಗಳು

ವಯಸ್ಸು	ಸಂಖ್ಯೆ	ಶೇಕಡಾ
ವಿಭಕ್ತ	೭೨೮	೯೧
ಅವಿಭಕ್ತ	೭೨	೯
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರ ಮೊಗವೀರ ಸಮುದಾಯದಲ್ಲಿ ಶೇಕಡಾ ೯೧ರಷ್ಟು ಮಾಹಿತಿದಾರರು ವಿಭಕ್ತ ಕುಟುಂಬವನ್ನು ಹಾಗೂ ಶೇಕಡಾ ೯ರಷ್ಟು ಅವಿಭಕ್ತ ಕುಟುಂಬವನ್ನು ಹೊಂದಿದವರಾಗಿರುತ್ತಾರೆ. ಇವರಲ್ಲಿ ಶೇಕಡಾ ೨೦ರಷ್ಟು ಮಾಹಿತಿದಾರರು, ಐದಕ್ಕಿಂತ ಮೇಲ್ಪಟ್ಟು ಮಕ್ಕಳನ್ನು ಹೊಂದಿರುವವರಾಗಿದ್ದು, ಶೇಕಡಾ ೫೦ರಷ್ಟು ಮಾಹಿತಿದಾರರು ನಾಲ್ಕು ಮಕ್ಕಳನ್ನು ಹೊಂದಿದವರಾಗಿದ್ದಾರೆ. ಶೇಕಡಾ ೧೪ರಷ್ಟು ಮಾಹಿತಿದಾರರು ಎರಡು ಮಕ್ಕಳನ್ನು ಹೊಂದಿದವರಾಗಿದ್ದು, ಉಳಿದ ಶೇಕಡಾ ೭ರಷ್ಟು ಮಾಹಿತಿದಾರರು ಕೇವಲ ಒಂದು ಮಗುವನ್ನು ಹೊಂದಿದವರಾಗಿರುವುದಾಗಿ ತಿಳಿಸಿದ್ದು, ಇದರಲ್ಲಿ ಅವಿವಾಹಿತರಾಗಿರುವ ಶೇಕಡಾ ೪ರಷ್ಟು ಮಾಹಿತಿದಾರರಲ್ಲಿ ೧.೫ರಷ್ಟು ಮಾಹಿತಿದಾರರು ಐದರಿಂದ ಎಂಟರೊಳಗಿನ ಮಕ್ಕಳನ್ನು ಹೊಂದಿದ ಕುಟುಂಬಕ್ಕೆ ಸೇರಿದವರಾಗಿದ್ದಾರೆ ಹಾಗೂ ಅದರಲ್ಲಿ ಉಳಿದ ೨.೫ರಷ್ಟು ಮಾಹಿತಿದಾರರು ನಾಲ್ಕರೊಳಗಿನ ಮಕ್ಕಳನ್ನು ಹೊಂದಿದ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಮಕ್ಕಳನ್ನು ಹೊಂದಿಲ್ಲದೇ ಇರುವ ಶೇಕಡಾ ೪ರಷ್ಟು ಮಾಹಿತಿದಾರರಲ್ಲಿ ಶೇಕಡಾ ೧ರಷ್ಟು ಮಾಹಿತಿದಾರರು ಐದರಿಂದ ಎಂಟರೊಳಗಿನ ಮಕ್ಕಳನ್ನು ಹೊಂದಿದ ಕುಟುಂಬದ ಸದಸ್ಯರಾಗಿದ್ದು, ೧.೫ರಷ್ಟು ಮಾಹಿತಿದಾರರು ಎರಡು ಮಕ್ಕಳನ್ನು ಹೊಂದಿದ್ದು, ಉಳಿದ ೧.೫ರಷ್ಟು ಮಾಹಿತಿದಾರರು ಒಂದು ಮಗುವನ್ನು ಹೊಂದಿರುವ ಕುಟುಂಬಕ್ಕೆ ಸೇರಿರುವುದಾಗಿ ತಿಳಿಸಿರುತ್ತಾರೆ.

ಇಂದು ಕುಟುಂಬಗಳು ಹಲವಾರು ಬಗೆಯ ಪರಿವರ್ತನೆಗಳಿಗೆ ಒಳಗಾಗಿವೆ. ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕೇಂದ್ರಿತ ಕುಟುಂಬಗಳಾಗಿವೆ. ಇದಕ್ಕೆ ಮುಖ್ಯ ಕಾರಣ ಕೈಗಾರೀಕರಣ, ನಗರೀಕರಣ, ಜಾಗತೀಕರಣ ಹಾಗೂ ಬದಲಾಗುತ್ತಿರುವ ವಿವಾಹ ಕ್ರಮಗಳು, ದುಬಾರಿ ಖರ್ಚುಗಳು, ಸ್ತ್ರೀ ಸ್ವಾತಂತ್ರ್ಯ ಮುಂತಾದವುಗಳಾಗಿವೆ. ಈ ನಿಟ್ಟಿನಲ್ಲಿ ಮೊಗವೀರ ಕುಟುಂಬಗಳು ಹಿಂದಿನಿಂದಲೂ ಅವಿಭಕ್ತ ಕುಟುಂಬಗಳಾಗಿದ್ದು, ಹೆಚ್ಚಿನ ಸದಸ್ಯರು ಒಟ್ಟಾಗಿ ವಾಸ ಮಾಡುತ್ತಿದ್ದರು. ತಮ್ಮ ವೃತ್ತಿ ಜೀವನಕ್ಕಾಗಿ ವಲಸೆ ಹೋದರೆ, ಕೆಲಸದ ನಂತರ ಮೂಲ ಸ್ಥಳಕ್ಕೆ ವಾಪಸ್ಸು ಬರುವ ರೂಢಿ ಮೊಗವೀರರಲ್ಲಿತ್ತು. ಈಗ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಇತ್ತೀಚೆಗೆ ಮೊಗವೀರ

ಕುಟುಂಬಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ ಎಂಬುದು ಈ ಸಂಶೋಧನೆಯಿಂದ ತಿಳಿದುಬರುತ್ತದೆ.

ಕೋಷ್ಟಕ ೫.೯ ಮಾಹಿತಿದಾರರ ವೈವಾಹಿಕ ವಿವರಗಳು

ವೈವಾಹಿಕ ವಿವರಗಳು	ಸಂಖ್ಯೆ	ಶೇಕಡಾ
ವಿವಾಹಿತೆ	೭೦೪	೮೮
ಅವಿವಾಹಿತೆ	೩೨	೪
ವಿಧವೆ	೬೪	೮
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಮೇಲಿನ ಕೋಷ್ಟಕದ ಪ್ರಕಾರ ಉಡುಪಿ ಜಿಲ್ಲೆಯ ಮೊಗವೀರ ಮಹಿಳಾ ಮಾಹಿತಿದಾರರಲ್ಲಿ ಶೇಕಡಾ ೮೮ರಷ್ಟು ಮಾಹಿತಿದಾರರು ವಿವಾಹಿತರಾಗಿರುವುದಾಗಿ, ಶೇಕಡಾ ೪ರಷ್ಟು ಮಾಹಿತಿದಾರರು ಅವಿವಾಹಿತೆಯರಾಗಿರುವುದಾಗಿ, ಉಳಿದ ಶೇಕಡಾ ೮ರಷ್ಟು ಮಾಹಿತಿದಾರರು ವಿಧವೆಯರಾಗಿದ್ದಾರೆ.

ವಿವಾಹವು ವ್ಯಕ್ತಿಯನ್ನು ಕುಟುಂಬದ ಒಬ್ಬ ಜವಾಬ್ದಾರಿಯುತ ಸದಸ್ಯರನ್ನಾಗಿ ಮಾಡುತ್ತದೆ ಎಂಬುದು ಈ ಸಮುದಾಯದ ನಂಬಿಕೆಯಾಗಿದೆ. ಅಲ್ಲದೆ ಮೊಗವೀರ ಸಮುದಾಯದಲ್ಲಿ ವಿವಾಹವು ಬಹುತೇಕ ಕಡ್ಡಾಯವಾಗಿದ್ದು, ಅವಿವಾಹಿತರಾಗಿ ಉಳಿಯುವುದು ಈ ಸಮುದಾಯದಲ್ಲಿ ಅವಮಾನಕರವಾಗಿದೆ. ವಿವಾಹಿತರನ್ನು ಪರಿಪೂರ್ಣರು ಮತ್ತು ಅವಿವಾಹಿತರನ್ನು ಪರಿಪೂರ್ಣರಲ್ಲ ಎಂದು ನಂಬಲಾಗಿದ್ದು, ಸಾಮಾಜಿಕ ಗೌರವ-ಮನ್ನಣೆಗಳು ದೊರಕುವುದಿಲ್ಲ. ಸಾವಿನ ನಂತರ ಮೋಕ್ಷ ಸಿಗದೆ ಅಲೆಯುತ್ತಾರೆ ಎಂಬ ನಂಬಿಕೆ ಈ ಸಮುದಾಯದಲ್ಲಿದೆ. ವಿವಾಹದ ಸಂದರ್ಭದಲ್ಲಿ ಬಳಿ ಪದ್ಧತಿಗಳನ್ನು ಅನುಸರಿಸುವುದು ಮೊಗವೀರ ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸಾಮಾಜಿಕವಾಗಿ ಬಹಳಷ್ಟು ಬದಲಾವಣೆಗಳಿದ್ದರೂ ವಿವಾಹಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲಿ ಪುರುಷರಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ.

ಕೋಷ್ಟಕ ೫.೧೦ ಮಾಹಿತಿದಾರರ ವಿವಾಹದ ರೀತಿ

ವಿವಾಹದ ರೀತಿ	ಸಂಖ್ಯೆ	ಶೇಕಡಾ
ಪ್ರೇಮ ವಿವಾಹ	೧೫೬	೧೯.೫
ಅಂತರ್ ಜಾತಿ ವಿವಾಹ	೨೮	೩.೫
ಹಿರಿಯರು ವ್ಯವಸ್ಥೆ ಮಾಡಿದ ವಿವಾಹ	೫೮೪	೭೩
ಅನ್ವಯಿಸುವುದಿಲ್ಲ	೩೨	೪
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳಾ ಮಾಹಿತಿದಾರರಲ್ಲಿ ಶೇಕಡಾ ೧೯.೫ ರಷ್ಟು ಮಾಹಿತಿದಾರರು ಪ್ರೇಮ ವಿವಾಹವಾಗಿರುವುದಾಗಿಯೂ, ಶೇಕಡಾ ೩.೫ ರಷ್ಟು ಮಾಹಿತಿದಾರರು

ಅಂತರ್ ಜಾತಿ ವಿವಾಹವಾಗಿದ್ದು, ಶೇಕಡಾ ೭೩ ರಷ್ಟು ಮಾಹಿತಿದಾರರು ಹಿರಿಯರು ವ್ಯವಸ್ಥೆ ಮಾಡಿದ ವಿವಾಹ ಆಗಿರುವುದಾಗಿಯೂ, ಶೇಕಡಾ ೪ ರಷ್ಟು ಅವಿವಾಹಿತರಾಗಿರುವುದಾಗಿ ತಿಳಿಸಿರುತ್ತಾರೆ. ಪ್ರೇಮ ವಿವಾಹ ಹಾಗೂ ಅಂತರ್‌ಜಾತಿ ವಿವಾಹವಾದ ಮಹಿಳೆಯರೆಲ್ಲರೂ ಮನೆಯ ಹೊರಗಿನ ದುಡಿಮೆಯಲ್ಲಿ ನಿರತರಾಗಿವುದು ಅಂದರೆ ಉದ್ಯೋಗಸ್ಥರಾಗಿರುವವರಾಗಿದ್ದು, ಮದುವೆಯಾಗುವ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯ ಆರ್ಥಿಕ ಸಶಕ್ತತೆಯು ಪ್ರಭಾವ ಬೀರಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಈ ಮಾಹಿತಿದಾರರಲ್ಲಿ ಹೆಚ್ಚಿನ ಮಹಿಳೆಯರು ಸಂಪ್ರದಾಯವಾದಿಗಳಾಗಿದ್ದು ಹಿರಿಯರ ಆಯ್ಕೆಯನ್ನು ಒಪ್ಪಿಕೊಂಡು ವಿವಾಹವಾಗಿದ್ದಾರೆ. ಹೊಸ ತಲೆಮಾರಿನ ಯುವತಿಯರಲ್ಲಿ ತಾವೇ ವಿವಾಹ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂಬ ಅಪೇಕ್ಷೆ ಅಧಿಕವಾಗಿದ್ದು, ಪ್ರೇಮ ವಿವಾಹ ಹಾಗೂ ಅಂತರ್‌ಜಾತಿ ವಿವಾಹಗಳ ಕಡೆಗೆ ಹೆಚ್ಚು ಆಸಕ್ತಿ ಹೊಂದಿರುವುದನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ.

ಕೋಷ್ಟಕ ೫.೧೧ ವೈವಾಹಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿದಾರರ ಅಭಿಪ್ರಾಯ

ವೈವಾಹಿಕ ವಿಷಯ	ಹೌದು ಎಂಬ ಅಭಿಪ್ರಾಯ		ಇಲ್ಲ ಎಂಬ ಅಭಿಪ್ರಾಯ		ಅನ್ವಯಿಸುವುದಿಲ್ಲ		ಒಟ್ಟು	
	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.
ವಿವಾಹದಲ್ಲಿ ಬರಿ/ಬಳಿ/ಬೆಳಗು ಪ್ರಮುಖವಾಗಿದೆ	೫೮೪	೭೩	೧೮೪	೨೩	೩೨	೪	೮೦೦	೧೦೦
ವಿವಾಹದಲ್ಲಿ ವರದಕ್ಷಿಣೆಯ ಪಾತ್ರ ಇದೆ	೪೮೦	೬೦	೨೮೮	೩೬	೩೨	೪	೮೦೦	೧೦೦
ವಿಧವಾ ವಿವಾಹಕ್ಕೆ ಮೊಗವೀರ ಸಮುದಾಯದಲ್ಲಿ ಅವಕಾಶವಿದೆ	೧೯೨	೨೪	೮೦	೧೦	೫೨೮	೬೬	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೫.೧೧ರಲ್ಲಿ ವಿವಾಹದಲ್ಲಿ ಬರಿ/ಬಳಿಯ ಪ್ರಾಮುಖ್ಯತೆಯ ಬಗ್ಗೆ ಕೇಳಲಾದ ಪ್ರಶ್ನೆಗೆ ಶೇಕಡಾ ಶೇಕಡಾ ೭೩ರಷ್ಟು ಮಾಹಿತಿದಾರರು ವಿವಾಹ ಸಂದರ್ಭದಲ್ಲಿ ಬಳಿ ಪದ್ಧತಿಯ ನಿರ್ಣಯವನ್ನು ಪಾಲಿಸಿರುವುದಾಗಿ ತಿಳಿಸಿರುತ್ತಾರೆ. ಬಳಿ ಎಂದರೆ ಜಾತಿ ಒಳಗಿನ ಉಪಪಂಗಡ ಅಥವಾ ಒಂದೇ ತಲೆಮಾರಿನಿಂದ ಬಂದ ರಕ್ತ ಸಂಬಂಧಿಗಳು ಎಂದರ್ಥ. ಬಳಿ ಯಾ ಬರಿ ಒಬ್ಬ ವ್ಯಕ್ತಿಯ ತಾಯಿಯಿಂದ ಬರುತ್ತದೆ ಮತ್ತು ಬರಿ ವ್ಯವಸ್ಥೆಯಲ್ಲಿ ಮಾತೃ ಪ್ರಾಧಾನ್ಯತೆ ಎದ್ದು ಕಾಣುತ್ತದೆ. ಒಂದೇ ಬಳಿಯ ಗಂಡು ಹೆಣ್ಣು ವಿವಾಹವಾದರೆ ಅಣ್ಣ ತಂಗಿ ವಿವಾಹವಾದಂತೆ ಎಂಬ ನಂಬಿಕೆ ಈ ಸಮುದಾಯದಲ್ಲಿದೆ. ಆದ್ದರಿಂದ ಸಾಮಾನ್ಯವಾಗಿ ಉಡುಪಿ, ದಕ್ಷಿಣ ಕನ್ನಡದ ತುಳುವ ಸಮುದಾಯಗಳಲ್ಲಿ ಈ ಪದ್ಧತಿಯನ್ನು ಚಾಚೂ ತಪ್ಪದೇ ಪಾಲಿಸುತ್ತಾರೆ. ಮಾಹಿತಿದಾರರಲ್ಲಿ ಶೇಕಡಾ

೨೩ ಮಂದಿ ಇದನ್ನು ಪಾಲಿಸಿಲ್ಲ. ಕಾರಣ ಕೆಲವೊಮ್ಮೆ ಪ್ರೇಮ ವಿವಾಹ ಅಥವಾ ಹುಡುಗ-ಹುಡುಗಿಯ ಶೈಕ್ಷಣಿಕ ಹಾಗೂ ಔದ್ಯೋಗಿಕ ಮಟ್ಟದಲ್ಲಿ ಆಕರ್ಷಣೆ ಬಂದಾಗ ಇವುಗಳನ್ನು ಗೌಣವಾಗಿಸುವುದು ಈ ಸಮುದಾಯದಲ್ಲಿ ಇತ್ತೀಚಿನ ಕ್ರಮವಾಗಿದೆ. ಉಳಿದ ಶೇಕಡಾ ೪ರಷ್ಟು ಮಂದಿ ಅವಿವಾಹಿತರಾಗಿರುವ ಕಾರಣ ಅನ್ವಯಿಸುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ತುಳುನಾಡಿನ ಅತಿ ಪ್ರಾಚೀನ ಜನಾಂಗವಾದ ಮೊಗವೀರರು ವಂಶಾನುಕ್ರಮವಾಗಿ ಅನೇಕ ಬಳಿ/ಬೆಡಗುಗಳನ್ನು ಹೊಂದಿದ್ದಾರೆ. ಬಳಿ ಎಂದರೆ ಗೋತ್ರವೆಂದು ಅರ್ಥ. ತುಳುವಿನಲ್ಲಿ ಇದನ್ನು 'ಬರಿ' ಎನ್ನುತ್ತಾರೆ. ವಿವಾಹಾದಿ ಸಂದರ್ಭಗಳಲ್ಲಿ ನೆಂಟಸ್ತಿಕೆಯನ್ನು ನಿಶ್ಚಯಿಸುವಾಗ ವಧೂವರರ ಗೋತ್ರಗಳನ್ನು ಪರಸ್ಪರ ಕೇಳಿ ತಿಳಿದುಕೊಳ್ಳುತ್ತಾರೆ. ಇತರ ಜನಾಂಗಗಳಂತೆ ಮೊಗವೀರರಲ್ಲಿಯೂ ಸಗೋತ್ರ ವಿವಾಹ ನಿಷಿದ್ಧವಾಗಿದೆ. ಮೊಗವೀರರಲ್ಲಿ ಒಟ್ಟು ೧೫ ಬರಿ/ಬಳಿಗಳಿವೆ. ಬೇರೆ ಬೇರೆ ಬಳಿಗಳಿಗೆ ಅನುಸಾರವಾಗಿ ಉಪನಾಮಗಳನ್ನು ಹೊಂದಿದ್ದಾರೆ, ಅವುಗಳು; ಅಮಿನ್, ಕರ್ಕೇರ, ಕಾಂಚನ್, ಕುಂದರ್, ಕೋಟ್ಯಾನ್, ತಿಂಗಳಾಯ, ತೋಳಾರ್, ಪುತ್ರನ್, ಬಂಗೇರ, ಮೆಂಡನ್, ಮೈಂದನ್, ಶ್ರೀಯಾನ್, ಸಾಲಿಯಾನ್, ಸುವರ್ಣ, ಪಾಂಗಳ್, ಗುಜರಾನ್.

ಮೊಗವೀರರ ಬಳಿಯ ಆಧಾರದಲ್ಲಿ ೨೫ ಮೂಲಸ್ಥಾನಗಳಿವೆ. ಶ್ರೀಯಾನ್, ಸಾಲ್ಯಾನ್ ಮತ್ತು ಕರ್ಕೇರ ಬಳಿಗಳ ಮೂಲಸ್ಥಾನಗಳು ತಲಾ ಮೂರು ಮೂಲಸ್ಥಾನವನ್ನು ಹೊಂದಿವೆ. ಉಳಿದ ೧೨ ಬಳಿಗಳು ಎರಡೆರಡು ಮೂಲಸ್ಥಾನವನ್ನು ಹೊಂದಿವೆ. ಮೊಗವೀರ ಸಮುದಾಯದಲ್ಲಿ ಆಯಾಯ ಬಳಿಯ ಕುಟುಂಬದ ಹಿರಿಯ ವ್ಯಕ್ತಿಯನ್ನು 'ಮುಕ್ತೇಶ್ವರ'ನೆಂದು ನೇಮಿಸಿಕೊಂಡು ಆತನ ಸುಪರ್ದಿಯಲ್ಲಿ ಮೂಲಸ್ಥಾನದ ವಾರ್ಷಿಕ ಕಾರ್ಯಕ್ರಮಗಳು ಜರಗುತ್ತದೆ. ಮೂಲಸ್ಥಾನದಲ್ಲಿ ದೇವರು ಹಾಗೂ ಪರಿವಾರ ದೈವಗಳನ್ನು ಪೂಜಿಸಿಕೊಂಡು ಬರಲಾಗುತ್ತಿದೆ. ಮುಖ್ಯವಾಗಿ ನಾಗದೇವರು, ಬ್ರಹ್ಮಲಿಂಗೇಶ್ವರ(ಬೆರ್ಮೆರ್), ನಂದಿಗೋಣ, ರಕ್ತೇಶ್ವರಿ, ಅಬ್ಬಗ-ದಾರಗ, ಕ್ಷೇತ್ರಪಾಲ, ತುಳಸಿ ಕಟ್ಟೆ, ಅಶ್ವತ್ಥ ಕಟ್ಟೆ, ಆಯ್ಯದ ಕಲ್ಲು, ಮೂಲ ಮೈ ಸಂದಾಯ, ಜುಮಾದಿ, ಬಂಟ, ಬಬ್ಬರ್ಯ, ಪಕ್ಕೆಟ್ಟು ಪಂಜುರ್ಲಿ, ವರ್ತೆ, ಇತ್ಯಾದಿ. ಮೂಲಸ್ಥಾನಗಳ ವಾರ್ಷಿಕ ಪೂಜೆಗಳು ಏಪ್ರಿಲ್ ರಿಂದ ಮೇ ತಿಂಗಳೊಳಗಾಗಿ ನಡೆಯುತ್ತವೆ.

ವಿವಾಹದಲ್ಲಿ ವರದಕ್ಷಿಣೆಯನ್ನು ಕೊಡುವ ವಿಚಾರವಾಗಿ ಮಾಹಿತಿದಾರರಲ್ಲಿ ಕೇಳಲಾಗಿ ಶೇಕಡಾ ೬೦ರಷ್ಟು ಮಾಹಿತಿದಾರರು ಹಿರಿಯ ವಯಸ್ಸಿನ ಮಾಹಿತಿದಾರರು ವಿವಾಹ ಸಂದರ್ಭದಲ್ಲಿ ವರದಕ್ಷಿಣೆಯನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ವರದಕ್ಷಿಣೆ ನೀಡಿರುವ ಈ ಮಹಿಳೆಯರು ೪೧ವರ್ಷ ವಯಸ್ಸಿನ ಮೇಲ್ಪಟ್ಟವರಾಗಿರುತ್ತಾರೆ. ಶೇಕಡಾ ೩೬ರಷ್ಟು ಮಾಹಿತಿದಾರರು ಯಾವುದೇ ವರದಕ್ಷಿಣೆಯನ್ನು ನೀಡಿರುವುದಿಲ್ಲ ಎಂಬುದಾಗಿಯೂ, ಶೇಕಡಾ ೪ರಷ್ಟು ಮಾಹಿತಿದಾರರು ಅವಿವಾಹಿತರಾಗಿರುವ ಕಾರಣ ತಟಸ್ಥರಾಗಿರುವುದು ಕಂಡುಬಂದಿದೆ.

ಇತ್ತೀಚಿನ ದಿನಗಳಲ್ಲಿ ಮೊಗವೀರ ಸಮುದಾಯದಲ್ಲಿ ವರದಕ್ಷಿಣೆಯನ್ನು ತೆಗೆದುಕೊಳ್ಳುತ್ತಿರುವ ಪ್ರಮಾಣ ಬಹಳಷ್ಟು ಕಡಿಮೆಯಾಗಿರುತ್ತದೆ. ಮೇಲ್ಕಂಡ ಅಂಕಿ ಅಂಶಗಳನ್ನು ಗಮನಿಸಿದಾಗ

ವರದಕ್ಷಿಣೆಯನ್ನು ನೀಡಲ್ಪಟ್ಟವರು ೪೦ವರ್ಷ ಮೇಲ್ಪಟ್ಟವರಾಗಿರುವುದು ಗಮನಾರ್ಹ. ಕಾನೂನಿನ ಕಾರಣಗಳಿಂದಾಗಿ, ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವ ಹಿನ್ನಲೆಯಿಂದಾಗಿ, ಬೇರೆ ಸಮುದಾಯದವರು ಈ ಸಮುದಾಯದ ಹೆಣ್ಣು ಮಕ್ಕಳನ್ನು ಮದುವೆಯಾಗುತ್ತಿರುವ ಕಾರಣದಿಂದಾಗಿ ಈ ಸಮುದಾಯದವರು ವರದಕ್ಷಿಣೆಯಿಂದ ದೂರವಿರುವುದು ಕಂಡುಬರುತ್ತದೆ. ಹಾಗೆಯೇ ವಿದ್ಯಾವಂತ, ರೂಪವಂತ ಹೆಣ್ಣು ಮಕ್ಕಳನ್ನು ಮದುವೆಯಾಗುವ ಸಂದರ್ಭದಲ್ಲಿ ವರನ ಕಡೆಯಿಂದಲೇ ಹೆಣ್ಣಿಗೆ ಬೇಕಾಗಿರುವ ವಸ್ತ್ರ ಒಡವೆಗಳನ್ನು ನೀಡುತ್ತಿರುವ ಸಂಗತಿಯನ್ನು ಕೂಡಾ ಕ್ಷೇತ್ರಾಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ವಿಧವಾ ವಿವಾಹಕ್ಕೆ ಸಮುದಾಯದಲ್ಲಿ ಅವಕಾಶವಿದೆಯೇ ಎಂಬ ಪ್ರಶ್ನೆಯನ್ನು ಮಾಹಿತಿದಾರರಲ್ಲಿ ಕೇಳಲಾಗಿ ಶೇಕಡಾ ೨೪ರಷ್ಟು ಮಾಹಿತಿದಾರರು ವಿಧವಾ ವಿವಾಹಕ್ಕೆ ತಮ್ಮ ಸಮುದಾಯದಲ್ಲಿ ಸಮ್ಮತಿ ಇರುವುದಾಗಿ ತಿಳಿಸಿದ್ದು, ಶೇಕಡಾ ೧೧ರಷ್ಟು ಮಾಹಿತಿದಾರರು ಸಮುದಾಯದ ಸಮ್ಮತಿ ಇರುವುದಿಲ್ಲ ಎಂಬುದಾಗಿ, ಶೇಕಡಾ ೬೬ರಷ್ಟು ಮಾಹಿತಿದಾರರು ಈ ವಿಷಯದ ಬಗ್ಗೆ ಯಾವುದೇ ಮಾಹಿತಿ ನಿಖರವಾಗಿ ತಿಳಿದಿಲ್ಲ ಎಂಬುದಾಗಿ ಉತ್ತರಿಸಿರುತ್ತಾರೆ. ಉಡುಪಿ ಜಿಲ್ಲೆಯ ಮೊಗವೀರರು ಸೇರಿದಂತೆ ಕರಾವಳಿ ಕರ್ನಾಟಕದ ಹಿಂದೂ ಜನಾಂಗಗಳಲ್ಲಿ ವಿಧವಾ ವಿವಾಹಕ್ಕೆ ಸಮ್ಮತಿ ಇರುವುದು ಅತ್ಯಂತ ಕಡಿಮೆ ಹಾಗೂ ಆ ವಿವಾಹವನ್ನು ಸಾಂಪ್ರದಾಯಿಕ ವಿವಾಹದ ಜೊತೆಗೆ ಸ್ವೀಕರಿಸುವವರು ಅತ್ಯಲ್ಪ. ಮಾಹಿತಿದಾರರಲ್ಲಿ ಶೇಕಡಾ ೫ರಷ್ಟು ಮಾಹಿತಿದಾರ ವಿಧವೆಯರಿಗೆ ಪುನರ್ ವಿವಾಹವಾಗಿದೆ. ಉಳಿದಂತೆ, ಶೇಕಡಾ ೩ರಷ್ಟು ಮಂದಿ ಮರು ವಿವಾಹವಾಗದೆ ಜೀವನ ಸಾಗಿಸುತ್ತಿದ್ದಾರೆ. ಪುನರ್ ವಿವಾಹವಾಗದೇ ಇರುವ ವಿಧವೆಯರಿಗೆ ತಮ್ಮದೇ ಆದ ಕಾರಣಗಳಿವೆ. ಅವುಗಳಲ್ಲಿ ಮೊದಲನೆಯದು ಅವರು ತಮ್ಮ ೪೫ ಅಥವಾ ೫೦ರ ವಯಸ್ಸಿನ ನಂತರ ಗಂಡನನ್ನು ಕಳೆದುಕೊಂಡಿರುವುದು, ಎರಡನೆಯದಾಗಿ, ಓದುತ್ತಿರುವ ಮಕ್ಕಳಿರುವವರು, ಮೂರನೆಯದಾಗಿ, ಬೇರೆ ಗಂಡಸರನ್ನು ಮದುವೆಯಾಗಲು ಮನಸ್ಸು ಒಪ್ಪದೇ ಇರುವವರು. ಮರು ವಿವಾಹವಾದವರಲ್ಲಿ ಬಹುತೇಕ ಮಂದಿ ೨೫ ರಿಂದ ೩೫ ವರ್ಷ ಪ್ರಾಯದವರು. ಇತ್ತೀಚಿನ ದಿನಗಳಲ್ಲಿ ಉಳಿದ ಸಮುದಾಯಗಳಂತೆ ಮೊಗವೀರರಲ್ಲೂ ವಿಧವಾ ಪುನರ್ ವಿವಾಹಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಪ್ರಾಯಶಃ ಇದೊಂದು ಈ ಸಮುದಾಯದಲ್ಲಿ ಮಹಿಳಾ ಸಬಲೀಕರಣದ ಸ್ಪಷ್ಟ ಸಂಕೇತವೆಂದು ಪರಿಗಣಿಸಬಹುದು.

ಮೊಗವೀರ ಸಮುದಾಯದಲ್ಲಿ ಸಾಮಾಜಿಕ ಪರಿವರ್ತನೆಗಳಾಗುತ್ತಿರುವುದು ಈ ಅಧ್ಯಯನದಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ. ಒಂದು ಕಾಲದಲ್ಲಿ ವಿಧವಾ ವಿವಾಹಕ್ಕೆ ಅವಕಾಶವೇ ಇರದಿದ್ದ ಮೊಗವೀರ ಸಮುದಾಯದಲ್ಲಿ ಈಗ ವಿಧವಾ ವಿವಾಹಕ್ಕೆ ಅವಕಾಶವಿದೆ. ಹಿಂದೆ ವರದಕ್ಷಿಣೆ ಸಾಮಾಜಿಕ ಪಿಡುಗಾಗಿ ಕಾಡಿದ್ದು, ಪ್ರಸ್ತುತ ಈ ಸಮುದಾಯದಲ್ಲಿ ವರದಕ್ಷಿಣೆ ರಹಿತ ವಿವಾಹಕ್ಕೆ ಮನ್ನಣೆ ಹೆಚ್ಚಾಗಿದೆ. ಇವೆಲ್ಲದರ ಪರಿಣಾಮವಾಗಿ ಮೊಗವೀರ ಮಹಿಳೆಯರ ಸಾಮಾಜಿಕ ಸ್ಥಾನಮಾನದಲ್ಲಿ ಉನ್ನತಿಗೊಂಡಿರುವುದು ಕಂಡುಬರುತ್ತದೆ.

ಕೋಷ್ಟಕ ೫.೧೨ ಸಾಮಾಜಿಕ ಸ್ಥಿತಿಗತಿ, ಜಾತಿ ಸಮಾನತೆ ಹಾಗೂ ಜಾತಿ ಮೀಸಲಾತಿ ಅಂಶಗಳಿಗೆ ಸಂಬಂಧಿಸಿದಂತೆ ಮಾಹಿತಿದಾರರ ಅಭಿಪ್ರಾಯ

ಸಾಮಾಜಿಕ ಅಂಶ	ಹೌದು		ಇಲ್ಲ		ಒಟ್ಟು	
	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.
ಮೊಗವೀರ ಮಹಿಳೆಯರು ಮತ್ತು ಇತರ ಹಿಂದುಳಿದ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಸಮಾನವಾಗಿದೆ	೨೯೪	೩೬.೭೫	೫೦೬	೬೩.೨೫	೮೦೦	೧೦೦
ಆರ್ಥಿಕವಾಗಿ ಮೊಗವೀರ ಮಹಿಳೆಯರು ಹಾಗೂ ಇತರ ಹಿಂದುಳಿದ ಸಮುದಾಯದ ಮಹಿಳೆಯರು ಸಮಾನರಾಗಿದ್ದಾರೆ.	೩೨೪	೪೦.೫	೪೭೬	೫೯.೫	೮೦೦	೧೦೦
ಮೊಗವೀರ ಮಹಿಳೆಯರು ಇತರ ಸಮುದಾಯದ ಜನರೊಂದಿಗೆ ಬೆರೆಯುವಿಕೆ ಉತ್ತಮವಾಗಿದೆ	೪೦೪	೫೦.೫	೩೯೬	೪೯.೫	೮೦೦	೧೦೦
ಜಾತಿ ಮೀಸಲಾತಿಯ ಅರಿವಿದೆ	೩೦೨	೩೭.೭೫	೪೯೮	೬೨.೨೫	೮೦೦	೧೦೦
ಜಾತಿ ಮೀಸಲಾತಿ ಬಳಸಿಕೊಂಡವರು	೧೩೪	೧೬.೭೫	೬೬೬	೮೩.೨೫	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೫.೧೨ರಲ್ಲಿ ಮಾಹಿತಿದಾರರಲ್ಲಿ ಕೇಳಲಾದ ಮೊಗವೀರ ಮಹಿಳೆಯರು ಮತ್ತು ಇತರ ಹಿಂದುಳಿದ ಸಮುದಾಯದವರ ಸಾಮಾಜಿಕ ಸ್ಥಾನಮಾನ ಸಮಾನವಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಲಾಗಿ ಶೇಕಡಾ ೩೬.೭೫ರಷ್ಟು ಮಾಹಿತಿದಾರರು ಸಮಾನವಾಗಿದೆ ಎಂಬುದಾಗಿ ಶೇಕಡಾ ೬೩.೨೫ರಷ್ಟು ಮಾಹಿತಿದಾರರು ಸಮಾನವಾಗಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಸಾಮಾಜಿಕ ಸ್ಥಾನಮಾನಗಳಲ್ಲಿ ವ್ಯತ್ಯಾಸಗಳಿರುವ ಬಗ್ಗೆ ಕಾರಣವನ್ನು ಕೇಳಿದಾಗ ಸಮುದಾಯಗಳ ನಿರ್ದಿಷ್ಟ ಆಚರಣೆಗಳು, ಸಂಸ್ಕೃತಿ ಮತ್ತು ಪದ್ಧತಿಗಳಿಂದಾಗಿ ಈ ಅಸಮಾನತೆ ಕಂಡು ಬರುವುದಾಗಿ ತಿಳಿಸಿರುತ್ತಾರೆ. ಇಷ್ಟು ಮಾತ್ರವಲ್ಲದೇ ಜಾತಿ ಪದ್ಧತಿಯ ಕ್ರಮಗಳ ಅಸ್ತಿತ್ವ ಇನ್ನೂ ಈ ಪ್ರದೇಶದಲ್ಲಿರುವುದು ಈ ಅಸಮಾನತೆಗೆ ಕಾರಣವಾಗುತ್ತಿದೆ.

ಆರ್ಥಿಕವಾಗಿ ಅಂದರೆ ಸಂಪನ್ಮೂಲಗಳ ಆಧಾರದಲ್ಲಿ ಮಾಹಿತಿದಾರರಿಗೆ ಕೇಳಲಾದ ಮೊಗವೀರ ಮಹಿಳೆಯರು ಹಾಗೂ ಇತರ ಹಿಂದುಳಿದ ಸಮುದಾಯದ ಮಹಿಳೆಯರು ಆರ್ಥಿಕವಾಗಿ ಸಮಾನರೇ

ಎಂಬ ಪ್ರಶ್ನೆಗೆ ಶೇಕಡಾ ೪೦.೫ರಷ್ಟು ಮಾಹಿತಿದಾರರು ಆರ್ಥಿಕವಾಗಿ ಸಮಾನರು ಎಂಬುದಾಗಿ, ಶೇಕಡಾ ೫೯.೫ರಷ್ಟು ಮಾಹಿತಿದಾರರು ಸಮಾನರಾಗಿಲ್ಲದೇ ಇರುವುದಾಗಿ ತಿಳಿಸಿರುತ್ತಾರೆ. ಆರ್ಥಿಕ ಅಸಮಾನತೆಗೆ ಕಾರಣಗಳನ್ನು ಗುರುತಿಸಲು ಮಾಹಿತಿದಾರರಲ್ಲಿ ಕೇಳಿದಾಗ ಕಡಿಮೆ ಶಿಕ್ಷಣ, ಅತ್ಯಲ್ಪ ಆದಾಯ ಬರುವ ಕುಲಕಸುಬು ಹಾಗೂ ಆದಾಯದ ಅನಿಶ್ಚಿತತೆ ಈ ಅಸಮಾನತೆಗೆ ಮೂಲ ಕಾರಣವೆಂದು ತಿಳಿಸಿರುತ್ತಾರೆ. ಆರ್ಥಿಕ ಅಸಮಾನತೆಯ ಕಾರಣದಿಂದಾಗಿಯೇ ಮೊಗವೀರ ಮಹಿಳೆಯರು ಇತರ ಸಮುದಾಯದವರೊಂದಿಗೆ ಮುಕ್ತವಾಗಿ ಬೆರೆಯಲು ಸಾಧ್ಯವಾಗದಿರುವುದು ಸಾಮಾಜಿಕ ಅಸಮಾನತೆಗೆ ಪರೋಕ್ಷ ಕಾರಣವಾಗಿ ಕಂಡುಬರುತ್ತದೆ.

ಇತರ ಸಮುದಾಯದವರೊಂದಿಗೆ ಬೆರೆಯುವುದು ಕುರಿತಾದ ಪ್ರಶ್ನೆಗೆ ಶೇಕಡಾ ೫೦.೫ರಷ್ಟು ಮಾಹಿತಿದಾರರು ಸಕಾರಾತ್ಮಕ ಅಭಿಪ್ರಾಯವನ್ನು ನೀಡಿದರೆ ಶೇಕಡಾ ೪೯.೫ರಷ್ಟು ಮಾಹಿತಿದಾರರು ಇತರ ಸಮುದಾಯಗಳೊಂದಿಗೆ ಸಕಾರಾತ್ಮಕ ಸಂಬಂಧ ಹೊಂದಿಲ್ಲ ಎನ್ನುವುದನ್ನು ಪ್ರಸ್ತಾಪಿಸಿದ್ದಾರೆ.

ಜಾತಿ ಮೀಸಲಾತಿಯ ಅರಿವಿನ ಬಗೆಗೆ ಕೇಳಲಾದ ಪ್ರಶ್ನೆಗೆ ಶೇಕಡಾ ೩೭.೮ರಷ್ಟು ಮಾಹಿತಿದಾರರಿಗೆ ಜಾತಿ ಮೀಸಲಾತಿಯ ಅರಿವಿರುವುದಾಗಿ ತಿಳಿಸಿದ್ದು, ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ನಗರ ಸಭೆಯಲ್ಲಿ ಸದಸ್ಯರಾಗಿರುವ ಅಥವಾ ಉದ್ಯೋಗಿಗಳಾಗಿರುವ ಮೊಗವೀರರು ತಮ್ಮ ಸಂಬಂಧಿಕರಿಗೆ ಹಾಗೂ ಸಂಪರ್ಕದಲ್ಲಿ ಇರುವವರಿಗೆ ಈ ಕುರಿತ ಮಾಹಿತಿಯನ್ನು ನೀಡುತ್ತಿರುವುದು ಅಧ್ಯಯನದಿಂದ ಕಂಡು ಬಂದಿದೆ. ಶೇಕಡಾ ೬೨.೨ರಷ್ಟು ಮಾಹಿತಿದಾರರ ಕುಟುಂಬಗಳಿಗೆ ಇಂದಿಗೂ ಜಾತಿ ಮೀಸಲಾತಿಯ ಕುರಿತ ಅರಿವಿಲ್ಲ ಎಂಬುದಾಗಿ ತಿಳಿಸಿದ್ದು, ಕೆಲವೊಂದು ಅನಕ್ಷರಸ್ಥ ಅಥವಾ ಹಿರಿಯ ವಯಸ್ಸಿನ ಮಾಹಿತಿದಾರರಲ್ಲಿ ಮೀಸಲಾತಿ ಸಂಬಂಧಿಸಿದ ಅರಿವಿನ ಕೊರತೆ ಹೆಚ್ಚು ಕಂಡುಬರುತ್ತದೆ.

ಹಾಗೆ, ಜಾತಿ ಮೀಸಲಾತಿಯನ್ನು ಬಳಸಿಕೊಂಡವರ ಬಗ್ಗೆ ವಿವರ ಕೇಳಲಾಗಿ, ಶೇಕಡಾ ೧೬.೮ರಷ್ಟು ಮಾಹಿತಿದಾರರು ಮೀಸಲಾತಿಯನ್ನು ಉಪಯೋಗಿಸಿಕೊಂಡಿರುವುದಾಗಿ, ಶೇಕಡಾ ೮೩.೨ರಷ್ಟು ಮಾಹಿತಿದಾರರು ಯಾವುದೇ ಮೀಸಲಾತಿಯನ್ನು ಬಳಸಿಕೊಂಡಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಮೊಗವೀರ ಸಮುದಾಯಕ್ಕೆ ಮೀಸಲಾತಿಯ ಸಂಪೂರ್ಣ ಅರಿವಿಲ್ಲ ಎಂದಲ್ಲ. ಮೀಸಲಾತಿ ಕುರಿತು ಮಾಹಿತಿ ಇದ್ದು ನಿರ್ಲಕ್ಷಿಸಿದವರ ಸಂಖ್ಯೆಯೂ ಇಲ್ಲಿ ಗುರುತರವಾದುದು. ಮಾಹಿತಿ ಕೊರತೆಗೆ ಮುಖ್ಯ ಕಾರಣ ಅವರ ಅನಕ್ಷರತೆ, ಕುಲಕಸುಬು ಅಥವಾ ಉದ್ಯೋಗ ಕ್ಷೇತ್ರದಲ್ಲಿನ ಸಮಯದ ಅಭಾವ.

ಮೊಗವೀರ ಮಹಿಳೆಯರ ಸಾಮಾಜಿಕ ಸ್ಥಾನಮಾನ ಉನ್ನತಿಗೇರಿರುವುದು ಸತ್ಯವಾದರೂ, ಇತರೆ ಸಮುದಾಯಗಳೊಂದಿಗೆ ಸಮಾನತೆಯನ್ನು ಸಾಧಿಸಲು ಇನ್ನೂ ಸಾಧ್ಯವಾಗಿಲ್ಲ. ಆರ್ಥಿಕವಾಗಿಯೂ ಮೊಗವೀರ ಮಹಿಳೆಯರ ಸ್ಥಾನಮಾನ ಸಮಾನವಾಗಿಲ್ಲ. ಇದೆಲ್ಲದಕ್ಕೂ ಮುಖ್ಯ ಕಾರಣ ಬಹಳ ಹಿಂದಿನಿಂದ ಪಾಲಿಸಿಕೊಂಡು ಬಂದಿರುವ ಸಾಮಾಜಿಕ ಪದ್ಧತಿಗಳು, ಆರ್ಥಿಕ ಕ್ಷೇತ್ರದಲ್ಲಿ ಮೊಗವೀರ ಮಹಿಳೆಯರು ಕುಲಕಸುಬಾದ ಮೀನುಗಾರಿಕೆಯ ಆದಾಯದಲ್ಲಿ ಬಹಳಷ್ಟು

ಏರುಪೇರುಗಳಾಗುವುದರಿಂದ ಆರ್ಥಿಕ ಸಮಾನತೆ ಸಾಧ್ಯವಾಗಿಲ್ಲ. ಇಲ್ಲಿ ಮಹಿಳೆಯರ ಆದಾಯವು ಪ್ರಾಕೃತಿಕ ಸಂಗತಿಗಳಿಂದಲೂ ನಿರ್ಧರಿಸಲ್ಪಡುವುದರಿಂದಾಗಿ ಅವರನ್ನು ಆರ್ಥಿಕವಾಗಿ ಇತರ ವರ್ಗದ ಮಹಿಳೆಯೊಂದಿಗೆ ಹೋಲಿಸುವುದು ಸಮಂಜಸವೆನಿಸುವುದಿಲ್ಲ.

ಕೋಷ್ಟಕ ೫.೧೩ ಮಾಹಿತಿದಾರರು ಜಾತಿ ಮೀಸಲಾತಿ ಬಳಸಿಕೊಂಡ ಕ್ಷೇತ್ರಗಳು

ಮೀಸಲಾತಿಯ ಕ್ಷೇತ್ರ	ಸಂಖ್ಯೆ	ಶೇಕಡಾ
ಶಿಕ್ಷಣ	೨೬	೩.೨೫
ಉದ್ಯೋಗ	೩೨	೪
ರಾಜಕೀಯ	೭೬	೯.೫
ಯಾವುದೇ ಮೀಸಲಾತಿ ಬಳಸಿಕೊಳ್ಳದವರು	೬೬೬	೮೩.೨೫
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯಲ್ಲಿ ಅಧ್ಯಯನಕ್ಕಾಗಿ ಸಂಗ್ರಹಿಸಿ ದತ್ತಾಂಶದ ಪ್ರಕಾರ ಶೇಕಡಾ ೩.೨೫ರಷ್ಟು ಮಾಹಿತಿದಾರರು ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ಬಳಸಿ ಪ್ರವೇಶ ಪಡೆದಿರುವುದಾಗಿ ತಿಳಿಸಿದ್ದಾರೆ. ಉದ್ಯೋಗದ ಬಗ್ಗೆ ವಿಚಾರಿಸಿದಾಗ ಶೇಕಡಾ. ೪ರಷ್ಟು ಮಾಹಿತಿದಾರರು ಮೀಸಲಾತಿಯನ್ನು ಬಳಸಿಕೊಂಡು ಸರ್ಕಾರಿ ಉದ್ಯೋಗವನ್ನು ಹಾಗೂ ರಾಜಕೀಯದಲ್ಲಿ ಮೀಸಲಾತಿಯನ್ನು ಬಳಸಿಕೊಂಡವರು ಶೇಕಡಾ ೯.೫ರಷ್ಟು ಮಾಹಿತಿದಾರರು, ಉಳಿದಂತೆ ಶೇಕಡಾ ೮೩.೨೫ರಷ್ಟು ಮಾಹಿತಿದಾರರು ಯಾವುದೇ ಮೀಸಲಾತಿಯನ್ನು ಬಳಸಿಕೊಂಡಿಲ್ಲ. ಮಾಹಿತಿಗಳನ್ನು ಅವಲೋಕಿಸಿದಾಗ ಮೊಗವೀರ ಮಹಿಳೆಯರು ಉದ್ಯೋಗದಲ್ಲಿ ಹೆಚ್ಚಾಗಿ ಕುಲಸುಬಾದ ಮೀನುಗಾರಿಕೆಯನ್ನೇ ಆಯ್ಕೆ ಮಾಡಿಕೊಳ್ಳುವುದರಿಂದ ಸರಕಾರಿ ಅಥವಾ ಇತರ ಉದ್ಯೋಗಗಳತ್ತ ಗಮನಹರಿಸದಿರುವುದು ಕಡಿಮೆ. ಸರಕಾರಿ ಉದ್ಯೋಗದ ಸ್ಪಷ್ಟ ಚಿತ್ರಣವಾಗಲೀ ಅಥವಾ ಮಾಹಿತಿಯಾಗಲೀ ದೊರಕದೇ ಇರುವುದು ಕೂಡಾ ಅವರು ಮೀಸಲಾತಿಯನ್ನು ಉದ್ಯೋಗಕ್ಕಾಗಿ ಬಳಸಿಕೊಳ್ಳುವಲ್ಲಿ ಹಿನ್ನಡೆಗೆ ಕಾರಣವಾಗಿದೆ. ಈ ಪ್ರದೇಶದಲ್ಲಿ ಮೀಸಲಾತಿಯ ಅರಿವಿನ ಕೊರತೆ ಮತ್ತು ಆರ್ಥಿಕವಾಗಿ ಉನ್ನತ ಮಟ್ಟದಲ್ಲಿರುವ ಕುಟುಂಬಗಳು ಮೀಸಲಾತಿಯ ಬಗ್ಗೆ ಗಮನಹರಿಸದೇ ಇರುವುದು ಕ್ಷೇತ್ರ ಕಾರ್ಯದಲ್ಲಿ ಕಂಡುಬಂದಿದೆ. ಮೀಸಲಾತಿಯನ್ನು ಬಳಸಿಕೊಂಡಿರುವ ಕುಟುಂಬಗಳ ಆರ್ಥಿಕ ಸ್ಥಿತಿಗತಿಯನ್ನು ಅವಲೋಕಿಸಿದಾಗ ಈ ಎಲ್ಲ ಕುಟುಂಬಗಳು ಮಧ್ಯಮ ವರ್ಗ ಅಥವಾ ಕೆಳ ವರ್ಗದಲ್ಲಿರುವುದು ಗೋಚರಿಸುತ್ತದೆ.

ಕೋಷ್ಟಕ ೫.೧೪ ಮಕ್ಕಳನ್ನು ಪಡೆಯುವಲ್ಲಿ ಮಾಹಿತಿದಾರರ ಆಯ್ಕೆ ನಿರ್ಧಾರದ ವಿವರಗಳು

ಎಷ್ಟು ಮಕ್ಕಳನ್ನು ಪಡೆಯಬೇಕು ಎಂಬಲ್ಲಿನ ಆಯ್ಕೆ ನಿರ್ಧಾರ	ಸಂಖ್ಯೆ	ಶೇಕಡಾ
ಸ್ವಂತ	೪೨೦	೫೨.೫
ಗಂಡ	೨೦೪	೨೫.೫
ಅತ್ತೆ	೮೦	೧೦
ತಾಯಿ	೪೦	೫
ಅನ್ವಯಿಸುವುದಿಲ್ಲ	೫೬	೭
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ಶೇಕಡಾ ೫೨.೫ರಷ್ಟು ಮಾಹಿತಿದಾರರು ಮಕ್ಕಳನ್ನು ತಮ್ಮ ಇಷ್ಟಕ್ಕನುಗುಣವಾಗಿ ಪಡೆದು ತಾಯ್ತನದ ಸುಖವನ್ನು ಅನುಭವಿಸಿರುವುದಾಗಿಯೂ, ಅದರಲ್ಲಿ ಹಿರಿಯ ವಯಸ್ಸಿನ ಮಾಹಿತಿದಾರರು, ಜನನ ನಿಯಂತ್ರಣದ ಬಗ್ಗೆ ಅರಿವಿನ ಕೊರತೆಯಿಂದಾಗಿ ಮಕ್ಕಳ ಆಯ್ಕೆ ನಿರ್ಧಾರದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂಬುದಾಗಿಯೂ ತಿಳಿಸಿರುತ್ತಾರೆ. ಶೇಕಡಾ ೨೫.೫ರಷ್ಟು ಮಹಿಳೆಯರು ಈ ವಿಷಯದಲ್ಲಿ ಪತಿಯ ನಿರ್ಧಾರ ಅವಲಂಬಿಸಿ ರುವುದಾಗಿ, ಶೇಕಡಾ ೧೦ರಷ್ಟು ಮಾಹಿತಿದಾರರು ತನ್ನ ಅತ್ತೆಯ(ಅಂದರೆ ತನ್ನ ಗಂಡನ ತಾಯಿಯ) ನಿರ್ಧಾರವನ್ನು ಅವಲಂಬಿಸಿರುವುದಾಗಿ, ಶೇಕಡಾ ೫ರಷ್ಟು ಮಾಹಿತಿದಾರರು ತನ್ನ ತಾಯಿಯ ನಿರ್ಧಾರವನ್ನು ಅವಲಂಬಿಸಿರುವುದಾಗಿ, ಶೇಕಡಾ ೭ರಷ್ಟು ಮಾಹಿತಿದಾರರು ಅನ್ವಯಿಸುವುದಿಲ್ಲ ಎಂಬುದಾಗಿ ಉತ್ತರಿಸಿದ ಮಾಹಿತಿದಾರರಾಗಿದ್ದು, ಅವರಲ್ಲಿ ಶೇಕಡಾ ೪ರಷ್ಟು ಮಹಿಳೆಯರು ಅವಿವಾಹಿತರಾಗಿರುವುದಾಗಿಯೂ, ಶೇಕಡಾ ೩ರಷ್ಟು ಮಾಹಿತಿದಾರರು ಮದುವೆಯಾಗಿ ಮಕ್ಕಳಿಲ್ಲದೇ ಇರುವುದಾಗಿ ತಿಳಿಸಿರುತ್ತಾರೆ.

ಮನೋರಂಜನ್ ಪಾಲ್ ಹಾಗೂ ಮತ್ತಿತರರು(೨೦೦೮) ತ್ರಿಪುರ ಹಾಗೂ ಮೇಘಾಲಯದಲ್ಲಿನ ಮಹಿಳೆಯರು ಕುಟುಂಬದಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ನಡೆಸಿರುವ ಅಧ್ಯಯನದಲ್ಲಿ ಮೇಘಾಲಯದ ಸ್ತ್ರೀಯರು ತ್ರಿಪುರ ರಾಜ್ಯದ ಮಹಿಳೆಯರಿಗಿಂತ ಕೆಳಮಟ್ಟದ ಸ್ಥಾನಮಾನವನ್ನು ಹೊಂದಿರುವುದಾಗಿ ಹಾಗೆಯೇ ತ್ರಿಪುರ ರಾಜ್ಯದ ಮಹಿಳೆಯರು ಪುರುಷರಿಗೆ ಸಮಾನವಾದ ಸ್ಥಾನಮಾನವನ್ನು ಪಡೆದಿರುವುದಾಗಿ ಉಲ್ಲೇಖಿಸಿದ್ದಾರೆ.

ಸಮೀಕ್ಷೆಯಲ್ಲಿ ಮಾಹಿತಿದಾರರು ನೀಡಿದ ಮಾಹಿತಿಯಂತೆ, ಮೊಗವೀರ ಸಮುದಾಯವು ಮಾತೃ ಪ್ರಧಾನತೆಯನ್ನು ಅವಲಂಬಿಸಿರುವ ಸಮುದಾಯವಾಗಿದ್ದು, ಹೆಣ್ಣು ಮಗುವಿನ ಜನನವನ್ನು ಬಹಳ ಸಂಭ್ರಮದಿಂದಲೇ ನಿರೀಕ್ಷಿಸುತ್ತಾರೆ. ಸಾಲಾಗಿ ಹೆಣ್ಣು ಮಗುವಿನ ಜನನವಾದ ಕುಟುಂಬಗಳಲ್ಲಿ ಮುಂದಿನ ಮಗು ಗಂಡಾಗಲೀ ಎಂಬ ಧೋರಣೆ ಹಾಗೂ ಗಂಡು ಮಕ್ಕಳ ಮೇಲಿನ ವ್ಯಾಮೋಹವು ಅತ್ತೆಯ ನಿರ್ಧಾರವನ್ನು ಅವಲಂಬಿಸಿರುವ ಮಾಹಿತಿದಾರರ ಕುಟುಂಬಗಳಲ್ಲಿ ಸಾಮಾನ್ಯವಾಗಿದೆ. ಬಡತನದ ಕಾರಣದಿಂದಾಗಿ ಜೀವನ ನಿರ್ವಹಣೆ ಹಾಗೂ ಮಕ್ಕಳ ಶೈಕ್ಷಣಿಕ ವೆಚ್ಚವನ್ನು

ಸರಿದೂಗಿಸುವಲ್ಲಿ ಸಂಕಷ್ಟ ಅನುಭವಿಸುತ್ತಿರುವಂತಹ ಮಾಹಿತಿದಾರರ ಕುಟುಂಬಗಳಲ್ಲಿ ಗಂಡನ ಆಯ್ಕೆ ನಿರ್ಧಾರವನ್ನು ಅವಲಂಬಿಸಿರುವುದಾಗಿ ತಿಳಿಸಿರುತ್ತಾರೆ. ಸಮೀಕ್ಷೆಯಲ್ಲಿ ಕಂಡು ಕೊಂಡಂತೆ ಮಾಹಿತಿದಾರರಲ್ಲಿ ಮಕ್ಕಳನ್ನು ಪಡೆಯುವ ಆಯ್ಕೆ ನಿರ್ಧಾರಕ್ಕೆ ಸಂಬಂಧಿಸಿದಂತೆ ಮಹಿಳೆಯರ ಪಾಲು ಅತ್ಯಧಿಕವಾಗಿದ್ದು, ಶೇಕಡಾ ೭೨.೫೮ ರಷ್ಟಿದೆ. ಈ ವಿಚಾರದಲ್ಲಿ ಈ ಸಮುದಾಯದಲ್ಲಿ ಮಹಿಳಾ ಸಬಲೀಕರಣವು ಸಾಕಾರಗೊಂಡಿರುವುದು ಗೋಚರಿಸುತ್ತದೆ.

ಕೋಷ್ಟಕ ೫.೧೫ ಮಾಹಿತಿದಾರರ ಮಕ್ಕಳ ವಿವಾಹದ ಆಯ್ಕೆ ನಿರ್ಧಾರದ ವಿವರಗಳು

ಮಕ್ಕಳ ವಿವಾಹದ ಆಯ್ಕೆ ನಿರ್ಧಾರಗಳು	ಸಂಖ್ಯೆ	ಶೇಕಡಾ
ಮಕ್ಕಳ ಸ್ವಂತ ನಿರ್ಧಾರ	೮೦	೧೦
ತಾಯಿಯ ನಿರ್ಧಾರ	೨೭೮	೩೪.೭೫
ತಂದೆಯ ನಿರ್ಧಾರ	೩೧೪	೩೯.೨೫
ಅತ್ತೆಯ ನಿರ್ಧಾರ	೭೨	೯
ಅನ್ವಯಿಸುವುದಿಲ್ಲ	೫೬	೭
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಮಕ್ಕಳ ವಿವಾಹದಲ್ಲಿ ವಧು ವರರ ಆಯ್ಕೆಯ ನಿರ್ಧಾರಗಳನ್ನು ಕೇಳಲಾಗಿ ಶೇಕಡಾ ೧೦ರಷ್ಟು ಮಾಹಿತಿದಾರರು ವಿವಾಹದಲ್ಲಿ ಮಕ್ಕಳ ಸ್ವಂತ ನಿರ್ಧಾರವನ್ನು ಅವಲಂಬಿಸಿದೆ ಎಂಬುದಾಗಿ ತಿಳಿಸಿರುವರು. ಪ್ರೇಮ ವಿವಾಹ ಹಾಗೂ ಅಂತರ್‌ಜಾತಿ ವಿವಾಹ ಸಂದರ್ಭಗಳಲ್ಲಿ ಮಕ್ಕಳ ಸ್ವಂತ ನಿರ್ಧಾರವನ್ನು ಅವಲಂಬಿಸಿಯೇ ವಿವಾಹ ಕಾರ್ಯ ನಡೆಯುವುದಾಗಿಯೂ, ಶೇಕಡಾ ೩೪.೭೫ರಷ್ಟು ಮಾಹಿತಿದಾರರ ವಧು-ವರರ ಆಯ್ಕೆ ಪ್ರಕ್ರಿಯೆಯು ತಾಯಿಯ ನಿರ್ಧಾರವನ್ನು ಅವಲಂಬಿಸಿರುವುದಾಗಿಯೂ, ಶೇಕಡಾ ೩೯.೨೫ರಷ್ಟು ಮಾಹಿತಿದಾರರು ತಂದೆಯ ನಿರ್ಧಾರವನ್ನು ಅವಲಂಬಿಸಿ, ಶೇಕಡಾ ೯ರಷ್ಟು ಮಾಹಿತಿದಾರರು ಕೂಡು ಕುಟುಂಬಗಳನ್ನು ಹೊಂದಿರುವ ಮನೆಗಳಲ್ಲಿ ವಿವಾಹದ ವಿಷಯದಲ್ಲಿ ಅತ್ತೆಯ ಯಜಮಾನಿಕೆ ಇದ್ದು, ಅಂತಹ ಮನೆಗಳಲ್ಲಿ ಅತ್ತೆಯ ನಿರ್ಧಾರಕ್ಕೆ ಪ್ರಾಮುಖ್ಯತೆ ಇರುವುದಾಗಿ ಮಾಹಿತಿದಾರರು ತಿಳಿಸಿರುತ್ತಾರೆ. ಮಕ್ಕಳ ವಿವಾಹದ ಆಯ್ಕೆ ನಿರ್ಣಯದ ಬಗ್ಗೆ ಇನ್ನಷ್ಟು ವಿಶ್ಲೇಷಿದಾಗ, ಮಾಹಿತಿದಾರರಲ್ಲಿ ಈ ಬಗ್ಗೆ ಒಮ್ಮತದ ಅಭಿಪ್ರಾಯವಿಲ್ಲ. ಶಿಕ್ಷಿತ ಮತ್ತು ಹೊಸ ತಲೆಮಾರಿನ ಮಹಿಳೆಯರು ವಿವಾಹದ ನಿರ್ಧಾರವನ್ನು ತಮ್ಮ ಮಕ್ಕಳಿಗೆ ನೀಡುವುದಾಗಿ ಹೇಳಿದರೆ, ಹಳೆಯ ತಲೆಮಾರಿನವರಿಗೆ ಅದು ಹಿರಿಯರ ನಿರ್ಧಾರದಂತೆ ಆಗಬೇಕೆಂಬ ಅಪೇಕ್ಷೆಯಿದೆ. ಒಟ್ಟಾರೆಯಾಗಿ, ಈ ವಿಚಾರದಲ್ಲಿ ೫೭.೮ರಷ್ಟು ಮಹಿಳೆಯರ ನಿರ್ಧಾರವನ್ನು ಆಧರಿಸಿ ಮಕ್ಕಳ ವಿವಾಹದ ಆಯ್ಕೆ ಹಾಗೂ ನಿರ್ಧಾರಗಳು ನಡೆಯುವುದರಿಂದಾಗಿ ಉಡುಪಿ ಜಿಲ್ಲೆಯ ಮೊಗವೀರ ಸಮುದಾಯವು ವಿವಾಹದ ಆಯ್ಕೆಯ ವಿಷಯದಲ್ಲಿ ಸಶಕ್ತತೆಯನ್ನು ಸಾಧಿಸಿರುವುದು ಈ ಅಧ್ಯಯನದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಕೋಷ್ಟಕ ೫.೧೬ ಮಾಹಿತಿದಾರರು ತಿಳಿಸಿದಂತೆ ಹೆಣ್ಣು ಮಕ್ಕಳ ವಿವಾಹದಲ್ಲಿ ಪ್ರಭಾವ ಬೀರುವ ಪ್ರಮುಖ ಅಂಶಗಳು

ಹೆಣ್ಣು ಮಕ್ಕಳ ವಿವಾಹದಲ್ಲಿ ಪರಿಗಣಿಸಲಾಗುವ ಅಂಶಗಳು	ಸಂಖ್ಯೆ	ಶೇಕಡಾ
ಉದ್ಯೋಗ	೪೩೨	೫೪
ವಿದ್ಯಾರ್ಹತೆ	೪೮	೬
ಜಾತಿ	೧೬೦	೨೦
ದೈಹಿಕಮಟ್ಟದ ಆಧಾರದಲ್ಲಿ	೧೬	೨
ಅನ್ವಯಿಸುವುದಿಲ್ಲ	೧೪೪	೧೮
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವ ಸಂದರ್ಭದಲ್ಲಿ ಪರಿಗಣಿಸಲಾಗುವ ಅಂಶಗಳ ಬಗ್ಗೆ ಕೇಳಲಾದ ಪ್ರಶ್ನೆಗೆ ಶೇಕಡಾ ೫೪ರಷ್ಟು ಮಾಹಿತಿದಾರರು ಉದ್ಯೋಗ ಆಧಾರಿಸಿ, ಶೇಕಡಾ ೬ರಷ್ಟು ಮಾಹಿತಿದಾರರು ವಿದ್ಯಾರ್ಹತೆಯನ್ನು ಪರಿಗಣಿಸಿ, ಶೇಕಡಾ ೨೦ರಷ್ಟು ಮಾಹಿತಿದಾರರು ಜಾತಿ ಆಧರಿಸಿ, ಶೇಕಡಾ ೨ರಷ್ಟು ಮಾಹಿತಿದಾರರು ಮಹಿಳೆಯರು ದೈಹಿಕ ಮಟ್ಟದ ಆಧಾರದಲ್ಲಿ ನಿರ್ಧಾರವನ್ನು ವ್ಯಕ್ತಪಡಿಸುವುದಾಗಿ ತಿಳಿಸಿರುತ್ತಾರೆ. ಶೇಕಡಾ ೧೮ರಷ್ಟು ಮಾಹಿತಿದಾರರು ಈ ಪ್ರಶ್ನೆಗೆ ತಮಗೆ ಅನ್ವಯಿಸುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ, ಕಾರಣ ಅವರುಗಳು ಅವಿವಾಹಿತರು, ಮಕ್ಕಳಿಲ್ಲದವರು ಹಾಗೂ ಕೇವಲ ಗಂಡು ಮಕ್ಕಳನ್ನು ಹೊಂದಿರುವ ಮಾಹಿತಿದಾರರಾಗಿರುವುದು.

ಹೆಣ್ಣು ಮಕ್ಕಳ ವಿವಾಹದಲ್ಲಿ ವರನ ಉದ್ಯೋಗಕ್ಕೆ ಪ್ರಾಧಾನ್ಯತೆ ನೀಡುತ್ತಿರುವುದರ ಮೂಲಕ ಹೆಣ್ಣು ಮಕ್ಕಳ ವಿವಾಹ ಸಂದರ್ಭದಲ್ಲಿ ಆರ್ಥಿಕ ಸುಭದ್ರತೆಗೆ ಮೊಗವೀರ ಸಮುದಾಯ ಒತ್ತು ನೀಡುತ್ತಿರುವುದು ಸ್ಪಷ್ಟವಾಗುತ್ತದೆ. ಒಂದು ಕಾಲದಲ್ಲಿ ಕೇವಲ ಜಾತಿಗೆ ಮೊಗವೀರ ಸಮುದಾಯ ಪ್ರಾಧಾನ್ಯತೆ ನೀಡುತ್ತಿತ್ತು. ಆದರೆ ಈಗ ಈ ಸಮುದಾಯದಲ್ಲಿ ಜಾತಿಗೆ ಪ್ರಾಮುಖ್ಯತೆ ಕಡಿಮೆಯಾಗಿರುವುದು ಕಂಡು ಬಂದಿದ್ದು, ಇದೊಂದು ಸಾಮಾಜಿಕ ಪರಿವರ್ತನೆಯಾಗಿದೆ.

ಹೆಣ್ಣಿನ ಕ್ಷಡೆಯವರಿಗೆ ಆಯ್ಕೆ ನಿರ್ಧಾರವನ್ನು ವ್ಯಕ್ತಪಡಿಸುವ ಅಧಿಕಾರವನ್ನು ಮಾತೃ ಪ್ರಧಾನತೆಯ ಕಾರಣದಿಂದಾಗಿಯೇ ಲಭಿಸಿರುವುದಾಗಿ ಮಾಹಿತಿದಾರರು ಕ್ಷೇತ್ರಕಾರ್ಯದಲ್ಲಿ ತಿಳಿಸಿರುವ ವಿಚಾರವಾಗಿದೆ. ಹಾಗೆಯೇ ಕುಂದಾಪುರ ತಾಲೂಕಿನಲ್ಲಿರುವ ಮೊಗವೀರ ಸಮುದಾಯದಲ್ಲಿ ವಿವಾಹದ ನಂತರ ಗಂಡು, ಹೆಣ್ಣಿನ ಮನೆಯಲ್ಲಿ ವಾಸಿಸುವಂತಹ ಪರಂಪರೆ ಇರುವುದರಿಂದಾಗಿ ಹೆಣ್ಣಿನ ಆಯ್ಕೆ ಹಾಗೂ ನಿರ್ಧಾರಕ್ಕೆ ಬೆಲೆ ಇರುವುದಾಗಿ ಮಾಹಿತಿದಾರರು ತಿಳಿಸಿರುತ್ತಾರೆ.

ಕೋಷ್ಟಕ ೫.೧೭ ಕುಟುಂಬದ ಸಮಾರಂಭಗಳಲ್ಲಿ ಸಮಾನತೆ ಹಾಗೂ ಸ್ತ್ರೀಯರ ಸ್ಥಾನಮಾನದ ವಿವರಗಳು

ಕುಟುಂಬದ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಅವಕಾಶಗಳಿವೆಯೇ	ಸಂಖ್ಯೆ	ಶೇಕಡಾ
ಹೌದು	೪೮೦	೬೦
ಇಲ್ಲ	೩೨೦	೪೦
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರರಲ್ಲಿ ಶೇಕಡಾ ೬೦ ರಷ್ಟು ಮಾಹಿತಿದಾರರು ಕುಟುಂಬದ ಸಮಾರಂಭಗಳಲ್ಲಿ ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಅವಕಾಶಗಳಿರುವುದಾಗಿ ಶೇಕಡಾ ೪೦ ರಷ್ಟು ಮಾಹಿತಿದಾರರು ಸಮಾನ ಅವಕಾಶಗಳಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಮದುವೆ, ಸೀಮಂತ, ಮಗುವಿನ ನಾಮಕರಣ ಇತ್ಯಾದಿ ಸಮಾರಂಭಗಳಲ್ಲಿ ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಅವಕಾಶಗಳಿದ್ದು, ಧಾರ್ಮಿಕ ಸಮಾರಂಭಗಳಾದ ಕೋಲ, ಉತ್ಸವ, ಭೂತಾರಾಧನೆ ಇತ್ಯಾದಿ ಸಮಾರಂಭಗಳಲ್ಲಿ ಮಾತ್ರ ಪುರುಷರ ಪ್ರಾಧಾನ್ಯತೆ ಹೆಚ್ಚಾಗಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ.

ವಸುಂಧರ.ಬಿ.ಸಿ(೨೦೧೭)ಅವರು ಶಿವಮೊಗ್ಗ ಜಿಲ್ಲೆಯಲ್ಲಿ ನಡೆಸಿದ ಅಧ್ಯಯನವು ಮೊಗವೀರ ಸಮುದಾಯದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಮಹಿಳೆಗೆ ಮುಖ್ಯ ಸ್ಥಾನವನ್ನು ನೀಡಲಾಗಿದೆ. ಹೆಣ್ಣನ್ನು ಭೂಮಿಗೆ ಹೋಲಿಸುವ ಮತ್ತು ಗೌರವಿಸುವ ಪರಂಪರೆ ಇವರಲ್ಲಿದೆ. ಬುಡಕಟ್ಟು ಸಮುದಾಯದಲ್ಲಿರುವಂತೆ ಇವರಲ್ಲೂ ಮೊದಲು ಹೆಣ್ಣು ಮಗು ಹುಟ್ಟಿದರೆ, ಅದು ಸಮೃದ್ಧಿಯ ಸಂಕೇತವೆಂದುಕೊಳ್ಳುತ್ತಾರೆ. ಹೆಣ್ಣಿನ ರೂಪ, ಸ್ವಭಾವ, ಲಕ್ಷಣ, ಛಲ, ಆತ್ಮವಿಶ್ವಾಸದ ಕುರಿತಾದ ಅನೇಕ ಹಾಡು, ಜನಪದ ಕಥೆಗಳು ಇವರ ಸಾಹಿತ್ಯದಲ್ಲಿವೆ ಎಂಬುದಾಗಿ ತಿಳಿಸುತ್ತದೆ.

ಕೋಷ್ಟಕ ೫.೧೮ ಮೊಗವೀರ ಮಹಿಳೆಯರ ಮೇಲೆ ಆಧುನೀಕರಣದ ಪ್ರಭಾವ

ಮಹಿಳೆಯರ ಮೇಲೆ ಆಧುನೀಕರಣದ ಪ್ರಭಾವ	ಸಂಖ್ಯೆ	ಶೇಕಡಾ
ಇದೆ	೭೧೨	೮೯
ಇಲ್ಲ	೮೮	೧೧
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೮೯ ರಷ್ಟು ಮಾಹಿತಿದಾರರು ತಾವು ಆಧುನೀಕರಣದ ಪ್ರಭಾವಕ್ಕೆ ಒಳಗಾಗಿರುವುದಾಗಿಯೂ, ಶೇಕಡಾ ೧೧ ರಷ್ಟು ಮಾಹಿತಿದಾರರು ಆಧುನೀಕರಣದ ಯಾವುದೇ ಪ್ರಭಾವಕ್ಕೆ ಒಳಗಾಗಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಸಮಾಜದಲ್ಲಿ ಎಲ್ಲಾ ಜಾತಿ ಪಂಗಡಗಳೂ ಸಾಮಾಜಿಕ ಬದಲಾವಣೆಗಳಿಗೆ ತೆರೆದುಕೊಳ್ಳುತ್ತವೆ. ಈ ವಿಷಯದಲ್ಲಿ ಮೊಗವೀರ ಮಹಿಳೆಯರಿಗೆ ಹೊಸತನವನ್ನು ಸ್ವೀಕರಿಸುವ ಗುಣವಿದೆ. ಆಧುನೀಕರಣದ ಪ್ರಭಾವ ಮೊಗವೀರ ಮಹಿಳೆಯರ ಮೇಲಾಗಿದ್ದು ಅವರ ಚಿಂತನೆಗಳು, ಆಹಾರ ಪದ್ಧತಿ, ಉಡುಗೆ ತೊಡುಗೆಗಳಲ್ಲಿ ಆಧುನೀಕರಣದ ಪ್ರವೇಶಿಸಿದೆ.

ಕೋಷ್ಟಕ ೫.೧೯ ಮೊಗವೀರ ಮಹಿಳೆಯರಲ್ಲಿ ಆಧುನೀಕರಣ ಅಧಿಕ ಪ್ರಭಾವ ಬೀರಿರುವ ಕ್ಷೇತ್ರಗಳು

ಆಧುನೀಕರಣ ಪ್ರಭಾವ ಬೀರಿರುವ ಕ್ಷೇತ್ರಗಳು	ಸಂಖ್ಯೆ	ಶೇಕಡಾ
ಶೈಕ್ಷಣಿಕ ಅಭಿವೃದ್ಧಿ	೩೬೨	೪೫.೨೫
ಉಡುಗೆ ತೊಡುಗೆಯಲ್ಲಿ ಬದಲಾವಣೆ	೧೨೦	೧೫
ಸಮಾನ ಸ್ಥಾನಮಾನದ ಆಲೋಚನೆ	೧೩೪	೧೬.೭೫
ಸಂಪರ್ಕ–ಸಂವಹನದಲ್ಲಿ ಪ್ರಾಬಲ್ಯ	೯೬	೧೨
ಪ್ರಭಾವ ಇಲ್ಲ	೮೮	೧೧
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಮೇಲೆ ಆಧುನೀಕರಣ ಪ್ರಭಾವ ಬೀರುವ ಕ್ಷೇತ್ರಗಳ ಬಗ್ಗೆ ಕೇಳಿದ ಪ್ರಶ್ನೆಗೆ, ಶೇಕಡಾ ೪೫.೨೫ರಷ್ಟು ಮಾಹಿತಿದಾರರು ಕುಟುಂಬದಲ್ಲಿ ಶೈಕ್ಷಣಿಕವಾಗಿ ಅಭಿವದ್ಧಿಯಾಗಿರುವುದಾಗಿ ಕುಟುಂಬದಲ್ಲಿ ಮಕ್ಕಳು, ಸಹೋದರ ಸಹೋದರಿಯರಲ್ಲಿ ಶಿಕ್ಷಿತರಾಗುತ್ತಿರುವ ಪ್ರಮಾಣ ಹೆಚ್ಚಳವಾಗುತ್ತಿರುವುದಾಗಿಯೂ, ಶೇಕಡಾ ೧೫ರಷ್ಟು ಮಾಹಿತಿದಾರರು ಉಡುಗೆ ತೊಡುಗೆಯಲ್ಲಿ ಬದಲಾವಣೆಯಾಗಿರುವುದಾಗಿ, ಶೇಕಡಾ ೧೬.೭೫ರಷ್ಟು ಮಾಹಿತಿದಾರರು ಕುಟುಂಬದಲ್ಲಿ ಸ್ತ್ರೀ ಪುರುಷರಿಗೆ ಸಮಾನವಾದ ಸ್ಥಾನಮಾನ ಲಭಿಸುವಲ್ಲಿ ಆಧುನೀಕರಣ ಪ್ರಭಾವ ಬೀರಿದೆ ಎಂಬುದಾಗಿಯೂ, ಶೇಕಡಾ ೧೨ರಷ್ಟು ಮಾಹಿತಿದಾರರು ಸಂಪರ್ಕ ಸಂವಹನ ಸಾಮರ್ಥ್ಯ ಹೆಚ್ಚಳವಾಗಿರುವುದಾಗಿ ತಿಳಿಸಿದ್ದಾರೆ. ಅವರುಗಳಲ್ಲಿ ಶೇಕಡಾ ೨ರಷ್ಟು ಮಾಹಿತಿದಾರರು ಮಾಹಿತಿದಾರರು ಮೋಟಾರು ಕಾರು ಹೊಂದಿರುವುದಾಗಿಯೂ, ಶೇಕಡಾ ೮ರಷ್ಟು ಮಾಹಿತಿದಾರರು ದ್ವಿ ಚಕ್ರ ವಾಹನವನ್ನು ಹೊಂದಿದವರಾಗಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೧೧ರಷ್ಟು ಮಾಹಿತಿದಾರರು ಆಧುನೀಕರಣದಿಂದ ತಮ್ಮಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಕೋಷ್ಟಕ ೫.೨೦ ಮಾಹಿತಿದಾರರ ಉದ್ಯೋಗದ ವಿವರಗಳು

ಉದ್ಯೋಗಗಳ ವಿವರ	ಸಂಖ್ಯೆ	ಶೇಕಡಾ
ಕೃಷಿ	೨೮	೩.೫೦
ಮೀನುಗಾರಿಕೆ	೪೭೮	೫೯.೭೫
ಸ್ವ ಉದ್ಯೋಗ	೭೬	೯.೫
ಸರಕಾರಿ ಉದ್ಯೋಗ	೪೦	೫
ಖಾಸಗಿ ಕ್ಷೇತ್ರಗಳಲ್ಲಿ	೮೨	೧೦.೨೫
ಅನ್ವಯಿಸುವುದಿಲ್ಲ	೯೬	೧೨
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಈ ಮೇಲಿನ ಕೋಷ್ಟಕ ೫.೨೦ ಪ್ರಕಾರ ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೩.೫೦ರಷ್ಟು ಮಾಹಿತಿದಾರರು ಕೃಷಿ ಕ್ಷೇತ್ರದಲ್ಲಿ ದುಡಿಯುವರು, ಶೇಕಡಾ ೫೯.೭೫ ರಷ್ಟು ಮಾಹಿತಿದಾರರು ಮೀನುಗಾರಿಕೆಯ ವಿವಿಧ ಕ್ಷೇತ್ರಗಳಲ್ಲಿ ಅಂದರೆ ಶೇಕಡಾ ೭.೨೫ರಷ್ಟು ಮಾಹಿತಿದಾರರು ಮೀನು ಮಾರುಕಟ್ಟೆಯಲ್ಲಿ ಮೀನು ಮಾರುವವರು, ಶೇಕಡಾ ೧೬.೫ರಷ್ಟು ಮಾಹಿತಿದಾರರು ಮೀನು ಸಂಸ್ಕರಣ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವವರು, ಶೇಕಡಾ೨೩.೫ರಷ್ಟು ಮಂದಿ ಉಡುಪಿ ಜಿಲ್ಲೆಯ ಬಂದರುಗಳಲ್ಲಿ, (ಹೆಜಮಾಡಿ ಕೋಡಿ, ಮಲ್ಪೆ, ಹಂಗಾರಕಟ್ಟೆ, ಗಂಗೊಳ್ಳಿ) ಶೇಕಡಾ ೭ರಷ್ಟು ಮಾಹಿತಿದಾರರು ಒಣ ಮೀನು ವ್ಯಾಪಾರಿಗಳು, ಶೇಕಡಾ ೫ರಷ್ಟು ಮಾಹಿತಿದಾರರು ಮನೆ ಮನೆಗೆ ತೆರಳಿ ಮೀನು ಮಾರಾಟ ಮಾಡುವ ಮಹಿಳೆಯರಾಗಿರುತ್ತಾರೆ. ಶೇಕಡಾ ೯.೫ರಷ್ಟು ಮಾಹಿತಿದಾರರು ಸ್ವ ಉದ್ಯೋಗವನ್ನು ಅಂದರೆ ಶೇಕಡಾ ೩.೭೫ರಷ್ಟು ಮಾಹಿತಿದಾರರು ಮೀನಿನ ಮಸಾಲೆ ತಯಾರಿಸುವುದಾಗಿ, ಶೇಕಡಾ ೧.೨೫ರಷ್ಟು ಮಾಹಿತಿದಾರರು ಉಪ್ಪಿನ ಕಾಯಿ ತಯಾರಿ, ಶೇಕಡಾ ೧.೫ರಷ್ಟು ಮಾಹಿತಿದಾರರು ಪಾರ್ಲರ್‌ನ್ನು ನಡೆಸುವುದಾಗಿ, ಶೇಕಡಾ ೩ರಷ್ಟು ಮಾಹಿತಿದಾರರು ತಂಪು ಪಾನೀಯಗಳ ಅಂಗಡಿಗಳನ್ನು ನಡೆಸುವುದಾಗಿ ತಿಳಿಸಿರುತ್ತಾರೆ. ಶೇಕಡಾ ೫ರಷ್ಟು ಮಾಹಿತಿದಾರರು ಸರಕಾರಿ ಉದ್ಯೋಗ ಅಂದರೆ ಶೇಕಡಾ ೦.೨೫ರಷ್ಟು ಮಂದಿ ಪಂಚಾಯತ್ ಕಾರ್ಯದರ್ಶಿಯಾಗಿ, ಶೇಕಡಾ ೦.೫ರಷ್ಟು ಮಂದಿ ಪ್ರಥಮ ದರ್ಜೆ ಸಹಾಯಕಿಯಾಗಿ, ಶೇಕಡಾ ೦.೭೫ರಷ್ಟು ಮಾಹಿತಿದಾರರು ಬ್ಯಾಂಕ್ ಗುಮಾಸ್ತೆಯಾಗಿ, ಶೇಕಡಾ ೦.೭೫ರಷ್ಟು ಮಾಹಿತಿದಾರರು ಶುಶ್ರೂಷಕಿಯಾಗಿ, ಶೇಕಡಾ ೧.೫ರಷ್ಟು ಮಾಹಿತಿದಾರರು ಶಿಕ್ಷಕಿಯರಾಗಿ, ಶೇಕಡಾ ೧.೨೫ ರಷ್ಟು ಮಾಹಿತಿದಾರರು ದ್ವಿತೀಯ ದರ್ಜೆ ಸಹಾಯಕಿಯರಾಗಿ ಸರಕಾರಿ ಉದ್ಯೋಗ ಪಡೆದಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೧೦.೨೫ರಷ್ಟು ಮಾಹಿತಿದಾರರು ಖಾಸಗಿ ಕ್ಷೇತ್ರಗಳಲ್ಲಿ ಅಂದರೆ, ಖಾಸಗಿ ಸಂಸ್ಥೆಗಳಲ್ಲಿ ಶೇಕಡಾ ೩ ರಷ್ಟು ಮಾಹಿತಿದಾರರು, ಚಿನ್ನಾಭರಣ ಅಂಗಡಿಗಳಲ್ಲಿ ಶೇಕಡಾ ೧ ರಷ್ಟು ಮಾಹಿತಿದಾರರು ಜವಳಿ ಉದ್ಯಮಗಳಲ್ಲಿ ಶೇಕಡಾ ೨ರಷ್ಟು ಮಾಹಿತಿದಾರರು, ಖಾಸಗಿ ಒಡೆತನದ ಶಾಲಾ ಕಾಲೇಜುಗಳಲ್ಲಿ

ಶಿಕ್ಷಕಿಯರಾಗಿ ಶೇಕಡಾ ೨.೫ರಷ್ಟು ಮಾಹಿತಿದಾರರು ಸರಕಾರಿ ಕಛೇರಿಗಳಲ್ಲಿ ಹಾಗೂ ತಾತ್ಕಾಲಿಕ ಉದ್ಯೋಗಿಗಳಾಗಿ ಶೇಕಡಾ ೧.೭೫ರಷ್ಟು ಮಾಹಿತಿದಾರರು ದುಡಿಯುತ್ತಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೧೨ರಷ್ಟು ಮಾಹಿತಿದಾರರು ಅನ್ವಯಿಸುವುದಿಲ್ಲ ಎಂಬುದಾಗಿ ತಿಳಿಸಿದ್ದು ಅವರಲ್ಲಿ ಶೇಕಡಾ ೪ರಷ್ಟು ಮಾಹಿತಿದಾರರು ವಿದ್ಯಾರ್ಥಿಗಳು ಹಾಗೂ ಶೇಕಡಾ ೮ರಷ್ಟು ಮಾಹಿತಿದಾರರು ಗೃಹಿಣಿಯರ ವಿಭಾಗಕ್ಕೆ ಸೇರಿರುತ್ತಾರೆ.

ಮೊಗವೀರ ಮಹಿಳೆಯರಿಗೆ ವಿವಿಧ ಉದ್ಯೋಗಾವಕಾಶಗಳಿದ್ದರೂ ಅಧಿಕ ಸಂಖ್ಯೆಯ ಮಹಿಳೆಯರು ಕುಲಕಸುಬಾದ ಮೀನುಗಾರಿಕೆಯನ್ನು ಆಯ್ಕೆ ಮಾಡಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅವರಲ್ಲಿ ಹೆಚ್ಚಿನವರು ಕಡಿಮೆ ವಿದ್ಯಾಭ್ಯಾಸ ಮಾಡಿರುವವರು. ಇತರ ಉದ್ಯೋಗಗಳಿಗೆ ಹೆಚ್ಚಿನ ಶಿಕ್ಷಣ ಬೇಕಾಗುತ್ತದೆ ಎಂಬ ಕಾರಣಕ್ಕೆ ಅವರ ಇತರ ಉದ್ಯೋಗಗಳ ಬಗ್ಗೆ ಯೋಚನೆ ಮಾಡಿಲ್ಲ. ಇನ್ನು ಕೆಲವರು ಕುಲಕಸುಬಾದರೆ ತಮ್ಮಲ್ಲಿರುವ ಸಾಮಾರ್ಥ್ಯ ಹಾಗೂ ಕೌಶಲಗಳಿಗೆ ಹೊಂದುತ್ತದೆ ಎಂಬ ಕಾರಣಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಹೊಸ ತಲೆಮಾರಿನ ಶಿಕ್ಷಿತ ಮಹಿಳೆಯರಿಗೆ ಕುಲಕಸುಬಿನ ಬಗ್ಗೆ ಆಸಕ್ತಿ ಕಡಿಮೆಯಿದೆ. ಅವರು ಕಡಿಮೆ ಶ್ರಮದಾಯಕ ಹಾಗೂ ಅಧಿಕ ಉತ್ಪತ್ತಿ ನೀಡಬಲ್ಲ ಉದ್ಯೋಗಗಳನ್ನು ಇಷ್ಟಪಟ್ಟು ಆಯ್ದುಕೊಳ್ಳುತ್ತಿದ್ದಾರೆ.

ಪ್ಯಾಚರೊಪುಲೊಸ್(೨೦೦೨) ಅವರ ಅಧ್ಯಯನ *'ರಿಟರ್ನ್ಸ್ ಟು ಇನ್‌ವೆಸ್ಟ್‌ಮೆಂಟ್ ಇನ್ ಎಜುಕೇಶನ್ ಎ ಪರ್ದರ್ ಅಪ್‌ಡೇಟ್'*ನಲ್ಲಿ ಶಿಕ್ಷಣವು ಉದ್ಯೋಗವನ್ನು ಪಡೆಯುವಲ್ಲಿ ಪೂರಕವಾಗಿದ್ದು ಉದ್ಯೋಗವು ಆರ್ಥಿಕ ಶಕ್ತಿಯಾಗಿದೆ. ಇವರ ವಾದದಂತೆ, ಶಿಕ್ಷಣವು ಮಹಿಳೆಯರಿಗೆ ಒಳ್ಳೆಯ ಉದ್ಯೋಗ ಪಡೆಯಲು ಸಹಕಾರಿಯಾಗಿದೆ ಎಂದಿದೆ. ವಸುಂಧರ.ಬಿ.ಸಿ(೨೦೧೭) ಅವರ ಅಧ್ಯಯನವು ಮೊಗವೀರ ಸಮುದಾಯದ ಮಹಿಳೆಯರು ೨೦-೩೦ ವರ್ಷಗಳ ಹಿಂದೆ ಪುರುಷರು ಹಿಡಿದು ತರುವ ಮೀನುಗಳನ್ನು ಬುಟ್ಟಿಯಲ್ಲಿ ಹೊತ್ತು ಅಕ್ಕ-ಪಕ್ಕದ ಊರುಗಳಲ್ಲಿ ಮಾರಲು ಹೋಗುತ್ತಿದ್ದ ಮಹಿಳೆಯರು ಕಾಲ ಬದಲಾದಂತೆ ತಮ್ಮ ಆರ್ಥಿಕ ಜೀವನಕ್ಕಾಗಿ ಬೇರೆ ವೃತ್ತಿಗಳನ್ನು ಮಾಡುತ್ತಿರುವುದು ಕಂಡು ಬರುತ್ತಿರುವುದಾಗಿ ಉಲ್ಲೇಖಿಸಿದ್ದಾರೆ.

ಕೋಷ್ಟಕ ೫.೨೧ ಮಾಹಿತಿದಾರರ ಮಾಸಿಕ ಆದಾಯದ ವಿವರಗಳು

ಮಾಸಿಕ ಆದಾಯ	ಸಂಖ್ಯೆ	ಶೇಕಡಾ
೩ ರಿಂದ ೫ ಸಾವಿರ	೧೭೦	೨೧.೨೫
೬ ರಿಂದ ೧೦ ಸಾವಿರ	೪೦೦	೫೦
೧೧ ರಿಂದ ೧೫ ಸಾವಿರ	೮೪	೧೦.೫
೧೬ ಸಾವಿರ ಮೇಲ್ಪಟ್ಟು	೫೦	೬.೨೫
ಅನ್ವಯಿಸುವುದಿಲ್ಲ	೯೬	೧೨
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರ ಕುಟುಂಬದ ಮಾಸಿಕ ಆದಾಯವನ್ನು ಗಮನಿಸಿದಾಗ ಶೇಕಡಾ ೨೧.೨೫ರಷ್ಟು ಮಾಹಿತಿದಾರರು ೩ ರಿಂದ ೫ ಸಾವಿರದೊಳಗಿನ ಮಾಸಿಕ ಆದಾಯವನ್ನು

ಹೊಂದಿದ್ದಾರೆ. ಶೇಕಡಾ ೫೦ರಷ್ಟು ಮಾಹಿತಿದಾರರು ೬ ಸಾವಿರದಿಂದ ೧೦ ಸಾವಿರದೊಳಗಿನ ಆದಾಯವನ್ನು ಹೊಂದಿದವರಾಗಿದ್ದು, ಶೇಕಡಾ ೧೦.೫ರಷ್ಟು ಮಾಹಿತಿದಾರರು ೧೧ ರಿಂದ ೧೫ ಸಾವಿರ ಆದಾಯವನ್ನು, ಶೇಕಡಾ ೬.೨೫ರಷ್ಟು ಮಾಹಿತಿದಾರರು ೧೬ ಸಾವಿರ ಮೇಲ್ಪಟ್ಟು ಆದಾಯವನ್ನು ಹೊಂದಿವರಾಗಿದ್ದಾರೆ. ಉಳಿದ ಶೇಕಡಾ ೧೨ರಷ್ಟು ಮಾಹಿತಿದಾರರು ಅನ್ವಯಿಸುವುದಿಲ್ಲ ಎಂಬುದಾಗಿ ತಿಳಿಸಿದ್ದು, ಅವರಲ್ಲಿ ಶೇಕಡಾ ೪ರಷ್ಟು ಮಾಹಿತಿದಾರರು ವಿದ್ಯಾರ್ಥಿಗಳು ಹಾಗೂ ಶೇಕಡಾ ೮ರಷ್ಟು ಮಂದಿ ಗೃಹಿಣಿಯರು ಸೇರಿರುತ್ತಾರೆ.

ಈ ಮಾಹಿತಿಗಳನ್ನು ಗಮನಿಸಿದಾಗ ಶೇಕಡಾ ೭೧.೨೫ರಷ್ಟು ಮಾಹಿತಿದಾರರ ಆದಾಯವು ಮಾಸಿಕ ಹತ್ತು ಸಾವಿರಕ್ಕಿಂತ ಕಡಿಮೆ ಇದೆ. ಅವರ ಆರ್ಥಿಕ ಪರಿಸ್ಥಿತಿಯು ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬುದು ಈ ಮಾಹಿತಿಯಿಂದ ಸ್ಪಷ್ಟವಾಗುತ್ತದೆ. ಮೀನುಗಾರಿಕಾ ವೃತ್ತಿಯಾಧಾರಿತ ಮಹಿಳೆಯರಿಗೆ ಕೆಲವು ತಿಂಗಳುಗಳಲ್ಲಿ ಆದಾಯವೇ ಇಲ್ಲದಿರುವ ಸ್ಥಿತಿಯಿಂದಾಗಿ ಅವರ ಸರಾಸರಿ ಆದಾಯವು ಕಡಿಮೆಯಿದೆ. ಕೆಲವೊಂದು ಮೀನುಗಾರಿಕಾ ಕುಟುಂಬಗಳು ಅವರ ಸಂಘಟನೆಗಳು ನೀಡುವ ಸಹಕಾರದಿಂದ ಜೀವನ ನಿರ್ವಹಣೆ ನಡೆಸುವಂತಹ ಪರಿಸ್ಥಿತಿಯಲ್ಲಿರುವುದನ್ನು ಈ ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ.

ಈಗಾಗಲೇ ಚರ್ಚಿಸಿರುವಂತೆ ಅತ್ಯಲ್ಪ ಆದಾಯವು ಕುಲಕಸುಬಾದ ಮೀನುಗಾರಿಕೆಯನ್ನು ಮೊಗವೀರ ಮಹಿಳೆಯರು ತೊರೆಯುವಂತೆ ಪ್ರೇರೇಪಿಸುತ್ತಿದೆ. ಕೆಲವೊಂದು ಸಂದರ್ಭಗಳಲ್ಲಿ ಅವರ ದೈನಂದಿನ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದಂತಹ ಸ್ಥಿತಿಯಿದೆ. ಮಹಿಳೆಯರಿಗೆ ಹೋಲಿಸಿದರೆ ಈ ವೃತ್ತಿಯಲ್ಲಿರುವ ಪುರುಷರ ಆದಾಯವು ಚೆನ್ನಾಗಿದೆ. ನಿರ್ದಿಷ್ಟ ಆದಾಯದ ಭರವಸೆಯಿಲ್ಲದಿರುವುದು, ಸಂಕಷ್ಟಗಳ ಸಂದರ್ಭದಲ್ಲಿ ಸಹಕಾರದ ಕೊರತೆ, ನಿವೃತ್ತಿ ವೇತನದಂತಹ ಸೌಲಭ್ಯವಿಲ್ಲದಿರುವುದು ಮೊಗವೀರ ಮಹಿಳೆಯರನ್ನು ಕುಲಕಸುಬಾದ ಮೀನುಗಾರಿಕೆಯಿಂದ ವಿಮುಖರಾಗುವಂತೆ ಮಾಡುತ್ತದೆ.

ಕೋಷ್ಟಕ ೫.೨೨ ಉದ್ಯೋಗ ಹಾಗೂ ಆರ್ಥಿಕ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ಮಾಹಿತಿದಾರರ ಅಭಿಪ್ರಾಯ

ಮಾಹಿತಿದಾರರ ವೃತ್ತಿಗೆ ಸಂಬಂಧಿಸಿದ ಅಂಶಗಳು	ಹೌದು		ಇಲ್ಲ		ಅನ್ವಯಿಸುವುದಿಲ್ಲ		ಒಟ್ಟು	
	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.
ಹಿರಿಯ ತಲೆಮಾರಿನ ಮಹಿಳೆಯರು ಉದ್ಯೋಗಸ್ಥರು	೬೫೬	೮೨	೧೪೪	೧೮	–	–	೮೦೦	೧೦೦
ನೀವು ಆರ್ಥಿಕವಾಗಿ ಸ್ವತಂತ್ರರು	೫೦೦	೬೨.೫	೨೦೪	೨೫.೫	೯೬	೧೨	೮೦೦	೧೦೦
ನಿಮ್ಮ ವೃತ್ತಿಯ ಜೊತೆಗೆ ಗೃಹಕೃತ್ಯವನ್ನು ನಿರ್ವಹಿಸುವವರು	೬೦೮	೭೬	೯೬	೧೨	೯೬	೧೨	೮೦೦	೮೮
ವೃತ್ತಿಯಲ್ಲಿ ಸಮಸ್ಯೆಗಳಿವೆ	೪೯೦	೬೧.೨೫	೨೧೪	೨೬.೭೫	೯೬	೧೨	೮೦೦	೮೮
ವೃತ್ತಿಗೆ ಸಂಬಂಧಪಟ್ಟ ಸಂಘಟನೆಯಲ್ಲಿ ತೊಡಗಿಸಿಕೊಂಡವರು	೪೮೦	೬೦	೮೦	೧೦	೨೪೦	೩೦	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಮೇಲಿನ ಕೋಷ್ಟಕ ೫.೨೨ರಲ್ಲಿ ಹಿರಿಯ ತಲೆಮಾರಿನ ಮಹಿಳೆಯರು ಉದ್ಯೋಗಸ್ಥರೇ ಎಂಬುದಾಗಿ ಮಾಹಿತಿದಾರರಲ್ಲಿ ಕೇಳಲಾಗಿ, ಶೇಕಡಾ ೮೨ರಷ್ಟು ಮಾಹಿತಿದಾರರು ಉದ್ಯೋಗಸ್ಥರಾಗಿದ್ದು, ಅವರಲ್ಲಿ ಶೇಕಡಾ ೬೫ರಷ್ಟು ಮಾಹಿತಿದಾರರು ಮೀನುಗಾರಿಕೆಯನ್ನು, ಶೇಕಡಾ ೧೪ರಷ್ಟು ಮಾಹಿತಿದಾರರು ಕೃಷಿಯನ್ನು, ಶೇಕಡಾ ೩ರಷ್ಟು ಮಾಹಿತಿದಾರರು ಕೂಲಿ ಕೆಲಸವನ್ನು ನಿರ್ವಹಿಸುತ್ತಿದ್ದವರು ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೧೮ರಷ್ಟು ಮಾಹಿತಿದಾರರು ಗೃಹಕೃತ್ಯವನ್ನು ಮಾತ್ರ ಮಾಡುವವರಾಗಿರುವುದಾಗಿ ತಿಳಿಸಿರುತ್ತಾರೆ. ಮಾಹಿತಿದಾರರಲ್ಲಿ ಶೇಕಡಾ ೮೮ರಷ್ಟು ಮಾಹಿತಿದಾರರು ನಾನಾ ಕ್ಷೇತ್ರಗಳಲ್ಲಿ ಉದ್ಯೋಗ ನಿರತರಾಗಿದ್ದು, ಮಾಹಿತಿದಾರರ ಹಾಗೂ ಹಿರಿಯ ತಲೆಮಾರಿನವರ ಸ್ತ್ರೀಯರು ಉದ್ಯೋಗದ ಪ್ರಮಾಣಕ್ಕೆ ಹೋಲಿಸಿದಾಗ ಇದರಲ್ಲಿ ಶೇಕಡಾ

೬ರಷ್ಟು ಮಾಹಿತಿದಾರರು ಹೆಚ್ಚಾಳವಾಗಿರುವುದು ಕಂಡು ಬಂದಿದ್ದು, ಇದು ಮೊಗವೀರ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿದೆ.

ಮೊಗವೀರ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದ ಬಗ್ಗೆ ಕೇಳಲಾದ ಪ್ರಶ್ನೆಗೆ, ಶೇಕಡಾ ೬೨.೫ರಷ್ಟು ಮಾಹಿತಿದಾರರು ಆರ್ಥಿಕವಾಗಿ ಸ್ವತಂತ್ರರಾಗಿರುವುದಾಗಿ, ಶೇಕಡಾ ೨೫.೫ರಷ್ಟು ಮಂದಿ ತಮ್ಮ ದುಡಿಮೆಯನ್ನು ತಮ್ಮ ಇಚ್ಛೆಯಾನುಸಾರ ವಿನಿಯೋಗಿಸುವ ಸ್ವತಂತ್ರವನ್ನು ಹೊಂದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೧೨ರಷ್ಟು ಮಂದಿ ಅನ್ವಯಿಸುವುದಿಲ್ಲ ಎಂಬುದಾಗಿ ಉತ್ತರಿಸಿದವರಲ್ಲಿ ಶೇಕಡಾ ೪ರಷ್ಟು ಮಾಹಿತಿದಾರರು ವಿದ್ಯಾರ್ಥಿಗಳು ಹಾಗೂ ಶೇಕಡಾ ೮ರಷ್ಟು ಮಂದಿ ಗೃಹಿಣಿಯರು ಸೇರಿರುತ್ತಾರೆ.

ವೃತ್ತಿಯ ಜೊತೆಗೆ ಗೃಹಕೃತ್ಯವನ್ನು ನಿಭಾಯಿಸುವಿರಾ ಎಂಬ ಪ್ರಶ್ನೆಯನ್ನು ಕೇಳಲಾಗಿ, ಶೇಕಡಾ ೭೬ರಷ್ಟು ಮಾಹಿತಿದಾರರು ವೃತ್ತಿಯ ಜೊತೆಗೆ ಗೃಹಕೃತ್ಯವನ್ನು ನಿಭಾಯಿಸುವುದಾಗಿ, ಶೇಕಡಾ ೧೨ರಷ್ಟು ಮಾಹಿತಿದಾರರು ಕೂಡು ಕುಟಂಬವನ್ನು ಹೊಂದಿರುವ ಕಾರಣ ಗೃಹಕೃತ್ಯವನ್ನು ನಿಭಾಯಿಸುವ ಹೊಣೆಗಾರಿಕೆ ಇಲ್ಲ ಎಂಬುದಾಗಿ, ಶೇಕಡಾ ೧೨ರಷ್ಟು ಮಾಹಿತಿದಾರರು ಅನ್ವಯಿಸುವುದಿಲ್ಲ ಎಂಬುದಾಗಿ ಉತ್ತರಿಸಿರುತ್ತಾರೆ. ಅವರಲ್ಲಿ ಶೇಕಡಾ ೪ರಷ್ಟು ಮಾಹಿತಿದಾರರು ವಿದ್ಯಾರ್ಥಿಗಳು ಹಾಗೂ ಶೇಕಡಾ ೮ರಷ್ಟು ಮಾಹಿತಿದಾರರು ಗೃಹಿಣಿಯರಾಗಿದ್ದು ಗೃಹಕೃತ್ಯವನ್ನು ಮಾತ್ರ ನಿಭಾಯಿಸುವುದಾಗಿ ತಿಳಿಸಿರುತ್ತಾರೆ.

ವೃತ್ತಿಯಲ್ಲಿ ಏನಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಾ ಎಂಬ ಪ್ರಶ್ನೆಗೆ, ಶೇಕಡಾ ೬೧.೨೫ರಷ್ಟು ಮಾಹಿತಿದಾರರು ಸಮಸ್ಯೆಗಳನ್ನು ಎದುರಿಸಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೨೬.೭೫ರಷ್ಟು ಮಾಹಿತಿದಾರರು ಯಾವುದೇ ಸಮಸ್ಯೆಗಳಿಲ್ಲ ಎಂಬುದಾಗಿಯೂ ಶೇಕಡಾ ೧೨ರಷ್ಟು ಮಾಹಿತಿದಾರರು ಅನ್ವಯಿಸುವುದಿಲ್ಲ ಎಂಬುದಾಗಿ ಉತ್ತರಿಸಿರುತ್ತಾರೆ. ಅವರಲ್ಲಿ ಶೇಕಡಾ ೪ರಷ್ಟು ಮಾಹಿತಿದಾರರು ವಿದ್ಯಾರ್ಥಿಗಳು ಹಾಗೂ ಶೇಕಡಾ ೮ರಷ್ಟು ಮಾಹಿತಿದಾರರು ಗೃಹಿಣಿಯರು ಸೇರಿರುತ್ತಾರೆ.

ಮೀನುಗಾರಿಕೆಯಲ್ಲಿ ನಿರತರಾಗಿರುವ ಮಹಿಳೆಯರು ವೃತ್ತಿಯಲ್ಲಿ ಹಲವಾರು ರೀತಿಯ ಸಮಸ್ಯೆಗಳಿರುವುದಾಗಿಯೂ ತಿಳಿಸಿದ್ದು, ಅವುಗಳಲ್ಲಿ ಪ್ರಧಾನವಾಗಿ ಮೀನುಗಾರಿಕೆಯ ವಿಕ್ರಯಗಾರಿಕೆಗೆ ಸಂಬಂಧಿಸಿದ ಸಮಸ್ಯೆ, ಮೀನುಗಳ ಪೂರೈಕೆ ಅನ್ವಯಿಸಿ ಮೀನಿನ ಬೆಲೆ ನಿರ್ಧರಿತವಾಗಿರುವಿಕೆ, ಬಿಸಿಲು, ಮಳೆ, ಗಾಳಿ(ಪ್ರಾಕೃತಿಕ ವಿಕೋಪಗಳು) ಇರುವಂತಹ ಪ್ರದೇಶಗಳಲ್ಲಿ ದುಡಿಮೆ, ಮೀನಿನ ಉತ್ಪಾದನೆ ಹೆಚ್ಚಿರುವ ದಿನಗಳಲ್ಲಿ ಮೀನಿನ ದರ ಕಡಿಮೆಯಾಗಿ ವ್ಯಾಪಾರದಲ್ಲಿ ನಷ್ಟ ಸಂಭವಿಸುವಿಕೆ, ಮೀನುಗಾರ ವೃತ್ತಿಯಲ್ಲಿ ನಿರತರಾದವರಿಗೆ ಸಮಯದ ನಿರ್ವಹಣೆಯ ಸಮಸ್ಯೆ, ಮೀನುಗಾರಿಕೆಯ ಕೆಲಸವು ಬೆಳಿಗ್ಗೆ ೫ ಗಂಟೆಗೆ ಆರಂಭಗೊಂಡರೆ ರಾತ್ರಿ ೮.೦೦ ಗಂಟೆಯವರೆಗೆ ದುಡಿಯುವಂತಹ ವೇಳೆಯಲ್ಲಿ ಕುಟುಂಬದ ಹಾಗೂ ಮಕ್ಕಳ ಆರೈಕೆ, ಮಕ್ಕಳ ಶಿಕ್ಷಣದ ಕಡೆಗೆ ಸೂಕ್ತ ಗಮನ ನೀಡಲು ಅಸಾಧ್ಯವಾಗುವುದಾಗಿಯೂ, ಇದರಿಂದಾಗಿ ಮಕ್ಕಳ ಶಿಕ್ಷಣದಲ್ಲಿ ಹಿನ್ನಡೆಯಾಗಿ ಅವರು ಶಿಕ್ಷಣವನ್ನು

ಮೊಟಕುಗೊಳಿಸಿ ಅತೀ ಚಿಕ್ಕ ಪ್ರಾಯದಲ್ಲಿಯೇ ಮೀನುಗಾರಿಕೆಯನ್ನು ಅವಲಂಬಿಸುವಂತಹ ಪರಿಸ್ಥಿತಿ ಉಂಟಾಗುವುದಾಗಿಯೂ, ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರಾರ್ಥವಾಗಿ ಸರಕಾರ ಹಾಗೂ ಸಂಘ ಸಂಸ್ಥೆಗಳ ಸಹಾಯದ ನಿರೀಕ್ಷೆಯನ್ನು ಹೊಂದಿರುವುದು ಸಮೀಕ್ಷೆಯಲ್ಲಿ ಕಂಡು ಬರುತ್ತದೆ. ಹಾಗೆಯೇ ಶಿಕ್ಷಣದಿಂದ ವಂಚಿತರಾಗಿ ಮೀನುಗಾರಿಕೆಯನ್ನು ಅವಲಂಬಿಸಿದ ಹೆಣ್ಣು ಮಕ್ಕಳು ಮೀನುಗಾರಿಕೆಯನ್ನೇ ಉದ್ಯೋಗವನ್ನಾಗಿರಿಸಿಕೊಂಡರೆ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳದೇ ರಾಜಕೀಯದತ್ತ ಗಮನಹರಿಸಲು ಅಸಾಧ್ಯವಾಗಿ ಮೊಗವೀರ ಮಹಿಳೆಯರ ಸ್ಥಿತಿಗತಿ ಯಥಾಸ್ಥಿತಿಯಲ್ಲಿ ಮುಂದುವರೆಯುವುದಾಗಿ ಮಾಹಿತಿದಾರರು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಈ ಕೋಷ್ಟಕದ ಕೊನೆಯ ವಿಷಯವೆಂದರೆ ವೃತ್ತಿಗೆ ಸಂಬಂಧಪಟ್ಟಂತೆ ಸಂಘಟನೆಯ ಸದಸ್ಯರಾಗಿರುವಿರಾ ಎಂಬುದನ್ನು ಚರ್ಚಿಸಲಾಗಿ, ಒಟ್ಟು ೮೦೦ ಮಾಹಿತಿದಾರರಲ್ಲಿ ಶೇಕಡಾ ೬೦ರಷ್ಟು ಮಾಹಿತಿದಾರರು ವೃತ್ತಿ ಸಂಬಂಧಿತ ಸಂಘಟನೆಯಲ್ಲಿ ಸದಸ್ಯರಾಗಿರುವುದಾಗಿ, ಶೇಕಡಾ ೧೦ರಷ್ಟು ಮಾಹಿತಿದಾರರು ಯಾವುದೇ ಸಂಘಟನೆಯಲ್ಲಿ ಸದಸ್ಯರಾಗಿಲ್ಲದೇ ಇರುವುದಾಗಿ, ಶೇಕಡಾ ೩೦ರಷ್ಟು ಮಾಹಿತಿದಾರರು ಇಂತಹ ಯಾವುದೇ ಸಂಘಟನೆ ಇದೆ ಎಂಬ ಬಗ್ಗೆ ಅರಿವಿಲ್ಲದವರಾಗಿದ್ದಾರೆ.

ಮೊಗವೀರ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವಿರುವುದಾಗಿ ಅಧ್ಯಯನದಲ್ಲಿ ಮಾಹಿತಿದಾರರು ತಿಳಿಸಿದ್ದಾರೆ. ಆದರೆ ಆರ್ಥಿಕ ಗಳಿಕೆಯನ್ನು ಮಾಡುವ ಮಹಿಳೆಗೆ ಗೃಹಕೃತ್ಯದ ಜವಾಬ್ದಾರಿಯನ್ನು ನಿರ್ವಹಿಸುವ ಹೊಣೆಗಾರಿಕೆಯಿರುವುದರಿಂದಾಗಿ ಅವರಿಗೆ ಮಾನಸಿಕ ಒತ್ತಡದ ಪರಿಸ್ಥಿತಿ ಕಂಡು ಬರುತ್ತದೆ. ಇದೆಲ್ಲದರ ಜೊತೆಗೆ ವೃತ್ತಿಯಲ್ಲಿ ಎದುರಾಗುವ ಸವಾಲುಗಳು ಅವರನ್ನು ಕುಗ್ಗಿಸುತ್ತವೆ. ಈ ಎಲ್ಲಾ ಪರಿಸ್ಥಿತಿಗಳ ನಡುವೆ ಗರಿಷ್ಠ ಸಂಖ್ಯೆಯ ಮಹಿಳೆಯರೂ ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಈ ಸಂಘಟನೆಗಳ ಸದಸ್ಯತ್ವ ಅವರಿಗೆ ಸಾಮಾಜಿಕ ಭದ್ರತೆಯ ಭಾವನೆಯನ್ನು ಹುಟ್ಟು ಹಾಕಿದೆ. ಹೆಚ್ಚಿನ ವೃತ್ತಿ ಸಂಬಂಧಿ ಸವಾಲುಗಳನ್ನು ಈ ಸಂಘಟನೆಯ ಬಲದ ಮೂಲಕ ಎದುರಿಸಲು ಮೊಗವೀರ ಮಹಿಳೆಯರು ಪ್ರಯತ್ನಿಸಿರುವುದು ಅವರ ಸಾಮಾಜಿಕ ಮಿಶ್ರಣ ಹಾಗೂ ಸಬಲೀಕರಣಕ್ಕೆ ಉದಾಹರಣೆಯಾಗಿದೆ.

ಕೋಷ್ಟಕ ೫.೨೩ ಮಾಹಿತಿದಾರರ ಮನೆಯ ಒಡೆತನದ ವಿವರಗಳು

ಮನೆಯ ಒಡೆತನದ ವಿವರಗಳು	ಸಂಖ್ಯೆ	ಶೇಕಡಾ
ಸ್ವಂತ	೭೬೨	೯೫.೨೫
ಬಾಡಿಗೆ	೩೮	೪.೭೫
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರ ಮನೆಯ ಒಡೆತನದ ಬಗ್ಗೆ ಕೇಳಲಾದ ಪ್ರಶ್ನೆಗೆ, ಶೇಕಡಾ ೯೫.೨೫ರಷ್ಟು ಮಾಹಿತಿದಾರರು ಸ್ವಂತ ಮನೆಯನ್ನು ಹೊಂದಿದವರಾಗಿದ್ದು, ಶೇಕಡಾ ೪.೭೫ರಷ್ಟು ಮಾಹಿತಿದಾರರು ಬಾಡಿಗೆ ಮನೆಯಲ್ಲಿ ವಾಸ್ತವ್ಯ ಇರುವುದಾಗಿ ತಿಳಿಸಿರುತ್ತಾರೆ. ಸ್ವಂತ ಮನೆಗಳನ್ನು

ಹೊಂದಿರುವವರಲ್ಲಿ ಶೇಕಡಾ ೭೦.೫ರಷ್ಟು ಮಾಹಿತಿದಾರರು ಹಂಚಿನ ಮನೆಗಳನ್ನು ಹೊಂದಿದ್ದು, ಉಳಿಕೆ ಶೇಕಡಾ ೨೪.೭೫ರಷ್ಟು ಮನೆಗಳು ಆರ್‌ಸಿಸಿ ಮನೆಗಳನ್ನು ಹೊಂದಿರುವವರಾಗಿರುತ್ತಾರೆ.

ಕೋಷ್ಟಕ ೫.೨೪ ಮಾಹಿತಿದಾರರ ಆಸ್ತಿಯ ಒಡೆತನದ ವಿವರಗಳು

ಆಸ್ತಿ ಒಡೆತನ ನಿಮ್ಮ ಹೆಸರಿನಲ್ಲಿ ಇದೆಯೇ	ಸಂಖ್ಯೆ	ಶೇಕಡಾ
ಹೌದು	೧೩೬	೧೭
ಇಲ್ಲ	೬೬೪	೮೩
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಮೇಲಿನ ಕೋಷ್ಟಕ ೫.೨೪ರಲ್ಲಿ ಶೇಕಡಾ ೧೭ರಷ್ಟು ಮಾಹಿತಿದಾರರು ಮಾತ್ರ ಆಸ್ತಿಯ ಒಡೆತನವನ್ನು ಹೊಂದಿದವರಾಗಿದ್ದು, ಶೇಕಡಾ ೮೩ರಷ್ಟು ಮಾಹಿತಿದಾರರು ಯಾವುದೇ ಆಸ್ತಿಯ ಒಡೆತನ ತಮ್ಮ ಹೆಸರಿನಲ್ಲಿ ಇರುವುದಿಲ್ಲ ಎಂಬುದಾಗಿ ಉತ್ತರಿಸಿರುವವರಲ್ಲಿ ಶೇಕಡಾ ೪ರಷ್ಟು ಮಾಹಿತಿದಾರರು ವಿದ್ಯಾರ್ಥಿಗಳು ಸೇರಿರುತ್ತಾರೆ. ಆಸ್ತಿಯನ್ನು ಹೊಂದಿರುವ ಮಾಹಿತಿದಾರರಲ್ಲಿ ಶೇಕಡಾ ೧೨ರಷ್ಟು ಆಸ್ತಿಯು ತನ್ನ ಪಿತ್ರಾರ್ಜಿತ ಆಸ್ತಿಯಾಗಿದ್ದು, ಉಳಿದ ಶೇಕಡಾ ೪ರಷ್ಟು ಮಾಹಿತಿದಾರರು ತಮ್ಮ ದುಡಿಮೆಯ ಉಳಿತಾಯದಲ್ಲಿ ತಾವು ಖರೀದಿಸಿರುವ ಆಸ್ತಿಯಾಗಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ.

ಮೊಗವೀರ ಮಹಿಳೆಯರು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದ್ದಾಗ್ಯೂ ಅವರನ್ನು ಕುಟುಂಬದಲ್ಲಿ ಪುರುಷರೊಂದಿಗೆ ಸಮಾನವಾಗಿ ಪರಿಗಣಿಸಲಾಗಿಲ್ಲ. ಮಾಹಿತಿದಾರ ಮಹಿಳೆಯರು ದುಡಿದ ಹಣವನ್ನು ತನ್ನ ಗಂಡನಿಗೆ ನೀಡಿದಾಗಲೂ ಆಸ್ತಿಯು ಗಂಡನ ಹೆಸರಿನಲ್ಲಿಯೇ ಇರುವುದನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ. ಮನೆಯ ಯಜಮಾನ ಪುರುಷನಾಗಿರಬೇಕು ಹಾಗೂ ಪುರುಷರಿಗೆ ಒಡೆತನ ನೀಡಬೇಕೆಂಬ ಸಾಂಪ್ರದಾಯಿಕ ಚಿಂತನೆಯೇ ಇದಕ್ಕೆ ಕಾರಣವಾಗಿದೆ.

ಕೋಷ್ಟಕ ೫.೨೫ ಮಾಹಿತಿದಾರರ ಉಳಿತಾಯದ ವಿವರಗಳು

ಆದಾಯದಲ್ಲಿ ಉಳಿತಾಯ ಮಾಡುವಿರಾ	ಸಂಖ್ಯೆ	ಶೇಕಡಾ
ಹೌದು	೬೦೮	೭೬
ಇಲ್ಲ	೧೯೨	೨೪
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳಾ ಮಾಹಿತಿದಾರರಲ್ಲಿ ಒಟ್ಟು ಶೇಕಡಾ ೮೮ರಷ್ಟು ಮಾಹಿತಿದಾರರು ಉದ್ಯೋಗಸ್ಥರಾಗಿದ್ದು, ಅದರಲ್ಲಿ ೭೬ರಷ್ಟು ಮಾಹಿತಿದಾರರು ನಾನಾ ಕ್ಷೇತ್ರಗಳಲ್ಲಿ ಆದಾಯದ ಸ್ವಲ್ಪ ಭಾಗವನ್ನು ಉಳಿತಾಯ ಮಾಡುವುದಾಗಿಯೂ, ಶೇಕಡಾ ೨೪ರಷ್ಟು ಮಾಹಿತಿದಾರರು ಆದಾಯದಲ್ಲಿ ಯಾವುದೇ ಉಳಿತಾಯ ಮಾಡುವುದಿಲ್ಲ ಎಂಬುದಾಗಿ ತಿಳಿಸಿದ್ದು, ಅದರಲ್ಲಿ ಶೇಕಡಾ ೪ರಷ್ಟು ಮಾಹಿತಿದಾರರು ವಿದ್ಯಾರ್ಥಿಗಳು ಹಾಗೂ ಶೇಕಡಾ ೮ರಷ್ಟು ಮಾಹಿತಿದಾರರು ಗೃಹಕೃತ್ಯವನ್ನು ನಿರ್ವಹಿಸಿರುವವರು ಸೇರಿರುತ್ತಾರೆ. ಉಳಿದ ಶೇಕಡಾ ೧೨ರಷ್ಟು

ಮಾಹಿತಿದಾರರು ತಮ್ಮ ದುಡಿಮೆಯು ಕುಟುಂಬ ನಿರ್ವಹಣೆಗೆ ಸಾಕಾಗುವಷ್ಟು ಮಾತ್ರ ಆದಾಯವನ್ನು ಹೊಂದಿರುವುದರಿಂದ ಉಳಿತಾಯವನ್ನು ಮಾಡಲಾಗುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಆಸಾಂಗ್.ಆರ್.ಎಚ್ ಅವರು ಮೀನುಗಾರ ಮಹಿಳೆಯರ ಕುರಿತಾಗಿ ನಡೆಸಿರುವ ಅಧ್ಯಯನದಲ್ಲಿ ಮಹಿಳೆಯರ ಆದಾಯದ ಅತೀ ಹೆಚ್ಚಿನ ಪಾಲು ಖರ್ಚಾಗುವುದೇ ಕುಟುಂಬ ನಿರ್ವಹಣೆಗಾಗಿ ಎಂಬುದಾಗಿ ಉಲ್ಲೇಖಿಸಿದ್ದಾರೆ. ಈ ಅಂಶವು ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಕುಟುಂಬದಲ್ಲಿ ಸತ್ಯವಾಗಿರುವುದು ಕಂಡು ಬಂದಿದೆ.

ಕೋಷ್ಟಕ ೫.೨೬ ಮಾಹಿತಿದಾರರ ಉಳಿತಾಯದ ಕ್ರಮಗಳ ವಿವರ

ಉಳಿತಾಯ ಮಾಡುವ ಕ್ಷೇತ್ರಗಳು	**ಸಂಖ್ಯೆ**	**ಶೇಕಡಾ**
ಬ್ಯಾಂಕ್	೫೨	೬.೫
ಅಂಚೆಕಚೇರಿ	೩೨	೪
ಸ್ವ-ಸಹಾಯ ಸಂಘ	೪೯೦	೬೧.೨೫
ಸ್ತ್ರೀ ಶಕ್ತಿ ಯೋಜನೆ	೩೪	೪.೨೫
ಇಲ್ಲ	೧೯೨	೨೪
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳಾ ಮಾಹಿತಿದಾರರಲ್ಲಿ ತಮ್ಮ ದುಡಿಮೆಯಲ್ಲಿನ ಉಳಿತಾಯ ಮಾಡಿರುವ ಕ್ರಮಗಳ ಬಗ್ಗೆ ಕೇಳಲಾದ ಪ್ರಶ್ನೆಗೆ, ಶೇಕಡಾ ೬.೫ ರಷ್ಟು ಮಹಿಳೆಯರು ವಿವಿಧ ಬ್ಯಾಂಕ್‌ಗಳಲ್ಲಿ, ಶೇಕಡಾ ೪ ರಷ್ಟು ಮಾಹಿತಿದಾರರು ಅಂಚೆ ಕಚೇರಿಗಳಲ್ಲಿ, ಶೇಕಡಾ ೬೧.೨೫ ರಷ್ಟು ಮಂದಿ ಸ್ವಸಹಾಯ ಸಂಘಗಳಲ್ಲಿ, ಶೇಕಡಾ ೪.೨೫ ರಷ್ಟು ಮಂದಿ ಸ್ತ್ರೀ ಶಕ್ತಿ ಯೋಜನೆಯಲ್ಲಿ ಉಳಿತಾಯ ಮಾಡಿರುವುದಾಗಿ, ಶೇಕಡಾ ೨೪ ರಷ್ಟು ಮಾಹಿತಿದಾರರು ಯಾವುದೇ ಉಳಿತಾಯವನ್ನು ಮಾಡದೇ ಇರುವ ಕಾರಣದಿಂದಾಗಿ ಇದು ಅನ್ವಯಿಸುವುದಿಲ್ಲ ಎಂದು ತಿಳಿಸಿರುತ್ತಾರೆ.

ಉಳಿತಾಯದ ಬಗ್ಗೆ ಮೊಗವೀರ ಮಹಿಳೆಯರಲ್ಲಿ ಅರಿವಿದೆ. ತಾವು ಗಳಿಸಿದ ಆದಾಯದಲ್ಲಿ ಸ್ವಲ್ಪ ಮೊತ್ತವನ್ನು ಉಳಿತಾಯವಾಗಿ ಸೇರಿಸಿಟ್ಟಿರುವ ಮಹಿಳೆಯರು ಕಷ್ಟಕಾಲದಲ್ಲಿ ತಮ್ಮ ಕುಟುಂಬಕ್ಕೆ ಆಧಾರವಾಗಲು ಪ್ರಯತ್ನಿಸಿದ್ದಾರೆ. ಇದರಲ್ಲಿ ಸ್ವ-ಸಹಾಯ ಗುಂಪುಗಳಲ್ಲಿ ಸದಸ್ಯರಾಗಿರುವ ಮಹಿಳೆಯರು ಆ ಸಂಘದ ನಿಯಮಗಳಿಗೆ ಬದ್ಧರಾಗುವ ನಿಟ್ಟಿನಲ್ಲಿ ನಿರಂತರವಾಗಿ ಉಳಿತಾಯವನ್ನು ಮಾಡಿಕೊಂಡು ಬಂದಿದ್ದಾರೆ. ಸಂಘಟನೆಯಲ್ಲಿ ಸೇರಿಕೊಳ್ಳದ ಮಹಿಳೆಯರ ಉಳಿತಾಯವು ಸಂಘಟನೆಯಲ್ಲಿ ಸೇರಿರುವ ಮಹಿಳೆಯರ ಉಳಿತಾಯಕ್ಕಿಂತ ಕಡಿಮೆಯಿದೆ.

ಕೋಷ್ಟಕ ೫.೨೭ ಮಾಹಿತಿದಾರರಿಗೆ ಸರಕಾರದ ಸಹಾಯದ ನಿರೀಕ್ಷೆ

ಸರಕಾರದ ಸಹಾಯದ ನಿರೀಕ್ಷೆ	ಸಂಖ್ಯೆ	ಶೇಕಡಾ
ಇದೆ	೩೮೪	೪೮
ಇಲ್ಲ	೪೧೬	೫೨
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರು ಸರಕಾರದ ಸಹಾಯದ ನಿರೀಕ್ಷೆಯಲ್ಲಿ ಇರುವುದಾಗಿ ಶೇಕಡಾ ೪೮ರಷ್ಟು ಮಾಹಿತಿದಾರರು ತಿಳಿಸಿದ್ದು, ಕ್ಷೇತ್ರಾಧ್ಯಯನದಲ್ಲಿ ಕಂಡುಕೊಂಡಂತೆ, ಶೇಕಡಾ ೫೯ರಷ್ಟು ಮಾಹಿತಿದಾರರು ಮೀನುಗಾರಿಕೆಗೆ ಸಂಬಂಧಿಸಿದ ವೃತ್ತಿಯಲ್ಲಿ ತೊಡಗಿದ್ದು ಹಾಗೂ ವೃತ್ತಿಯಲ್ಲಿ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬಂದಿದೆ. ಅದಕ್ಕೆ ಪೂರಕವಾಗಿ ಸರಕಾರದಿಂದ ಕೆಲವೊಂದು ಬೇಡಿಕೆಗಳನ್ನು ಪೂರೈಸುವ ನಿರೀಕ್ಷೆಯನ್ನು ಇಟ್ಟುಕೊಂಡಿರುವುದಾಗಿಯೂ ತಿಳಿಸಿದ್ದಾರೆ. ಅದರಲ್ಲಿ ಅತೀ ಅವಶ್ಯವಾಗಿ ವ್ಯವಸ್ಥಿತ ಮಾರುಕಟ್ಟೆ, ಮಾರುಕಟ್ಟೆಯಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆ, ಮೀನು ಮಾರಾಟಕ್ಕೆ ಬೇಕಾಗುವ ಪ್ಲಾಸ್ಟಿಕ್ ಟಬ್, ಇಂಧನ ಸಬ್ಸಿಡಿ, ಬಡ್ಡಿ ರಹಿತ ಸಾಲ, ಸಂಧ್ಯಾ ಸುರಕ್ಷಾ ಹಾಗೂ ವಿಧವಾ ವೇತನದ ಮಾಸಿಕ ಮೊತ್ತದ ಹೆಚ್ಚಳ ಇತ್ಯಾದಿಗಳನ್ನು ಬಹುಪಾಲು ಮಾಹಿತಿದಾರರು ನಿರೀಕ್ಷಿಸುತ್ತಾರೆ. ಸುಮಂಗಲಾ ನಾಯಕ ಅವರ ಅಧ್ಯಯನವು ಉತ್ತರ ಕನ್ನಡ ಜಿಲ್ಲೆಯ ಮೊಗವೀರ ಸಮುದಾಯದ ಮಹಿಳೆಯರು ಸರಕಾರದಿಂದ ದೊರೆಯುವ ಉಚಿತ ಶಿಕ್ಷಣ ನೀತಿಯನ್ನು ಸಮರ್ಪಕವಾಗಿ ಬಳಸಿಕೊಂಡು ವ್ಯಾಪಾರದ ಜಮಾ ಖರ್ಚು ವಿವರಗಳನ್ನು ಸೂಕ್ತವಾಗಿ ನಿರ್ವಹಿಸಿಕೊಂಡು ಸಾಮಾಜಿಕ ಹಾಗೂ ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸುತ್ತಿರುವುದನ್ನು ಉಲ್ಲೇಖಿಸಿದ್ದಾರೆ. ಶೇಕಡಾ ೫೨ರಷ್ಟು ಮಾಹಿತಿದಾರರು ಸರಕಾರದಿಂದ ಯಾವುದೇ ಸಹಾಯದ ನಿರೀಕ್ಷೆಯಲ್ಲಿ ಇಲ್ಲ ಎಂಬುದಾಗಿ ಉತ್ತರಿಸಿರುತ್ತಾರೆ.

ಕೋಷ್ಟಕ ೫.೨೮ ಮಾಹಿತಿದಾರರ ಸಾಲದ ವಿವರ

ಸಾಲ ಪಡೆದುಕೊಂಡವರು	ಸಂಖ್ಯೆ	ಶೇಕಡಾ
ಹೌದು	೪೬೮	೫೮.೫
ಇಲ್ಲ	೩೩೨	೪೧.೫
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಮೊಗವೀರ ಮಹಿಳೆಯರ ಆರ್ಥಿಕ ಮಟ್ಟದ ನಿರ್ಧಾರಕವಾಗಿ ಸಾಲ ಪಡೆದವರ ಬಗೆಗಿನ ಮಾಹಿತಿ ಪಡೆಯಲಾಯಿತು. ಶೇಕಡಾ ೫೮.೫ ರಷ್ಟು ಮಾಹಿತಿದಾರರು ಮೊಗವೀರ ಮಹಿಳೆಯರು ವಿವಿಧ ರೀತಿಯಲ್ಲಿ ಸಾಲಗಾರರಾಗಿದ್ದಾರೆ. ಶೇಕಡಾ ೪೧.೫ ರಷ್ಟು ಸಾಲ ರಹಿತರಾಗಿ ಜೀವನ ಮಾಡುತ್ತಿದ್ದಾರೆ. ಇಲ್ಲಿ ಸಾಲ ಪಡೆಯಲು ಬಡತನ ಒಂದೇ ಕಾರಣವಾಗಿಲ್ಲ. ಸರಕಾರದ ಸಬ್ಸಿಡಿ

ಯೋಜನೆಯಡಿಯಲ್ಲಿ ಸಿಗುವ ಸಾಲಗಳನ್ನು ಹತ್ತಾರು ಮಾಹಿತಿದಾರರು ಬಳಸಿಕೊಂಡವರಿದ್ದಾರೆ. ಜೊತೆಗೆ ಸ್ವಸಹಾಯ ಸಂಘಗಳ ಮುಂಗಡವನ್ನು ಪಡೆದವರ ಸಂಖ್ಯೆಯು ಗುರುತರವಾಗಿದೆ. ಮೀನು ಮಾರಾಟದ ಉದ್ದೇಶಕ್ಕೆ ಮಾತ್ರವಲ್ಲದೆ ಕೌಟುಂಬಿಕ ಕಾರಣಗಳಿಗಾಗಿಯೂ ವಿವಿಧ ಮೂಲಗಳಿಂದ ಸಾಲ ಪಡೆದವರಿದ್ದಾರೆ.

ಮೊಗವೀರ ಮಹಿಳೆಯರ ಆರ್ಥಿಕ ಸ್ಥಿತಿಗತಿಯು ಉತ್ತಮವಾಗಿಲ್ಲ ಎಂಬುದು ಇಲ್ಲಿ ಋಜುವಾತಾಗಿದೆ. ಹೆಚ್ಚಿನ ಮಹಿಳೆಯರು ಸಾಲವನ್ನು ಪಡೆದಿದ್ದು ತಮ್ಮ ಅಗತ್ಯಗಳನ್ನು ಪೂರೈಸಲು ಪ್ರಯತ್ನಿಸಿದ್ದಾರೆ.

ಕೋಷ್ಟಕ ೫.೨೯ ಮಾಹಿತಿದಾರರು ಸಾಲ ಪಡೆಯಲು ಕಾರಣಗಳು

ಸಾಲ ಪಡೆದುಕೊಳ್ಳುವಲ್ಲಿನ ಕಾರಣಗಳು	ಸಂಖ್ಯೆ	ಶೇಕಡಾ
ಮಕ್ಕಳ ಶಿಕ್ಷಣಕ್ಕಾಗಿ	೧೬	೨
ವಿವಾಹ ಸಂದರ್ಭದಲ್ಲಿ	೧೯೦	೨೩.೭೫
ಮನೆಕಟ್ಟಲು/ರಿಪೇರಿ	೧೧೮	೧೪.೭೫
ಅನಾರೋಗ್ಯ	೨೪	೩
ವ್ಯಾಪಾರಕ್ಕಾಗಿ	೧೨೦	೧೫
ಸಾಲ ಪಡೆಯದವರು	೩೩೨	೪೧.೫
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಸಾಲ ಪಡೆದುಕೊಳ್ಳುವಲ್ಲಿನ ಕಾರಣಗಳ ಬಗ್ಗೆ ಕೇಳಲಾದ ಪ್ರಶ್ನೆಗೆ, ಶೇಕಡಾ ೨ರಷ್ಟು ಮಾಹಿತಿದಾರರು ಮಕ್ಕಳ ಶಿಕ್ಷಣಕ್ಕಾಗಿಯೂ, ಶೇಕಡಾ ೨೩.೭೫ರಷ್ಟು ಮಾಹಿತಿದಾರರು ವಿವಾಹ ಸಂದರ್ಭಗಳಲ್ಲಿಯೂ, ಶೇಕಡಾ ೧೪.೭೫ರಷ್ಟು ಮಂದಿ ಮನೆ ಕಟ್ಟಲು ಹಾಗೂ ಮನೆ ರಿಪೇರಿ ಸಂದರ್ಭಗಳಲ್ಲಿಯೂ, ಶೇಕಡಾ ೩ರಷ್ಟು ಮಾಹಿತಿದಾರರು ಅನಾರೋಗ್ಯ ಸಂದರ್ಭದಲ್ಲಿಯೂ, ಶೇಕಡಾ ೧೫ರಷ್ಟು ಮಾಹಿತಿದಾರರು ವ್ಯಾಪಾರಕ್ಕಾಗಿ ಸಾಲವನ್ನು ಪಡೆದಿರುವ ಬಗ್ಗೆ ತಿಳಿಸಿರುತ್ತಾರೆ. ಶೇಕಡಾ ೪೧.೫ರಷ್ಟು ಮಾಹಿತಿದಾರರು ಯಾವುದೇ ಸಾಲವನ್ನು ಪಡೆಯದವರಾಗಿರುತ್ತಾರೆ.

ದೇಹದ್ರೈ ಪಿವಿ. ಹಾಗೂ ಯಾದವ್ ವೈ ಎಸ್ ರವರು ತಮ್ಮ ಅಧ್ಯಯನದಲ್ಲಿ ಮೀನುಗಾರ ಮಹಿಳೆಯರು ಮದುವೆ, ಮನೆರಿಪೇರಿ, ಅನಾರೋಗ್ಯ ಸಂದರ್ಭಗಳಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಸಾಲವನ್ನು ಪಡೆಯುವುದಾಗಿ ತಿಳಿಸಿರುತ್ತಾರೆ. ಹಾಗೆಯೇ ಇವರ ಅಧ್ಯಯನದಲ್ಲಿ ಮೀನುಗಾರಿಕೆ ವೃತ್ತಿ ನಿರತ ಮಹಿಳೆಯರು ಸಾಲ ಮರು ಪಾವತಿಯು ದಾಖಲೆ ಮಟ್ಟದಲ್ಲಿರುವುದಾಗಿಯೂ ತಿಳಿಸಿರುತ್ತಾರೆ. ಈ ಅಧ್ಯಯನದಲ್ಲಿ ಸಾಲ ಮರು ಪಾವತಿಗೆ ಸಂಬಂಧಿಸಿದ ಪ್ರಶ್ನೆಗೆ, ಮಾಹಿತಿದಾರರು ತಾವು ಪಡೆದ ಸಾಲವನ್ನು ನಿರ್ದಿಷ್ಟ ಅವಧಿಯೊಳಗೆ ಮರು ಪಾವತಿಸುವುದಾಗಿ ತಿಳಿಸಿದ್ದಾರೆ.

ಸಾಲ ಮರು ಪಾವತಿಯ ಬಗ್ಗೆ ಮೊಗವೀರ ಮಹಿಳೆಯರಲ್ಲಿರುವ ಒಲವು ಅವರ ಸತ್ವಪರತೆಯನ್ನು ತೋರಿಸುತ್ತದೆ. ತಮ್ಮ ಕಷ್ಟಕಾಲದಲ್ಲಿ ಸಹಾಯ ಮಾಡಿದ ಬ್ಯಾಂಕ್ ಅಥವಾ ಸಹಕಾರ ಸಂಘಕ್ಕೆ ಯಾವುದೇ ಒತ್ತಡ ನೀಡಬಾರದೆಂಬ ಕಾಳಜಿ ಅವರಲ್ಲಿದೆ.

ಕೋಷ್ಟಕ ೪.೩೦ ಮಾಹಿತಿದಾರರು ಸಾಲ ಪಡೆದುಕೊಂಡಿರುವ ಹಣಕಾಸು ಸಂಸ್ಥೆಗಳು

ಸಾಲದ ವಿವರ	ಸಂಖ್ಯೆ	ಶೇಕಡಾ
ಬ್ಯಾಂಕ್	೧೬	೨
ಸಹಕಾರಿ ಸಂಘ	೪೨	೫.೨೫
ಸ್ವ-ಸಹಾಯ ಸಂಘ	೩೮೬	೪೮.೨೫
ಸ್ತ್ರೀ ಶಕ್ತಿ ಯೋಜನೆ	೨೪	೩
ಸಾಲ ಪಡೆದುಕೊಳ್ಳದವರು	೩೩೨	೪೧.೫
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯಲ್ಲಿನ ಮಾಹಿತಿದಾರರಲ್ಲಿ ಸಾಲ ಪಡೆದ ಕ್ಷೇತ್ರದ ಬಗೆಗಿನ ಮಾಹಿತಿಯಲ್ಲಿ ಶೇಕಡಾ ೨ರಷ್ಟು ಬ್ಯಾಂಕ್‌ಗಳಿಂದಲೂ, ಶೇಕಡಾ ೫.೫ರಷ್ಟು ಮೀನುಗಾರಿಕಾ ಪ್ರಾಥಮಿಕ ಸಹಕಾರಿ ಸಂಘಗಳಿಂದಲೂ, ಶೇಕಡಾ ೪೮.೨೫ರಷ್ಟು ಮಾಹಿತಿದಾರರು ಮಹಿಳೆಯರು ಸ್ವಸಹಾಯ ಸಂಘಗಳಿಂದಲೂ, ಶೇಕಡಾ ೩ರಷ್ಟು ಮಾಹಿತಿದಾರರು ಸ್ತ್ರೀ ಶಕ್ತಿ ಯೋಜನೆಗಳಲ್ಲಿಯೂ ಸಾಲವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೪೧.೫ರಷ್ಟು ಮಾಹಿತಿದಾರರು ಯಾವುದೇ ಮೂಲದಿಂದಲೂ ಸಾಲ ಪಡೆದಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ವಿಶೇಷವಾಗಿ ಗಮನಿಸಲ್ಪಟ್ಟ ಅಂಶವೆಂದರೆ ಮಾಹಿತಿದಾರರಲ್ಲಿ ಯಾರೊಬ್ಬರೂ ಅತೀ ಹೆಚ್ಚು ಬಡ್ಡಿ ವಿಧಿಸುವ ಖಾಸಗಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿಲ್ಲ. ಮೇಲಿನ ದತ್ತಾಂಶದ ಮೂಲಕ ತಿಳಿಯಬಹುದಾದ ಅಂಶವೆಂದರೆ ಸ್ವಸಹಾಯ ಸಂಘಗಳ ಸಾಲಕ್ಕೆ ಕಡಿಮೆ ಬಡ್ಡಿ ದರವಿರುವ ಕಾರಣ ಹಾಗೂ ಸಾಲ ಮರುಪಾವತಿ ವಿಧಾನ ಸರಳ ಹಾಗೂ ನಿಗದಿತ ಸಮಯದಲ್ಲಿ ಸಭೆ ಸೇರಿ ಸಾಲ ಮರು ಪಾವತಿಯ ವ್ಯವಸ್ಥೆಗಳಿರುವುದರಿಂದ ಹೆಚ್ಚು ಮಾಹಿತಿದಾರರು ಸ್ವ-ಸಹಾಯ ಸಂಘಗಳಲ್ಲಿ ಇತರ ಮೂಲಗಳು ಹೆಚ್ಚು ಬಡ್ಡಿ ದರದ ಕಾರಣ ದುಬಾರಿಯಾಗಿದ್ದು, ತೀರಾ ಅಗತ್ಯವಿರುವ ಕುಟುಂಬಗಳು ಮಾತ್ರ ಈ ಸಾಲಕ್ಕೆ ಮಾರು ಹೋಗಿವೆ.

ಸೂರ್ಯಚಂದ್ರ ರಾವ್ ಅವರ ಅಧ್ಯಯನದಲ್ಲಿ ತಿಳಿಸಿರುವಂತೆ, ಪ್ರಾಥಮಿಕ ಮಹಿಳಾ ಮೀನುಗಾರ ಸಹಕಾರಿ ಸಂಘವು ನೀಡುವ ಸಾಲ ಯೋಜನೆ ಮೊಗವೀರ ಮಹಿಳೆಯರ ಮಧ್ಯವರ್ತಿಗಳ ಹಾಗೂ ಗುತ್ತಿಗೆದಾರರುಗಳ ಶೋಷಣೆಗೆ ಕಡಿವಾಣ ಹಾಕಿ ಮಹಿಳೆಯರ ಆರ್ಥಿಕ ಸಶಕ್ತೀಕರಣಕ್ಕೆ ಸಹಕಾರಿಯಾಗಿವೆ. ಉಡುಪಿ ಜಿಲ್ಲೆಯಲ್ಲಿಯೂ ಸ್ವ-ಸಹಾಯ ಸಂಘಗಳ ಸಾಲವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆದಿರುವುದು ಕಂಡುಬರುತ್ತದೆ.

ಮೊಗವೀರರ ಸಾಮಾನ್ಯ ಆದಾಯ ಸ್ಥಿತಿಗತಿಗಳನ್ನು ಅವಲೋಕಿಸಿದರೆ ಅಗತ್ಯಕ್ಕೆ ತಕ್ಕುದಾದ ಸುಧಾರಣಾ ಮಟ್ಟವು ಕಂಡು ಬರುವುದಿಲ್ಲ. ಹಲವಾರು ಕಾರಣಗಳಿಂದಾಗಿ ಅವರ ಆಯವ್ಯಯಗಳ ನಿಖರ ಮಾಹಿತಿ ದೊರೆಯುವುದಿಲ್ಲ. ಮೊದಲನೆಯದಾಗಿ, ಹಳ್ಳಿಗಳಲ್ಲಿರುವವರು ತಮ್ಮ ಜೀವನದ ವಿಚಾರಗಳನ್ನು ಹೊರಗೆಡವಲು ಇಚ್ಚಿಸದೆ ಗುಟ್ಟಾಗಿ ಇರಿಸಿಕೊಳ್ಳುವುದು ಮಾಹಿತಿಗಳ ಕೊರತೆಗೆ ಕಾರಣವಾಗಿದೆ. ಎರಡನೆಯದಾಗಿ, ಈ ಕುರಿತಾದ ಪ್ರಶ್ನೆಗಳನ್ನು ಮಾಹಿತಿದಾರರು ಕೇವಲ ಸಂಶೋಧಕರ ಅಧ್ಯಯನಕ್ಕೆ ಮಾತ್ರ ಸೀಮಿತವೆಂದೆ ತಿಳಿದುಕೊಳ್ಳುತ್ತಾರೆ. ಇದರಿಂದಾಗಿ ಈ ನಿಟ್ಟಿನಲ್ಲಿ ಮಾಹಿತಿದಾರರ ಅಪೂರ್ಣ ಸಹಕಾರ ಅಧ್ಯಯನದ ಪೂರ್ಣತೆಗೆ ತೊಡಕಾಗುತ್ತದೆ. ಸಂಶೋಧನಕಾರರು ಈ ಮಾಹಿತಿಯು ಕೇವಲ ಅಧ್ಯಯನಕ್ಕೆ ಮಾತ್ರವಲ್ಲದೆ ಅವರ ಆಸಕ್ತಿಯ ವಿರುದ್ಧವಾಗಿ ಅಲ್ಲವೆಂದು ಮನದಟ್ಟು ಮಾಡಿದರೂ ಕೆಲವರು ಅರ್ಥಮಾಡಿಕೊಳ್ಳಲಿಲ್ಲ. ಇದರಿಂದಾಗಿ ಮೊಗವೀರರ ಜೀವನದ ಆದಾಯದ ಬಗ್ಗೆ ನಿಖರವಾದ ಮಾಹಿತಿಯನ್ನು ಪಡೆಯುವುದು ಸವಾಲಾಗಿ ಪರಿಣಮಿಸಿತು.

ಕೋಷ್ಟಕ ೫.೩೧ ಮಾಹಿತಿದಾರರ ಕುಲಕಸುಬಿನ ಹೊರತಾದ ಉದ್ಯೋಗದ ಬಗೆಗಿನ ಧೋರಣೆ

ಕುಲಕಸುಬಿನ ಹೊರತಾದ ಉದ್ಯೋಗದ ಬಗೆಗಿನ ಧೋರಣೆ	**ಸಂಖ್ಯೆ**	**ಶೇಕಡಾ**
ಸಮ್ಮತಿ ಇದೆ	೫೪೪	೬೮
ಸಮ್ಮತಿ ಇಲ್ಲ	೨೫೬	೩೨
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೬೮ರಷ್ಟು ಮಾಹಿತಿದಾರರು ಮೊಗವೀರರ ಕುಲಕಸುಬಿನ ಹೊರತಾದ ಉದ್ಯೋಗವನ್ನು ಸಮ್ಮತಿಸಿರುತ್ತಾರೆ. ಮಾಹಿತಿದಾರರಲ್ಲಿ ಶೇಕಡಾ ೫೯ರಷ್ಟು ಮಂದಿ ಮೀನುಗಾರಿಕಾ ವೃತ್ತಿಯನ್ನು ಅವಲಂಬಿತರು. ಆದರೆ ಈ ಉದ್ಯೋಗದಲ್ಲಿರುವ ಶೇಕಡಾ ೩ರಷ್ಟು ಮಾಹಿತಿದಾರರು ಮೀನುಗಾರಿಕೆಯನ್ನು ಆಸಕ್ತಿಯಿಂದ ನಡೆಸಿಕೊಂಡು ಬಂದವರಾಗಿ ತಿಳಿಸಿದ್ದು, ಉಳಿಕೆ ೨೭ಶೇಕಡಾ ಮಾಹಿತಿದಾರರು ಅನಿವಾರ್ಯ ಕಾರಣಗಳಿಗಾಗಿ ಒಪ್ಪಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಮಾಹಿತಿದಾರರಲ್ಲಿ ಶೇಕಡಾ ೩೨ರಷ್ಟು ಮಾಹಿತಿದಾರರು ಕುಲಕಸುಬಿನ ಹೊರತಾದ ಉದ್ಯೋಗವನ್ನು ಸಮ್ಮತಿಸಿರುವುದಿಲ್ಲ. ಈ ಮಾಹಿತಿಯನ್ನು ಗಮನಿಸಿದಾಗ ಹೊಸ ತಲೆಮಾರಿನ ಮೊಗವೀರ ಮಹಿಳೆಯರು ಕುಲಕಸುಬಾದ ಮೀನುಗಾರಿಕೆಯನ್ನು ಹೊರತು ಪಡಿಸಿದ ಉದ್ಯೋಗದ ಕಡೆಗೆ ಆಕರ್ಷಿತರಾಗುತ್ತಿರುವುದು ಕಂಡು ಬರುತ್ತದೆ.

ಆದಾಯದ ಅನಿಶ್ಚಿತತೆ, ಉದ್ಯೋಗ ಸ್ಥಳದಲ್ಲಿರುವ ಸವಾಲುಗಳು ಹಾಗೂ ಅತ್ಯಲ್ಪ ವರಮಾನ ಮುಂತಾದ ಸಮಸ್ಯೆಗಳು ಮೊಗವೀರ ಮಹಿಳೆಯರು ಪರ್ಯಾಯ ಉದ್ಯೋಗದ ಬಗ್ಗೆ ಒಲವು ಹೊಂದುವಂತೆ ಮಾಡುತ್ತಿದೆ. ಮೀನುಗಾರಿಕೆಯು ಧೀರ್ಘಾವಧಿಯ ಕೆಲಸವಾಗಿದ್ದು ತಮ್ಮ ಕುಟುಂಬದೊಂದಿಗೆ ಕಳೆಯಲು ಸಮಯ ಸಿಗುವುದಿಲ್ಲ ಎಂಬ ಕಾರಣವೂ ಇಲ್ಲಿದೆ.

ಕೋಷ್ಟಕ ೫.೩೨ ಮಾಹಿತಿದಾರರು ಕುಲಕಸುಬನ್ನು ಹೊರತಾದ ಉದ್ಯೋಗದ ಸಮ್ಮತಿಗೆ ಕಾರಣವಾಗಬಲ್ಲ ಅಂಶಗಳು

ಕುಲಕಸುಬನ್ನು ಹೊರತಾದ ವೃತ್ತಿಯ ಸಮ್ಮತಿಗೆ ಕೊಡುವ ಕಾರಣಗಳು	**ಸಂಖ್ಯೆ**	**ಶೇಕಡಾ**
ಉದ್ಯೋಗದ ಅಭದ್ರತೆ	೨೨೪	೨೮
ಸಮಯದ ಅಭಾವ	೧೮೮	೨೩.೫
ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ	೧೩೨	೧೬.೫
ಸಮ್ಮತಿ ಇಲ್ಲ	೨೫೬	೩೨
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ತಮ್ಮ ಕುಲಕಸುಬಾಗಿರುವ ಮೀನುಗಾರಿಕೆಯನ್ನು ಹೊರತು ಪಡಿಸಿ ಬೇರೆ ವೃತ್ತಿಯನ್ನು ನಡೆಸುವ ಬಗ್ಗೆ ಶೇಕಡಾ ೬೮ರಷ್ಟು ಮಂದಿ ಸಮ್ಮತಿಯನ್ನು ನೀಡಿದ್ದಾರೆ. ಮಾಹಿತಿದಾರರು ಸಮ್ಮತಿಗೆ ಹಲವಾರು ಕಾರಣಗಳನ್ನು ನೀಡಿದ್ದು, ಶೇಕಡಾ ೨೮ರಷ್ಟು ಮಾಹಿತಿದಾರರು ಮೀನುಗಾರಿಕೆಯು ವರ್ಷಪೂರ್ತಿ ನಡೆಯುವ ಉದ್ಯೋಗವಾಗಿಲ್ಲದೇ ಇರುವುದರಿಂದಾಗಿ ಹಾಗೂ ಮೀನಿನ ಲಭ್ಯತೆಯ ಕೊರತೆಯ ಕಾರಣದಿಂದಾಗಿ ಮೀನುಗಾರಿಕೆಯು ಅಭದ್ರತೆಯ ಉದ್ಯೋಗವಾಗಿರುವುದಾಗಿ, ಶೇಕಡಾ ೨೩.೫ರಷ್ಟು ಬಂದರಿನಲ್ಲಿ, ಮೀನುಗಾರಿಕೆಯಲ್ಲಿ ನಿರತರಾದ ಮೊಗವೀರ ಮಹಿಳೆಯರು ಬೆಳಿಗ್ಗೆ ೫ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೂ ಈ ಉದ್ಯೋಗ ಕ್ಷೇತ್ರದಲ್ಲಿ ಇರಬೇಕಾದ ಅನಿವಾರ್ಯತೆಯು ಯಾವುದೇ ಚಟುವಟಿಕೆಗಳಲ್ಲಿ, ಸಭೆ-ಸಮಾರಂಭಗಳಲ್ಲಿ ಪಾಲ್ಗೊಳ್ಳುವಲ್ಲಿ ತೊಡಕಾಗಿ ಪರಿಣಮಿಸುವ ಕಾರಣದಿಂದಾಗಿ ಹಾಗೂ ಶೇಕಡಾ ೧೬.೫ರಷ್ಟು ಮಾಹಿತಿದಾರರು ಕುಲಕಸುಬಿನ ಉದ್ಯೋಗವಿದೆ ಎಂಬ ಭಾವನೆಯೇ ಶಿಕ್ಷಣದ ಕಡೆಗಿನ ಒಲವು ಕಡಿಮೆಯಾಗಲು ಕಾರಣವಾಗಿದೆ ಎಂಬುದಾಗಿ ತಿಳಿಸಿದ್ದು, ಹಾಗಾಗಿ, ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದು ಉತ್ತಮ ಉದ್ಯೋಗವನ್ನು ಪಡೆಯುವಂತಾಗಬೇಕೆಂಬ ಕಾರಣಕ್ಕಾಗಿ ಕುಲಕಸುಬನ್ನು ಹೊರತುಪಡಿಸಿದ ಉದ್ಯೋಗವನ್ನು ಸಮ್ಮತಿಸುವುದಾಗಿ ತಿಳಿಸಿರುತ್ತಾರೆ. ಮಾಹಿತಿದಾರರಲ್ಲಿ ಶೇಕಡಾ ೩೨ರಷ್ಟು ಮಂದಿ ಕುಲಕಸುಬಿನ ಹೊರತಾದ ಉದ್ಯೋಗವನ್ನು ಸಮ್ಮತಿಸಿರುವುದಿಲ್ಲ ಎಂಬುದಾಗಿ ತಿಳಿಸಿದವರಾಗಿರುತ್ತಾರೆ. ಈ ಅಧ್ಯಯನದಲ್ಲಿ ಗಮನಿಸಿದಂತೆ ಮೀನುಗಾರಿಕೆಯು ಈ ಸಮುದಾಯಕ್ಕೆ ಒಂದು ಆಕರ್ಷಕ ಉದ್ಯೋಗಾವಕಾಶವಾಗಿ ಕಂಡುಬರುತ್ತಿಲ್ಲ. ಕುಲಕಸುಬನ್ನು ಇಷ್ಟಪಡದಿರುವವರ ಸಂಖ್ಯೆ ಅಧಿಕವಾಗಿದೆ.

ಮಾಹಿತಿದಾರರಲ್ಲಿ ಶೇಕಡಾ ೮೮ರಷ್ಟು ಮಾಹಿತಿದಾರರು ಉದ್ಯೋಗಸ್ಥರು. ಇದರಲ್ಲಿ ಶೇಕಡಾ ೫೯.೭೫ರಷ್ಟು ಮಾಹಿತಿದಾರರು ಕುಲಕಸುಬಿನ ಅವಲಂಬಿತರು ಹಾಗೂ ಹಿರಿಯ ತಲೆಮಾರಿನ ಮಹಿಳೆಯರ ಉದ್ಯೋಗದ ಬಗ್ಗೆ ಅಧ್ಯಯನದಲ್ಲಿ ಕಂಡುಕೊಂಡಂತೆ, ಶೇಕಡಾ ೮೨ರಷ್ಟು ಮಾಹಿತಿದಾರರು ಉದ್ಯೋಗಸ್ಥರಾಗಿದ್ದು, ಅದರಲ್ಲಿ ಶೇಕಡಾ ೬೫ರಷ್ಟು ಮಂದಿ ಕುಲಕಸುಬನ್ನು

ಅವಲಂಬಿಸಿರುವವರು. ಇಲ್ಲಿ ಅಂತರವನ್ನು ಗಮನಿಸಿದಾಗ ಶೇಕಡಾ ೧೫.೦೩ರಷ್ಟು ಮಾಹಿತಿದಾರರು ಕುಲಕಸುಬನ್ನು ತ್ಯಜಿಸಿರುವುದು ಕಂಡುಬರುತ್ತಿದೆ. ಕ್ಷೇತ್ರಾಧ್ಯಯನದಲ್ಲಿ ಮಾಹಿತಿದಾರರು ತಿಳಿಸಿರುವಂತೆ ತಮ್ಮ ಮಕ್ಕಳು ಉನ್ನತ ಶಿಕ್ಷಣವನ್ನು ಪಡೆದು ಉತ್ತಮ ವೇತನ ಪಡೆಯುವ ಉದ್ಯೋಗ ಹೊಂದಲಿ ಹಾಗೂ ಶಿಕ್ಷಿತ ಮಹಿಳೆಯರಿಗೆ ವಿವಾಹ ಸಮಯದಲ್ಲಿ ಉತ್ತಮ ನಂಟಸ್ತಿಕೆ ದೊರೆಯುವುದಾಗಿಯೂ ತಿಳಿಸಿದ್ದು, ಅದರಿಂದಾಗಿ ಉನ್ನತ ಶಿಕ್ಷಣದ ಕಡೆಗೆ ಒಲವು ತೋರಿಸುವುದಾಗಿ ತಿಳಿಸಿರುತ್ತಾರೆ.

ಕೋಷ್ಟಕ ೫.೩೩ ಮಾಹಿತಿದಾರರು ಕುಲಕಸುಬನ್ನೇ ಆಯ್ದುಕೊಳ್ಳಲು ಕಾರಣವಾಗುವ ಅಂಶಗಳು

ಕುಲಕಸುಬನ್ನು ಸಮ್ಮತಿಸುವಲ್ಲಿ ಕೊಡುವ ಕಾರಣಗಳು	**ಸಂಖ್ಯೆ**	**ಶೇಕಡಾ**
ಕುಲಕಸುಬಿನ ವ್ಯಾಮೋಹ	೧೩೬	೧೭
ನಿರುದ್ಯೋಗ	೬೪	೮
ಕಡಿಮೆ ಶಿಕ್ಷಣ ಸಾಕು ಎಂಬ ಭಾವನೆ	೫೬	೭
ಸಮ್ಮತಿಸದೇ ಇರುವವರು	೫೪೪	೬೮
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ಶೇಕಡಾ ೩೨ರಷ್ಟು ಮಾಹಿತಿದಾರರು ಕುಲಕಸುಬಾಗಿರುವ ಮೀನುಗಾರಿಕೆಯನ್ನು ಸಮ್ಮತಿಸಿದ್ದು ಅವರುಗಳು ಸಮ್ಮತಿಸಲು ಕೊಡುವ ಕಾರಣಗಳು; ಶೇಕಡಾ ೧೭ರಷ್ಟು ಮಾಹಿತಿದಾರರು ತಮ್ಮ ಸಮುದಾಯದ ಹಿರಿಯರು ಮೀನುಗಾರಿಕೆಯನ್ನೇ ಅವಲಂಬಿಸಿದ್ದು, ಅವರ ನಂತರ ತಾವು ಅದನ್ನು ಮುಂದುವರೆಸಿಕೊಂಡು ಬಂದಿರುವುದಾಗಿ, ಶೇಕಡಾ ೮ರಷ್ಟು ಮಾಹಿತಿದಾರರು ತಾವು ವಿದ್ಯಾವಂತರಾಗಿದ್ದು, ವಿದ್ಯೆಗೆ ತಕ್ಕ ಉದ್ಯೋಗವಿಲ್ಲದೇ ಆರ್ಥಿಕ ಕಾರಣದಿಂದಾಗಿ ಮೀನುಗಾರಿಕೆಯನ್ನು ಅವಲಂಬಿಸಿರುವುದಾಗಿ, ಶೇಕಡಾ ೭ರಷ್ಟು ಮಾಹಿತಿದಾರರು ಶಿಕ್ಷಣದ ನಿರಾಸಕ್ತಿಯ ಕಾರಣ ನೀಡಿ ಮೀನುಗಾರಿಕೆಯನ್ನು ನಡೆಸಲು ಕಡಿಮೆ ಶಿಕ್ಷಣ ಸಾಕು ಎನ್ನುವ ಧೋರಣೆಯಿಂದಾಗಿ ಕುಲಕಸುಬನ್ನು ಸಮ್ಮತಿಸಿರುವುದಾಗಿ ತಿಳಿಸಿರುತ್ತಾರೆ.ಶೇಕಡಾ ೬೮ರಷ್ಟು ಮಾಹಿತಿದಾರರು ಕುಲಕಸುಬನ್ನು ಸಮ್ಮತಿಸದೇ ಇರುವವರಾಗಿರುತ್ತಾರೆ.

ಕುಲಕಸುಬನ್ನು ಸಮ್ಮತಿಸುವವರಲ್ಲಿ ಹೆಚ್ಚಿನವರು ತಮ್ಮ ಅನಿವಾರ್ಯತೆಗಾಗಿ ಈ ಕಸುಬನ್ನು ಆಯ್ದುಕೊಂಡಿದ್ದಾರೆ. ಅವರಿಗೆ ಇತರ ಉದ್ಯೋಗಕ್ಕೆ ಅವಕಾಶಗಳು ಕಡಿಮೆಯಿದ್ದು ತಮಗೆ ಇದೊಂದೇ ಸರಿಯಾದ ಆಯ್ಕೆ ಎಂದು ಭಾವಿಸಿ ಮೀನುಗಾರಿಕೆಯನ್ನು ಆಯ್ದುಕೊಂಡಿದ್ದಾರೆ.

ಕೋಷ್ಟಕ ೫.೩೪ ಮಾಹಿತಿದಾರರಲ್ಲಿ ಸ್ವ-ಸಹಾಯ ಸಂಘಗಳ ಸದಸ್ಯತ್ವ ಹಾಗೂ ಅದರಿಂದಾಗುವ ಪ್ರಯೋಜನಗಳಿಗೆ ಸಂಬಂಧಿಸಿದ ಮಾಹಿತಿ

ಸ್ವ-ಸಹಾಯ ಸಂಘಗಳಿಗೆ ಸಂಬಂಧಿಸಿದ ಅಂಶಗಳು	ಹೌದು		ಇಲ್ಲ		ಒಟ್ಟು	
	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.
ಸ್ವ-ಸಹಾಯ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವವರು	೪೯೦	೬೧.೨೫	೩೧೦	೩೮.೭೫	೮೦೦	೧೦೦
ಸ್ವ-ಸಹಾಯ ಸಂಘದ ಸದಸ್ಯತ್ವದಿಂದಾಗಿ ಜೀವನದಲ್ಲಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಬದಲಾವಣೆಗೊಂಡವರು	೪೯೦	೬೧.೨೫	೩೧೦	೩೮.೭೫	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೫.೩೪ರಲ್ಲಿ ಮಾಹಿತಿದಾರರಲ್ಲಿ ಸ್ವಸಹಾಯ ಸಂಘಗಳಲ್ಲಿನ ಸದಸ್ಯತ್ವದ ಕುರಿತು ಕೇಳಲಾದ ಪ್ರಶ್ನೆಗೆ, ಶೇಕಡಾ ೬೧.೨೫ರಷ್ಟು ಮಂದಿ ವಿವಿಧ ಸ್ವಸಹಾಯ ಗುಂಪು/ಸಂಘಗಳಲ್ಲಿ ಸದಸ್ಯರಾಗಿರುವುದಾಗಿ ತಿಳಿಸಿದ್ದು, ಶೇಕಡಾ ೩೮.೭೫ರಷ್ಟು ಮಂದಿ ಯಾವ ಸ್ವಸಹಾಯ ಸಂಘದಲ್ಲಿ ಸದಸ್ಯತ್ವ ಹೊಂದಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಕೌಟುಂಬಿಕ ಹಾಗೂ ವೈಯಕ್ತಿಕ ಒತ್ತಡಗಳಿಂದಾಗಿ ಇಷ್ಟವಿದ್ದರೂ ಸದಸ್ಯರಾಗುವುದು ಕೆಲವರಿಗೆ ಅಸಾಧ್ಯವಾಗಿದೆ. ಸ್ವಸಹಾಯ ಸಂಘಗಳು ಮೊಗವೀರ ಸಮುದಾಯದ ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣಕ್ಕೆ ಅಧ್ಯಯನ ಪ್ರದೇಶದಲ್ಲಿ ಸಹಕರಿಸಿವೆ ಎಂಬುದಾಗಿ ಮಾಹಿತಿದಾರರು ತಿಳಿಸಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಒಟ್ಟು ೨,೮೪೬ ಸ್ತ್ರೀ ಶಕ್ತಿ ಸಂಘಗಳು ಹಾಗೂ ४೫,४೦೭ರಷ್ಟು ಸ್ವ-ಸಹಾಯ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಶೇಕಡಾ ೬೮ರಷ್ಟು ಮಾಹಿತಿದಾರರು ಸ್ವ-ಸಹಾಯ ಸಂಘಗಳ ಸದಸ್ಯತ್ವದಿಂದಾಗಿ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳಾಗಿರುವುದಾಗಿ ತಿಳಿಸಿದವರಾಗಿದ್ದು, ಶೇಕಡಾ ೩೮.೭೫ರಷ್ಟು ಮಂದಿ ಮಾಹಿತಿದಾರರು ಸ್ವ-ಸಹಾಯ ಸಂಘದ ಸದಸ್ಯರಾಗಿಲ್ಲದೇ ಇರುವುದರಿಂದಾಗಿ ಅನ್ವಯಿಸುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಸ್ವ-ಸಹಾಯ ಗುಂಪುಗಳು ಅಥವಾ ಮಹಿಳಾ ಸ್ವ-ಸಹಾಯ ಗುಂಪುಗಳ ಪರಿಕಲ್ಪನೆಯು ಮಾನವ ಅಭಿವೃದ್ಧಿ ಹಾಗೂ ಸಾಮಾಜಿಕ ಸಬಲೀಕರಣದ ಮೂಲಕ ಬಡತನ ನಿರ್ಮೂಲನೆಗೆ ಪ್ರಯತ್ನಿಸುವ ಸಾಧನವಾಗಿದೆ. ಸ್ವ-ಸಹಾಯ ಗುಂಪು ವ್ಯವಸ್ಥೆಯಲ್ಲಿ ಸರಕಾರ, ಹಣಕಾಸು ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳೆಂಬ ಮೂರು ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ. ಸ್ತ್ರೀ ಶಕ್ತಿ ಎಂಬ ವಿಧಾನವನ್ನು ಸರಕಾರವು ಚಾಲ್ತಿಗೆ ತಂದು ಆ ಮೂಲಕ ಮಾನವ ಸಂಪನ್ಮೂಲ ಹಾಗೂ ವಸ್ತು

ರೂಪದ ಸಂಪನ್ಮೂಲಗಳನ್ನು ಒಗ್ಗೂಡಿಸಿ ಮಹಿಳಾ ಸಬಲೀಕರಣವನ್ನು ಸಾಧಿಸಲು ಪ್ರಯತ್ನ ಮಾಡಲಾಗಿದೆ.

ಮಹಿಳಾ ಬಡತನ ನಿರ್ಮೂಲನೆಯನ್ನು ಮಾಡುವಲ್ಲಿ ಕರ್ನಾಟಕದಲ್ಲಿ ಸರ್ಕಾರೇತರ ಸಂಸ್ಥೆಗಳು ಹಮ್ಮಿಕೊಂಡ ಕಾರ್ಯಕ್ರಮಗಳು ಹಾಗೂ ಸ್ವ-ಸಹಾಯ ಸಂಘಗಳ ಮೂಲಕ ಮಾಡಿರುವ ಸಾಧನೆ ಗುರುತರವಾದುದಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಸ್ತ್ರೀ ಶಕ್ತಿ ಪರಿಕಲ್ಪನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಹಕರಿಸಿದೆ. ಆ ಮೂಲಕ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿಗೆ ಗುರುತರವಾದ ಕೊಡುಗೆಯನ್ನು ನೀಡಿದೆ. ಸರ್ಕಾರೇತರ ಸಂಸ್ಥೆಗಳು ಹಾಗೂ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳ ಪ್ರಯತ್ನದ ಫಲವಾಗಿ ಮಹಿಳೆಯರ ಮೇಲಾಗುತ್ತಿದ್ದ ಕೌಟುಂಬಿಕ ಹಿಂಸೆ ಕಡಿಮೆಯಾಗಿ, ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹ, ವಿಧವಾ ವಿವಾಹ ನಿಷೇಧದಂತಹ ಪದ್ಧತಿಗಳು ಕಡಿಮೆಯಾಗಲು ಸಹಕಾರಿಯಾಗಿದೆ. ಸ್ವ-ಸಹಾಯ ಗುಂಪುಗಳು ಮಹಿಳಾ ಶಿಕ್ಷಣ, ಉಳಿತಾಯ ಪ್ರವೃತ್ತಿಯನ್ನು ಬೆಳೆಸುವುದು, ಕಿರು ಹಣಕಾಸು, ಸಾಮಾಜಿಕ ಜಾಗೃತಿ, ಸೂಕ್ತ ಹಣಕಾಸು ನಿರ್ವಹಣೆ ಹಾಗೂ ಮಹಿಳೆಯರ ಸಾಮಾಜಿಕ ಸಂಘಟನೆಗಳಿಗೆ ಸೂಕ್ತ ಬೆಂಬಲ ನೀಡಿದೆ.

ಸ್ತ್ರೀ ಶಕ್ತಿ ಗುಂಪುಗಳು ಸಮಾಜದಲ್ಲಿ ಸಾಮರಸ್ಯವನ್ನು ಬೆಳೆಸುವ ಜೊತೆಗೆ ಆರ್ಥಿಕ ಸಬಲೀಕರಣ ಹಾಗೂ ಬಡತನ ನಿರ್ಮೂಲನೆಗೆ ಮಹತ್ವದ ಕೊಡುಗೆಯನ್ನು ನೀಡಿವೆ ಎಂಬುದನ್ನು ಸಂಶೋಧನೆಗಳು ದೃಢಪಡಿಸುತ್ತವೆ. ಈ ಮೊದಲು ಬ್ಯಾಂಕುಗಳು ನಿರ್ವಹಿಸುತ್ತಿದ್ದ ಜವಾಬ್ದಾರಿಗಳಿಗಿಂತ ಭಿನ್ನವಾಗಿ ಮತ್ತು ಮಹಿಳಾ ಸ್ನೇಹಿಯಾಗಿ ಸ್ವ-ಸಹಾಯ ಗುಂಪುಗಳ ಕಿರು ಹಣಕಾಸು ವ್ಯವಸ್ಥೆ ಕಾರ್ಯನಿರ್ವಹಿಸಿದೆ. ಸಮಾಜದ ಮುಖ್ಯವಾಹಿನಿಯಿಂದ ಹೊರಗುಳಿದಿದ್ದ ಅಶಿಕ್ಷಿತ ಮಹಿಳೆಯರಲ್ಲಿಯೂ ಆರ್ಥಿಕ ಹಾಗೂ ಸಾಮಾಜಿಕ ಜಾಗೃತಿಯನ್ನು ಮೂಡಿಸುವಲ್ಲಿ ಸ್ವ-ಸಹಾಯ ಸಂಘಗಳು ಯಶಸ್ವಿಯಾಗಿವೆ. ಖಾಸಗಿ ಹಣಕಾಸು ಸಂಸ್ಥೆಗಳಿಂದ ವಂಚನೆಗೊಳಗಾಗುವ ಪರಿಸ್ಥಿತಿ ದೂರವಾಗಿ ಸ್ವಾವಲಂಬನೆಯ ಮೂಲಕ ಕುಟುಂಬದಲ್ಲಿ ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯರಿಗೆ ಸ್ತ್ರೀ ಶಕ್ತಿಯಂತಹ ಸ್ವ-ಸಹಾಯ ವ್ಯವಸ್ಥೆ ಪ್ರಯೋಜನಕಾರಿಯಾಗಿದೆ.

ಸ್ವ-ಸಹಾಯ ಸಂಘಗಳು ಉಳಿತಾಯವನ್ನು ಮಾಡುವ, ಅಗತ್ಯಕ್ಕೆ ಹಣವನ್ನು ಸಾಲ ರೂಪದಲ್ಲಿ ಪಡೆಯುವ ಚಿಂತನೆಯನ್ನು ನೀಡುವ ಮೂಲಕ ಸಮಾಜದಲ್ಲಿ ಹೆಚ್ಚಿನ ಆರ್ಥಿಕ ಚಟುವಟಿಕೆಗಳನ್ನು ಪ್ರೇರೇಪಿಸಿ ಜೀವನ ಮಟ್ಟ ಸುಧಾರಣೆಯ ಮೂಲಕ ಸಬಲೀಕರಣಕ್ಕೆ ಕಾರಣವಾಗಿದೆ. ಮಹಿಳೆಯರ ಸಾಮಾಜಿಕ ಪರಿವರ್ತನೆಗೆ ಅವಕಾಶ ಮಾಡಿಕೊಟ್ಟಿದೆ. ಮೊಗವೀರ ಮಹಿಳೆಯರ ಸ್ವ-ಸಹಾಯ ಗುಂಪುಗಳಿಂದಾಗಿ ಆರ್ಥಿಕ ವಿಷಯದಲ್ಲಿ ಅರಿವು ಮೂಡಿದೆ. ಆರ್ಥಿಕ ಸಬಲೀಕರಣದ ಮೂಲಕ ಸ್ವಾವಲಂಬನೆಯ ಅವಕಾಶವನ್ನು ಸ್ವ-ಸಹಾಯ ಗುಂಪುಗಳು ಒದಗಿಸಿಕೊಟ್ಟಿವೆ. (ಶಿಲ್ಪ ನಂದಿ, ೨೦೧೫).

ಕೋಷ್ಟಕ ೫.೩೫ ಮಾಹಿತಿದಾರರು ಗುರುತಿಸಿದಂತೆ ಸ್ವ-ಸಹಾಯ ಸಂಘದ ಸದಸ್ಯತ್ವದಿಂದಾದ ಪ್ರಯೋಜನಗಳು

ಸ್ವ-ಸಹಾಯ ಸಂಘದ ಸದಸ್ಯತ್ವದಿಂದಾದ ಪ್ರಯೋಜನಗಳು	ಸಂಖ್ಯೆ	ಶೇಕಡಾ
ಬ್ಯಾಂಕ್ ವ್ಯವಹಾರದ ತಿಳುವಳಿಕೆ	೧೬೪	೨೦.೫
ಜನರೊಂದಿಗೆ ಸಂಪರ್ಕದಲ್ಲಿ ಹೆಚ್ಚಳ	೧೪೨	೧೭.೭೫
ನಾಯಕತ್ವ ಗುಣ	೧೩೨	೧೬.೫
ಸಮಾರಂಭಗಳಲ್ಲಿ ಪಾಲ್ಗೊಳ್ಳಲು ಧೈರ್ಯ	೫೨	೬.೫
ಪ್ರಯೋಜನ ಪಡೆಯದವರು	೩೧೦	೩೮.೭೫
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೬೧.೭೫ರಷ್ಟು ಮಂದಿ ಸ್ವ-ಸಹಾಯ ಸಂಘದ ಸದಸ್ಯರಾಗಿದ್ದು, ಸದಸ್ಯರಾಗಿರುವ ಎಲ್ಲ ಮಾಹಿತಿದಾರರು ಸ್ವ-ಸಹಾಯ ಸಂಘದಿಂದ ಹಲವಾರು ಪ್ರಯೋಜನಗಳನ್ನು ಪಡೆದಿರುವುದಾಗಿ ತಿಳಿಸಿದ್ದು, ಶೇಕಡಾ ೨೦.೫ರಷ್ಟು ಮಂದಿಗೆ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆಯನ್ನು ತೆರೆದಿರುವುದು ಸ್ವ-ಸಹಾಯ ಸಂಘಗಳ ಸದಸ್ಯತ್ವದ ನಂತರ ವ್ಯವಹಾರದಲ್ಲಿ ತಿಳುವಳಿಕೆಯಿಂದಾಗಿ ಅನುಕೂಲವಾಗಿರುವುದಾಗಿ ತಿಳಿಸಿರುತ್ತಾರೆ. ಸ್ವ-ಸಹಾಯ ಸಂಘದ ಸದಸ್ಯತ್ವದಿಂದಾಗಿ ಬ್ಯಾಂಕ್ ಖಾತೆಯನ್ನು ಕಡ್ಡಾಯವಾಗಿ ತೆರೆಯಲೇಬೇಕಾದ ಅನಿವಾರ್ಯತೆಯಿಂದಾಗಿ ಮುಂದೆ ಅವರ ಆದಾಯದಲ್ಲಿ ಉಳಿತಾಯ ಮಾಡಬೇಕೆನ್ನುವ ಅರಿವನ್ನು ಸ್ವ-ಸಹಾಯ ಸಂಘಗಳಿಂದ ಆಗಿದೆ ಎಂದು ತಿಳಿಸಿರುತ್ತಾರೆ. ಮೊಗವೀರ ಮೀನುಗಾರ ಮಹಿಳೆಯರಲ್ಲಿ ಕೆಲವರು ತಮ್ಮ ತಾಯಿಯ ಜೊತೆಗೆ ಸಣ್ಣ ವಯಸ್ಸಿನಲ್ಲಿಯೇ ಮೀನುಗಾರಿಕೆ ವೃತ್ತಿಯನ್ನು ಅವಲಂಬಿಸಿ ಆದಾಯ ಗಳಿಸುತ್ತಿರುವುದಾಗಿಯೂ ಆ ಆದಾಯದಲ್ಲಿ ಉಳಿತಾಯ ಮಾಡುವ, ಬ್ಯಾಂಕಿನಿಂದ ಸಾಲ ಪಡೆದು ಅದನ್ನು ವ್ಯಾಪಾರಕ್ಕೆ ವಿನಿಯೋಗಿಸುವ ಅರಿವನ್ನು ಪಡೆದುಕೊಂಡಿದ್ದು, ಸ್ವ-ಸಹಾಯ ಸಂಘದ ಸದಸ್ಯತ್ವದಿಂದ ಪ್ರಯೋಜನವಾಗಿದೆ ಎಂಬುದಾಗಿ ಉತ್ತರಿಸಿರುತ್ತಾರೆ. ಮಾಹಿತಿದಾರರಲ್ಲಿ ಶೇಕಡಾ ೧೭.೭೫ರಷ್ಟು ಮಂದಿಗೆ ಜನರೊಂದಿಗೆ ಸಂಪರ್ಕದಲ್ಲಿ ಪ್ರಗತಿಯಾಗಿರುವುದಾಗಿ ತಿಳಿಸಿರುತ್ತಾರೆ. ಸ್ವ-ಸಹಾಯ ಸಂಘಗಳು ೧೦ ರಿಂದ ೨೦ರಷ್ಟು ಸದಸ್ಯರನ್ನು ಒಳಗೊಂಡಿರುವ ಗುಂಪುಗಳಾಗಿದ್ದು, ಗುಂಪುಗಳಲ್ಲಿ ಸದಸ್ಯತ್ವ ಪಡೆದವರು ಬೇರೆ ಬೇರೆ ಊರು ಹಾಗೂ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಅಷ್ಟೇ ಅಲ್ಲದೇ ಸ್ವ-ಸಹಾಯ ಸಂಘಗಳು ನಡೆಸುವ ಸಭೆ ಸಮಾರಂಭಗಳಲ್ಲಿ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸ್ವಯಂ ಸೇವಕರಾಗಿ ಸೇವೆಗೈಯ್ಯುವ ಸಂದರ್ಭಗಳಲ್ಲಿ ಅನೇಕ ಜನರೊಂದಿಗೆ ಬೆರೆಯುವ ಅವಕಾಶವಾಗಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೧೬.೫ರಷ್ಟು ಮಂದಿ ನಾಯಕತ್ವದ ಬಗ್ಗೆ ಅರಿವುಂಟಾಗಿರುವುದಾಗಿ, ಅಂದರೆ ಪ್ರತಿ ಸ್ವ-ಸಹಾಯ ಸಂಘಗಳಲ್ಲಿ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಈ ಮೂರು ರೀತಿಯ ಪ್ರತಿನಿಧಿತ್ವ ಕಡ್ಡಾಯವಾಗಿದ್ದು, ಇಂತಹ

ಅಧಿಕಾರವನ್ನು ಪಡೆದುಕೊಂಡ ಮಾಹಿತಿದಾರರು ಸ್ವ-ಸಹಾಯ ಸಂಘದಿಂದಾಗಿ ತಮ್ಮಲ್ಲಿ ನಾಯಕತ್ವ ಗುಣ ಬಂದಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೬.೫ರಷ್ಟು ಸ್ವ-ಸಹಾಯ ಸಂಘದ ಸದಸ್ಯತ್ವದ ನಂತರ ತಾವು ಸಮಾರಂಭಗಳಲ್ಲಿ, ರಾಜಕೀಯ ಸಭೆಗಳಲ್ಲಿ ಆತ್ಮವಿಶ್ವಾಸದೊಂದಿಗೆ ಪಾಲ್ಗೊಂಡಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೩೮.೭೫ರಷ್ಟು ಮಂದಿ ಮಾಹಿತಿದಾರರು ಸ್ವ-ಸಹಾಯ ಸಂಘದ ಸದಸ್ಯರಾಗಿಲ್ಲದೇ ಇರುವುದರಿಂದಾಗಿ ಅನ್ವಯಿಸುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಸಾಮಾಜಿಕವಾಗಿ, ಆರ್ಥಿಕವಾಗಿ, ಬೌದ್ಧಿಕವಾಗಿ ಹಾಗೂ ರಾಜಕೀಯವಾಗಿ ಮಹಿಳಾ ಸಬಲೀಕರಣದಲ್ಲಿ ಸರ್ಕಾರಿ ಯೋಜನೆಗಳು, ಮೀಸಲಾತಿಗಳು ಪ್ರಮುಖ ಪಾತ್ರ ವಹಿಸಿರುವಂತೆ, ಗ್ರಾಮೀಣ ಜನರ ಬದುಕಿನ ದಿಕ್ಕನ್ನು ಬದಲಾಯಿಸುವಲ್ಲಿ ಸರ್ಕಾರಿ ಹಾಗೂ ಸರ್ಕಾರೇತರ ಸ್ವ-ಸಹಾಯ ಸಂಘಗಳ ಪಾತ್ರ ಗಮನಾರ್ಹವಾಗಿದೆ. ಸ್ವಾವಲಂಬನೆಯ ಜೀವನಕ್ಕೆ ಅಡಿಪಾಯ ಹಾಕುತ್ತಾ, ಹಳ್ಳಿಯ ಜನರಲ್ಲಿ ನಾಯಕತ್ವ ಬೆಳೆಸುವ, ಆರ್ಥಿಕವಾಗಿ ಸದೃಢರನ್ನಾಗಿ ಮಾಡುವ ಉದ್ದೇಶವನ್ನಿರಿಸಿಕೊಂಡಿರುವ ಉಡುಪಿ ಜಿಲ್ಲೆಯಲ್ಲಿರುವ ಸ್ವ-ಸಹಾಯ ಸಂಘಗಳು ಗ್ರಾಮಗಳ ಉದ್ಧಾರವೇ ದೇಶದ ಉದ್ಧಾರ ಎಂಬ ಗಾಂಧೀಜಿಯವರ ಕನಸನ್ನು ನನಸು ಮಾಡುವಲ್ಲಿ ತಮ್ಮ ಛಾಪನ್ನು ಮೂಡಿಸಿದೆ.

ಹಣದ ಲೆಕ್ಕಾಚಾರ ಬಾರದಿದ್ದ ಗ್ರಾಮೀಣ ಮಹಿಳೆ ಇಂದು ಬ್ಯಾಂಕಿಗೆ ಹೋಗಿ ವಾರದ ಉಳಿತಾಯದ ಹಣವನ್ನು ಪಾವತಿಸುವುದು, ಸಾಲ ಪಡೆಯುವುದು, ತಾನು ಪಾವತಿಸಬೇಕಾದ ಬಡ್ಡಿಯ ಕುರಿತು ಲೆಕ್ಕಾಚಾರ ಹಾಕುವ ಮಟ್ಟಕ್ಕೆ ಬೆಳೆಯುವುದಕ್ಕೆ ಮುಖ್ಯ ಕಾರಣ ಇಂದು ಉಡುಪಿ ಜಿಲ್ಲೆಯ ಮನೆ ಮನೆಗಳನ್ನು ತಲುಪಿರುವ ಸ್ವ-ಸಹಾಯ ಗಂಪುಗಳು. ಅಡುಗೆ ಮನೆಗಷ್ಟೇ ತನ್ನ ವ್ಯಾಪ್ತಿಯನ್ನು ಹೊಂದಿದ್ದ ನಾರಿ ಇಂದು ಮನೆ ಹೊಸ್ತಿಲು ದಾಟಿ ಮನೆಯಂಗಳಕ್ಕೆ ಕಾಲಿರಿಸಿದ್ದಾಳೆ. ತನ್ನ ಮನೋಬಲ, ಆತ್ಮಬಲ, ಧೈರ್ಯ, ಸ್ಥೈರ್ಯಗಳನ್ನು ವಿಸ್ತರಿಸಿಕೊಂಡು, ಸಾಂವಿಧಾನಿಕ ಸಮಾನತೆಯನ್ನು ಸಾಧಿಸುವೆಡೆಗೆ ಮುನ್ನುಡಿ ಬರೆಯಲು ಈ ಸ್ವ-ಸಹಾಯ ಸಂಘಗಳು ಮಹಿಳೆಗೆ ಆತ್ಮಸ್ಥೈರ್ಯವನ್ನು ನೀಡಿವೆ.

ಉಡುಪಿ ಜಿಲ್ಲೆಯಲ್ಲಿ ಮೊಗವೀರ ಮಹಿಳೆಯರ ಸಾಮಾಜಿಕ, ಆರ್ಥಿಕ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಸಾಧ್ಯವಾಗದಿದ್ದರೂ ನಿಧಾನವಾಗಿ ಅವರ ಅಭಿವೃದ್ಧಿಯಾಗುತ್ತಿರುವುದರ ಸ್ಪಷ್ಟ ಕುರುಹುಗಳನ್ನು ಈ ಅಧ್ಯಯನದಲ್ಲಿ ಗಮನಿಸಬಹುದಾಗಿದೆ. ಮೊಗವೀರ ಮಹಿಳೆಯರಲ್ಲಿ ಸಾಮಾಜಿಕ ಪರಿವರ್ತನೆಗೆ ತುಡಿತವಿದ್ದು ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಎದುರಿಸಿ ಸಬಲೀಕರಣಗೊಳ್ಳಬೇಕೆಂಬ ಛಲ ಬಂದಿರುವುದನ್ನು ಈ ಅಧ್ಯಯನದಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳಬಹುದಾಗಿದೆ.

೫.೧. ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ವಿಶ್ಲೇಷಣೆ

ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ, ಅವರ ನಾಯಕತ್ವ, ರಾಜಕೀಯ ಸಬಲೀಕರಣದಿಂದಾಗಬಹುದಾದದ ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಗಳನ್ನು ಕ್ರೋಢೀಕರಿಸಿ ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ. ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ ಅಡೆತಡೆಗಳು, ರಾಜಕೀಯದಲ್ಲಿ ಮಹಿಳೆಯರಿಗಿರುವ ಅವಕಾಶಗಳು ಹಾಗೂ ಮೊಗವೀರ ಮಹಿಳೆಯರು ಆ ಅವಕಾಶಗಳನ್ನು ಬಳಸಿಕೊಂಡಿರುವುದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಮೀಕ್ಷೆಯ ಮೂಲಕ ಸಂಗ್ರಹಿಸಿ ವಿಮರ್ಶೆಗೊಳಪಡಿಸಲಾಗಿದೆ. ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ ಅಭಿಪ್ರಾಯಗಳು ಹಾಗೂ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಗೊಂಡ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಮಾಹಿತಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದ ವಿವಿಧ ಅಂಶಗಳಿಗೆ ಮಾಹಿತಿದಾರರ ಅಭಿಪ್ರಾಯದ ಜೊತೆಗೆ ಪೂರಕ ವಿವರಣೆಯನ್ನು ನೀಡಲಾಗಿದೆ. ಅಗತ್ಯವಿರುವಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಅಧ್ಯಯನಗಳ ಸಮೀಕ್ಷೆಯನ್ನು ಸೇರಿಸಲಾಗಿದೆ.

ಕೋಷ್ಟಕ ೫.೩೬ ಮಾಹಿತಿದಾರರ ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಳ್ಳುವಿಕೆಯ ವಿವರ

ಯಾವುದಾದರೂ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿರುವಿರಾ	ಸಂಖ್ಯೆ	ಶೇಕಡಾ
ಹೌದು	೧೩೬	೧೭
ಇಲ್ಲ	೬೬೪	೮೩
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರರಲ್ಲಿ ಶೇಕಡಾ ೧೭ರಷ್ಟು ಮಾಹಿತಿದಾರರು ರಾಷ್ಟ್ರೀಯ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿರುವುದಾಗಿ, ಶೇಕಡಾ ೮೩ರಷ್ಟು ಮಾಹಿತಿದಾರರು ಯಾವುದೇ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಳ್ಳದೇ ಇರಲು ಮಾಹಿತಿದಾರರು ಕೊಡುವ ಕಾರಣಗಳು, ಮೊಗವೀರ ಸಮುದಾಯದ ಮಹಿಳೆಯರು ಮೀನುಗಾರಿಕೆಯನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡವರು. ಮಾಹಿತಿದಾರರಲ್ಲಿ ಶೇಕಡಾ ೫೯.೭೫ರಷ್ಟು ಮಂದಿ ಮೀನುಗಾರಿಕೆಯ ವಿವಿಧ ಘಟಕಗಳಲ್ಲಿ ಅಂದರೆ, ಮೀನು ಮಾರುಕಟ್ಟೆ, ಮೀನು ಸಂಸ್ಕರಣ ಘಟಕ, ಬಂದರು, ಒಣ ಮೀನು ವ್ಯಾಪಾರ, ಮನೆ ಮನೆಗೆ ತೆರಳಿ ಮೀನು ಮಾರುವಿಕೆ, ಇತ್ಯಾದಿ ಕ್ಷೇತ್ರಗಳಲ್ಲಿ ದುಡಿಯುವವರು. ಮೀನುಗಾರಿಕೆಯ ಪ್ರಕ್ರಿಯೆಯು ಬಂದರಿನಲ್ಲಿ ಬೆಳಗಿನ ಜಾವ ೫ ರಿಂದ ಪ್ರಾರಂಭವಾಗುತ್ತದೆ. ಗೃಹಕೃತ್ಯವನ್ನು ಪೂರೈಸಿ ಅತೀ ಬೇಗನೆ ಕೆಲಸದ ಸ್ಥಳಕ್ಕೆ ಆಗಮಿಸುವ ಅನಿವಾರ್ಯತೆಯು ಮಹಿಳೆಯರಲ್ಲಿ ಮಾನಸಿಕ ಒತ್ತಡವನ್ನು ಉಂಟು ಮಾಡುತ್ತದೆ. ಮೀನಿನ ಖರೀದಿಯಲ್ಲಿ ನಡೆಸುವ ವಹಿವಾಟು, ಮಧ್ಯವರ್ತಿಗಳ ಹಾವಳಿ, ದುಡಿಮೆ

ಕ್ಷೇತ್ರದ ವಾತಾವರಣ, ಲಾಭ-ನಷ್ಟಗಳ ಲೆಕ್ಕಾಚಾರ, ನಿದ್ರಾಹೀನತೆ, ಅನಾರೋಗ್ಯ, ಇತ್ಯಾದಿಗಳನ್ನು ನಿತ್ಯ ಜೀವನದಲ್ಲಿ ಅನುಭವಿಸಬೇಕಾದ ಪರಿಸ್ಥಿತಿ ಹಾಗೂ ದೀರ್ಘಾವಧಿ ದುಡಿಮೆಯ ಅನಿವಾರ್ಯತೆಯು ರಾಜಕೀಯ ಕ್ಷೇತ್ರದ ಬಗ್ಗೆ ಅವರ ಆಸಕ್ತಿಯನ್ನು ಕುಂಠಿತಗೊಳಿಸುತ್ತದೆ. ಬಡತನ, ಅನಕ್ಷರತೆಯ ಕಾರಣಗಳು ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಳ್ಳುವುದಕ್ಕೆ ತೊಡಕಾಗಿದೆ ಎಂಬುದಾಗಿ ಮಾಹಿತಿದಾರರು ತಿಳಿಸುತ್ತಾರೆ.

ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಂಡ ಮಾಹಿತಿದಾರ ಮಹಿಳೆಯರಲ್ಲಿ ಹೆಚ್ಚಿನವರು ಕಡಿಮೆ ವಯೋಮಾನದವರು ಮತ್ತು ಹೊಸ ತಲೆಮಾರಿನವರು ಎಂಬುದು ಗಮನಾರ್ಹ. ಹೆಚ್ಚು ವಿದ್ಯಾಭ್ಯಾಸ ಪಡೆದಿರುವ ಇವರು ತಮ್ಮ ವಿವಿಧ ಚಟುವಟಿಕೆಗಳು ಹಾಗೂ ಸದಸ್ಯತ್ವ ಹೊಂದಿರುವ ಸಂಘಗಳ ಮೂಲಕ ರಾಜಕೀಯ ಸಂಪರ್ಕವನ್ನು ಹೊಂದಿದ್ದಾರೆ. ಹಲವು ಮತದಾರರು ತಮ್ಮ ಸ್ವ-ಸಹಾಯ ಸಂಘಗಳ ಮೂಲಕ ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದಾರೆ. ಶಿಕ್ಷಿತ ಹಾಗೂ ಯುವ ಸಮುದಾಯದಲ್ಲಿ ರಾಜಕೀಯದ ಬಗ್ಗೆ ಒಲವಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ.

ಕೋಷ್ಟಕ ೫.೩೭ ಮಾಹಿತಿದಾರರ ರಾಜಕೀಯ ಪಕ್ಷದೊಂದಿಗೆ ಗುರುತಿಸುವಿಕೆಯಲ್ಲಿನ ಅವಧಿಯ ವಿವರ

ಎಷ್ಟು ಅವಧಿಯಿಂದ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿರುವಿರಿ(ವರ್ಷ)	ಸಂಖ್ಯೆ	ಶೇಕಡಾ
೧ ರಿಂದ ೩	೮೦	೧೦
೪ ರಿಂದ ೬	೩೨	೪
೭ ರಿಂದ ೧೦	೧೬	೨
೧೧ ವರ್ಷ ಮೇಲ್ಪಟ್ಟು	೮	೧
ಒಟ್ಟು	೧೩೬	೧೭

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ರಾಜಕೀಯ ಪಕ್ಷಗಳೊಂದಿಗೆ ಗುರುತಿಸುವಿಕೆಯ ಅವಧಿಯ ಬಗ್ಗೆ ಕೇಳಲಾದ ಪ್ರಶ್ನೆಗೆ, ಶೇಕಡಾ ೧೦ರಷ್ಟು ಮಾಹಿತಿದಾರರು ೧ ರಿಂದ ೩ ವರ್ಷಗಳಿಂದೀಚೆಗೆ, ಶೇಕಡಾ ೪ರಷ್ಟು ಮಾಹಿತಿದಾರರು ೪ ರಿಂದ ೬ ವರ್ಷಗಳ ಅವಧಿಗೆ ಶೇಕಡಾ ೨ರಷ್ಟು ಮಾಹಿತಿದಾರರು ೭ ರಿಂದ ೧೦ ವರ್ಷಗಳಿಂದಲೂ, ಶೇಕಡಾ ೧ರಷ್ಟು ಮಾಹಿತಿದಾರರು ೧೧ವರ್ಷ ಮೇಲ್ಪಟ್ಟು ಗುರುತಿಸಿಕೊಂಡಿರುವ ಬಗ್ಗೆ ತಿಳಿಸಿರುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಕ್ಷೇತ್ರಗಳಲ್ಲಿ ಮೊಗವೀರ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಜಾಸ್ತಿಯಾಗಿರುವುದು ಅಧ್ಯಯನದಲ್ಲಿ ಕಂಡು ಬಂದಿರುತ್ತದೆ.

ಕೋಷ್ಟಕ ೫.೩೮ ರಾಜಕೀಯ ಪಾಲ್ಗೊಳ್ಳುವಿಕೆಯ ಅಂಶಗಳಿಗೆ ಸಂಬಂಧಿಸಿದಂತೆ ಮೊಗವೀರ ಮಹಿಳಾ ಮಾಹಿತಿದಾರರ ಅಭಿಪ್ರಾಯ

ರಾಜಕೀಯ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ ಅಂಶಗಳು	ಹೌದು		ಇಲ್ಲ		ಒಟ್ಟು	
	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.	ಮಾಹಿತಿ ದಾರರ ಸಂಖ್ಯೆ	ಶೇ.
ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ	೭೨೦	೯೦	೮೦	೧೦	೮೦೦	೧೦೦
ಸ್ಥಳೀಯಾಡಳಿತದ ಚುನಾವಣೆಯಲ್ಲಿ ಸ್ಪರ್ಧೆ	೨೦೦	೨೫	೬೦೦	೭೫	೮೦೦	೧೦೦
ರಾಜಕೀಯ ಪಕ್ಷಗಳ ಸಭೆಯಲ್ಲಿ ಭಾಗವಹಿಸುವಿಕೆ	೩೨೬	೪೦.೭೫	೪೭೪	೫೯.೨೫	೮೦೦	೧೦೦
ರಾಜಕೀಯ ಪಕ್ಷಗಳ ಹಾಗೂ ರಾಜಕೀಯ ಮುಖಂಡರೊಂದಿಗೆ ಸಂಪರ್ಕ	೩೬೦	೪೫	೪೪೦	೫೫	೮೦೦	೧೦೦
ರಾಜಕೀಯ ಮುಖಂಡರಿಂದ ಸಹಾಯ ಪಡೆದಿರುವುದು	೨೦೬	೨೫.೭೫	೫೯೪	೭೪.೨೫	೮೦೦	೧೦೦
ರಾಜಕೀಯ ಪಾಲ್ಗೊಳ್ಳುವಿಕೆಯಿಂದ ಉನ್ನತೀಕರಣ ಸಾಧ್ಯ	೫೯೪	೭೪.೨೫	೨೦೬	೨೫.೭೫	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರರಲ್ಲಿ ಶೇಕಡಾ ೯೦ರಷ್ಟು ಮಾಹಿತಿದಾರರು ಚುನಾವಣೆಯಲ್ಲಿ ಮತದಾನ ಮಾಡಿರುವುದಾಗಿಯೂ, ಶೇಕಡಾ ೧೦ರಷ್ಟು ಮಂದಿ ಚುನಾವಣೆಯಲ್ಲಿ ಮತದಾನ ಮಾಡದಿರುವ ಬಗ್ಗೆ ತಿಳಿಸಿರುತ್ತಾರೆ. ವಿಶ್ವದಲ್ಲಿ ಮೊದಲ ಮಹಾಯುದ್ಧ ನಂತರ ಸ್ತ್ರೀಯರಿಗೆ ಮತಾಧಿಕಾರವನ್ನು ನೀಡಲಾಯಿತು. ಇದು ಒಂದೊಂದು ದೇಶದಲ್ಲಿ ಒಂದೊಂದು ಸಂದರ್ಭದಲ್ಲಿ ನೀಡಲಾಗಿದ್ದು, ೧೯೧೯ರಲ್ಲಿ ಅಮೇರಿಕಾ, ೧೯೨೯ರಲ್ಲಿ ಇಂಗ್ಲೆಂಡ್, ೧೯೩೪ರಲ್ಲಿ ಟರ್ಕಿ, ೧೯೪೬ರಲ್ಲಿ ಯುಗೋಸ್ಲಾವಿಯಾ, ೧೯೪೭ರಲ್ಲಿ ಜಪಾನ್, ೧೯೫೦ರಲ್ಲಿ ಭಾರತ, ೧೯೭೩ರಲ್ಲಿ ಸ್ವಿಟ್ಜರ್ಲ್ಯಾಂಡ್ ರಾಷ್ಟ್ರಗಳಲ್ಲಿ ಮತಾಧಿಕಾರವನ್ನು ಸ್ತ್ರೀಯರಿಗೆ ನೀಡಲಾಯಿತು. ಆದರೆ ಸೂಡಾನ್, ಜಂಜಿಬಾರ್ ರಾಷ್ಟ್ರಗಳಲ್ಲಿನ ಸ್ತ್ರೀಯರಿಗೆ ಇಂದಿಗೂ ಮತಾಧಿಕಾರವಿಲ್ಲ ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಅಧಿಕಾರವಿರುವುದಿಲ್ಲ. (ಲೋಹಿತಾಶ್ವ.ಹೆಚ್.ಸಿ, ೨೦೧೨) ಈ ಮತಾಧಿಕಾರವನ್ನು ಬಳಸುವಲ್ಲಿ ಮೊಗವೀರ ಮಹಿಳೆಯರು ಯಶಸ್ವಿಯಾಗಿದ್ದು ಶೇಕಡಾ ೧೦ರಷ್ಟು ಮಹಿಳೆಯರು ಮಾತ್ರ ಹಿಂದಿನ ಚುನಾವಣೆಯಲ್ಲಿ ಮತ ಚಲಾಯಿಸಿಲ್ಲ.

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಅವಧಿಯ ಬಗ್ಗೆ ಕೇಳಲಾದ ಪ್ರಶ್ನೆಗೆ ಶೇಕಡಾ ೮ರಷ್ಟು ಮಾಹಿತಿದಾರರು ೧ ರಿಂದ ೫ ವರ್ಷಗಳಿಂದಲೂ, ಶೇಕಡಾ ೨೦ರಷ್ಟು ಮಾಹಿತಿದಾರರು ೬ ರಿಂದ ೧೦ ವರ್ಷಗಳಿಂದಲೂ, ಶೇಕಡಾ ೨೩ರಷ್ಟು ಮಾಹಿತಿದಾರರು

೧೧ ರಿಂದ ೧೫ ವರ್ಷಗಳಿಂದಲೂ, ಶೇಕಡಾ ೭ರಷ್ಟು ಮಾಹಿತಿದಾರರು ೧೬ವರ್ಷ ಮೇಲ್ಪಟ್ಟು ಮತದಾನದಲ್ಲಿ ಭಾಗವಹಿಸಿರುವುದಾಗಿ ತಿಳಿಸಿರುತ್ತಾರೆ.

ಉಡುಪಿ ಜಿಲ್ಲೆಯ ಮಹಿಳಾ ಮಾಹಿತಿದಾರರಲ್ಲಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡ ಬಗ್ಗೆ ಮಾಹಿತಿ ಕೇಳಿ ಅದರ ಅವಧಿಯ ಬಗ್ಗೆ ಕೇಳಲಾದ ಪ್ರಶ್ನೆಗೆ, ಶೇಕಡಾ ೧೦ರಷ್ಟು ಮಾಹಿತಿದಾರರು ೧ ರಿಂದ ೫ ವರ್ಷಗಳಿಂದಲೂ, ಶೇಕಡಾ ೭ರಷ್ಟು ಮಾಹಿತಿದಾರರು ೬ ರಿಂದ ೧೦ವರ್ಷ ಗಳಿಂದಲೂ, ಶೇಕಡಾ ೪ ರಷ್ಟು ಮಾಹಿತಿದಾರರು ೧೧ ರಿಂದ ೧೫ ವರ್ಷಗಳಿಂದಲೂ, ಶೇಕಡಾ ೧ರಷ್ಟು ಮಾಹಿತಿದಾರರು ೧೬ವರ್ಷ ಮೇಲ್ಪಟ್ಟು ಪ್ರಚಾರದಲ್ಲಿ ಗುರುತಿಸಿಕೊಂಡಿರುವ ಬಗ್ಗೆ ತಿಳಿಸಿರುತ್ತಾರೆ.

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೨೫ರಷ್ಟು ಮಂದಿ ಸ್ಥಳೀಯಾಡಳಿತ ಚುನಾವಣೆಯಲ್ಲಿ ಸ್ಪರ್ಧಿಸಿರುವುದಾಗಿ ತಿಳಿಸಿದ್ದು, ಅದರಲ್ಲಿ ಶೇಕಡಾ ೯.೫ರಷ್ಟು ಮಾಹಿತಿದಾರರು ಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಯಾಗಿ ಆಡಳಿತ ನಡೆಸುವ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೭೫ರಷ್ಟು ಮಾಹಿತಿದಾರರು ಯಾವುದೇ ಸ್ಥಳೀಯಾಡಳಿತದಲ್ಲಿ ಸ್ಪರ್ಧಿಸಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ರಾಜಕೀಯ ಪಕ್ಷಗಳ ಸಭೆಗಳಲ್ಲಿ ಭಾಗವಹಿಸುವ ವಿವರಗಳ ಬಗ್ಗೆ ಶೇಕಡಾ ೪೦.೭೫ರಷ್ಟು ಮಂದಿ ಭಾಗವಹಿಸಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೫೯.೨೫ರಷ್ಟು ಮಾಹಿತಿದಾರರು ನಕಾರತ್ಮಕ ಉತ್ತರವನ್ನು ನೀಡಿರುತ್ತಾರೆ. ಉಡುಪಿ ಜಿಲ್ಲೆಯ ಶೇಕಡಾ ೨೩.೭೫ ರಷ್ಟು ಮಾಹಿತಿದಾರರು ೧ ರಿಂದ ೫ ವರ್ಷಗಳೀಂದಿಚೆಗೆ ರಾಜಕೀಯ ಸಭೆಗಳಲ್ಲಿ ಪಾಲ್ಗೊಂಡಿರುವುದಾಗಿ, ಶೇಕಡ ೯.೫ರಷ್ಟು ಮಾಹಿತಿದಾರರು ೬ ರಿಂದ ೧೦ ವರ್ಷಗಳೀಂದಿಚೆಗೆ, ಶೇಕಡಾ ೫.೫ರಷ್ಟು ಮಂದಿ ೧೧ ರಿಂದ ೧೫ ವರ್ಷಗಳೀಂದಿಚೆಗೆ ಹಾಗೂ ಶೇಕಡಾ ೨ರಷ್ಟು ಮಾಹಿತಿದಾರರು ೧೬ವರ್ಷ ಮೇಲ್ಪಟ್ಟು ರಾಜಕೀಯ ಪಕ್ಷಗಳ ಸಭೆಗಳಲ್ಲಿ ಭಾಗವಹಿಸಿರುವುದಾಗಿ ತಿಳಿಸಿರುತ್ತಾರೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ರಾಜಕೀಯ ಪ್ರಕ್ರಿಯೆಯು ಹೆಚ್ಚಾಗಿದ್ದು ಅನುಕ್ರಮವಾಗಿ ಮಹಿಳೆಯರು ರಾಜಕೀಯದತ್ತ ಆಸಕ್ತಿಯನ್ನು ವಹಿಸಿರುವುದು ತಿಳಿದುಬರುತ್ತಿದೆ.

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ರಾಜಕೀಯ ಪಕ್ಷಗಳ ನಾಯಕರ ಸಂಪರ್ಕದಲ್ಲಿರುವಿರಾ ಎಂಬ ಪ್ರಶ್ನೆಗೆ ಶೇಕಡಾ ೪೫ರಷ್ಟು ಮಾಹಿತಿದಾರರು ಸಂಪರ್ಕದಲ್ಲಿರುವುದಾಗಿ, ಶೇಕಡಾ ೫೫ರಷ್ಟು ಮಾಹಿತಿದಾರರು ಯಾವುದೇ ಸಂಪರ್ಕದಲ್ಲಿ ಇಲ್ಲ ಎಂಬುದಾಗಿ ಉತ್ತರಿಸಿರುತ್ತಾರೆ. ರಾಜಕೀಯ ಮುಖಂಡರ ಸಂಪರ್ಕದಲ್ಲಿರುವ ಮಾಹಿತಿದಾರರಲ್ಲಿ ಶೇಕಡಾ ೨೨.೫ರಷ್ಟು ಮಾಹಿತಿದಾರರು ೧ ರಿಂದ ೫ ವರ್ಷಗಳೀಂದಿಚೆಗೆ, ಶೇಕಡಾ ೧೩ರಷ್ಟು ಮಾಹಿತಿದಾರರು ೬ ರಿಂದ ೧೦ ವರ್ಷಗಳೀಂದಿಚೆಗೆ, ಶೇಕಡಾ ೭ರಷ್ಟು ಮಾಹಿತಿದಾರರು ೧೧ ರಿಂದ ೧೫ರಷ್ಟು ವರ್ಷಗಳೀಂದಿಚೆಗೆ, ಹಾಗೂ ಶೇಕಡಾ ೨.೫ರಷ್ಟು ಮಾಹಿತಿದಾರರು ೧೬ವರ್ಷ ಮೇಲ್ಪಟ್ಟು ರಾಜಕೀಯ ಮುಖಂಡರೊಂದಿಗೆ ಸಂಪರ್ಕ ಹೊಂದಿರುವುದಾಗಿ ತಿಳಿಸಿರುತ್ತಾರೆ. ರಾಜಕೀಯ

ಮುಖಂಡರ ಸಂಪರ್ಕದಿಂದ ಶೇಕಡಾ ೧೫.೭೫ರಷ್ಟು ಮಾಹಿತಿದಾರರು ಪ್ರಯೋಜನ ಪಡೆದಿರುವುದಾಗಿ ತಿಳಿಸಿದ್ದು, ಅವುಗಳು ಕ್ರಮವಾಗಿ ಶೇಕಡಾ ೧.೭೫ರಷ್ಟು ಮಾಹಿತಿದಾರರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲಾ ಪ್ರವೇಶ ಶುಲ್ಕದ ಮೊತ್ತವನ್ನು ಪಡೆದಿರುವುದಾಗಿ, ಶೇಕಡಾ ೫.೨೫ ರಷ್ಟು ಮಾಹಿತಿದಾರರು ತಮ್ಮ ಮಕ್ಕಳ ವಿವಾಹ ಸಂದರ್ಭದಲ್ಲಿ ಶೇಕಡಾ ೨ರಷ್ಟು ಮಾಹಿತಿದಾರರು, ಮನೆ ನಿರ್ಮಾಣದ ಸಂದರ್ಭದಲ್ಲಿ ಆರ್ಥಿಕ ಸಹಾಯ ಧನವನ್ನು, ಶೇಕಡಾ ೧.೨೫ರಷ್ಟು ಮಾಹಿತಿದಾರರು ತಮ್ಮ ಕುಟುಂಬದ ಸದಸ್ಯರ ಅನಾರೋಗ್ಯದ ಸಂದರ್ಭದಲ್ಲಿ ಶಾಸಕರು ಹಾಗೂ ಸಂಸದ ಸದಸ್ಯರ ನಿಧಿಗಳಿಂದ ದೊರೆಯುವ ಆರ್ಥಿಕ ಸಹಾಯವನ್ನು ರಾಜಕೀಯ ಮುಖಂಡರುಗಳ ಸಂಪರ್ಕದಿಂದಾಗಿ ಪಡೆದುಕೊಂಡಿರುವುದಾಗಿ, ಶೇಕಡಾ ೫.೨೫ರಷ್ಟು ಮಾಹಿತಿದಾರರು ತಮ್ಮ ಕುಟುಂಬದ ಸದಸ್ಯರಿಗೆ ರಾಜಕೀಯ ಮುಖಂಡರುಗಳ ಶಿಫಾರಸ್ಸು ಪತ್ರದ ಮೇರೆಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ದೊರಕಿರುವುದಾಗಿ, ಶೇಕಡಾ ೫ ರಷ್ಟು ಮಾಹಿತಿದಾರರು ತಮ್ಮ ಮನೆಯ ಸಮೀಪದ ರಸ್ತೆಗಳನ್ನು ಹಾಗೂ ಶೇಕಡಾ ೧.೨೫ರಷ್ಟು ಮಾಹಿತಿದಾರರು ಪರಿಸರದಲ್ಲಿ ಒಳ ಚರಂಡಿಗಳನ್ನು ನಿರ್ಮಿಸುವಂತೆ ಕೋರಿ ರಾಜಕೀಯ ಪಕ್ಷಗಳ ಮುಖಂಡರುಗಳ ಶಿಫಾರಸ್ಸಿನ ಜೊತೆ ಅಧಿಕಾರಿಗಳನ್ನು ಸಂಪರ್ಕಿಸಿ ಪ್ರಯೋಜನ ಪಡೆದುಕೊಂಡಿರುವುದಾಗಿಯೂ, ಶೇಕಡಾ ೨೫.೭೫ರಷ್ಟು ಮಾಹಿತಿದಾರರು ಸರಕಾರಿ ಯೋಜನೆಗಳ ಮಾಹಿತಿಯನ್ನು ರಾಜಕೀಯ ಮುಖಂಡರುಗಳಿಂದ ಪಡೆದಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೭೪.೨೫ರಷ್ಟು ಮಾಹಿತಿದಾರರು ಯಾವುದೇ ಸಹಾಯವನ್ನು ಪಡೆದಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮಹಿಳೆಯರ ಉನ್ನತೀಕರಣ ಸಾಧ್ಯವೇ ಎಂಬ ಪ್ರಶ್ನೆಗೆ, ಶೇಕಡಾ ೭೪.೨೫ರಷ್ಟು ಮಾಹಿತಿದಾರರು ಉನ್ನತಿ ಸಾಧ್ಯವೆಂದೂ, ಶೇಕಡಾ ೨೫.೭೫ರಷ್ಟು ಮಾಹಿತಿದಾರರು ಯಾವುದೇ ಉನ್ನತಿ ಸಾಧ್ಯವಿಲ್ಲವೆಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಈ ಅಧ್ಯಯನದಲ್ಲಿ ಮಹಿಳಾ ಅಭಿವೃದ್ಧಿಗೆ ರಾಜಕೀಯ ಪಾಲ್ಗೊಳ್ಳುವಿಕೆಯ ಕೊಡುಗೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದು ಮಾಹಿತಿದಾರರು ನೀಡಿದ ಉತ್ತರವು ಅಧ್ಯಯನದ ಉದ್ದೇಶಕ್ಕೆ ಪೂರಕವಾಗಿದೆ. ಮೊಗವೀರ ಮಹಿಳೆಯರಲ್ಲಿ ಹೆಚ್ಚಿನ ಸಂಖ್ಯೆಯ ಮಾಹಿತಿದಾರರು ಮಹಿಳಾಭಿವೃದ್ಧಿ ಸಾಧ್ಯವೆಂದು ತಿಳಿಸಿದ್ದಾರೆ. ಇದರಿಂದಾಗಿ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಬೇಕಾದ ಅನಿವಾರ್ಯತೆಯನ್ನು ಅಧ್ಯಯನವು ಸ್ಪಷ್ಟವಾಗಿ ಬಿಂಬಿಸುತ್ತದೆ.

ಕೋಷ್ಟಕ ೫.೩೯ ವಿವಿಧ ಸಂಘಟನೆಗಳಲ್ಲಿ ಮಾಹಿತಿದಾರರ ಸದಸ್ಯತ್ವ ವಿವರಗಳು

ಸಂಘಟನೆಗಳು	ಸಂಖ್ಯೆ	ಶೇಕಡಾ
ಸ್ವ-ಸಹಾಯ	೪೯೦	೬೧.೨೫
ಸ್ತ್ರೀ ಶಕ್ತಿ	೩೪	೪.೨೫
ಸಹಕಾರಿ ಸಂಘ	೯೨	೧೧.೫
ಮಹಿಳಾ / ಯುವತಿ ಮಂಡಲ	೧೦೪	೧೩
ಅನ್ವಯಿಸುವುದಿಲ್ಲ	೮೦	೧೦
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯಲ್ಲಿ ಮಹಿಳೆಯರ ಸಂಘಟನೆಗಳ ಸಂಖ್ಯೆಯು ಪ್ರಬಲವಾಗಿದ್ದು ಜಿಲ್ಲಾ ಮಟ್ಟದ, ತಾಲೂಕು ಮಟ್ಟದ ಹಾಗೂ ಸ್ಥಳೀಯ ಮಹಿಳಾ ಸಂಘಟನೆಗಳ ಸಂಖ್ಯೆಯೂ ಬಹಳಷ್ಟಿದೆ. ಶೇಕಡಾ ೬೧.೨೫ರಷ್ಟು ಮಾಹಿತಿದಾರರು ಸ್ವ-ಸಹಾಯ ಸಂಘದ ಸದಸ್ಯರಾಗಿರುವುದಾಗಿ, ಶೇಕಡಾ ೪.೨೫ರಷ್ಟು ಮಂದಿ ಸ್ತ್ರೀ ಶಕ್ತಿ ಸಂಘಟನೆಗಳಲ್ಲಿ ಸದಸ್ಯರಾಗಿರುವುದಾಗಿ, ಶೇಕಡಾ ೧೧.೫ರಷ್ಟು ಮಾಹಿತಿದಾರರು ಮೀನುಗಾರರ ಮಹಿಳಾ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವುದಾಗಿ ತಿಳಿಸಿದ್ದಾರೆ. ಮಹಿಳಾ ಮೀನುಗಾರರ ಸಂಘವೂ ಸಕ್ರಿಯರಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಘಟನೆಯಾಗಿದೆ. ಶೇಕಡಾ ೧೩ರಷ್ಟು ಮಾಹಿತಿದಾರರು ವಿವಿಧ ಭಜನಾ ಮಂದಿರಗಳ ಮಹಿಳಾ ಮಂಡಲಗಳಲ್ಲಿ ಸದಸ್ಯರಾಗಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೧೦ ಮಾಹಿತಿದಾರರು ಯಾವುದೇ ಸಂಘಟನೆಗಳಲ್ಲಿ ಸದಸ್ಯತ್ವ ಹೊಂದಿರುವುದಿಲ್ಲ ಎಂಬುದಾಗಿ ತಿಳಿಸಿ ಸಂಘಟನೆಗಳಿಂದ ಹೊರಗುಳಿದವರು. ನಮಗೆ ಯಾವುದೇ ಸಾರ್ವಜನಿಕ ಸಂಘಟನೆಗಳಲ್ಲಿ ಸೇರಿಕೊಳ್ಳುವ ಆಸಕ್ತಿ ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ಸ್ವ-ಸಹಾಯ ಸಂಘಗಳ ಮೂಲಕ ಸಂಘಟನಾ ಶಕ್ತಿಯನ್ನು ಪಡೆದಿರುವುದು ಅಧ್ಯಯನದಲ್ಲಿ ಕಂಡುಬರುತ್ತದೆ.

ಮೊಗವೀರರಲ್ಲಿ ರಕ್ತಗತವಾಗಿರುವ ಒಂದು ಪ್ರಮುಖ ಸಂಪ್ರದಾಯವೆಂದರೆ ಸಮಾಜ ಮತ್ತು ಜೀವನೋಪಾಯಗಳ ಸಾಂಸ್ಥಿಕ ನೆಲೆಗಟ್ಟುಗಳ ರಚನೆ, ಮೊಗವೀರರ ಸುಮಾರು ೩೭೦ ಸಾಂಪ್ರದಾಯಿಕ ಸಂಘಟನೆಗಳು ಎಂದರೆ ಗ್ರಾಮ ಸಭೆಗಳು, ಸಂಯುಕ್ತ ಪಟ್ಟಣಗಳು, ಹೋಬಳಿಗಳು, ಸರ್ವೆ ಹೋಬಳಿಗಳು ಅಸ್ತಿತ್ವದಲ್ಲಿದೆ. ಪ್ರತಿಯೊಬ್ಬ ಮೊಗವೀರ ಪುರುಷ ಹಾಗೂ ಮಹಿಳೆ ಹುಟ್ಟಿದಾಗಿನಿಂದಲೇ ತಮ್ಮ ಗ್ರಾಮದ ಸಾಂಪ್ರದಾಯಿಕ ಸಂಘಟನೆಯ ಸದಸ್ಯರಾಗಲು ಅರ್ಹರಾಗಿರುತ್ತಾರೆ. ಪ್ರತಿ ಮೊಗವೀರರ ಹಳ್ಳಿಗಳಲ್ಲಿ ಒಂದು ಮೊಗವೀರ ಗ್ರಾಮ ಸಭೆ ಅಸ್ತಿತ್ವದಲ್ಲಿರುತ್ತದೆ. ಗ್ರಾಮ ಸಭೆಗಳು, ಸಂಯುಕ್ತ ಪಟ್ಟಣ ಸಭೆಗಳು, ಹೋಬಳಿಗಳು ಮತ್ತು ಸರ್ವೆ ಹೋಬಳಿ ಸಭೆಗಳು, ಮೊಗವೀರ ಸಮಾಜದ ಕಾರ್ಯ ಚಟುವಟಿಕೆಗಳನ್ನು ತನ್ನ ನಿಯಂತ್ರಣದಲ್ಲಿರಿಸಿಕೊಂಡಿವೆ. ಮುಖ್ಯವಾಗಿ, ಮೀನುಗಾರಿಕೆ, ಸಮಾಜದ ಧಾರ್ಮಿಕ ಆಚರಣೆ ಮಾತ್ರವಲ್ಲದೆ, ತನ್ನ ಸದಸ್ಯರ ಜನನದಿಂದ ಮರಣದವರೆಗಿನ ಸಂಸ್ಕಾರ ಸಂಬಂಧದ ಆಚರಣೆಗಳು, ತನ್ನ ಸದಸ್ಯರೊಳಗಿನ ವಾದ-ವಿವಾದ ತೀರ್ಮಾನಿಸುವುದು ಇತ್ಯಾದಿಗಳು. ಮೊಗವೀರರು ಗ್ರಾಮ ಸಭೆಯ ನಿಯಮಾನುಸಾರ ತಮ್ಮ ಸಮುದಾಯದ ಅಭಿವೃದ್ಧಿಗೆ ವಿನಿಯೋಗಿಸುವ ಸಲುವಾಗಿ ಕಡ್ಡಾಯವಾಗಿ ತಮ್ಮ ದುಡಿಮೆಯ ಒಂದು ಪಾಲನ್ನು ಗ್ರಾಮ ಸಭೆಗೆ ಸಲ್ಲಿಸುತ್ತಿದ್ದರು. ಗ್ರಾಮ ಸಭೆಗಳು ಒಟ್ಟು ಸೇರಿ ಸಂಯುಕ್ತ ಪಟ್ಣಗಳಾಗುತ್ತವೆ. ಮೊಗವೀರ ಸಮಾಜವು ಮೂರು ರೀತಿಯ ಹೋಬಳಿಗಳನ್ನು ರಚಿಸಿವೆ. ಅವುಗಳು ಮಂಗಳೂರು ಹೋಬಳಿ, ಬಾರ್ಕೂರು ಹೋಬಳಿ ಹಾಗೂ ಬಗ್ವಾಡಿ ಹೋಬಳಿ. ಮಂಗಳೂರು ಹೋಬಳಿಗಳಲ್ಲಿ ಒಟ್ಟು ೨೪ ಗ್ರಾಮ ಸಭೆಗಳು, ಬಾರ್ಕೂರು ಹೋಬಳಿಗಳಲ್ಲಿ ಒಟ್ಟು ೧೯೨ ಗ್ರಾಮ ಸಭೆಗಳು, ಹಾಗೂ ಬಗ್ಬಾಡಿ ಹೋಬಳಿಗಳಲ್ಲಿ ೧೯೨ ಗ್ರಾಮಸಭೆಗಳು ಸೇರಿವೆ. ಸುಮಾರು ೭೫ ಗ್ರಾಮದ ಮಹಿಳಾ ಸಮಾಜಗಳು, ಸುಮಾರು ೩೫ ಶಾಲೆ,

ಕಾಲೇಜು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳು, ಸುಮಾರು ೧೨೫ ಧಾರ್ಮಿಕ ಎಂದರೆ, ದೇವಾಲಯ, ಮೂಲಸ್ಥಾನ, ಭಜನಾ ಮಂದಿರ, ದೈವಸ್ಥಾನಗಳು, ಸುಮಾರು ೨೦ ಪ್ರಮುಖ ದತ್ತಿ ಸಂಸ್ಥೆಗಳು ಮತ್ತು ಸುಮಾರು ೭೫ ಮೀನುಗಾರ ಮತ್ತು ಮೀನುಗಾರ ಮಹಿಳೆಯರ ಸಹಕಾರಿ ಸಂಘಗಳಿವೆ.

ಕೋಷ್ಟಕ ೫.೪೦ ಮಾಹಿತಿದಾರರು ಮುಷ್ಕರದಲ್ಲಿ ಭಾಗಿಯಾಗಿರುವ ವಿವರಗಳು

ನೀವು ಮುಷ್ಕರದಲ್ಲಿ ಭಾಗಿಯಾಗಿರುವಿರಾ	ಸಂಖ್ಯೆ	ಶೇಕಡಾ
ಹೌದು	೩೨೦	೪೦
ಇಲ್ಲ	೪೮೦	೬೦
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೪೦ ರಷ್ಟು ಮಾಹಿತಿದಾರರು ಮುಷ್ಕರದಲ್ಲಿ ಭಾಗಿಯಾಗಿರುವುದಾಗಿ, ಶೇಕಡಾ ೬೦ ರಷ್ಟು ಮಾಹಿತಿದಾರರು ಯಾವುದೇ ಮುಷ್ಕರದಲ್ಲಿ ಭಾಗಿಯಾಗಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಮೊಗವೀರ ಸಮುದಾಯದವರು ಧೈರ್ಯಶಾಲಿಗಳು, ಸಮುದ್ರದ ಸವಾಲುಗಳನ್ನೇ ಎದುರಿಸುವ ಎದೆಗಾರಿಕೆಯಿರುವ ಈ ಸಮುದಾಯ ಸಾಮಾಜಿಕ ಸವಾಲುಗಳನ್ನು ಎದುರಿಸಬಲ್ಲ ಎಲ್ಲಾ ಸಾಮರ್ಥ್ಯವನ್ನು ಹೊಂದಿದೆ. ಸಮಾಜದಲ್ಲಿ ಕಂಡು ಬರುವ ಅಸಮಾನತೆ, ಮೂಲ ಸೌಲಭ್ಯಗಳಿಂದ ವಂಚಿತರಾಗಿರುವುದು ಸಾಮಾಜಿಕ ಪಿಡುಗುಗಳಾದ ಮದ್ಯಪಾನ, ವರದಕ್ಷಿಣೆ, ಬಾಲ್ಯ ವಿವಾಹ, ಇತ್ಯಾದಿಗಳ ವಿರುದ್ಧ ವಿವಿಧ ರೀತಿಯ ಮುಷ್ಕರಗಳಲ್ಲಿ ಮೊಗವೀರ ಮಹಿಳೆಯರು ಭಾಗವಹಿಸಿದ್ದಾರೆ.

ಸುಕುಮಾರ್ ಹಾಗೂ ಮತ್ತಿತರರ (೧೯೯೨)ಅವರ ಅಧ್ಯಯನವು ಕೇರಳ ರಾಜ್ಯದ ಮೀನು ಸಂಸ್ಕರಣ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರ ಮಹಿಳೆಯರು ತಮ್ಮ ಕುಟುಂಬ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿ, ನಿರ್ಧಾರ ಕೈಗೊಳ್ಳುವಲ್ಲಿ ಸಶಕ್ತರಾಗಿರುವುದಾಗಿಯೂ ಹಾಗೆಯೇ ಸಾಮಾಜಿಕ ಪಿಡುಗುಗಳ ನಿವಾರಣೆಯಲ್ಲಿ ಅಂದರೆ ವರದಕ್ಷಿಣೆ ವಿರುದ್ಧ ಹೋರಾಟಗಳಲ್ಲಿ ಹಾಗೂ ಮದ್ಯವರ್ಜನ ಹೋರಾಟಗಳಲ್ಲಿ ಯಥೇಚ್ಛವಾಗಿ ಪಾಲ್ಗೊಂಡು ಸಮಾಜದ ಸ್ವಾಸ್ತ್ಯ ಕಾಪಾಡುವಲ್ಲಿ ಕಾರಣೀಭೂತರಾಗಿರುವುದಾಗಿ ತಿಳಿಸಿರುತ್ತಾರೆ.

ಕೋಷ್ಟಕ ೫.೪೧ ಮಾಹಿತಿದಾರರು ಭಾಗಿಯಾಗಿರುವ ಮುಷ್ಕರದ ಕ್ಷೇತ್ರಗಳ ವಿವರಗಳು

ಮುಷ್ಕರದ ಕ್ಷೇತ್ರಗಳು	ಸಂಖ್ಯೆ	ಶೇಕಡಾ
ಶೈಕ್ಷಣಿಕ ಕ್ಷೇತ್ರದಲ್ಲಿ	೧೬	೨
ಉದ್ಯೋಗ ಕ್ಷೇತ್ರದಲ್ಲಿ	೧೮೨	೨೨.೭೫
ರಸ್ತೆಗಳ ನಿರ್ಮಾಣಕ್ಕಾಗಿ	೪೪	೫.೫
ಸಾರಾಯಿ ನಿಷೇಧಕ್ಕಾಗಿ	೭೮	೯.೭೫
ಒಟ್ಟು	**೩೨೦**	**೪೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಸಂದರ್ಭಗಳಲ್ಲಿ ಹಲವಾರು ರೀತಿಯ ಮುಷ್ಕರಗಳಲ್ಲಿ ಭಾಗಿಯಾಗಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೨ರಷ್ಟು ಮಾಹಿತಿದಾರರು ಶೈಕ್ಷಣಿಕ ಕ್ಷೇತ್ರಗಳಲ್ಲಿ ಸೆಮಿಸ್ಟರ್ ಪದ್ಧತಿಗಳ ತಿದ್ದುಪಡಿ ಹಾಗೂ ವಿದ್ಯಾರ್ಥಿನಿಯರ ಮೇಲಾದ ಹಲ್ಲೆಗಳನ್ನು ಖಂಡಿಸುವ ಪ್ರಕರಣಗಳಲ್ಲಿ, ಶೇಕಡಾ ೨೨.೭೫ರಷ್ಟು ಮಾಹಿತಿದಾರರು ಉದ್ಯೋಗ ಕ್ಷೇತ್ರಗಳಲ್ಲಿ ಅಂದರೆ ಮೀನುಗಾರಿಕಾ ಕೆಲಸದ ಸಮಯದಲ್ಲಿ ಬದಲಾವಣೆ, ಮೀನಿನ ದರಗಳ ಪರಿಷ್ಕರಣೆ, ಅಂಗಡಿಗಳ ಸ್ಥಳಾಂತರ, ಮೀನು ಮಾರುಕಟ್ಟೆಗಳ ಬೇಡಿಕೆ ಸಂದರ್ಭಗಳಲ್ಲಿ ಶೇಕಡಾ ೫.೫ರಷ್ಟು ಮಾಹಿತಿದಾರರು ತಮ್ಮ ಊರಿನ ರಸ್ತೆಗಳ ರಚನೆಯ ಬೇಡಿಕೆಯ ಸಂದರ್ಭದಲ್ಲಿ, ಶೇಕಡಾ ೫.೫ರಷ್ಟು ಮಾಹಿತಿದಾರರು ಹಾಗೆಯೇ ಶೇಕಡಾ ೯.೭೫ರಷ್ಟು ಮಾಹಿತಿದಾರರು ಸಾರಾಯಿ ನಿಷೇದ ಸಂದರ್ಭಗಳಲ್ಲಿ ಮುಷ್ಕರದಲ್ಲಿ ಭಾಗಿಯಾಗಿರುವುದಾಗಿ ತಿಳಿಸಿರುತ್ತಾರೆ.

ಕೋಷ್ಟಕ ೫.೪೨ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಅಗತ್ಯತೆಯ ಬಗ್ಗೆ ಮಾಹಿತಿದಾರರ ಅಭಿಪ್ರಾಯ

ಮೊಗವೀರ ಮಹಿಳೆಯರಿಗೆ ರಾಜಕೀಯ ಪಾಲ್ಗೊಳ್ಳುವಿಕೆಯ ಅಗತ್ಯತೆ ಇದೆ	ಸಂಖ್ಯೆ	ಶೇಕಡಾ
ಹೌದು	೪೦೪	೫೦.೫
ಇಲ್ಲ	೩೯೬	೪೯.೫
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೫೦.೫ ಮಾಹಿತಿದಾರರು ಮಹಿಳೆಯ ರಾಜಕೀಯ ಪಾಲ್ಗೊಳ್ಳುವಿಕೆಯು ಅತೀ ಅಗತ್ಯವಾಗಿದೆ ಎಂಬುದಾಗಿಯೂ, ಶೇಕಡಾ ೪೯.೫ರಷ್ಟು ಮಾಹಿತಿದಾರರು ರಾಜಕೀಯ ಪಾಲ್ಗೊಳ್ಳುವಿಕೆಯ ಅಗತ್ಯತೆ ಇಲ್ಲ ಎಂಬುದಾಗಿ ಉತ್ತರಿಸಿರುತ್ತಾರೆ.

ರಾಜಕೀಯ ಪಾಲ್ಗೊಳ್ಳುವಿಕೆಯ ಮೂಲಕ ತಮ್ಮ ಮುಂದಿರುವ ಸವಾಲುಗಳನ್ನು ಸೂಕ್ತವಾಗಿ ಎದುರಿಸಬಹುದೆಂಬ ಅರಿವು ಮಾಹಿತಿದಾರ ಮಹಿಳೆಯರಲ್ಲಿದೆ. ನಾಯಕತ್ವ ಹಾಗೂ ನೀತಿ ನಿಯಮಗಳನ್ನು ರೂಪಿಸುವ ಅವಕಾಶ ನೀಡಬಲ್ಲ ರಾಜಕೀಯವು ಸಾಮಾಜಿಕ ಒಳಗೊಳ್ಳುವಿಕೆಗೆ ಪೂರಕವೆಂಬ ಅಭಿಪ್ರಾಯ ಮಾಹಿತಿದಾರ ಮಹಿಳೆಯರಲ್ಲಿದೆ.

ಕೋಷ್ಟಕ ೫.೪೩ ಮಾಹಿತಿದಾರರ ಕುಟುಂಬದಲ್ಲಿ ರಾಜಕೀಯ ಹಿನ್ನೆಲೆಯ ವಿವರಗಳು

ಕುಟುಂಬಕ್ಕೆ ರಾಜಕೀಯ ಹಿನ್ನೆಲೆ ಇದೆ	ಸಂಖ್ಯೆ	ಶೇಕಡಾ
ಹೌದು	೩೦೨	೩೭.೭೫
ಇಲ್ಲ	೪೯೮	೬೨.೨೫
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಮೇಲಿನ ಕೋಷ್ಟಕದ ಪ್ರಕಾರ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರಲ್ಲಿ ಶೇಕಡಾ ೩೭.೭೫ರಷ್ಟು ಮಾಹಿತಿದಾರರ ಕುಟುಂಬಸ್ಥರು ಬೇರೆ ಬೇರೆ ಪಕ್ಷದೊಂದಿಗೆ ಗುರುತಿಸಿ ಕೊಂಡವರಾಗಿದ್ದು, ರಾಜಕೀಯ ಹಿನ್ನೆಲೆಯನ್ನು ಹೊಂದಿರುವ ಕಾರಣದಿಂದಾಗಿಯೇ ಸ್ಥಳೀಯಾಡಳಿತದಲ್ಲಿ ಸ್ಪರ್ಧಿಸಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೬೨.೨೫ರಷ್ಟು ಮಾಹಿತಿದಾರರು ತಮ್ಮ ಕುಟುಂಬವು ಯಾವುದೇ ರಾಜಕೀಯ ಹಿನ್ನೆಲೆಯನ್ನು ಹೊಂದಿಲ್ಲ ಎಂಬುದಾಗಿ ತಿಳಿಸಿದ್ದು, ಇಂದು ಮೀಸಲಾತಿ ಮತ್ತು ಅವಕಾಶಗಳು ಹೆಚ್ಚಿರುವುದರಿಂದ ಸಾಮಾನ್ಯ ಮಹಿಳೆಯೂ ಸಹ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಾಗಿದೆ. ಹಿಂದೆ ಇದ್ದಂತೆ ರಾಜಕಾರಣದಲ್ಲಿ ತೊಡಗಿಕೊಂಡ ಮನೆತನ ಮಾತ್ರ ರಾಜಕೀಯ ಪ್ರವೇಶಿಸಬೇಕು ಎಂಬ ಮನೋಭಾವನೆ ಬದಲಾಗಿದ್ದು, ಎಲ್ಲ ವರ್ಗದ ಹಾಗೂ ಸಮುದಾಯದ ಜನರ ಭಾಗವಹಿಸುವಿಕೆ ಅಧ್ಯಯನ ಕ್ಷೇತ್ರದಲ್ಲಿ ಕಂಡುಬರುತ್ತದೆ.

ರಾಜಕೀಯ ಹಿನ್ನೆಲೆ ಹೊಂದಿರುವ ಮಹಿಳೆಯರು ರಾಜಕೀಯದಲ್ಲಿ ಬಹಳ ಬೇಗ ಉನ್ನತ ಸ್ಥಾನ ಪಡೆದಿರುವ ನಿದರ್ಶನಗಳು ಇಲ್ಲಿವೆ. ತಾಯಿ ಅಥವಾ ತಂದೆ ರಾಜಕೀಯದಲ್ಲಿರುವಾಗ ಅವರ ಹಿನ್ನೆಲೆಯನ್ನು ಬಳಸಿ ಮಗಳು ಚುನಾವಣೆಯನ್ನು ಸುಲಭವಾಗಿ ಎದುರಿಸಿರುವ ಹಲವು ಉದಾಹರಣೆಗಳು ಇಲ್ಲಿವೆ.

ಕೋಷ್ಟಕ ೫.೪೪ ಮಾಹಿತಿದಾರರ ಕುಟುಂಬದಲ್ಲಿ ರಾಜಕೀಯ ಹಿನ್ನೆಲೆಯುಳ್ಳ ವ್ಯಕ್ತಿಗಳ ವಿವರಗಳು

ಕುಟುಂಬದಲ್ಲಿ ರಾಜಕೀಯ ಹಿನ್ನಲೆಯುಳ್ಳವರು	**ಸಂಖ್ಯೆ**	**ಶೇಕಡಾ**
ಗಂಡ	೩೨	೪
ತಂದೆ	೨೦	೨.೫
ತಾಯಿ	೪	೦.೫
ಅತ್ತೆ	೧೦	೧.೨೫
ಮಾವ	೨೪	೩
ಮಕ್ಕಳು	೮೦	೧೦
ಸಹೋದರರು	೧೨೦	೧೫
ಸಹೋದರಿ	೧೨	೧.೫
ಇಲ್ಲ	೪೯೮	೬೨.೨೫
ಒಟ್ಟು	**೮೦೦**	**೩೭.೭೫**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರರಲ್ಲಿ ಶೇಕಡಾ ೩೭.೭೫ರಷ್ಟು ಮಾಹಿತಿದಾರರು ರಾಜಕೀಯ ಹಿನ್ನೆಲೆಯುಳ್ಳವರಾಗಿದ್ದು, ಅದರಲ್ಲಿ ಶೇಕಡಾ ೪ರಷ್ಟು ಮಾಹಿತಿದಾರರ ಗಂಡ, ಶೇಕಡಾ ೨.೫ರಷ್ಟು ಮಂದಿಯ ತಂದೆ, ಶೇಕಡಾ ೦.೫ ರಷ್ಟು ಮಂದಿಯ ತಾಯಿ, ಶೇಕಡಾ ೧.೨೫ರಷ್ಟು ಮಾಹಿತಿದಾರರ ಅತ್ತೆ, ಶೇಕಡಾ ೩ರಷ್ಟು ಮಾಹಿತಿದಾರರ ಮಾವ, ಶೇಕಡಾ ೧೦ರಷ್ಟು ಮಾಹಿತಿದಾರರ ಮಕ್ಕಳು

ಹಾಗೂ ಶೇಕಡಾ ೧೫ರಷ್ಟು ಮಂದಿಯ ಸಹೋದರರು, ಶೇಕಡಾ ೧.೫ರಷ್ಟು ಮಾಹಿತಿದಾರರ ಸಹೋದರಿಯರು ರಾಜಕೀಯ ನಂಟು ಹೊಂದಿದ್ದಾರೆ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೬೨.೨೫ರಷ್ಟು ಮಾಹಿತಿದಾರರ ಯಾವುದೇ ರಾಜಕೀಯ ಹಿನ್ನೆಲೆಯನ್ನು ಹೊಂದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಈ ಕೋಷ್ಟಕದಲ್ಲಿ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಅಧ್ಯಯನಗಳು ನಡೆದಿವೆ. ಸಿಂಗ್.ಡಿ.ಆರ್(೧೯೯೦) ಅವರ ಅಧ್ಯಯನದಲ್ಲಿ ಉತ್ತರ ಪ್ರದೇಶದ ಪಂಚಾಯತ್ ರಾಜ್ ಸಂಸ್ಥೆಯಲ್ಲಿ ಮಹಿಳಾ ಸದಸ್ಯರ ಭಾಗವಹಿಸುವಿಕೆಯಲ್ಲಿ ಕುಟುಂಬ ಬಹಳ ಪ್ರಮುಖವಾದ ಪಾತ್ರ ವಹಿಸಿರುವುದಾಗಿಯೂ ಮತ್ತು ರಾಜಕೀಯ ನಂಟನ್ನು ಹೊಂದಿರುವ ಕುಟುಂಬದಿಂದ ಬಂದ ಮಹಿಳೆಯರು ಹೆಚ್ಚು ಯಶಸ್ವಿಯಾಗಿರುವುದಾಗಿಯೂ ತಿಳಿಸಿರುತ್ತಾರೆ. ಈ ವಿಷಯದಲ್ಲಿ ಉಡುಪಿ ಜಿಲ್ಲೆಯಲ್ಲಿಯೂ ಯಶಸ್ವಿ ರಾಜಕಾರಣಿಗಳು ರಾಜಕೀಯ ಹಿನ್ನೆಲೆಯುಳ್ಳವರಾಗಿದ್ದು ಈ ಹಿನ್ನೆಲೆಯಿಲ್ಲದೆ ಬಂದವರು ಆರಂಭಿಕ ಸವಾಲುಗಳನ್ನು ಎದುರಿಸುವಂತಹ ಸನ್ನಿವೇಶಗಳನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ.

ಕೋಷ್ಟಕ ೫.೪೫ ಮಾಹಿತಿದಾರರ ಕುಟುಂಬದಲ್ಲಿನ ಸಮಾಜಿಕ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆಯ ವಿವರಗಳು

ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಕುಟುಂಬಗಳಾಗಿರುವುದು	ಸಂಖ್ಯೆ	ಶೇಕಡಾ
ಹೌದು	३३೮	४೨.२५
ಇಲ್ಲ	४६२	५೭.೭५
ಒಟ್ಟು	**೮೦೦**	**೧೦೦**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರಲ್ಲಿ ಶೇಕಡಾ ೪೨.೨೫ರಷ್ಟು ಮಾಹಿತಿದಾರರು ತಮ್ಮ ಕುಟುಂಬವು ಸಮಾಜ ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಅನುಭವ ಹೊಂದಿರುವುದಾಗಿಯೂ, ಶೇಕಡ ೫೭.೭೫ರಷ್ಟು ಮಂದಿ ಸಮಾಜ ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಅನುಭವ ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಮೊಗವೀರ ಸಮುದಾಯದಲ್ಲಿ ಮೊಗವೀರ ಯುವ ಸಂಘಟನೆ ಹಾಗೂ ಭಜನಾ ಮಂಡಳಿಗಳಲ್ಲಿ ಯುವಕ ಮಂಡಲ, ಮಹಿಳಾ ಮಂಡಳಿಗಳ ಮುಖೇನ ಸಾಮಾಜಿಕ ಸೇವೆಗಳಿಗೆಂದೆ ಇಂತಿಷ್ಟು ಮೊತ್ತವನ್ನು ತೆಗೆದಿರಿಸಿಕೊಂಡು ಸಮಾಜ ಸೇವೆ ಮಾಡುತ್ತಿರುವುದಾಗಿ ಮಾಹಿತಿದಾರರು ತಿಳಿಸಿರುತ್ತಾರೆ. ಆ ಮೂಲಕ ಎಲ್ಲಾ ಸಂಘಗಳ ಸದಸ್ಯರು ಪರೋಕ್ಷವಾಗಿ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದಾಗಿ ಅಭಿಪ್ರಾಯಪಡುತ್ತಾರೆ.

ಕೋಷ್ಟಕ ೫.೪೬ ಮಾಹಿತಿದಾರರ ಕುಟುಂಬದಲ್ಲಿನ ಸಮಾಜ ಸೇವಾ ಕ್ಷೇತ್ರದ ವಿವರಗಳು

ಸಮಾಜ ಸೇವಾ ಕ್ಷೇತ್ರಗಳು	ಸಂಖ್ಯೆ	ಶೇಕಡಾ
ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಕಾರ	೮೬	೧೦.೭೫
ಶಾಲೆಗಳಿಗೆ ಸಹಾಯಧನ	೩೦	೩.೭೫
ರಕ್ತದಾನ	೧೬೦	೨೦
ವಿವಾಹಕ್ಕೆ ಸಹಾಯಧನ	೧೮	೨.೨೫
ಅನಾರೋಗ್ಯ	೪೪	೫.೫
ಒಟ್ಟು	**೩೩೮**	**೪೨.೨೫**

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮಾಹಿತಿದಾರರು ಶೇಕಡಾ ೧೦.೭೫ರಷ್ಟು ಮಾಹಿತಿದಾರರು ವಿದ್ಯಾರ್ಥಿಗಳ ಶೈಕ್ಷಣಿಕ ಸಹಕಾರವನ್ನು ಅಂದರೆ, ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳ ವಿತರಣೆ, ಶೈಕ್ಷಣಿಕ ಶುಲ್ಕದ ಮೊತ್ತ ಪಾವತಿಯನ್ನು ಮಾಡುವುದಾಗಿಯೂ, ಶೇಕಡಾ ೩.೭೫ರಷ್ಟು ಮಾಹಿತಿದಾರರು ತಾವು ವ್ಯಾಸಂಗ ಮಾಡಿರುವ ಶಾಲೆಗಳಿಗೆ ಸಹಾಯ ಧನವನ್ನು ಅಂದರೆ ಕುಡಿಯುವ ನೀರಿನ ಸೌಲಭ್ಯ, ಫ್ಯಾನ್, ಗಡಿಯಾರ, ಕ್ರೀಡಾ ಸಾಮಗ್ರಿ, ಊಟದ ಬಟ್ಟಲು, ಲೋಟ, ಇತ್ಯಾದಿಗಳನ್ನು ಕೊಡುಗೆಯಾಗಿ ನೀಡಿರುವುದಾಗಿಯೂ, ಶೇಕಡಾ ೨೦ರಷ್ಟು ಮಾಹಿತಿದಾರರು ತಮ್ಮ ಕುಟುಂಬದ ಸದಸ್ಯರು ರಕ್ತದಾನ ಮಾಡಿರುವ ಬಗ್ಗೆ ತಿಳಿಸಿದ್ದು, ಶೇಕಡಾ ೨.೨೫ರಷ್ಟು ಮಂದಿ ವಿವಾಹ ಕಾರ್ಯಕ್ಕೆ ಆರ್ಥಿಕ ಸಹಕಾರವನ್ನು, ಶೇಕಡಾ ೫.೫ರಷ್ಟು ಮಾಹಿತಿದಾರರು ಬಡವರ ಅನಾರೋಗ್ಯದ ಸಂದರ್ಭಗಳಲ್ಲಿ ತಮ್ಮ ಕುಟುಂಬದ ಸದಸ್ಯರು ಆರ್ಥಿಕ ಸಹಕಾರವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

ಉಡುಪಿ ಜಿಲ್ಲೆಯ ಮೊಗವೀರ ಯುವ ಸಂಘಟನೆ ಹಾಗೂ ಜಿ ಶಂಕರ್ ಫ್ಯಾಮಿಲಿ ಟ್ರಸ್ಟ್ (ನೋಂ.) ಅಂಬಲಪಾಡಿ, ಉಡುಪಿ ಇವರ ಸಹಭಾಗಿತ್ವದಲ್ಲಿ ೨೦೦೯ ರಿಂದ ೨೦೧೮ರವರೆಗೆ ಒಟ್ಟು ೧೦೨೦೬೨ ಯೂನಿಟ್‌ಗಳ ರಕ್ತವನ್ನು ಜಿಲ್ಲೆಯಲ್ಲಿ ಸಂಗ್ರಹಿಸಲಾಗಿದೆ. ರಾಜ್ಯದಲ್ಲಿ ಉಡುಪಿ ಜಿಲ್ಲೆಯನ್ನು ರಕ್ತದಾನಿಗಳ ಜಿಲ್ಲೆ ಎಂದು ಘೋಷಿಸಲು ಕಾರಣೀಭೂತರಾದ ಈ ಸಮುದಾಯದ ಡಾ.ಜಿ.ಶಂಕರ್ ಅವರು ರಕ್ತದಾನ ಕ್ರಾಂತಿಯ ಹರಿಕಾರರಾಗಿದ್ದಾರೆ. ರಕ್ತದಾನ ಮಾಡಿದ ಮೊಗವೀರ ಸಂಖ್ಯೆಯು ಗಮನಾರ್ಹವಾಗಿದೆ.

ಉಡುಪಿ ಜಿಲ್ಲೆಯಲ್ಲಿರುವ ಧಾರ್ಮಿಕ ಕ್ಷೇತ್ರಗಳಾಗಿರುವ ಭಜನಾ ಮಂದಿರಗಳು ತಮ್ಮ ವಾರ್ಷಿಕೋತ್ಸವವನ್ನು ಊರಿನ ಸಮಸ್ತ ಜನರನ್ನು ಒಟ್ಟುಗೂಡಿಸಿ ಕ್ರೀಡೆ, ರಸಪ್ರಶ್ನೆ, ಛದ್ಮವೇಷ, ಸಂಗೀತ, ನೃತ್ಯ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿಕೊಂಡು ಸಮುದಾಯದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರಗತಿಗೆ ಸಹಕರಿಸುತ್ತಿವೆ. ಅಷ್ಟೇ ಅಲ್ಲದೇ ತಮ್ಮ ಸಮುದಾಯದಲ್ಲಿ ಹಾಗೂ ತಮ್ಮ ಊರಿನಲ್ಲಿ ವಿಶೇಷ ಸಾಧನೆಯನ್ನು ಮಾಡಿರುವವರನ್ನು ಗುರುತಿಸಿ ಸನ್ಮಾನಿಸಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಮುದಾಯ ಹಾಗೂ ಊರಿನ ಅಭಿವೃದ್ಧಿಗೆ ಪರೋಕ್ಷವಾಗಿ ಪ್ರೇರಣೆಯನ್ನು

ನೀಡುತ್ತಿವೆ. ಜೊತೆಗೆ ವಿವಾಹ, ಅನಾರೋಗ್ಯ, ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಕಾರವನ್ನು ನೀಡುವ ಸಮಾಜಮುಖಿ ಕಾರ್ಯಕ್ರಮಗಳು ಭಜನಾ ಮಂದಿರಗಳ ಮುಖೇನ ನಡೆಯುತ್ತದೆ. ಮಾಹಿತಿದಾರರ ಕುಟುಂಬಗಳ ಸದಸ್ಯರು ಉಡುಪಿ ಜಿಲ್ಲೆಯಲ್ಲಿರುವ ಭಜನಾ ಮಂದಿರಗಳಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡವರಾಗಿರುವುದಾಗಿ ತಿಳಿಸಿರುತ್ತಾರೆ. ಈ ಭಜನಾ ಮಂದಿರಗಳ ಸದಸ್ಯತ್ವವು ಅವರಲ್ಲಿರುವ ಸಮಾಜ ಸೇವಾ ಮನೋಭಾವನೆಯನ್ನು ಪ್ರೇರೇಪಿಸಿದೆ ಎಂಬುದು ಅಧ್ಯಯನದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಕೋಷ್ಟಕ ೫.೪೭ ಮಾಹಿತಿದಾರರ ರಾಜಕೀಯ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಕಂಡು ಬರುವ ಕೌಟುಂಬಿಕ ವಿರೋಧಗಳ ವಿವರಗಳು

ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಕುಟುಂಬದ ವಿರೋಧವಿರುವುದು	ಸಂಖ್ಯೆ	ಶೇಕಡಾ
ಹೌದು	೨೭೦	೩೩.೭೫
ಇಲ್ಲ	೫೩೦	೬೬.೨೫
ಒಟ್ಟು	೮೦೦	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಸಂದರ್ಭದಲ್ಲಿ ಶೇಕಡಾ ೩೩.೭೫ರಷ್ಟು ಮಾಹಿತಿದಾರರು ಕೌಟುಂಬಿಕ ವಿರೋಧವನ್ನು ಎದುರಿಸಿರುವುದಾಗಿ ತಿಳಿಸಿರುತ್ತಾರೆ. ಶೇಕಡಾ ೬೬.೨೫ರಷ್ಟು ಮಹಿಳೆಯರು ರಾಜಕೀಯ ಪ್ರಾತಿನಿಧ್ಯತೆಯಲ್ಲಿ ಕುಟುಂಬದ ಸದಸ್ಯರಿಂದ ಯಾವುದೇ ವಿರೋಧವಿಲ್ಲದಿರುವುದಾಗಿ ತಿಳಿಸಿದ್ದು, ಇದರಲ್ಲಿ ಕೆಲವು ಮಾಹಿತಿದಾರರು ಬಡತನ, ಅನಕ್ಷರತೆ, ಸಮಯದ ಅಭಾವದಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ಯಾವುದೇ ಆಸಕ್ತಿ ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಪ್ರಸ್ತುತ ಮಹಿಳೆಯರು ರಾಜಕೀಯ ಪ್ರವೇಶವನ್ನು ಸ್ವಾಗತಿಸುವ ಮನಃಸ್ಥಿತಿ ಉಡುಪಿ ಜಿಲ್ಲೆಯ ಮೊಗವೀರ ಸಮುದಾಯದಲ್ಲಿದೆ. ಕುಟುಂಬದಲ್ಲಿ ಮಹಿಳೆಯರಿಗೂ ಅವಕಾಶಗಳು ಸಿಗಬೇಕು, ಅವರ ಸಾಮರ್ಥ್ಯಗಳೂ ಸರಿಯಾಗಿ ಬಳಕೆಯಾಗಬೇಕೆಂಬ ಭಾವನೆ ಬೆಳೆಯುತ್ತಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ.

ರಾಜಕೀಯ ಪ್ರಾತಿನಿಧ್ಯತೆ: ಮೊಗವೀರ ಮಹಿಳೆಯರ ಅಭಿಪ್ರಾಯ

ಪ್ರಬಂಧದ ಈ ಭಾಗದಲ್ಲಿ ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಗೊಂಡು, ಪಂಚಾಯತ್ ಸದಸ್ಯರಾಗಿರುವ ಮೊಗವೀರ ಮಹಿಳಾ ಸದಸ್ಯರ ಅಭಿಪ್ರಾಯವನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಒಟ್ಟು ೭೬ ಗ್ರಾಮ ಪಂಚಾಯತ್ ಸದಸ್ಯ ಸ್ಥಾನಗಳಲ್ಲಿ ಮೊಗವೀರ ಮಹಿಳೆಯರು ಆಯ್ಕೆಗೊಂಡಿದ್ದು ಅಧ್ಯಯನದಲ್ಲಿ ಈ ಎಲ್ಲಾ ಸದಸ್ಯರನ್ನು ವಿಶೇಷ ಪ್ರಶ್ನಾವಳಿಯ ಮೂಲಕ ಸಂದರ್ಶನ ನಡೆಸಿ ಮಾಹಿತಿ ಸಂಗ್ರಹಿಸಲಾಗಿದೆ. ಉಡುಪಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ೭೬ ಮೊಗವೀರ ಮಹಿಳೆಯರು ಆಯ್ಕೆಗೊಂಡಿದ್ದು,

ಮೊಗವೀರ ಸಮುದಾಯದ ಒಟ್ಟು ಮಹಿಳಾ ಸದಸ್ಯರು ಶೇಕಡಾ ೦.೨೮ರಷ್ಟಿದ್ದಾರೆ. ಪ್ರಸ್ತುತ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್‌ಗಳಲ್ಲಿ ಮೊಗವೀರ ಮಹಿಳಾ ಪ್ರಾತಿನಿಧ್ಯ ಉತ್ತಮವಾಗಿದ್ದು, ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣದ ಉದ್ದೇಶವನ್ನು ಈಡೇರಿಸುವಲ್ಲಿ ಈ ರೀತಿಯ ಪಾಲ್ಗೊಳ್ಳುವಿಕೆಯು ಬಹಳಷ್ಟು ಸಹಕಾರಿಯಾಗಬಲ್ಲದು.

ಕೋಷ್ಟಕ ೫.೪೮ ಗ್ರಾಮ ಪಂಚಾಯತಿಗಳಲ್ಲಿ ಆಯ್ಕೆಗೊಂಡಿರುವ ಮೊಗವೀರ ಮಹಿಳಾ ಸದಸ್ಯರ ವಯಸ್ಸಿನ ಮಾಹಿತಿ

ವಯಸ್ಸು	ಸಂಖ್ಯೆ	ಶೇಕಡಾ
೧೮ ರಿಂದ ೨೫	೮	೧೦.೫
೨೬ ರಿಂದ ೩೦	೨೧	೨೭.೬೦
೩೧ ರಿಂದ ೪೦	೩೨	೪೨.೧೦
೪೧ ರಿಂದ ೫೦	೯	೧೧.೯೦
೫೧ ವರ್ಷ ಮೇಲ್ಪಟ್ಟು	೬	೭.೯೦
ಒಟ್ಟು	**೭೬**	**೧೦೦**

ಮೂಲ: ಪ್ರಾಥಮಿಕ ಮೂಲ

ಉಡುಪಿ ಜಿಲ್ಲೆಯಲ್ಲಿ ಆಯ್ಕೆಗೊಂಡ ಮಾಹಿತಿದಾರರಲ್ಲಿ ಶೇಕಡಾ ೧೦.೫ರಷ್ಟು ಮಾಹಿತಿದಾರರು ೧೮ ರಿಂದ ೫ವರ್ಷ ವಯಸ್ಸಿನವರು, ಶೇಕಡಾ ೨೭.೬೦ರಷ್ಟು ಮಾಹಿತಿದಾರರು ೨೬ ರಿಂದ ೩೦ ವರ್ಷ ವಯಸ್ಸಿನವರು, ಶೇಕಡಾ ೪೨.೧೦ರಷ್ಟು ಮಾಹಿತಿದಾರರು ೩೧ ರಿಂದ ೪೦ ವರ್ಷ ವಯಸ್ಸಿನವರು, ಶೇಕಡಾ ೧೧.೯೦ರಷ್ಟು ಮಾಹಿತಿದಾರರು ೪೧ ರಿಂದ ೫೦ ವರ್ಷ ವಯಸ್ಸಿನವರು ಹಾಗೆಯೇ ಶೇಕಡಾ ೭.೯೦ರಷ್ಟು ಮಾಹಿತಿದಾರರು ೫೧ವರ್ಷ ಮೇಲ್ಪಟ್ಟ ವಯಸ್ಸಿನವರಾಗಿದ್ದಾರೆ. ಮಾಹಿತಿದಾರರಲ್ಲಿ ಅವರ ವಯಸ್ಸನ್ನು ಗಮನಿಸಿದಾಗ, ಗರಿಷ್ಠ ಸಂಖ್ಯೆಯ ಆಯ್ಕೆಗೊಂಡ ಸದಸ್ಯರು ೩೧ ರಿಂದ ೪೦ ವರ್ಷ ವಯೋಮಾನದವರಾಗಿದ್ದಾರೆ. ೫೧ವರ್ಷ ಮೇಲ್ಪಟ್ಟ ಮೊಗವೀರ ಮಹಿಳೆಯರ ಸಂಖ್ಯೆ ಕಡಿಮೆಯಿದ್ದು ಆ ತಲೆಮಾರಿನವರ ಶಿಕ್ಷಣದ ಕೊರತೆ ಅದಕ್ಕೆ ಕಾರಣವಾಗಿದೆ.

ಯುವ ಮೊಗವೀರ ಮಹಿಳೆಯರು ರಾಜಕೀಯದ ಕಡೆಗೆ ಒಲವು ಹೊಂದಿದ್ದು ಚುನಾವಣೆಯಲ್ಲಿ ಹೆಚ್ಚು ಮಂದಿ ಸ್ಪರ್ಧಿಸಿದ್ದಾರೆ. ಅವರಲ್ಲಿರುವ ಶಿಕ್ಷಣ, ಅರಿವು ಹಾಗೂ ಅವಕಾಶಗಳ ಬಗ್ಗೆ ಇರುವ ಜ್ಞಾನ ಈ ರಾಜಕೀಯ ಪಾಲ್ಗೊಳ್ಳುವಿಕೆಗೆ ಪೂರಕವಾಗಿದೆ.

ಕೋಷ್ಟಕ ೫.೪೯ ಗ್ರಾಮ ಪಂಚಾಯತಿಗಳಲ್ಲಿ ಆಯ್ಕೆಗೊಂಡಿರುವ ಮೊಗವೀರ ಮಹಿಳಾ ಸದಸ್ಯರ ಉದ್ಯೋಗದ ಮಾಹಿತಿ

ಉದ್ಯೋಗದ ವಿವರ	ಸಂಖ್ಯೆ	ಶೇಕಡಾ
ಮೀನುಗಾರಿಕೆ	೭	೯.೨೦
ಕೃಷಿ	೧೦	೧೩.೨೦
ಸ್ವ ಉದ್ಯೋಗ	೩೨	೪೨.೧೦
ಗೃಹಕೃತ್ಯ	೨೭	೩೫.೫೦
ಒಟ್ಟು	**೭೬**	೧೦೦

ಮೂಲ: ಪ್ರಾಥಮಿಕ ಮೂಲ

ಉಡುಪಿ ಜಿಲ್ಲೆಯ ಆಯ್ಕೆಗೊಂಡ ಮಾಹಿತಿದಾರರಲ್ಲಿ ಶೇಕಡಾ ೯.೨೦ರಷ್ಟು ಮಾಹಿತಿದಾರರು ಮೀನುಗಾರಿಕೆಯನ್ನು, ಶೇಕಡಾ ೧೩.೨೦ರಷ್ಟು ಮಾಹಿತಿದಾರರು ಕೃಷಿ ಕೆಲಸವನ್ನು, ಶೇಕಡಾ ३೫.೫೦ರಷ್ಟು ಮಾಹಿತಿದಾರರು ಸ್ವ-ಉದ್ಯೋಗದಲ್ಲಿ ನಿರತರಾದವರು, ಶೇಕಡಾ ೪೨.೧೦ರಷ್ಟು ಮಾಹಿತಿದಾರರು ಗೃಹಕೃತ್ಯವನ್ನು ನಡೆಸುವವರಾಗಿದ್ದಾರೆ. ಆಯ್ಕೆಗೊಂಡ ಮಹಿಳೆಯರಲ್ಲಿ ಹೆಚ್ಚಿನ ಸಂಖ್ಯೆಯ ಮಾಹಿತಿದಾರರು ಸ್ವ-ಉದ್ಯೋಗದಲ್ಲಿರುವವರಾಗಿದ್ದಾರೆ. ಅತೀ ಕಡಿಮೆ ಸಂಖ್ಯೆಯಲ್ಲಿ ಮೀನುಗಾರಿಕೆ ವೃತ್ತಿಯವರಾಗಿದ್ದಾರೆ. ಇದಕ್ಕೆ ಕಾರಣ ಮೀನುಗಾರಿಕೆಯ ವೃತ್ತಿಯವರಿಗೆ ಧೀರ್ಘಾವಧಿಯ ಕೆಲಸಗಳಿಂದಾಗಿ ರಾಜಕೀಯದ ಕಡೆಗೆ ಗಮನಕೊಡಲು ಸಾಧ್ಯವಾಗದಿರುವುದು.

ಮೊಗವೀರ ಮಹಿಳೆಯರಲ್ಲಿ ಕುಲಕಸುಬಾದ ಮೀನುಗಾರಿಕೆಯನ್ನು ಆಯ್ದುಕೊಳ್ಳುವವರ ಸಂಖ್ಯೆ ಬಹಳಷ್ಟಿದೆ. ಮೀನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರನ್ನು ರಾಜಕೀಯಕ್ಕೆ ಸೇರ್ಪಡೆಗೊಳಿಸುವ ಪ್ರಯತ್ನ ನಡೆಯಬೇಕಾಗಿದೆ. ಅವರಿಗೆ ಸೂಕ್ತ ಅರಿವನ್ನು ಮೂಡಿಸುವ, ಸೂಕ್ತ ತರಬೇತಿ ನೀಡಿ ರಾಜಕೀಯಕ್ಕೆ ಸಿದ್ಧಗೊಳಿಸುವ ಕೆಲಸವನ್ನು ಸರಕಾರ, ಸಂಘ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಮಾಡಿದಲ್ಲಿ ಇನ್ನಷ್ಟು ಮಹಿಳೆಯರು ರಾಜಕೀಯ ಪ್ರವೇಶ ಪಡೆಯಲು ಸಾಧ್ಯವಾಗಬಲ್ಲದು.

ಕೋಷ್ಟಕ ೫.೫೦ ಗ್ರಾಮ ಪಂಚಾಯತಿಗಳಲ್ಲಿ ಆಯ್ಕೆಗೊಂಡಿರುವ ಮೊಗವೀರ ಮಹಿಳೆಯರ ಪತಿಯ ಉದ್ಯೋಗದ ಮಾಹಿತಿ

ಪತಿಯ ಉದ್ಯೋಗ	ಸಂಖ್ಯೆ	ಶೇಕಡಾ
ಕೃಷಿ	೧೫	೧೯.೮೦
ಮೀನುಗಾರಿಕೆ	೯	೧೧.೯೦
ಸರಕಾರಿ ಸೇವೆ	೨೦	೨೬.೩೦
ಖಾಸಗಿ ಸೇವೆ	೧೭	೨೨.೪೦
ಸ್ವ-ಉದ್ಯೋಗ	೧೧	೧೪.೫೦
ಅನ್ವಯಿಸುವುದಿಲ್ಲ	೪	೫.೨೦
ಒಟ್ಟು	**೭೬**	೧೦೦

ಮೂಲ: ಪ್ರಾಥಮಿಕ ಮೂಲ

ಉಡುಪಿ ಜಿಲ್ಲೆಯಲ್ಲಿ ಆಯ್ಕೆಗೊಂಡ ಮಾಹಿತಿದಾರರ ಪತಿಯ ಉದ್ಯೋಗದ ಬಗ್ಗೆ ಕೇಳಲಾಗಿ, ಶೇಕಡಾ ೧೯.೮೦ರಷ್ಟು ಮಾಹಿತಿದಾರರು ಕೃಷಿಯನ್ನು, ಶೇಕಡಾ ೧೧.೯೦ರಷ್ಟು ಮಾಹಿತಿದಾರರು ಮೀನುಗಾರಿಕೆಯನ್ನು ಶೇಕಡಾ ೨೬.೩೦ರಷ್ಟು ಮಾಹಿತಿದಾರರು ಸರಕಾರಿ ಸೇವೆಯಲ್ಲಿಯೂ, ಶೇಕಡಾ ೨೨.೪೦ರಷ್ಟು ಮಾಹಿತಿದಾರರು ಖಾಸಗಿ ಸೇವೆಯಲ್ಲಿಯೂ, ಶೇಕಡಾ ೧೪.೫೦ರಷ್ಟು ಮಾಹಿತಿದಾರರು ಸ್ವ-ಉದ್ಯೋಗದಲ್ಲಿ ನಿರತರಾಗಿರುವುದಾಗಿ, ಶೇಕಡಾ ೫.೨೦ರಷ್ಟು ಮಾಹಿತಿದಾರರು ಅವಿವಾಹಿತರಾಗಿರುವ ಕಾರಣದಿಂದಾಗಿ ಅನ್ವಯಿಸುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಆಯ್ಕೆಗೊಂಡ ಅಧಿಕ ಮಂದಿ ಮಹಿಳೆಯರ ಪತಿ ಸರಕಾರಿ ಉದ್ಯೋಗಸ್ಥರು ಹಾಗೂ ಖಾಸಗಿ ಸೇವೆಗಳಲ್ಲಿ ನಿರತರಾಗಿರುವ ಕಾರಣದಿಂದಾಗಿ ಮಹಿಳೆಯರಿಗೆ ರಾಜಕೀಯದಲ್ಲಿ ಪಾಲ್ಗೊಳ್ಳಲು ಸಹಕಾರಿಯಾಗಿದೆ. ಕಡಿಮೆ ಶಿಕ್ಷಣ ಹೊಂದಿರುವ ಹಾಗೂ ಮೀನುಗಾರಿಕೆಯಲ್ಲಿ ನಿರತರಾಗಿರುವ ಪುರುಷರು ತಮ್ಮ ಪತ್ನಿಗೆ ರಾಜಕೀಯದಲ್ಲಿ ಭಾಗವಹಿಸಲು ಹೆಚ್ಚು ಅವಕಾಶ ನೀಡದಿರುವುದು ಕಂಡು ಬರುತ್ತದೆ.

ಮೊಗವೀರ ಮಹಿಳೆಯರ ರಾಜಕೀಯ ಪ್ರವೇಶದಲ್ಲಿ ಪತಿಯ ಶಿಕ್ಷಣ ಹಾಗೂ ಉದ್ಯೋಗವೂ ಪರಿಣಾಮವನ್ನು ಬೀರಿದೆ. ಹೆಚ್ಚು ಶಿಕ್ಷಣ ಪಡೆದ ಪತಿ ಮಹಿಳೆಗೆ ಹೆಚ್ಚು ಪ್ರೋತ್ಸಾಹ ನೀಡಿರುವುದು ಕಂಡು ಬರುತ್ತದೆ. ಆ ನಿಟ್ಟಿನಲ್ಲಿ ಕಡಿಮೆ ಶಿಕ್ಷಣ ಪಡೆದಿರುವ ಪುರುಷರಿಗೆ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯ ಅಗತ್ಯತೆ ಬಗ್ಗೆ ಅರಿವನ್ನು ಮೂಡಿಸುವ ಪ್ರಯತ್ನ ಮಾಡಿದಲ್ಲಿ ಮುಂದೆ ಹೆಚ್ಚಿನ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಗೆ ಅವಕಾಶವಾಗಲಿದೆ.

ಕೋಷ್ಟಕ ೫.೫೧ ಚುನಾವಣೆಗೆ ಸ್ಪರ್ಧಿಸಲು ಕಾರಣವಾದ ಅಂಶಗಳು

ಕಾರಣವಾದ ಅಂಶಗಳು	ಬಹಳಮಟ್ಟಿಗೆ		ಸ್ವಲ್ಪ ಮಟ್ಟಿಗೆ		ಇಲ್ಲವೇ ಇಲ್ಲ		ಒಟ್ಟು	
	ಮಾಹಿತಿ ದಾರರು	ಶೇ.	ಮಾಹಿತಿ ದಾರರು	ಶೇ.	ಮಾಹಿತಿ ದಾರರು	ಶೇ.	ಮಾಹಿತಿ ದಾರರು	ಶೇ.
ಕುಟುಂಬದ ಪ್ರೇರಣೆ	೫೦	೬೫.೮೦	೧೯	೨೫	೭	೯.೨೦	೭೬	೧೦೦
ಮಹಿಳಾ ಮೀಸಲಾತಿ ಯಿಂದಾಗಿ	೬೩	೮೨.೯೦	–	–	೧೩	೧೭.೧೦	೭೬	೧೦೦
ಸ್ವಯಂ ಪ್ರೇರಣೆ ಯಿಂದ	೬೬	೮೬.೮೦	೧೦	೧೩.೨೦	–	–	೭೬	೧೦೦
ಕುಟುಂಬದ ರಾಜಕೀಯ ಹಿನ್ನೆಲೆ ಯಿಂದ	೫೫	೭೨.೪೦	೧೫	೧೯.೭೦	೬	೭.೯೦	೭೬	೧೦೦
ಅನಿರೀಕ್ಷಿತ ಬೆಳವಣಿಗೆ ಗಳಿಂದ	೩೮	೫೦	೨೩	೩೦.೩೦	೧೫	೧೯.೭೦	೭೬	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೫.೫೧ರಲ್ಲಿ ಚುನಾವಣೆಗೆ ಸ್ಪರ್ಧಿಸಲು ಕಾರಣವಾದ ಅಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಮಾಹಿತಿದಾರರ ಅಭಿಪ್ರಾಯವನ್ನು ನೀಡಲಾಗಿದೆ. ಕುಟುಂಬದ ಪ್ರೇರಣೆಯ ಬಗ್ಗೆ ಕೇಳಿದಾಗ ಶೇಕಡಾ ೬೫.೮೦ರಷ್ಟು ಮಾಹಿತಿದಾರರು ಬಹಳಷ್ಟು ಪ್ರೇರಣೆ ದೊರೆತಿರುವುದಾಗಿ, ೨೫

ಶೇಕಡಾ ಪ್ರತಿನಿಧಿಗಳು ಸ್ವಲ್ಪ ಮಟ್ಟಿಗೆ ಕುಟುಂಬದ ಪ್ರೇರಣೆ ಪಡೆದಿರುವುದಾಗಿಯೂ ಹಾಗೂ ಶೇಕಡಾ ೯.೨೦ರಷ್ಟು ಮಾಹಿತಿದಾರರು ಕುಟುಂಬದ ಪ್ರೇರಣೆ ಇಲ್ಲವೇ ಇಲ್ಲ ಎಂದು ತಿಳಿಸಿರುತ್ತಾರೆ.

ಗ್ರಾಮ ಪಂಚಾಯತ್ ಪ್ರತಿನಿಧಿಯಾಗಿ ಆಯ್ಕೆಯಾಗುವಲ್ಲಿ ಮಹಿಳಾ ಮೀಸಲಾತಿಯ ಪ್ರಭಾವದ ಬಗ್ಗೆ ಕೇಳಿದಾಗ ಶೇಕಡಾ ೮೨.೯೦ರಷ್ಟು ಮಾಹಿತಿದಾರರು ಬಹಳ ಮಟ್ಟಿಗೆ ಪ್ರಭಾವ ಬೀರಿದೆ ಎಂದು ತಿಳಿಸಿದ್ದಾರೆ. ಶೇಕಡಾ ೧೭.೧೦ರಷ್ಟು ಮಾಹಿತಿದಾರರು ತಮ್ಮ ಚುನಾವಣಾ ಸ್ಪರ್ಧೆಯಲ್ಲಿ ಮಹಿಳಾ ಮೀಸಲಾತಿಯ ಪ್ರಭಾವ ಇಲ್ಲವೇ ಇಲ್ಲ ಎಂದಿದ್ದಾರೆ. ಈ ಮಾಹಿತಿಯನ್ನು ಗಮನಿಸಿದಾಗ ಮಹಿಳಾ ಮೀಸಲಾತಿಯು ಉಡುಪಿ ಜಿಲ್ಲೆಯ ಮಹಿಳೆಯರನ್ನು ರಾಜಕೀಯಕ್ಕೆ ಸೆಳೆಯುವಲ್ಲಿ ಸಫಲವಾಗಿರುವುದು ಕಂಡುಬರುತ್ತದೆ. ಮಹಿಳಾ ಮೀಸಲಾತಿಯಲ್ಲದಿದ್ದಲ್ಲಿ ಈ ಮಹಿಳೆಯರು ರಾಜಕೀಯಕ್ಕೆ ಪ್ರವೇಶ ಪಡೆಯುತ್ತಿರಲಿಲ್ಲ ಎಂಬುದು ಅಧ್ಯಯನದಲ್ಲಿ ಗಮನಿಸಲಾದ ಅಂಶವಾಗಿದೆ.

ಭಾರತಿ.ಎಂ(೨೦೧೧) ಅವರು ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ನಡಸಿದ ಅಧ್ಯಯನದ ಪ್ರಕಾರ ಮಹಿಳಾ ಮೀಸಲಾತಿಯಿಂದ ಸಾಮಾಜಿಕ, ರಾಜಕೀಯ, ಆರ್ಥಿಕ, ಕೌಟುಂಬಿಕ ನೆಲೆಗಳನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನದ ೭೩ನೇ ತಿದ್ದುಪಡಿ ಜಾರಿಗೆ ತರಲಾಗಿದೆ. ಇದರಿಂದಾಗಿ ಸಕ್ರಿಯ ರಾಜಕೀಯ ಪಾಲ್ಗೊಳ್ಳುವಿಕೆ ಸಾಧ್ಯವಾಗಿದೆ ಮತ್ತು ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಪ್ರಮಾಣ ಹೆಚ್ಚಾಗಿ ತನ್ಮೂಲಕ ಸಾಮಾಜಿಕ ಮತ್ತಿತರ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುವಲ್ಲಿ ಮಹಿಳಾ ಪ್ರಾಬಲ್ಯ ಹೆಚ್ಚಾಗುತ್ತದೆ ಎನ್ನುವುದು ತಿಳಿದುಬರುತ್ತದೆ.

ರಾಜಕೀಯದಲ್ಲಿ ಭಾಗವಹಿಸುವ ಮಹಿಳೆಯರಿಗೆ ಸ್ವಯಂ ಪ್ರೇರಣೆ ಎಷ್ಟರ ಮಟ್ಟಿಗೆ ಕಾರಣವಾಗಿದೆ ಎಂಬ ಪ್ರಶ್ನೆಗೆ, ಉತ್ತರಿಸಿದ ಮಾಹಿತಿದಾರರಲ್ಲಿ ಶೇಕಡಾ ೮೬.೮೦ರಷ್ಟು ಬಹಳಮಟ್ಟಿಗೆ ಪ್ರೇರಣೆ ನೀಡಿದೆ ಎಂಬುದಾಗಿ ತಿಳಿಸಿದ್ದು, ೧೩.೨೦ ಶೇಕಡಾ ಮಾಹಿತಿದಾರರು ಸ್ವಲ್ಪಮಟ್ಟಿಗೆ ಸ್ವಯಂ ಪ್ರೇರಣೆಯ ಪಾತ್ರವಿರುವುದಾಗಿ ತಿಳಿಸಿರುತ್ತಾರೆ. ಇಲ್ಲಿ ಸ್ವಯಂ ಪ್ರೇರಣೆ ಅಗತ್ಯವಿಲ್ಲವೆಂಬುದಾಗಿ ಯಾವ ಮಾಹಿತಿದಾರರೂ ಹೇಳಿರುವುದಿಲ್ಲ. ಈ ಮಾಹಿತಿಗಳನ್ನು ಗಮನಿಸಿದಾಗ ಮೊಗವೀರ ಮಹಿಳೆಯರ ಸ್ವಯಂ ಪ್ರೇರಣೆಯೇ ಅವರನ್ನು ರಾಜಕೀಯಕ್ಕೆ ಸೆಳೆಯುತ್ತದೆ ಎಂಬುದು ಅಧ್ಯಯನದಲ್ಲಿ ಕಂಡುಬರುತ್ತದೆ. ಮೊಗವೀರ ಮಹಿಳೆಯರ ಸ್ವಯಂ ಪ್ರೇರಣೆಯೇ ಅವರನ್ನು ರಾಜಕೀಯಕ್ಕೆ ಸೆಳೆಯುತ್ತದೆ ಎಂಬುದು ಅಧ್ಯಯನದಲ್ಲಿ ಕಂಡುಬರುತ್ತದೆ. ಮೊಗವೀರ ಮಹಿಳೆಯರನ್ನು ರಾಜಕೀಯದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕಾದರೆ ಅವರ ಮನಃಪರಿವರ್ತನೆ ಹಾಗೂ ಆತ್ಮಸ್ಥೈರ್ಯವನ್ನು ಹೆಚ್ಚಿಸಬೇಕಾದ ಅಗತ್ಯತೆಯನ್ನು ಅಧ್ಯಯನವು ತೋರಿಸಿಕೊಡುತ್ತದೆ.

ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ನಿಮ್ಮ ಕುಟುಂಬದ ರಾಜಕೀಯ ಹಿನ್ನೆಲೆಯ ಪಾತ್ರವಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಮಾಹಿತಿದಾರರಲ್ಲಿ ಶೇಕಡಾ ೭೨.೪೦ರಷ್ಟು ಬಹಳಮಟ್ಟಿಗೆ ಎಂಬುದಾಗಿಯೂ, ೧೯.೭೦ ಶೇಕಡಾ ಮಾಹಿತಿದಾರರು ಸ್ವಲ್ಪಮಟ್ಟಿಗೆ ಎಂಬುದಾಗಿಯೂ ಹಾಗೂ ೭.೯೦ ಶೇಕಡಾ ಯಾವುದೇ ರಾಜಕೀಯ ಹಿನ್ನೆಲೆಯ ಪಾತ್ರವಿಲ್ಲ ಎಂಬುದಾಗಿಯೂ ತಿಳಿಸಿರುತ್ತಾರೆ. ಈ ಮಾಹಿತಿಗಳನ್ನು ಗಮನಿಸಿದಾಗ ಈ ಪ್ರದೇಶದಲ್ಲಿ ರಾಜಕೀಯ ನಂಟನ್ನು ಹೊಂದಿರುವ

ಕುಟುಂಬದ ಮಹಿಳೆಯರು ಹೆಚ್ಚು ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ. ರಾಜಕೀಯದ ಬಗ್ಗೆ ಮಹಿಳೆಯರಿಗೆ ಮಾಹಿತಿ ನೀಡಿ ಅವರಲ್ಲಿ ಒಲವನ್ನು ಮೂಡಿಸುವ ಪ್ರಯತ್ನವನ್ನು ಮಾಡುವಲ್ಲಿ ಕುಟುಂಬದ ರಾಜಕೀಯ ಹಿನ್ನೆಲೆ ಇಲ್ಲಿ ಪಾತ್ರ ವಹಿಸಿರುವುದು ಅಧ್ಯಯನದಲ್ಲಿ ಕಂಡುಬರುತ್ತದೆ.

ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಅನಿರೀಕ್ಷಿತ ರಾಜಕೀಯ ಬೆಳವಣಿಗೆಗಳ ಪಾತ್ರದ ಬಗ್ಗೆ ಕೇಳಿದಾಗ, ಶೇಕಡಾ ೫೦ರಷ್ಟು ಮಹಿಳಾ ಮಾಹಿತಿದಾರರು ಬಹಳಷ್ಟು ಎಂಬುದಾಗಿ ಹಾಗೂ ೩೦.೩೦ ಶೇಕಡಾ ಮಾಹಿತಿದಾರರು ಸ್ವಲ್ಪಮಟ್ಟಿಗೆ ಎಂಬುದಾಗಿ ಹಾಗೂ ೧೯.೭೦ ಶೇಕಡಾ ಮಾಹಿತಿದಾರರು ಅನಿರೀಕ್ಷಿತ ಬೆಳವಣಿಗೆಗಳ ಪಾತ್ರ ಇಲ್ಲವೇ ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಸರಕಾರಗಳು ಹಾಗೂ ಚುನಾವಣಾಧಿಕಾರಿಗಳು ಕಾಲಕಾಲಕ್ಕೆ ಮಾಡುವ ರೋಸ್ಟರ್ ಮೀಸಲಾತಿಯ ಬದಲಾವಣೆಗಳು, ಸ್ಥಳೀಯವಾಗಿ ಆಗುವ ರಾಜಕೀಯ ಬದಲಾವಣೆಗಳು ಮೊಗವೀರ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಪಾತ್ರವಹಿಸಿರುವುದು ಇಲ್ಲಿ ಕಂಡುಬರುತ್ತದೆ.

ಮೇಲಿನ ಅಂಶಗಳು ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಅವರ ಸ್ವ ಪ್ರಯತ್ನ ಹೆಚ್ಚಿನ ಪಾತ್ರ ವಹಿಸುವುದನ್ನು ಸ್ಪಷ್ಟಪಡಿಸುತ್ತದೆ. ಮಹಿಳೆಯರು ಸೂಕ್ತ ಅರಿವನ್ನು ಪಡೆದು ಸ್ವ ಪ್ರಯತ್ನದಿಂದ ಬೆಳೆದಾಗ ಮಾತ್ರ ನಿಜವಾದ ಸಬಲೀಕರಣ ಸಾಧ್ಯವಾಗಬಲ್ಲದು.

ಕೋಷ್ಟಕ ೫.೫೨ ಗ್ರಾಮ ಪಂಚಾಯತ್ ಸದಸ್ಯತ್ವದಿಂದಾದ ಪ್ರಯೋಜನಗಳ ಬಗ್ಗೆ ಮೊಗವೀರ ಮಹಿಳೆಯರ ಅಭಿಪ್ರಾಯ

ಸಬಲೀಕರಣದ ಅಂಶಗಳು	ಮಾಹಿತಿದಾರರ ಅಭಿಪ್ರಾಯ				ಒಟ್ಟು	
	ಹೌದು	ಶೇ.	ಇಲ್ಲ	ಶೇ.	ಮಾಹಿತಿ ದಾರರು	ಶೇ.
ಆತ್ಮವಿಶ್ವಾಸವನ್ನು ಹೆಚ್ಚಿಸಿದೆ	೬೭	೮೮.೨೦	೯	೧೧.೮೦	೭೬	೧೦೦
ಕುಟುಂಬ ಮತ್ತು ಸಮಾಜದಲ್ಲಿ ಗೌರವ ದೊರೆತಿದೆ	೬೬	೮೬.೮೦	೧೦	೧೩.೨೦	೭೬	೧೦೦
ಜೀವನಮಟ್ಟದಲ್ಲಿ ಸುಧಾರಣೆ ಯಾಗಿದೆ	೩೩	೪೩.೪೦	೪೩	೫೬.೬೦	೭೬	೧೦೦
ಸ್ವ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೆಚ್ಚಾಗಿದೆ	೬೨	೮೧.೬೦	೧೪	೧೮.೪೦	೭೬	೧೦೦
ಸಮಸ್ಯೆ ಪರಿಹಾರ ಮಾಡುವ ಸಾಮರ್ಥ್ಯ ಹೆಚ್ಚಾಗಿದೆ	೪೪	೫೭.೯೦	೩೨	೪೨.೧೦	೭೬	೧೦೦
ಕೌಟುಂಬಿಕ ಸಹಕಾರ ಹೆಚ್ಚಾಗಿದೆ	೫೦	೬೫.೮೦	೨೬	೩೪.೨೦	೭೬	೧೦೦
ಶಿಕ್ಷಣದ ಅಗತ್ಯತೆ ಬಗ್ಗೆ ಅರಿವು ಬಂದಿದೆ	೭೬	೧೦೦	೦	೦	೭೬	೧೦೦
ಸಮಾಜದ ಬಗ್ಗೆ ಜ್ಞಾನ ಪಡೆಯುವ ಅರಿವು ಹೆಚ್ಚಾಗಿದೆ	೫೯	೭೭.೬೦	೧೭	೨೨.೪೦	೭೬	೧೦೦

ಇತತರಿಗೆ ಪ್ರೇರಣೆ ನೀಡುವ ಶಕ್ತಿ ಬಂದಿದೆ	೪೮	೬೩.೨೦	೨೮	೩೬.೮೦	೭೬	೧೦೦
ಗಳಿಸಿದ ಹಣವನ್ನು ಸ್ವಂತ ಉಪಯೋಗಕ್ಕೆ ಬಳಸುವ ಸಾಮರ್ಥ್ಯ ಬಂದಿದೆ	೫೦	೬೫.೮೦	೨೬	೩೪.೨೦	೭೬	೧೦೦
ಆರ್ಥಿಕ ಸಾಮರ್ಥ್ಯದಿಂದಾಗಿ ಜೀವನಕ್ರಮದಲ್ಲಿ ಬದಲಾವಣೆ ಗಳಾಗಿವೆ	೭೨	೯೪.೭೦	೪	೫.೩೦	೭೬	೧೦೦
ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಒಳಗೊಳ್ಳುವಿಕೆ ಹೆಚ್ಚಾಗಿದೆ	೬೯	೯೦.೮೦	೭	೯.೨೦	೭೬	೧೦೦
ಸ್ವ ಆಸಕ್ತಿಯಿಂದ ಚುನಾವಣೆಯಲ್ಲಿ ಪಾಲ್ಗೊಳ್ಳುವ ಆತ್ಮವಿಶ್ವಾಸ ಮತ್ತು ಶಕ್ತಿ ಬಂದಿದೆ	೬೭	೮೮.೨೦	೯	೧೧.೮೦	೭೬	೧೦೦
ಮಹಿಳೆಯೆಂಬ ಕೀಳರಿಮೆ ದೂರ ವಾಗಿದೆ	೭೦	೯೨.೧೦	೬	೭.೯೦	೭೬	೧೦೦
ಸಾಮಾಜಿಕ ಸಮಸ್ಯೆ ಪರಿಹರಿಸುವ ಹಾಗೂ ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡ ತೃಪ್ತಿ ದೊರೆತಿದೆ.	೬೦	೭೮.೯೦	೧೬	೨೧.೧೦	೭೬	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೫.೫೨ರಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಗೊಂಡ ಮಹಿಳಾ ಸದಸ್ಯರುಗಳಿಗೆ ಸದಸ್ಯತನದಿಂದಾದ ಪ್ರಯೋಜನಗಳಿಗೆ ಸಂಬಂಧಪಟ್ಟಂತೆ ಹಲವಾರು ವಿಷಯಗಳನ್ನು ಈ ಕೋಷ್ಟಕದಲ್ಲಿ ನೀಡಲಾಗಿದೆ. ಈ ಅಧ್ಯಯನದಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆಯಿಂದ ಮಹಿಳೆಯರ ಸಾಮಾಜಿಕ, ಆರ್ಥಿಕ ಹಾಗೂ ಕೌಟುಂಬಿಕ ಅಭಿವೃದ್ಧಿಯ ಮೇಲಾಗುವ ಪರಿಣಾಮಗಳನ್ನು ತಿಳಿಯುವ ಉದ್ದೇಶದಿಂದ ಸಬಲೀಕರಣದ ಅಂಶಗಳಿಗೆ ಸಂಬಂಧಿಸಿದಂತೆ ಗ್ರಾಮಪಂಚಾಯತ್‌ನಲ್ಲಿ ಆಯ್ಕೆಗೊಂಡ ಮಹಿಳೆಯರ ಅಭಿಪ್ರಾಯ ಕೇಳಲಾಗಿತ್ತು. ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ ಎಂದು ೮೮.೨೦ ಶೇಕಡಾ ಮಹಿಳಾ ಮಾಹಿತಿದಾರರು ಅಭಿಪ್ರಾಯ ವ್ಯಕ್ತಪಡಿಸಿದರೆ, ಶೇಕಡಾ ೧೧.೮೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ಉತ್ತರಿಸಿರುತ್ತಾರೆ. ಶೇಕಡಾ ೮೬.೮೦ರಷ್ಟು ಮಾಹಿತಿದಾರರು ಕುಟುಂಬ ಮತ್ತು ಸಮಾಜದಲ್ಲಿ ಗೌರವ ದೊರೆತಿರುವುದಾಗಿಯೂ, ಶೇಕಡಾ ೧೩.೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೪೩.೪೦ ರಷ್ಟು ಮಾಹಿತಿದಾರರು ಜೀವನ ಮಟ್ಟದಲ್ಲಿ ಸುಧಾರಣೆಯಾಗಿರುವುದಾಗಿ, ಶೇಕಡಾ ೫೬.೬೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೮೧.೬೦ ರಷ್ಟು ಮಾಹಿತಿದಾರರಿಗೆ ಸ್ವ ನಿರ್ಧಾರ ತಗೆದುಕೊಳ್ಳುವ ಸಾಮರ್ಥ್ಯ ಹೆಚ್ಚಾಗಿರುವುದಾಗಿಯೂ,

ಶೇಕಡಾ ೧೮.೪೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೫೭.೯೦ ರಷ್ಟು ಮಾಹಿತಿದಾರರಿಗೆ ಸಮಸ್ಯೆ ಪರಿಹಾರದ ಸಾಮರ್ಥ್ಯ ಹೆಚ್ಚಾಗಿರುವುದಾಗಿ, ಶೇಕಡಾ ೪೨.೧೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೬೫.೮೦ ಮಾಹಿತಿದಾರರಿಗೆ ರಾಜಕೀಯದಲ್ಲಿ ಭಾಗವಹಿಸಿ ಗ್ರಾಮ ಪಂಚಾಯತ್ ಸದಸ್ಯರಾಗಿದ್ದರಿಂದಾಗಿ ಕೌಟುಂಬಿಕ ಸಹಕಾರ ಹೆಚ್ಚಾಗಿ ದೊರಕಿರುವುದಾಗಿ, ಶೇಕಡಾ ೩೪.೨೦ರಷ್ಟು ಮಾಹಿತಿದಾರರಿಗೆ ಕುಟುಂಬದ ಸಹಕಾರ ದೊರಕುತ್ತಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಮಾಹಿತಿದಾರರಲ್ಲಿ ಶೇಕಡಾ ನೂರರಷ್ಟು ಮೊಗವೀರ ಮಹಿಳೆಯರಿಗೆ ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಶಿಕ್ಷಣದ ಅಗತ್ಯತೆಯ ಬಗ್ಗೆ ಅರಿವು ಬಂದಿರುವುದಾಗಿ, ೭೭.೬೦ ಶೇಕಡಾ ಮಾಹಿತಿದಾರರಲ್ಲಿ ಸಮಾಜದ ಬಗ್ಗೆ ಅರಿವು ಉಂಟಾಗಿದ್ದು, ಶೇಕಡಾ ೨೨.೮೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೬೩.೨೦ ಮಾಹಿತಿದಾರರು ತಮಗೆ ಇತರರನ್ನು ಪ್ರೇರೇಪಿಸುವ ಶಕ್ತಿ ಬಂದಿರುವುದಾಗಿ, ಶೇಕಡಾ ೩೬.೮೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಶೇಕಡಾ ೬೫.೮೦ ಮಾಹಿತಿದಾರರು ತಮ್ಮ ಗಳಿಕೆಯನ್ನು ಸ್ವಂತ ಉಪಯೋಗಕ್ಕೆ ಬಳಸುವ ಸಾಮರ್ಥ್ಯ ಬಂದಿದೆ ಎಂಬುದಾಗಿ, ಶೇಕಡಾ ೩೪.೨೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೯೪.೭೦ ಮಾಹಿತಿದಾರರಿಗೆ ಅವರ ಆರ್ಥಿಕ ಸಬಲೀಕರಣದಿಂದಾಗಿ ಜೀವನ ಕ್ರಮದಲ್ಲಿ ಬದಲಾವಣೆಗಳಾಗಿವೆ.

ಗ್ರಾಮ ಪಂಚಾಯತ್‌ಗಳಲ್ಲಿ ಆಯ್ಕೆಗೊಂಡಿರುವ ಮಾಹಿತಿದಾರರಲ್ಲಿ ಶೇಕಡಾ ೯೦.೮೦ ರಷ್ಟು ಮಾಹಿತಿದಾರರು ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ತಮ್ಮ ಪಾಲ್ಗೊಳ್ಳುವಿಕೆ ಹೆಚ್ಚಾಗಿರುವುದಾಗಿ, ಶೇಕಡಾ ೫.೩೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೮೮.೨೦ ರಷ್ಟು ಮಾಹಿತಿದಾರರು ತಮಗೆ ಸ್ವ ಆಸಕ್ತಿಯಿಂದ ಮುಂದಿನ ಚುನಾವಣೆಗಳಲ್ಲಿ ಪಾಲ್ಗೊಳ್ಳುವ ಆತ್ಮವಿಶ್ವಾಸ ಮತ್ತು ಶಕ್ತಿ ಬಂದಿದೆ ಎಂಬುದಾಗಿ, ಶೇಕಡಾ ೧೧.೮೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ಮಾಹಿತಿ ನೀಡಿದ್ದಾರೆ. ಶೇಕಡಾ ೯೨.೧೦ ರಷ್ಟು ಮಾಹಿತಿದಾರರು ರಾಜಕೀಯ ಪ್ರವೇಶದ ನಂತರ ಮಹಿಳೆಯೆಂಬ ಕೀಳರಿಮೆ ಕಡಿಮೆಯಾಗಿದೆ ಎಂಬುದಾಗಿ, ಶೇಕಡಾ ೭.೯೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಶೇಕಡಾ ೭೮.೯೦ ರಷ್ಟು ಮಾಹಿತಿದಾರರು ಗ್ರಾಮ ಪಂಚಾಯತ್ ಸದಸ್ಯತನದಿಂದಾಗಿ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡು ಗ್ರಾಮೀಣ ಅಭಿವೃದ್ಧಿಯಲ್ಲಿ ಭಾಗವಹಿಸಿದ ತೃಪ್ತಿ ದೊರೆತಿರುವುದಾಗಿ, ಶೇಕಡಾ ೨೧.೧೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಮೇಲಿನ ಕೋಷ್ಟಕದಲ್ಲಿರುವ ಮಾಹಿತಿಗಳನ್ನು ವಿಶ್ಲೇಷಿಸಿದಾಗ ಗ್ರಾಮ ಪಂಚಾಯತ್ ಸದಸ್ಯ ಮಾಹಿತಿದಾರರು ತಮ್ಮ ಅಭಿಪ್ರಾಯದಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆಯ ಕೊಡುಗೆ ಗುರುತರವಾಗಿರುವುದಾಗಿ ಅಭಿಪ್ರಾಯಪಟ್ಟಿದ್ದಾರೆ. ರಾಜಕೀಯ ಪಾಲ್ಗೊಳ್ಳುವಿಕೆ ಮಹಿಳೆಗೆ ಕುಟುಂಬದಲ್ಲಿ ಗೌರವ, ಸಮಾಜದಲ್ಲಿ ಸ್ಥಾನಮಾನ ಹಾಗೂ ತೃಪ್ತಿಯನ್ನು ತಂದುಕೊಟ್ಟಿದೆ. ಆರ್ಥಿಕ ಅಭಿವೃದ್ಧಿಗೂ ರಾಜಕೀಯ ಪಾಲ್ಗೊಳ್ಳುವಿಕೆ ಕಾರಣವಾಗಿರುವುದು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿ, ನಿರ್ಧಾರ ತೆಗದುಕೊಳ್ಳುವ ಸಾಮರ್ಥ್ಯ ವೃದ್ಧಿಸುವುದರ ಜೊತಗೆ ತಮ್ಮ ಗಳಿಕೆಯನ್ನು ಬಳಸುವುದಕ್ಕೆ ಸಂಬಂಧಿಸಿದಂತೆ ಅಧಿಕಾರ ಚಲಾವಣೆಗೂ ರಾಜಕೀಯ ಪಾಲ್ಗೊಳ್ಳುವಿಕೆ ಸಹಕಾರಿಯಾಗಿದೆ. ರಾಜಕೀಯದಲ್ಲಿ ಪಾಲ್ಗೊಂಡ ಮಹಿಳೆಯರಿಗೆ ಶಿಕ್ಷಣದ ಬಗ್ಗೆ ಅದರ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿದ್ದು ಮಹಿಳೆಯರ ಶೈಕ್ಷಣಿಕ ಪ್ರಗತಿಗೂ ರಾಜಕೀಯ ಪಾಲ್ಗೊಳ್ಳುವಿಕೆಗೆ ಪೂರಕವಾಗಬಲ್ಲದ್ದು ಎಂಬ ಅಂಶವನ್ನು ಬಿಂಬಿಸುತ್ತದೆ.

ಮೇಲಿನ ಎಲ್ಲಾ ವಿಚಾರಗಳನ್ನು ಪರಿಗಣಿಸಿ ಸಾರಾಂಶ ರೂಪದಲ್ಲಿ ಹೇಳುವುದಾದರೆ, ರಾಜಕೀಯ ಪಾಲ್ಗೊಳ್ಳುವಿಕೆಯು ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಕೌಟುಂಬಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕಾಭಿವೃದ್ಧಿಗೆ ಪ್ರಮುಖ ಕೊಡುಗೆಯನ್ನು ನೀಡಿದೆ. ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮೊಗವೀರ ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂಬ ಅಧ್ಯಯನದ ಉದ್ದೇಶವನ್ನು ಪುಷ್ಟೀಕರಿಸುತ್ತದೆ.

ಕೋಷ್ಟಕ ೫.೫೩ ವಿವಿಧ ರಾಜಕೀಯ ಅಂಶಗಳಿಗೆ ಸಂಬಂಧಿಸಿದಂತೆ ಗ್ರಾಮಪಂಚಾಯತ್‌ನಲ್ಲಿ ಆಯ್ಕೆಗೊಂಡ ಮೊಗವೀರ ಮಹಿಳೆಯರ ಅಭಿಪ್ರಾಯ

ರಾಜಕೀಯಕ್ಕೆ ಸಂಬಂಧಿಸುವ ಅಂಶ	ಮಾಹಿತಿದಾರರ ಅಭಿಪ್ರಾಯ				ಒಟ್ಟು	
	ಹೌದು	ಶೇ.	ಇಲ್ಲ	ಶೇ.	ಮಾಹಿತಿ ದಾರರು	ಶೇ.
ಗ್ರಾಮ ಪಂಚಾಯತ್ ಸದಸ್ಯತ್ವದಿಂದ ತೃಪ್ತಿಯಾಗಿದೆ	೪೯	೬೪.೫೦	೨೭	೩೫.೫೦	೭೬	೧೦೦
ಗ್ರಾಮ ಪಂಚಾಯತ್‌ಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸುವವರು	೪೦	೫೨.೬೦	೩೬	೪೭.೪೦	೭೬	೧೦೦
ಗ್ರಾಮ ಪಂಚಾಯತ್‌ಗಳಲ್ಲಿ ಪುರುಷ ಸದಸ್ಯರ ಪ್ರಾಬಲ್ಯ ಹೆಚ್ಚಾಗಿದೆ	೬೦	೭೮.೯೦	೧೬	೨೧.೧೦	೭೬	೧೦೦
ರಾಜಕೀಯದಲ್ಲಿ ಮಹಿಳಾ ಮೀಸಲಾತಿ ಅಗತ್ಯ ಇದೆ	೭೬	೧೦೦	೦	೦	೭೬	೧೦೦
ಆಯ್ಕೆಗೊಂಡ ಮಹಿಳೆಯರಿಗೆ ಆಡಳಿತಕ್ಕೆ ಸಂಬಂಧಿಸಿದ ತರಬೇತಿ ನೀಡಲಾಗುತ್ತಿದೆ.	೭೬	೧೦೦	೦	೦	೭೬	೧೦೦

ಮಹಿಳಾ ಸದಸ್ಯೆಯಾಗಿ ಸಮಸ್ಯೆಗಳನ್ನು ಎದುರಿಸಿರುವವರು	೨೬	೩೪.೨೦	೫೦	೬೫.೮೦	೮೬	೧೦೦
ರಾಜಕೀಯದಲ್ಲಿ ಮುಂದವರೆಯಲು ಆಸಕ್ತಿ ಇದೆ	೮೨	೯೪.೭೦	೪	೫.೩೦	೮೬	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಮೇಲಿನ ಕೋಷ್ಟಕದಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ್ ಸದಸ್ಯ ಮಾಹಿತಿದಾರರ ಅಭಿಪ್ರಾಯವನ್ನು ಸಂಗ್ರಹಿಸಿ ನೀಡಲಾಗಿದೆ. ಗ್ರಾಮ ಪಂಚಾಯತ್ ಸದಸ್ಯತ್ವದಿಂದಾಗಿ ತೃಪ್ತಿಯಾಗಿದೆಯೇ ಎಂಬ ಪ್ರಶ್ನೆಗೆ ಶೇಕಡಾ ೬೪.೫೦ ಶೇಕಡಾ ಮಾಹಿತಿದಾರರು ಹೌದೆಂಬುದಾಗಿ, ಶೇಕಡಾ ೩೫.೫೦ರಷ್ಟು ಮಂದಿ ಇಲ್ಲ ಎಂಬುದಾಗಿ ಉತ್ತರಿಸಿರುತ್ತಾರೆ. ಗ್ರಾಮ ಪಂಚಾಯತ್ ಸದಸ್ಯರಾಗುವುದರಿಂದಾಗಿ ಅವರ ಸಾಮಾಜಿಕ ಜೀವನ ಹಾಗೂ ಆರ್ಥಿಕ ಸ್ಥಿತಿಗತಿಗಳು ಉನ್ನತೀಕರಣಗೊಂಡಿರುವುದು ಅವರ ತೃಪ್ತಿಗೆ ಪ್ರಮುಖ ಕಾರಣವಾಗಿದೆ. ತಮ್ಮ ಗ್ರಾಮದ ಅಭಿವೃದ್ಧಿಗೆ ಕೊಡುಗೆ ನೀಡಲು ಸಾಧ್ಯವಾದ ಬಗ್ಗೆಯೂ ಅವರಲ್ಲಿ ಅಭಿಮಾನವಿದೆ.

ಗ್ರಾಮ ಪಂಚಾಯತ್ ಸಭೆಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸುವಿರಾ ಎಂಬ ಪ್ರಶ್ನೆಗೆ, ಶೇಕಡಾ ೫೨.೬೦ ಮಾಹಿತಿದಾರರು ಹೌದೆಂಬುದಾಗಿ, ಶೇಕಡಾ ೪೭.೪೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ಉತ್ತರಿಸಿದ್ದು, ಮಹಿಳೆಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಗಳಿಸಿರುವುದು ಇಲ್ಲಿ ಕಂಡುಬರುತ್ತದೆ. ಮೊದಲ ಬಾರಿಗೆ ಆಯ್ಕೆಗೊಂಡ ಹಾಗೂ ಅಶಿಕ್ಷಿತ ಮಹಿಳೆಯರನ್ನು ಹೊರತುಪಡಿಸಿ ಹೆಚ್ಚಿನ ಮಹಿಳೆಯರು ಸಭೆಗಳಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಆಸಕ್ತಿ ಹೊಂದಿರುವುದು ಅಧ್ಯಯನದಲ್ಲಿ ಕಂಡುಬಂದಿದೆ.

ಗ್ರಾಮ ಪಂಚಾಯತ್‌ಗಳಲ್ಲಿ ಪುರುಷ ಸದಸ್ಯರ ಪ್ರಾಬಲ್ಯಕ್ಕೆ ಸಂಬಂಧಿಸಿದ ಪ್ರಶ್ನೆಗೆ, ಉತ್ತರಿಸಿದ ಶೇಕಡಾ ೭೮.೯೦ ರಷ್ಟು ಮಾಹಿತಿದಾರರು ಪುರುಷರ ಪ್ರಾಧಾನ್ಯತೆ ಇರುವುದಾಗಿ ಶೇಕಡಾ ೨೧.೧೦ ಮಂದಿ ಪುರುಷರು ಪ್ರಾಧ್ಯಾನ್ಯತೆಯನ್ನು ಹೊಂದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳೆಯರ ಪ್ರವೇಶ ಇತ್ತೀಚಿನದ್ದಾಗಿದ್ದು ಮತ್ತು ಪುರುಷ ಪ್ರಧಾನ ಸಮಾಜದಲ್ಲಿ ಇಂತಹ ಪ್ರಾಬಲ್ಯದ ಪರಿಸ್ಥಿತಿಯನ್ನು ಸಾಮಾನ್ಯವೆಂದೇ ಪರಿಗಣಿಸಲಾಗುತ್ತಿದೆ. ಪ್ರಸ್ತುತ ಮಹಿಳಾ ಶಿಕ್ಷಣದ ಪ್ರಗತಿ ಹಾಗೂ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿರುವುದರಿಂದಾಗಿ ಈ ಪುರುಷ ಪ್ರಾಧಾನ್ಯತೆಯು ನಿಧಾನವಾಗಿ ಕ್ಷೀಣಿಸುವ ಸಾಧ್ಯತೆಗಳು ನಿಚ್ಚಳವಾಗಿವೆ.

ರಾಜಕೀಯದಲ್ಲಿ ಮಹಿಳಾ ಮೀಸಲಾತಿಯ ಅಗತ್ಯತೆಯ ಬಗ್ಗೆ ಕೇಳಿದ ಪ್ರಶ್ನೆಗೆ, ಗ್ರಾಮ ಪಂಚಾಯತ್ ಸದಸ್ಯರಾಗಿರುವ ಎಲ್ಲಾ(೧೦೦ ಶೇಕಡಾ) ಮೊಗವೀರ ಮಹಿಳಾ ಮಾಹಿತಿದಾರರು ಮೀಸಲಾತಿ ಅಗತ್ಯವೆಂಬುದಾಗಿ ತಿಳಿಸಿರುತ್ತಾರೆ. ಈ ಮೀಸಲಾತಿಯಿಂದಾಗಿಯೇ ತಮಗೆ ರಾಜಕೀಯದಲ್ಲಿ ಸ್ಪರ್ಧೆಗೆ ಅವಕಾಶ ದೊರೆತಿರುವುದಾಗಿ ಗರಿಷ್ಠ ಸಂಖ್ಯೆಯ ಮಾಹಿತಿದಾರರು

ತಿಳಿಸಿರುತ್ತಾರೆ. ಈ ವಿಷಯವನ್ನು ವಿಮರ್ಶಿಸಿದಾಗ ಉಡುಪಿ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಕಾಯ್ದೆಯ ಆಶಯಗಳು ಸಾಕಾರಗೊಂಡಿರುವುದು ಕಂಡುಬರುತ್ತದೆ.

ಗ್ರಾಮ ಪಂಚಾಯತ್‌ಗಳಲ್ಲಿ ಆಯ್ಕೆಗೊಂಡ ಮಹಿಳೆಯರಿಗೆ ತರಬೇತಿ ನೀಡಲಾಗುತ್ತಿದೆಯೇ ಎಂಬ ಪ್ರಶ್ನೆಗೆ, ಎಲ್ಲಾ ಮಾಹಿತಿದಾರರು(ಶೇಕಡಾ ೧೦೦) ಹೌದೆಂಬುದಾಗಿ ಉತ್ತರಿಸಿದ್ದಾರೆ. ಆದರೆ ಈ ತರಬೇತಿಯು ಎಲ್ಲಾ ರೀತಿಯ ಕೌಶಲಗಳನ್ನು ಹೊಸ ಸದಸ್ಯರಿಗೆ ನೀಡಲು ಶಕ್ತವಾಗಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೊದಲ ಬಾರಿಗೆ ಆಯ್ಕೆಗೊಂಡ ಸದಸ್ಯರಿಗೆ ಪಂಚಾಯತ್ ರಾಜ್‌ನ ಸಂಪೂರ್ಣ ಚಿತ್ರಣವನ್ನು ನೀಡುವಲ್ಲಿ ತರಬೇತಿಗಳು ಯಶಸ್ವಿಯಾಗಿಲ್ಲ ಎಂಬ ಅಂಶವು ಅಧ್ಯಯನದಲ್ಲಿ ಕಂಡುಬರುತ್ತದೆ.

ಮಹಿಳಾ ಸದಸ್ಯೆಯಾಗಿ ಏನಾದರೂ ಸಮಸ್ಯೆಗಳನ್ನು ಎದುರಿಸಿದ್ದೀರಾ ಎಂಬ ಪ್ರಶ್ನೆಗೆ, ಶೇಕಡಾ ೩೪.೨೦ರಷ್ಟು ಮಾಹಿತಿದಾರರು ಹೌದು ಎಂಬುದಾಗಿ ಶೇಕಡಾ ೬೫.೮೦ರಷ್ಟು ಮಾಹಿತಿದಾರರು ಇಲ್ಲ ಎಂಬುದಾಗಿ ತಿಳಿಸಿದ್ದಾರೆ. ಮಾಹಿತಿದಾರರು ಎದುರಿಸುತ್ತಿರುವ ಸಮಸ್ಯೆಗಳ ವಿವರ ಕೇಳಿದಾಗ ಪುರುಷ ಸದಸ್ಯರ ಪ್ರಾಬಲ್ಯತೆ, ಅಲ್ಪ ಶಿಕ್ಷಣದಿಂದಾಗಿ ಪಂಚಾಯತ್ ವ್ಯವಸ್ಥೆಯನ್ನು ಅರಿತುಕೊಳ್ಳುವಲ್ಲಿ ಆಗುವ ಸಮಸ್ಯೆ ಹಾಗೂ ಸಮೂಹ ನಿರ್ಣಯದ ಅಭಿಪ್ರಾಯವನ್ನು ವಿರೋಧಿಸಲಾಗದ ಪರಿಸ್ಥಿತಿಯಂತಹ ಸಮಸ್ಯೆಗಳನ್ನು ಎದುರಿಸಿರುವುದಾಗಿ ತಿಳಿಸಿದ್ದಾರೆ. ಈ ಸಮಸ್ಯೆಗಳು ಕಾಲಾಧಾರಿತ ಸಮಸ್ಯೆಗಳಾಗಿದ್ದು, ಮಹಿಳೆಯರ ಸಾಮರ್ಥ್ಯ ವೃದ್ಧಿಯಾದಂತೆಯೇ ಸಮಸ್ಯೆಗಳು ತನ್ನಿಂದತಾನೇ ಪರಿಹಾರಗೊಳ್ಳಬಲ್ಲಂತವುಗಳು ಎಂದು ಅಧ್ಯಯನದಲ್ಲಿ ಗಮನಿಸಲಾಗಿದೆ.

ನೀವು ರಾಜಕೀಯದಲ್ಲಿ ಮುಂದುವರೆಯಲು ಬಯಸುತ್ತೀರಾ ಎಂದು ಗ್ರಾಮ ಪಂಚಾಯತ್ ಸದಸ್ಯ ಮಾಹಿತಿದಾರರಲ್ಲಿ ಕೇಳಿದಾಗ, ಶೇಕಡಾ ೯೪.೭೦ರಷ್ಟು ಮಾಹಿತಿದಾರರು ಹೌದು ಎಂಬುದಾಗಿ ತಿಳಿಸಿದ್ದು, ತಮ್ಮ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಮುಂದುವರೆಸುವ ಇಚ್ಚೆಯನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ತಮಗೆ ಮುಂದುವರೆಯಲು ಆಸಕ್ತಿ ಇಲ್ಲ ಎಂಬುದಾಗಿ ಶೇಕಡಾ ೫.೩೦ರಷ್ಟು ಮಾಹಿತಿದಾರರು ತಿಳಿಸಿರುವವರಲ್ಲಿ ಹಿರಿಯ ವಯಸ್ಸಿನ ಮಾಹಿತಿದಾರರಾಗಿದ್ದು ಯುವ ಸಮುದಾಯಕ್ಕೆ ಅವಕಾಶವನ್ನು ನೀಡುವ ಉದ್ದೇಶದಿಂದ ರಾಜಕೀಯದಿಂದ ನಿರ್ಗಮಿಸುವ ನಿಲುವು ಹೊಂದಿದವರಾಗಿದ್ದಾರೆ. ಈ ಅಂಶಗಳನ್ನು ಗಮನಿಸುವಾಗ ಈಗಾಗಲೇ ಗ್ರಾಮ ಪಂಚಾಯತ್ ಸದಸ್ಯರಾಗಿರುವ ಮಾಹಿತಿದಾರರಿಗೆ ರಾಜಕೀಯದಲ್ಲಿ ಮುಂದುವರೆಯಲು ಆಸಕ್ತಿಯಿದೆ. ಇದು ಈ ಜಿಲ್ಲೆಯಲ್ಲಿ ಮೊಗವೀರ ಮಹಿಳೆಯರ ರಾಜಕೀಯದ ಭವಿಷ್ಯವು ಉಜ್ವಲವಾಗಿರುವುದನ್ನು ಸೂಚಿಸುತ್ತದೆ.

ಮೊಗವೀರ ಮಹಿಳೆಯರು ರಾಜಕೀಯ ಪಾಲ್ಗೊಳ್ಳುವಿಕೆಯ ಬಗ್ಗೆ ಧನಾತ್ಮಕ ಚಿಂತನೆಗಳನ್ನು ಹೊಂದಿದ್ದಾರೆ. ಸದಸ್ಯರಾಗಿ ಆಯ್ಕೆಗೊಂಡವರಲ್ಲಿ ಎದುರಿಸಿ ನಿಲ್ಲಬಲ್ಲ ಸಾಮರ್ಥ್ಯ ಹೆಚ್ಚಾಗಿದೆ. ಮುಂದೆಯೂ ರಾಜಕೀಯದಲ್ಲಿ ಮುಂದುವರೆಯುವ ಆಸಕ್ತಿಯನ್ನು ಅವರು ಹೊಂದಿದ್ದಾರೆ. ಈ ಎಲ್ಲಾ ಅಂಶಗಳು ಮೊಗವೀರ ಮಹಿಳೆಯರ ರಾಜಕೀಯದ ಭವಿಷ್ಯವು ಉತ್ತಮವಾಗಿರುವುದನ್ನು ಸಾಬೀತು ಪಡಿಸಿದೆ. ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ

ಮಾಹಿತಿಗಳ ವಿಮರ್ಶೆಯು ಈ ಪ್ರದೇಶದ ಮೊಗವೀರ ಮಹಿಳೆಯರ ರಾಜಕೀಯ ಸ್ಥಿತಿಗತಿಯ ಪರಿಚಯವನ್ನು ನೀಡುತ್ತದೆ. ಈ ವಿಮರ್ಶೆಗಳಿಂದ ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣ ಹಾಗೂ ಮಹಿಳಾಭಿವೃದ್ಧಿಯ ನಡುವಿನ ಸಂಬಂಧವನ್ನು ಗುರುತಿಸಲು ಸಾಧ್ಯವಾಗಿದ್ದು, ಭವಿಷ್ಯದಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆಯ ಶಕೆಯನ್ನು ಹೆಚ್ಚಿಸಲು ಮಾಡಬೇಕಾದ ಯೋಜನೆಗಳ ಬಗ್ಗೆ ಚಿಂತನೆ ನಡೆಸಲು ಸಾಧ್ಯವಾಗಿದೆ. ಈ ಅಧ್ಯಯನದಲ್ಲಿ ಗಮನಿಸಿದಂತೆ ಉಡುಪಿ ಜಿಲ್ಲೆಯಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಪ್ರಮಾಣ ಭವಿಷ್ಯದಲ್ಲಿ ಹೆಚ್ಚಾಗಲಿದ್ದು ಅದಕ್ಕೆ ಪೂರಕ ವಾತಾವರಣವನ್ನು ನಿರ್ಮಿಸಿ ಕೊಡಬೇಕಾದ ಬಾಧ್ಯತೆ ಸಮಾಜದ ಮೇಲಿದೆ. ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣದ ಬುನಾದಿಯೊಂದಿಗೆ ರಾಜಕೀಯ ಸಬಲೀಕರಣದ ಬಲಿಷ್ಠ ಆಕೃತಿಯೊಂದನ್ನು ನಿರ್ಮಿಸಲು ಸಾಧ್ಯ ಎಂಬುದು ಈ ಅಧ್ಯಯನದಲ್ಲಿ ಗಮನಿಸಿದ ಪ್ರಮುಖ ಅಂಶವಾಗಿದೆ.

ಅಧ್ಯಾಯ ಆರು

ಸಮಾರೋಪ

ಅಧ್ಯಯನದ ಸಾರಾಂಶ

ಅಧ್ಯಯನದ ಫಲಿತಗಳು

ಅಧ್ಯಯನದ ಊಹೆಗಳ ಸಮರ್ಥನೆ

ಸಲಹೆಗಳು

ಉಪಸಂಹಾರ

ಪರಾಮರ್ಶನ ಗ್ರಂಥಗಳು

ಅನುಬಂಧ-೧

ಅಧ್ಯಯನಕ್ಕೆ ಬಳಸಿದ ಮಾದರಿ ಪ್ರಶ್ನಾವಳಿ ೧ ಮತ್ತು ೨

ವಕ್ತೃಗಳ ವಿವರ

ಅಧ್ಯಾಯ ೬
ಸಮಾರೋಪ

ಅಧ್ಯಯನದ ಸಾರಾಂಶ: ಸಮಾರೋಪ ಭಾಗದಲ್ಲಿ ಅಧ್ಯಯನದ ಒಟ್ಟು ಫಲಿತಗಳನ್ನು ಕ್ರೋಢೀಕರಿಸಿ ಸಾರಾಂಶವನ್ನು ನೀಡಲಾಗಿದ್ದು, ಉಳಿದ ೫ ಅಧ್ಯಾಯಗಳಲ್ಲಿ ಚರ್ಚಿಸಿದಂತಹ ಸಂಗತಿಗಳು, ವಿಶ್ಲೇಷಿಸಲ್ಪಟ್ಟ ವಿಚಾರಗಳು ಮತ್ತು ಕಂಡುಬಂದಂತಹ ಫಲಿತಗಳ ಒಟ್ಟು ಸ್ವರೂಪವನ್ನು ಇಲ್ಲಿ ದಾಖಲಿಸಲಾಗಿದೆ. ಅಂದರೆ ಸಂಶೋಧನೆಯಿಂದ ಕಂಡುಕೊಂಡಂತಹ ಮುಖ್ಯ ಫಲಿತಗಳನ್ನು ಮತ್ತು ಅಧ್ಯಯನದ ಹಿನ್ನೆಲೆಯಲ್ಲಿ ನೀಡಬಹುದಾದ ಮುಖ್ಯ ಸಲಹೆಗಳನ್ನು ನೀಡಲಾಗಿದೆ.

ಈ ಅಧ್ಯಯನದಲ್ಲಿ ಮೊಗವೀರ ಮಹಿಳೆಯರ ಜೀವನ ಕ್ರಮ, ಆರ್ಥಿಕ, ಸಾಮಾಜಿಕ, ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಉಡುಪಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ನಡೆಸಿದ ಅಧ್ಯಯನದಲ್ಲಿ ಗಮನಿಸಲಾದ ಮುಖ್ಯ ಅಂಶಗಳನ್ನು ಈ ಸಾರಾಂಶದಲ್ಲಿ ನೀಡಲಾಗಿದೆ. ಹಿಂದೆ ಹೇಳಿರುವಂತೆ ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಸಾಮಾಜಿಕ-ಆರ್ಥಿಕ ಹಿನ್ನೆಲೆ ವಿಭಿನ್ನವಾಗಿದೆ. ಮಾಹಿತಿದಾರರ ಶಿಕ್ಷಣವನ್ನು ಗಮನಿಸಿದಾಗ ಹಿಂದೆ ಇದ್ದಂತಹ ಅನಕ್ಷರಸ್ಥರ ಪ್ರಮಾಣ ಇಂದು ಬದಲಾವಣೆ ಹೊಂದಿ, ಅಕ್ಷರಸ್ಥರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿರುವುದನ್ನು ಕಾಣಬಹುದು. ಮಾಹಿತಿದಾರರ ಮಕ್ಕಳ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹಾಗೆ ತಂದೆ-ತಾಯಂದಿರು ಉನ್ನತ ಶಿಕ್ಷಣ ಪಡೆಯದಿದ್ದರೂ ತಮ್ಮ ಮಕ್ಕಳು ಒಳ್ಳೆಯ ಶಿಕ್ಷಣ ಪಡೆಯಬೇಕು ಎಂಬ ನಿಟ್ಟಿನಲ್ಲಿ ಶ್ರಮಿಸುತ್ತಿರುವುದು ಕಂಡುಬರುತ್ತದೆ. ಇದರಿಂದ ತಿಳಿದು ಬರುವ ಅಂಶವೆಂದರೆ ಮಾಹಿತಿದಾರರು ತಮ್ಮ ಮಕ್ಕಳ ಉತ್ತಮ ಭವಿಷ್ಯವನ್ನು ರೂಪಿಸಲು ಪ್ರಯತ್ನಿಸುತ್ತಿರುವುದು ಕಂಡು ಬಂದಿದೆ. ವಿವಾಹವಾದ ನಂತರವೂ ಹೆಣ್ಣುಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿರುವುದು ಗಮನಾರ್ಹ ಅಂಶವಾಗಿದೆ. ಶಿಕ್ಷಣದ ಬಗ್ಗೆ ಒಲವು ತೋರುವ ಮನೋಭಾವ ಹಾಗೂ ಸರಕಾರ ಕೊಡಮಾಡಲ್ಪಟ್ಟ ವಸತಿ ಹಾಗೂ ವಿದ್ಯಾರ್ಥಿ ವೇತನದ ಸೌಲಭ್ಯಗಳನ್ನು ತೆಗೆದುಕೊಳ್ಳಲು ಮೊಗವೀರ ಸಮುದಾಯ ಪ್ರಯತ್ನಿಸುತ್ತಿದೆ.

ಮೊಗವೀರರು ತಮ್ಮ ಸಮುದಾಯಕ್ಕೆ ಸಂಬಂಧಿಸಿದಂತೆ ತಮ್ಮದೇ ಆದ ರೀತಿಯಲ್ಲಿ ಸಂಸ್ಕೃತಿ ಬೆಳೆಸಿಕೊಂಡಿದ್ದಾರೆ. ಈ ಸಮುದಾಯದಲ್ಲಿ ಮಾತೃಪ್ರಾಧಾನ್ಯತೆ ಕಂಡುಬರುತ್ತದೆ. ವಿವಾಹದ ಸಂದರ್ಭದಲ್ಲಿ ಬಳಿ/ ಬರಿಯನ್ನು ಅನುಸರಿಸಿ ವಿವಾಹ ಕಾರ್ಯವು ನಡೆಯುತ್ತದೆ. ಒಂದೇ ರೀತಿಯ ಬಳಿಯನ್ನು ಹೊಂದಿರುವವರು ಸಹೋದರ/ಸಹೋದರಿ ಸಮಾನರೆಂಬ ಭಾವನೆಯಿಂದಾಗಿ ಒಂದೇ ಬಳಿಯ ವಿವಾಹ ನಿಷಿದ್ಧವಿದೆ. ವಿವಾಹದ ವಿಷಯದಲ್ಲಿ ಸ್ವಂತ ನಿರ್ಧಾರ ತೆಗೆದುಕೊಳ್ಳಲು ಯುವ ಸಮುದಾಯ ಒಲವು ತೋರುತ್ತಿದೆ. ಇತ್ತೀಚಿನ ದಿನಗಳಲ್ಲಿ ಉಳಿದ ಸಮುದಾಯಗಳಂತೆ ಮೊಗವೀರರಲ್ಲೂ ವಿಧವಾ ಪುನರ್ ವಿವಾಹಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಪ್ರಾಯಶಃ ಇದೊಂದು ಮಹಿಳಾ ಸಬಲೀಕರಣದ ಸಂಕೇತ. ವಿವಾಹದ ನಂತರದಲ್ಲಿ ಮಹಿಳೆಗೂ ಪ್ರಾತಿನಿಧ್ಯ

ನೀಡಲಾಗಿರುವುದು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿದೆ. ಬಾಲ್ಯವಿವಾಹ ಪದ್ಧತಿ ಈ ಸಮುದಾಯದಲ್ಲಿ ಕಂಡು ಬರುವುದಿಲ್ಲ. ಇದೊಂದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಮೊಗವೀರ ಸಮುದಾಯದಲ್ಲಿ ಹಿಂದೆ ಇದ್ದಂತಹ ಅವಿಭಕ್ತ ಕುಟುಂಬಗಳು ನಾನಾ ಪ್ರಭಾವಗಳಿಂದ ಅಂದರೆ ಆಧುನೀಕರಣ, ಪಾಶ್ಚಾತ್ಯೀಕರಣ, ಉದ್ಯೋಗ ಈ ಮುಂತಾದ ಅಂಶಗಳಿಂದ, ಬೇರೆ ಬೇರೆ ಕಡೆ ಹೋಗಿ ಕುಟುಂಬದ ಸದಸ್ಯರು ನೆಲೆಸಿದ ಕಾರಣ ವಿಭಕ್ತ ಕುಟುಂಬಗಳಾಗಿ ಪರಿವರ್ತನೆ ಹೊಂದುತ್ತಿರುವುದು ಕಂಡುಬಂದಿದೆ. ಮಹಿಳೆಯರ ವೃತ್ತಿ ಹಾಗೂ ಉದ್ಯೋಗದ ಅಗತ್ಯತೆ ಪ್ರಸ್ತುತ ಹೆಚ್ಚಾಗಿರುವುದು ಗೋಚರಿಸುತ್ತದೆ. ಮಾಹಿತಿದಾರರ ಔದ್ಯೋಗಿಕ ಹಿನ್ನೆಲೆಯನ್ನು ಗಮನಿಸಿದಾಗ ಕುಟುಂಬದ ಹೆಚ್ಚಿನ ಸದಸ್ಯರು ತಮ್ಮ ಕುಲಕಸುಬುಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ವಿದ್ಯಾವಂತರಾದ ಕೆಲವರು ವಿದ್ಯೆಗೆ ತಕ್ಕ ಉದ್ಯೋಗ ದೊರೆಯದ ಕಾರಣ ಅನಿವಾರ್ಯವಾಗಿ ತಮ್ಮ ಜಾತಿ ವೃತ್ತಿಯಲ್ಲಿಯೇ ತೊಡಗಿಸಿಕೊಂಡಿದ್ದಾರೆ. ಇವರ ಜೀವನ ಶೈಲಿಯಲ್ಲಿ ಶಿಕ್ಷಣದಿಂದಾಗಿ ಸಾಕಷ್ಟು ಬದಲಾವಣೆ ಆಗಿರುವುದು ಅಧ್ಯಯನದಿಂದ ಕಂಡುಬಂದಿರುತ್ತದೆ.

ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ರೂಪುಗೊಂಡ ಅಭಿಪ್ರಾಯವೆಂದರೆ ಶಿಕ್ಷಣದ ಪ್ರಭಾವದಿಂದ ಮೊಗವೀರ ಸಮುದಾಯದ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿ, ಶಿಕ್ಷಣದ ಮಟ್ಟದಲ್ಲಿ, ಉದ್ಯೋಗದಲ್ಲಿ, ಮಕ್ಕಳ ಶಿಕ್ಷಣ ಹಾಗೂ ಅಭಿವೃದ್ಧಿಯಲ್ಲಿ ಧಾರ್ಮಿಕ ಭಾವನೆಗಳಲ್ಲಿ, ಮೂಢನಂಬಿಕೆಗಳನ್ನು ತಡೆಯುವಲ್ಲಿ ಉಡುಗೆ–ತೊಡುಗೆಗಳಲ್ಲಿ, ವಿವಾಹ ಪದ್ಧತಿ ಹಾಗೂ ಸಂಪ್ರದಾಯಗಳಲ್ಲಿ ಗಣನೀಯ ಬದಲಾವಣೆ ಕಂಡುಬಂದಿದ್ದು, ಈ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳು ಉತ್ತಮಗೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತವೆ.

ಉಡುಪಿ ಜಿಲ್ಲೆಯಲ್ಲಿ ಮೊಗವೀರರು ಮೀನುಗಾರಿಕೆ ಮತ್ತು ಕೃಷಿ ಹೊರತುಪಡಿಸಿ ಇತರ ಕೆಲಸಗಳಿಂದಲೂ ಗಳಿಕೆ ಮಾಡುತ್ತಾರೆಂಬುದು ಸಮೀಕ್ಷೆಯಿಂದ ತಿಳಿದುಬರುತ್ತದೆ. ಮೊಗವೀರರು ಕುಲಕಸುಬಾದ ಮೀನುಗಾರಿಕೆಗೆ ಆದ್ಯತೆ ನೀಡಿದ್ದಾರೆ. ವಾರದ ಸಂತೆಯಲ್ಲಿ ಪೇಟೆಗಳಿಂದ ವಸ್ತುಗಳನ್ನು ಕೊಳ್ಳುವ ಹಾಗೂ ಮಾರುವ ಕೆಲಸವನ್ನು ಮಾಡುವವರಿದ್ದಾರೆ. ಹಳ್ಳಿ ಹಾಗೂ ಪಟ್ಟಣಗಳ ಮಧ್ಯೆ ವಸ್ತು ಹಾಗೂ ದುಡಿಮೆಯ ವಿನಿಮಯ ಆಗುತ್ತಿರುತ್ತದೆ. ಹಳ್ಳಿಗರಿಗೆ ಹಲವಾರು ಇತರ ಕೆಲಸಗಳು ಒಂದಿಷ್ಟು ಸಂಪಾದನೆಗೆ ದಾರಿ ಮಾಡಿಕೊಡುತ್ತವೆ. ಹೀಗೆ ವ್ಯಾಪಾರ ಮತ್ತು ಇತರ ಕೆಲವೊಂದು ಕೆಲಸಗಳಿಂದ ಹೆಚ್ಚಿನ ಗಳಿಕೆಯನ್ನು ಸಂಪಾದಿಸುತ್ತಾರೆ.

ಮೊಗವೀರ ಸಮುದಾಯದ ಮಹಿಳೆಯರು ತಮ್ಮದೇ ಆದ ಆರ್ಥಿಕ ಕಾರಣಗಳಿಗೆ ಸಾಲ ಪಡೆಯುತ್ತಾರೆ. ಸಾಲ ಪಡೆಯಲು ಬಡತನ ಒಂದೇ ಕಾರಣ ಎನ್ನಲಾಗುವುದಿಲ್ಲ. ಸರಕಾರದ ಸಬ್ಸಿಡಿ ಯೋಜನೆಯಡಿಯಲ್ಲಿ ಸಿಗುವ ಸಾಲಗಳನ್ನು ಹತ್ತಾರು ಮಂದಿ ಬಳಸಿಕೊಂಡವರಿದ್ದಾರೆ. ಜೊತೆಗೆ ಸ್ವಸಹಾಯ ಸಂಘಗಳ ಮುಂಗಡವನ್ನು ಪಡೆದವರ ಸಂಖ್ಯೆ ಗುರುತರವಾಗಿದೆ. ಮೀನು ಮಾರಾಟದ ಅಭಿವೃದ್ಧಿ ಮಾತ್ರವಲ್ಲದೆ ಕೌಟುಂಬಿಕ ಕಾರಣಗಳಿಗೂ ಸಾಲ ಪಡೆದವರಿದ್ದಾರೆ. ಕೆಲವು ಮಹಿಳೆಯರು ಪಾರ್ಲರ್, ಟೈಲರಿಂಗ್, ಮೀನಿನ ಮಸಾಲೆ, ಉಪ್ಪಿನ ಕಾಯಿ ಮಾರಾಟದಂತಹ ಸ್ವ ಉದ್ಯೋಗ

ಇತ್ಯಾದಿಗಳಿಂದ ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಂಡು ಜೀವನ ನಡೆಸುತ್ತಿರುವ ವಿಚಾರ ಕಂಡು ಬಂದಿದೆ. ಅತೀ ಕಡಿಮೆ ಜನ ಮಾತ್ರ ಸಂಪ್ರದಾಯಬದ್ಧವಾದ ಕುಲಕಸುಬಿನಿಂದ ನಿರ್ವಹಣೆ ಮಾಡುತ್ತಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಕೆಲವೇ ಮಂದಿ ಮೊಗವೀರರು ಸಾರ್ವಜನಿಕ ವಲಯಗಳಲ್ಲಿ ದುಡಿಯುತ್ತಿದ್ದಾರೆ.

ಮೊಗವೀರರಲ್ಲಿ ಮೀಸಲಾತಿಯನ್ನು ಬಳಸಿಕೊಂಡವರ ಸಂಖ್ಯೆ ತೀರ ವಿರಳ. ಎಲ್ಲ ರಂಗಗಳೂ ಸೇರಿದಂತೆ, ಮೀಸಲಾತಿಯನ್ನು ಉಪಯೋಗಿಸಿಕೊಂಡವರು ಕೇವಲ ಶೇಕಡಾ ೧೬.೭೫ರಷ್ಟು. ಗೊತ್ತಿದ್ದೋ, ಗೊತ್ತಿಲ್ಲದೆಯೋ ಮೀಸಲಾತಿಯನ್ನು ಬಳಸಿಕೊಳ್ಳದವರ ಸಂಖ್ಯೆ ಹೆಚ್ಚು. ಶಿಕ್ಷಣ ಮತ್ತು ರಾಜಕೀಯ ಅಭಿವೃದ್ಧಿಯ ಹೊರತಾಗಿಯೂ ಶೇಕಡಾ ೬೨.೨೫ರಷ್ಟು ಕುಟುಂಬಗಳಿಗೆ ಇಂದಿಗೂ ಮೀಸಲಾತಿಯ ಕುರಿತ ಅರಿವಿಲ್ಲ. ಉಡುಪಿ ಗ್ರಾಮೀಣ ಪ್ರದೇಶದಲ್ಲಿ ಮೀಸಲಾತಿಯ ಅರಿವಿನ ಕೊರತೆ ಮತ್ತು ಆರ್ಥಿಕವಾಗಿ ಉನ್ನತ ಮಟ್ಟದಲ್ಲಿರುವ ಕುಟುಂಬಗಳು ಮೀಸಲಾತಿಯ ಬಗ್ಗೆ ಹೆಚ್ಚು ಗಮನಹರಿಸದಿರುವುದು ಸ್ಪಷ್ಟವಾಗುತ್ತದೆ.

ಸರಕಾರಿ ಸವಲತ್ತುಗಳ ಕುರಿತಾದ ಮಾಹಿತಿಯನ್ನು ಗಳಿಸುವಲ್ಲಿ ಮೊಗವೀರರು ಆಸಕ್ತಿ ತೋರಿಸುವುದಿಲ್ಲ. ಅನಕ್ಷರಸ್ಥ ಮತ್ತು ಆರೋಗ್ಯವಂತ ಮೊಗವೀರ ಮಹಿಳೆಯರು ಮೀನಿನ ಉದ್ಯಮದಲ್ಲಿ ತೊಡಗಿಸಿಕೊಳ್ಳುವುದು ಉಡುಪಿ ಜಿಲ್ಲೆಯಲ್ಲಿ ಕಂಡುಬರುತ್ತದೆ. ಮೀನು ಮಾರುಕಟ್ಟೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಈ ರೀತಿಯ ಸರಕಾರಿ ಸವಲತ್ತುಗಳ ಕುರಿತಾದ ಮಾಹಿತಿಯನ್ನು ಗಳಿಸುವಲ್ಲಿ ಆಸಕ್ತಿ ತೋರಿಸುವುದಿಲ್ಲ. ಅನಕ್ಷರಸ್ಥ ಮತ್ತು ಆರೋಗ್ಯವಂತ ಮೊಗವೀರ ಮಹಿಳೆಯರು ಮೀನಿನ ಉದ್ಯಮದಲ್ಲಿ ತೊಡಗಿಸಿಕೊಳ್ಳುವುದು ಉಡುಪಿ ಜಿಲ್ಲೆಯಲ್ಲಿ ಕಂಡುಬರುತ್ತದೆ. ಶಿಕ್ಷಣ ಪಡೆದಿದ್ದರೂ ಮೊಗವೀರ ಯುವಕ ಯುವತಿಯರು ವ್ಯಾಪಾರದತ್ತ ಒಲವು ತೋರಿಸಿದ್ದಾರೆ. ಮಲ್ಪೆ, ಉದ್ಯಾವರ, ಬೆಂಗ್ರೆ, ಇತ್ಯಾದಿ ಪ್ರದೇಶಗಳಲ್ಲೂ ಮೀನುಗಾರಿಕೆಯತ್ತ ಯುವ ಜನತೆಯನ್ನು ಆಕರ್ಷಿಸುವ ಅಂಶಗಳು ಹೆಚ್ಚಾಗಿವೆ. ಉನ್ನತ ಶಿಕ್ಷಣವು ಹುಡುಗಿಯರನ್ನು ಮನೆಕೆಲಸದಿಂದ ವಿಮುಖರನ್ನಾಗಿಸುತ್ತಿದೆ. ಅಂದರೆ ವಿವಾಹದ ನಂತರ ಗಂಡನ ಮನೆಯಲ್ಲಿ ಗಂಡ ಹಾಗೂ ಮಕ್ಕಳ ಲಾಲನೆ, ಪಾಲನೆ ಇತ್ಯಾದಿಗಳಿಗೆ ಉನ್ನತ ಶಿಕ್ಷಣವು ಅಡ್ಡಿಪಡಿಸುವುದು. ಆದುದರಿಂದ ಅವರಿಗೆ ಶಿಕ್ಷಣಕ್ಕಿಂತ ಗೃಹಕೃತ್ಯದ ಅರಿವೇ ಮುಖ್ಯ ಎನ್ನುತ್ತಾರೆ.

ಜೀವನ ನಿರ್ವಹಣೆಗೆ ಮೀನುಗಾರಿಕೆ ಇದೆ ಎಂಬ ಭಾವನೆ ವಿದ್ಯೆಯನ್ನು ಪಡೆಯುವಲ್ಲಿ ಹಿಂದೇಟು ಹಾಕುವಂತೆ ಯುವ ಸಮುದಾಯದವರನ್ನು ಪ್ರೇರೇಪಿಸುತ್ತಿದೆ. ಸರಕಾರಿ ಉದ್ಯೋಗ ಪಡೆದವರು ಪಂಚಾಯತ್ ಕಾರ್ಯದರ್ಶಿ, ಪ್ರಥಮ ದರ್ಜೆ, ದ್ವಿತೀಯ ದರ್ಜೆ ಸಹಾಯಕಿಯರಾಗಿ, ಬ್ಯಾಂಕ್ ಗುಮಾಸ್ತೆ, ಶುಶ್ರೂಷಿಕಿ ಹಾಗೂ ಶಿಕ್ಷಕಿಯರಾಗಿ ನೇಮಕಗೊಂಡಿದ್ದಾರೆ. ಮೇಲ್ಮಟ್ಟದ ಹುದ್ದೆಗಳಲ್ಲಿ ಮೊಗವೀರ ಮಹಿಳೆಯರ ಸಂಖ್ಯೆ ಕಡಿಮೆ. ಆದಾಯದ ಕುರಿತಾದ ಆಸಕ್ತಿ ಎಲ್ಲಾ ಮಹಿಳೆಯಲ್ಲಿಯೂ ಇದ್ದರೂ ಸರಕಾರಿ ಕೆಲಸದ ಬೆನ್ನಟ್ಟಿದವರು ಕಡಿಮೆ.

ಸ್ವ-ಸಹಾಯ ಸಂಘಗಳಲ್ಲಿ ಅಧಿಕ ಮಂದಿ ಸದಸ್ಯರಾಗಿದ್ದು ಶೇಕಡಾ ೩೮.೭೫ ಮಂದಿಗೆ ಕೌಟುಂಬಿಕ ಹಾಗೂ ವೈಯಕ್ತಿಕ ಒತ್ತಡಗಳಿಂದಾಗಿ ಇಷ್ಟಪಿದ್ದರೂ ಸದಸ್ಯರಾಗುವುದು ಕಷ್ಟವಾಗಿದೆ. ಸ್ವಸಹಾಯ ಸಂಘಗಳು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣಕ್ಕೆ ಅಧ್ಯಯನ ಪ್ರದೇಶದಲ್ಲಿ ಸಹಕರಿಸಿವೆ. ಸರಕಾರದ ಸಬ್ಸಿಡಿ ಯೋಜನೆಯಡಿಯಲ್ಲಿ ಸಿಗುವ ಸಾಲಗಳನ್ನು ಹತ್ತಾರು ಮಂದಿ ಮೊಗವೀರ ಮಹಿಳೆಯರು ಬಳಸಿಕೊಂಡವರಿದ್ದಾರೆ. ಜೊತೆಗೆ ಸ್ವಸಹಾಯ ಸಂಘಗಳ ಮುಂಗಡವನ್ನು ಪಡೆದವರ ಸಂಖ್ಯೆ ಗುರುತರವಾಗಿದೆ.

ಮೊಗವೀರರ ವಿವಾಹ ಪದ್ಧತಿಯನ್ನು ಗಮನಿಸಿದಾಗ ವಿಧಿ ವಿಧಾನಗಳಿಂದ ನಡೆಯುವ ವಿವಾಹ ಪದ್ಧತಿಯು ಕಾಲ ಕಳೆದಂತೆ ಬದಲಾವಣೆಯಾಗಿ ಸರಳ ರೀತಿಯಾದ ವಿವಾಹ ಪದ್ಧತಿಯು ಜಾರಿಗೆ ಬಂದಿರುವುದು ಕಂಡುಬರುತ್ತದೆ. ವಿವಾಹಕ್ಕೆ ಸಂಬಂಧಪಟ್ಟ ಹಾಗೆ ವಧು-ವರರನ್ನು ಕುಟುಂಬದ ಹಿರಿಯರೇ ಆಯ್ಕೆ ಮಾಡುತ್ತಿದ್ದರು. ಅಂತರ್‌ಜಾತಿ, ಅಂತರ್ ಧರ್ಮೀಯ ವಿವಾಹಗಳಿಗೆ ಊರಿನ ಹಿರಿಯ ಮುಖಂಡರು ಹಾಜರಾಗುತ್ತಿರಲಿಲ್ಲ. ಊರಿನ ಹಿರಿಯರ ಅನುಪಸ್ಥಿತಿಯಲ್ಲಿ ಯಾವುದೇ ರೀತಿಯಾದ ಸಂಸ್ಕಾರಗಳು ನಡೆಯುತ್ತಿರಲಿಲ್ಲ. ಆದರೆ ಸಾಮಾಜಿಕ ಪರಿವರ್ತನೆಯ ಅಂಶವಾಗಿ ಇಂತಹ ವಿವಾಹಗಳನ್ನು ಸಮ್ಮತಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಪಾಶ್ಚಾತ್ಯೀಕರಣವು ಮೊಗವೀರರನ್ನು ಆಕರ್ಷಿಸಿದ್ದು, ಪಾಶ್ಚಾತ್ಯೀಕರಣದ ವಿವಿಧ ಮುಖಗಳಾದ ಉಡುಗೆ, ಭಾಷೆ, ಜೀವನ ಶೈಲಿ ಮತ್ತು ಸ್ಥಳೀಯ ಸಂಸ್ಕೃತಿಯ ಬಗ್ಗೆ ಮೊಗವೀರ ಮಹಿಳೆಯರಿಗಿರುವ ಧೋರಣೆ ವಿಭಿನ್ನವಾಗಿದೆ. ಆಧುನೀಕರಣದ ಮುಖವಾಗಿ ಯುವ ಜನರು ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸ್‌ಅಪ್ ಇತ್ಯಾದಿಗಳನ್ನು ಉಪಯೋಗಿಸುವುದರಿಂದ ಸ್ಥಳೀಯ ಸಂಸ್ಕೃತಿಯಿಂದ ಅವರು ದೂರವಾಗುವಂತೆ ಮಾಡಿದೆ. ಆದುದರಿಂದ ಆಧುನೀಕರಣವೂ ಪಾಶ್ಚಾತ್ಯೀಕರಣದಷ್ಟೇ ತೀವ್ರವಾದ ಶಾಪವೆನ್ನುತ್ತಾರೆ ಹಿರಿಯ ವಯಸ್ಸಿನ ಮಾಹಿತಿದಾರರು. ಬಹುಶಃ ಉಡುಪಿ ಜಿಲ್ಲೆಯಲ್ಲಿ ಜಾತಿಯ ಪ್ರಜ್ಞೆ ಹೆಚ್ಚಾಗಿದ್ದು, ಸಸ್ಯಹಾರಿ-ಮಾಂಸಹಾರಿಗಳ ಮಧ್ಯೆ ಅಂತರ ಕಂಡು ಬರುತ್ತದೆ. ಹಾಗೂ ಇಲ್ಲಿನ ಸಂಪ್ರದಾಯಸ್ಥ ಬ್ರಾಹ್ಮಣರು ಶೂದ್ರರನ್ನು ಹತ್ತಿರ ಸೇರಿಸಿಕೊಳ್ಳುವುದು ಎಂದರೆ ಮನೆಯೊಳಗೆ ಬೆರೆಸಿಕೊಳ್ಳುವುದು ಕಡಿಮೆ. ಇದರಿಂದಾಗಿ ಜಾತಿ ಪ್ರಜ್ಞೆ, ಅಂತರ ಇತ್ಯಾದಿಗಳು ಈ ಪರಿಸರದಲ್ಲಿ ಅಸ್ತಿತ್ವ ಹೊಂದಿವೆ.

ಮಹಿಳಾ ಮೀನುಗಾರಿಕೆ ಚಟುವಟಿಕೆಯು ಒಂದು ವೃತ್ತಿಯಾಗಿ ಪರಿಗಣಿಸಿದಾಗ ಭಾರತದ ಅಭಿವೃದ್ಧಿಯಲ್ಲಿ ಯಾವುದೇ ಹೊಳೆಯುವ ಪಾತ್ರವಾಗಿ ಗೋಚರಿಸುತ್ತಿಲ್ಲ. ಈ ಕಸುಬಿನಲ್ಲಿರುವವರಿಗೆ ಅವರ ಜೀವನ ಶೈಲಿಯಲ್ಲಿ ಬದಲಾವಣೆಯ ಅಗತ್ಯತೆ ಕಂಡು ಬರುತ್ತದೆ. ಶೋಷಣೆಯಿಂದ ರಕ್ಷಣೆ ನೀಡಬೇಕಾದ ಅಗತ್ಯತೆ ಇದೆ. ಮೀನುಗಾರಿಕಾ ಸಮುದಾಯವು ತುಳಿತಕ್ಕೆ ಒಳಗಾದ ಸಮುದಾಯವಾಗಿದ್ದು ಅದರಲ್ಲೂ ಮಹಿಳೆಯರ ಜೀವನ ಅತೀ ಕೆಳಮಟ್ಟದಲ್ಲಿದೆ. ಯಾವುದೇ ಮೂಲದ ಸಂಘಟನೆ ಹಾಗೂ ಕಾರ್ಮಿಕ ಕಾನೂನುಗಳು ಶೋಷಣೆಯಿಂದ ರಕ್ಷಣೆ ನೀಡುವಲ್ಲಿ ಅಷ್ಟೊಂದು ಸಮರ್ಥವಾಗಿಲ್ಲ. ಏಕೆಂದರೆ ಮೀನುಗಾರಿಕೆ ಅನೌಪಚಾರಿಕ ವಲಯದ ಉದ್ಯಮವಾಗಿದೆ.

ಅಭಿವೃದ್ಧಿಯ ಮಾಪನವನ್ನು ಕೇವಲ ಯಾಂತ್ರಿಕತೆ ಹಾಗೂ ಸಲಕರಣೆಗಳನ್ನಾಧರಿಸಿಯೇ ಮಾಡಲಾಗುತ್ತಿದೆ. ಹೊರತಾಗಿ ಸಮುದಾಯದವರ ಜೀವನವನ್ನಲ್ಲ.

ಮೀನುಗಾರಿಕೆಯು ಅಧಿಕ ಸಂಖ್ಯೆಯಲ್ಲಿ ಮಹಿಳೆಯರನ್ನು ಒಳಗೊಂಡಿರುವುದರಿಂದಾಗಿ ಸಾಮಾಜಿಕ, ಸಾಂಸ್ಥಿಕ ಹಾಗೂ ಆರ್ಥಿಕ ಸಂಘಟನೆಗಳು ಮಹಿಳಾ ಮೀನುಗಾರಿಕೆಯನ್ನು ಗಂಭೀರವಾಗಿ ಪರಿಗಣಿಸಿದಾಗ ಮಾತ್ರ ಮೊಗವೀರ ಸಮುದಾಯದ ಮಹಿಳಾ ಸಬಲೀಕರಣ ಸುಲಭ ಸಾಧ್ಯ. ಮಹಿಳೆಯು ಮೀನು ಮಾರಾಟದ ಜೊತೆ ಕೌಟುಂಬಿಕ ಜವಾಬ್ದಾರಿಯನ್ನು ಹೊರಬೇಕಾಗಿದೆ. ಕೆಲವೊಂದು ಸಂದರ್ಭದಲ್ಲಿ ಆಕೆ ಮಾರಾಟಕ್ಕೆ ಖರೀದಿಸಿದ ಮೀನನ್ನು ಮಾರಾಟವಾಗದೇ ಮನೆಗೆ ವಾಪಾಸು ತರುವ ಪ್ರಸಂಗದಲ್ಲಿ ಆಕೆ ದಿನನಿತ್ಯ ಮಾಡುವ ಕೆಲಸಕ್ಕೆ ಹೆಚ್ಚುವರಿಯಾಗಿ ಮರಳಿ ತಂದ ಮೀನನ್ನು ಶುಚಿಗೊಳಿಸಿ, ಉಪ್ಪು ಹಾಕಿ ಒಣಗಿಸುವ ಕಾರ್ಯಕ್ಕೆ ಪೂರಕವಾಗಿ ಸಜ್ಜುಗೊಳಿಸುವ ಕ್ರಿಯೆಯು ಆಕೆಯನ್ನು ಇನ್ನಷ್ಟು ದೈಹಿಕವಾಗಿ ಹಾಗೂ ಮಾನಸಿಕವಾಗಿ ಜರ್ಜರಿತಗೊಳಿಸುತ್ತದೆ. ಮೀನು ಮಾರಾಟಕ್ಕೆ ಸಂಬಂಧಿಸಿದಂತೆ ಮಹಿಳೆಯರು ಶೇಕಡಾ ೮೦ರಷ್ಟು ಸಾಗಾಣಿಕೆ ತೊಂದರೆಯನ್ನು ಅನುಭವಿಸುತ್ತಾರೆ. ಅದಕ್ಕಾಗಿ ಪ್ರತ್ಯೇಕವಾಗಿ ದುಬಾರಿ ವೆಚ್ಚ ಪಾವತಿಸಿ ಮಾರುಕಟ್ಟೆಗೆ ತೆರಳುವ ಸನ್ನಿವೇಶವೂ ಮೀನುಗಾರ ಮಹಿಳೆಯರ ದುಡಿಮೆಯ ಲಾಭವನ್ನು ಕುಂಠಿತಗೊಳಿಸಿ ಹೆಚ್ಚು ಉಳಿತಾಯ ಮಾಡದಂತೆ ತಡೆದು ಆರ್ಥಿಕವಾಗಿ ಇದ್ದದರಲ್ಲಿಯೇ ಇಡುತ್ತದೆ. ಮೀನುಗಾರ ಮಹಿಳೆಯರ ಆರ್ಥಿಕ ಸಬಲತೆಯನ್ನು ತರುವಲ್ಲಿ ಇದು ಕೆಡುಕು ಮಾಡುತ್ತದೆ.

ಮೀನುಗಾರಿಕಾ ವೃತ್ತಿಯಲ್ಲಿರುವ ಮೊಗವೀರ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಅದರಲ್ಲಿ ಮುಖ್ಯವಾಗಿ ಶುಚಿತ್ವದ ಸಮಸ್ಯೆ, ಮಾರುಕಟ್ಟೆಯ ಸುತ್ತಮುತ್ತ ನೀರು ಸ್ಥಗಿತ, ವಾಸನೆ, ಶೌಚಾಲಯ ವ್ಯವಸ್ಥೆ ಇಲ್ಲದಿರುವುದು, ಮಹಿಳಾ ವಿಶ್ರಾಂತಿ ಕೊಠಡಿಯ ಕೊರತೆ, ಶುದ್ಧ ಕುಡಿಯುವ ನೀರು ಇಲ್ಲದೇ ಇರುವುದು, ಐಸ್‌ಬಾಕ್ಸ್, ಟೇಬಲ್ ವ್ಯವಸ್ಥೆಯ ಕೊರತೆ, ಅಷ್ಟೇ ಅಲ್ಲದೇ ಗೂಂಡಾಗಳ ಹಫ್ತಾ ವಸೂಲಿಯ ಸಮಸ್ಯೆ, ಬಂದರುಗಳಲ್ಲಿ ಕೆಲಸ ಮಾಡುವ ಮಹಿಳೆ ದಿನದ ಅತ್ಯಧಿಕ ಸಮಯ ಸೂರ್ಯನ ಕಿರಣಕ್ಕೆ ಮೈ ಒಡ್ಡುವ ಕಾರಣ ಅತೀ ಬೆವರಿಕೆಯಿಂದಾಗಿ ನಿರ್ಜಲೀಕರಣದಂತಹ ಆರೋಗ್ಯದ ಸಮಸ್ಯೆ, ಮಹಿಳೆಯು ನಿರ್ವಹಿಸುವ ಮೀನುಗಾರಿಕೆಯು ಎರಡನೇ ದರ್ಜೆಯ ಗೌರವದ ಪಾತ್ರ ಹಾಗೂ ಆರ್ಥಿಕ ಹಾಗೂ ಸಾಮಾಜಿಕವಾಗಿ ಕಡಿಮೆ ಪ್ರಾಶಸ್ತ್ಯ ಇವೆಲ್ಲವೂ ಕಂಡುಬರುತ್ತದೆ. ಮೀನುಗಾರಿಕೆಯಲ್ಲಿ ಮಧ್ಯವರ್ತಿಗಳ ಹಾವಳಿ, ಬಲವಂತದ ದುಡಿಮೆ, ಕಡಿಮೆ ವೇತನ, ಪೂರಕ ಉದ್ಯೋಗಕ್ಕೆ ತರಬೇತಿ ಇಲ್ಲದೇ ಇರುವುದು ಮಹಿಳೆಯರನ್ನು ಬಡತನದ ಸರಹದ್ದಿನಲ್ಲಿಯೇ ಇರುವಂತೆ ಮಾಡುತ್ತದೆ. ಅದರಲ್ಲೂ ಕಡಿಮೆ ಶಿಕ್ಷಣ ಹೊಂದಿರುವ ಮಹಿಳೆಯರು ಪರ್ಯಾಯದ ಕಲ್ಪನೆಯಿಲ್ಲದ ಕಾರಣ ಈ ಶೋಷಣೆಯನ್ನೇ ಒಪ್ಪಿಕೊಂಡು ಮುಂದುವರೆಯುತ್ತಿರುವುದು ಮಹಿಳಾ ಸಬಲೀಕರಣಕ್ಕೆ ದೊಡ್ಡ ಸವಾಲಾಗಿದೆ.

ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಯು ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದನ್ನು ಗಮನಿಸಬಹುದಾಗಿದೆ. ಪ್ರತ್ಯಕ್ಷ ಮತ್ತು ಪರೋಕ್ಷ ರಾಜಕೀಯ ಪಾಲುಗಾರಿಕೆ ಮೊಗವೀರರಲ್ಲಿ ಕಂಡು

ಬರುತ್ತದೆ. ಸಮುದಾಯದ ಪುರುಷರು ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿಯೂ ಹಲವು ವರ್ಷಗಳಿಂದ ಆಡಳಿತ ನಡೆಸಿದ್ದು ಮಹಿಳೆಯರ ಪ್ರಾತಿನಿಧ್ಯ ಬಹಳಷ್ಟು ಕಡಿಮೆಯಿದೆ. ಸ್ವ ಸಹಾಯ ಸಂಘಗಳಲ್ಲಿ ಮಹಿಳೆಯರ ಸದಸ್ಯತ್ವ ಹೆಚ್ಚಾಗಿದೆ.

ಉಡುಪಿ ವಿಧಾನಸಭಾ ಕ್ಷೇತ್ರಗಳಾದ ಬೈಂದೂರು, ಕುಂದಾಪುರ, ಉಡುಪಿ, ಕಾಪು, ಕಾರ್ಕಳ. ಈ ೫ ಕ್ಷೇತ್ರಗಳಲ್ಲಿ ೧೯೫೭ ರಿಂದ ೨೦೧೪ ಕುಂದಾಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದವರ ಅಂಕಿ ಅಂಶಗಳನ್ನು ಗಮನಿಸಿದಾಗ ವಿನ್ನಿಫ್ರೆಡ್ ಫರ್ನಾಂಡಿಸ್ ಅವರು ೧೯೬೭ ಹಾಗೂ ೧೯೭೨ರಲ್ಲಿ ೨ ಬಾರಿ ಗೆಲುವನ್ನು ಪಡೆದವರು, ಅವರ ಹೊರತಾಗಿ ಉಡುಪಿ ವಿಧಾನಸಭಾ ಕ್ಷೇತ್ರದದಲ್ಲಿ ಮನೋರಮಾ ಮಧ್ವರಾಜ್‌ರವರು ಅತೀ ಹೆಚ್ಚು ಬಾರಿ ಅಂದರೆ ಒಟ್ಟು ನಾಲ್ಕು ಬಾರಿ ೧೯೭೨, ೧೯೭೮, ೧೯೮೫ ಹಾಗೂ ೧೯೮೯ರಲ್ಲಿ ಗೆಲುವನ್ನು ಪಡೆದ ಮೊಗವೀರ ಸಮುದಾಯಕ್ಕೆ ಸೇರಿದ ಏಕೈಕ ಮಹಿಳೆಯಾಗಿದ್ದಾರೆ. ಮನೋರಮಾ ಮಧ್ವರಾಜ್‌ರವರು ಇಡೀ ಉಡುಪಿ ಸಭಾ ಕ್ಷೇತ್ರದಲ್ಲಿ ವಿಜಯಿಯಾಗಿರುವ ಕೇವಲ ಎರಡು ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದು, ಅತೀ ಹೆಚ್ಚು ಬಾರಿ ವಿಧಾನಸಭೆಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಯಾಗಿರುವುದು ಮೊಗವೀರ ಮಹಿಳೆಯರ ಸಾಧನೆಗೆ ಸಾಕ್ಷಿಯಾಗಿದ್ದರೂ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬುದು ಸತ್ಯ.

ರಾಜಕೀಯವಾಗಿ ಮೊಗವೀರ ಮಹಿಳೆಯರು ಸಾಧನೆಗೈದಿರುವುದು ಬಹಳಷ್ಟು ಕಡಿಮೆ. ಮೊಗವೀರ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರೂ ಗಣನೀಯ ಪ್ರಮಾಣದಲ್ಲಿ ಅವರ ತೊಡಗಿಸಿಕೊಳ್ಳುವಿಕೆ ಕಂಡುಬರುತ್ತಿಲ್ಲ. ಮೊಗವೀರ ಮಹಿಳೆಯರು ರಾಜಕೀಯದಲ್ಲಿ ತೊಡಗಿಸಿಕೊಳ್ಳುವಿಕೆಯಲ್ಲಿ ಹಿಂದುಳಿಯುವಲ್ಲಿ ಕೆಲವು ನಿರ್ದಿಷ್ಟ ಕಾರಣಗಳನ್ನು ಗುರುತಿಸಬಹುದಾಗಿದೆ. ಬಹಳಷ್ಟು ಮೊಗವೀರ ಮಹಿಳೆಯರು ರಾಜಕೀಯದಲ್ಲಿ ತೊಡಗುವುದನ್ನು ಕುಟುಂಬದಲ್ಲಿ ನಕಾರತ್ಮಕವಾಗಿ ಪರಿಗಣಿಸುತ್ತಾರೆ. ರಾಜಕೀಯದಿಂದ ಸಿಗುವಂತಹ ಪ್ರಯೋಜನಗಳನ್ನು ಅವರು ಅಷ್ಟಾಗಿ ಗಮನಿಸಿದಂತೆ ಕಂಡುಬರುವುದಿಲ್ಲ.

ಮೊಗವೀರರು ಉಡುಪಿ ಜಿಲ್ಲೆಯಲ್ಲಿರುವ ಎಲ್ಲ ಸಮುದಾಯದವರಿಗೂ ಬೇಕಾದ ಸಮುದಾಯದ ಜನರಾಗಿದ್ದಾರೆ. ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಯಾವುದೇ ಭಿನ್ನತೆಗಳಿಲ್ಲದೆ ಎಲ್ಲ ವರ್ಗದ ಮತ್ತು ಎಲ್ಲ ಜಾತಿಯ ಜನರೂ ಒಟ್ಟು ಸೇರುವುದನ್ನು ಸಾಮಾನ್ಯವಾಗಿ ಅವಲೋಕಿಸಬಹುದಾಗಿದೆ. ಮೊಗವೀರರು ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ನಗರ ಸಭೆಗಳಲ್ಲಿ ಜಾತಿ ತಾರತಮ್ಯವಿಲ್ಲ. ಆದರೆ ರಾಜಕೀಯ ಪಕ್ಷ ಭೇದಗಳು ತೀವ್ರವಾಗಿವೆ ಎಂಬ ಅಭಿಪ್ರಾಯ ಈ ಸಮುದಾಯದಲ್ಲಿದೆ. ಮೊಗವೀರ ಮಹಿಳೆಯರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಯನ್ನು ಅವಲೋಕಿಸಿದಾಗ ಮಾಡಿರುವ ಸಾಧನೆಯು ಅಷ್ಟೊಂದು ತೃಪ್ತಿದಾಯಕವಾಗಿ ಗೋಚರಿಸುವುದಿಲ್ಲ. ಅದರಲ್ಲೂ ರಾಜಕೀಯ ಸಾಧನೆಯು ಅತ್ಯಲ್ಪವಾಗಿದೆ. ಈ ಸಮುದಾಯದ ಮಹಿಳೆಯರ

ಸಬಲೀಕರಣ ವನ್ನು ಸಾಧಿಸುವಲ್ಲಿ ಸಮಾಜದ, ಸಂಘ ಸಂಸ್ಥೆಗಳ ಸಾಂಘಿಕ ಪ್ರಯತ್ನದ ಅಗತ್ಯತೆ ಕಂಡು ಬರುತ್ತದೆ. ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣವನ್ನು ಸಾಕಾರಗೊಳಿಸುವಲ್ಲಿ ಅವರ ಕುಟುಂಬದ ಸದಸ್ಯರ, ಸಮಾಜ, ಸರ್ಕಾರಗಳು ಹಾಗೂ ಸಂಘ ಸಂಸ್ಥೆಗಳು ಜಂಟಿಯಾಗಿ ಶ್ರಮಿಸುವ ಅಗತ್ಯತೆ ಇದೆ. ಕುಟುಂಬದೊಳಗೆ ಮಹಿಳೆಗೆ ಸೂಕ್ತ ಪ್ರೋತ್ಸಾಹ ಸಹಕಾರ ಸಿಗದಿದ್ದಲ್ಲಿ ಅವರ ಸಾಮಾಜಿಕ ರಾಜಕೀಯ ಅಭಿವೃದ್ಧಿ ಕಷ್ಟಸಾಧ್ಯ.

ಅಧ್ಯಯನದ ಫಲಿತಗಳು

ಅಧ್ಯಯನದ ಫಲಿತಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

- ಮೊಗವೀರ ಮಹಿಳೆಯರ ಶೈಕ್ಷಣಿಕ ಅಭಿವೃದ್ಧಿ ತೃಪ್ತಿಕರವಾಗಿ ಕಂಡುಬರುತ್ತಿಲ್ಲ. ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ಮಾಹಿತಿದಾರರ ಪ್ರಮಾಣ (ಶೇಕಡಾ ೯) ಕಡಿಮೆ ಇದೆ. ಬಡತನದ ಕಾರಣದಿಂದಾಗಿ ಶಿಕ್ಷಣವನ್ನು ಮೊಟಕುಗೊಳಿಸಿದವರ ಪ್ರಮಾಣ ಶೇಕಡಾ ೨೨ರಷ್ಟಿದೆ.
- ಮೊಗವೀರ ಸಮುದಾಯದ ಕುಟುಂಬದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯಿದ್ದು, ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ಪುರುಷರು(ತಂದೆ) ತೆಗೆದುಕೊಳ್ಳುವುದು ಕಂಡು ಬಂದಿದೆ (ಶೇಕಡಾ ೫೪.೫).
- ೨೦೧೭-೧೮ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯ ಮೊಗವೀರ ಸಮುದಾಯದ ೧೦೧೪ ವಿದ್ಯಾರ್ಥಿನಿಯರು ಪ್ರೌಢಶಾಲೆ ಹಂತದಲ್ಲಿ, ೭೨೪ ವಿದ್ಯಾರ್ಥಿನಿಯರು ಪದವಿಪೂರ್ವ ಹಂತದಲ್ಲಿ ಹಾಗೂ ೩೫೩ ವಿದ್ಯಾರ್ಥಿನಿಯರು ಪದವಿ ಹಂತದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.
- ಅಧಿಕ ಸಂಖ್ಯೆಯ ಮೊಗವೀರ ಮಹಿಳೆಯರಲ್ಲಿ (ಶೇಕಡಾ ೭೪) ಶಿಕ್ಷಣವು ಅವರ ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರಿದೆ. ೫೫ ಶೇಕಡಾ ಮಾಹಿತಿದಾರರು ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅಗತ್ಯತೆ ಇದೆ ಎಂಬುದನ್ನು ತಿಳಿಸಿರುವುದು ಶಿಕ್ಷಣದಿಂದಾಗಿ ಅವರ ಸಾಮಾಜಿಕ ಹಾಗೂ ಅರ್ಥಿಕ ಸ್ಥಿತಿಗತಿಗಳು ಉತ್ತಮವಾಗಿರುವುದನ್ನು ಸೂಚಿಸುತ್ತದೆ.
- ಮಾಹಿತಿದಾರರಲ್ಲಿ ೮೧.೨೫ ಶೇಕಡಾ ಮಹಿಳೆಯರ ಹಿರಿಯ ತಲೆಮಾರಿನ ಸ್ತ್ರೀಯರು ಸುಶಿಕ್ಷಿತರಾಗಿಲ್ಲ. ಈ ಸಮುದಾಯದ ಹೆಚ್ಚಿನ ಪದವೀಧರ ಮಾಹಿತಿದಾರರು ಮೊದಲ ತಲೆಮಾರಿನ ಪದವೀಧರರಾಗಿದ್ದಾರೆ.
- ಮೊಗವೀರ ಮಹಿಳಾ ಮಾಹಿತಿದಾರರಲ್ಲಿ ಶೇಕಡಾ ೯೧ ವಿಭಕ್ತ ಕುಟುಂಬವನ್ನು ಹೊಂದಿದವರು. ಅವರಲ್ಲಿ ಶೇಕಡಾ ೫೦ ಕ್ಕಿಂತ ಹೆಚ್ಚು ವಿವಾಹಿತ ಮಾಹಿತಿದಾರರು ೪ ಕ್ಕಿಂತ ಹೆಚ್ಚಿನ ಸಂಖ್ಯೆಯ ಮಕ್ಕಳನ್ನು ಹೊಂದಿದವರು.
- ಈ ಸಮುದಾಯದಲ್ಲಿ ಗರಿಷ್ಠ ಪ್ರಮಾಣದ ವಿವಾಹಗಳು (ಶೇಕಡಾ ೭೩) ಹಿರಿಯರು ನಿರ್ಣಯಿಸಿದ ರೀತಿಯಲ್ಲಿ ನಡೆಯುತ್ತದೆ. ಶೇಕಡಾ ೧೯.೫ರಷ್ಟು ಪ್ರೇಮ ವಿವಾಹ ಹಾಗು ಶೇಕಡಾ ೩.೫ ಅಂತರ್‌ಜಾತಿ ವಿವಾಹಗಳು ಕಂಡುಬರುತ್ತವೆ.

- ವಿವಾಹದಲ್ಲಿ ಬರಿ/ಬಳಿಯನ್ನು ಪಾಲಿಸಿರುವವರ ಸಂಖ್ಯೆ ಅಧಿಕವಾಗಿದ್ದು, (ಶೇಕಡಾ ೭೩) ವರದಕ್ಷಿಣೆ ನೀಡಿರುವ ಪ್ರಮಾಣವು ಕೂಡಾ ಗಮನಾರ್ಹವಾಗಿದೆ. (ಶೇಕಡಾ ೬೦) ವಿಧವಾ ವಿವಾಹಕ್ಕೆ ಈ ಸಮುದಾಯದಲ್ಲಿ ಮನ್ನಣೆಯಿದೆ.
- ಮೊಗವೀರ ಮಹಿಳೆಯರು ಇತರ ಸಮುದಾಯಗಳೊಂದಿಗೆ ಬೆರೆಯುವಿಕೆ ಚೆನ್ನಾಗಿದ್ದು (ಶೇಕಡಾ ೫೦.೫) ಅವರ ವ್ಯಾಪಾರದ ದೃಷ್ಟಿಯಲ್ಲಿ ಇದು ಅನಿವಾರ್ಯವಾಗಿದೆ.
- ಮೊಗವೀರ ಮಹಿಳೆಯರಿಗೆ ಹಾಗೂ ಇತರ ಸಮುದಾಯದ ಮಹಿಳೆಯರಿಗೆ ಸಾಮಾಜಿಕ ಸಮಾನತೆ ಇಲ್ಲದಿರುವ ಅಂಶವು (ಶೇಕಡಾ ೬೩.೨೫) ಅಧ್ಯಯನದಲ್ಲಿ ಕಂಡು ಬರುತ್ತದೆ. ಮಾಹಿತಿದಾರರ ಆರ್ಥಿಕ ಸ್ಥಿತಿಗತಿಗಳು ಇತರ ಸಮುದಾಯದ ಮಹಿಳೆಯರಿಗೆ ಹೋಲಿಸಿದಾಗ ಸಮಾನತೆಯಿಂದ ಕೂಡಿಲ್ಲ. (ಶೇಕಡಾ ೫೯.೫) ಸೂಚಿಸುತ್ತದೆ.
- ಜಾತಿ ಮೀಸಲಾತಿಯ ಅರಿವು ಕಡಿಮೆ ಸಂಖ್ಯೆಯ ಜನರಿಗಿದ್ದು (ಶೇಕಡಾ ೩೭.೭೫) ಅವರಲ್ಲಿ ಕೇವಲ ೧೬.೭೫ ಶೇಕಡಾ ಮಹಿಳೆಯರು ಮಾತ್ರ ಜಾತಿ ಮೀಸಲಾತಿಯನ್ನು ಬಳಸಿಕೊಂಡಿದ್ದಾರೆ. ಮಕ್ಕಳ ಶಿಕ್ಷಣದಲ್ಲಿ ಪ್ರವೇಶ ಹಾಗೂ ಶುಲ್ಕ ವಿನಾಯಿತಿ ಪಡೆಯುವಲ್ಲಿ ಗರಿಷ್ಠ ಜಾತಿ ಮೀಸಲಾತಿಯನ್ನು ಬಳಸಿಕೊಂಡಿದ್ದಾರೆ.
- ಮೊಗವೀರ ಮಹಿಳೆಯರಿಗೆ ಅವರ ಕುಟುಂಬದಲ್ಲಿ ಸಮಾನ ಸ್ಥಾನಮಾನ ಪ್ರಮಾಣ ಶೇಕಡಾ ೩೦ ರಷ್ಟಿದೆ. ಮಾಹಿತಿದಾರರ ಜೀವನ ಕ್ರಮದ ಮೇಲೆ ಆಧುನೀಕರಣದ ಪ್ರಭಾವ ಶೇಕಡಾ ೮೯ ರಷ್ಟು ಕಂಡುಬರುತ್ತಿದೆ.
- ಮೊಗವೀರ ಮಹಿಳೆಯರಿಗೆ ಮೀನುಗಾರಿಕೆಯು ಪ್ರಧಾನವಾದ ಉದ್ಯೋಗವಾಗಿದೆ. (ಶೇಕಡಾ ೫೯.೭೫) ಕನಿಷ್ಠ ಸಂಖ್ಯೆಯ ಮೊಗವೀರ ಮಹಿಳೆಯರು ಸರಕಾರಿ ಉದ್ಯೋಗದಲ್ಲಿದ್ದಾರೆ. (ಶೇಕಡಾ ೫)
- ಗರಿಷ್ಠ ಸಂಖ್ಯೆಯ (ಶೇಕಡಾ ೭೧.೨೫) ಮಾಹಿತಿದಾರರ ಮಾಸಿಕ ಆದಾಯವು ಹತ್ತು ಸಾವಿರಗಳಿಗಿಂತ ಕಡಿಮೆ ಇದೆ. ಮೊಗವೀರ ಮಹಿಳೆಯರ ಆರ್ಥಿಕ ಸ್ಥಿತಿಗತಿ ಉತ್ತಮವಾಗಿಲ್ಲ ಎಂಬುದು ಇದರಿಂದ ಋಜುವಾತಾಗುತ್ತದೆ.
- ತಮ್ಮ ಆದಾಯದಲ್ಲಿ ಉಳಿತಾಯ ಮಾಡುವ ಪ್ರವೃತ್ತಿ ಈ ಸಮುದಾಯದ (ಶೇಕಡಾ ೭೬) ಮಹಿಳೆಯರಲ್ಲಿದೆ. ಅವರು ಸ್ವ-ಸಹಾಯ ಸಂಘ ಹಾಗೂ ಬ್ಯಾಂಕ್‌ಗಳಲ್ಲಿ ಉಳಿತಾಯ ಮಾಡಿದ್ದಾರೆ. ಶೇಕಡಾ ೫೮.೫ರಷ್ಟು ಮಾಹಿತಿದಾರರು ಕೌಟುಂಬಿಕ ಅವಶ್ಯಕತೆಗಳ ಪೂರೈಕೆಗಾಗಿ ಸಾಲವನ್ನು ವಿವಿಧ ಬ್ಯಾಂಕ್ ಹಾಗೂ ಸಂಘಗಳಲ್ಲಿ ಪಡೆದಿದ್ದಾರೆ.

- ತಮ್ಮ ಕುಲಕಸುಬಾದ ಮೀನುಗಾರಿಕೆಯನ್ನು ಹೊರತುಪಡಿಸಿ ಬೇರೆ ಉದ್ಯೋಗದ ಕಡೆಗೆ ಶೇಕಡಾ ೬೮ರಷ್ಟು ಮಾಹಿತಿದಾರರು ಸಮ್ಮತಿಸಿರುವುದು ಕಂಡುಬರುತ್ತದೆ. ಈ ಸಮ್ಮತಿಗೆ ಉದ್ಯೋಗದ ಅಭದ್ರತೆಯೇ ಪ್ರಮುಖ ಕಾರಣವಾಗಿದೆ. (ಶೇಕಡಾ ೨೮).
- ಗರಿಷ್ಠ ಸಂಖ್ಯೆಯ (ಶೇಕಡಾ ೬೧.೨೫) ಮಾಹಿತಿದಾರರು ಸ್ವ-ಸಹಾಯ ಸಂಘಗಳ ಸದಸ್ಯತ್ವ ಪಡೆದಿದ್ದಾರೆ. ಇದರಿಂದ ಅವರ ಸಾಮಾಜಿಕ, ಆರ್ಥಿಕ ಜೀವನದಲ್ಲಿ (ಶೇಕಡಾ ೬೧.೨೫) ಪ್ರಗತಿಯಾಗಿದೆ.
- ಪುರುಷರೊಂದಿಗೆ ಹೋಲಿಸಿದಾಗ ಶೇಕಡಾ ೬೫ ರಷ್ಟು ಮಾಹಿತಿದಾರರ ಸ್ಥಾನಮಾನ ಕೆಳಮಟ್ಟದಲ್ಲಿದೆ.
- ಮೊಗವೀರ ಸಮುದಾಯದ ಮಹಿಳೆಯರಲ್ಲಿ ಶೇಕಡಾ ೯೦ ರಷ್ಟು ಮಾಹಿತಿದಾರರು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ. ಶೇಕಡಾ ೨೫ ರಷ್ಟು ಮಂದಿ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಾರೆ. ಶೇಕಡಾ ೪೦.೭೫ ರಷ್ಟು ಮಾಹಿತಿದಾರರು ರಾಜಕೀಯ ಸಭೆಗಳಲ್ಲಿ ಭಾಗವಹಿಸಿದ್ದಾರೆ ಹಾಗೂ ಶೇಕಡಾ ೪೫ ರಷ್ಟು ಮಾಹಿತಿದಾರರು ರಾಜಕೀಯ ಮುಖಂಡರುಗಳೊಂದಿಗೆ ಸಂಪರ್ಕ ಹೊಂದಿದ್ದಾರೆ.
- ಅಧಿಕ ಸಂಖ್ಯೆಯ ಮಾಹಿತಿದಾರರು (ಶೇಕಡಾ ೯೦) ಸ್ವ-ಸಹಾಯ ಸಂಘ ಹಾಗೂ ವಿವಿಧ ಸಂಘಟನೆಗಳಲ್ಲಿ ಸದಸ್ಯರಾಗಿದ್ದಾರೆ. ಶೇಕಡಾ ೫೦.೫ ಮಾಹಿತಿದಾರರಿಗೆ ರಾಜಕೀಯ ಪಾಲ್ಗೊಳ್ಳುವಿಕೆಯ ಅಗತ್ಯತೆಯ ಅರಿವಿದೆ.
- ಉಡುಪಿ ಜಿಲ್ಲೆಯ ಶೇಕಡಾ ೪೦ ರಷ್ಟು ಮಾಹಿತಿದಾರರು ವಿವಿಧ ಕಾರಣಗಳಿಗಾಗಿ ಬೇಡಿಕೆಯಿಟ್ಟು ಮುಷ್ಕರಗಳಲ್ಲಿ ಭಾಗವಹಿಸಿದ್ದಾರೆ.
- ಮೊಗವೀರ ಮಹಿಳಾ ಮಾಹಿತಿದಾರರಿಗೆ (ಶೇಕಡಾ ೫೦.೫) ರಾಜಕೀಯ ಪಾಲ್ಗೊಳ್ಳುವಿಕೆಯ ಅಗತ್ಯತೆಯ ಅರಿವಿದೆ.
- ಮೊಗವೀರ ಮಹಿಳೆಯರಲ್ಲಿ ಶೇಕಡಾ ೩೭.೭೫ ರಷ್ಟು ಮಾಹಿತಿದಾರರು ರಾಜಕೀಯ ಹಿನ್ನೆಲೆಯುಳ್ಳ ಕುಟುಂಬದಿಂದ ಬಂದವರಾಗಿದ್ದು, ಅವರಲ್ಲಿ ಮಾಹಿತಿದಾರರ ಪತಿ, ತಂದೆ, ತಾಯಿ ಅಥವಾ ರಕ್ತ ಸಂಬಂಧಿಗಳು ರಾಜಕೀಯ ಸಂಪರ್ಕವನ್ನು ಹೊಂದಿರುವುದನ್ನು ಕಾಣಬಹುದು.
- ಮೊಗವೀರ ಕುಟುಂಬಗಳಲ್ಲಿ ಶೇಕಡಾ ೪೨.೨೫ ರಷ್ಟು ಮಾಹಿತಿದಾರರ ಕುಟುಂಬಗಳು ವಿವಿಧ ರೀತಿಯ ಸಮಾಜ ಸೇವಾ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಅವರಲ್ಲಿ ಹೆಚ್ಚಿನ ಕುಟುಂಬಗಳು ವಿದ್ಯಾರ್ಥಿಗಳಿಗೆ ಸಹಾಯಧನ, ಶಾಲೆಗಳಿಗೆ ಸಹಾಯಧನದಂತಹ ಶಿಕ್ಷಣ

ಪೂರಕ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿವೆ. ಈ ವಿಷಯವೂ ಮೊಗವೀರ ಸಮುದಾಯದಲ್ಲಿ ಶಿಕ್ಷಣದ ಪ್ರಗತಿಗೆ ನೀಡುತ್ತಿರುವ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ.

- ಮಾಹಿತಿದಾರರ ರಾಜಕೀಯ ಪಾಲ್ಗೊಳ್ಳುವಿಕೆಗೆ ಕುಟುಂಬದ ಅಸಹಕಾರ ಸವಾಲಾಗಿರುವುದು ಕಂಡುಬಂದಿದೆ.

- ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯತಿಗಳಿಗೆ ಆಯ್ಕೆಯಾದ ಮೊಗವೀರ ಮಹಿಳೆಯರಲ್ಲಿ ಹೆಚ್ಚುವರಿ (ಶೇಕಡಾ ೪.೧೦) ಮಾಹಿತಿದಾರರು ೩೧ ರಿಂದ ೪೦ ರ ವಯೋಮಾನದವರಾಗಿದ್ದಾರೆ. ಇದರಿಂದಾಗಿ ಈ ಮಹಿಳೆಯರಲ್ಲಿ ರಾಜಕೀಯದ ಅನುಭವದ ಕೊರತೆ ಇರುವ ಸಾಧ್ಯತೆ ಅಧಿಕವಾಗಿದೆ. ರಾಜಕೀಯ ಪ್ರವೇಶ ಪಡೆದಿರುವ ಹೆಚ್ಚಿನ ಮಹಿಳೆಯರು ಸ್ವ ಉದ್ಯೋಗ ಮಾಡುವವರು (ಶೇಕಡಾ ೪೨.೧೦) ಮತ್ತು ಗೃಹಕೃತ್ಯವನ್ನು (ಶೇಕಡಾ ೩೫.೫೦) ನಿಭಾಯಿಸುವವರು. ಮೀನುಗಾರಿಕಾ ವೃತ್ತಿಯಲ್ಲಿರುವ ಮಾಹಿತಿದಾರರು ಆಯ್ಕೆಗೊಂಡು ಸದಸ್ಯರಾಗಿರುವುದು ಕಡಿಮೆ ಇದೆ. (ಶೇಕಡ ೯.೨೦) ಮೀನುಗಾರಿಕಾ ವೃತ್ತಿಯಾಧಾರಿತ ಮಹಿಳೆಯರಿಗೆ ಸಮಯದ ಅಭಾವ ಇರುವುದು ಅವರ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿನ ಹಿನ್ನಡೆಗೆ ಕಾರಣವಾಗಿದೆ. ಅದೇ ರೀತಿ ಆಯ್ಕೆಗೊಂಡ ಮಹಿಳೆಯರ ಪತಿಯ ಉದ್ಯೋಗ ಗಮನಿಸಿದಾಗ ಸರಕಾರಿ ಸೇವೆಯಲ್ಲಿರುವ (ಶೇಕಡಾ ೬.೩೦) ರಷ್ಟು ಹಾಗೂ ಖಾಸಗಿ ಸೇವಾ ಕ್ಷೇತ್ರದಲ್ಲಿರುವವರ (ಶೇಕಡಾ ೨೨.೪೦) ಸಂಖ್ಯೆ ಅಧಿಕವಾಗಿದೆ. ಇಲ್ಲಿ ಸ್ಪಷ್ಟವಾಗುವ ವಿಚಾರವೆಂದರೆ ಕೃಷಿ, ಮೀನುಗಾರಿಕೆಯಂತಹ ಉದ್ಯೋದಲ್ಲಿರುವ ಪತಿಯನ್ನು ಹೊಂದಿರುವ ಮಾಹಿತಿದಾರರಿಗೆ ರಾಜಕೀಯ ಪಾಲ್ಗೊಳ್ಳುವಿಕೆಯ ಪ್ರೇರಣೆ ಸಿಗುತ್ತಿಲ್ಲ.

- ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಸಂಬಂಧಿಸಿದಂತೆ ಕುಟುಂಬದ ಪ್ರೇರಣೆ (ಶೇಕಡಾ ೬೫.೮೦), ಸ್ವಯಂ ಪ್ರೇರಣೆ (ಶೇಕಡಾ ೮೬.೮೦) ಹಾಗೂ ಅನಿರೀಕ್ಷಿತ ಬೆಳವಣಿಗೆಗಳು (ಶೇಕಡಾ ೫೦ರಷ್ಟು) ಮಹಿಳೆಯರಿಗೆ ಸಹಕಾರಿಯಾಗಿದೆ. ಇನ್ನುಳಿದಂತೆ ಮಹಿಳಾ ಮೀಸಲಾತಿಯಿಂದಾಗಿ (ಶೇಕಡಾ ೮.೯೦) ಹಾಗೂ ಕುಟುಂಬದ ರಾಜಕೀಯ ಹಿನ್ನೆಲೆಯಿಂದಾಗಿ (ಶೇಕಡಾ ೭೨.೪೦) ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಸ್ಪರ್ಧಿಸುವವಂತಾಗಿದೆ. ಈ ಮಾಹಿತಿಗಳನ್ನು ಗಮನಿಸುವಾಗ ಸ್ವಯಂ ಪ್ರೇರಣೆ, ಕುಟುಂಬದ ಪ್ರೇರಣೆ, ಜಾತಿ ಮೀಸಲಾತಿಯಂತಹ ಎಲ್ಲಾ ಅಂಶಗಳು ಮಾಹಿತಿದಾರರ ರಾಜಕೀಯ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹದಾಯಕವಾಗಿದೆ.

- ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಸ್ಪರ್ಧಿಸಿ ಆಯ್ಕೆಗೊಂಡಿರುವ ಮಹಿಳೆಯರಲ್ಲಿ ರಾಜಕೀಯ ಜೀವನದಿಂದಾಗಿ ಸಾಮಾಜಿಕ ಸ್ಥಾನಮಾನಗಳು ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿ ಬದಲಾವಣೆಗಳಾಗಿರುವುದು ಕಂಡುಬಂದಿದೆ. ಸಾಮಾಜಿಕವಾಗಿ ಆತ್ಮವಿಶ್ವಾಸದ ಹೆಚ್ಚಳ, (ಶೇಕಡಾ ೮೮.೨೦) ಕುಟುಂಬ ಮತ್ತು ಸಮಾಜದಲ್ಲಿ ಗೌರವ (ಶೇಕಡಾ ೮೬.೮೦) ಕೌಟುಂಬಿಕ

ಸಹಕಾರದಲ್ಲಿ ಹೆಚ್ಚಳ, (ಶೇಕಡಾ ೬೫.೮೦) ಸಮಾಜದ ಬಗ್ಗೆ ಅರಿವು, (ಶೇಕಡಾ ೭೭.೬೦) ಇತರರಿಗೆ ಪ್ರೇರಣೆ ನೀಡುವ ಸಾಮರ್ಥ್ಯ, (ಶೇಕಡಾ ೬೩.೨೦) ಸಂಘ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವಿಕೆಯ ಹೆಚ್ಚಳ, (ಶೇಕಡಾ ೯೦.೮೦) ಸಾಮಾಜಿಕ ಸಮಸ್ಯೆ ಪರಿಹರಿಸುವ ಶಕ್ತಿ (ಶೇಕಡಾ ೭೮.೯೦)ಯಂತಹ ಧನಾತ್ಮಕ ಬದಲಾವಣೆಗಳಾಗಿರುವುದು ಕಂಡುಬಂದಿದೆ.

- ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಅವರ ಆರ್ಥಿಕ ಸ್ಥಿತಿಗತಿಗಳಲ್ಲಿ (ಶೇಕಡಾ ೬೫.೮೦) ಸುಧಾರಣೆಯಾಗಿರುವುದು ಕಂಡುಬಂದಿದೆ. ಗಳಿಸಿದ ಹಣವನ್ನು ಸ್ವಂತ ಉಪಯೋಗಕ್ಕಾಗಿ (ಶೇಕಡಾ ೪೩.೪೦) ಮಾಹಿತಿದಾರರು ಬಳಸುತ್ತಿದ್ದಾರೆ.
- ಗ್ರಾಮ ಪಂಚಾಯತ್ ಸದಸ್ಯತ್ವದಿಂದಾಗಿ ಶೇಕಡಾ ೬೪.೫೦ ರಷ್ಟು ಮಾಹಿತಿದಾರರಿಗೆ ತೃಪ್ತಿ ಇದೆ. ಶೇಕಡಾ ೫೨.೬೦ ರಷ್ಟು ಮಾಹಿತಿದಾರರು ತಾವು ಆಯ್ಕೆಗೊಂಡ ಗ್ರಾಮ ಪಂಚಾಯತ್‌ನ ಸಭೆಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇದು ಮೊಗವೀರ ಮಹಿಳೆಯರ ರಾಜಕೀಯ ಸಬಲೀಕರಣದ ಆರಂಭಿಕ ಹೆಜ್ಜೆಗಳಾಗಿವೆ. ಆಯ್ಕೆಗೊಂಡ ಶೇಕಡಾ ೭೮.೯೦ ರಷ್ಟು ಮೊಗವೀರ ಮಹಿಳಾ ಮಾಹಿತಿದಾರರು ಗ್ರಾಮ ಪಂಚಾಯತ್‌ಗಳಲ್ಲಿ ಪುರುಷ ಸದಸ್ಯರ ಪ್ರಾಬಲ್ಯವಿರುವುದನ್ನು ತಿಳಿಸಿರುವುದು ಲಿಂಗ ಸಮಾನತೆಯ ಆಶಯವನ್ನು ಹೊಂದಿರುವ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿಯೂ ಲಿಂಗ ಅಸಮಾನತೆಯ ಅಂಶ ಪ್ರಬಲವಾಗಿರುವುದನ್ನು ಸೂಚಿಸುತ್ತದೆ. ರಾಜಕೀಯದಲ್ಲಿ ಮಹಿಳಾ ಮೀಸಲಾತಿಯ ಅಗತ್ಯತೆಯನ್ನು ಆಯ್ಕೆಗೊಂಡ ಎಲ್ಲಾ ಮಾಹಿತಿದಾರರು ಒಪ್ಪಿರುವುದು (ಶೇಕಡಾ ೧೦೦) ಮಹಿಳಾ ಮೀಸಲಾತಿಯ ಪ್ರಾಮುಖ್ಯತೆಯನ್ನು ವ್ಯಕ್ತಪಡಿಸುತ್ತದೆ. ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯತ್ ಸದಸ್ಯರಾಗಿರುವ ಮಹಿಳೆಯರಲ್ಲಿ ಶೇಕಡಾ ೯೪.೭೦ ರಷ್ಟು ಮಾಹಿತಿದಾರರು ಮುಂದೆಯೂ ಅಂದರೆ ಭವಿಷ್ಯದಲ್ಲಿ ರಾಜಕೀಯದಲ್ಲಿ ಮುಂದುವರೆಯುವ ಆಸಕ್ತಿಯನ್ನು ಹೊಂದಿದ್ದಾರೆ. ಇದು ಜಿಲ್ಲೆಯ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯ ಭವಿಷ್ಯವು ಉಜ್ವಲವಾಗಿರುವುದನ್ನು ಸೂಚಿಸುತ್ತದೆ.

ಅಧ್ಯಯನದ ಊಹೆಗಳ ಸಮರ್ಥನೆ

ಅಧ್ಯಯನದ ಫಲಿತ ಹಾಗೂ ಸಲಹೆಗಳಲ್ಲಿ ಸ್ಪಷ್ಟತೆ ಮತ್ತು ನಿರ್ದಿಷ್ಟತೆಯನ್ನು ಸಾಧಿಸುವ ಉದ್ದೇಶದಿಂದ ನಾಲ್ಕು ಊಹೆಗಳನ್ನು ಈ ಅಧ್ಯಯನದಲ್ಲಿ ಸೇರಿಸಿಕೊಂಡಿದ್ದು, ಅವುಗಳ ವಿಮರ್ಶಾತ್ಮಕ ಪರೀಕ್ಷೆಯನ್ನು ನಡೆಸಲಾಗಿದೆ. ಅಧ್ಯಯನದಿಂದ ಸಂಗ್ರಹಿಸಿದ ಮಾಹಿತಿ ಹಾಗೂ ವಿಶ್ಲೇಷಣೆಗಳ ಆಧಾರದಲ್ಲಿ ನಡೆಸಲಾದ ಊಹೆಗಳ ಪರೀಕ್ಷೆಯ ವಿವರಗಳನ್ನು ಈ ಭಾಗದಲ್ಲಿ ನೀಡಲಾಗಿದೆ.

೧. ಮೊಗವೀರ ಮಹಿಳೆಯರಲ್ಲಿ ಶಿಕ್ಷಣದಿಂದಾಗಿ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳಲ್ಲಿ ಬದಲಾವಣೆಗಳಾಗಿವೆ.

ಮೇಲಿನ ಊಹೆ ಒಂದನ್ನು ಪರೀಕ್ಷಿಸುವ ಉದ್ದೇಶದಿಂದ ಪ್ರಶ್ನಾವಳಿಯ ಮೂಲಕ ಮೊಗವೀರ ಮಹಿಳೆಯರಿಂದ ಅವರ ಶಿಕ್ಷಣ ಹಾಗೂ ಅದರಿಂದಾದ ಸಾಮಾಜಿಕ ಸ್ಥಾನಮಾನಗಳ ಬದಲಾವಣೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲಾಗಿತ್ತು. ಇದಕ್ಕೆ ಪೂರಕವಾದ ಮಾಹಿತಿಗಳು ಕೋಷ್ಟಕ ೫.೬ ಮತ್ತು ಕೋಷ್ಟಕ ೫.೭ರಲ್ಲಿ ನೀಡಲಾಗಿದೆ.

ಕೋಷ್ಟಕ ೪.೭ರಲ್ಲಿ ಮೊಗವೀರ ಮಹಿಳೆಯರ ಶಿಕ್ಷಣದ ಬಗ್ಗೆ ಮಾಹಿತಿಯನ್ನು ನೀಡಲಾಗಿದ್ದು, ಈ ವಿಶ್ಲೇಷಣೆಯಲ್ಲಿ ಶಿಕ್ಷಣವು ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರಿದೆಯೇ ಎಂದು ಕೇಳಿದಾಗ ಶೇಕಡಾ ೭೪ರಷ್ಟು ಮಾಹಿತಿದಾರರು ಹೌದು ಎಂಬುದಾಗಿ ಉತ್ತರಿಸಿದ್ದು ಇದು ಅಧ್ಯಯನದ ಊಹೆಯನ್ನು ಸಮರ್ಥಿಸುತ್ತದೆ. ಕೋಷ್ಟಕ ೫.೭ರಲ್ಲಿ ಶಿಕ್ಷಣದಿಂದಾಗಿರುವ ಧನಾತ್ಮಕ ಪರಿಣಾಮಗಳಲ್ಲಿ ಶೇಕಡಾ ೫ರಷ್ಟು ಮಾಹಿತಿದಾರರು ಸರಕಾರಿ ಉದ್ಯೋಗ ದೊರಕಿರುವುದನ್ನು, ಶೇಕಡಾ ೨೫ರಷ್ಟು ಮಂದಿ ಸಮಾಜದಲ್ಲಿ ಉತ್ತಮ ಸ್ಥಾನಮಾನ ಲಭಿಸಿರುವುದನ್ನು, ಶೇಕಡಾ ೧೨ರಷ್ಟು ಮಾಹಿತಿದಾರರ ಸಂಪರ್ಕದಲ್ಲಿ ಹೆಚ್ಚಳವಾಗಿರುವುದನ್ನು, ಶೇಕಡಾ ೩೨ರಷ್ಟು ಮಾಹಿತಿದಾರರು ಉತ್ತಮ ವ್ಯವಹಾರ ಜ್ಞಾನವನ್ನು ಪಡೆದುಕೊಂಡಿರುವ ಮಾಹಿತಿಯನ್ನು ತಿಳಿಸಿರುತ್ತಾರೆ. ಈ ವಿಶ್ಲೇಷಣೆಗಳಿಂದ ಸ್ಪಷ್ಟವಾಗುವುದೇನೆಂದರೆ, ಶಿಕ್ಷಣವು ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳಲ್ಲಿ ಬದಲಾವಣೆ ತರುತ್ತದೆ ಎಂಬ ಅಂಶವು ಅಧ್ಯಯನದ ಊಹೆಯಾದ ಶಿಕ್ಷಣವು ಮಾಹಿತಿದಾರರ ಸಾಮಾಜಿಕ ಜೀವನದಲ್ಲಿ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಬದಲಾವಣೆಗಳನ್ನು ಉಂಟುಮಾಡುತ್ತದೆ ಎಂಬುದನ್ನು ಸಮರ್ಥಿಸಲಾಗಿದೆ ಅಥವಾ ಒಪ್ಪಲಾಗಿದೆ.

೨. ಮೊಗವೀರ ಮಹಿಳೆಯರು ಹಾಗೂ ಇತರ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಹಾಗೂ ಆರ್ಥಿಕ ಸ್ಥಿತಿಗತಿಯು ಸಮಾನವಾಗಿದೆ.

ಊಹೆ ಎರಡರಲ್ಲಿ ಮೊಗವೀರ ಮಹಿಳೆಯರು ಹಾಗೂ ಇತರ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಹಾಗೂ ಆರ್ಥಿಕ ಸ್ಥಿತಿಗತಿಯ ಹೋಲಿಕೆ ಮಾಡಲಾಗಿದ್ದು, ಅದು ಸಮಾನತೆಯಿಂದ ಕೂಡಿದೆ ಎಂಬ ಊಹೆಯನ್ನು ಹೊಂದಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿದಾರರು ನೀಡಿರುವ ಅಭಿಪ್ರಾಯವನ್ನು ಕೋಷ್ಟಕ ೫.೧೨ರಲ್ಲಿ ನೀಡಲಾಗಿದೆ.

ಮೊಗವೀರ ಮಹಿಳೆಯರು ಮತ್ತು ಇತರ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಸಮಾನವಾಗಿದೆಯೇ ಎಂಬುದಾಗಿ ಮಾಹಿತಿದಾರರಲ್ಲಿ ಕೇಳಿದಾಗ ಶೇಕಡಾ ೩೬.೭ ರಷ್ಟು ಮಾಹಿತಿದಾರರು ಹೌದು ಎಂಬುದಾಗಿ ತಿಳಿಸಿರುತ್ತಾರೆ. ಹಾಗೆಯೇ ಆರ್ಥಿಕವಾಗಿ ಮೊಗವೀರ ಮಹಿಳೆಯರು ಹಾಗೂ ಇತರ ಸಮುದಾಯದ ಮಹಿಳೆಯರು ಸಮಾನರೇ ಎಂಬುದಾಗಿ

ಮಾಹಿತಿದಾರರಲ್ಲಿ ಕೇಳಿದಾಗ ಶೇಕಡಾ ೪೦.೫ರಷ್ಟು ಮಾಹಿತಿದಾರರು ಸಮಾನವಾಗಿರುವುದಾಗಿ ತಿಳಿಸಿರುತ್ತಾರೆ.

ಮೇಲಿನ ಮಾಹಿತಿಯನ್ನು ವಿಶ್ಲೇಷಿಸಿದಾಗ ಕಂಡುಬಂದ ಅಂಶವೆಂದರೆ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ಹಾಗೂ ಇತರ ಹಿಂದುಳಿದ ಸಮುದಾಯದ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಸಮಾನವಾಗಿಲ್ಲ. ಈ ಅಸಮಾನತೆಯನ್ನು ಗುರುತಿಸಿಕೊಂಡು ಅಧ್ಯಯನದ ಮಾಹಿತಿಗಳ ಆಧಾರದಲ್ಲಿ ಮೊಗವೀರ ಮಹಿಳೆಯರ ಹಾಗೂ ಇತರ ಹಿಂದುಳಿದ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಹಾಗೂ ಆರ್ಥಿಕ ಸ್ಥಿತಿಗತಿ ಸಮಾನವಾಗಿದೆ ಎಂಬ ಅಧ್ಯಯನದ ಊಹೆಯನ್ನು ಒಪ್ಪಲಾಗಿಲ್ಲ ಅಥವಾ ತಿರಸ್ಕರಿಸಲಾಗಿದೆ.

೩. ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮೊಗವೀರ ಮಹಿಳೆಯರ ಸಾಮಾಜಿಕ ಜೀವನ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ

ಊಹೆ ಮೂರರಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮೊಗವೀರ ಮಹಿಳೆಯರ ಸಾಮಾಜಿಕ ಜೀವನ ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ ಎಂಬ ಊಹೆಯನ್ನು ಇಟ್ಟುಕೊಂಡು ಅಧ್ಯಯನದಲ್ಲಿ ಪ್ರಶ್ನಾವಳಿಯ ಮೂಲಕ ಮಾಹಿತಿಯನ್ನು ಸಂಗ್ರಹಿಸ ಲಾಗಿದೆ. ಈ ಊಹೆಗೆ ಸಂಬಂಧಿಸಿದ ಮಾಹಿತಿಗಳನ್ನು ಕೋಷ್ಟಕ ೫.೫ ರಲ್ಲಿ ನೀಡಿ ವಿಶ್ಲೇಷಿಸಲಾಗಿದೆ.

ಈ ಕೋಷ್ಟಕದಲ್ಲಿ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಯಾದ ೭೬ ಮೊಗವೀರ ಮಹಿಳಾ ಸದಸ್ಯರನ್ನು ಸಂಪರ್ಕಿಸಿದಾಗ ಅದರಲ್ಲಿ ಶೇಕಡಾ ೮೮.೨೦ರಷ್ಟು ಮಾಹಿತಿದಾರರು ಆತ್ಮವಿಶ್ವಾಸ ವೃದ್ಧಿಯಾಗಿರುವುದಾಗಿ, ಶೇಕಡಾ ೮೬.೮೦ರಷ್ಟು ಮಾಹಿತಿದಾರರು ಕುಟುಂಬ ಮತ್ತು ಸಮಾಜದಲ್ಲಿ ಗೌರವ ದೊರೆತಿರುವುದಾಗಿ, ಶೇಕಡಾ ೪೩.೪೦ರಷ್ಟು ಮಾಹಿತಿದಾರರು ಜೀವನಮಟ್ಟದಲ್ಲಿ ಸುಧಾರಣೆಯಾಗಿರುವುದಾಗಿ, ಶೇಕಡಾ ೮೧.೬೦ ಸ್ವ-ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ದೊರೆತಿರುವುದಾಗಿ, ಶೇಕಡಾ ೫೭.೯೦ರಷ್ಟು ಮಾಹಿತಿದಾರರು ಸಮಸ್ಯೆ ಪರಿಹಾರ ಮಾಡುವ ಸಾಮರ್ಥ್ಯ ಪಡೆದಿರುವುದಾಗಿ, ಶೇಕಡಾ ೬೫.೮೦ರಷ್ಟು ಮಾಹಿತಿದಾರರು ಕೌಟುಂಬಿಕ ಸಹಕಾರವನ್ನು ಪಡೆದಿರುವುದಾಗಿ, ಶೇಕಡಾ ೧೦೦ರಷ್ಟು ಮಾಹಿತಿದಾರರು ಶಿಕ್ಷಣದ ಅಗತ್ಯತೆಯ ಅರಿವನ್ನು ಪಡೆದುಕೊಂಡಿರುವುದಾಗಿ, ಶೇಕಡಾ ೭೭.೬೦ರಷ್ಟು ಸಮಾಜದ ಬಗ್ಗೆ ತಿಳಿದು ಕೊಳ್ಳುವ ಅರಿವನ್ನು ಪಡೆದಿರುವುದಾಗಿ, ಶೇಕಡಾ ೬೩.೨೦ರಷ್ಟು ಮಾಹಿತಿದಾರರಿಗೆ ಇತತರಿಗೆ ಪ್ರೇರಣೆ ನೀಡುವ ಶಕ್ತಿ ಲಭಿಸಿರುವುದಾಗಿ ತಿಳಿಸಿರುತ್ತಾರೆ. ಈ ಮಾಹಿತಿಗಳು ರಾಜಕೀಯ ಪಾಲ್ಗೊಳ್ಳುವಿಕೆಯಿಂದಾದ ಮೊಗವೀರ ಮಹಿಳೆಯರ ಸಾಮಾಜಿಕ ಜೀವನದಲ್ಲಾದ ಬದಲಾವಣೆಗಳನ್ನು ಸೂಚಿಸುತ್ತದೆ. ಹಾಗೆಯೇ ಅವರ ಆರ್ಥಿಕ ಸ್ಥಾನಮಾನದ ಬಗ್ಗೆ ಕೇಳಲಾದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಮಾಹಿತಿದಾರರಲ್ಲಿ ಬಹಳಷ್ಟು ಸುಧಾರಣೆಗೊಂಡಿರುವುದಾಗಿ ತಿಳಿಸಿ ಶೇಕಡಾ ೬೫.೮೦ರಷ್ಟು ಮಾಹಿತಿದಾರರು ತಮ್ಮ

ಗಳಿಕೆಯನ್ನು ತಮ್ಮ ನಿರ್ಧಾರದಂತೆ ಬಳಸಿಕೊಳ್ಳುವ ಶಕ್ತಿಯನ್ನು ಪಡೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಈ ಮೇಲಿನ ಮಾಹಿತಿಗಳನ್ನು ಕೇಂದ್ರೀಕರಿಸಿ ಪಿಶ್ಲೇಷಿಸಿದಾಗ ಕೋಷ್ಟಕ ೫.೫೨ರಲ್ಲಿ ಪಡೆದುಕೊಂಡಿರುವ ಮಾಹಿತಿಗಳ ಆಧಾರದಲ್ಲಿ ಪರಾಮರ್ಶಿಸಿದಾಗ ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮೊಗವೀರ ಮಹಿಳೆಯರ ಸಾಮಾಜಿಕ ಜೀವನ ಹಾಗೂ ಆರ್ಥಿಕ ಸ್ಥಾನಮಾನಗಳಲ್ಲಿ ಧನಾತ್ಮಕ ಬದಲಾವಣೆಗಳಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ನೆಲೆಗಟ್ಟಿನಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಮೊಗವೀರ ಮಹಿಳೆಯರ ಸಾಮಾಜಿಕ ಜೀವನ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ ಎಂಬ ಅಧ್ಯಯನದ ಊಹೆ ಸರಿಯಾಗಿಲ್ಲ ಎಂಬುದಾಗಿ ಕಂಡು ಬರುವ ಹಿನ್ನೆಲೆಯಲ್ಲಿ ಈ ಊಹೆಯನ್ನು ತಿರಸ್ಕರಿಸಲಾಗಿದೆ ಅಥವಾ ಒಪ್ಪಲಾಗಿಲ್ಲ.

೪. ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಭವಿಷ್ಯದಲ್ಲಿ ಹೆಚ್ಚಾಗುತ್ತದೆ.

ಊಹೆ ನಾಲ್ಕರಲ್ಲಿ ಉಡುಪಿ ಜಿಲ್ಲೆಯಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಭವಿಷ್ಯದ ಅಂದಾಜಿಸುವಿಕೆಗೆ ಪೂರಕವಾಗಿ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಭವಿಷ್ಯದಲ್ಲಿ ಹೆಚ್ಚಾಗುತ್ತದೆ ಎಂಬ ಊಹೆಯನ್ನು ಅಧ್ಯಯನದಲ್ಲಿ ಇರಿಸಿಕೊಳ್ಳಲಾಗಿದೆ. ಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಗೊಂಡಿರುವ ಮೊಗವೀರ ಮಹಿಳೆಯರ ಹಾಗೂ ಇತರ ಮೊಗವೀರ ಮಹಿಳಾ ಮಾಹಿತಿದಾರರ ಅಭಿಪ್ರಾಯವನ್ನು ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಗಿದ್ದು ಕೋಷ್ಟಕ ೫.೩೮ ಹಾಗೂ ಕೋಷ್ಟಕ ೫.೫೩ರಲ್ಲಿ ನೀಡಲಾಗಿದೆ.

ಸ್ಥಳೀಯ ಆಡಳಿತದ ಚುನಾವಣೆಗಳಲ್ಲಿ ಸ್ಪರ್ಧಿಸಲು ಆಸಕ್ತಿ ಇದೆಯೇ ಎಂಬ ಪ್ರಶ್ನೆಗೆ ೨೦೦ರಷ್ಟು ಅಂದರೆ ಶೇಕಡಾ ೨೫ರಷ್ಟು ಮಾಹಿತಿದಾರರು ಆಸಕ್ತಿ ಇರುವುದಾಗಿ ಹಾಗೂ ಅವಕಾಶ ದೊರಕಿದಲ್ಲಿ ಸ್ಪರ್ಧಿಸುವುದಾಗಿ ತಿಳಿಸಿರುತ್ತಾರೆ. ಈ ಮಾಹಿತಿಯ ಆಧಾರದಲ್ಲಿ ಗಮನಿಸಿದಾಗ ಮೊಗವೀರ ಮಹಿಳೆಯರಲ್ಲಿ ರಾಜಕೀಯದ ಕಡೆಗೆ ಒಲವು ಇರುವುದು ಕಂಡುಬರುತ್ತದೆ. ಈ ಮಾಹಿತಿದಾರರಲ್ಲಿ ಒಮ್ಮೆಯೂ ರಾಜಕೀಯದಲ್ಲಿ ಸ್ಪರ್ಧಿಸದ ಮಹಿಳೆಯರಿದ್ದು, ಮುಂದೆ ಅವಕಾಶಗಳು ಒದಗಿ ಬಂದಾಗ ಸ್ಪರ್ಧಿಸುವ ನಿಲುವನ್ನು ಹೊಂದಿರುವುದು ಬೆಳಕಿಗೆ ಬಂದಿದೆ. ಈ ಮೂಲಕ ಈ ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಅಧಿಕವಾಗಬಹುದೆಂಬುದರ ಸೂಚನೆಯಂತೆ ಕಂಡುಬರುತ್ತದೆ.

ಅದೇ ರೀತಿ ಕೋಷ್ಟಕ ೫.೫೩ರಲ್ಲಿ ಗ್ರಾಮ ಪಂಚಾಯತ್ ಸದಸ್ಯರಾಗಿರುವ ಮಾಹಿತಿದಾರರಲ್ಲಿ ಮುಂದೆ ಚುನಾವಣೆಗಳಲ್ಲಿ ಸ್ಪರ್ಧಿಸುವಿರಾ ಎಂಬ ಪ್ರಶ್ನೆಗೆ ೭೨ ಮಂದಿ ಅಂದರೆ ಶೇಕಡಾ ೯೪.೭೦ರಷ್ಟು ಮಂದಿ ಹೌದು ಎಂಬುದಾಗಿ ತಿಳಿಸಿದ್ದು, ಇದು ಉಡುಪಿ ಜಿಲ್ಲೆಯಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಉಜ್ವಲವಾಗಿರುವುದನ್ನು ಸೂಚಿಸುತ್ತದೆ. ಈ ಮಾಹಿತಿಗಳಿಗೆ ಪೂರಕವಾಗಿ ಜಿಲ್ಲೆಯಲ್ಲಿ ಮೊಗವೀರ ಸಮುದಾಯದ ಶಿಕ್ಷಣದಲ್ಲಿ ಪ್ರಗತಿಯಾಗುತ್ತಿದ್ದು ಯುವ

ಸಮುದಾಯವು ರಾಜಕೀಯದ ಕಡೆಗೆ ಹೆಚ್ಚಿನ ಒಲವನ್ನು ತೋರುವ ಸಾಧ್ಯತೆಗಳು ನಿಚ್ಚಳವಾಗಿವೆ. ಈ ನೆಲೆಗಟ್ಟಿನಲ್ಲಿ ಗಮನಿಸಿದಾಗ ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಭವಿಷ್ಯದಲ್ಲಿ ಹೆಚ್ಚಾಗುತ್ತದೆ ಎಂಬ ಅಧ್ಯಯನದ ಊಹೆಯನ್ನು ಸಮರ್ಥಿಸಲಾಗಿದೆ. ಅಥವಾ ಒಪ್ಪಲಾಗಿದೆ.

ಸಲಹೆಗಳು:

ಮೊಗವೀರ ಮಹಿಳೆಯರ ಶೈಕ್ಷಣಿಕ ಆರ್ಥಿಕ ಸ್ಥಿತಿಗಳಲ್ಲಿ ಬದಲಾವಣೆ ಕಂಡುಬರುತ್ತಿದ್ದರೂ ಅದು ನಿರೀಕ್ಷಿತ ಪ್ರಮಾಣದಲ್ಲಿಲ್ಲ ಎಂಬುದನ್ನು ಈ ಅಧ್ಯಯನವು ಸಾಬೀತುಪಡಿಸುತ್ತದೆ. ಮಹಿಳೆಯರು ಹಾಗೂ ಪುರುಷರಲ್ಲಿ ಉದ್ಯೋಗದಲ್ಲಿ ಸಮಾನತೆಯನ್ನು ಸಾಧಿಸುವ ಪ್ರಯತ್ನ ನಡೆದಿದ್ದರೂ ಜಾಗತಿಕ ವಾಗಿ ಅದು ಯಶಸ್ಸು ಕಂಡಿಲ್ಲ. ಪ್ರಪಂಚದ ಕೆಲವು ದೇಶಗಳಲ್ಲಿ ಉದಾಹರಣೆಗೆ, ಶ್ರೀಲಂಕಾ ದೇಶದಲ್ಲಿ ಕ್ಯಾಥೋಲಿಕ್, ಮುಸ್ಲಿಂ ಮತ್ತು ಹಿಂದೂ ಮಹಿಳೆಯರು ಮೀನುಗಾರಿಕೆಯಲ್ಲಿ ತೊಡಗಿಕೊಂಡಿದ್ದು ಬಹುತೇಕ ಮಂದಿ ಪಾವತಿ ರಹಿತ ಕುಟುಂಬ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಉಡುಪಿಯ ಮೊಗವೀರ ಮಹಿಳೆಯರು ಮೀನುಗಾರಿಕೆಯ ಕೆಲಸದಲ್ಲಿ ತೊಡಗಿಕೊಂಡು ಸ್ವಲ್ಪ ಮಟ್ಟಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡು ತಮ್ಮ ದುಡಿಮೆಯನ್ನು ದೈನಂದಿನ ಖರ್ಚಿಗೆ ಹಾಗೂ ಉಳಿತಾಯಕ್ಕಾಗಿ ಬಳಸುತ್ತಿರುವುದು ಕಂಡುಬರುತ್ತದೆ. ಆ ನಿಟ್ಟಿನಲ್ಲಿ ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಕಿರು ಪ್ರಯತ್ನವು ಈ ಮೊಗವೀರ ಮಹಿಳೆಯರ ಜೀವನದಲ್ಲಿ ವಹಿಸುತ್ತಿರುವುದನ್ನು ನಾವು ಗಮನಿಸಬಹುದಾಗಿದೆ.

ರಾಜಕೀಯ ಕ್ಷೇತ್ರದಲ್ಲಿ ಮೊಗವೀರ ಮಹಿಳೆಯರ ತೊಡಗಿಸಿಕೊಳ್ಳುವಿಕೆ ಗಮನಾರ್ಹವಾಗಿಲ್ಲ ಎಂಬುದು ಸತ್ಯವಾದರೂ ಯುವ ಸಮುದಾಯ ಆ ಬಗ್ಗೆ ಒಲವು ತೋರುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿವೆ. ಹಿರಿಯ ತಲೆಮಾರುಗಳಲ್ಲಿರುವ ರಾಜಕೀಯ ನಿರಾಸಕ್ತಿ ಯುವ ಸಮುದಾಯದಲ್ಲಿ ಕಂಡು ಬರುತ್ತಿಲ್ಲ. ರಾಜಕೀಯದ ವಿಚಾರಗಳನ್ನು ಬಹಳಷ್ಟು ಚರ್ಚಿಸುವ ಹಾಗೂ ಅವಕಾಶ ದೊರೆತರೆ ಭಾಗವಹಿಸುವ ಮನೋಭಾವನೆಯನ್ನು ಯುವ ಮಹಿಳಾ ಸಮುದಾಯ ತೋರಿಸುತ್ತಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿಕೊಂಡು ಮೊಗವೀರ ಮಹಿಳೆಯರ ಆರ್ಥಿಕ ಸ್ಥಿತಿಗತಿ, ರಾಜಕೀಯ ಪಾಲ್ಗೊಳ್ಳುವಿಕೆಯ ಸಾಧ್ಯತೆಗಳನ್ನು ವಿಶ್ಲೇಷಿಸಿದ ಸಂಶೋಧಕರು ಈ ಕೆಳಗಿನ ಸಲಹೆಗಳನ್ನು ನೀಡಿದ್ದಾರೆ. ಈ ಕೆಳಗಿನ ಸಲಹೆಗಳನ್ನು ಸೂಕ್ತ ರೀತಿಯಲ್ಲಿ ಪಾಲಿಸಿ ಪೂರಕ ಯೋಜನೆಗಳೊಂದಿಗೆ ಅಳವಡಿಸಿಕೊಂಡಲ್ಲಿ ಮೊಗವೀರ ಮಹಿಳಾ ರಾಜಕೀಯ ಸಬಲೀಕರಣ ಹಾಗೂ ಆ ಮೂಲಕ ಮಹಿಳಾ ಸಬಲೀಕರಣದ ಗುರಿಯನ್ನು ತಲುಪಲು ಸಾಧ್ಯವಾಗಲಿದೆ.

೧. ಮೊಗವೀರ ಸಮುದಾಯವು ತೊಡಗಿಸಿಕೊಂಡಿರುವ ಮೀನುಗಾರಿಕಾ ಉದ್ಯಮವು ಪುರುಷ ಪ್ರಧಾನವಾಗಿದೆ. ಆದುದರಿಂದ ಸರಕಾರವು ನೀಡುವ ಆರ್ಥಿಕ ಸಹಾಯ ಮತ್ತು ಸಬ್ಸಿಡಿ, ಸಾಲ ಹಾಗೂ ಇತರ ಸವಲತ್ತುಗಳು ಮೀನುಗಾರಿಕೆಯ ಯಾಂತ್ರೀಕರಣಕ್ಕೆ, ಮೀನುಗಾರಿಕೆಯಲ್ಲಿ ಬಳಸುವ ಸಾಧನಗಳ ಖರೀದಿಗೆ ಸಂಬಂಧಪಟ್ಟಂತೆ ಇರುವುದರಿಂದ ಆ ಸವಲತ್ತುಗಳು

ಮಹಿಳೆಯರಿಗೆ ಲಭ್ಯವಾಗುತ್ತಿಲ್ಲ. ಬೋಟುಗಳ ಖರೀದಿ, ಸಬ್ಸಿಡಿಯ ಡೀಸೆಲ್ ಇತ್ಯಾದಿಗಳು ಉದ್ಯಮ ನಡೆಸುವ ಮಾಲೀಕರಿಗೆ ಮಾತ್ರ ಅನುಕೂಲತೆ ಒದಗಿಸುತ್ತಿದ್ದು, ಹೆಚ್ಚಾಗಿ ವಿಕ್ರಯಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರ ಆರ್ಥಿಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತಿಲ್ಲ. ಮೀನುಗಾರಿಕೆ ಕೊಯ್ಲಿನ ನಂತರದ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ಮೊಗವೀರ ಮಹಿಳೆಯರು ಈ ಹೆಚ್ಚಿನ ಆರ್ಥಿಕ ಯೋಜನೆಗಳ ಪ್ರಯೋಜನ ಪಡೆಯಲು ಅನರ್ಹರಾಗಿದ್ದಾರೆ. ಆದುದರಿಂದ ಸರಕಾರ ಮಿನುಗಾರಿಕೆಗೆ ಸವಲತ್ತುಗಳು ಅಥವಾ ಯೋಜನೆಗಳನ್ನು ರೂಪಿಸುವಾಗ ಕೆಳಸ್ತರದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೂ ಪ್ರಯೋಜನ ನೀಡಬಲ್ಲ ಸಾಲ ಯೋಜನೆಗಳನ್ನು ರೂಪಿಸಬೇಕಾದ ಅಗತ್ಯವಿದೆ. ಮಹಿಳಾ ಮೀನುಗಾರರಿಗೆ, ವಿಕ್ರಯದಾರರಿಗೆ, ಸಾಗಾಟದ ಚಟುವಟಿಕೆ, ಮೀನುಗಳ ಸಂಗ್ರಹ, ಐಸ್ ಬಾಕ್ಸ್ ನಿರ್ವಹಣೆ ಹಾಗೂ ಮೀನುಗಾರಿಕೆ ನಿಷೇಧ ದಿನಗಳಲ್ಲಿ ಕಂಡು ಬರುವ ಆರ್ಥಿಕ ಸಂಕಷ್ಟವನ್ನು ಕಡಿಮೆ ಮಾಡಬಲ್ಲ ಸೂಕ್ತ ಸಹಾಯ ನೀಡಬಲ್ಲ ಆರ್ಥಿಕ ಯೋಜನೆಗಳನ್ನು ರೂಪಿಸಬೇಕಾದ ಹೊಣೆಗಾರಿಕೆಯನ್ನು ಸರಕಾರಗಳು ಹೆಚ್ಚು ಜವಾಬ್ದಾರಿಯಿಂದ ನಿರ್ವಹಿಸಬೇಕಾಗಿದೆ.

೨. ಮೊಗವೀರ ಮಹಿಳೆಯರ ಆರ್ಥಿಕ ಸಂಕಷ್ಟಗಳಿಗೆ ಮುಖ್ಯ ಕಾರಣ ಕುಟುಂಬದ ನಿರ್ವಹಣೆ, ಹೆಚ್ಚಿನ ಕುಟುಂಬಗಳಲ್ಲಿ ಮಹಿಳೆಯರೇ ಮಕ್ಕಳ ಶಿಕ್ಷಣ, ಕುಟುಂಬದ ಆರೋಗ್ಯದ ಕಾಳಜಿಯ ಜವಾಬ್ದಾರಿ ವಹಿಸಿಕೊಂಡಿರುವುದರಿಂದಾಗಿ ಅವರ ಆರ್ಥಿಕ ನಿರ್ವಹಣೆಯು ಕಷ್ಟ ಸಾಧ್ಯವಾಗಿದೆ. ೫೮.೫ ಶೇಕಡಾ ಮಾಹಿತಿದಾರರು ಶಿಕ್ಷಣಕ್ಕಾಗಿ, ವಿವಾಹ ಸಂದರ್ಭದಲ್ಲಿ, ಮನೆಕಟ್ಟಲು, ಅನಾರೋಗ್ಯ, ಹಾಗೂ ವ್ಯಾಪಾರಕ್ಕಾಗಿ ಬ್ಯಾಂಕ್, ಸ್ವ-ಸಹಾಯ, ಸ್ತ್ರೀ ಶಕ್ತಿ ಹಾಗೂ ಮೀನುಗಾರಿಕಾ ಪ್ರಾಥಮಿಕ ಸಹಕಾರಿ ಸಂಘಗಳಿಂದ ಸಾಲ ಪಡೆದಿದ್ದು, ವಾರ್ಷಿಕ ೪ ಶೇಕಡಾದಿಂದ ೧೪ ಶೇಕಡಾದವರೆಗೆ ಬಡ್ಡಿಯನ್ನು ಪಾವತಿಸುತ್ತಿದ್ದಾರೆ. ಉದ್ಯಮ ಸಂಬಂಧಿತ ಹಾಗೂ ದೀರ್ಘಾವಧಿ ಸಾಲದ ಮೂಲಗಳ ಕೊರತೆ, ಬಡ್ಡಿ ಸಂಬಂಧಿತ ಮಾಹಿತಿಯ ಕೊರತೆಯು ಮೊಗವೀರ ಮಹಿಳೆಯರ ಆರ್ಥಿಕ ಸಂಕಷ್ಟವನ್ನು ವೃದ್ಧಿಸಿದೆ. ಮೊಗವೀರ ಮಹಿಳೆಯರಿಗೆ ಯೋಜಿತ ಆರ್ಥಿಕ ನಿರ್ವಹಣೆ, ಸಾಲದ ವಿವಿಧ ಮೂಲಗಳು, ಹಾಗೂ ಸರಿಯಾದ ರೀತಿಯ ಮಾರುಪಾವತಿಯ ಪ್ರಯೋಜನೆಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವ ಅಥವಾ ಅರಿವು ಮೂಡಿಸಬೇಕಾದ ಅಗತ್ಯತೆ ಇದೆ. ಮೊಗವೀರ ಮಹಿಳೆಯರಿಗೆ ಈ ರೀತಿಯ ಅರಿವನ್ನು ನೀಡಲು ಸಂಘ ಸಂಸ್ಥೆಗಳು, ಸ್ವ-ಸಹಾಯ ಸಂಘಗಳು ಹಾಗೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳು ಸಂಘಟಿತ ಪ್ರಯತ್ನವನ್ನು ಮಾಡಬೇಕಾಗಿದೆ. ಬ್ಯಾಂಕಿಂಗ್ ವ್ಯವಸ್ಥೆಯ ಸೂಕ್ತ ಪರಿಚಯವನ್ನು ಮಾಡಿಕೊಟ್ಟಾಗ ಸರಿಯಾದ ಸಾಲದ ಆಯ್ಕೆಯನ್ನು ಮಾಡಲು ಮೊಗವೀರ ಮಹಿಳೆಯರು ಸಮರ್ಥರಾಗುತ್ತಾರೆ ಹಾಗೂ ಆ ಮೂಲಕ ಮಹಿಳಾ ಸಬಲೀಕರಣಕ್ಕೆ ದಾರಿ ಮಾಡಿಕೊಡಬಲ್ಲರು.

೩. ಮೊಗವೀರ ಸಮುದಾಯಕ್ಕೆ ಸರಕಾರವು ಮೀಸಲಾತಿಯನ್ನು ನೀಡಿದ್ದರೂ ಅದು ಸಮರ್ಥವಾಗಿ ಬಳಕೆಯಾದಂತೆ ಕಂಡುಬರುತ್ತಿಲ್ಲ. ಅಧ್ಯಯನದಲ್ಲಿ ಕಂಡುಕೊಂಡಂತೆ ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಮೊಗವೀರ ಮಹಿಳೆಯರಿಗೆ ಶೇಕಡಾ ೪೨ರಷ್ಟು ಮೀಸಲಾತಿ ಲಭ್ಯವಿದ್ದರೂ ಮಾಹಿತಿದಾರರಲ್ಲಿ ಕೇವಲ ಶೇಕಡಾ ೧೬.೭೫ರಷ್ಟು ಮಾಹಿತಿದಾರರು ಮಾತ್ರ ಈ ಸೌಲಭ್ಯವನ್ನು ಬಳಸಿಕೊಂಡಿದ್ದಾರೆ. ಇದನ್ನು ಗಮನಿಸಿದಾಗ ಮೀಸಲಾತಿಯ ಅನಿವಾರ್ಯತೆಯಿದ್ದರೂ ಅರಿವಿನ ಕೊರತೆಯಿಂದಾಗಿ ಈ ವರ್ಗವು ಸೌಲಭ್ಯ ವಂಚಿತರಾಗುತ್ತಿರುವುದು ಕಂಡುಬರುತ್ತದೆ. ಸರಕಾರಗಳು, ಅಧಿಕಾರಿಗಳು, ಸಂಘ ಸಂಸ್ಥೆಗಳು ಈ ಬಗ್ಗೆ ಗಮನಹರಿಸಿ ಕಡಿಮೆ ಶಿಕ್ಷಣ ಹೊಂದಿರುವ ಮಹಿಳೆಯರಿಗೆ ಮೀಸಲಾತಿಯ ಲಭ್ಯತೆಯ ಪರಿಚಯವನ್ನು ಮಾಡಿಕೊಡಬೇಕಾಗಿದೆ. ಮೀನುಗಾರಿಕೆ ವೃತ್ತಿಯಲ್ಲಿರುವ ಮಹಿಳೆಯರು ಧೀರ್ಘಾವಧಿ ವೃತ್ತಿನಿರತರಾಗಿರುವುದರಿಂದ ಸಮೂಹ ಮಾಧ್ಯಮಗಳ ಅರಿವು ಕಾರ್ಯಕ್ರಮಗಳು ಈ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿಲ್ಲ. ಈ ವೃತ್ತಿಯ ಮಹಿಳೆಯರನ್ನೇ ಕೇಂದ್ರೀಕರಿಸಿ ಅವರಿಗೆ ಅನುಕೂಲವಾಗುವ ಸ್ಥಳದಲ್ಲಿ ಅಥವಾ ಅವರ ಸಂಘಟನೆಗಳ ಮೂಲಕ ಸೂಕ್ತ ಮಾಹಿತಿ ಕಾರ್ಯಕ್ರಮಗಳನ್ನು ಆಯೋಜಿಸಿ ಮೀಸಲಾತಿಯ ಬಗ್ಗೆ ಅರಿವು ಮಾಡಿಸಿದಲ್ಲಿ ಮೊಗವೀರ ಮಹಿಳೆಯರ ಸಬಲೀಕರಣಕ್ಕೆ ಪುಷ್ಟಿ ನೀಡಿದಂತಾಗುತ್ತದೆ.

೪. ಮೊಗವೀರ ಮಹಿಳೆಯರ ವೃತ್ತಿ ಬದುಕಿನಲ್ಲಿ ಹಲವಾರು ಸಂಕಷ್ಟಗಳಿದ್ದರೂ ವಂಶ ಪಾರಂಪರ್ಯವಾಗಿ ಬಂದಿರುವ ಈ ವೃತ್ತಿಯನ್ನು ಆಯ್ದುಕೊಳ್ಳುತ್ತಿರುವ ಮಹಿಳೆಯರ ಸಂಖ್ಯೆ ಗಮನಾರ್ಹವಾಗಿದೆ. ಅದಕ್ಕೆ ಮುಖ್ಯ ಕಾರಣ ಶಿಕ್ಷಣದಿಂದ ವಂಚಿತರಾಗುತ್ತಿರುವ ಮೊಗವೀರ ಸಮುದಾಯ ಎಂಬುದನ್ನು ಈ ಸಂಶೋಧನೆಯಲ್ಲಿ ಗಮನಿಸಲಾಗಿದೆ. ಶಿಕ್ಷಿತ ಮಹಿಳೆಯರು ಕಡಿಮೆ ಶ್ರಮ ಹಾಗೂ ಅಧಿಕ ಆದಾಯ ನೀಡಬಲ್ಲ ಉದ್ಯೋಗವನ್ನು ಆಯ್ಕೆ ಮಾಡಲು ಸಮರ್ಥರಾಗಿದ್ದಾರೆ. ಆದುದರಿಂದ ಮೊಗವೀರ ಸಮುದಾಯದ ಮಕ್ಕಳಲ್ಲಿ ಉನ್ನತ ಶಿಕ್ಷಣದ ಬಗ್ಗೆ ಒಲವು ಮೂಡಿಸಬೇಕಾದ ಅಗತ್ಯತೆ ಇದೆ. ಹಿರಿಯ ತಲೆಮಾರಿನ ಮಹಿಳೆಯರಿಗೆ ಶಿಕ್ಷಣದ ಮಹತ್ವವನ್ನು ಮನದಟ್ಟು ಮಾಡಿ ಅವರು ಕಿರಿಯರನ್ನು ಶಿಕ್ಷಣಕ್ಕೆ ಪ್ರೇರೇಪಿಸುವ ನಿಟ್ಟಿನಲ್ಲಿ ಸಾಂಘಿಕ ಪ್ರಯತ್ನದ ಅಗತ್ಯತೆ ಇದೆ. ಮೊಗವೀರ ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಸರಕಾರವು ವಿಶೇಷ ಸವಲತ್ತುಗಳನ್ನು ನೀಡಿದಲ್ಲಿ ಆರ್ಥಿಕ ಸಂಕಷ್ಟದಿಂದಾಗಿ ಶಿಕ್ಷಣ ವಂಚಿತರಾಗುವ ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಮುನ್ನಡೆಸಿ ಆ ಮೂಲಕ ಸಬಲೀಕರಣವನ್ನು ಸಾಧಿಸಬಹುದಾಗಿದೆ.

೫. ಮೊಗವೀರ ಮಹಿಳೆಯರ ವೃತ್ತಿ ಬದುಕಿನಲ್ಲಿ ದೊರೆಯುವ ಆದಾಯವು ಸಾಕಷ್ಟಿಲ್ಲ. ಜೀವನ ನಿರ್ವಹಣೆಯನ್ನು ಮಾಡುತ್ತಾ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಮಹಿಳೆಯರಿಗೆ ತಮ್ಮ ನಿವೃತ್ತ ಜೀವನಕ್ಕೆ ಉಳಿತಾಯ ಮಾಡಲು ಸಾಧ್ಯವಾಗುತ್ತಿಲ್ಲ. ಆ ಕಾರಣದಿಂದಾಗಿಯೂ ಇಲ್ಲಿ ವಯಸ್ಸಾದ (೬೦ ವರ್ಷ ಮೇಲ್ಪಟ್ಟ) ಮಹಿಳೆಯರು ಕೂಡಾ ತಮ್ಮ ಅನಾರೋಗ್ಯ ಹಾಗೂ ದೇಹ ದುರ್ಬಲತೆಯನ್ನು ಬದಿಗಿಟ್ಟು ವೃತ್ತಿಯನ್ನು ಮುಂದುವರೆಸುತ್ತಿರುವುದನ್ನು ಅಧ್ಯಯನದಲ್ಲಿ

ಗಮನಿಸಲಾಗಿದೆ. ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ವಲಯದ ಮಹಿಳೆಯರಿಗೆ ನಿವೃತ್ತಿ ಹಾಗೂ ನಿವೃತ್ತಿ ನಂತರ ಸೌಲಭ್ಯಗಳ ಅನುಕೂಲತೆ ಇರುವುದಿಲ್ಲ. ಆದ್ದರಿಂದ ಸರಕಾರವು ಮೀನುಗಾರಿಕಾ ಕೆಲಸದಲ್ಲಿ ತೊಡಗಿರುವ ಮಹಿಳೆಯರಿಗೆ ನಿವೃತ್ತಿ ವಯಸ್ಸನ್ನು ನಿಗದಿಪಡಿಸಿ, ನಿವೃತ್ತಿಯ ನಂತರ ಪಿಂಚಣಿಯಂತಹ ಸಾಮಾಜಿಕ ಭದ್ರತೆಯನ್ನು ನೀಡುವುದರ ಅಗತ್ಯತೆ ಇದೆ. ಸೂಕ್ತ ನಿವೃತ್ತಿ ವೇತನ ಅಥವಾ ಪಿಂಚಣಿಯನ್ನು (ಈ ಸವಲತ್ತುಗಳನ್ನು ಈ ಜಿಲ್ಲೆಯ ಬೀಡಿ ಕಾರ್ಮಿಕರಿಗೆ ಈಗಾಗಲೇ ಒದಗಿಸಿದೆ) ನೀಡಿದಾಗ ಜೀವನದ ಅಭದ್ರತೆ ಹಾಗೂ ವಯೋಸಹಜ ಸಂಕಷ್ಟಗಳನ್ನು ಸಮರ್ಥವಾಗಿ ನಿರ್ವಹಿಸಲು ಮಹಿಳೆಯರಿಗೆ ಸಾಧ್ಯವಾಗುತ್ತದೆ. ಮಹಿಳಾ ಸಬಲೀಕರಣದ ಉದ್ದೇಶವನ್ನು ಈಡೇರಿಸುವಲ್ಲಿ ಸಾಮಾಜಿಕ ಭದ್ರತೆಯ ಪ್ರಯತ್ನ ಬಹಳಷ್ಟು ನಿರೀಕ್ಷಿತವಾಗಿದೆ. ನಿವೃತ್ತಿ ನಂತರದ ಉಚಿತ ಆರೋಗ್ಯ ರಕ್ಷಣೆಯ ಸೌಲಭ್ಯವನ್ನು ಸೂಕ್ತ ಯೋಜನೆಯ ಮೂಲಕ ನೀಡಬಹುದಾಗಿದೆ.

೬. ಮೀನುಗಾರಿಕೆಯ ವಿಕ್ರಯಗಾರಿಕೆಯಲ್ಲಿ ತೊಡಗಿರುವ ಮಹಿಳೆಯರಿಗೆ ಅವರ ಪರಿಸರದ ಸ್ವಚ್ಛತೆ ಹಾಗೂ ನೈರ್ಮಲೀಕರಣದ ಸಮಸ್ಯೆಯಿಂದಾಗಿ ಅನಾರೋಗ್ಯದಂತಹ ಮಾರಕ ಪರಿಣಾಮಗಳು ಗೋಚರಿಸುತ್ತವೆ. ವ್ಯವಸ್ಥಿತ ಮಾರುಕಟ್ಟೆಗಳನ್ನು ಹೊರತುಪಡಿಸಿದಂತೆ ಇತರೆ ಕಡೆಗಳಲ್ಲಿ ಈ ವೃತ್ತಿಯಲ್ಲಿ ನಿರತರಾಗಿರುವ ಮಹಿಳೆಯರಿಗೆ ವಿಕ್ರಯಗಾರಿಕೆ ಅಥವಾ ಮಾರಾಟ ಮಾಡುವ ಸ್ಥಳಗಳಲ್ಲಿ ಸೂಕ್ತ ಮೂಲ ಸೌಲಭ್ಯದ ವ್ಯವಸ್ಥೆಗಳನ್ನು ಒದಗಿಸಿ ಕೊಡಬೇಕಾದ ಅಗತ್ಯತೆ ಇದೆ. ವ್ಯವಸ್ಥಿತ ಮಾರುಕಟ್ಟೆ ಇಲ್ಲದ ಸ್ಥಳಗಳಲ್ಲಿ ಮೀನು ಮಾರಾಟ ಮಾಡುವ ಮಹಿಳೆಯರಿಗೆ ಸೂಕ್ತ ಶೆಡ್‌ಗಳು, ಕುಳಿತುಕೊಳ್ಳುವ ವ್ಯವಸ್ಥೆ, ತ್ಯಾಜ್ಯ ವಿಲೇವಾರಿಗೆ ವ್ಯವಸ್ಥೆ, ಶೌಚಾಲಯಗಳ ವ್ಯವಸ್ಥೆ ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸಲು ಸರಕಾರ ಮುಂದಾಗಬೇಕು. ಮಹಿಳಾ ಕಲ್ಯಾಣ ಮತ್ತು ಅಭಿವೃದ್ಧಿಗೆ ಪೂರಕವಾಗಿ ಈ ವ್ಯವಸ್ಥೆಗಳನ್ನು ನೀಡುವ ಮೂಲಕ ಈ ವೃತ್ತಿಯಲ್ಲಿರುವ ಮಹಿಳೆಯರ ಜೀವನ ಮಟ್ಟ ಸುಧಾರಿಸಲು ಸಾಧ್ಯ.

೭. ಮಹಿಳಾ ಮೀನುಗಾರರ ಪ್ರಯೋಜನಕ್ಕಾಗಿ ಮೀನುಗಾರರ ಮಹಿಳಾ ಮಂಡಲಗಳನ್ನು ರಚಿಸಲಾಗಿದೆ. ಈ ಮಹಿಳಾ ಮಂಡಲಗಳು ಮೀನುಗಾರ ಮಹಿಳೆಯರ ಆರ್ಥಿಕ ಸಂಕಷ್ಟವನ್ನು ನೀಗಿಸುವಲ್ಲಿ ಸಮರ್ಥವಾಗಿಲ್ಲ. ಆ ನಿಟ್ಟಿನಲ್ಲಿ ಮಹಿಳಾ ಮಂಡಲಗಳು ಕಡಿಮೆ ಬಡ್ಡಿಯ ಸಾಲವನ್ನು ಸದಸ್ಯರಿಗೆ ನೀಡಲು ಪೂರಕವಾಗುವಂತೆ ಸರಕಾರವು ಈ ಮಂಡಲಗಳಿಗೆ ವಿಶೇಷ ಅನುದಾನವನ್ನು ನೀಡುವ ಅಗತ್ಯತೆ ಇದೆ. ನಿರ್ದಿಷ್ಟ ನಿಧಿಯನ್ನು ಸರಕಾರ ಈ ಮಹಿಳಾ ಮಂಡಲಗಳಿಗೆ ನೀಡಿದಲ್ಲಿ ಮೊಗವೀರ ಮಹಿಳೆಯರ ತುರ್ತು ಆರ್ಥಿಕ ಬೇಡಿಕೆಗಳನ್ನು ಕಡಿಮೆ ಬಡ್ಡಿದರದ ಸಾಲದ ಮೂಲಕ ಈ ಮಂಡಲಗಳು ನಿರ್ವಹಿಸಲು ಸಾಧ್ಯ. ಆ ಮೂಲಕ ಮೊಗವೀರ ಮಹಿಳೆಯರಿಗೆ ಶಿಕ್ಷಣದ, ವ್ಯಾಪಾರದ ಅವಕಾಶ ವಂಚಿತರಾಗುವ ಸಂದರ್ಭಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಅತೀ ಹೆಚ್ಚು ಬಡ್ಡಿ ಪಡೆಯುವ ಸಂಸ್ಥೆಗಳಿಂದ ಸಾಲ ಪಡೆಯದಂತೆ ತಡೆದು ಮಹಿಳೆಯರನ್ನು ಸಬಲೀಕರಣಗೊಳಿಸುವಲ್ಲಿ ಇದು ಪೂರಕವಾಗುತ್ತದೆ.

ಮೀನುಗಾರರ ಸಂಘಟನೆಗಳು ಸ್ಥಳೀಯ ಸಂಘಟನೆಗಳಾಗಿದ್ದು, ಅವುಗಳನ್ನು ತಾಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಸಂಘಟನೆಗಳೊಂದಿಗೆ ಜೋಡಿಸುವ ಹಾಗೂ ಮಹಿಳಾ ಮಂಡಲಗಳ/ ಒಕ್ಕೂಟಗಳ ರಚನೆಗೆ ಮಹಿಳೆಯರು ಪ್ರಯತ್ನಿಸಬೇಕಾಗಿದೆ. ಆ ಮೂಲಕ ಮಹಿಳಾ ಸಂಘಟನೆಗಳಿಗೆ ಬಲ ತುಂಬುವ ಪ್ರಯತ್ನ ಮಾಡಬೇಕಾಗಿದೆ.

೮. ಮೀನುಗಾರಿಕೆ ವೃತ್ತಿಯು ಸಂಪೂರ್ಣ ಸ್ವದೇಶಿ ವೃತ್ತಿಯಾಗಿರುವುದರಿಂದ ದೇಶದಲ್ಲಿ ಸ್ವದೇಶಿ ಉದ್ಯಮಗಳಿಗೆ ನೀಡುವ ಎಲ್ಲಾ ನೆರವು ಸೌಲಭ್ಯಗಳನ್ನು ಮೀನುಗಾರಿಕೆ ಉದ್ಯಮಕ್ಕೆ ವಿಸ್ತರಿಸಬಹುದಾಗಿದೆ. ಮೀನುಗಾರ ಮಹಿಳೆಯರಿಗೆ ನೀಡುವ ವಿಶೇಷ ಸವಲತ್ತುಗಳು, ಸಬ್ಸಿಡಿ, ನಿವೃತ್ತಿ ಪಿಂಚಣಿ ಇತ್ಯಾದಿಗಳು ಮಹಿಳೆಯರ ಮನೋಸ್ಥೈರ್ಯವನ್ನು ಹೆಚ್ಚಿಸಿ ಸಬಲೀಕರಣಕ್ಕೆ ಪೂರಕವಾಗಬಲ್ಲದು. ಅಸಂಘಟಿತ ವಲಯವಾಗಿರುವ ಮಹಿಳಾ ಮೀನುಗಾರರಿಗೆ ಸ್ವದೇಶಿ ಹಾಗೂ ರಫ್ತು ಬೆಂಬಲಿಸುವ ಉದ್ಯಮಗಳಿಗೆ ನೀಡುವ ಎಲ್ಲಾ ಸವಲತ್ತುಗಳನ್ನು ನೀಡುವಲ್ಲಿ ಸರಕಾರಗಳು ಇಚ್ಛಾಶಕ್ತಿ ತೋರಿಸಬೇಕಾಗಿದೆ.

೯. ಮಹಿಳಾ ಮೀನುಗಾರರ ಜೀವನ, ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಹೆಚ್ಚು ವ್ಯವಸ್ಥಿತವಾದ ಅಧ್ಯಯನಗಳು ನಡೆಯಬೇಕಾಗಿದೆ. ಆಳವಾದ ಹಾಗೂ ಸ್ಪಷ್ಟವಾದ ವಿಚಾರ ವಿಶ್ಲೇಷಣೆಗಳನ್ನು ಹೊಂದಿದ ಅಧ್ಯಯನಗಳಿಂದ ಮಾತ್ರ ಮೊಗವೀರ ಮಹಿಳೆಯರ ಜೀವನದ ಬಗ್ಗೆ ಸ್ಪಷ್ಟ ಚಿತ್ರಣ ಸಿಗಲು ಸಾಧ್ಯ. ವಿಶ್ವವಿದ್ಯಾನಿಲಯಗಳು ಹಾಗೂ ಸರ್ಕಾರೇತರ ಸಂಘಗಳು ಈ ಬಗ್ಗೆ ಗಮನಹರಿಸಿ ಮೊಗವೀರ ಮಹಿಳೆಯರ ಸ್ಥಿತಿಗತಿಯ ಸಮಗ್ರ ಅಧ್ಯಯನಕ್ಕೆ ಪ್ರೇರಣೆ ನೀಡಬೇಕಾದ ಅಗತ್ಯವಿದೆ. ಸರಕಾರ ಅನುದಾನ ನೀಡಿ ವಿಸ್ತೃತ ಅಧ್ಯಯನ ನಡೆಸಿ ಅದರ ಫಲಿತಗಳನ್ನು ಅವಲಂಬಿಸಿದ ನಿಯಮಗಳನ್ನು, ಯೋಜನೆಗಳನ್ನು ರೂಪಿಸಿದಾಗ ನಿಜವಾದ ಕ್ರಮದಲ್ಲಿ ಮೊಗವೀರ ಮಹಿಳಾ ಸಬಲೀಕರಣ ಸಾಧ್ಯ.

೧೦. ಮೊಗವೀರ ಮಹಿಳೆಯರ ಜೀವನ ಕ್ರಮಗಳು, ಆರ್ಥಿಕ, ಸಾಮಾಜಿಕ, ರಾಜಕೀಯ ಸಾಧ್ಯತೆಗಳಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳು ಲಭ್ಯವಿರುವುದಿಲ್ಲ. ಆ ನಿಟ್ಟಿನಲ್ಲಿ ಸ್ಥಳೀಯ ಸಂಘ ಸಂಸ್ಥೆಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಬೆಳವಣಿಗೆ ಹಾಗೂ ಸಾಧನೆ ಇತ್ಯಾದಿಗಳ ದತ್ತಾಂಶ ಸಹಿತ ದಾಖಲೀಕರಣವನ್ನು ಕೂಡಾ ಮಾಡಬೇಕಾಗಿದೆ.

೧೧. ಸಾಗರ ವಿಪತ್ತು ಹಾಗೂ ಅಪಘಾತದಂತಹ ಅಪಾಯಗಳಿಂದ ರಕ್ಷಣೆಗೆ ಹಾಗೂ ಜೀವಹಾನಿಗೆ ಪರಿಹಾರ ಒದಗಿಸುವ ಹಲವಾರು ವಿಮಾ ಯೋಜನೆಗಳು ಜಾರಿಯಲ್ಲಿವೆ. ಆದರೆ ಮಹಿಳಾ ಮೀನುಗಾರರ ಆರ್ಥಿಕ ಸಂಕಷ್ಟಗಳಿಗೆ ಪರಿಹಾರ ನೀಡಬಲ್ಲ ಮತ್ತು ಮೀನುಗಾರಿಕೆಯ ರಜಾದಿನಗಳಲ್ಲಿ (ಪ್ರತಿ ವರ್ಷ ಮಳೆಗಾಲದಲ್ಲಿ ೨ ರಿಂದ ೩ ತಿಂಗಳು) ಜೀವನ ನಿರ್ವಹಣೆಗೆ ಆಧಾರವಾಗಬಲ್ಲ ವಿಮಾ ರಕ್ಷೆಯ ಕೊರತೆಯಿರುವುದು ಕಂಡುಬರುತ್ತದೆ. ಆ ನಿಟ್ಟಿನಲ್ಲಿ ಉಳಿತಾಯ ಹಾಗೂ ಸಂಕಷ್ಟ ನಿರ್ವಹಣೆಯನ್ನು ಒಳಗೊಂಡ ಹಾಗೂ ಈ ಎರಡೂ

ಪ್ರಯೋಜನವನ್ನು ಮಹಿಳೆಗೆ ನೀಡಬಲ್ಲ ವಿಮಾ ಯೋಜನೆಯನ್ನು ರೂಪಿಸಬೇಕಾಗಿದೆ. ವಿಮಾ ಸಂಸ್ಥೆಗಳು ಮೊಗವೀರ ಮಹಿಳೆಯರ ಬೇಡಿಕೆಯನ್ನು ಗುರುತಿಸಿ ವಿಶೇಷ ವಿಮಾ ರಕ್ಷಣೆಯನ್ನು ನೀಡುವ ಪ್ರಯತ್ನ ಮಾಡಬೇಕಾಗಿದೆ. ಜೀವ ವಿಮೆಯ ಬಗ್ಗೆ ಅರಿವು ಮೂಡಿಸುವ ಹಾಗೂ ಕಡಿಮೆ ವಿಮಾ ಕಂತಿನೊಂದಿಗೆ ಅಧಿಕ ಪ್ರಯೋಜನ ನೀಡಬಲ್ಲ ಹಾಗೂ ಮೀನುಗಾರಿಕೆಯ ರಜಾ ದಿನಗಳಲ್ಲಿ ಆರ್ಥಿಕ ಹೊರೆ ನೀಡದಂತಹ ವಿಮಾ ಉತ್ಪನ್ನಗಳನ್ನು ಒದಗಿಸಿಕೊಡುವ ಅಗತ್ಯತೆ ಇದೆ.

೧೨. ವೃತ್ತಿಯಲ್ಲಿ ಮಹಿಳೆಯರಿಗೆ ಹಾಗೂ ಪುರುಷರಿಗೆ ವೇತನ ಸಮಾನತೆಯನ್ನು ಜಾರಿಗೆ ತರುವಲ್ಲಿ ಪ್ರಯತ್ನಿಸಬೇಕಾಗಿದೆ. ಮಧ್ಯವರ್ತಿಗಳು ಹಾಗೂ ಕಾಂಟ್ರಾಕ್ಟರುಗಳು ಹೇರಿಕೆ (ಲೋಡಿಂಗ್) ಹಾಗೂ ಇಳಿಕೆ (ಅನ್‌ಲೋಡಿಂಗ್) ಮಾಡುವ ಕಾರ್ಮಿಕರಿಗೆ ಅಡ್‌ಹಾಕ್ ನೆಲೆಯಲ್ಲಿ ವೇತನ ನಿಗದಿ ಪಡಿಸುವುದು ಕಂಡುಬರುತ್ತಿದೆ. ಸರಿಯಾದ ಕ್ರಮದಲ್ಲಿ ವೇತನ ವಿತರಣೆ ಮಾಡದಿರುವುದು, ಕೆಲಸದ ಸ್ಥಳದಲ್ಲಿ ನೀರು, ಗಾಳಿ, ಶೌಚಾಲಯ, ವಿಶ್ರಾಂತಿ ಕೊಠಡಿಯಂತಂಹ ಪೂರಕ ವ್ಯವಸ್ಥೆಗಳನ್ನು ಒದಗಿಸಿಕೊಡುವುದು ಇಲ್ಲಿ ಅಗತ್ಯವಾಗಿದೆ.

೧೩. ಬಹಳಷ್ಟು ಬದಲಾವಣೆಗಳಿಗೆ ಹೊಂದಿಕೊಂಡಿದ್ದರೂ ಮೊಗವೀರ ಸಮುದಾಯದ ಕುಟುಂಬದಲ್ಲಿ ಈಗಲೂ ಪುರುಷ ಪ್ರಧಾನ ವ್ಯವಸ್ಥೆ ಜಾರಿಯಲ್ಲಿದೆ. ಅಧ್ಯಯನದಲ್ಲಿ ಗುರುತಿಸಿದಂತೆ ಕುಟುಂಬದ ನಿರ್ಣಯಗಳಲ್ಲಿ ಶೇಕಡಾ ೫೯ರಷ್ಟು ಪುರುಷರೇ ನಿರ್ಧರಿಸುತ್ತಾರೆ. ಆದುದರಿಂದ ಮಹಿಳಾ ಶಿಕ್ಷಣಕ್ಕೆ ಈ ಸಮುದಾಯದಲ್ಲಿ ಮಹತ್ವ ನೀಡಬೇಕಾದ ಅಗತ್ಯತೆ ಇದೆ. ಪ್ರತಿ ಹಂತದಲ್ಲಿ ಮೊಗವೀರ ಮಹಿಳೆಯರು ಹೊರಗೆ ದುಡಿಯುವ, ಕೌಟುಂಬಿಕ ಜವಾಬ್ದಾರಿ ನಿರ್ವಹಿಸುವ, ಹಾಗೂ ಹಿರಿಯ ಮತ್ತು ಕಿರಿಯರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಈ ಸಮುದಾಯದ ಮಹಿಳೆಯರು ಏಕಕಾಲಕ್ಕೆ ನಿರ್ವಹಿಸಬೇಕಾಗಿದೆ. ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕೊಡವುದರ ಕಡೆಗೆ ಒಲವು ತೋರಿದಾಗ ಹೆಚ್ಚು ಮಹಿಳೆಯರು ಶಿಕ್ಷಿತರಾದಾಗ ಮಾತ್ರ ಅವರಲ್ಲಿ ಆರ್ಥಿಕ ಸಬಲತೆ ಹಾಗೂ ಲಿಂಗ ಅಸಮಾನತೆಯನ್ನು ಎದುರಿಸುವ ಬಲ ಬರಲು ಸಾಧ್ಯ.

೧೪. ಮಹಿಳಾ ಮೀನುಗಾರಿಕೆ ಚಟುವಟಿಕೆಯು ಭಾರತದ ಅಭಿವೃದ್ಧಿಯಲ್ಲಿ ಯಾವುದೇ ಹೊಳೆಯುವ ಪಾತ್ರವಾಗಿ ಗೋಚರಿಸುತ್ತಿಲ್ಲ ಬದಲಾಗಿ ದೇಶದ ಯೋಜನಕಾರರು, ಅರ್ಥಶಾಸ್ತ್ರಜ್ಞರು, ಸರಕಾರಿ ಅಧಿಕಾರಿಗಳ ಹಾಗೂ ರಾಜಕಾರಣಿಗಳ ಬಡಾಯಿ ಕೊಚ್ಚಿಕೊಳ್ಳಲಿಕ್ಕಷ್ಟೇ ಅಣಿಯಾಗಿದೆ. ಮೊಗವೀರ ಮಹಿಳೆಯರಿಗೆ ಜೀವನ ಶೈಲಿಯ ಬದಲಾವಣೆಯ ಅಗತ್ಯತೆ ಇದೆ. ಶೋಷಣೆಯಿಂದ ರಕ್ಷಣೆ ಬೇಕಾಗಿದೆ. ಮೀನುಗಾರಿಕಾ ಸಮುದಾಯ ತುಳಿತಕ್ಕೆ ಒಳಗಾದ ಸಮುದಾಯವಾಗಿದ್ದು ಅದರಲ್ಲೂ ಮಹಿಳೆಯ ಜೀವನ ಅತೀ ಕೆಳಮಟ್ಟದಲ್ಲಿದೆ. ಯಾವುದೇ ಸಂಘಟನೆಗೆ ಹಾಗೂ ಕಾರ್ಮಿಕ ಕಾನೂನುಗಳು ಶೋಷಣೆಯಿಂದ ರಕ್ಷಣೆ ನೀಡುವಲ್ಲಿ ಪೂರಕವಾಗಿಲ್ಲ. ಏಕೆಂದರೆ ಅವರದ್ದು ಅನೌಪಚಾರಿಕ ವಲಯದ ಉದ್ಯಮವಾಗಿದ್ದು, ಅಭಿವೃದ್ಧಿಯ ಮಾಪನವನ್ನು ಕೇವಲ ಯಾಂತ್ರಿಕತೆ ಹಾಗೂ ಸಲಕರಣೆಗಳನ್ನಾಧರಿಸಿ

ಮಾಡಲಾಗಿರುತ್ತದೆ. ಮೀನುಗಾರಿಕಾ ಇಲಾಖೆಯ ಯೋಜನೆಗಳಲ್ಲಿ ಎಲ್ಲರನ್ನು ಒಳಗೊಳ್ಳುವ ಅಗತ್ಯವಿದೆ. ಮಹಿಳೆಯರನ್ನು ಒಳಗೊಂಡಿರುವ ಮೀನುಗಾರಿಕಾ ಚಟುವಟಿಕೆಯನ್ನು ಸೂಕ್ಷ್ಮವಾಗಿ ಗಮನಿಸಿ ಯೋಜನೆಗಳನ್ನು ಹಾಕಿಕೊಂಡಲ್ಲಿ ಮೀನುಗಾರಿಕಾ ಇಲಾಖೆಯ ಹಂತದಿಂದಲೇ ಮಹಿಳಾ ಸಬಲೀಕರಣಕ್ಕೆ ಪೂರಕ ವಾತಾವರಣ ನಿರ್ಮಾಣ ಸಾಧ್ಯ.

೧೫. ಮೊಗವೀರ ಸಮುದಾಯದ ರಾಜಕೀಯ ಪಾಲ್ಗೊಳ್ಳುವಿಕೆ ನಿರೀಕ್ಷಿತ ಮಟ್ಟದಲ್ಲಿಲ್ಲ. ಇದಕ್ಕೆ ಮುಖ್ಯ ಕಾರಣ ಅರಿವಿನ ಕೊರತೆ ಹಾಗೂ ಈ ಸಮುದಾಯದ ಮಹಿಳೆಯರಲ್ಲಿ ರಾಜಕೀಯ ತೊಡಗಿಸಿಕೊಳ್ಳುವಿಕೆಗೆ ಅಗತ್ಯವಿರುವಷ್ಟು ಸಮಯದ ಅಭಾವ. ಮಹಿಳಾ ಶಿಕ್ಷಣಕ್ಕೆ ಒತ್ತು ನೀಡುವುದು ಹಾಗೂ ರಾಜಕೀಯ ಸಬಲೀಕರಣದ ಅರಿವನ್ನು ಮೂಡಿಸುವ ಪ್ರಯತ್ನವನ್ನು ಮಾಡಿದಾಗ ಪಾಲ್ಗೊಳ್ಳುವಿಕೆ ಅಧಿಕವಾಗಲು ಸಾಧ್ಯ. ರಾಜಕೀಯ ಸಬಲೀಕರಣದ ಪ್ರಯೋಜನಗಳನ್ನು ತಿಳಿಸುವ ಅರಿವು ಕಾರ್ಯಕ್ರಮಗಳನ್ನು ಸ್ವ-ಸಹಾಯ ಸಂಘಗಳು, ಮೊಗವೀರ ಮಹಿಳಾ ಸಂಘಟನೆಗಳು ಆಯೋಜಿಸುವುದು ಈ ನಿಟ್ಟಿನಲ್ಲಿ ಬಹಳಷ್ಟು ಪೂರಕವಾಗಬಲ್ಲದು.

೧೬. ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಪ್ರೇರೇಪಿಸುವಲ್ಲಿ ಕೌಟುಂಬಿಕ ಸಹಕಾರದ ಅಗತ್ಯವಿದೆ. ಸಬಲೀಕರಣವನ್ನು ಸಾಧಿಸಬೇಕಾದರೆ ಮಹಿಳೆಗೆ ಪೂರಕ ವಾತಾವರಣವನ್ನು ನಿರ್ಮಿಸಿ ಕೊಡುವ ಹಾಗೂ ಸೂಕ್ತ ಸಹಕಾರ ನೀಡುವ ಜವಾಬ್ದಾರಿ ಆಕೆಯ ಪತಿ ಹಾಗೂ ಕುಟುಂಬದ ಇತರ ಸದಸ್ಯರಿಗಿದೆ. ಇಂತಹ ವಾತಾವರಣದ ನಿರ್ಮಾಣಕ್ಕೆ ಸಾಮಾಜಿಕ ಪರಿವರ್ತನೆ ಹಾಗೂ ಯೋಚನಾ ಕ್ರಮದಲ್ಲಿ ಬದಲಾವಣೆಯ ಅಗತ್ಯವಿದೆ. ಸಮಾನತೆಯ ಆಶಯಗಳು, ಕೌಟುಂಬಿಕ ಸಹಕಾರದ ಅಗತ್ಯತೆಗಳನ್ನು ಹಾಗೂ ಮಹಿಳಾ ಸಬಲೀಕರಣದ ಪ್ರಯೋಜನಗಳ ಅರಿವನ್ನು ಮೂಡಿಸುವ ಪ್ರಯತ್ನವನ್ನು ಸರಕಾರಗಳು, ಸಂಘಸಂಸ್ಥೆಗಳು ಹಾಗೂ ಸರ್ಕಾರೇತರ ಸಂಘಟನೆಗಳು ಮಾಡುವುದು ಮಹಿಳಾ ಸಬಲೀಕರಣ ಹಾಗೂ ರಾಜಕೀಯ ಸಬಲೀಕರಣಕ್ಕೆ ಪೂರಕವಾಗಬಲ್ಲದು. ಇಂತಹ ಮಾಹಿತಿ ಹಾಗೂ ಅರಿವು ಕಾರ್ಯಕ್ರಮಗಳು ಮಹಿಳೆ ಹಾಗೂ ಪುರುಷರಿಬ್ಬರನ್ನು ಸೇರಿಸಿಕೊಂಡು ನಡೆದಾಗ ಬಹಳಷ್ಟು ಪರಿಣಾಮಕಾರಿಯಾಗಬಲ್ಲದು.

೧೭. ಸಮಾಜದಲ್ಲಿ ಸೂಕ್ತ ಶೈಕ್ಷಣಿಕ ಹಾಗೂ ಸಾಮಾಜಿಕ ವಾತಾವರಣವನ್ನು ನಿರ್ಮಿಸಿ ಪುರುಷ ಹಾಗೂ ಮಹಿಳೆಯರನ್ನು ಸಮಾನವಾಗಿ ಪರಿಗಣಿಸುವ ಚಿಂತನೆಗಳನ್ನು ಬೆಳೆಸುವಲ್ಲಿ ಸಮಾಜ, ಸರಕಾರ, ಸಂಘ ಸಂಸ್ಥೆಗಳು ಸಂಘಟಿತ ಪ್ರಯತ್ನ ಮಾಡಬೇಕಾಗಿದೆ. ಸಾಮಾಜಿಕ ವ್ಯವಸ್ಥೆಯನ್ನು ಮಾರ್ಪಾಡುಗೊಳಿಸಿ ಮಹಿಳೆಯರ ಸಾಮರ್ಥ್ಯವನ್ನು ಗುರುತಿಸುವ, ಅವರಲ್ಲಿರುವ ಯೋಚನಾ ಕ್ರಮ, ಬುದ್ಧಿವಂತಿಕೆ, ಚಿಂತನೆಗಳನ್ನು ಗೌರವಿಸಿ ಅವರಿಗೆ ಶೈಕ್ಷಣಿಕ ಸಂಪನ್ಮೂಲವನ್ನು ಒದಗಿಸಿಕೊಡುವ ಪರಿಸ್ಥಿತಿಯನ್ನು ನಿರ್ಮಿಸಿಕೊಟ್ಟಾಗ ಸಬಲೀಕರಣ ಸಾಧ್ಯ. ಮಹಿಳಾಭಿವೃದ್ಧಿ ಕೇಂದ್ರಿತ ಶಿಕ್ಷಣ ಕ್ರಮ, ಸಾರ್ವಜನಿಕ ನೀತಿಗಳಿಂದ ಸಮಾಜದಲ್ಲಿರುವ ಲಿಂಗ ಅಸಮಾನತೆಯನ್ನು ಹೊಡೆದೋಡಿಸಲು ಸಾಧ್ಯ. ಪ್ರಸ್ತುತ ಕರ್ನಾಟಕ ಸರಕಾರ ಜಾರಿಗೆ

ತಂದಿರುವ ಹೆಣ್ಣು ಮಕ್ಕಳ ಉಚಿತ ಉನ್ನತ ಶಿಕ್ಷಣ ಯೋಜನೆಯಂತಹ ಶುಲ್ಕ ರಹಿತ ಶಿಕ್ಷಣದ ಅವಕಾಶಗಳು ಈ ನಿಟ್ಟಿನಲ್ಲಿ ಸಹಕಾರಿಯಾಗಬಲ್ಲವು. ಸಮಾಜದ ದುರ್ಬಲ ವರ್ಗದವರಿರುವ ಪ್ರದೇಶಗಳಲ್ಲಿ ಶಾಲೆಗಳನ್ನು ತೆರೆದು ಸ್ಥಳೀಯ ಶಿಕ್ಷಕರನ್ನು ನೇಮಿಸಿ ಶಿಕ್ಷಣದ ಅವಕಾಶಗಳನ್ನು ತೆರೆದಿಟ್ಟಾಗ ಮಹಿಳಾ ಶೈಕ್ಷಣಿಕ ಸಬಲೀಕರಣ ಸುಲಭ ಸಾಧ್ಯವಾಗುತ್ತದೆ.

೧೮. ಲಿಂಗ ಸಂವೇದಿ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಪುರುಷ ಮಹಿಳೆಯರಿಬ್ಬರಿಗೂ ಶಿಕ್ಷಣದ ಹಾಗೂ ತರಬೇತಿಯ ಅವಕಾಶವನ್ನು ನೀಡುವ ಜೊತೆಗೆ ಶಿಕ್ಷಣದ ಆಡಳಿತ, ಸುಧಾರಣೆ ಹಾಗೂ ನೀತಿಗಳನ್ನು ರೂಪಿಸುವಲ್ಲಿ ಮಹಿಳೆಯರಿಗೂ ಸಮಾನ ಸಹಭಾಗಿತ್ವ ನೀಡುವುದು ಸೂಕ್ತ. ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಶಿಕ್ಷಕರಲ್ಲಿ ಹಾಗೂ ತರಬೇತಿದಾರರಲ್ಲಿ ಸೂಕ್ತ ಜಾಗೃತಿ ಮೂಡಿಸಿದಾಗ ಮಹಿಳಾ ಸಮಾನತೆಯ ಆಶಯಗಳನ್ನು ಅವರು ವಿದ್ಯಾರ್ಥಿಗಳಲ್ಲಿ ರೂಢಿಸಲು ಸಾಧ್ಯವಾಗುತ್ತದೆ. ಲಿಂಗ ಅಸಮಾನತೆಯ ಸೂಕ್ತ ಗ್ರಹಿಕೆಯಾಗುವವರೆಗೂ ಪುರುಷ ಪ್ರಧಾನ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಕಷ್ಟದಾಯಕ ಕೆಲಸವಾಗುತ್ತದೆ. ಈ ಬಗ್ಗೆ ಶಿಕ್ಷಕರು ಹಾಗೂ ಹಿರಿಯರು ಸೂಕ್ತ ಮುತುವರ್ಜಿ ವಹಿಸಿದಾಗ ಲಿಂಗ ಅಸಮಾನತೆಯನ್ನು ದೂರವಿಡಲು ಹಾಗೂ ಮಹಿಳಾ ಸಬಲೀಕರಣವನ್ನು ಸಾಧಿಸಲು ಸಾಧ್ಯ.

೧೯. ಮೊಗವೀರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಭವಿಷ್ಯದಲ್ಲಿ ಹೆಚ್ಚಾಗುವ ಎಲ್ಲಾ ಲಕ್ಷಣಗಳು ಕಂಡುಬರುತ್ತಿದೆ. ಆದರೆ ಚುನಾವಣೆಗೆ ಸ್ಪರ್ಧಿಸಿ ರಾಜಕೀಯವನ್ನು ಪ್ರವೇಶಿಸುವ ಯುವ ಸಮುದಾಯಕ್ಕೆ ಸೂಕ್ತ ಮಾಹಿತಿ ಮತ್ತು ಆತ್ಮಸ್ಥೈರ್ಯವನ್ನು ನೀಡಿದಾಗ ಅವರಿಗೆ ಪುರುಷ ಪ್ರಾಬಲ್ಯವನ್ನು ಎದುರಿಸಿ ನಿಲ್ಲಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಾಗೂ ಸರಕಾರದ ಮಟ್ಟದಲ್ಲಿ ಸೂಕ್ತ ಯೋಜನೆಗಳನ್ನು ಹಾಕಿಕೊಂಡು ಪರಿಪೂರ್ಣ ತರಬೇತಿಯನ್ನು ನೀಡುವ ಪ್ರಯತ್ನವಾಗಬೇಕಿದೆ. ಇಂತಹ ತರಬೇತಿಗಳಿಂದ ಚುನಾಯಿತ ಮಹಿಳೆಯರು ಆತ್ಮಸ್ಥೈರ್ಯ ಬೆಳೆಸಿಕೊಳ್ಳುವ ಜೊತೆಗೆ ತಮ್ಮ ಜನಪ್ರತಿನಿಧಿಯ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ.

ಉಪಸಂಹಾರ

ಮೊಗವೀರರ ಸಾಮಾಜಿಕ ಪದರದಲ್ಲಿ ಕೆಲವೊಂದು ಬದಲಾವಣೆಗಳು ನಡೆಯುತ್ತಿದ್ದರೂ ಈ ಪದರದ ತಾತ್ತ್ವಿಕತೆಯು ಬದಲಾಗಲು ಸಾಧ್ಯವಿಲ್ಲ. ಸಮಾಜವು ಇನ್ನೂ ಜಾತೀಯ ಚೌಕಟ್ಟಿನಲ್ಲಿ ಬೆಸೆದುಕೊಂಡಿರುವುದು ಇದಕ್ಕೆ ಮೂಲ ಕಾರಣವಾಗಿದೆ. ಈ ಸಾಮಾಜಿಕ ಪದರದೊಳಗೆ ವಿದ್ಯಾಭ್ಯಾಸ, ವೃತ್ತಿ ಮತ್ತು ಇನ್ನಿತರ ಬೆಳವಣಿಗೆಗಳು ಸೇರಿಕೊಳ್ಳುತ್ತಾ ಹೊಸತನವನ್ನು ಹೊಂದುತ್ತಿರುವ ಕ್ರಿಯೆಯು ಇತರ ಸಮುದಾಯಗಳಂತೆಯೂ ಮೊಗವೀರ ಸಮುದಾಯದಲ್ಲಿ ಸರಾಗವಾಗಿ ನಡೆಯುತ್ತಿದೆ. ಮೊಗವೀರರಲ್ಲಿ ಮೀಸಲಾತಿ ಕುರಿತು ಮಾಹಿತಿಯ ಕೊರತೆ ಇದ್ದು, ಈ ಸವಲತ್ತುಗಳನ್ನು

ನಿರ್ಲಕ್ಷಿಸಿದವರ ಸಂಖ್ಯೆ ಗುರುತರವಾದುದು. ಅನಕ್ಷರಸ್ಥ ಮೀನುಗಾರಿಕೆ ಸಂಬಂಧಿ ಉದ್ಯೋಗ ಅವಲಂಬಿತ ಮೊಗವೀರರಲ್ಲಿ ಮೀಸಲಾತಿ ಅರಿವಿನ ಕೊರತೆ ಇದೆ. ಮೀಸಲಾತಿಯನ್ನು ಬಳಸಿಕೊಂಡಿರುವ ಕುಟುಂಬಗಳ ಆರ್ಥಿಕ ಸ್ಥಿತಿಗತಿಯನ್ನು ಅವಲೋಕಿಸಿದಾಗ ಈ ಎಲ್ಲ ಕುಟುಂಬಗಳು ಮಧ್ಯಮ ವರ್ಗ ಅಥವಾ ಕೆಳವರ್ಗದಲ್ಲಿರುವುದು ಗೋಚರಿಸುತ್ತದೆ. ಮೀಸಲಾತಿಯನ್ನು ಸೂಕ್ತವಾಗಿ ಬಳಸಿಕೊಂಡ ಸಮುದಾಯವು ಇನ್ನಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಿದೆ.

ಈ ಅಧ್ಯಯನದಲ್ಲಿ ಗಮನಿಸುವ ಮೊಗವೀರ ಮಹಿಳಾ ಸಬಲೀಕರಣವನ್ನು ಸಾಧಿಸಲು ಈ ವರ್ಗದ ಶೈಕ್ಷಣಿಕ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಬಲೀಕರಣವನ್ನು ಸಾಧಿಸುವ ಪ್ರಯತ್ನ ಮಾಡಬೇಕಾಗುತ್ತದೆ. ಮಹಿಳಾ ಶಿಕ್ಷಣದ ಬಗ್ಗೆ ಅರಿವನ್ನು ಮೂಡಿಸಿ ಹೊಸ ತಲೆಮಾರಿನಲ್ಲಿ ಶಿಕ್ಷಿತ ಮಹಿಳಾ ವರ್ಗವನ್ನು ಸೃಷ್ಟಿಸಿದಾಗ ಲಿಂಗ ಅಸಮಾನತೆ, ವೇತನ ತಾರತಮ್ಯ ಹಾಗೂ ಮಹಿಳಾ ದೌರ್ಜನ್ಯಗಳು ಕಡಿಮೆಯಾಗಲು ಸಾಧ್ಯ. ಕುಲಕಸುಬಾದ ಮೀನುಗಾರಿಕೆಯನ್ನು ಅವಲಂಬಿಸಿರುವ ಮಹಿಳೆಯರಿಗೆ ಮೂಲ ಸೌಕರ್ಯವನ್ನು ನೀಡಿ, ಅವರ ಆರ್ಥಿಕ ಸಂಕಷ್ಟವನ್ನು ಪರಿಹರಿಸಲು ಕ್ರಮ ಕೈಗೊಂಡಾಗ ಅವರ ಜೀವನ ಮಟ್ಟದಲ್ಲಿ ಸುಧಾರಣೆ ಸಾಧ್ಯವಾಗಲಿದೆ. ಸರಿಯಾದ ಶಿಕ್ಷಣವನ್ನು ನೀಡಿ ಮೊಗವೀರ ಮಹಿಳಾ ಸಮುದಾಯಕ್ಕೆ ಬಲ ತುಂಬಬೇಕಾದ ಕಾರ್ಯವನ್ನು ಈ ಸಮುದಾಯದ ಶಿಕ್ಷಿತರು, ಸಂಘ ಸಂಸ್ಥೆಗಳು, ಸ್ವ-ಸಹಾಯ ಸಂಘಗಳು ಹಾಗೂ ಸರಕಾರಗಳು, ಸರ್ಕಾರೇತರ ಸಂಘಗಳು ಸಾಂಘಿಕ ಪ್ರಯತ್ನದ ಮೂಲಕ ಮಾಡಬೇಕಾಗಿದೆ. ಶಿಕ್ಷಣ ಕೇವಲ ಅರಿವನ್ನು ನೀಡುವುದು ಮಾತ್ರವಲ್ಲ ಅವಕಾಶಗಳನ್ನು ತೋರಿಸಿ ಕೊಡಬಲ್ಲದು. ಶಿಕ್ಷಣ ಪಡೆದ ಮಹಿಳೆ ಮೀಸಲಾತಿಯ ಸೌಲಭ್ಯವನ್ನು, ಸರಕಾರದ ವಿವಿಧ ಯೋಜನೆಗಳ ಪ್ರಯೋಜನವನ್ನು ಪಡೆಯಲು ಸಮರ್ಥಳಾಗುತ್ತಾಳೆ. ರಾಜಕೀಯವಾಗಿಯೂ ಸಾಧಿಸಲು ಮಹಿಳೆಗೆ ಶಿಕ್ಷಣ ಉತ್ತಮ ಸಾಧನವಾಗಬಲ್ಲದು. ಇರುವ ಮೀಸಲಾತಿಯನ್ನು ಬಳಸಿಕೊಂಡು ಮೊಗವೀರ ಮಹಿಳೆಯರು ರಾಜಕೀಯವಾಗಿ ಬೆಳೆದು ನಾಯಕತ್ವವನ್ನು ರೂಢಿಸಿಕೊಂಡಲ್ಲಿ ನಿಜವಾದ ಅರ್ಥದಲ್ಲಿ ಮಹಿಳಾ ಸಬಲೀಕರಣವಾಗುತ್ತದೆ.

ಮಹಿಳೆಯರಿಗೆ ಉದ್ಯೋಗದಲ್ಲಿ ಹಾಗೂ ಆದಾಯದಲ್ಲಿ, ಸಮಾನತೆ ನೀಡದಿರುವುದು ಮೊಗವೀರ ಸಮುದಾಯದ ಕುಲಕಸುಬಾದ ಮೀನುಗಾರಿಕೆಯಲ್ಲಿ ಕಂಡುಬರುತ್ತದೆ. ಅಸಾಂಪ್ರದಾಯಿಕ ವೃತ್ತಿ ಹಾಗೂ ಕಸುಬುಗಳನ್ನು ಕಾನೂನಿನ ಚೌಕಟ್ಟಿನೊಳಗೆ ತಂದು ಮಹಿಳೆಯರಿಗೆ ಸಮಾನ ಅವಕಾಶ ಹಾಗೂ ಸಮಾನ ವೇತನ ನೀಡಬೇಕಾದ ಅಗತ್ಯತೆಯಿದೆ. ಉತ್ತಮ ಜೀವನಮಟ್ಟದ ನಿರ್ವಹಣೆಗೆ ಸೂಕ್ತ ಗಳಿಕೆಯು ಬೇಕಾಗಿದ್ದು, ಆ ನಿಟ್ಟಿನಲ್ಲಿ ನೀತಿ ನಿಯಮಗಳನ್ನು ರೂಪಿಸಬೇಕಾದ ಆಡಳಿತ ವರ್ಗ ಗಮನಹರಿಸಬೇಕಾಗಿದೆ. ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಅವರಿಗೆ ಸಮಾನತೆಯ ಅವಕಾಶವನ್ನು ನೀಡಲು ಸೂಕ್ತ ಕಾನೂನು ಮತ್ತು ಸಮತೋಲಿತ ಶಾಸಕಾಂಗದ ಅಗತ್ಯವಿದೆ.

ರಾಜಕೀಯವಾಗಿ ಮಹಿಳೆಯನ್ನು ಸಬಲೀಕರಿಸಲು ಪಂಚಾಯತ್‌ರಾಜ್‌ನ ಮೀಸಲಾತಿಯ ಕಾರ್ಯ ಪ್ರಧಾನವಾಗಿದೆ. ಆದರೆ ಮೀಸಲಾತಿಯನ್ನು ಬಳಸಿ ಚುನಾವಣೆಯಲ್ಲಿ ಸ್ಪರ್ಧಿಸಲು ಮಹಿಳೆಯರಿಗೆ ಸೂಕ್ತ ಪರಿಸರವನ್ನು ನಿರ್ಮಾಣ ಮಾಡಿಕೊಟ್ಟಾಗ ಅವರಲ್ಲಿರುವ ನಾಯಕತ್ವದ ಕೌಶಲ

ಬೆಳೆಯಲು ಸಾಧ್ಯ. ಪ್ರಗತಿಪರ ಮಹಿಳಾ ನೀತಿಯನ್ನು ರೂಪಿಸಿ ಮಹಿಳೆಯರಿಗೆ ನಾಯಕತ್ವ ನೀಡಿದಾಗ ದೇಶದ ಅಭಿವೃದ್ಧಿಗೆ ಪೂರಕವಾಗಬಲ್ಲದು. ಉಡುಪಿ ಜಿಲ್ಲೆಯ ಮೊಗವೀರ ಮಹಿಳೆಯರು ರಾಜಕೀಯವಾಗಿ ಬೆಳೆಯಲು ಪ್ರಯತ್ನಿಸುತ್ತಿದ್ದು, ಭವಿಷ್ಯದಲ್ಲಿ ಉತ್ತಮ ನಾಯಕತ್ವ ನೀಡಬಲ್ಲ ಭರವಸೆಯನ್ನು ಹುಟ್ಟಿಸುತ್ತಿದ್ದಾರೆ. ಈ ಸಮುದಾಯದ ರಾಜಕೀಯ ಅಭಿವೃದ್ಧಿಯು ಕೇವಲ ಈ ಸಮುದಾಯಕ್ಕೆ ಮಾತ್ರವಲ್ಲ ಇತರ ಹಿಂದುಳಿದ ಸಮುದಾಯಗಳಿಗೂ ಮಾದರಿಯಾಗಬಲ್ಲದು.

ಪರಾಮರ್ಶನ ಗ್ರಂಥಗಳು:

- ಅಕ್ಷತಾ, ೨೦೧೦, *'ಏ ಸ್ಟಡಿ ಆನ್ ಸೋಶಿಯೋ ಇಕಾನಮಿಕ್ ಪ್ರಾಬ್ಲಮ್ಸ್ ಆಫ್ ಫಿಶ್ ವೆಂಡಿಂಗ್ ಮೊಗವೀರ ವುಮೆನ್ ಇನ್ ಉಡುಪಿ ತಾಲೂಕು,* ಮಂಗಳೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ಕೋರ್ಸಿನ ಭಾಗವಾಗಿ ಸಲ್ಲಿಸಿದ ಪ್ರಬಂಧ.

- ಅಜಯ್ ಕುಮಾರ್, ೨೦೧೫ *'ವುಮೆನ್ ಶ್ರಮ ಉತ್ಪಾದ್ ಇನ್ ಉತ್ತರಕಾಂಡ್',* ಥರ್ಡ್ ಕಾನ್ಸೆಪ್ಟ್ ಏಪ್ರಿಲ್, ವಾಲ್ಯುಂ ೨೯, ನಂ. ೩೩೮, ಪು. ೩೬-೩೯.

- ಅನ್ನಪೂರ್ಣೇಶ್ವರಿ.ಎನ್, ೨೦೧೪, *'ಮಹಿಳಾ ಸಬಲೀಕರಣಕ್ಕಾಗಿ ಶಿಕ್ಷಣ',* ಸತೀಶ.ಎಂ.ಇ(ಸಂ), ಸ್ತ್ರೀ ವಾದ ಮತ್ತು ಭಾರತೀಯತೆ, ಕಾಲ ಪ್ರಕಾಶನ, ಬೆಂಗಳೂರು, ಪು. ೫೮-೬೫

- ಅನ್ನಪೂರ್ಣೇಶ್ವರಿ.ಎನ್, ಒಡೆಯರ್.ಡಿ ಹೆಗ್ಗಡೆ, ೨೦೦೭, *'ಕುಟುಂಬ, ಮಹಿಳೆ ಮತ್ತು ಆರ್ಥಿಕತೆ',* ಚೇತನ ಬುಕ್ ಹೌಸ್, ಮೈಸೂರು.

- ಅನಿತಾ.ಪಿ, ೨೦೦೯, *'ಇಕಾನಾಮಿಕ್ ಇಂಪ್ಯಾಕ್ಟ್ ಆಫ್ ಸ್ವರ್ಣಜಯಂತಿ ಗ್ರಾಮ್ ಸ್ವರೋಜ್‌ಗಾರ್ ಯೋಜನಾ ಸ್ಕೀಮ್ ಓನ್ ವುಮೆನ್ ಬೆನೆಫೀಶರೀಸ್: ಆನ್ ಎಂಪಿರಿಕಲ್ ಅನಾಲೀಸಿಸ್',* ಸದರ್ನ್ ಇಕಾನಾಮಿಸ್ಟ್, ಸೆಪ್ಟೆಂಬರ್ ೧೫.

- ಅನುಪಮಾ.ಎಚ್.ಎಸ್, ೨೦೧೮, *'ಮಹಿಳಾ ಪಯಣ: ಹೀಗೆರೆಡು ವಿಭಿನ್ನ ಮಾರ್ಗ',* ಸಂವಾದ, ಮಾರ್ಚ್.

- ಅಮರ್ತ್ಯಸೇನ್, ಗ್ಯಾರಿ ಬೆಕ್ಕರ್, ೧೯೯೯, *'ಡೆವಲಪ್‌ಮೆಂಡ್ ಆ್ಯಸ್ ಫ್ರೀಡಂ',* ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, ಪು. ೧೮೯- ೧೯೪.

- ಅಮಲ್ ಮಂಡಲ್, ೨೦೦೩. *'ವುಮೆನ್ ಇನ್ ಪಂಚಾಯತ್ ರಾಜ್ ಇನ್‌ಸ್ಟಿಟ್ಯೂಶನ್'* ಕನಿಷ್ಕಾ ಪಬ್ಲಿಷರ್, ಡಿಸ್ಟ್ರಿಬ್ಯೂಟರ್ಸ್, ೪೬೯೭/೫-೧ಎ, ಅನ್ಸಾರಿ ರೋಡ್, ದರಿಯಾಗಂಜ್, ನ್ಯೂ ಡೆಲ್ಲಿ, ಪು. ೧೫೪-೧೫೫.

- ಅಮೀನ್.ಆರ್ ಬೆಕ್ಕರ್ ಎಸ್, ಬಯೇಸ್, ೧೯೯೮, *'ಎನ್‌ಜಿಒ-ಪ್ರೊಮೋಟೆಡ್ ಮೈಕ್ರೋಕ್ರೆಡಿಟ್ ಪ್ರೋಗ್ರಾಮ್ಸ್ ಆ್ಯಂಡ್ ವುಮೆನ್ಸ್ ಎಂಪವರ್‌ಮೆಂಟ್ ಇನ್ ರೂರಲ್ ಬಾಂಗ್ಲಾದೇಶ: ಕ್ವಾಂಟಿಟೇಟಿವ್ ಆ್ಯಂಡ್ ಕ್ವಾಲಿಟೇಟಿವ್ ಎವಿಡೆನ್ಸ್',* ವಿಂಟರ್ ಜೆ ದೇವ್ ಏರಿಯಸ್, ಪು. ೨೨೧-೨೩೬.

- ಅರುಣ, ೨೦೦೯, *'ವುಮೆನ್ ಎಂಪವರ್‌ಮೆಂಟ್, ಮಿತ್ ಆ್ಯಂಡ್ ರಿಯಾಲಿಟಿ',* ದೀಪ ಪ್ರಕಾಶನ, ನ್ಯೂಡೆಲ್ಲಿ, ಪು. ೧೮.

- ಅಸಾಂಗ್.ಆರ್.ಹೆಚ್, ವಿಲಿಯಂ ಹಾಗೂ ಇತರರು, ೨೦೦೧, *'ಅಲ್ಟರ್‌ನೇಟಿವ್ ಲೈವ್ಲಿಹುಡ್ ಇನ್ ಅ ಕೋಸ್ಟಲ್ ವಿಲೇಜ್',* (ಸಂ) 'ಗ್ಲೋಬಲ್ ಸಿಂಪಸಿಯಮ್ ಒನ್ ವುಮೆನ್ ಇನ್ ಫಿಶರೀಸ್', ಸಿಕ್ಸ್ತ್ ಏಷಿಯನ್ ಫಿಶರೀಸ್ ಪೋರಮ್, ೨೯ ನವೆಂಬರ್ ೨೦೦೧. ಪು.೯೮

- ಅಹಿಲನ್.ಬಿ ಮತ್ತು ಸೆಲ್ವರಾಜ್.ಪಿ, ೧೯೯೧, 'ಲೆವೆಲ್ಸ್ ಅಂಡ್ ಪ್ಯಾಟರ್ನ್ಸ್ ಆಫ್ ಅರ್ನಿಂಗ್ಸ್ ಅಫ್ ಫಿಶರ್ ವುಮೆನ್ ಇನ್ ಚಿದಾಂಬರನ್ನರ್ ಡಿಸ್ಟ್ರಿಕ್ಟ್ ಆಫ್, ತಮಿಳುನಾಡ್, ಫಿಶಿಂಗ್ ಚೈಮ್ಸ್, ವಾಲ್ಯುಂ, ೨ ನಂ.೭.

- ಅಂಜನಪ್ಪ.ಬಿ.ಹೆಚ್, ೨೦೦೯, 'ಮಹಿಳೆ ಮತ್ತು ದುಡಿಮೆ', ದೇಸಿ ಪುಸ್ತಕ ಪ್ರಕಾಶನ, ಬೆಂಗಳೂರು, ಅಗರ್‌ವಾಲ.ಡಿ, ೨೦೦೧, 'ಎಜ್ಯುಕೇಶನ್ ಫಾರ್ ಎಂಪವರ್‌ಮೆಂಟ್-

ಮೀನಿಂಗ್‌ಫುಲ್ ಅಂಡ್ ರೆಲೆವೆಂಟ್, ಸೋಶಿಯಲ್ ವೆಲ್‌ಫೇರ್, ವಾಲ್ಯುಂ ೪೮, ನಂ.೨. ಪು. ೬-೮.

- ಆಶಾಲತಾ.ಎಸ್, ರಾಮಚಂದ್ರ.ಸಿ, ಶೀಲ.ಐ, ದಿವಾನ್.ಎ.ಡಿ. ಆ್ಯಂಡ್ ಸತಿಯದಾಸ್.ಆರ್, ೨೦೦೨, *'ಚೇಂಜಿಂಗ್ ರೋಲ್ಸ್ ಆಫ್ ಫೀಶರ್‌ಮನ್ ಇನ್ ಇಂಡಿಯಾ: ಇಶ್ಯೂಸ್ ಆ್ಯಂಡ್ ಪ್ರಾಸ್‌ಪೆಕ್ಟಿವ್*, ಪು. ೨೧-೪೩.
- ಇಂದಿರಾ. ಆರ್, ೨೦೧೧, *'ಮಹಿಳಾ ಸಬಲೀಕರಣ'*, ಯೋಜನಾ ಮಾಸ ಪತ್ರಿಕೆ, ಪು. ೩೨.
- ಇಂದಿರಾ ರಾಜಾರಾಮ್, ೨೦೦೭, *'ವುಮೆನ್ ಇನ್ ದ ಇಲೆವೆನ್ತ್ ಪ್ಲಾನ್'*, ಯೋಜನಾ, ಮೇ, ಪು. ೨೮.
- ಇಂದಿರಾ.ಎಸ್, ೨೦೧೦, *'ಮಹಿಳೆ ಮತ್ತು ಸವಾಲುಗಳು'*, ಶ್ರುತಿ ಲೋಕ ಪ್ರಕಾಶನ, ಮೈಸೂರು.
- ಈಸ್ಟರ್ ಭೋಸರ್‌ಅಫ್, ೧೯೦, *'ವುಮನ್ಸ್ ರೋಲ್ ಇನ್ ಇಕಾನಾಮಿಕ್ ಡೆವಲಪ್‌ಮೆಂಟ್,'* ಲಂಡನ್, ಅರ್ತ್ ಸ್ಕ್ಯಾನ್ಸ್.
- ಉಚ್ಚಿಲ ವಾಸುದೇವ, ೨೦೦೭, *'ಕರಾವಳಿಗೆ ಬೇಕಾದವರು'*, ಮಾನಾದಿ ಸದಾನಂದ ಸಾಲ್ಯಾನ್, ಹೆಜಮಾಡಿ-ಕೋಡಿ', ಮೊಗವೀರ ವಾಲ್ಯುಂ ೬೮ ನಂ.೧, ಜುಲೈ.
- ಉಜ್ವಲ್ ಸಾಮಂತ್, ೧೯೯೫, *'ಲಿಟರೆಸಿ ಆ್ಯಂಡ್ ಎಂಪವರ್‌ಮೆಂಟ್ ಅಮೊಂಗ್ ಬಾಂಬೆ ಸ್ಲಮ್ ವುಮೆನ್'*, ಪಿಎಚ್‌ಡಿ ಮಹಾಪ್ರಬಂಧ, ಸಿರಾಕ್ಯೂಸ್ ಯುನಿವರ್ಸಿಟಿ.
- ಉದಯ ಕುಮಾರ ಇರ್ವತ್ತೂರು, ೨೦೦೭, *'ಉಡುಪಿ ಜಿಲ್ಲೆ, ಆಧುನೀಕರಣ, ಅಭಿವೃದ್ಧಿ ಮತ್ತು ಕೈಗಾರಿಕೆ'* ದಾಮಿನಿ ಸಾಹಿತ್ಯ ಪ್ರಕಾಶನ, ಬೆಂಗಳೂರು.
- ಉನ್ನತಿ, ೨೦೦೧, *'ಸ್ಟೇಟಸ್ ಆಫ್ ಪಂಚಾಯತ್ ರಾಜ್ ಇನ್ಸ್ಟಿಟ್ಯೂಷನ್ಸ್ ಇನ್ ಗುಜರಾತ್ ಅಂ ಅಹಮದಬಾದ್.*
- ಎಡ್ಗರ್ ಥರ್ಸ್ಟನ್, ೨೦೧೧, *'ಕಾಸ್ಟಸ್ ಆ್ಯಂಡ್ ಟ್ರೈಬ್ಸ್ ಆಫ್ ಸೌದರ್ನ ಇಂಡಿಯಾ'*, ಏಷಿಯಾನ್ ಎಜುಕೇಶನಲ್ ಸರ್ವಿಸ್, ನ್ಯೂ ಡೆಲ್ಲಿ.
- ಐಯನ್‌ಪಿಳ್ಳೈ.ಎಸ್ ಮತ್ತು ಕುಲಾಂಡಾಯಿ ಥೆರೆಸಾ, ೨೦೦೧, *'ಸ್ಟೇಟಸ್ ಇನ್‌ಸೈಡ್ ಆ್ಯಂಡ್ ಔಟ್‌ಸೈಡ್ ದ ಹೋಮ್ ಕೋ-ರಿಲೇಟೆಡ್'*, ಸೋಷಿಯಲ್ ವೆಲ್‌ಫೇರ್.
- ಒಡೆಯರ್.ಡಿ ಹೆಗ್ಗಡೆ, ಅನ್ನಪೂರ್ಣೇಶ್ವರಿ.ಎನ್, ೨೦೧೧, *'ಮಹಿಳಾ ಅಧ್ಯಯನಗಳು'*, ಸಿ.ಪಿ ಇನ್ನೋವೇಷನ್ಸ್ ಪ್ರಕಾಶಕರು, ಬೆಂಗಳೂರು ಪು. ೩೫-೪೪.
- ಕಲವಾಸ್.ಎ.ಜಿ, ೧೯೮೧, *'ಸೊಶಿಯೋ ಎಕಾನಮಿಕ್ ಕಂಡಿಷನ್ಸ್ ಆಫ್ ದ ಕೋಸ್ಟಲ್ ರೂರಲ್ ಸೆಕ್ಟರ್'*, ಸಿಎಂಎಫ್‌ಆರ್‌ಐ ಬುಲೆಟಿನ್ ೩೦, ಪು. ೪೨-೪೪.
- ಕಲ್ಪಗಮ್, ೧೯೯೯, *'ವುಮೆನ್ ವರ್ಕ್ ಅಂಡ್ ಡೊಮೆಸ್ಟಿಕ್ ಡ್ಯೂಟೀಸ್: ಇನ್‌ಕಮ್ ಪ್ಲಾನಿಂಗ್ ಫಾರ್ ಹೌಸ್‌ವೈವ್ಸ್'*, ದ ಇಂಡಿಯನ್ ಜರ್ನಲ್ ಆಫ್ ಲೇಬರ್ ಇಕಾನಾಮಿಕ್ಸ್, ವಾಲ್ಯುಂ ನಂ.೪೨, ನಂ.೪
- ಕಲ್ಪನಾ ಕನ್ನಬಿರಾನ್, ೨೦೦೯, *'ದ ಲಾ, ಜೆಂಡರ್ ಆ್ಯಂಡ್ ವುಮೆನ್'*, ಇಕಾನಾಮಿಕ್ ಆ್ಯಂಡ್ ಪಾಲಿಟಿಕಲ್ ವೀಕ್ಲೀ, ಅಕ್ಟೋಬರ್. ವಾಲ್ಯುಂ ಎಕ್ಸ್ ಎಲ್‌ಐವಿ, ನಂ. ೪೪, ಪು. ೩೩-೩೬.

- ಕವಿತಾ ರೈ.ಜಿ. ಆರ್, ೨೦೧೨, *'ಜಾಗತೀಕರಣ ಮತ್ತು ಮಹಿಳಾ ಅಸ್ತಿತ್ವದ ಪ್ರಶ್ನೆ,'* ಸತೀಶ್ ಎಂ.ಈ, (ಸಂ) ಕಾಲ ಪ್ರಕಾಶನ, ಬೆಂಗಳೂರು. ಪು. ೧೫೮.

- ಕವಿತಾ ಮಿಶ್ರಾ ೨೦೦೬, *'ವುಮನ್ಸ್ ರೋಲ್ ಇನ್ ಪಾಲಿಟಿಕ್ಸ್ ಇನ್ ಮಾಡರ್ನ್ ವರ್ಲ್ಡ್',* ಓಮೇಗಾ ಪಬ್ಲಿಕೇಷನ್ಸ್, ೪೩೭೮/೫ ಅನ್ಸಾರಿ ರೋ, ದರಿಯಾಗಂಜ್, ನ್ಯೂ ಡೆಲ್ಲಿ, ಪು.೯೩-೧೨೬.

- ಕಾರ್ಲ್ ಮಾರ್ಲಿಜ್, ೧೯೯೫, *'ವುಮೆನ್ ಆ್ಯಂಡ್ ಎಂಪವರ್‌ಮೆಂಟ್, ಪಾರ್ಟಿಸಿಪೇಷನ್ ಆ್ಯಂಡ್ ಡಿಸಿಷನ್ ಮೇಕಿಂಗ್',* ನ್ಯೂಜೆಸ್ಸಿ ಜೆಜ್ ಬುಕ್ಸ್ ಲಿಮಿಟೆಡ್, ಲಂಡನ್.

- ಕ್ಯಾರೋಲ್ ಲೆ ಬೆಚ್ಚಿ, ೨೦೦೩, *'ದ ಪಾಲಿಟಿಕ್ಸ್ ಆಫ್ ಆಫೆರ್‌ಮೆಟಿವ್ ಆ್ಯಕ್ಷನ್: ವುಮೆನ್, ಇಕ್ವಾಲಿಟಿ ಅಂಡ್ ಕ್ಯಾಟಗರಿ ಪಾಲಿಟಿಕ್ಸ್',* ಸೇಜ್ ಪಬ್ಲಿಕೇಷನ್ಸ್, ಲಂಡನ್.

- ಕ್ರಿಟಿಜ್ ಅಂಡ್ ಮ್ಯಾಕಿನ್ವ, ಅಡೆ ಬೊಸೊಯ್, ೧೯೯೧, *'ಯೂತ್ ಆ್ಯಂಡ್ ರಿಪ್ರೊಡೆಕ್ಟಿವ್ ಹೆಲ್ಸ್ ಇನ್ ಆಫ್ರಿಕಾ',* ದ ಸೆಂಟರ್ ಫಾರ್ ಡೆವಲಪ್ ಮೆಂಟ್ ಆ್ಯಂಡ್ ಪೊಪ್ಯುಲೇಶನ್ ಅಕ್ಟಿವಿಟೀಸ್, ಸಬ್-ಸಹರನ್ ಆಫ್ರಿಕಾ.

- ಕುಲ್ದೀಪ್ ಫಾಡಿಯಾ, ೨೦೧೪, *'ವುಮೆನ್ ಎಂಪವರ್‌ಮೆಂಟ್ ಥ್ರೂ ಪಾಲಿಟಿಕಲ್ ಪಾರ್ಟಿಸಿಫೇಶನ್ ಇನ್ ಇಂಡಿಯಾ',* ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಎಡ್‌ಮಿನಿಸ್ಟ್ರೇಷನ್, ಜುಲೈ-ಸೆಪ್ಟೆಂಬರ್, ವಾಲ್ಯುಂ ಎಲ್.ಎಕ್ಸ್ ನಂ.೩.

- ಕೇಶವನ್ ಪ್ರಸಾದ್.ಕೆ, ೨೦೧೦, *'ಬುಂಡೆ ಬೆಸ್ತರು',* ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಗ್ಲಾಡೀಸ್ ಮೇರಿ ಜಾನ್, ೨೦೦೮, *'ಎಂಪವರ್‌ಮೆಂಟ್ ಆಪ್ ರುರಲ್ ವುಮೆನ್ ಥ್ರೂ ಸೆಲ್ಫ್ ಹೆಲ್ಪ್ ಗ್ರೂಪ್',* ಸದರ್ನ್ ಇಕಾನಾಮಿಸ್ಟ್, ಮಾರ್ಚ್.

- ಗೀತಾ ಕೃಷ್ಣಮೂರ್ತಿ, ೨೦೦೧, *'ಮಹಿಳಾ ಕಾನೂನು ಮತ್ತು ರಾಜಕಾರಣ',* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಗೀತಾಂಜಲಿ.ಕೆ, ೨೦೧೫, *'ಇಂಪ್ಯಾಕ್ಟ್ ಆಪ್ ಎಂ .ಜಿ. ಎನ್. ಆರ್. ಇ. ಜಿ. ಎಸ್ ಒನ್ ಅಸ್ಸೆಟ್ ಕ್ರಿಯೇಷನ್ ಎಂಪವರ್‌ಮೆಂಟ್ ಆಪ್ ವುಮೆನ್ ವೇಜಸ್ ಸೀಕರ್ಸ್-ಎ ಕೇಸ್ ಸ್ಟಡಿ'.* ಸದರ್ನ್ ಇಕಾನಾಮಿಸ್ಟ್, ಏಪ್ರಿಲ್.

- ಗ್ರೀನ್ ಹಲ್ಫ್, ಸುಸಾನ್, ೧೯೮೫, *'ಸೆಕ್ಸುವಲ್ ಸ್ಟ್ರಾಟಿಫಿಕೇಶನ್: ದ ಅದರ್ ಸೈಡ್ ಆಫ್ ಗ್ರೋಥ್ ಇನ್ ಈಸ್ಟ್ ಎಶಿಯಾ* ಪಾಪುಲೇಶನ್ ಆ್ಯಂಡ್ ಡೆವಲಪ್‌ಮೆಂಡ್ ರಿವ್ಯೂ, ವಾಲ್ಯೂಂ ನಂ.೧೧, ಪು. ೨೬೫-೩೧೪.

- ಗುರುರಾಜ ಭಟ್, ೧೯೭೫, *'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್',* ಕಲ್ಯಾಣ್ ಪುರ್, ಸೌತ್‌ಕೆನರಾ.

- ಗೋಪಾಲಗೌಡ ಹಾಗೂ ಮತ್ತಿತರರು, ೧೯೯೬, *'ಡೆವಲಪ್‌ಮೆಂಟ್ ರೋಲ್ ಆಫ್ ದ ವುಮೆನ್ ಮೆಂಮರ್ಸ್ ಆಫ್ ಪಂಚಾಯತ್ ರಾಜ್ ಇನ್ಸ್ಟಿಟ್ಯೂಷನ್ಸ್: ಎ ಸ್ಟಡಿ ಇನ್ ಕರ್ನಾಟಕ',* ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್, ಎನ್‌ಐಆರ್‌ಡಿ, ಹೈದಾರಬಾದ್, ವಾಲ್ಯುಂ ನಂ.೧೫, ನಂ. ೨, ಪು. ೨೪೯-೨೫೯.

- ಗೋಪಿಂದಪ್ಪ.ಪಿ, ೨೦೧೨, 'ವುಮೆನ್ ವರ್ಕರ್ಸ್ ಇನ್ ಗಾರ್ಮೆಂಟ್ ಫ್ಯಾಕ್ಟೋರಿಸಿ ಇನ್ ಕರ್ನಾಟಕ', ಸದರ್ನ್ ಎಕೋನಾಮಿಸ್ಟ್ ಜನವರಿ.
- ಗೌರವ್ ಶರ್ಮ, ೨೦೧೫, 'ಗಾಂಧಿ ಸ್ ಫೆಮಿನಿಸ್ಟ್ ಐಡಿಯಾಸ್', ಥರ್ಡ್ ಕಾನ್ಸೆಪ್ಟ್, ಏಪ್ರಿಲ್.
- ಗಂಗಾಧರ್.ಜಿ, ೨೦೧೧, 'ಆ್ಯನ್ ಇವಾಲ್ಯುಯೇಷನ್ ಆಫ್ ಇಂಫ್ಯಾಕ್ಟ್ ಆಫ್ ಫಿಶರೀಸ್ ಸಬ್‌ಸೈಡ್ಸ್ ಒನ್ ಫಿಶರೀಸ್ ರಿಸೋರ್ಸ್ ಅಂಡ್ ಟ್ರೇಡ್, ಎ ಕೇಸ್ ಸ್ಟಡಿ ಆಫ್ ಮಂಗಳೂರು ತಾಲೂಕ್', ಮಂಗಳೂರು ವಿಶ್ವವಿದ್ಯಾಲಯ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ.
- ಗಂಗ್ರೆಡೆ ಕೆ.ಡಿ, ೨೦೦೦, 'ಗಾಂಧಿ ಆ್ಯಸ್ ಮಿಲಿನಿಯಮ್ ಮಿಥ್', ಗಾಂಧಿ ಮಾರ್ಗ, ವಾಲ್ಯೂಂ ೨೨, ಪು.೩೩.
- ಗಂಗ್ರೆಡೆ.ಕೆ.ಡಿ, ೨೦೦೦, 'ಗಾಂಧಿ ಆ್ಯಂಡ್ ಎಂಪವರ್‌ಮೆಂಟ್ ಆಫ್ ವುಮೆನ್' ಗಾಂಧಿ ಮಾರ್ಗ, ವಾಲ್ಯುಂ ೨೨, ಪು. ೪೩೭.
- ಚೆನ್ನಪ್ಪ.ಕೆ.ಸಿ, ೨೦೧೦, 'ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ' ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚೈತ್ರ ಸಿನ್ಹ, ೨೦೦೭, 'ಇಮೇಜೆಸ್ ಆಫ್ ಮದರ್‌ಹುಡ್: ದ ಹಿಂದು ಕೋಡ್ ಬಿಲ್ಲ್ ಡಿಸ್‌ಕೋರ್ಸ್', ಇಕಾನಾಮಿಕ್ ಆ್ಯಂಡ್ ಪಾಲಿಟಿಕಲ್ ವೀಕ್ಲೀ, ವಾಲ್ಯುಂ ೪೨, ನಂ.೪೩, ಪು. ೪೯–೫೭.
- ಚಂದ್ರನ್.ಎಂ, ೨೦೧೨, 'ವುಮೆನ್ ಎಂಪವರ್‌ಮೆಂಟ್ ಥ್ರೂ ಮೈಕ್ರೋ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಇನ್ ತಮಿಳುನಾಡು', ಸದರ್ನ್ ಇಕಾನಾಮಿಸ್ಟ್, ಜುಲೈ.
- ಚಂದ್ರಪೂಜಾರಿ.ಎಂ, ೨೦೦೧, 'ಸಮುದಾಯ ಮತ್ತು ಸಹಭಾಗಿತ್ವ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಪೂಜಾರಿ.ಎಂ. ೨೦೦೧, 'ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಪೂಜಾರಿ.ಎಂ, ೨೦೧೪, 'ಅಭಿವೃದ್ಧಿ ಮತ್ತು ರಾಜಕೀಯ' ಪಲ್ಲವ ಪ್ರಕಾಶನ, ಚನ್ನಪಟ್ಟಣ ಪು. ೭೬–೭೭.
- ಚಂದ್ರಶೇಖರ್.ಟಿ.ಆರ್., ೨೦೦೧. 'ಮಹಿಳೆ: ಆರ್ಥಿಕತೆ ಮತ್ತು ಅಭಿವೃದ್ಧಿ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಶೇಖರ್.ಟಿ.ಆರ್., ೨೦೦೮, 'ಲಿಂಗ ಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಚಂದ್ರಶೇಖರ.ಟಿ.ಆರ್, ೨೦೧೧, 'ಹಕ್ಕು ಹಂಗು', ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಚಂದ್ರಶೇಖರ್.ಟಿ.ಆರ್, ೨೦೧೮, 'ಲಿಂಗ ಸಮಾನತೆ ಮತ್ತು ಅಸಮಾನತೆಯ ಅಭಿವೃದ್ಧಿ ಮಾದರಿಗಳು ಒಂದು ತುಲನಾತ್ಮಕ ವಿಶ್ಲೇಷಣೆ', ಹೊಸತು. ಅಕ್ಟೋಬರ್,
- ಚಂದ್ರಶೇಖರ್ ಬನ್ನೂರ್, 'ವುಮೆನ್ ಹ್ಯೂಮನ್ ರೈಟ್ಸ್', ಥರ್ಡ್ ಕಾನ್ಸೆಪ್ಟ್, ಅಕ್ಟೋಬರ್ ೨೦೧೫.

- ಜನೆಟ್ ಮಾಮ್‌ಸೆನ್ ಹೆನ್ಸಾಲ್, ೨೦೦೪, *'ಜೆಂಡರ್ ಆ್ಯಂಡ್ ಡೆವಲಪ್‌ಮೆಂಟ್'* ಲಂಡನ್: ರೂಟ್‌ಬೆಡ್ಸ್, ನ್ಯೂ ಫೆಟ್ಟೆರ್ ಲೇನ್
- ಜಯಮ್ಮ.ಎಚ್ ಹಾಗೂ ಕರಿಯಣ್ಣ, ೨೦೦೦, *'ಹೆಣ್ಣಿನ ಸ್ಥಾನಮಾನ ಒಂದು ಪುನರಾವಲೋಕನ',* ಜಯ ಪ್ರಕಾಶನ, ಬೆಂಗಳೂರು.
- ಜಯರಾಮನ್.ಆರ್, ೨೦೦೮, *'ಫರ್‌ಪಾರ್ಮೆನ್ಸ್ ಅನಾಲಿಸಿಸ್ ಆಫ್ ಫಿಶರ್ ವುಮೆನ್ ಸೆಲ್ಫ್ ಹೆಲ್ಪ್ ಗ್ರೂಪ್ಸ್'* ತಮಿಳ್‌ನಾಡು ಜೆ ವೆಟರಿನರಿ ಆ್ಯಂಡ್ ಅನಿಮಾಲ್ ಸಯನ್ಸ್ ೪(೨) ೫೨-೫೫, ಮಾರ್ಚ್-ಏಪ್ರಿಲ್.
- ಜಯಲಕ್ಷ್ಮೀ, ೧೯೯೭, *'ವುಮೆನ್ ಆ್ಯಂಡ್ ಪಾಲಿಟಿಕ್ಸ್-ಎ ಸ್ಟಡಿ ಇನ್ ಪಾಲಿಟಿಕಲ್ ಪಾರ್ಟಿಸಿಪೇಶನ್',* ಬುಕ್ ಲಿಂಕ್ ಕಾರ್ಪೋರೇಷನ್, ಹೈದಾರಬಾದ್.
- ಜಯಲಕ್ಷ್ಮೀ ಹಾಗೂ ಕುಮುದ, ೨೦೧೬, *'ವುಮೆನ್ ವರ್ಕರ್ಸ್ ಇನ್ ದ ಇನ್‌ಫಾರ್ಮಲ್ ಸೆಕ್ಟರ್ ಇನ್ ಕರ್ನಾಟಕ: ಎ ಸ್ಟಡಿ',* ಸದರ್ನ್ ಇಕಾನಾಮಿಸ್ಟ್ ಫೆಬ್ರವರಿ. ವಾಲ್ಯುಂ ೫೪, ನಂ.೧೯
- ಜಯಶ್ರೀ.ಎಂ. ಹೆಚ್, ೨೦೦೭, 'ಪಂಚಾಯತ ವ್ಯವಸ್ಥೆ ಹಾಗೂ ಮಹಿಳಾ ರಾಜಕೀಯ ಸಬಲೀಕರಣ' ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧ.
- ಜಾನ್ ಲಿಸಾ, ೨೦೦೨, *'ಜೆಂಡರ್ಡ್ ಅಸಾಲ್ಟ್-ವುಮೆನ್ಸ್ ಎಕ್ಸ್‌ಪಿರಿಯನ್ಸ್ ಆಫ್ ಫೋರ್ಸ್‌ಡ್ ಇವಿಕ್ಷನ್ ಇನ್ ಮುಂಬಯಿ',* ನವ ಮುಂಬಯಿ.
- ಜಾಲಿ, ಸುರ್ಜಿತ್ ಕೌರ್(ಸಂ), *'ರೀಡಿಂಗ್ ಗಾಂಧಿ',* ಕಾನ್ಸೆಪ್ಟ್ ಪಬ್ಲಿಕೇಷನ್ ಕಂಪೆನಿ, ಡೆಲ್ಲಿ, ೨೦೦೬. ಪು. ೨೫೭.
- ಜೆರಾಲ್ಡಿನ್ ಫೋಬ್ಸ್, ೧೯೯೬, *'ವುಮೆನ್ ಇನ್ ಮಾಡರ್ನ್ ಇಂಡಿಯಾ: ದ ನಿವ್ಯೂ ಕ್ಯಾಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ',* ವಾಲ್ಯುಂ ೪, ಕ್ಯಾಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್
- ಜೋಸ್ ಪೌಲ್.ಪಿ.ಸಿ, ೨೦೦೦, *'ಎಂಪವರ್‌ಮೆಂಟ್ ಆಫ್ ಫಿಶರ್ ವುಮೆನ್ ಇನ್ ಫಿಶ್ ಪ್ರೊಸೆಸಿಂಗ್ ಆ್ಯಂಡ್ ವೆಂಡಿಂಗ್ ಸೆಕ್ಟರ್ಸ್- ಆನ್ ಅನಾಲಿಸಿಸ್',* ವಾಲ್ಯುಂ ನಂ.೨.
- ತ್ರಿಪತಿ.ಎಸ್.ಎನ್, ಪಟ್ನಾಯಕ್ ಹಾಗೂ ಪ್ರದೀಪ್, ೧೯೯೬, *'ಸೋಶಿಯೋ ಇಕಾನಾಮಿಕ್ ಪ್ರೊಫೈಲ್ ಆಫ್ ಫಿಶರ್‌ವುಮೆನ್ ಕಮ್ಯೂನಿಟಿ ಆಫ್ ಕ್ರುಶ್ನಪ್ರಸಾದ್ ಬ್ಲಾಕ್ (ಒರಿಸ್ಸಾ)',* ತ್ರಿಪತಿ.ಎಸ್.ಎನ್(ಸಂ), ಅನ್‌ಓರ್ಗಾನೈಸ್ಡ್ ವುಮೆನ್ ಲೇಬರ್ ಇನ್ ಇಂಡಿಯಾ, ಡಿಸ್‌ಕವರಿ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ.
- ಧರಣೀದೇವಿ ಮಾಲಗಿತ್ತಿ, ೨೦೦೪, 'ಸಾಹಿತ್ಯ-ವಾಣಿಜ್ಯ ಮತ್ತು ಮಹಿಳಾ ಪ್ರಜ್ಞೆ', ರಾಜ್ ಪ್ರಕಾಶನ, ಮೈಸೂರು.
- ದಿಗ್ ಮೂರ್ತಿ ಭಾಸ್ಕರ್ ರಾವ್ ಅಂಡ್ ದಿಗ್‌ಮೂರ್ತಿ ಪುಷ್ಪ ಲತಾ, ೨೦೧೦, *'ವುಮೆನ್ ಚಾಲೆಂಜಸ್ ಅಂಡ್ ಅಡ್ವನ್ಸ್‌ಮೆಂಟ್',* ಡಿಸ್‌ಕವರಿ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ,
- ದಿಗ್ ಮೂರ್ತಿ ಭಾಸ್ಕರ್ ರಾವ್ ಆ್ಯಂಡ್ ದಿಗ್‌ಮೂರ್ತಿ ಪುಷ್ಪಲತಾ, ೨೦೦೪, *'ಎಜುಕೇಶನ್ ಫಾರ್ ವುಮೆನ್',* ಡಿಸ್‌ಕವರಿ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ,

- ದೆಹದ್ರೈ.ಪಿ.ವಿ. ೨೦೦೧, *'ವುಮೆನ್ ಎಟ್ ದ ಸೆಂಟರ್ ಸ್ಟೇಜ್ ಫಾರ್ ಸೋಶಿಯೋ-ಇಕಾನಾಮಿಕ್ ಚೇಂಜಸ್ ಇನ್ ಫಿಶಿಂಗ್ ಕಮ್ಯುನಿಟಿ',* ಇಂಟರ್‌ನ್ಯಾಷನಲ್ ಕಾನ್ಫರೆನಸ್ಸ್ ಓನ್ ವುಮೆನ್ ಇನ್ ಫಿಶರೀಸ್, ಡಿಸೆಂಬರ್ ೨೦೦೧.
- ದೇವಕಿ ಜೈನ್, ೨೦೦೬ *'ವುಮೆನ್ ಅಂಡ್ ಪ್ಲಾನ್ಸ್,'* ಯೋಜನಾ, ಫೆಬ್ರವರಿ.
- ದೇವದಾಸ್.ಪಿ ರಾಜಮ್ಮಲ್, ೧೯೯೯, *'ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಸೆಲ್ಫ್ ಹೆಲ್ಪ್ ಗ್ರೂಪ್ಸ್',* ಎಂ.ಪಿ. ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ.
- ದೇವ್‌ದಾಸ್.ಆರ್. ಪಿ ಆ್ಯಂಡ್ ನಿರ್ಮಲ ಮೂರ್ತಿ, ೧೯೭೬, *'ನ್ಯೂಟ್ರಿಯಂಡ್ ಇನ್‌ಟೇಕ್ ಆ್ಯಂಡ್ ಡೆಪಿಶಿಯನ್ಸಿ ಡಿಸೀಸ್ ಇನ್ ಅ ಫಿಶರ್‌ಮ್ಯಾನ್ ಕಮ್ಯೂನಿಟಿ',* ಸಿ.ಎಂ. ಎಫ್.ಆರ್.ಐ. ಬುಲ್. ೩೦ಎ. ಕೊಚ್ಚಿನ್.
- ದೇಹದ್ರೈ.ಪಿ.ವಿ ಹಾಗೂ ಯಾದವ್ ವೈ ಎಸ್, ೨೦೦೪, *'ಫಿಶರೀಸ್ ಡೆವಲಪ್‌ಮೆಂಟ್ ಸ್ಟೇಟ್ ಆಫ್ ದ ಇಂಡಿಯನ್ ಫಾರ್ಮರ್ಸ್, ಅ ಮಿಲೇನಿಯಮ್ ಸ್ಟಡಿ'* ನ್ಯೂ ಡೆಲ್ಲಿ, ಅಕಾಡಮಿಕ್ ಫೌಂಡೇಶನ್,
- ನಳಿನಿ ವಿಶ್ವನಾಥನ್, ಲೈನ್ ದುಗ್ಗನ್, ಲೋರಿ ನಿಸೊನೊಫ್, ೨೦೦೫, *'ದ ವುಮೆನ್ ಜೆಂಡರ್ ಆ್ಯಂಡ್ ಡೆವಲಪ್‌ಮೆಂಟ್',* ರೀಡರ್ ಜುಬಾನ್,
- ನಾಗಮಣಿ.ಎಸ್ ರಾವ್, ೨೦೧೨, *'ಸ್ತ್ರೀ ಪಥ',* ನವ ಕರ್ನಾಟಕ ಪ್ರಕಾಶನ, ಬೆಂಗಳೂರು
- ನಾಗರಾಜ್.ವಿ. ಗುಡಗನವರ್, ರಾಜಶ್ರೀ.ಎಸ್ ಗುಡಗನವರ್, ೨೦೦೯. *'ಎಂಪವರ್‌ಮೆಂಟ್ ಆಫ್ ರುರಲ್ ವುಮೆನ್ ಥ್ರೂ ಸೆಲ್ಫ್ ಹೆಲ್ಪ್ ಗ್ರೂಫ್',* ಸದರ್ನ್ ಇಕಾನಾಮಿಸ್ಟ್, ಫೆಬ್ರವರಿ, ವಾಲ್ಯುಂ ೪೭, ನಂ. ೧೯, ಪು. ೩೫-೩೭.
- ನಾಗೇಂದ್ರ ಎಸ್, ಅಂಬೇಡ್ಕರ್, ಶೈಲಜಾ ನಾಗೇಂದ್ರ, ೨೦೦೬, 'ರೋಲ್ ಆಫ್ ವುಮೆನ್ ಇನ್ ಪಂಚಾಯತಿ ರಾಜ್, ಎಬಿಸಿ, ಪಬ್ಲಿಷರ್, ಜೈಪುರ.
- ನಾಜ್‌ನೀನ್ ಬೇಗಂ, ೨೦೦೦, *'ಗ್ರಾಮೀಣ ಬದುಕು ಮತ್ತು ಮಹಿಳೆ',* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ನಾಯ್ಕ್.ಎಮ್.ಬಿ., ೨೦೦೯, *'ಸ್ತ್ರೀ ಬರಹಗಳು',* ಸುನೀಲ್ ಪ್ರಕಾಶನ, ಮೈಸೂರು
- ನಿಬಾ ರತಿ, ಸೆಮ್ವಾಲ್ ಎಂ.ಎಂ. *'ವುಮೆನ್ಸ್ ಪಾಲಿಟಿಕಲ್ ಪಾರ್ಟಿಸಿಪೇಷನ್ ಇನ್ ಉತ್ತರ್‌ಖಂಡ್',* ಥರ್ಡ್ ಕಾನ್ಸೆಪ್ಟ್, ಜನವರಿ ೨೦೧೬.
- ನಿರ್ಮಲ ಬುಚ್, *'ಪಂಚಾಯತಿಗಳು ಮತ್ತು ಮಹಿಳೆಯರು'* ಯೋಜನಾ ಮಾಸ ಪತ್ರಿಕೆ ಜೂನ್ ೨೦೦೧,
- ನಿರ್ಮಲ, ಬುಚ್, ೨೦೦೦, *'ಪಂಚಾಯತ್ಸ್ ಅಂಡ್ ವುಮೆನ್, ಸ್ಟೇಟಸ್ ಆಫ್ ಪಂಚಾಯತ್ ರಾಜ್ ಇನ ದ ಸ್ಟೇಟ್ಸ್ ಆ್ಯಂಡ್ ಯುನಿಯನ್ ಟೆರಿಟೋರೀಸ್ ಆಫ್ ಇಂಡಿಯಾ',* ಇನ್ಸಟಿಟ್ಯೂಟ್ ಆಫ್ ಸೋಶಿಯಲ್ ಸಯನ್ಸ್, ಬಾಂಬೆ, ೨೦೦೦.
- ನಿರೌಲ, ಬಾನು.ಬಿ ಅಂಡ್ ಇಟಲ್, ೧೯೯೯, *'ಜೆಂಡರ್ ಇನ್‌ಇಕ್ವಲಿಟಿ ಇನ್ ಟು ನೇಪಾಲಿ ಸೆಟ್ಟಿಂಗ್ಸ್',* ಇನ್ *ಬ್ರಿಜಿಡ ಗಾರ್ಸಿಯ,* *'ವುಮೆನ್ ಪಾವರ್ಟಿ* ಆ್ಯಂಡ್ *ಡೆಮೊಗ್ರಾಫಿಕ್ ಚೇಂಜ್',* ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್,

- ನೀರಾ ದೇಸಾಯಿ, ಮೈತ್ರೇಯಿ ಕೃಷ್ಣರಾಜ್, ೨೦೦೪, *'ಆ್ಯನ್ ಓವರ್‌ವ್ಯೂವ್ ಆಫ್ ದ ಸ್ಟೇಟಸ್ ಆಫ್ ವುಮೆನ್ ಇನ್ ಇಂಡಿಯಾ',* ಮೋಹಂತಿ ಮನೋರಂಜನ್ (ಸಂ) 'ರೀಡಿಂಗ್ಸ್ ಇನ್ ಇಂಡಿಯನ್ ಗಾವರ್ನ್‌ಮೆಂಟ್ ಆ್ಯಂಡ್ ಪಾಲಿಟಿಕ್ಸ್: ಕ್ಲಾಸ್, ಕಾಸ್ಟ್, ಜೆಂಡರ್, ನ್ಯೂ ಡೆಲ್ಲಿ: ಸೇಜ್ ಪಬ್ಲಿಕೇಷನ್.
- ನೀಲಾಂಜಿಕಾ.ಎಸ್. ಪಟ್ಟಣಶೆಟ್ಟಿ ಎಂ.ಆರ್, ಶೋಲಾಪುರ್, ೨೦೧೫, *'ಎ ಸ್ಟಡಿ ಓನ್ ಸೇವಿಂಗ್ಸ್ ಮೋಟಿವೇಟರಸ್ ಅಮೋಂಗ್ ವರ್ಕಿಂಗ್ ವುಮೆನ್: ಎ ಸೋಶಿಯೋ ಎಕಾನಾಮಿಕ್ ಪರ್ಸ್‌ಪೆಕ್ಟಿವ್',* ಸದರ್ನ್ ಇಕಾನಾಮಿಸ್ಟ್, ಅಕ್ಟೋಬರ್. ವಾಲ್ಯುಂ ೫೪, ನಂ. ೧೨,
- ನೇಮಿಚಂದ್ರ, ೨೦೦೧, *'ಮಹಿಳಾ ಅಧ್ಯಯನ',* ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
- ನೈಲಾ ಕಬೀರ್, ೧೯೯೪, *'ರಿವರ್ಸ್ಡ್ ರಿಯಾಲಿಟೀಸ್: ಜೆಂಡರ್ ಹೈಯಾರಾರ್ಕಿಸ್ ಇನ್ ಡೆವಲಪ್‌ಮೆಂಟ್ ಥ್ರೂ, ಕಲಿ ಫಾರ್ ವುಮೆನ್',* ನ್ಯೂ ಡೆಲ್ಲಿ:
- ಪಟ್ನಾಯಿಕ್.ಎಸ್ & ಬರಲ್.ಜೆ.ಕೆ, ೨೦೧೨, *'ಸೋಷಿಯೋ ಇಕಾನಾಮಿಕ್ ಸ್ಟೇಟಸ್ ಆಫ್ ಫಿಶರ್ ವುಮೆನ್ ಕಂಟ್ಯೂನಿಟಿ ಆ್ಯಂಡ್ ಚೇಂಜ್',* ಡೆಲ್ಲಿ
- ಪಣ್ಣಿಕರ್ (೧೯೮೦) ಕೋಸ್ಟಲ್ ರೂರಲ್ ಇನ್‌ಡೆಬ್ಟ್ಡ್‌ನೆಸ್, ಎ ಕೇಸ್ ಸ್ಟಡಿ, ಮರೀನ್ ಫಿಶರೀಸ್ ಇನ್‌ಫಾರ್ಮೇಶನ್ ಸರ್ವಿಸ್
- ಪಪಣ್ಣನವರ್.ಕೆ, ೨೦೧೬, *'ಸೋಶಿಯೋ–ಇಕಾನಾಮಿಕ್ ಸ್ಟೇಟಸ್ ಆಫ್ ಅಗ್ರಿಕಲ್ಚರಲ್ ವುಮೆನ್ ಇನ್ ಡ್ರಾಟ್ ಹಿಟ್ ಏರಿಯಾ ಆಫ್ ಕರ್ನಾಟಕ',* ಸೌದರ್ನ್ ಇಕಾನಾಮಿಸ್ಟ್, ಜನವರಿ. ವಾಲ್ಯುಂ ೫೪, ನಂ. ೧೭, ಪು. ೩೧–೩೪.
- ಪವನ್ ಕುಮಾರ್.ಎಂ, ಅನುರಾಧಾ.ಎಸ್, ೨೦೦೯, ಇ, *'ವುಮೆನ್ ವಿತ್ ಡಿಸ್‌ಎಬಿಲಿಟೀಸ್, ಜೆಂಡರ್ ಲಾ ಆ್ಯಂಡ್ ದ ಪ್ರಾಬ್ಲಮ್ ಆಫ್ ರೆಕೊಗ್ನೈಶನ್',* ಇಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲೀ, ಅಕ್ಟೋಬರ್ ೩೧,
- ಪ್ರಕಾಶ್ ಕಟ್ಟಿಮನಿ, ೨೦೧೬ *'ಎಂಪವರಿಂಗ್ ರುರಲ್ ವುಮೆನ್ ವಯ ಮೈಕ್ರೋ ಫೈನಾನ್ಸ್',* ಥರ್ಡ್ ಕಾನ್ಸೆಪ್ಟ್, ಜನವರಿ.
- ಪಾಟೀಲ್.ಆರ್.ಎಲ್.ಎಂ, ೨೦೦೩, *'ಪಂಚಾಯತ್ ರಾಜ್ ಡಿಫರೆಂಟ್ ಥಿಂಕ್ಸ್, ಇನ್ ಟು ಡಿಫರೆಂಟ್ ಪೀಪಲ್ಸ್',* ಕರ್ನಾಟಕ ಜನರಲ್ಸ್ ಆಫ್ ಪಾಲಿಟಿಕ್ಸ್, ಫೆಬ್ರವರಿ, ಪು. ೧೧೮.
- ಪ್ರೀತಿ ಶುಭಚಂದ್ರ, ೨೦೧೫, *'ಸಾಕಾರದತ್ತ ಸಮಾನತೆಯ ಕನಸು ಮಹಿಳಾ ಪ್ರತಿರೋಧದ ನೆಲೆಗಳು',* ಲಡಾಯಿ ಪ್ರಕಾಶನ, ಗದಗ.
- ಪುರಷನ್.ಕೆ.ಎಸ್. ೨೦೦೧, *'ಎಂಪವರ್ ದ ಫಿಶರ್ ವುಮೆನ್ ಟು ಅವಯಿಲ್ ಇಮ್ಮೆನ್ಸ್ ವೊಕೇಷನಲ್ ಅವೆನ್ಯುಸ್',* ಸೀಫುಡ್ ಎಕ್ಸ್‌ಪೋರ್ಟ್ ಜರ್ನಲ್ ವಾಲ್ಯುಂ ೨೨, ನಂ.೫. ಮೇ,
- ಪ್ರೊಮಿಲ್ಲಾ ಕಪೂರ್, ೨೦೦೧, *'ಎಂಪವರಿಂಗ್ ದ ಇಂಡಿಯನ್ ವುಮೆನ್',* ಪಬ್ಲಿಕೇಷನ್ಸ್ ಡಿವಿಜನ್ ಪ್ರಕಾಶನ, ನ್ಯೂ ಡೆಲ್ಲಿ.
- ಪೌಜಟ್ಲಾಂಗ್.ಆರ್.ಪಿ, ರಾಜ ಮೋಹನ್ ರಾವ್.ಕೆ, ೨೦೧೫. *'ಐಡೆಂಟಿಟಿ ಪಾಲಿಟಿಕ್ಸ್ ಆ್ಯಂಡ್ ಸೋಶಿಯಲ್ ಚೇಂಜ್ ಇನ್ ಮಣಿಪುರ್',* ಥರ್ಡ್ ಕಾನ್ಸೆಪ್ಟ್, ಅಕ್ಟೋಬರ್.

- ಬಡಗಸೀಮೆ ಮಹೇಶ್.ಎಂ, ೨೦೦೪, *'ಮಹಿಳಾ ಸಶಕ್ತೀಕರಣ: ಕೆಲವು ಒಳನೋಟಗಳು'*, ಮಧುವನಹಳ್ಳಿ, ತಾರಾ ಪ್ರಿಂಟಿಂಗ್ಸ್ ಆ್ಯಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

- ಬಾಲಸುಬ್ರಹ್ಮಣ್ಯ.ಎಸ್, ೨೦೦೧, *'ಸೊಶಿಯೋ ಎಕಾನಮಿಕ್ ಸ್ಟೇಟಸ್ ಆಫ್ ಮರಿನ್ ಫಿಶರ್‌ಮೆನ್ ಇನ್ ಟು ಫಿಶಿಂಗ್ ವಿಲೇಜೆಸ್ ಆಫ್ ಒರಿಸ್ಸಾ ಫಿಶಿಂಗ್ ಟೆಕ್ನಾಲಜಿ '*

- ಭಾರತಿ ಥಾಕೂರ್, ೨೦೦೬, *'ವುಮೆನ್ ಇನ್ ಗಾಂಧಿ'ಸ್ ಮಾಸ್ ಮೂವ್‌ಮೆಂಟ್'* ದೀಪಾ ಆ್ಯಂಡ್ ದೀಪಾ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ,

- ಭಾರತಿ.ಎಂ, ೨೦೧೪, *'ಮಹಿಳೆ ಮತ್ತು ಸಾಧನೆಯ ಹಾದಿ'*, ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಯ ಗ್ರಾಮ ಪಂಚಾಯಿತಿ ಮಹಿಳಾ ಸದಸ್ಯರ ಪಾತ್ರ ನಿರ್ವಹಣೆ: ಸಮಾಜಶಾಸ್ತ್ರೀಯ ಅಧ್ಯಯನ

- ಭಾರತಿ ಹೆಗ್ಗಡೆ, ೨೦೦೮, *'ಅಧಿಕಾರ ವಿಕೇಂದ್ರಕರಣ ಮತ್ತು ವಿಕೇಂದ್ರೀಕರಣದ ಹಗ್ಗಜಗ್ಗಾಟ'* ತರಂಗ ಮಾಸಪತ್ರಿಕೆ,

- ಭಾಸ್ಕರ್ ಬಾಗ್ಚಿ, ಗ್ಯಾಂಗೋಟ್ರೀ ಘೋಶ್, ೨೦೧೧, *'ಮೈಕ್ರೋಫೈನಾನ್ಸ್ ಥ್ರೂ ಸೆಲ್ಫ್‌ಹೆಲ್ಪ್ ಗ್ರೂಪ್ಸ್ ವುಮೆನ್ ಮೈಕ್ರೋ ಎಂಟರ್‌ಪ್ರೈನ್ಯೂರ್ಸ್ ಇನ್ ವೆಸ್ಟ್ ಬೆಂಗಾಲ್'*, ಸೌದರ್ನ್ ಇಕಾನಾಮಿಸ್ಟ್, ಅಕ್ಟೋಬರ್. ವಾಲ್ಯುಂ ೫೪, ನಂ. ೧೧,

- ಬುಚಾನಿನ್ ಫ್ರಾನ್ಸಿಸ್, ೧೮೦೭, *'ಎ ಜರ್ನಿ ಫ್ರಮ್ ಮೆಡ್ರಾಸ್ ಥ್ರೂ ಕಂಟ್ರೀಸ್ ಆಫ್ ಮೈಸೂರು ಫ್ರಮ್ ಕೆನರಾ ಆ್ಯಂಡ್ ಮಲ್ಬಾರ್'*, ವಾಲ್ಯುಂ ೩,

- ಮನು ಚಕ್ರವರ್ತಿ.ಎನ್, (ಸಂ) ೧೯೯೩, *'ಭಾರತೀಯ ಸ್ತ್ರೀವಾದ'*, ಅಕ್ಷರ ಪ್ರಕಾಶನ, ಸಾಗರ.

- ಮನುಜಾಪಾಟೀಲ್, ೨೦೦೮, *'ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವೂ'*, ಆದಿಚುಂಚನಗಿರಿ ಮಾಸಪತ್ರಿಕೆ ಅಕ್ಟೋಬರ್.

- ಮನ್ಸ್‌ಬ್ರಿಡ್ಜ್ ಜೇನ್, ೨೦೦೩, *'ರೀಥಿಂಕಿಂಗ್ ರೆಪ್ರೆಸೆಂಟೇಶನ್'*, ಅಮೇರಿಕನ್ ಪಾಲಿಟಿಕಲ್ ಸಯನ್ಸ್, ರಿವ್ಯೂ, ವಾಲ್ಯುಂ ನಂ. ೯೭, ನವೆಂಬರ್.

- ಮಧು.ಜಾ, ೨೦೦೫, *'ವುಮೆನ್ ಇನ್ ಡಿಸಿಶನ್ ಮೇಕಿಂಗ್ ಪೊಸಿಷನ್'*, ಕಾನಿಷ್ಕ ಪಬ್ಲಿಕೇಷನ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂ ಡೆಲ್ಲಿ,

- ಮಧುಲತಾ.ಜಿ, ೨೦೧೨. *'ಆಬ್‌ಸ್ಟಾಕಲ್ಸ್ ಟು ಇಕಾನಾಮಿಕ್ ಎಂಪವರ್‌ಮೆಂಟ್ ಆಫ್ ಫಿಶರ್ ವುಮೆನ್ ಇನ್ ನೆಲ್ಲೂರು ಡಿಸ್ಟ್ರಿಕ್ಟ್'*, ಸೌದರ್ನ್ ಇಕಾನಾಮಿಸ್ಟ್, ಜುಲೈ ೨.

- ಮರಾಮಿ ಗೋಹೈನ್, ೨೦೧೫, *'ವಿಮೆನ್ ಎಂಪವರ್‌ಮೆಂಟ್ ಥ್ರೂ ಸೆಲ್ಫ್ ಹೆಲ್ಪ್‌ಗ್ರೂಪ್ಸ್'*, ಥರ್ಡ್ ಕಾನ್ಸೆಪ್ಟ್, ಮೇ, ವಾಲ್ಯುಂ ೨೯ ನಂ.೩೩೯,

- ಮನೋರಂಜನ್ ಪಾಲ್, ಬೋಲ್‌ನಾಥ್ ಗೋಷ್ ಹಾಗೂ ಭಾರತಿ ಪ್ರೇಮಾನಂದ ೨೦೦೮, *'ವುಮೆನ್ ಇನ್ ಡಿಸಿಶನ್ ಮೇಕಿಂಗ್ ಎಕ್ಸ್‌ಪೀರಿಯನ್ಸೆಸ್ ಫ್ರಮ್ ಟು ಸ್ಟೇಟ್ಸ್ ಇನ್ ನಾರ್ತ್-ಈಸ್ಟ್ ಇಂಡಿಯಾ'*, ಓಮ್‌ಸನ್ಸ್ ಪಬ್ಲಿಕೇಷನಸ್ ನ್ಯೂ ಡೆಲ್ಲಿ.

- ಮರಿಲೆ ಕರ್ಲೆ, ೧೯೯೫, *'ವುಮೆನ್ ಆ್ಯಂಡ್ ಎಂಪವರ್‌ಮೆಂಟ್'* ಜೆಡ್ ಬುಕ್ ಲಿಮಿಟೆಡ್, ಲಂಡನ್.

- ಮಸ್ತಾನ್ ವಾಲಿ, ೨೦೦೨, *'ವುಮನ್ ಆಂಡ್ ಪಾಲಿಟಿಕ್ಸ್'* ಅನಮೋಲ್ ಪಬ್ಲಿಕೇಶನ್, ಪಿಪಿಟಿ. ಎಲ್‌ಟಿಡಿ, ೪೩೭೪/೪ಜಿ, ಅನ್ಸಾರಿ ರೋಡ್‌ದ, ದರಿಯಾಗಂಜ್, ನ್ಯೂ ಡೆಲ್ಲಿ.

- ಮಹೇಶ್.ವಿ, ಸ್ವಾತಿ ಲಕ್ಷ್ಮೀ.ಪಿ.ಎಸ್, ಶಿವಪ್ರಕಾಶ್.ಎಸ್.ಎಮ್. ಕುಮಾರ್ ನಾಯ್ಕ್.ವಿ.ಎಸ್, ಮುತ್ತಪ್ಪ ಬಾವಿ ಮತ್ತು ಜಗದೀಶ್.ಟಿ.ಡಿ, ೨೦೧೧, *'ಸ್ಟಡಿ ಓನ್ ಅವೇರ್‌ನೆಸ್ ಅಂಡ್ ಪಾರ್ಟಿಸಿಪೇಶನ್ ಆಫ್ ಫಿಶರ್ ವುಮೆನ್ ಇನ್ ಬೆನೆಫಿಶರಿ ಪ್ರೋಗ್ರಾಮ್ ಆಫ್ ಸ್ಟೇಟ್ ಫಿಶರೀಸ್ ಡಿಪಾರ್ಟ್‌ಮೆಂಟ್ ಇನ್ ಕೋಸ್ಟಲ್ ಕರ್ನಾಟಕ, ಇಂಡಿಯಾ',* ಜೆ.ಇಎಕ್ಸ್‌ಪಿ. ಝೂಲ್.ಇಂಡಿಯಾ, ವಾಲ್ಯುಂ, ೧೯ ಸಪ್ಲಿಮೆಂಟ್, ೧.

- ಮಾಣಿಕ್ಯಾಂಬ.ಪಿ, ೧೯೮೯, *'ವುಮೆನ್ ಪ್ರಿಸೈಡಿಂಗ್ ಆಫೀಸರ್ ಎಟ್ ದ ಟೆರಿಟರಿ ಪಾಲಿಟಿಕಲ್ ಸ್ಟ್ರಕ್ಚರ್',* ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್, ವಾಲ್ಯೂಂ, ೯, ನಂ, ೬.

- ಮ್ಯಾಕ್ಸಿನ್ ಮೊಲಿನೆಕ್ಸ್ ಆ್ಯಂಡ್ ಶಹ್ರ ರಾಜವಿ, ೨೦೦೨, *'ಜೆಂಡರ್ ಜಸ್ಟೀಸ್, ಡೆವಲೆಪ್‌ಮೆಂಟ್ ಅಂಡ್ ರೈಟ್ಸ್',* ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್.

- ಮೀನಾಕ್ಷಿ.ಡಿ. ೨೦೧೦, *'ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ'* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಮೀನಾಕ್ಷಿ.ಎಸ್.ಎನ್, ೨೦೧೨, *'ವುಮೆನ್ ಎಂಟರ್‌ಪ್ರೆನೆರ್‌ಶಿಪೋ, ಇಶ್ಯೂಸ್–ಚಾಲೆಂಜಸ್ ಮಹಾಪಾತ್ರ್',* ಸದರ್ನ್ ಎಕೋನಾಮಿಸ್ಟ್, ೧ ಜನವರಿ, ವಾಲ್ಯುಂ ೫೦, ನಂ, ೧೭.

- ಮೀರಾ ಬಾಯಿ.ಎಂ, ೨೦೦೯, *'ವುಮೆನ್ಸ್ ಎಜುಕೇಶನ್ ಆ್ಯಂಡ್ ಸೋಶಿಯಲ್ ಎಕ್ಸ್‌ರ್ಟನಾಲಿಟೀಸ್ ಇನ್ ಕೇರಳ',* ನವೆಂಬರ್ ೧೫, ಮೀರಾ ಬಾಯಿ.ಎಂ, ೨೦೦೯. ಮೆರ್ಲಿನ್ ಜೋಸೆಫ್, *'ವುಮೆನ್ ವರ್ಕರ್ಸ್ ಇನ್ ದ ಇನ್‌ಫಾರ್ಮಲ್ ಸೆಕ್ಟರ್ ಇನ್ ಇಂಡಿಯಾ ಎಮರ್ಜಿಂಗ್ ಟ್ರೆಂಡ್ಸ್',* ಸೌದರ್ನ್ ಇಕಾನಾಮಿಸ್ಟ್, ಅಕ್ಟೋಬರ್.

- ಮೀರಾ ವೇಲಾಯುದಾನ್, ೨೦೦೯. *'ವುಮೆನ್ಸ್ ಲ್ಯಾಂಡ್ ರೈಟ್ಸ್ ಇನ ಸೌತ್ ಆಸಿಯಾ',* ಇಕಾನಾಮಿಕ್ ಆ್ಯಂಡ್ ಪಾಲಿಟಿಕಲ್ ವೀಕ್ಲೀ ಆಕ್ಟೋಬರ್ ೩೧, ನವೆಂಬರ್ ೬, ವಾಲ್ಯುಂ ೪೮, ನಂ. ೧೩.

- ಮೋರಿಸ್ ದಜಾಹ್ನ್ಸ್, ಡಬ್ಲ್ಯೂ ಹೆಚ್, ೧೯೬೪, *'ದ ಗೊವರ್ನ್‌ಮೆಂಟ್ ಅಂಡ್ ಪಾಲಿಟಿಕ್ಸ್ ಆಫ್ ಇಂಡಿಯಾ',* ಬಿ.ಐ ಪಬ್ಲಿಕೇಷನ್, ಬಾಂಬೆ.

- ಮೋಹನ್ ರಾವ್, ೨೦೧೫, *'ಕಲ್ಚರಲ್ ಅಂಡ್ ಇಕಾನಾಮಿಕ್ ಮೈಲ್ಯೂ ಆಫ್ ವುಮೆನ್ ಇನ್ ಇಂಡಿಯಾ ಆ್ಯಂಡ್ ದ ನೀಡ್ ಫಾರ್ ದೈಯರ್ ಎಂಪವರ್‌ಮೆಂಟ್',* ಸದರ್ನ್ ಇಕಾನಾಮಿಸ್ಟ್, ನವೆಂಬರ್. ವಾಲ್ಯುಂ ೪೮, ನಂ, ೧೩.

- ಮೋಹಿ.ಎಸ್.ಎ ಮತ್ತು ಶೆಣೈ.ಎಸ್ ೨೦೦೧, *'ಕೇಸ್ ಸ್ಟಡೀಸ್ ಆಫ್ ವುಮೆನ್ ಕೋ–ಆಪರೇಷನ್ ಸೊಸೈಟೀಸ್ ಇನ್ ಫಿಶಸ್ ಫ್ರಮ್ ರತ್ನಗಿರಿ ಡಿಸ್ಟ್ರಿಕ್ಟ್',* (ಮಹಾರಾಷ್ಟ್ರ) ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ ಆನ್ ವುಮೆನ್ ಇನ್ ಫಿಶರೀಸ್ ೧೧–೧೨, ಡಿಸೆಂಬರ್, ೧೨೮–೧೩೪.

- ಮೋಹಿತ್ ಭಾಟಿಯಾ, ೨೦೦೯, *'ವುಮೆನ್ಸ್ ಮೊಬೈಲೇಸಶನ್ ಇನ್ ದ ಜಮ್ಮು ಅಜಿಟೇಶನ್, ರಿಲಿಜನ್, ಕಾಸ್ಟ್, ಕಮ್ಯೂನಿಟಿ ಆ್ಯಂಡ್ ಜಂಡರ್',* ಇಕಾನಾಮಿಕ್ ಆ್ಯಂಡ್ ಪಾಲಿಟಿಕಲ್ ವೀಕ್ಲೀ, ಜೂನ್.

- ಮೋಹಿನಿ ಗಿರಿ.ಪಿ, ೧೯೯೮, *'ಇಮಾನಿಸಿಪೇಷನ್ ಆ್ಯಂಡ್ ಎಂಪವರ್‌ಮೆಂಟ್ ಆಫ್ ವುಮೆನ್'*, ಗ್ಯಾನ ಬುಕ್ಸ್ ಪ್ರಕಾಶನ, ನ್ಯೂ ಡೆಲ್ಲಿ.
- ಮೋಹಿನಿ.ಜಿ.ಪಿ, ೧೯೯೮, *'ಇಮಾನಿಸಿಪೇಶನ್ ಆ್ಯಂಡ್ ಎಂಪವರ್‌ಮೆಂಟ್ ಆಫ್ ವುಮೆನ್'*, ಗ್ಯಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ.
- ಮೆಹ್ತಾ.ಜಿ.ಎಸ್, ೨೦೦೨, *'ಪಾರ್ಟಿಸಿಪೇಶನ್ ಆಫ್ ವುಮೆನ್ ಇನ್ ದ ಪಂಚಾಯತ್ ರಾಜ್ ಸಿಸ್ಟಮ್'*, ಕಾನಿಷ್ಕ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂ ಡೆಲ್ಲಿ.
- ಮೈತ್ರೇಯಿ ಕೃಷ್ಣರಾಜ್, ೨೦೧೬, *'ಇಂಡಿಯನ್ ವುಮೆನ್ ಕಂಟೆಂಪರರಿ ಎಸ್ಸೆ ದ ಇಂಡಿಯನ್ ವುಮನ್; ಓನ್ ಇನ್‌ಇಕ್ವಾಲಿಟಿ, ಪವರ್ ಆ್ಯಂಡ್ ಡಿಸ್‌ಕ್ರಿಮಿನೇಷನ್'*, ಇಕಾನಾಮಿಕ್ ಆ್ಯಂಡ್ ವೀಕ್ಲೀ ವಾಲ್ಯುಂ ೮,
- ಮೈತ್ರೇಯಿ ಮುಖ್ಯೋಪಾಧ್ಯಾಯ, ೧೯೮೮೪, *'ಬೆಳ್ಳಿಯ ಸಂಕೋಲೆಗಳು'* ಅಭಿನವ ಪ್ರಕಾಶನ, ಬೆಂಗಳೂರು.
- ಮೈತ್ರೇಯಿ ಮುಖ್ಯೋಪಾಧ್ಯಾಯ, ೨೦೦೩, *'ಕ್ರಿಯೇಟಿಂಗ್ ಸಿಟಿಜೆನ್ಸ್ ಅಂಡ್ ಡೆವಲಪ್‌ಮೆಂಟ್ ಇನ್ ದ ಟ್ವೆಂಟಿ ಫಸ್ಟ್ ಸೆಂಚುರಿ'* ಜೆಂಡರ್ ಅಂಡ್ ಡೆವಲಪ್‌ಮೆಂಟ್, ವಾಲ್ಯುಂ ನಂ.೧೧, ನಂ.೩. ನವೆಂಬರ್.
- ಮಂಜು ಪಥ್ನಿಯಾ ಬಿಸ್ವಾಸ್ ಆ್ಯಂಡ್ ರಾಮ ಮೋಹನ ರಾವ್ ಎಂ. ೨೦೧೪, *'ಫಿಶರ್‌ವುಮೆನ್ ಆಫ್ ದ ಈಸ್ಟ್ ಕೋಸ್ಟಲ್ ಇಂಡಿಯಾ: ಅ ಸ್ಟಡಿ'*, ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಜಂಡರ್ ಆಂಡ್ ವುಮೆನ್ಸ್ ಸ್ಟಡೀಸ್, ಜೂನ್ ವೊಲ್ಯೂಂ ನಂ.೨
- ಮಂಜುನಾಥ.ಬಿ.ಟಿ, ೨೦೧೮, *'ಮಹಿಳಾ ಸಮಾಜವಾದ ಒಂದು ವಿಶ್ಲೇಷಣೆ'*, ಸಂವಾದ, ಸೆಪ್ಟೆಂಬರ್
- ಯರ್ರಿಸ್ವಾಮಿ.ಈ, ೨೦೧೦, *'ಮಹಿಳೆ ಮತ್ತು ಜಾತಿ ಶ್ರೇಣಿಕರಣ ಅಂಬೇಡ್ಕರ್ ದೃಷ್ಟಿಕೋನ'*, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.
- ಯರ್ರಿಸ್ವಾಮಿ.ಈ, ೨೦೧೫, *'ಭಾರತದ ಮಹಿಳಾ ಚಳುವಳಿಯ ಅಂದೋಲನಗಳು'*, ಅಚಲ, ಮಹಿಳಾ ಅಧ್ಯಯನ ಮಂಡಲ ಮೈಸೂರು, ಯೋಜನಾ ಮಾಸ ಪತ್ರಿಕೆ, ಏಪ್ರಿಲ್.
- ಯರ್ರಿಸ್ವಾಮಿ.ಈ, ೨೦೧೧, *'ಗ್ರಹಿಕೆ'*, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.
- ಯಶೋಧ ಮಾರ್ಗರೇಟ್.ಎಸ್. ಸ್ಟ್ಯಾನ್ಲಿ ಜೋಸೆಫ್ ಮಿಚೇಲ್ ರಾಜ್.ಎಸ್, ೨೦೧೫, *'ಎಪ್ಲಾಯ್‌ಮೆಂಟ್ ಪ್ರೋಗ್ರಾಮ್ಸ್ ಫಾರ್ ರೂರಲ್ ವುಮೆನ್: ಆ್ಯನ್ ಆಸೆಸ್‌ಮೆಂಟ್'*, ಸದರ್ನ್ ಇಕಾನಾಮಿಸ್ಟ್, ಏಪ್ರಿಲ್.
- ಯೋಗರಾಜ್.ಎಸ್.ಡಿ, ೨೦೧೩, *'ಮಹಿಳಾ ಸಬಲೀಕರಣ'* ಅನ್ನಪೂರ್ಣ ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಪ್ರಕಾಶನ, ಬೆಂಗಳೂರು.
- ರಮೇಶ್.ಎಂ. ಸೊಂಕಬ್ಲೆ, ೨೦೧೭, 'ವುಮೆನ್ *ಲೇಬರ್ ಲಾವ್ಸ್* ಇನ್ ಇಂಡಿಯಾ', ಥರ್ಡ್ ಕಾನ್ಸೆಪ್ಟ್, ಜನವರಿ.ವಾಲ್ಯುಂ ೩೦, ನಂ.೩೫೯.
- ರಶ್ಮಿ ಅರುಣ್, ೧೯೯೭, *'ರೋಲ್ ಆಫ್ ವುಮೆನ್ ಇನ್ ಪಂಚಾಯತ್ ರಾಜ್'* ಅಡ್‌ಮಿನಿಸ್ಟ್ರೇಟರ್, ಏಪ್ರಿಲ್-ಜೂನ್, ವಾಲ್ಯುಂ ನಂ.೧೨. ನಂಬರ್ ೪.

- ರಶ್ಮಿ ಶ್ರೀವಾಸ್ತವ, ೨೦೦೦, *'ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಪಾಲಿಟಿಕಲ್ ಪಾರ್ಟಿಸಿಪೇಷನ್, ವಿದ್ ಸ್ಪೇಷಲ್ ರೆಫರೆನ್ಸ್ ಟು ಗೋವಾ'*, ಇನ್ ನಿರೋಜ್ ಸಿನ್ಹ (ಸಂ.) ವುಮೆನ್ ಇನ್ ಇಂಡಿಯನ್ ಪಾಲಿಟಕ್ಸ್, ಅನ್‌ಮೋಲ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ.

- ರಾಘವ್, ೨೦೦೮, *'ಮಹಿಳಾ ಅಧ್ಯಯನದ ಆಯಾಮಗಳು'*, ಗ್ರಾಮೀಣ ಪ್ರದೇಶದ ಮಹಿಳೆ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಆ್ಯಂಡ್ ಪಬ್ಲಿಕೇಷನ್ಸ್, ಮೈಸೂರು.

- ರಾಜಿಯಾ ಪಾಟೀಲ್, ೨೦೦೯, *'ಇಂಡಿಯನ್ ಮುಸ್ಲಿಂ ವುಮೆನ್ ಆ್ಯಂಡ್ ಸ್ಟಗಲ್ ಫಾರ್ ಲೈಫ್ ವಿತ್ ಡಿಗ್ನಿಟಿ'*, ಇಕಾನಾಮಿಕ್ ಅಂಡ್ ಪಾಲಿಟಿಕಲ್ ವೀಕ್ಲೀ, ಅಕ್ಟೋಬರ್ ೩೧, ನವೆಂಬರ್ ೬.

- ರಾಜ್‌ಕುಮಾರಿ, ೨೦೧೬. *'ಪಾಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮೆನ್'*, ಥರ್ಡ್ ಕಾನ್ಸೆಪ್ಟ್, ನವೆಂಬರ್.

- ರಾಧಾಕೃಷ್ಣ.ಎಲ್, ೨೦೦೮, *'ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಎಂಟರ್‌ಪ್ರೆನ್ಯುರ್‌ಶಿಪ್'*, ಗ್ಯಾನ್ ಪಬ್ಲಿಷಿಂಗ್, ನ್ಯೂ ಡೆಲ್ಲಿ,

- ರಾಮಸ್ವಾಮಿ.ಟಿ, ೨೦೦೯, *'ಸ್ಟ್ರಾಟೇಜಿಕ್ ಎಂಟರ್ ಪ್ರೈನ್ಯೂರಲ್ ಡೈಮೆನ್ಶನ್ಸ್ ಆಫ್ ಸೆಲ್ಫ್ ಎಂಪ್ಲಾಯಿಡ್ ವುಮೆನ್: ಎ ಮೈಕ್ರೋ ಸ್ಟಡಿ'*, ಸದರ್ನ್ ಇಕಾನಾಮಿಸ್ಟ್, ನವೆಂಬರ್ ೧೫.

- ರಾವ್.ಎನ್, ೧೯೯೬, *'ಎಂಪವರ್‌ಮೆಂಟ್ ಥ್ರೂ ಆರ್ಗನೈಸೇಷನ್: ವುಮೆನ್ ವರ್ಕರ್ಸ್ ಇನ್ ದ ಇನ್‌ಫಾರ್ಮಲ್ ಸೆಕ್ಟರ್'*, ಇಂಡಿಯನ್ ಜೆ ಜೆಂಡ್, ಸ್ಟಡ್.೩(೨):೧೭೧–೧೯೭.

- ರೂಪ ಹಾಸನ, ೨೦೧೦, *'ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು'*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾದಲಯ, ಹಂಪಿ.

- ರೆನಾಲ್ಡ್ ಎರ್ರಿಕ್.ಜೆ(ಸಂ) ೧೯೯೧, *'ಮಾರ್ಕೆಟಿಂಗ್ ಅಂಡ್ ಕನ್ಸ್‌ಂಪ್ಷನ್ ಆಫ್ ಫಿಶ್ ಇನ್ ಈಸ್ಟರ್ನ್ ಅಂಡ್ ಸೌದರ್ನ್ ಆಫ್ರಿಕಾ ಸೆಲೆಕ್ಟೆಡ್ ಕಂಟ್ರೀಸ್ ಸ್ಟಡೀಸ್'*, ಎಫ್ಎಓ ಫಿಶರೀಸ್ ಟೆಕ್ನಿಕಲ್ ಪೇಪರ್.೩೩೨.

- ರೇಣುಕಾ.ಕೆ, ೨೦೧೧, 'ಡೆವಲಪ್‌ಮೆಂಟ್ ಆ್ಯಂಡ್ ಮಾರ್ಜಿಲೈಸೇಷನ್ ಎ ಸ್ಟಡಿ ಆಫ್ ಫಿಶರ್‌ವುಮೆನ್ ಆಫ್ ಕೋಸ್ಟಲ್ ಕರ್ನಾಟಕ', ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ರೇಣುಕಾ.ಕೆ, ೨೦೧೪, ಯರ್ರಿಸ್ವಾಮಿ ಈ (ಸಂ) *'ಮೀನುಗಾರ ಮಹಿಳೆಯರು ಮತ್ತು ಅಭಿವೃದ್ಧಿ'*, ಅಚಲ ತ್ರೈಮಾಸಿಕ ಪತ್ರಿಕೆ, ಅಕ್ಟೋಬರ್–ಡಿಸೆಂಬರ್.

- ರಂಜನ ಹರೀಶ್, ಭಾರತಿ ಹರಿಶಂಕರ್.ಡಿ, ೨೦೦೩, *'ಶಕ್ತಿ: ಮಲ್ಟಿಡಿಸಿಪ್ಲಿನರಿ ಪರ್ಸ್‌ಪೆಕ್ಟೀವ್ ಓನ್ ವುಮೆನ್ಸ್ ಎಂಪವರ್‌ಮೆಂಟ್ ಇನ್ ಇಂಡಿಯ'*, ರಾವತ್ ಪಬ್ಲೀಕೇಷನ್ಸ್, ನ್ಯೂ ಡೆಲ್ಲಿ, ಪು.: ೩೨೭.

- ಲಕ್ಷ್ಮೀದೇವಿ, ೧೯೯೮, *'ವುಮೆನ್ ಎಂಪ್ಲಯ್‌ಮೆಂಟ್ ಅಂಡ್ ಸೊಸೈಟಲ್ ಇಂಪ್ರೂವ್‌ಮೆಂಟ್'*, ಅನ್ಮೋಲ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ.

- ಲಲಿತ ದೇವಿ ೧೯೯೨, *'ಸ್ಟೇಟಸ್ ಅಂಡ್ ಎಂಪ್ಲಾಯ್‌ಮೆಂಟ್ ಆಫ್ ವುಮೆನ್ ಇನ್ ಇಂಡಿಯಾ'*, ಬಿ.ಸಿ, ಪಬ್ಲೀಷಿಂಗ್ ಕೋ–ಆಪರೇಷನ್, ನ್ಯೂ ಡೆಲ್ಲಿ,

- ಲಲಿತ.ಎಸ್, ೧೯೯೭, '*ರೂರಲ್ 'ಎಂಪವರ್‌ಮೆಂಟ್ ಅಂಡ್ ಡೆವಲಪ್ ಮೆಂಟ್ ಬ್ಯಾಂಕಿಂಗ್'*; ಕಾನಿಷ್ಕ ಪಬ್ಲಿಷರ್ಸ್, ಡಿಸ್ಟ್ರಿಬ್ಯುಟರ್ಸ್, ನ್ಯೂ ಡೆಲ್ಲಿ, ಪು.೨೭೭.

- ಲಿಯೋಸ್ ಮರಿಯೋ ವರ್ಗಸ್, ೧೯೮೯, '*ಫಾವರ್ಡ್ ಟು ದ ಅದರ್‌ಫಾತ್ ದ ಇನ್‌ವಿಸಿಬಲ್ ರೆವೊಲ್ಯುಶನ್ ಇನ್ ದ ವರ್ಲ್ಡ್'*; ಸ್ಟುವರ್ಟ್ ಕಾರ್ ಬ್ರಿಡ್ಜ್ (ಸಂ) ಡೆವಲಪ್‌ಮೆಂಟ್ ಸ್ಟಡೀಸ್ ಎ ರೀಡರ್, ಲಂಡನ್: ೩೩೮ ಈಸ್ಟನ್ ರೋಡ್.

- ಲೆನ್ ಡೊಮಿನೆಲ್ಲಿ, ೨೦೦೭, '*ವುಮೆನ್ ಅಂಡ್ ಕಮ್ಯೂನಿಟಿ ಆ್ಯಕ್ಷನ್'* ರಾವತ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ.

- ಲೋಹಿತಾಶ್ವಹೆಚ್.ಸಿ. ೨೦೧೨, '*ರಾಜ್ಯಶಾಸ್ತ್ರ'* ವಿದ್ಯಾನಿಧಿ ಪ್ರಕಾಶನ, ಗದಗ,

- ವಸುಂಧರ.ಬಿ.ಸಿ ಹಾಗೂ ಡಾ. ಗುರುಲಿಂಗಯ್ಯ.ಎಂ. ೨೦೧೪, '*ಶಿವಮೊಗ್ಗ ತಾಲೂಕಿನ ಬೆಸ್ತ ಸಮುದಾಯದ ಮಹಿಳೆಯರ ಸ್ಥಾನಮಾನ*', ಅಚಲ, ತ್ರೈಮಾಸಿಕ ಪತ್ರಿಕೆ.

- ವಾರಂಬಳ್ಳಿ.ಕೆ.ವಿ.ಎಂ, ೧೯೯೩, '*ಮೆಕಾನೈಸ್ಡ್ ಫಿಶಿಂಗ್ ಇನ್ ಕೋಸ್ಟಲ್ ಕರ್ನಾಟಕ : ಎ ಕೇಸ್ ಸ್ಟಡಿ ಆಫ್ ಇಟ್ಸ್ ಇಂಫ್ಯಾಕ್ಟ್ ಆಫ್ ಫಿಶರ್‌ಮೆನ್ ಹೌಸ್‌ಹೋಲ್ಡ್ಸ್*', ಮಂಗಳೂರು ವಿಶ್ವವಿದ್ಯಾಲಯದ ಆರ್ಥಶಾಸ್ತ್ರದ ವಿಭಾಗದ ಅಪ್ರಕಟಿತ ಮಹಾಪ್ರಬಂಧ.

- ವ್ಲಾಸೊಫ್ ಕ್ಯಾರೊಲ್, ೧೯೯೪, '*ಫ್ರಮ್ ರ್‍ಯಾಗ್ಸ್ ಟು ರಿಚೆಸ್: ದ ಇಂಪ್ಯಾಕ್ಟ್ ಆಫ್ ರೂರಲ್ ಡೆವಲಪ್‌ಮೆಂಟ್ ಆನ್ ವುಮೆನ್ಸ್ ಸ್ಟೇಟಸ್ ಇನ್ ಇಂಡಿಯನ್ ವಿಲೇಜ್'*, ವರ್ಲ್ಡ್ ಡೆವಲಪ್‌ಮೆಂಟ್, ಎಲ್ಸ್‌ವೇರ್ ಸಯನಸ್ ಲಿಮಿಟೆಡ್, ವಾಲ್ಯೂಂ ನಂ.೨೨, ಪು. ೭೦೭–೧೯.

- ವಿಕ್ಕಿ ಮೆನನ್, ೧೯೮೯, '*ಫಿಶರೀಸ್ ಡೆವಲಪ್‌ಮೆಂಟ್ ರಿಸೋರ್ಸ್ ಡೆಪ್ಲೇಷನ್ ಅಂಡ್ ಪಾಲಿಟಿಕಲ್ ಮೊಬಲೈಷನ್ ಇನ್ ಕೇರಳ ದ ಪ್ರಾಬ್ಲಮ್ ಅಲ್ಟರ್‌ನೇಟಿವ್ಸ್'*, ಇನ್ ಮಾರ್ಟಿನ್ ದೂಂಬಾಸ್ ಮತ್ತಿತರರು ಸಂಪಾದಿಸಿದ ಡೆವಲಪ್‌ಮೆಂಟ್ ಅಂಡ್ ಚೇಂಜ್, ಹೇಗ್: ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸ್ಟಡೀಸ್, ಸೇಜ್ ಪಬ್ಲಿಕೇಷನ್ಸ್, ವಾಲ್ಯುಂ ೨೦, ನಂ.೪.

- ವಿಜಯಾ ದಬ್ಬೆ, ೨೦೦೩, '*ಮಹಿಳೆ ಮತ್ತು ಮಾನವತೆ'*, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.

- ವಿದ್ಯಾ.ಕೆ.ಸಿ, ೨೦೦೭, '*ಪೊಲಿಟಿಕಲ್ ಎಂಪವರ್‌ಮೆಂಟ್ ಆಫ್ ವುಮನ್ ಆಟ್ ದ ಗಾಸರೊಡ್ಸ್'*; ಕನಿಷ್ಪಾ ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ೪೯೩/೫–೨೧ಎ, ಅನಸಾರಿ ರೋಡ್, ನ್ಯೂ ಡೆಲ್ಲಿ,

- ವಿರೇಶ್ ನಾಯಕ್, ೨೦೧೮, '*ರಾಜಕೀಯದಲ್ಲಿ ಮಹಿಳೆಯರು, ೨೦೧೭ ವರದಿ ಭಾರತದ ಸ್ಥಿತಿಗತಿಗಳೇನು?'* ಹೊಸತು, ಸೆಪ್ಟೆಂಬರ್,

- ವಿವೇಕಾನಂದನ್.ವಿ. ೧೯೮೮, '*ಲಾರ್ಜ್–ಸ್ಕೇಲ್ ಡಿಸ್‌ಪ್ಲೇಸ್‌ಮೆಂಟ್ ಆಫ್ ವುಮೆನ್ ಫ್ರಮ್ ನೆಟ್ ಮೇಕಿಂಗ್* ಆ್ಯಂಡ್ *ದ ನೀಡ್ ಟು ರೆಸಿಫೈ ದ ಸಿಚುವೇಷನ್. ಪ್ರೋಸಿಡಿಂಗ್ಸ್ ಆಫ್ ದ ಅಲ್ ಇಂಡಿಯಾ ವರ್ಕ್‌ಶಫ್ ಒನ್ ದ ಗೈನ್‌ಫುಲ್ ಎಂಪ್ಲಾಯ್‌ಮೆಂಟ್ ಫಾರ್ ವುಮೆನ್ ಇನ್ ದ ಫಿಶರೀಸ್ ಫೀಲ್ಡ್'*; ಸೊಸೈಟಿ ಆಫ್ ಫಿಶರೀಸ್ ಟೆಕ್ನಾಲಜಿಸ್ಟ್ಸ್ ಕೊಚ್ಚಿನ್.

- ವೆಲಂಗಣಿ.ಎಸ್. ಆಕಿನ ಬರ್ವಿನ್ ಎಂ.ಜೆಬ ಸೆಲ್ವಿ ಅನಿತಾ ಡಿ, ೨೦೧೫. '*ಎಥಿಕಲ್ ಪರ್ಸ್‌ಪೆಕ್ಟಿವ್ ಆಪ್ ವುಮೆನ್ ಟವರ್ಡ್ಸ್ ಎನ್‌ವರೈನ್‌ಮೆಂಟ್'*; ಥರ್ಡ್ ಕಾನ್ಸೆಪ್ಟ್, ಮಾರ್ಚ್,

- ಶಕುಂತಳ ನರಸಿಂಹನ್, ೧೯೯೯, *'ಎಂಪವರಿಂಗ್ ವುಮೆನ್, ಆ್ಯನ್‌ಅಲ್ಟರ್ನೇಟೀವ್ ಸ್ಟ್ರಾಟೆಜಿ ಫ್ರಮ್ ರೂರಲ್ ಇಂಡಿಯಾ'*, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ,
- ಶಕುಂತಳ ಗುಪ್ತ, ೨೦೦೫, 'ವುಮೆನ್ ಡೆವಲಪ್‌ಮೆಂಟ್ ಇನ್ ಇಂಡಿಯಾ; ಎ ಕಂಪೆರೇಟಿವ್ ಸ್ಟಡಿ, ಅನ್‌ಮೋಲ್ ಪಬ್ಲಿಕೇಷನ್, ನ್ಯೂ ಡೆಲ್ಲಿ,
- ಶರ್ಮಾ.ಜಿ.ಎಂ (ಸಂ) ೨೦೦೪, *'ವುಮೆನ್ ಆ್ಯಂಡ್ ಎಜುಕೇಶನ್'* ಕಾಮನ್ ವೆಲ್ತ್ ಪಬ್ಲಿಷರ್ಸ್, ನ್ಯೂ ಡೆಲ್ಲಿ,
- ಶಶಿಕಲಾ, ೨೦೧೦, *'ಮೊಗವೀರ ಸಮುದಾಯದ ಮಹಿಳೆಯರ ಶೈಕ್ಷಣಿಕ ಸಾಧನೆಗಳ ನಿರ್ಧಾರಕಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ'*, ಇವರು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧ
- ಶಿವಣ್ಣ.ಎನ್, ೧೯೯೮, *'ಡಿಸೆಂಟ್ರಲೈಸ್ಡ್ ಗೋವರೆನ್ಸ್ ಆ್ಯಂಡ್ ಪ್ಲಾನಿಂಗ್ ಇನ್ ಕರ್ನಾಟಕ: ಎ ಹಿಸ್ಟೋರಿಕಲ್ ರಿವ್ಯೂ*, ಸೋಷಿಯಲ್ ಚೇಂಜ್, ವಾಲ್ಯೂಂ.೮, ನಂ.೧.
- ಶಿವಲಿಂಗಪ್ಪ, ೨೦೧೧, *'ವುಮೆನ್ ಎಂಪವರ್‌ಮೆಂಟ್ ಆ್ಯಂಡ್ ಜೆಂಡರ್ ಇಕ್ವಾಲಿಟಿ'*, ಸದರ್ನ್ ಇಕಾನಾಮಿಸ್ಟ್, ೧೫ ಸೆಪ್ಟಂಬರ್.
- ಶೈಲಜಾ.ಎಂ.ಸಿ, *'ಮಹಿಳೆ ಮತ್ತು ರಾಜಕೀಯ ಸದಬಲೀಕರಣ'*, ಅಬ್ದುಲ್ ನಜೀರ್ ಸಾಬ್, ರಾಜ್ಯದ ಗ್ರಾಮೀಣ ಅಭಿವೃದ್ಧಿ ಸಂಶೋಧನಾ ಸಂಸ್ಥೆ, ಮೈಸೂರು
- ಶೈಲಜಾ, *'ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು'*, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶ್ರೀಕಾಂತ್.ಕೆ, ೨೦೦೧, *'ರೋಲ್ ಆಫ್ ವುಮೆನ್ ಇನ್ ಕೋಸ್ಟಲ್ ಫಿಶರೀಸ್ ರಿಸೋರ್ಸಸ್ ಮ್ಯಾನೇಜ್‌ಮೆಂಟ್'*; ಇಂಟರ್‌ನ್ಯಾಷನಲ್ ಕಾನ್ಫರೆನಸ್ ಓನ್ ವುಮೆನ್ ಇನ್ ಫಿಶರೀಸ್ ೧೧-೧೨, ಡಿಸೆಂಬರ್,
- ಶ್ರೀಧರ.ಎ, ೨೦೦೦, *'ಕರ್ನಾಟಕದಲ್ಲಿ ಪಂಚಾಯತ್ ರಾಜ್ ಕಾಯ್ದೆಗಳು'*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶ್ರೀಧರ.ಎ, ೨೦೦೯, 'ಪಂಚಾಯತ್ ಮತ್ತು ಮಹಿಳೆ', ಸಮಾಜ ವಿಜ್ಞಾನಗಳ ಪತ್ರಿಕೆ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಶ್ರೀನಿವಾಸ್ ರಾವ್.ಸಿ.ಎಚ್, ೨೦೧೪, *'ಇಂಪ್ಯಾಕ್ಟ್ ಆಫ್ ಸೆಲ್ಫ್ ಹೆಲ್ಪ್ ಗ್ರೂಪ್ಸ್ ಆಫ್ ಇಂಡಿಯನ್ ಕ್ರಾಂತಿ ಪಥನ್, ಆನ್ ಸ್ಟೇಟಸ್ ಆಫ್ ವುಮೆನ್'* ಸೆಪ್ಟೆಂಬರ್ ೧೫, ಸದರ್ನ್ ಇಕಾನಾಮಿಸ್ಟ್, ವಾಲ್ಯುಂ ೫೩,
- ಶ್ರೀಮತಿ.ಹೆಚ್.ಎಸ್, ಶಿವಾನಂದ ವಿರಕ್ತಮಠ.ಎ, ಕೃಷ್ಣ.ಜೆ, ೨೦೦೭, *'ಮಹಿಳೆ ದುಡಿಮೆ ಮತ್ತು ಬಿಡುವು'* ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶಂಕರರಾವ್.ಚ.ನ. ೧೯೯೭, 'ಸಾಮಾಜಿಕ ಸಂಶೋಧನೆಯ ಕೈಪಿಡಿ', ಜೈ ಭಾರತ ಪ್ರಕಾಶನ, ಮಂಗಳೂರು.
- ಷಣ್ಮುಗ್ ರಾಜ್.ಟಿ, ಉಪ್ರೇತಿ, ಅಶೋಕ್, ೧೯೯೮, *'ಸೋಶಿಯೋ ಇಕಾನಮಿಕ್ ಆಫ್ ಫಿಶರ್‌ಫೋಕ್ ಕಮ್ಯೂನಿಟೀಸ್ ಇನ್ ದ ಗಲ್ಫ್ ಆಫ್ ಮನ್ನರ್ ಮರೈನ್ ಬಯೋಸ್ಪಿಯರ್ ರಿಸರ್ವ್ ಎ ಸರ್ವೇ ಆಫ್ ತಮಿಳ್‌ನಾಡ್ ಫಾರೆಸ್ಟ್ ಡಿಪಾರ್ಟ್‌ಮೆಂಟ್'*;

- ಷಣ್ಮುಖ.ಎ, ೨೦೦೬, *'ಕರ್ನಾಟಕ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳಾ ಮೀಸಲಾತಿ ಶಿವಮೊಗ್ಗ ಜಿಲ್ಲೆಯ ಒಂದು ಅಧ್ಯಯನ'*, ಸಂಶೋಧನಾ ಗ್ರಂಥ, ಕುವೆಂಪು ವಿಶ್ವವಿದ್ಯಾಲಯ.

- ಸಗರಿ ಆರ್ ರಾಮ್‌ದಾಸ, ೨೦೦೯, *'ವುಮೆನ್ ಫಾರೆಸ್ಟ್‌ಸ್ಪೇಸಸ್ ದ ಲಾ'*, ಇಕಾನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ೩೧ ಅಕ್ಟೋಬರ್ ೬ ನವೆಂಬರ್.

- ಸಮದ್ ಅಬ್ದುಲ್, ೨೦೦೭, *'ವುಮೆನ್ ಎಂಪವರ್‌ಮೆಂಟ್ ಆ್ಯಂಡ್ ಪಂಚಾಯತಿ ರಾಜ್ ಇನ್ಸ್ಟಿಟ್ಯೂಷನ್ಸ್ ಇನ್ ಕೇರಳ'*, ಕುರುಕ್ಷೇತ್ರ ಜರ್ನಲ್ ಒನ್ ರೂರಲ್ ಡೆವಲಪ್‌ಮೆಂಟ್,

- ಸಬಿಹಾ ಭೂಮಿಗೌಡ, (ಸಂ) ೨೦೦೭, *'ಲಿಂಗತ್ವ ಸಮನ್ವಾಯ'*, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

- ಸತ್ಯವತಿ.ಎನ್.ಎಚ್, ೨೦೧೭, *'ಮಹಿಳೆಯರ ಅಭಿವೃದ್ಧಿಯಲ್ಲಿ ಸರ್ಕಾರಿ ಯೋಜನೆಗಳ ಪಾತ್ರ ಗುಲಬರ್ಗಾ ಜಿಲ್ಲೆಯ ಅಧ್ಯಯನ'*, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.

- ಸತಿಯಾದಾಸ್.ಆರ್, ಆಶಾಲತ್ ಎಸ್. ಸಿಂಧು ಆ್ಯಂಡ್ ಜೋಸೆಫ್‌ರಾಜ್, ೨೦೦೩, *'ವುಮೆನ್ ವರ್ಕರ್ಸ್ ಇನ್ ದ ಪೋಸ್ಟ್ ಹಾರ್ವೆಸ್ಟ್ ಮೇರಿನ್ ಫಿಶರೀಸ್ ಸೆಕ್ಟರ್ ಆಫ್ ಕೇರಳ: ಸೊಶಿಯೋ-ಇಕಾನಾಮಿಕ್ ಪ್ರೊಫೈಲ್'*, ಫಿಶ್ ಟೈಮಸ್ ೨೩(೨):

- ಸತೀಶ.ಎಂ, ೨೦೧೨, *'ಸ್ತ್ರೀವಾದ ಮತ್ತು ಭಾರತೀಯತೆ'*, ಈ ಕಾಲ ಪ್ರಕಾಶನ, ಬೆಂಗಳೂರು.

- ಸರಸ್ವತಿ ರಾಜು, ೨೦೦೬, *'ಲೋಕೆಟಿಂಗ್ ವುಮೆನ್ ಇನ್ ಸೋಶಿಯಲ್ ಡೆವಲಪ್‌ಮೆಂಟ್ ಇಂಡಿಯಾ, ಸೋಶಿಯಲ್ ಡೆವಲಪ್‌ಮೆಂಟ್ ರಿಪೋರ್ಟ್ ಕೌನ್ಸಿಲ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್'*, ನ್ಯೂ ಡೆಲ್ಲಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್,

- ಸ್ವಪ್ನ ಮಜುಮ್‌ದಾರ್, ೨೦೧೬, *'ವುಮೆನ್ ಬ್ರೇಕ್ ಹೈಯಾರ್ಕೀಸ್, ವಾಕ್ ಟು ಫ್ರೀಡಮ್'*, ಇಕಾನಾಮಿಕ್ ಆ್ಯಂಡ್ ಪಾಲಿಟಿಕಲ್ ವೀಕ್ಲೀ, ೧, ಅಕ್ಟೋಬರ್. ವಾಲ್ಯುಂ ಎಲ್ಐವಿ ನಂ.೪೦

- ಸಾವಿತ್ರಿ.ಎಚ್.ಎಸ್, ೨೦೦೫, *'ಲಿಂಗ ತಾರತಮ್ಯದ ವಿಚಾರ'*, ಸಾಹಿತ್ಯ ಬೆಂಗಳೂರು ಮುದ್ರಣಾಯ,

- ಸಾಹೇಯ್ ಸುಷ್ಮಾ, ೧೯೯೮, *'ವುಮೆನ್ ಆ್ಯಂಡ್ ಎಂಪವರ್‌ಮೆಂಟ್: ಅಪ್ರೋಚಸ್ ಅಂಡ್ ಸ್ಟ್ರಾಟೇಜಿಸ್'*, ಡಿಸ್ಕವರಿ ಪಬ್ಲಿಷಿಂಗ್, ನ್ಯೂ ಡೆಲ್ಲಿ,

- ಸ್ಯಾಂಡ್ರ.ಜಿ, ಟರ್ನರ್ ಆ್ಯಂಡ್ ಟೀನಾ ಎಂ. ಮಸ್ಚಿ, ೨೦೧೫. *'ಫೆಮಿನಿಸ್ಟ್ ಅಂಡ್ ಎಂಪವರ್‌ಮೆಂಟ್ ಥಿಯರಿ ಆ್ಯಂಡ್ ಸೋಶಿಯಲ್ ವರ್ಕ್ ಪ್ರಾಕ್ಟಿಸ್'*, ಜರ್ನಲ್ ಆಫ್ ಸೋಶಿಯಲ್ ವರ್ಕ್ ಪ್ರಾಕ್ಟಿಸ್, ವಾಲ್ಯುಂ ೨೯. ನಂ.೨.

- ಸ್ವಾತಿ ಚಟ್ಟೋಪಾಧ್ಯಾಯ, ೨೦೧೫, *'ಪಾಲಿಟಿಕಲ್ ಪಾರ್ಟಿಸಿಪೇಶನ್ ಆಫ್ ವುಮೆನ್'*, ಥರ್ಡ್ ಕಾನ್ಸೆಪ್ಟ್, ಮೇ, ವಾಲ್ಯುಂ ೨೯ ನಂ.೩೩೯,

- ಸಿನ್ಹ.ಜೆ.ಪಿ, ೨೦೦೦, *'ಇಂಡಿಯನ್ ಡೆಮೋಕ್ರಸಿ ಆ್ಯಂಡ್ ಎಂಪವರ್‌ಮೆಂಟರ್ ಆಫ್ ವುಮೆನ್'*, ದ ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಅಡ್‌ಮಿನಿಸ್ಟ್ರೇಶನ್, ಅಕ್ಟೋಬರ್-ಡಿಸೆಂಬರ್ ವಾಲ್ಯುಂ ೪೬, ನಂ.೪.

- ಸ್ಮಿತಾ ಸುರೇಬಾನಕರ, ೨೦೦೯, *'ಭಾರತೀಯ ಸಂಸ್ಕೃತಿ ಮತ್ತು ಮಹಿಳೆ'*,

- ಸೀಮಾ.ಜಿ.ಕೆ. ೨೦೧೭, 'ಸ್ಟೇಟಸ್ ಆಫ್ ಫಿಶರ್ ವುಮೆನ್' ಎ ಕೇಸ್ ಸ್ಟಡಿ ಆಫ್ ವುಮೆನ್ ಇನ್ ಮೊಗವೀರ ಫಿಶಿಂಗ್ ಹೌಸ್ ಹೋಲ್ಡ್ಸ್, ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

- ಸೀಮಾ ಶರ್ಮ, ಶಮಾ ಕಾಂತಾ, ೨೦೦೬, *'ವುಮೆನ್ ಆ್ಯಂಡ್ ಪಾಲಿಟಿಕ್ಸ್',* ಅನಮೋಲ್ ಪಬ್ಲಿಕೇಷನ್ಸ್ ಪಿವಿಟಿ.ಎಲ್‌ಟಿಡಿ. ೪೩೭೪/೪ಬಿ ದರಿಯಾಗಂಜ್, ನ್ಯೂ ಡೆಲ್ಲಿ,

- ಸೀಮಾ ಸಲ್ಗೊಂಕರ್, ಪಿ, ೨೦೦೦, 'ವುಮೆನ್ ಇನ್ ಪಂಚಾಯತ್ ರಾಜ್ ಇನ್ಸ್ಟಿಟ್ಯೂಷನ್ಸ್ ಎ ಕೇಸ್ ಸ್ಟಡಿ ಇನ್ ಗೋವಾ', ಸಕ್ಸೆನಾ ಕಿರಣ್ (ಸಂ) ವುಮೆನ್ ಆ್ಯಂಡ್ ಪಾಲಿಟಿಕ್ಸ್, ಗ್ಯಾನ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ,

- ಸುಜಾತ.ವಿ, ೧೯೯೭, *'ಗ್ರೂಪಿಂಗ್ ವುಮೆನ್ ಫಾರ್ ಇಕಾನಾಮಿಕ್ ಎಂಪವರ್‌ಮೆಂಟ್',* ಯೋಜನಾ, ೪೧(೩).

- ಸುಕುಮಾರ್ ಹಾಗೂ ಮತ್ತಿತರರು, ೧೯೯೨, *'ಟ್ರೈನಿಂಗ್ ಇನ್ ಫಿಶ್ ಪ್ರೊಸೆಸಿಂಗ್ ಫಾರ್ ಫಿಶರ್‌ವುಮೆನ್: ಎ ಪ್ರೀ–ಪ್ರೊಗ್ರಾಮ್ ಸ್ಟಡಿ,'* ಫಿಶಿಂಗ್ ಚೈಮ್, ವಾಲ್ಯುಂ ೯. ನಂ.೬.

- ಸುಧೀಂದ್ರ ಆರ್ ಗಡ್ಡಕರ್, ೧೯೯೨, *'ವುಮೆನ್ ಇನ್ ಫಿಶರೀಸ ಇನ್ ಇಂಡಿಯಾ'* ಎಡಿಟೇಡ್ ಸ್ಪೆಶಲ್ ಪಬ್ಲಿಕೇಷನ್ಸ್ ಏಷಿಯನ್ ಫಿಶರೀಸ್ ಸೊಸೈಟಿ, ಇಂಡಿಯನ್ ಬ್ರಾಂಚ್, ಮಂಗಳೂರು.

- ಸುನೀತಾ ಪಥಾನಿಯ, ೨೦೦೧, *'ವುಮೆನ್ ಆ್ಯಂಡ್ ಡೆವಲಪ್‌ಮೆಂಟ್ ಫ್ರಮ್ ಮೈಕ್ಸಿಕೋ ಟು ಬೀಜಿಂಗ್ ಕಂಟ್ರೀಸ್ ಅದರ್ ದ್ಯಾನ್ ಇಂಡಿಯಾ, ಪ್ರೆಸಿಡೆನ್ಶಿಯಲ್ ಎಡ್ರೆಸ್ ಓನ್ ದ ಇಂಡಿಯನ್ ಇಸ್ತ್ರಿ ಕಾಂಗ್ರೆಸ್',* ಕುರುಕ್ಷೇತ್ರ ವಿಶ್ವವಿದ್ಯಾಲಯ.

- ಸುಮಂಗಳ ನಾಯಕ್, ೨೦೦೬, *'ಸೋಶಿಯೋ ಇಕಾನಮಿಕ್ ಸ್ಟೇಟಸ್ ಆಫ್ ಫಿಶರ್‌ಮೆನ್ ಕಮ್ಯುನಿಟಿ ಆಫ್ ಉತ್ತರ ಕನ್ನಡ ಡಿಸ್ಟ್ರಿಕ್ಟ್',* ಧಾರವಾಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ.

- ಸುಮಿತ್ರಾಬಾಯಿ.ಬಿ.ಎನ್ (ಸಂ) ಮತ್ತು ಎನ್ ಗಾಯತ್ರಿ, ೧೯೯೫, *'ಸ್ತ್ರೀವಾದಿ ಪ್ರವೇಶಿಕೆ',* ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

- ಸುರಾವಿ ಗೋಹೈನ್ ದುವಾರಹ್, ೨೦೧೫, *'ಕಾನ್ಸೆಪಟ್ಚುಲೈಸಿಂಗ್ ವುಮೆನ್ ಎಂಪವರ್‌ಮೆಂಟ್',* ಥರ್ಡ್ ಕಾನ್ಸೆಪ್ಟ್ ಫೆಬ್ರವರಿ.

- ಸುಶೀಲ್ ಕುಮಾರ್ ಆ್ಯಂಡ್ ವಿನಿತ ಪಾರ್ಮರ್, ಜೂನ್ ೨೦೧೬, *'ವುಮೆನ್ ಪಾಲಿಟಿಕಲ್ ಪಾರ್ಟಿಸಿಪೇಷನ್* ಆ್ಯಂಡ್ *ರೆಪ್ರೆಸೆಂಟೇಶನ್ ಇನ್ ದ ಪಂಚಾಯತ್ಸ್'* ಇಂಟರ್ ನ್ಯಾಷನಲ್ ಜರ್ನಲ್ ಆಫ್ ರೀಸೆಂಟ್ ರೀಸರ್ಚ್ ಇನ್ ಸೋಶಿಯಲ್ ಸಯನಸ್ ಆ್ಯಂಡ್ ಹ್ಯೂಮಾನಿಟೀಸ್, ವಾಲ್ಯುಂ ನಂ.೩, ಇಶ್ಯೂ ೨.

- ಸುಷ್ಮಾ ಸಾಹೇ, ೧೯೯೮, 'ವುಮೆನ್ ಅಂಡ್ ಎಂಪವರ್‌ಮೆಂಟ್ ಅಪ್ರೋಚೆಸ್ ಅಂಡ್ ಸ್ಟಾಟೆಜೀಸ್', ಡಿಸ್‌ಕವರಿ ಪಬ್ಲಿಷಿಂಗ್ ಹೌಸ್, ನಿವ್ಯೂ ಡೆಲ್ಲಿ.ಶಿವಚಿತ್ತಪ್ಪ ಕೆ, ೨೦೦೬, *'ಮಹಿಳಾ ಸಬಲೀಕರಣದ ವಿಭಿನ್ನ ನೆಲೆಗಳು',* ಲಕ್ಷ್ಮಿ ಪ್ರಿಂಟಿಂಗ್, ಮತ್ತು ಪಬ್ಲಿಕೇಷನ್ ಹೌಸ್, ಮೈಸೂರು.

- ಸುಸಾನೆ ಸ್ಕಾಹೆಚ್ ಮತ್ತು ಪಗ್ಗೀಸ್ ಜೇನ್, ೨೦೦೦, *'ಕಲ್ಚರ್ ಅಂಡ್ ಡೆವಲಪ್‌ಮೆಂಟ್ ಎ ಕ್ರಿಟಿಕಲ್ ಇಂಟ್ರೋಡಕ್ಷನ್, ಮಾಲ್ಡೆನ್ ಮೈನ್ ಸ್ಟ್ರೀಟ್',* ಬ್ಲ್ಯಾಕ್ ವೆಲ್ ಪಬ್ಲಿಷಿಂಗ್ ಲಿಮಿಟೆಡ್.

- ಸೂರ್ಯ ಚಂದ್ರ ರಾವ್, ೧೯೯೨, *'ರೋಲ್ ಆಫ್ ಅಪೆಕ್ಸ್ ಇನ್ಸ್ಟಿಟ್ಯೂಷನ್ಸ್ ಇನ್ ಪ್ರಮೋಟಿಂಗ್ ಫಿಶರ್‌ವುಮೆನ್ ಕೋ ಅಪರೇಟಿವ್ಸ್'* ಇನ್ ಸುಧೀಂದ್ರ.ಆರ್ (ಸಂ) ಪ್ರೊಸಿಡಿಂಗ್ಸ್ ಆಫ್ ವುಮೆನ್ ಇನ್ ಫೀಶರೀಸ್ ಇನ್ ಇಂಡಿಯ', ಮಂಗಳೂರು, ಏಷಿಯನ್ ಫಿಶರೀಸ್ ಸೊಸೈಟಿ ಬ್ರಾಂಚ್.

- ಸೆಬೆಸ್ಟಿಯನ್ ಮ್ಯಾಥ್ಯೂ, *೨೦೦೮, 'ಕೋಸ್ಟಲ್ ಮ್ಯಾನೇಜ್‌ಮೆಂಟ್ ಜೋನ್: ಇಂಪ್ಲೀಕೇಷನ್ಸ್ ಫಾರ್ ಫಿಶಿಂಗ್ ಕಮ್ಯೂನಿಟಿಸ್',* ಇಕಾನಾಮಿಕ್&ಪಾಲಿಟಿಕಲ್ ವೀಕ್ಲೀ, ಜೂನ್ ೨೧.

- ಸ್ಟೆಪಾನಿಯ ತವ ಲಮ-ರೆವಾಲ್, ೨೦೦೧, *'ಫ್ಲಕ್ಚುಯೇಟಿಂಗ್ ಅಂಬಿವಲೆನ್ಸ್ ಲೆಜಿಟಿಮೆಸಿ ಆಫ್ ಜೆಂಡರ್ ಅಸ್ ಅ ಪಾಲಿಟಿಕಲ್ ಕ್ಯಾಟಗೊರಿ',* ಇಕಾನಮಿಕ್ ಆ್ಯಂಡ್ ಪಾಲಿಟಿಕಲ್ ವೀಕ್ಲೀ ಏಪ್ರಿಲ್ ೨೮.

- ಸ್ನೇಹಲತಾ ಪಾಂಡ, ೧೯೯೬, *'ಏಮರ್ಜಿಂಗ್ ಪ್ಯಾಟರ್ನ್ ಅಫ್ ಲೀಡರ್‌ಶಿಫ್ ಅಮಂಗ್ ರೂರಲ್ ವುಮೆನ್ ಇನ್ ಒರಿಸ್ಸಾ',* ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಎಡ್‌ಮಿನಿಸ್ಟ್ರೇಶನ್, ವಾಲ್ಯುಂ ನಂ.೫೫, ನಂ.೧.

- ಸೋನಿ ಜಸಪ್ರೀತ್ ಕೌರ್, ೨೦೦೨, *'ವುಮೆನ್ ಎಂಪವರ್‌ಮೆಂಟ್ ಎಕ್ಸಪ್ಲೋರಿಂಗ್ ದ್ ಫ್ಯಾಕ್ಟ್',* ಆಥರ್ ಪ್ರಸ್, ಇ-೩೫/೧೦೩, ಜವಾಹರ ಪಾರ್ಕ, ಲಕ್ಷ್ಮೀ ನಗರ, ನ್ಯೂ ಡೆಲ್ಲಿ.

- ಸೋನಿ ಜೋಸ್ ಅಂಡ್ ಲಕ್ಷ್ಮೀ ವಿ. ನಾಯರ್, ೨೦೧೦, *'ವುಮೆನ್ ಸೆಲ್ಫ್ ಹೆಲ್ಪ್ ಗ್ರೂಪ್ಸ್ ಇನ್ ಕೋಸ್ಟಲ್ ಕೇರಳ: ದ ಲೋಪ್ ಸೈಡ್ ಆಫ್ ಸೋಶಿಯಲ್ ಡೆವಲಪ್‌ಮೆಂಟ್',* ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಸೋಶಿಯೋಲಾಜಿ ಆಂಡ್ ಆಂಥ್ರೋಪಾಲಜಿ ವಾಲ್ಯೂಂ ೩(೨).

- ಸಂಜಯ್ ಗಾಂಧಿ, ೨೦೧೬, *'ವುಮೆನ್ ವರ್ಕ್ಸ್‌ರ್ಸ್ ಇನ್ ಇಂಡಿಯಾ, ಎ ಕೇಸ್ ಸ್ಟಡಿ ಆಫ್ ಬಳ್ಳಾರಿ ಸಿಟಿ',* ಜನವರಿ.

- ಸಿಂಧು.ಪಿ.ಜೆ. ಚಂದ್ರಶೇಖರ್ ಬನ್ನೂದ್ ಎನ್‌ಹ್ಯಾನ್ಸಿಂಗ್, ೨೦೧೫, *'ವುಮೆನ್ ಎಂಪವರ್‌ಮೆಂಟ್ ಥ್ರೂ ಎಂ.ಜಿ.ಎನ್.ಆರ್.ಇ.ಜಿ',* ಥರ್ಡ್ ಕಾನ್ಸೆಪ್ಟ್, ಅಕ್ಟೋಬರ್.

- ಸಿಂಧುಜಾ.ಪಿ, ೨೦೧೭ *'ಗ್ಲೋಬಲ್ ಫ್ರೇಮ್‌ವರ್ಕ್ಸ್ ಫಾರ್ ಜೆಂಡರ್ ಇಕ್ವಾಲಿಟಿ ಇನ್ ಪಾಲಿಟಿಕ್ಸ್,* ಥರ್ಡ್ ಕಾನ್ಸೆಪ್ಟ್, ಮಾರ್ಚ್. ವಾಲ್ಯುಂ ನಂ.೩೧. ನಂ.೩೬೧.

- ಹಯ್‌ಡೋಕ್.ಜೆ, ಅಂಡ್ ಕೋಯಿಂಗ್ ಡಬ್ಲ್ಯೂ ಡಿ, ೨೦೦೩, *'ಪ್ಯಾಟರ್ನ್ಸ್ ಅಫ್ ರೆಪ್ರೊಡೆಕ್ಟಿವ್ ಸ್ಕಿವ್ಯೂ ಇನ್ ದ ಪೋಲಿಜೆಂಡ್ರಂಸ್ ಅಕೋರ್ನ್ ವುಡ್ ಪೆಕ್ಕರ್',* ಅಮೆರಿಕನ್ ನ್ಯಾಚುರಲಿಸ್ಟ್ ೧೬೨:

- ಹಲಫ್ ಆಫ್‌ಫರ್, ೨೦೦೧, *'ಜೆಂಡರಿಂಗ್ ದ ಮಿಲೇನಿಯಮ್ ಗ್ಲೋಬಲೈಸಿಂಗ್ ವುಮನ್'* ಇನ್ ಡೆಬರಾಲ್.ಇ.ಎಡಿ (ಸಂ) ಡಿಬೇಟಿಂಗ್ ಡೆವಲಪ್‌ಮೆಂಟ್ ಎನ್‌ಜಿಓ ಆ್ಯಂಡ್ ಫ್ಯೂಚರ್ ಡೆವಲಪ್‌ಮೆಂಟ್ ಇನ್ ಪ್ರಾಕ್ಟೀಸ್ ರೀಡರ್ಸ್ ಸಿರೀಸ್, ಜೈಪುರ: ರಾವತ್ ಪಬ್ಲಿಕೇಷನ್ಸ್,

- ಹಾರಿಯಟ್ ಟೇಲರ್ ಮಿಲ್. (೧೯೯೫) ಉದ್ಧೃತ ಆ. ಇಂದಿರಾ, ಸ್ತ್ರೀವಾದಿ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ ಮೈಸೂರು.

- ಹೊಲ್ಸ್.ಎಂ, ೧೯೯೮, *'ದ ಸ್ಟೇಟಸ್ ಆಫ್ ವುಮೆನ್ ಇನ್ ಸದರ್ನ್ ನೈಜೇರಿಯಾ ಇಸ್ ಎಜುಕೇಶನ್ ಅ ಹೆಲ್ಪ್ ಆರ್ ಅ ಹಿಂಡರೆನ್ಸ್ ಆಫ್ ವುಮೆನ್ ಅಂಡ್ ಎಜುಕೇಶನ್ ಇನ್ ಸಬ್-ಸಹರಾನ್ ಆಫ್ರಿಕಾ'*, ಲೈನ್ ರೈಯನ್ನೆರ್ ಪಬ್ಲೀಷರ್ಸ್, ಬ್ಲಂಡರ್.
- ಹೋಲ್ಕ್ಕೊಂಜೆ, ೧೯೯೫, *'ಮ್ಯಾನೇಜಿಂಗ್ ಎಂಪವರ್‌ಮೆಂಟ್, ದ ಗ್ರಾಮೀಣ್ ಬ್ಯಾಂಕ್ಸ್ ಎಕ್ಸ್‌ಪಿರಿಯೆನ್ಸ್ ಆಫ್ ಪಾವರ್ಟಿ ಅಲ್ಲೆವಿಯೇಷನ್'*, ಜೆಡ್ ಬುಕ್ಸ್ ಲಿಮಿಟೆಡ್, ಲಂಡನ್.
- ಹೇಮಂತ್ ಕುಮಾರ್.ಎ ಚೌಹ್ವಣ್, ಫಾರ್ಥಸಾರಥಿ, ಸರ್‌ಮಿಸ್ತಾ ಪಟ್ನಾಯಕ್, *'೨೦೧೬, ಕೋಸ್ಟಲ್ ಇಕಾಲಜಿ ಅಂಡ್ ಫಿಶಿಂಗ್ ಕಮ್ಯೂನಿಟಿ ಇನ್ ಮುಂಬೈ ಸಿಆರ್ ಜೆಡ್ ಪಾಲಿಸಿ, ಸಸ್ಟೈನ್ ಎಬಿಲಿಟಿ ಅಂಡ್ ಲೈವ್ಲಿಹೂಡ್ಸ್'*, ಇಕಾನಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ಸೆಪ್ಟೆಂಬರ್ ೨೪.
- ಹೇಮಲತಾ.ಎಚ್.ಎಂ. ೧೯೯೯, *'ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ'*, ಸಮತಾ ಅಧ್ಯಯನ ಕೇಂದ್ರ, ಮೈಸೂರು.
- ಹೇಮಲತಾ.ಎಚ್.ಎಂ, ೨೦೦೨, *'ಮಹಿಳಾ ಸಶಕ್ತೀಕರಣ'*, ಅಭಿರುಚಿ ಪ್ರಕಾಶನ, ಪು. ೯.
- ಹೇಮಲತಾ.ಎಚ್.ಎಂ, ೨೦೦೪, *'ಮಹಿಳಾ ಅಧ್ಯಯನ'* ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು

ವರದಿಗಳು:

- ಉದಯವಾಣಿ, ಪತ್ರಿಕೆ ೧೪-೦೬-೨೦೧೮, ಪು.೬.
- ವಿಜಯವಾಣಿ, ದಿನಪತ್ರಿಕೆ, ೧೩-೦೫-೨೦೧೭. ಪು.೬.
- ಉಡುಪಿ ಜಿಲ್ಲಾ ಪಂಚಾಯತ್ ಅಂಕಿ ಅಂಶಗಳ ಪಕ್ಷಿ ನೋಟ ೨೦೧೩-೧೪ ಪು. ೮೩-೮೫
- ಉಡುಪಿ ಜಿಲ್ಲಾ ಪಂಚಾಯತ್ ಅಂಕಿ ಅಂಶಗಳ ಪಕ್ಷಿ ನೋಟ ೨೦೧೪-೧೫ ಪು. ೮೩-೮೫.
- ಉಡುಪಿ ಜಿಲ್ಲೆಯ ಅಂಕಿ ಸಂಖ್ಯೆಗಳ ಪಕ್ಷಿ ನೋಟ, ೨೦೧೫-೧೬ ಪು.೫೯-೧೭೫
- ಉಡುಪಿ ಜಿಲ್ಲಾ ಪಂಚಾಯತ್ ಅಂಕಿ ಅಂಶಗಳ ಪಕ್ಷಿ ನೋಟ ೨೦೧೬-೧೭. ಪು. ೮೩-೮೫.
- ಉಡುಪಿ ಜಿಲ್ಲಾ ಪಂಚಾಯತ್, ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಕೈಪಿಡಿ, ೨೦೧೫-೧೬, ಪು. ೧-೩.
- ಕರ್ನಾಟಕ ರಾಜ್ಯ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
- ಭಾಗ್ಯಲಕ್ಷ್ಮಿ ಯೋಜನೆ ಕಿರುಹೊತ್ತಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
- ಹ್ಯೂಮನ್ ಡೆವಲಪ್‌ಮೆಂಟ್ ೨೦೧೮ರ ವರದಿ

ಅನುಬಂಧ-೧

ಮೊಗವೀರ ಮಹಿಳಾ ರಾಜಕೀಯ ಸಬಲೀಕರಣ: ಉಡುಪಿ ಜಿಲ್ಲೆಯನ್ನು ಅನುಲಕ್ಷಿಸಿ

ಮಾದರಿ ಪ್ರಶ್ನಾವಳಿ

೧. ಹೆಸರು:

೨. ವಯಸ್ಸು

ಅ) ೨೦-೩೦ ಆ) ೩೧-೪೦ ಇ) ೪೧-೫೦ ಈ) ೫೧-೬೦

ಉ) ೬೧-೭೦

೩. ಶಿಕ್ಷಣ:

ಅ) ಅನಕ್ಷರಸ್ಥರು ಆ) ಪ್ರಾಥಮಿಕ ಇ) ಪೌಢಶಾಲೆ/ ಎಸ್ಎಸ್.ಎಲ್.ಸಿ

ಈ) ಪಿ.ಯು.ಸಿ ಉ) ಡಿಗ್ರಿ ಊ) ಉನ್ನತ ಶಿಕ್ಷಣ ಎ) ತಾಂತ್ರಿಕ ಶಿಕ್ಷಣ.

೪. ಕುಟುಂಬದ ವಿವರ:

ಅ) ಅವಿಭಕ್ತ ಕುಟುಂಬ ಆ) ವಿಭಕ್ತ ಕುಟುಂಬ

ಕುಟುಂಬದ ಸದಸ್ಯರ ವಿವರ:

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಮಾಹಿತಿದಾರ ನೊಂದಿಗೆ ಸಂಬಂಧ	ಶಿಕ್ಷಣ	ಉದ್ಯೋಗ	ಮಾಸಿಕ ಆದಾಯ
೧						
೨						
೩						

೫. ಹಿರಿಯ ತಲೆಮಾರಿನ ಸ್ತ್ರೀಯರ ವಿವರ

ಹಿರಿಯ ತಲೆಮಾರಿನ ವಿವರ	ಶಿಕ್ಷಣ	ಉದ್ಯೋಗ
ತಾಯಿ		
ತಾಯಿಯ ತಾಯಿ		
ತಂದೆಯ ತಾಯಿ		

೬. ನಿಮ್ಮ ಆರಾಧ್ಯ ದೈವ ಯಾವುದು?

೭. ನಿಮ್ಮ ಜಾತಿ ಸಮುದಾಯದಲ್ಲಿ ಕುಲದೇವರು ಎಂಬ ಕಲ್ಪನೆ ಇದೆಯೇ?

ಅ) ಹೌದು ಆ) ಇಲ್ಲ

೮. ಹೌದಾದರೆ, ನಿಮ್ಮ ಕುಲ ದೇವರು ಯಾರು

೯. ವೈವಾಹಿಕ ವಿವರ:

ಅ) ವಿವಾಹಿತೆ ಆ) ಅವಿವಾಹಿತೆ ಇ) ವಿಧವೆ

೧೦. ನೀವು ನಿಮ್ಮ ವಿವಾಹದಲ್ಲಿ ಯಾವುದೇ ರೀತಿಯ ವರದಕ್ಷಿಣೆ ನೀಡಿರುವಿರಾ?

ಅ) ಹೌದು ಆ) ಇಲ್ಲ ಇ) ಅನ್ವಯಿಸುವುದಿಲ್ಲ

೧೧. ಹೌದಾದರೆ, ಯಾವ ರೂಪದಲ್ಲಿ?

ಅ) ಹಣ ಆ) ಜಮೀನು ಇ) ವಾಹನ ಈ) ಇತರೆ

೧೨. ನಿಮ್ಮದು ಯಾವ ರೀತಿಯಾದ ವಿವಾಹ?

ಅ) ಪ್ರೇಮವಿವಾಹ ಆ) ಅಂತರ್‌ಜಾತಿ ವಿವಾಹ

ಇ) ಹಿರಿಯರು ವ್ಯವಸ್ಥೆ ಮಾಡಿದ ವಿವಾಹ

೧೩. ಬಳಿ ಅಥವಾ ಬರಿಯನ್ನು ಆಧಾರವಾಗಿಟ್ಟುಕೊಂಡು ವಿವಾಹ ಆಗಿದ್ದೀರಾ/ ಆಗುತ್ತೀರಾ?

ಅ) ಹೌದು ಆ) ಇಲ್ಲ

೧೪. ನೀವು ಎಷ್ಟು ಮಕ್ಕಳನ್ನು ಪಡೆಯಬೇಕು ಎಂಬುದರ ನಿರ್ಧಾರ ಅವಲಂಬಿಸಿರುವುದು ನಿಮ್ಮ ಕುಟುಂಬದ ಯಾರಲ್ಲಿ?

ಅ) ಸ್ವಂತ ಆ) ಗಂಡ ಇ) ಅತ್ತೆ ಈ) ಮಾವ ಉ) ಅನ್ವಯಿಸುವುದಿಲ್ಲ.

೧೫. ನಿಮ್ಮ ಮಕ್ಕಳ ವಿವಾಹದಲ್ಲಿ ವಧು–ವರನ ಆಯ್ಕೆಯ ನಿರ್ಧಾರ ಅವಲಂಬಿಸಿರುವುದು ಯಾರಲ್ಲಿ?

ಅ) ಮಕ್ಕಳ ಸ್ವಂತ ನಿರ್ಧಾರ ಆ) ತಾಯಿಯ ನಿರ್ಧಾರ

ಇ) ತಂದೆಯ ನಿರ್ಧಾರ ಈ) ಅತ್ತೆಯ ನಿರ್ಧಾರ

ಉ) ಮಾವನ ನಿರ್ಧಾರ ಊ) ಅನ್ವಯಿಸುವುದಿಲ್ಲ

೧೬. ನಿಮ್ಮ ಮಕ್ಕಳ ವಿವಾಹದಲ್ಲಿ ವರನಲ್ಲಿರುವ ಯಾವ ಅಂಶವನ್ನು ಪ್ರಧಾನವಾಗಿ ಪರಿಗಣಿಸಿಕೊಂಡು ವಿವಾಹ ಮಾಡಲು ಬಯಸುತ್ತೀರಿ?

ಅ) ವೃತ್ತಿ ಆ) ವಿದ್ಯಾರ್ಹತೆ ಇ) ಜಾತಿ ಈ) ಬರಿ/ಬಳಿ

ಉ) ದೈಹಿಕ ಮಟ್ಟದ ಆಧಾರದಲ್ಲಿ ಊ) ಇತರೆ

೧೭. ನಿಮ್ಮ ಸಮುದಾಯದಲ್ಲಿ ವಿಧವಾ ವಿವಾಹ ನಡೆಯುತ್ತದೆಯೇ?

ಅ) ಹೌದು ಆ) ಇಲ್ಲ

೧೮. ವಿಧವಾ ವಿವಾಹದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಅ) ಸಮ್ಮತಿ ಇದೆ ಆ) ಸಮ್ಮತಿ ಇಲ್ಲ

ಶಿಕ್ಷಣಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಗಳು

೧೯. ನಿಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವ ಆಯ್ಕೆ ನಿರ್ಧಾರ ಅವಲಂಬಿಸಿರುವುದು ಯಾರಲ್ಲಿ?

ಅ) ಸ್ವಂತ ನಿರ್ಧಾರ ಆ) ತಾಯಿಯ ನಿರ್ಧಾರ

ಇ) ತಂದೆಯ ನಿರ್ಧಾರ ಈ) ಅತ್ತೆಯ ನಿರ್ಧಾರ

ಉ) ಮಾವನ ನಿರ್ಧಾರ ಊ) ಅನ್ವಯಿಸುವುದಿಲ್ಲ

೨೦. ನಿಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸಲು ಇಚ್ಛಿಸುತ್ತೀರಾ?

ಅ) ಹೌದು ಆ) ಇಲ್ಲ

೨೧. ನೀವು ಶಿಕ್ಷಣ ಮುಂದುವರೆಸದಿರಲು ಕಾರಣಗಳು?

ಅ) ಬಡತನ ಆ) ಶಿಕ್ಷಣದ ಬಗ್ಗೆ ಅನಾಸಕ್ತಿ, ಇ) ಹೆತ್ತವರ ನಿರ್ಲಕ್ಷ

ಈ) ವಿವಾಹ ಉ) ಅನ್ವಯಿಸುವುದಿಲ್ಲ.

೨೨. ನಿಮ್ಮ ಕುಟುಂಬದಲ್ಲಿ ಸ್ತ್ರೀಯರಿಗೆ ಶಿಕ್ಷಣವನ್ನು ಪಡೆಯಲು ಅವಕಾಶ ನೀಡುತ್ತೀರಾ?

ಅ) ಹೌದು ಆ) ಇಲ್ಲ

೨೩. ನಿಮ್ಮ ಸಮುದಾಯದ ಹೆಣ್ಣು ಮಕ್ಕಳಿಗೆ ಶಾಲೆಗಳಲ್ಲಿ ವಿಶೇಷ ಪ್ರಾತಿನಿಧ್ಯತೆ ಇದೆಯೇ?

ಅ) ಹೌದು ಆ) ಇಲ್ಲ

ಹೌದಾದಲ್ಲಿ, ಯಾವ ರೀತಿ?

೨೪. ನಿಮ್ಮ ಸಾಮಾಜಿಕ ಜೀವನದ ಮೇಲೆ ಶಿಕ್ಷಣ ಪ್ರಭಾವ ಬೀರಿದೆಯೇ? ಅ) ಹೌದು ಆ) ಇಲ್ಲ

ಹೌದಾದಲ್ಲಿ, ಯಾವರೀತಿ?

ಇಲ್ಲವಾದಲ್ಲಿ, ಯಾಕೆ?

೨೫. ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅಗತ್ಯ ಇದೆಯೇ?

ಅ) ಇದೆ ಆ) ಇಲ್ಲ.

ಇದೆಯಾದರೆ, ಯಾಕೆ? ಇಲ್ಲವಾದರೆ, ಯಾಕೆ?

ಮಹಿಳೆಯರ ಸ್ಥಾನಮಾನ

೨೬. ಕುಟುಂಬದ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ನಿಮ್ಮ ಸಮುದಾಯದಲ್ಲಿ ಪುರುಷರಷ್ಟೇ ಮಹಿಳೆಗೆ ಸಮಾನ ಅವಕಾಶಗಳಿವೆಯೇ?

ಅ) ಹೌದು ಆ) ಇಲ್ಲ

೨೭. ಕೌಟುಂಬಿಕ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮಹಿಳೆಯರಿಗೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆಯೇ?

ಅ) ಹೌದು ಆ) ಇಲ್ಲ

೨೮. ನಿಮ್ಮ ಕುಟುಂಬದಲ್ಲಿ ಮಹಿಳೆಯರ ಸ್ಥಾನಮಾನ ಯಾವ ಮಟ್ಟದಲ್ಲಿದೆ?

ಅ) ಪುರುಷರಿಗಿಂತ ಉನ್ನತ ಮಟ್ಟದಲ್ಲಿದೆ ಆ) ಪುರಷರಷ್ಟೆ ಸಮಾನವಾಗಿದೆ

ಇ) ಪುರುಷರಿಗಿಂತ ಕೆಳಮಟ್ಟದಲ್ಲಿದೆ

೨೯. ನಿಮ್ಮ ಅಭಿಪ್ರಾಯದಲ್ಲಿ ಮಹಿಳೆಗೆ ಆರ್ಥಿಕವಾಗಿ ಸ್ವಾತಂತ್ರ್ಯ ಬೇಕೇ?

ಅ) ಬೇಕು ಆ) ಬೇಡ

೩೦. ಆಧುನೀಕರಣವು ನಿಮ್ಮ ಕುಟುಂಬದ ಮಹಿಳೆಯರ ಮೇಲೆ ಪ್ರಭಾವ ಬೀರಿದೆಯಾ?

ಅ) ಹೌದು ಆ) ಇಲ್ಲ

ಹೌದಾದರೆ, ಯಾವ ರೀತಿಯ ಪ್ರಭಾವ?

ಇತರೆ ಪ್ರಶ್ನೆಗಳು

೩೧. ಮೊಗವೀರ ಮಹಿಳೆಯರು ಮತ್ತು ಇತರ ಸಮುದಾಯದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಸಮಾನವಾಗಿದೆಯೇ?
ಅ) ಹೌದು ಆ) ಇಲ್ಲ

೩೨. ಆರ್ಥಿಕವಾಗಿ ಮೊಗವೀರ ಮಹಿಳೆಯರು ಹಾಗೂ ಇತರ ಸಮುದಾಯದ ಮಹಿಳೆಯರು ಸಮಾನರೇ? ಅ) ಹೌದು ಆ) ಇಲ

೩೩. ನೀವು ಜಾತಿ ಮೀಸಲಾತಿಯನ್ನು ಬಳಸಿಕೊಂಡಿರುವಿರಾ?

ಅ) ಹೌದು ಆ) ಇಲ್ಲ

ಹೌದಾದರೆ, ಯಾವ ಕ್ಷೇತ್ರದಲ್ಲಿ?

೩೪. ಇತರೆ ಜಾತಿಯವರೊಂದಿಗೆ ನೀವು ಬೆರೆಯುತ್ತೀರಾ?

ಅ) ಹೌದು ಆ) ಇಲ್ಲ

ಹೌದಾದರೆ, ಎಂತಹ ಸಂದರ್ಭದಲ್ಲಿ?

೩೫. ಇತರೆ ಜಾತಿ ಸಮುದಾಯದವರ ಬಗ್ಗೆ ನಿಮ್ಮ ಭಾವನೆ ಯಾವ ರೀತಿ ಇದೆ?

ಅ) ಉತ್ತಮ ಭಾವನೆ ಆ) ಕೀಳು ಭಾವನೆ

ಇ) ಕೆಲವರ ಬಗ್ಗೆ ಉತ್ತಮ ಭಾವನೆ ಇದೆ ಈ) ಗೊತ್ತಿಲ್ಲ

೩೬. ಇತರೆ ಜಾತಿ ಸಮುದಾಯದವರು ನಿಮ್ಮೊಂದಿಗೆ ಎಂತಹ ಭಾವನೆ ಹೊಂದಿದ್ದಾರೆ?

ಅ) ಉತ್ತಮ ಭಾವನೆ ಆ) ಕೀಳು ಭಾವನೆ ಇ) ಗೊತ್ತಿಲ್ಲ.

ಆರ್ಥಿಕ ಅಂಶಗಳು:

೧. ಉದ್ಯೋಗ:
ಅ) ಕೃಷಿ ಆ) ಮೀನುಗಾರಿಕೆ ಇ) ಸ್ವ ಉದ್ಯೋಗ
ಈ) ಸರಕಾರಿ ಉದ್ಯೋಗ ಉ) ವ್ಯಾಪಾರ ಊ) ಇತರೆ
ಎ) ಅನ್ವಯಿಸುವುದಿಲ್ಲ

೨. ಕುಲಕಸುಬು:

೩. ಮಾಸಿಕ ಆದಾಯ:
ಅ) ೧೦ ಸಾವಿರದಿಂದ ೨೦ ಸಾವಿರ ಆ) ೨೧ ಸಾವಿರದಂದ ೩೦ ಸಾವಿರ

ಇ) ೩೧ ಸಾವಿರದಿಂದ ೪೦ ಸಾವಿರ ಈ) ೪೧ ಸಾವಿರದಿಂದ ೫೦ ಸಾವಿರ

ಉ) ೫೧ ಸಾವಿರ ಮೇಲ್ಪಟ್ಟು ಊ) ಅನ್ವಯಿಸುವುದಿಲ್ಲ

೪. ಹೆತ್ತವರ ಉದ್ಯೋಗ:

೫. ನಿಮ್ಮ ವೃತ್ತಿಯಲ್ಲಿ ಏನಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಾ?

ಅ) ಹೌದು ಆ) ಇಲ್ಲ ಇ) ಅನ್ವಯಿಸುವುದಿಲ್ಲ

೬. ವೃತ್ತಿ ಮಾಡುವುದರ ಜೊತೆಗೆ ಮನೆಯನ್ನು ನಿಭಾಯಿಸುತ್ತೀರಾ?

ಅ) ಹೌದು ಆ) ಇಲ್ಲ ಇ) ಅನ್ವಯಿಸುವುದಿಲ್ಲ

೭. ನಿಮ್ಮಲ್ಲಿ ಏನಾದರೂ ವೃತ್ತಿಗೆ ಸಂಬಂಧಪಟ್ಟಂತೆ ಸಂಘಟನೆ ಇದೆಯೇ?

ಅ) ಹೌದು ಆ) ಇಲ್ಲ

೮. ನಿಮ್ಮ ಮನೆಯ ಒಡೆತನದ ರೀತಿ?

ಅ) ಸ್ವಂತ ಆ) ಬಾಡಿಗೆ

೯. ಮನೆಯ ಪ್ರಕಾರ:

ಅ) ಗುಡಿಸಲು ಆ) ಹೆಂಚು ಇ) ಆರ್.ಸಿ.ಸಿ

೧೦. ಆಸ್ತಿಯ ಒಡೆತನ ನಿಮ್ಮ ಹೆಸರಿನಲ್ಲಿ ಇದೆಯೇ?

ಅ) ಹೌದು ಆ) ಇಲ್ಲ

೧೧. ನಿಮ್ಮ ಆದಾಯದಲ್ಲಿ ಉಳಿತಾಯ ಮಾಡುತ್ತಿರಾ?

ಅ) ಹೌದು ಆ) ಇಲ್ಲ

೧೨. ಹೌದಾದರೆ, ಎಲ್ಲಿ?

ಅ) ಬ್ಯಾಂಕ್ ಆ) ಅಂಚೆ ಕಚೇರಿ ಇ) ಸ್ವಸಹಾಯ ಸಂಘದ ನಿಧಿ ಈ) ಇತರೆ

೧೩. ಸರಕಾರದಿಂದ ಏನಾದರೂ ಸಹಾಯ ಪಡೆಯಲು ಬಯಸುತ್ತೀರಾ?

ಅ) ಹೌದು ಆ) ಇಲ್ಲ

೧೪. ನೀವು ಏನಾದರೂ ಸ್ವ ಉದ್ಯೋಗ ಮಾಡಿದ್ದೀರಾ?

ಅ) ಹೌದು ಆ) ಇಲ್ಲ ಹೌದಾದರೆ, ಯಾವ ಪ್ರಕಾರದ್ದು ಉಲ್ಲೇಖಿಸಿ?

೧೫. ನೀವು ಯಾವುದೇ ರೀತಿಯ ಸಾಲ ಪಡೆದಿರುವಿರಾ?

ಅ) ಹೌದು ಆ) ಇಲ್ಲ

೧೬. ಪಡೆದಿದ್ದರೆ, ಎಲ್ಲಿಂದ?

ಅ) ಬ್ಯಾಂಕ್ ಆ) ಸಹಕಾರಿ ಸಂಘ

ಇ) ಸ್ವಸಹಾಯ ಸಂಘ ಈ) ಫೈನಾನ್ಸ್ ಉ) ಇತರೆ.

೧೭. ಸಾಲ ಪಡೆಯಲು ಕಾರಣ?

ಅ) ಶಿಕ್ಷಣಕ್ಕಾಗಿ ಆ) ವಿವಾಹ ಸಂದರ್ಭದಲ್ಲಿ ಇ) ಮನೆ ರಿಪೇರಿಗಾಗಿ

ಈ) ಅನಾರೋಗ್ಯ ಉ) ವ್ಯಾಪಾರಕ್ಕಾಗಿ ಊ) ಇತರೆ ಕಾರಣಕ್ಕಾಗಿ

೧೮. ಕುಲಕಸುಬಾಧಾರಿತ ಉದ್ಯೋಗವನ್ನು ಬಿಟ್ಟು ಬೇರೆ ಉದ್ಯೋಗವನ್ನು ಆಯ್ಕೆ ಮಾಡುವ ಸ್ತ್ರೀ ಪುರುಷರ ಧೋರಣೆಯನ್ನು ನೀವು ಒಪ್ಪುತ್ತೀರಾ?

ಅ) ಹೌದು ಆ) ಇಲ್ಲ

ಹೌದಾದಲ್ಲಿ? ಯಾವ ಕಾರಣಗಳಿಗಾಗಿ?

ಅ) ಉದ್ಯೋಗದ ಅಭದ್ರತೆ

ಆ) ನಿರ್ದಿಷ್ಟ ಅವಧಿಯಲ್ಲಿ ಉದ್ಯೋಗವಿಲ್ಲದೇ ಆರ್ಥಿಕ ಸಂಕಷ್ಟ ಇರುವುದು

ಇ) ಹೆಚ್ಚು ವಿದ್ಯಾವಂತ ಪತಿ/ಪತ್ನಿ ಸಿಗಲಿ ಅನ್ನುವ ಧೋರಣೆ

ಈ) ಇತರೆ ಕಾರಣಗಳಿಗಾಗಿ

ಇಲ್ಲವಾದಲ್ಲಿ ಯಾವ ಕಾರಣಗಳಿಗಾಗಿ?

ಅ) ಕುಲಕಸುಬಿನ ವ್ಯಾಮೋಹ

ಆ) ನಿರುದ್ಯೋಗ

ಇ) ಹೆಚ್ಚು ಶಿಕ್ಷಣದ ಅವಶ್ಯಕತೆಇಲ್ಲದೇ ಇರುವ ಉದ್ಯೋಗ ಇದಾಗಿರುವುದರಿಂದ

ಈ) ಇತರೆ ಕಾರಣಕ್ಕಾಗಿ.

೧೩. ನೀವು ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವಿರಾ?

ಅ) ಹೌದು ಆ) ಇಲ್ಲ

ಹೌದಾದಲ್ಲಿ, ಕಳೆದ ಎಷ್ಟು ವರ್ಷಗಳಿಂದ?

ಅ) ೧ ರಿಂದ ೫ ಆ) ೬ರಿಂದ ೧೦ ಇ) ೧೧ರಿಂದ ೧೫
ಈ) ೧೫ ವರ್ಷ ಮೇಲ್ಪಟ್ಟು

೨೦. ಸ್ವ-ಸಹಾಯ ಗುಂಪಿನ ಚಟುವಟಿಕೆಗಳಿಂದ ನಿಮ್ಮ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯಲ್ಲಿ ಬದಲಾವಣೆಗಳಾಗಿದೆಯೇ?

ಅ) ಹೌದು ಆ) ಇಲ್ಲ

ಹೌದಾದಲ್ಲಿ, ಯಾವ ರೀತಿಯ ಬದಲಾವಣೆಗಳು ವಿವರಣೆ ನೀಡಿ

ರಾಜಕೀಯ ಅಂಶಗಳು

೧. ನೀವು ಯಾವುದಾದರೂ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿರುವಿರಾ?

ಅ) ಹೌದು ಆ) ಇಲ್ಲ

೨. ಎಷ್ಟು ವರ್ಷಗಳಿಂದ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದೀರಿ?

ಅ) ೧ ರಿಂದ ೩ವರ್ಷ ಆ) ೪ ರಿಂದ ೬ವರ್ಷ

ಇ) ೭ ರಿಂದ ೧೦ವರ್ಷ ಈ) ೧೦ ವರ್ಷ ಮೇಲ್ಪಟ್ಟು

೩. ನೀವು ಮತದಾನ ಮಾಡುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಿರಾ?

ಅ) ಹೌದು ಆ) ಇಲ್ಲ

೪. ನಿಮ್ಮ ಮತ ಚಲಾಯಿಸುವ ನಿರ್ಧಾರ ಅವಲಂಬಿಸಿರುವುದು ಯಾರಲ್ಲಿ?

ಅ) ಸ್ವಂತ ನಿರ್ಧಾರ ಆ) ಗಂಡನ ನಿರ್ಧಾರ ಇ) ತಂದೆಯ ನಿರ್ಧಾರ

ಈ) ತಾಯಿಯ ನಿರ್ಧಾರ ಉ) ಸಹೋದರರ ನಿರ್ಧಾರ ಊ) ಮಕ್ಕಳ ನಿರ್ಧಾರ

೫. ಎಷ್ಟು ವರ್ಷಗಳಿಂದ ಮತದಾನ ಮಾಡುತ್ತಿದ್ದೀರಿ?

ಅ) ೧ ರಿಂಧ ೫ವರ್ಷ ಆ) ೬ ರಿಂದ೧೦ ವರ್ಷ

ಇ) ೧೧ ರಿಂದ೧೫ ವರ್ಷ ಈ) ೧೬ ವರ್ಷ ಮೇಲ್ಪಟ್ಟು

೬. ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿರುವಿರಾ?

ಅ) ಹೌದು ಆ) ಇಲ್ಲ

ಹೌದಾದಲ್ಲಿ, ಎಷ್ಟು ವರ್ಷಗಳಿಂದ?

ಅ) ೧ ರಿಂದ ೩ ವರ್ಷ ಆ) ೪ ರಿಂದ ೬ ವರ್ಷ ಇ) ೭ ರಿಂದ ೧೦ ವರ್ಷ

ಈ) ೧೦ ವರ್ಷ ಮೇಲ್ಪಟ್ಟು

೭. ಸ್ಥಳೀಯಾಡಳಿತದ ಚುನಾವಣೆಯಲ್ಲಿ ಸ್ಪರ್ಧಿಸಿರುವಿರಾ?

ಅ) ಹೌದು ಆ) ಇಲ್ಲ

ಯಾವ ಕ್ಷೇತ್ರದ/ ಹಂತದ ಚುನಾವಣೆಯಲ್ಲಿ ಸ್ಪರ್ಧಿಸಿದ್ದೀರಿ?

ಅ) ಗ್ರಾಮ ಪಂಚಾಯತ್ ಆ) ತಾಲೂಕು ಪಂಚಾಯತ್ ಇ)ಜಿಲ್ಲಾ ಪಂಚಾಯತ್

ಈ) ನಗರ ಸಭೆ ಉ) ಪಟ್ಟಣ ಪಂಚಾಯತ್ ಊ) ಪುರಸಭೆ

೮. ಎಷ್ಟು ವರ್ಷಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸಿತ್ತಿದ್ದೀರಿ?

ಅ) ೧ ರಿಂದ ೩ವರ್ಷ ಆ) ೪ ರಿಂದ ೬ ವರ್ಷ

ಇ) ೭ ರಿಂದ ೧೦ ವರ್ಷ ಈ) ೧೦ ವರ್ಷ ಮೇಲ್ಪಟ್ಟು

೯. ಪ್ರಸ್ತುತ ನೀವು ಚುನಾಯಿತ ಸದಸ್ಯರಾಗಿರುವಿರಾ?

ಅ) ಹೌದು ಆ) ಇಲ್ಲ

ಇಲ್ಲವಾದಲ್ಲಿ, ಯಾವ ಕಾರಣದಿಂದಾಗಿ ನೀವು ಚುನಾವಣೆಯಲ್ಲಿ ಸ್ಪರ್ಧಿಸಿಲ್ಲ?

ಅ) ಜಾತಿವಾರು ಸ್ಥಾನಗಳ ಹಂಚಿಕೆಯಲ್ಲಾದ ಬದಲಾವಣೆಯಿಂದ (ರೋಸ್ಟರ್)

ಆ) ಕುಟುಂಬದ ಸಹಕಾರದ ಕೊರತೆ

ಇ) ರಾಜಕೀಯದಲ್ಲಿ ಆಸಕ್ತಿ ಇಲ್ಲದೇ ಇರುವುದು

ಈ) ರಾಜಕೀಯ ಮುಖಂಡರು ಅಥವಾ ರಾಜಕೀಯ ಪಕ್ಷಗಳ ಸಹಕಾರದ ಕೊರತೆ

೧೦. ನಿಮ್ಮ ಕುಟುಂಬಕ್ಕೆ ರಾಜಕೀಯ ಹಿನ್ನಲೆ ಇದೆಯೇ?

ಅ) ಹೌದು ಆ) ಇಲ್ಲ

ಹೌದಾದರೆ, ವಿವರಗಳನ್ನು ನೀಡಿ.

ಅ) ಪತಿ ಸಕ್ರೀಯ ರಾಜಕೀಯದಲ್ಲಿ ತೊಡಗಿದ್ದರು

ಆ) ತಂದೆ ಸಕ್ರೀಯ ರಾಜಕೀಯದಲ್ಲಿ ತೊಡಗಿದ್ದರು

ಇ) ತಾಯಿ ಸಕ್ರೀಯ ರಾಜಕೀಯದಲ್ಲಿ ತೊಡಗಿದ್ದರು

ಈ) ಮಾವ ಸಕ್ರೀಯ ರಾಜಕೀಯದಲ್ಲಿ ತೊಡಗಿದ್ದರು

ಉ) ಮಕ್ಕಳು ಸಕ್ರೀಯ ರಾಜಕೀಯದಲ್ಲಿ ತೊಡಗಿದ್ದರು

ಊ) ದೂರದ ಸಂಬಂಧೀಕರ ರಾಜಕೀಯ ಭಾಗವಹಿಸುವಿಕೆ

ಎ) ಸಹೋದರರು ಸಕ್ರೀಯ ರಾಜಕೀಯದಲ್ಲಿ ತೊಡಗಿದ್ದರು

೧೦. ಯಾವುದಾದರೂ ಸಂಘಟನೆಗಳಲ್ಲಿ ಸದಸ್ಯ/ಅಧ್ಯಕ್ಷರಾಗಿರುವಿರಾ?

ಅ) ಹೌದು ಆ) ಇಲ್ಲ

ಹೌದಾದಲ್ಲಿ?

ಅ) ಸ್ತ್ರೀ ಶಕ್ತಿ ಯೋಜನೆ ಆ) ಸ್ವ-ಸಹಾಯ ಸಂಘ

ಇ) ಮಹಿಳಾ ಮಂಡಲ ಈ) ಇತರೆ (ಹೆಸರಿಸಿ)

೧೧. ಎಷ್ಟು ವರ್ಷಗಳಿಂದ ಸಂಘಟನೆಗಳಲ್ಲಿ ಭಾಗವಹಿಸುತ್ತಿದ್ದೀರಿ?

ಅ) ೧ ರಿಂದ ೩ ವರ್ಷ ಆ) ೪ ರಿಂದ ೬ ವರ್ಷ

ಇ) ೭ ರಿಂದ ೧೦ ವರ್ಷ ಈ) ೧೦ ವರ್ಷ ಮೇಲ್ಪಟ್ಟು

೧೨. ನಿಮ್ಮ ಕುಟುಂಬಕ್ಕೆ ಸಮಾಜ ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಅನುಭವ ಇದೆಯೇ?

ಅ) ಹೌದು ಆ) ಇಲ್ಲ

೧೩. ರಾಜಕೀಯ ಕ್ಷೇತ್ರದಲ್ಲಿನ ತೊಡಗಿಸಿಕೊಳ್ಳುವಿಕೆಯಲ್ಲಿ ನಿರ್ಬಂಧವನ್ನು ಎದುರಿಸಿರುವಿರಾ?

ಅ) ಹೌದು ಆ) ಇಲ್ಲ

ಹೌದಾದಲ್ಲಿ?

ಅ) ಗಂಡ ಆ) ತಂದೆ ಇ) ತಾಯಿ

ಈ) ಮಾವ ಉ) ಅತ್ತೆ ಊ) ಸಹೋದರರು ಎ) ಮಕ್ಕಳು.

೧೪. ನೀವು ಯಾವುದಾದರೂ ರಾಜಕೀಯ ಪಕ್ಷದ ಸಭೆಗಳಲ್ಲಿ ಪಾಲ್ಗೊಂಡಿರುವಿರಾ?

ಅ) ಹೌದು ಆ) ಇಲ್ಲ

೧೫. ಎಷ್ಟು ವರ್ಷಗಳಿಂದ ರಾಜಕೀಯ ಪಕ್ಷಗಳ ಸಭೆಗಳಲ್ಲಿ ಭಾಗವಹಿಸುತ್ತಿದ್ದೀರಿ?

ಅ) ೧ ರಿಂದ ೩ ವರ್ಷ ಆ) ೪ ರಿಂದ ೬ ವರ್ಷ ಇ) ೭ ರಿಂದ ೧೦ ವರ್ಷ

ಈ) ೧೦ ವರ್ಷ ಮೇಲ್ಪಟ್ಟು

೧೬. ನೀವು ಯಾವುದಾದರೂ ರಾಜಕೀಯ ಪಕ್ಷದ ಮುಖಂಡರ ಸಂಪರ್ಕದಲ್ಲಿರುವಿರಾ?

ಅ) ಹೌದು ಆ) ಇಲ್ಲ

ಹೌದಾದಲ್ಲಿ, ಎಷ್ಟು ವರ್ಷಗಳಿಂದ?

ಅ) ೧ ರಿಂದ ೩ ವರ್ಷ ಆ) ೪ ರಿಂದ ೬ ವರ್ಷ

ಇ) ೭ ರಿಂದ ೧೦ ವರ್ಷ ಈ) ೧೦ ವರ್ಷ ಮೇಲ್ಪಟ್ಟು

೧೭. ನೀವು ರಾಜಕೀಯ ಮುಖಂಡರಿಂದ ಯಾವುದಾದರೂ ಸಹಾಯವನ್ನು ಪಡೆದಿರುವಿರಾ?

ಅ) ಹೌದು ಆ) ಇಲ್ಲ

ಹೌದಾದಲ್ಲಿ? ಯಾವ ರೀತಿಯ ಸಹಾಯಗಳು?

ಅ) ಸಮುದಾಯ ಅಭಿವೃದ್ಧಿಗಾಗಿ ಆ) ಕುಲಕಸುಬಿಗಾಗಿ

ಇ) ಉದ್ಯೋಗವಕಾಶಕೋರಿ ಈ) ಶೈಕ್ಷಣಿಕವಾಗಿ ಉ) ಇತರೆ

೧೮. ನೀವು ಮುಷ್ಕರದಲ್ಲಿ ಭಾಗಿಯಾಗಿರುವ ಅನುಭವ ಇದೆಯಾ?

ಅ) ಹೌದು ಆ) ಇಲ್ಲ ಹೌದಾದಲ್ಲಿ, ಯಾವ ಕಾರಣಗಳಿಗಾಗಿ?

ಅ) ಸಾಮಾಜಿಕ ಆ) ಆರ್ಥಿಕ ಇ) ರಾಜಕೀಯ ಈ) ಇತರೆ

೧೯. ನೀವು ರಾಜಕೀಯ ಪಾಲ್ಗೊಳ್ಳುವಿಕೆಯಿಂದಾಗಿ ಉನ್ನತೀಕರಣಗೊಂಡಿರುವಿರಾ?

ಅ) ಹೌದು ಆ) ಇಲ್ಲ

ಹೌದಾದಲ್ಲಿ :

ಅ) ಸಾಮಾಜಿಕ ಸ್ಥಾನಮಾನ ಆ) ಆರ್ಥಿಕ ಸ್ಥಿತಿಗತಿ

ಇ) ಅಧಿಕಾರ ಈ) ಇತರೆ

೨೦. ನಿಮ್ಮ ಪ್ರಕಾರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯು ಅತೀ ಅಗತ್ಯೆ ಎಂದೆನಿಸಿದೆಯೇ?

ಅ) ಹೌದು ಆ) ಇಲ್ಲ

ಹೌದಾದಲ್ಲಿ, ಯಾವ ಕಾರಣಕ್ಕಾಗಿ?

ಇಲ್ಲವಾದರೆ, ಯಾವ ಕಾರಣಕ್ಕಾಗಿ?

೨೧. ನಿಮ್ಮ ನಿರ್ಧಾರವನ್ನು ಅವಲಂಬಿಸಿ ಮನೆಯ ಸದಸ್ಯರು ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುತ್ತಾರೆಯೇ?

ಅ) ಹೌದು ಆ) ಇಲ್ಲ

೨೨. ನಿಮಗೆ ಸರಕಾರಿ ಸವಲತ್ತುಗಳ ಅರಿವು ಇದೆಯೇ?

ಅ) ಹೌದು ಆ) ಇಲ್ಲ

೨೩. ಸರಕಾರದ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಿಮಗೆ ಮಾಹಿತಿ ಇದೆಯೇ?

ಅ) ಹೌದು ಆ) ಇಲ್ಲ

ಹೌದಾದರೆ ತಿಳಿದು ಕೊಂಡಿರುವುದು ಹೇಗೆ?

ಅ) ಮನೆಯವರಿಂದ ಆ) ಗ್ರಾಮ ಪಂಚಾಯತ್ ಸದಸ್ಯರಿಂದ

ಇ) ಸ್ಥಳೀಯ ನಾಯಕರಿಂದ ಈ) ಸಮೂಹ ಮಾಧ್ಯಮಗಳಿಂದ

ಉ) ಸ್ನೇಹಿತರಿಂದ ಎ) ಇತರ ಮೂಲಗಳಿಂದ

೨೪. ಈವರೆಗೆ ಯಾವುದಾದರು ಸವಲತ್ತುಗಳನ್ನು ಬಳಸಿಕೊಂಡಿದ್ದಿರಾ?

ಅ) ಹೌದು ಆ) ಇಲ್ಲ

೨೫. ನೀವು ಈ ಕೆಳಗಿನ ಯಾವ ಸರಕಾರಿ ಯೋಜನೆಗಳ ಫಲಾನುಭವಿಗಳಾಗಿದ್ದೀರೀ?

ಕ್ರ.ಸಂ	ಯೋಜನೆಗಳು	ಆಯ್ಕೆ (ಗುರತು) ಮಾಡಿ
೧	ಸಂಧ್ಯಾ ಸುರಕ್ಷಾ (ವೃದ್ಧಾಪ್ಯ ಪಿಂಚಣಿ)	
೨	ವಿಧವಾ ವೇತನ	
೩	ಭಾಗ್ಯಲಕ್ಷ್ಮೀ	
೪	ಮತ್ಸ್ಯಾಶ್ರಯ	
೫	ಮಹಿಳಾ ಕಾನೂನು ಪದವೀಧರರಿಗೆ ಆರ್ಥಿಕ ಸಹಾಯ	
೬	ನಿರಾಶ್ರಿತ ಮಹಿಳೆಯರಿಗೆ ಮಾಸಾಶನ	
೭	ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ಆರ್ಥಿಕ ಸಹಾಯ	
೮	ವಿದ್ಯಾರ್ಥಿ ವೇತನ	
೯	ಮೇಲಿನ ಯಾವುದೂ ಇಲ್ಲ	
೧೦	ಇತರೆ ಯಾವುದಾದರೂ ಇದ್ದಲ್ಲಿ	

೨೬. ಮುಂದಿನ ದಿನಗಳಲ್ಲಿ ಮೊಗವೀರ ಮಹಿಳೆಯರಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆ ಹೆಚ್ಚಾಗುತ್ತದೆಯೇ?

ಅ) ಹೆಚ್ಚಾಗುತ್ತದೆ   ಆ) ಕಡಿಮೆಯಾಗುತ್ತದೆ

ಇ) ಹೀಗೆ ಇದ್ದ ಸರಾಸರಿಯಲ್ಲೇ ಮುಂದುವರೆಯಲಿದೆ.

ಹೆಚ್ಚಾಗುವುದಾದರೆ, ಅದಕ್ಕೆ ಕಾರಣಗಳು?

ರಾಜಕೀಯ ಪಾಲ್ಗೊಳ್ಳುವಿಕೆ ಕಡಿಮೆಯಾಗುವುದಾದರೆ, ಅದಕ್ಕೆ ಕಾರಣಗಳು?

೨೭) ಮೊಗವೀರ ಮಹಿಳಾ ರಾಜಕೀಯ ಸಬಲೀಕರಣಕ್ಕೆ ರಾಜಕೀಯ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸಲು ಯಾರಿಂದ ಸಹಕಾರ ನಿರೀಕ್ಷಿಸುತ್ತೀರಿ?

ಅ) ಕುಟುಂಬದ ಸದಸ್ಯರ ಸಹಕಾರ

ಆ) ಸರಕಾರದ ಸಹಕಾರ, ಮಾಹಿತಿ, ಯೋಜನೆಗಳು ಇತ್ಯಾದಿ

ಇ) ಸಂಘ ಸಂಸ್ಥೆಗಳಿಂದ, ಮಾಹಿತಿ, ಸಹಕಾರ ಇತ್ಯಾದಿ

ಈ) ಇತರ

೨೮) ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ನಿಮ್ಮ ಸಲಹೆಗಳು.

****

ಪ್ರಶ್ನಾವಳಿ–೨

ಗ್ರಾಮ ಪಂಚಾಯತ್ ಸದಸ್ಯರಾಗಿ ಆಯ್ಕೆಗೊಂಡಿರುವ ಮೊಗವೀರ ಮಹಿಳೆಯರ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ಮಾದರಿ ಪ್ರಶ್ನಾವಳಿ

ವೈಯಕ್ತಿಕ ಮಾಹಿತಿ:

೧) ಗ್ರಾಮ ಪಂಚಾಯತ್ ಸದಸ್ಯರ ಹೆಸರು:

೨ ಗ್ರಾಮ ಪಂಚಾಯತ್‌ನ ಹೆಸರು:

೩) ಗಂಡನ ಉದ್ಯೋಗ:

ಅ) ಕೃಷಿಕ ಆ) ಮೀನುಗಾರಿಕೆ ಇ) ಸರಕಾರಿ ಸೇವೆ

ಈ) ಖಾಸಗಿ ಸೇವೆ ಉ) ಸ್ವ ಉದ್ಯೋಗ

ಆ) ಗಂಡನ ವಿದ್ಯಾರ್ಹತೆ:

ಅ) ಅಶಿಕ್ಷಿತ ಆ) ಪ್ರಾಥಮಿಕ ಇ) ಪ್ರೌಢ ಶಿಕ್ಷಣ ಈ) ಪದವಿ ಶಿಕ್ಷಣ

ಉ) ಪದವಿ ಊ) ಸ್ನಾತಕೋತ್ತರ ಪದವಿ.

ಇ) ವಾರ್ಷಿಕ ಆದಾಯ:

ಅ) ೧೧೦೦೦ ಕ್ಕಿಂತ ಕಡಿಮೆ ಆ) ೧೧೦೦೦ ದಿಂದ ೨೫೦೦೦

ಇ) ೨೫೦೦೦ ದಿಂದ ೫೦೦೦೦

ಈ) ೫೦೦೦೦ ದಿಂದ ೧೦೦೦೦೦ ಉ) ೧೦೦೦೦೦ ಮೇಲ್ಪಟ್ಟು.

ಪಂಚಾಯತ್ ಸದಸ್ಯತ್ವಕ್ಕೆ ಸಂಬಂಧಿಸಿದ ಮಾಹಿತಿ

೧) ರಾಜಕೀಯಕ್ಕೆ ಬರಲು ನಿಮಗೆ ಪ್ರೇರಣೆ ನೀಡಿದವರು ಯಾರು?

ಅ) ಕುಟುಂಬದ ಸದಸ್ಯರು ಆ) ಗಂಡ ಇ) ರಾಜಕೀಯ ಪಕ್ಷಗಳು

ಈ) ಗ್ರಾಮದ ನಾಯಕರು ಉ) ಸ್ವಯಂ ಆಸಕ್ತಿ.

೨) ಗ್ರಾಮ ಪಂಚಾಯತ್‌ನಲ್ಲಿ ಈಗ ಹೊಂದಿರುವ ಸ್ಥಾನ?

ಅ) ಸದಸ್ಯರು ಆ) ಸ್ಥಾಯಿ ಸಮಿತಿ ಸದಸ್ಯರು ಇ) ಅಧ್ಯಕ್ಷೆ ಈ) ಉಪಾಧ್ಯಕ್ಷೆ.

೩) ಇಲ್ಲಿಯವರೆಗೆ ಎಷ್ಟು ಅವಧಿಗೆ ಆಯ್ಕೆಗೊಂಡಿದ್ದೀರಿ?

ಅ) ಒಂದು ಆ) ಎರಡು ಇ) ಮೂರು ಈ) ನಾಲ್ಕು ಮತ್ತು ಹೆಚ್ಚು.

೪) ಗ್ರಾಮ ಪಂಚಾಯತ್‌ನ ಅಧಿಕಾರ ಹಾಗೂ ಸ್ಥಾನಕ್ಕೆ ಸಂಬಂಧಿಸಿದಂತೆ ನಿಮ್ಮ ತೃಪ್ತಿಯ ಮಟ್ಟವನ್ನು ಗ್ರಹಿಸಿ. ಅ) ಅತ್ಯುತ್ತಮ ಆ) ಉತ್ತಮ ಇ) ಸಾಧಾರಣ ಈ) ಕೆಟ್ಟದ್ದು ಉ) ಉತ್ತಮವೂ ಅಲ್ಲ, ಕೆಟ್ಟದ್ದೂ ಅಲ್ಲ.

೫) ನೀವು ಪಂಚಾಯತ್ ಸಭೆಗಳಲ್ಲಿ ಎಷ್ಟು ಬಾರಿ ಅಭಿಪ್ರಾಯ ವ್ಯಕ್ತ ಪಡಿಸುತ್ತೀರಿ?

ಅ) ಯಾವಾಗಲೂ ಆ) ಹೆಚ್ಚು ಸಲ ಇ) ಕೆಲವೊಮ್ಮೆ

ಈ) ವಿರಳ ಉ) ಯಾವಾಗಲೂ ಇಲ್ಲ.

೬) ನಿಮ್ಮ ವಾರ್ಡ್ ಅಥವಾ ವಿಭಾಗದ ಸಮಸ್ಯೆಯನ್ನು ಸಭೆಯ ಮುಂದಿಡುತ್ತೀರಾ?

ಅ) ಯಾವಾಗಲೂ ಆ) ಹೆಚ್ಚು ಸಲ ಇ) ಕೆಲವೊಮ್ಮೆ

ಈ) ವಿರಳ ಉ) ಯಾವಾಗಲೂ ಇಲ್ಲ.

೭) ಗ್ರಾಮ ಪಂಚಾಯತ್‌ಗಳಲ್ಲಿ ಪುರುಷ ಸದಸ್ಯರ ಪ್ರಾಬಲ್ಯ ಹೆಚ್ಚಾಗಿದೆಯೇ?

ಅ) ಹೌದು ಆ) ಇಲ್ಲ

೮) ಪಂಚಾಯತ್‌ನಲ್ಲಿ ನೀವು ನಿಮ್ಮದೇ ಸ್ವಂತ ಅಭಿಪ್ರಾಯದಲ್ಲಿ ವ್ಯವಹರಿಸುತ್ತೀರಾ?

ಅ) ಹೌದು ಆ) ಇಲ್ಲ

ಇಲ್ಲವಾದರೆ, ಯಾರ ಅಭಿಪ್ರಾಯವನ್ನು ನೀವು ಅವಲಂಬಿಸಿರುತ್ತೀರಿ?

ಅ) ಗಂಡ ಅ) ಕುಟುಂಬದ ಸದಸ್ಯರು ಇ) ಪಂಚಾಯತ್ ನಾಯಕರು.

೯) ನೀವು ರಾಜಕೀಯದಲ್ಲಿ ಮುಂದುವರಿಯಲು ಬಯಸುತ್ತೀರಾ?

ಅ) ಹೌದು ಆ) ಇಲ್ಲ

೧೦) ಮಹಿಳಾ ಸದಸ್ಯರಾಗಿ ಮಹಿಳೆಯರ ಬಗ್ಗೆ ನಿಮಗೆ ವಿಶೇಷ ಜವಾಬ್ದಾರಿಯಿದೆಯೆಂದು ಭಾವಿಸುವಿರಾ?

ಅ) ಹೌದು ಆ) ಇಲ್ಲ

೧೧) ಮಹಿಳಾ ಮೀಸಲಾತಿ ಮಸೂದೆಗಳು ಮಹಿಳಾಭಿವೃದ್ಧಿಗೆಗೆ ಅಗತ್ಯವೇ?

ಅ) ಹೌದು ಆ) ಇಲ್ಲ

೧೨) ಮಹಿಳಾ ಸದಸ್ಯೆಯಾಗಿ ನೀವು ಸಮಸ್ಯೆಗಳನ್ನು ಎದುರಿಸಿರುವಿರಾ?

ಅ) ಹೌದು ಆ) ಇಲ್ಲ ಹೌದಾದರೆ ಎದುರಿಸಿರುವ ಸಮಸ್ಯೆಗಳು

ಆ ಸಮಸ್ಯೆಗಳು ಎದುರಾಗಲು ಕಾರಣಗಳೇನು

೧೩) ನೀವು ಯಾವುದೇ ಇತರ ಸ್ಥಳೀಯ ಸಂಘಟನೆಗಳಲ್ಲಿ ಸದಸ್ಯರಾಗಿರುವಿರಾ?

ಅ) ಮಹಿಳಾ ಮಂಡಲ ಆ) ಸ್ವ–ಸಹಾಯ ಸಂಘ

ಇ) ಶಾಲಾಭಿವೃದ್ಧಿ ಸಮಿತಿ ಈ) ಇತರೆ

೧೪) ಆಯ್ಕೆಯಾದ ಮಹಿಳೆಯರಿಗೆ ತರಬೇತಿ ನೀಡಲಾಗುತ್ತಿದೆಯೇ?

ಅ) ಹೌದು ಆ) ಇಲ್ಲ

೧೫) ಮಹಿಳಾ ಸದಸ್ಯರ ಕಾರ್ಯಕ್ಷಮತೆ ಹೆಚ್ಚು ಮಾಡಲು ನೀವು ನೀಡುವ ಸಲಹೆಗಳೇನು?

೧೬) ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ್ ಸದಸ್ಯದಿಂದಾಗುವ ಪ್ರಯೋಜನಗಳ ಬಗ್ಗೆ ನಿಮ್ಮ ಅಭಿಪ್ರಾಯ (ಸರಿಯಾದದ್ದನ್ನು ಗುರುತು ಹಾಕಿರಿ)

ಕ್ರ.ಸಂ	ಸಬಲೀಕರಣದ ಅಂಶಗಳು	ಆಯ್ಕೆ (ಗುರತು)ಮಾಡಿ
೧	ಆತ್ಮವಿಶ್ವಾಸವನ್ನು ಹೆಚ್ಚಿಸಿದೆ	
೨	ಕುಟುಂಬ ಮತ್ತು ಸಮಾಜದಲ್ಲಿ ಗೌರವ ದೊರೆತಿದೆ	
೩	ಜೀವನ ಮಟ್ಟದಲ್ಲಿ ಸುಧಾರಣೆಯಾಗಿದೆ	
೪	ಸ್ವ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೆಚ್ಚಾಗಿದೆ	
೫	ಸಮಸ್ಯೆ ಪರಿಹಾರ ಮಾಡುವ ಸಾಮರ್ಥ್ಯ ಹೆಚ್ಚಾಗಿದೆ	
೬	ಕೌಟುಂಬಿಕ ಸಹಕಾರ ಹೆಚ್ಚಾಗಿದೆ	
೭	ಶಿಕ್ಷಣದ ಅಗತ್ಯತೆ ಬಗ್ಗೆ ಅರಿವು ಬಂದಿದೆ	
೮	ಸಮಾಜದ ಬಗ್ಗೆ ಜ್ಞಾನ ಪಡೆಯುವ ಅರಿವು ಹೆಚ್ಚಾಗಿದೆ	
೯	ಇತರರಿಗೆ ಪ್ರೇರಣೆ ನೀಡುವ ಶಕ್ತಿ ಬಂದಿದೆ	
೧೦	ಗಳಿಸಿದ ಹಣವನ್ನು ಸ್ವಂತ ಉಪಯೋಗಕ್ಕೆ ಬಳಸುವ ಸಾಮರ್ಥ್ಯ ಬಂದಿದೆ	
೧೧	ಆರ್ಥಿಕ ಸಾಮರ್ಥ್ಯದಿಂದಾಗಿ ಜೀವನ ಕ್ರಮದಲ್ಲಿ ಬದಲಾವಣೆಗಳಾಗಿವೆ	
೧೨	ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಒಳಗೊಳ್ಳುವಿಕೆ ಹೆಚ್ಚಾಗಿದೆ	
೧೩	ಸ್ವ ಆಸಕ್ತಿಯಿಂದ ಚುನಾವಣೆಯಲ್ಲಿ ಪಾಲ್ಗೊಳ್ಳುವ ಆತ್ಮ ವಿಶ್ವಾಸ ಮತ್ತು ಶಕ್ತಿ ಬಂದಿದೆ	
೧೪	ಮಹಿಳೆಯೆಂಬ ಕೀಳರಿಮೆ ದೂರವಾಗಿದೆ	
೧೫	ಸಾಮಾಜಿಕ ಸಮಸ್ಯೆ ಪರಿಹರಿಸುವ ಹಾಗೂ ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡ ತೃಪ್ತಿ ದೊರೆತಿದೆ.	

ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನ ಗ್ರಾಮ ಪಂಚಾಯತ್‌ಗಳಲ್ಲಿನ ಮೊಗವೀರ ಮಹಿಳಾ ಸದಸ್ಯರುಗಳ ವಿವರ ದಿನಾಂಕ ೧.೧.೨೦೧೬ ರಲ್ಲಿದ್ದಂತೆ

ಕ್ರ ಸಂ.	ಗ್ರಾಮ ಪಂಚಾಯತ್ ಗಳ ಹೆಸರು	ಕ್ಷೇತ್ರದ ಸಂಖ್ಯೆ ಹಾಗೂ ಹೆಸರು	ಸದಸ್ಯರ ಹೆಸರು	ಸದಸ್ಯರ ವಿಳಾಸ
೧	ಕೋಟತಟ್ಟು	ಕೋಟತಟ್ಟು ೧	ಶ್ಯಾಮಲ ಪಿ	ಕೋಂ. ಪ್ರಭಾಕರ, ಕೋಟತಟ್ಟು, ಕೋಟ
೨	ಕೋಟ	ಗಿಳಿಯಾರು ೩	ವಿಶಾಲಕ್ಷಿ ಮರಕಾಲ್ತಿ	ಕೋಂ. ಚಂದ್ರ ಮರಕಾಲ, ಕೋಟ
೩	ಪಾಂಡೇಶ್ವರ	ಮೂಡುಹಡು ೨	ಸುಮಿತ್ರ ಬಂಗೇರ	ಮೂಡುಹಡು, ಸಾಸ್ತನ, ಪಾಂಡೇಶ್ವರ
೪	ಕೋಡಿ	ಕೋಡಿ ೧	ಜಲಜ	ಬಿನ್. ಸುಬ್ಬ ಮರಕಾಲ ಕೋಡಿ, ಕನ್ಯಾನ
		ಕೋಡಿ ೪	ಕಮಲಾಕ್ಷಿ ಆರ್ ಕುಂದರ್	ಕೋಂ. ರಮೇಶ್ ಕರ್ಕೇರ, ಕೋಡಿಬೆಂಗ್ರೆ
೫	ಶಿರಿಯಾರ	ಶಿರಿಯಾರ ೪	ನಿರ್ಮಲ ಮರಕಾಲ್ತಿ	ನಿರ್ಮಲ ಮರಕಾಲ್ತಿ, ಶಿರಿಯಾರ ಗ್ರಾಮ
೬	ತೋನ್ಸೆ	ಪಡುತೋನ್ಸೆ ೪	ರತಿಮೆಂಡನ್	ರತಿಮೆಂಡನ್, ಮೆಂಡನ್ ನಿಲಯ, ತಾಳೆಹಿತ್ಲು, ಕೆಮ್ಮಣು
		ಪಡುತೋನ್ಸೆ ೭	ಜಿ.ದಮಯಂತಿ	ಕೋಂ. ಗೋಪಾಲ, ಗುಜ್ಜರಬೆಟ್ಟು
೭	ತೆಂಕನಿಡಿಯೂರು	ತೆಂಕನಿಡಿಯೂರು೧	ಸರಸ್ವತಿ ಬಂಗೇರ	ಕೋಂ. ವಾಸುಕಿ, ತೊಟ್ಟಂ
೮	ಬಡಾನಿಡಿಯೂರು	ಬಡಾನಿಡಿಯೂರು ೧	ಶೋಭಾ ಸಾಲ್ಯನ್	ಕೋಂ. ಶಿವ, ಬಡಾನಿಡಿಯೂರು
		ಬಡಾನಿಡಿಯೂರು ೨	ಗೀತಾ ಕುಂದರ್	ಕೋಂ.ಕೇಶವ, ಗುರುಕೃಪಾ, ತೊಟ್ಟಂ
೯	ಕಡೆಕಾರ	ಕಡೆಕಾರ್೧	ಗೀತಾ	ಕೋಂ. ಪಾಂಡು ಕಾಂಚಾನ್, ಕಾಂಚನ್ ನಿವಾಸ್, ಕುತ್ಪಾಡಿ
		ಕಡೆಕಾರ್ ೨	ರೇಣುಕಾ	ಕೋಂ. ವಿಜಯ ಸುವರ್ಣ, ಗರಡಿ ರಸ್ತೆ, ಕಡೆಕಾರ್
೧೦	ಉದ್ಯಾವರ	ಉದ್ಯಾವರ ೩	ಜಯಂತಿ	ಕೋಂ. ಸುರೇಶ, ಪಿ.ಟಿ.ಕಂಪನಬೆಟ್ಟು
		ಉದ್ಯಾವರ ೯	ಸುಗಂಧಿ	ಕೋಂ. ಶೇಖರ ಕೋಟ್ಯಾನ್, ಪಿತ್ರೋಡಿ
೧೧	ಶಿರ್ವ	ಶಿರ್ವಾ ೬	ಪ್ರಮೀಳ	ಕೋಂ. ಲಕ್ಷ್ಮಣ್ ಜತ್ರಬೆಟ್ಟು, ಶಿರ್ವ
		ಶಿರ್ವಾ ೮	ದೀಪಾ ಪ್ರಕಾಶ್	ಕೋಂ. ಪ್ರಕಾಶ್ ಬಂಗೇರ, ಮೂಡುಮಠಮನೆ, ಶಿರ್ವ

೧೨	ಕಟಪಾಡಿ	ಏಣಗುಡ್ಡೆ ೫	ಪ್ರತಿಭಾ ಎಸ್ ಸುವರ್ಣ	ಕೋಂ.ಸೋಮನಾಥ, ಅಗ್ರಹಾರ ರಸ್ತೆ, ಏಣಗುಡ್ಡೆ
		ಮೂಡುಬೆಟ್ಟು ೧	ಕವಿತಾ ಸುವರ್ಣ	ಕೋಂ.ಕೃಷ್ಣಮೂರ್ತಿ, ಪೊತಾರು, ಮೂಡುಬೆಟ್ಟು
೧೩	ಕೋಟೆ	ಮಟ್ಟು ೨	ಪ್ರೇಮ ಕುಂದರ್	ಕೋಂ. ನಿತ್ಯಾನಂದ, ಮಟ್ಟು
೧೪	ಮಜೂರು	ಪಾದೂರು ೨	ಸುಜಾತ ಸುವರ್ಣ	ಯಶವಂತ ಸುವರ್ಣ, ಪದ್ಮಾವತಿ ನಿಲಯ, ಪಾದೂರು
೧೫	ಬಡಾ	ಬಡಾ ೧	ನಾಗರತ್ನ	ನಾಗರತ್ನ, ಬಡಾ, ಉಡುಪಿ ತಾಲೂಕು
		ಬಡಾ ೧	ವಸಂತಿ ಕೆ ಮೆಂಡನ್	ಕೋಂ. ಕೇಶವ ಮೆಂಡನ್, ಎರ್ಮಾಳು ಬಡಾ. ಉಡುಪಿ ತಾಲೂಕು
		ಬಡಾ ೬	ಮೋಹಿನಿ ವಿ ಸುವರ್ಣ	ಕೋಂ. ವಿಶ್ವನಾಥ ಸುವರ್ಣ, ಬಡಾ ಉಚ್ಚಿಲ,ಉಡುಪಿ ತಾಲೂಕು
೧೬	ಎಲ್ಲೂರು	ಎಲ್ಲೂರು ೩	ವಿಮಲ	ಕೋಂ. ದಯಾನಂದ ಕೋಟ್ಯಾನ್, ಎಲ್ಲೂರು, ಉಡುಪಿ ತಾಲೂಕು
೧೭	ಫಲಿಮಾರು	ಫಲಿಮಾರು ೧	ಜಯಂತಿ ಎಸ್ ಕೋಟ್ಯಾನ್	ಕೋಂ. ಶಾಂತರಾಮ, ಹೊೖಗೆ ಫಲಿಮಾರು,ಉಡುಪಿ ತಾಲೂಕು
೧೮	ತೆಂಕ	ತೆಂಕ ೧	ಗುಣವತಿ	ಮಾನಸ ನಿಲಯ,ಎರ್ಮಾಳು,ಉಡುಪಿ.
೧೯	ಪಡುಬಿದ್ರಿ	ನಡ್ಸಾಲು ೯	ದಮಯಂತಿ ವಿ ಅಮೀನ್	ಕಾರ್ಕಳ ರಸ್ತೆ, ಪಡುಬಿದ್ರಿ, ಉಡುಪಿ ತಾಲೂಕು
೨೦	ಹೆಜಮಾಡಿ	ಹೆಜಮಾಡಿ ೧	ರೇಶ್ಮಾ	ರೇಶ್ಮಾ ಎ ಮೆಂಡನ್, ಹೆಜಮಾಡಿ
		ಹೆಜಮಾಡಿ ೮	ವಿಶಾಲಾಕ್ಷಿ	ಕೋಂ. ಉಮೇಶ ಪುತ್ರನ್, ಹೆಜಮಾಡಿ.

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಗ್ರಾಮ ಪಂಚಾಯತ್‌ಗಳಲ್ಲಿನ ಮೊಗವೀರ ಮಹಿಳಾ ಸದಸ್ಯರುಗಳ ವಿವರ ದಿನಾಂಕ ೦೧-೦೧-೨೦೧೬ ರಲ್ಲಿದ್ದಂತೆ

ಕ್ರ ಸಂ.	ಗ್ರಾಮ ಪಂಚಾಯತ್‌ಗಳ ಹೆಸರು	ಕ್ಷೇತ್ರದ ಸಂಖ್ಯೆ ಹಾಗೂ ಹೆಸರು	ಸದಸ್ಯರ ಹೆಸರು	ಸದಸ್ಯರ ವಿಳಾಸ
೧	ಶಿರೂರು	ಶಿರೂರು ೧	ಸಂಧ್ಯಾ	ಕೋಂ. ವಿಶ್ವನಾಥ, ಶಿರೂರು, ಕುಂದಾಪುರ.
		ಶಿರೂರು ೫	ತುಂಗಾ	ಕೋಂ. ಸುಬ್ರಾಯ ಶಿರೂರು, ಕುಂದಾಪುರ
		ಶಿರೂರು ೧೧	ಲಲಿತಾ	ಕೋಂ. ನಾಗಪ್ಪ, ಶಿರೂರು, ಕುಂದಾಪುರ
		ಶಿರೂರು ೧೩	ಸರೋಜ	ಕೋಂ. ನಾರಾಯಣ ಶಿರೂರು ಕುಂದಾಪುರ
		ಶಿರೂರು ೧೪	ನಾಗವೇಣಿ	ಕೋಂ. ಬಾಬು, ಶಿರೂರು, ಕುಂದಾಪುರ
೨	ಪಡುವರಿ	ಪಡುವರಿ ೨	ಸೂರ್ಯಕಾಂತಿ	ಕೋಂ. ನಾಗೇಶ, ಪಡುವರಿ, ಕುಂದಾಪುರ
೩	ಉಪ್ಪುಂದ	ಉಪ್ಪುಂದ ೭	ದುರ್ಗಮ್ಮ	ಕೋಂ. ರಾಮ, ಹಡಗಿನ ಮನೆ, ಕರ್ಕಿಕುಳಿ, ಕುಂದಾಪುರ.
೪	ಕೊಲ್ಲೂರು	ಕೊಲ್ಲೂರು ೩	ನೇತ್ರಾವತಿ	ಕೋಂ. ಚಂದ್ರ, ಕಲ್ಯಾಣಿಗುಡ್ಡೆ, ಕುಂದಾಪುರ .
೫	ಕಿರಿಮಂಜೇಶ್ವರ	ಕಿರಿಮಂಜೇಶ್ವರ ೩	ವಂದನ	ಕೋಂ. ಪ್ರವೀಣ, ಚಂದ್ರ ಚೂಡನ ಮನೆ, ಕೋಡೇರಿ, ಕಿರಿಮಂಜೇಶ್ವರ
		ಕಿರಿಮಂಜೇಶ್ವರ ೪	ಲಕ್ಷ್ಮೀ	ಬಿನ್ ನಾಗಮ್ಮ, ನಾಗೂರು, ಕಿರಿಮಂಜೇಶ್ವರ, ಕುಂದಾಪುರ
೬	ನಾವುಂದ	ನಾವುಂದ ೪	ಲಕ್ಷ್ಮೀ	ಕೋಂ. ಸಂಜೀವ, ನಾವುಂದ ಗ್ರಾಮ
		ನಾವುಂದ ೫	ಜಯಂತಿ ಡಿ	ಕೋಂ. ಭಾಸ್ಕರ ಪುತ್ರನ್, ಎಂ.ಜಿ ರಸ್ತೆ, ನಾವುಂದ
೭	ಹೇರೂರು	ಹೇರೂರು ೩	ಶ್ಯಾಮಲಾ	ಬಿನ್.ಲಚ್ಚ ಮೊಗವೀರ, ರಾಹಿಹಕ್ಲು ಅಂಚೆ, ಹೇರೂರು
೮	ಮರವಂತೆ	ಮರವಂತೆ ೫	ಸುಶೀಲ	ಕೋಂ. ಶೇಷಗಿರಿ, ಕುಪ್ಪನಮನೆ, ಮರವಂತೆ

೯	ನಾಡಾ	ನಾಡಾ ೩	ಶಕುಂತಳ	ಬಿನ್. ಚಿಕ್ಕ ಮೊಗವೀರ ಕೊಡ್ಗಿತ್ಲುಹಕ್ಲೆ ಮನೆ
		ಸೇನಾಪುರ ೧	ಸುಶೀಲಾ ಮೊಗವೀರ	ಕೋಂ. ರಮಾನಂದ ನಾಯ್ಕ, ಕೋಂಡಮ್ಮಡಿ ರಸ್ತೆ, ಬಂಟ್ವಾಡಿ
೧೦	ತ್ರಾಸಿ	ತ್ರಾಸಿ ೩	ಸುಧಾ	ಕೋಂ. ಪ್ರಕಾಶ,ಹೊಸಪೇಟೆ, ತ್ರಾಸಿ
೧೧	ಹಟ್ಟಿಯಂಗಡಿ	ಹಟ್ಟಿಯಂಗಡಿ ೨	ಜಲಜ	ಕೋಂ. ಸಂಜೀವ ಮೊಗವೀರ, ಸಬ್ಲಾಡಿ ಶಾಲೆ ಹತ್ತಿರ, ಹಟ್ಟಿಯಂಗಡಿ
		ಕನ್ಯಾನ ೧	ಬೇಬಿ	ಕೋಂ.ಆನಂದ ಮೊಗವೀರ, ಕಂಬಳಗದ್ದೆ ಮನೆ, ಕನ್ಯಾನ.
೧೨	ಕರ್ಕುಂಜೆ	ಕರ್ಕುಂಜೆ ೩	ರತಾ ಎ ಕುಂದರ್	ಕೋಂ. ಕಾಳಪ್ಪ ಮೊಗವೀರ, ಸೋರಿಮಕ್ಕಿ ಮನೆ, ಕರ್ಕುಂಜೆ.
೧೩	ಅಂಪಾರು	ಅಂಪಾರು ೧	ಸವಿತಾ	ಕೋಂ. ಸೋಮು ಮೊಗವೀರ, ಅಂಪಾರು.
೧೪	ಕಾವ್ರಾಡಿ	ಹಳ್ನಾಡು ೧	ನಾಗು ಮೊಗವೀರ	ನಾಗು ಮೊಗವೀರ, ಆ ಮನೆ, ಹಳ್ನಾಡು ಗ್ರಾಮ, ಕುಂದಾಪುರ
೧೫	ಹಂಗಳೂರು	ಹಂಗಳೂರು ೧	ಜಯಲಕ್ಷ್ಮೀ	ಕೋಂ.ಸುಧಾಕರ ಮೊಗವೀರ, ಲಕ್ಷ್ಮೀ ನಿವಾಸ, ನೀರಾಡಿ ಮಕ್ಕಿ ಹಂಗಳೂರು.
೧೬	ಕೋಟೇಶ್ವರ	ಕೋಟೇಶ್ವರ ೧೦	ಅಭಿನಯ ಮೊಗವೀರ	ಕೋಂ. ರಮೇಶ ಮೊಗವೀರ, ಕೋಟೇಶ್ವರ ಗ್ರಾಮ, ಕುಂದಾಪುರ
೧೭	ತೆಕ್ಕಟ್ಟೆ	ತೆಕ್ಕಟ್ಟೆ ೪	ರತ್ನ ಕುಂದರ್	ಕೋಂ. ನಾರಾಯಣ ಕುಂದರ್, ಕೊಮೆ, ತೆಕ್ಕಟ್ಟೆ ಗ್ರಾಮ, ಕುಂದಾಪುರ
		ತೆಕ್ಕಟ್ಟೆ ೫	ನೇತ್ರಾವತಿ ಮೊಗವೀರ	ಕೋಂ. ಶಂಕರ ಮೊಗವೀರ, ಕೊಮೆ, ತೆಕ್ಕಟ್ಟೆ ಗ್ರಾಮ ಕುಂದಾಪುರ
೧೮	ಹೊಂಬಾಡಿ ಮಂಡಾಡಿ	ಯತ್ಯಾಡಿ, ಮತ್ಯಾಡಿ ೧	ಶಾಂತ ಎ.ಎನ್	ಕೋಂ. ಆನಂದ ಮೊಗವೀರ, ನಿಸರ್ಗ, ನಾಲ್ತೂರು, ಕುಂದಾಪುರ
		ಯತ್ಯಾಡಿ, ಮತ್ಯಾಡಿ ೩	ಸವಿತ	ಕೋಂ. ಸಂತೋಷ ಮೊಗವೀರ, ನಂದಿಕೇಶ್ವರ ಕೃಪಾ, ತುಂಬಿಮಕ್ಕಿ,
೧೯	ಮೊಳಹಳ್ಳಿ	ಮೊಳಹಳ್ಳಿ ೩	ವನಜ	ಕೋಂ. ರಾಮಚಂದ್ರ, ಶ್ರೀದೇವಿ ನಿಲಯ,ಹೊರಳಿಜಿಡ್ಡು, ಮೊಳಹಳ್ಳಿ.

೨೦	ಹಾರ್ದಳ್ಳಿ ಮಂಡಳ್ಳಿ	ಹಳ್ಳಾಡಿ, ಹರ್ಕಾಡಿ ೨	ರಾಜಶ್ರೀ	ಜಿನ್ ಸುಧೀರ ಮೊಗವೀರ, ಹಳ್ಳಾಡಿ ಹರ್ಕಾಡಿ, ಕುಂದಾಪುರ
೨೧	ಹೊಸಾಡು	ಹೊಸಾಡು ೧	ವಂದನ	ಕೋಂ. ಜಗದೀಶ, ಹೊಸಾಡಿ, ಕುಂದಾಪುರ
೨೨	ಕಟ್‌ಬೇಲ್ತೂರು	ಕಟ್‌ಬೇಲ್ತೂರು ೧	ಶೋಭಾ ಜಿ ಪುತ್ರನ್	ಕೋಂ. ಗೋವಿಂದ ಆರ್ ಪುತ್ರನ್, ಅರೆಗೋಡು ಕಟ್‌ಬೇಲ್ತೂರು.
೨೩	ಗೋಪಾಡಿ	ಗೋಪಾಡಿ ೪	ಸರಸ್ವತಿ ಪುತ್ರನ್	ಕೋಂ. ಗಣೇಶ ಪುತ್ರನ್, ಕಾಂತೇಶ್ವರ ರಸ್ತೆ, ಗೋಪಾಡಿ, ಕುಂದಾಪುರ ತಾ.

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಗ್ರಾಮ ಪಂಚಾಯತ್‌ಗಳಲ್ಲಿನ ಮೊಗವೀರ ಮಹಿಳಾ ಸದಸ್ಯರುಗಳ ವಿವರ ದಿನಾಂಕ ೦೧-೦೧-೨೦೧೬ ರಲ್ಲಿದ್ದಂತೆ

ಕ್ರ ಸಂ.	ಗ್ರಾಮ ಪಂಚಾಯತ್ ಗಳ ಹೆಸರು	ಕ್ಷೇತ್ರದ ಸಂಖ್ಯೆ ಹಾಗೂ ಹೆಸರು	ಸದಸ್ಯರ ಹೆಸರು	ಸದಸ್ಯರ ವಿಳಾಸ
೧	ಮುಡಾರು	ಮುಡಾರು ೩	ವಿನಯ ಡಿ ಬಂಗೇರ	ಜಿನ್ ದಿನೇಶ್, ಗೋಳಿದಾಡಿ, ಮುಡಾರು
೨	ಕುಕ್ಕೂಂದೂರು	ಕುಕ್ಕೂಂದೂರು ೧	ಶಶಿಕಲ ಎಂ ಬಂಗೇರ	ಕೋಂ. ದಿ. ಮಹಾಬಲ ಬಂಗೇರ, ಬಂಗೇರ ನಿವಾಸ್, ಕಾರ್ಕಳ
		ಕುಕ್ಕೂಂದೂರು ೯	ಲೀಲಾವತಿ	ಕೋಂ. ರಮಾನಂದ, ಮುಲ್ಕಿಬೆಟ್ಟು,
		ಕುಕ್ಕೂಂದೂರು ೧೨	ಶಶಿಮಣಿ	ಕೋಂ. ಸಂಪತ್ ಸುವರ್ಣ, ಅಡ್ಡಾಲು ನಕ್ರೆ,
೩	ನಲ್ಲೂರು	ನಲ್ಲೂರು ೧	ಶೈಲಜಾ	ಕೋಂ. ಬೋಜ ಸಾಲಿಯಾನ್, ಅಜ್ಲಾಡಿ ಮನೆ, ನಲ್ಲೂರು
		ನಲ್ಲೂರು ೫	ಅನಿತ	ಕೋಂ. ಬಾಬು ಸುವರ್ಣ, ಮಲ್ಲಾರು
೪	ಈದು	ಈದು ೩	ಲಾವಣ್ಯ	ಕೋಂ. ಹರೀಶ ಬಂಗೇರ, ಈದು ಕ್ರಾಸ್, ಕಾರ್ಕಳ ತಾಲೂಕು
೫	ರೆಂಜಾಳ	ರೆಂಜಾಳ ೧	ಆಶಾ ಆರ್ ಬಂಗೇರ	ಕೋಂ. ರಮೇಶ್ ಬಂಗೇರ, ಶ್ರೀ ರಕ್ಷಾ ರೆಂಜಾಳ
೬	ಬೆಳ್ಮಣ್	ಬೆಳ್ಮಣ್ ೩	ಗೀತಾ ಚಂದ್ರಶೇಖರ	ಕೋಂ. ಚಂದ್ರಶೇಖರ ಸಾಲಿಯಾನ್, ಬೆಳ್ಮಣ್
		ಸೂಡ ೨	ವಾರಿಜ	ಕೋಂ. ನಾರಾಯಣ ಕೋಟ್ಯಾನ್, ಮುತ್ತು ನಿವಾಸ್, ಮಾಂಚಾಲು.
೭	ನಂದಳಿಕೆ	ನಂದಳಿಕೆ ೨,	ವಾರಿಜ	ಕೋಂ. ಶ್ರೀಧರ ಕೋಟ್ಯಾನ್, ಉದ್ದಳಿಕೆ ಮನೆ, ನಂದಳಿಕೆ
೮	ಇನ್ನಾ	ಇನ್ನಾ ೧	ರೂಪ ಆರ್ ಕೋಟ್ಯಾನ್	ಕೋಂ. ರಮೇಶ್ ವಿ ಕೋಟ್ಯಾನ್, ಕಮಲ ನಿಲಯ, ಪಡು, ಇನ್ನಾ.
೯	ಮುಂಡ್ಕೂರು	ಮುಂಡ್ಕೂರು	ಶಶಿಕಲ	ಕೋಂ. ಕೃಷ್ಣ ಸಾಲಿಯಾನ್, ಸಂಕಲಕರಿಯ ಮುಂಡ್ಕೂರು.